ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೧೫



ಸಂಪಾದಕರು

ಡಾ. ಆರ್. ಗೋಪಾಲ್

ಬಿ.ಎಂ. ಚಿಕ್ಕಮಾರೇಗೌಡ

ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೧೫

ಸಂಪಾದಕರು

ಡಾ. ಆರ್. ಗೋಪಾಲ್

ಬಿ. ಎಂ. ಚಿಕ್ಕಮಾರೇಗೌಡ

ಟಿ. ಎಸ್. ಗಂಗಾಧರ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಮೈಸೂರು

ವಿಜಯನಗರ ಅಧ್ಯಯನ
ಸಂಪುಟ - ೧೫

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ವಸ್ತು ಪ್ರದರ್ಶನ ಆವರಣ, ಮೈಸೂರು - ೫೭೦ ೦೧೦
ದೂರವಾಣಿ : ೦೮೨೧ - ೨೪೨೪೬೭೩ / ೨೪೨೪೬೭೪

ಮೊದಲ ಮುದ್ರಣ : ೨೦೧೦

ಪುಟಗಳು : ೨೫೮

ಬೆಲೆ : ರೂ. ೧೭೦-೦೦

ಅಕ್ಷರ ಜೋಡಣೆ ಮತ್ತು ಮುದ್ರಣ
ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು - ೫೭೦೦೦೪

VIJAYANAGARA ADHYAYANA
Vol - 15

Publisher
Director
Directorate of Archaeology and Museums
Exhibition complex, Mysore - 570 010
Ph: 0821 - 2424673 / 2424674

First Print : 2010

Pages : 258

Price: Rs. 170-00

DTP & Printed at
Sri Sadguru Printers
Mysore-570 004

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ
ಹಾಗೂ ಜವಳಿ ಸಚಿವರು ಹಾಗೂ
ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ : 22033167
ದೂರವಾಣಿ ಫ್ಯಾಕ್ಸ್ : 22253578
ಕೊಠಡಿ ಸಂಖ್ಯೆ : 339, 3 ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001

ಸಂದೇಶ

ವಿಜಯನಗರ ಅಧ್ಯಯನ ಮಾಲಿಕೆಯು ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಬಗೆಗೆ ನಡೆಯುತ್ತಿರುವ ಹೊಸ ಶೋಧಗಳಿಗೆ, ಪುನರ್‌ವಿಮರ್ಶೆಗಳಿಗೆ ಹಾಗೂ ವಿಜಯನಗರ ಸಾಮ್ರಾಜ್ಯದ ಬಗೆಗಿನ ಆಳವಾದ ಅಧ್ಯಯನಗಳಿಗೆ ಹೆಸರಾದ ಮಾಲಿಕೆಯಾಗಿ ಹೆಸರುವಾಸಿಯಾಗಿದೆ. ಈ ಮಾಲಿಕೆಯಲ್ಲಿ ಈವರೆಗೆ ಪ್ರಕಟವಾಗಿರುವ ಪುಸ್ತಕಗಳು ಕರ್ನಾಟಕದ ಸಂಶೋಧನಾ ವಲಯದಲ್ಲಿ ಪ್ರಚಲಿತವಾಗಿರುವ ವಿಶೇಷ ಆಕರಗ್ರಂಥಗಳಾಗಿವೆ. ಕಳೆದ ವರ್ಷ ಅಂದರೆ 2010ರಲ್ಲಿ ಕೃಷ್ಣದೇವರಾಯ ಸಾಮ್ರಾಟನಾಗಿ ಅಧಿಕಾರಕ್ಕೆ ಬಂದು 500 ವರ್ಷಗಳು ಸಂದಿದವು. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಕೃಷ್ಣದೇವರಾಯನ ಪಟ್ಟಾಭಿಷೇಕ ಮಹೋತ್ಸವದ ಆಚರಣೆಯ ಅಂಗವಾಗಿ ಹಂಪಿ ಉತ್ಸವವನ್ನು ನವೆಂಬರ್ ತಿಂಗಳಿನಲ್ಲಿ ಈ ಹಿಂದೆ ನಡೆಸುತ್ತಿದ್ದಕ್ಕೆ ಬದಲಾಗಿ ಕೃಷ್ಣರಾಯನ ಪಟ್ಟಾಭಿಷೇಕದ ತಿಂಗಳಾದ ಜನವರಿಯಲ್ಲಿ ನಡೆಸಲು ಬಯಸಿತು. ಇದರಿಂದಾಗಿ ಎರಡು ವಿಚಾರ ಸಂಕಿರಣಗಳ ಆಯೋಜನೆಯನ್ನು ತಪ್ಪಿಸಿ, ವಿಜಯನಗರ ಮಾಲಿಕೆಯನ್ನು ನಿಲ್ಲಿಸದೆ ಆಯ್ದ ಲೇಖಕರಿಂದ ಲೇಖನಗಳನ್ನು ಪಡೆದು ಮಾಲಿಕೆಯ 15ನೆಯ ಸಂಪುಟವನ್ನು ಆಯೋಜಿಸಲಾಗಿದೆ. ವಿಜಯನಗರ ಅಧ್ಯಯನ ಮಾಲಿಕೆಯ ಈ ಸಂಪುಟವು, ಇಲಾಖೆಯು ಮಾಲಿಕೆಯ ಬಗ್ಗೆ ಹೊಂದಿರುವ ಶ್ರದ್ಧೆ ಮತ್ತು ಲೇಖಕರ ಆಸ್ಥೆಯನ್ನು ಮೈಗೂಡಿಸಿಕೊಂಡಿದೆ. ಈ ಮಾಲಿಕೆಯ ಇತರ ಸಂಪುಟಗಳಂತೆ ಇದೂ ಸಹ ಹೊಸ ಶಾಸನಗಳು ಮತ್ತು ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದ ಕೆಲವು ಸಂಶೋಧನೆಗಳನ್ನು ಒಳಗೊಂಡಿರುವ ಸಂಗ್ರಹ ಯೋಗ್ಯ ಲೇಖನಗಳನ್ನು ಹೊಂದಿ ಅಚ್ಚುಕಟ್ಟಾಗಿ ಹೊರಬಂದಿದೆ. ಈ ಸಂಪುಟವನ್ನು ಹೊರತರಲು ಕಾರಣ ಕರ್ತರಾದ ಸಂಶೋಧಕ ವಿದ್ವಾಂಸರು ಹಾಗೂ ಈ ನಿರ್ದೇಶನಾಲಯದ ಎಲ್ಲರನ್ನೂ ನಾವು ಅಭಿನಂದಿಸುತ್ತೇವೆ.

(ಗೋವಿಂದ ಕಾರಜೋಳ)

ರಮೇಶ್ ಬಿ. ಝಳಕಿ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ 2, ನೆಲಮಹಡಿ
ವಿಕಾಸ ಸೌಧ,
ಬೆಂಗಳೂರು-560 001
ಕರ್ನಾಟಕ, ಭಾರತ
ದೂ : 080-22205781, 22034002
ಫ್ಯಾಕ್ಸ್ : 080-22353105
ಇ-ಮೇಲ್ : sec-kc@karnataka.gov.in

ಮುನ್ನುಡಿ

ವಿಜಯನಗರ ಹೆಸರು ಕನ್ನಡಿಗರಲ್ಲಿ ವಿಶೇಷವಾಗಿ ಸ್ಫೂರ್ತಿಯ ಸೆಲೆಯಾಗಿ ಹರಿದು ಹಲವಾರು ಪ್ರಮುಖ ಸಾಧನೆಗಳಿಗೆ ಕಾರಣೀಭೂತವಾಗಿದೆ. ವಿಜಯನಗರ ಒಂದು ಸಾಮ್ರಾಜ್ಯದ ರಾಜಧಾನಿಯಾಗಿ ಸಾಂಸ್ಕೃತಿಕ ಪರಂಪರೆಯ ನೆಲೆವೀಡಾಗಿ, ವಾಸ್ತುಶಿಲ್ಪ ವೈಭವದ ಪ್ರತೀಕವಾಗಿ, ರಕ್ಷಣೆಯ ಮಹತ್ವದ ಸ್ಥಳವಾಗಿ, ನಾಗರೀಕ ಸೌಲಭ್ಯಗಳ ಮಹಾನಗರಿಯಾಗಿ, ಶ್ರೇಷ್ಠ ರಾಜತಾಂತ್ರಿಕರ ಭೇಟಿಯ ಸ್ಥಳವಾಗಿ, ವೈಭವದ ದಸರಾ ಉತ್ಸವದ ರಂಗಮಂಚವಾಗಿ 250 ವರ್ಷಗಳಿಗೂ ಹೆಚ್ಚುಕಾಲ ಮೆರೆದು, ಇಂದು ಹಾಳುಹಂಪೆಯಾಗಿ, ಅಗೆದಷ್ಟೂ, ಬಗೆದಷ್ಟೂ ವಿದ್ವಾಂಸರಿಗೆ-ಅಧ್ಯಯನಿಗಳಿಗೆ ಹೊಸ ಹೊಸ ಮೂಲಸಾಮಗ್ರಿಯನ್ನು ಒದಗಿಸುತ್ತಿರುವ ಮಹತ್ವದ ಐತಿಹಾಸಿಕ ನೆಲೆಯಾಗಿದೆ.

ಇದೇ ಹೆಸರಿನ ಸಾಮ್ರಾಜ್ಯವೂ ಸಹ ಭಾರತಾದ್ಯಂತ ಅಲ್ಲದೆ ವಿದೇಶೀಯ ವಿದ್ವಾಂಸರ ಅಧ್ಯಯನಕ್ಕೆ ಒಳಪಟ್ಟು ಹತ್ತು ಹಲವಾರು ಹೊಸ ವಿಚಾರಗಳನ್ನು ನಮ್ಮ ಮುಂದೆ ತಂದಿಡುತ್ತಿರುವ ಅಕ್ಷಯ ಪಾತ್ರೆಯೆಂದರೆ ಅತಿಶಯೋಕ್ತಿಯಾಗಲಾರದು. ಈ ಸಾಮ್ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮಜಲುಗಳನ್ನು ಕುರಿತು ಕರ್ನಾಟಕದ ವಿದ್ವಾಂಸರು ಕಳೆದ ಹದಿನೈದು ವರ್ಷಗಳಿಂದ ಮಾಡಿರುವ ಅಧ್ಯಯನಗಳನ್ನು ಓದುಗರಿಗೆ ತಲುಪಿಸುವ ಕಾರ್ಯದಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಪ್ರಯತ್ನ ಪ್ರಶಂಸನೀಯ ಹಾಗೂ ಅನುಕರಣೀಯ. ಪ್ರಸ್ತುತ ಈ ಇಲಾಖೆಯು ಹೊರತಂದಿರುವ ವಿಜಯನಗರ ಅಧ್ಯಯನ 15ನೆಯ ಸಂಪುಟವು ಈ ಮೇಲೆ ಹೇಳಿದ ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿರುವ ಆಕರ ಗ್ರಂಥವಾಗಿದೆ. ಸಂಶೋಧನಾ ಲೇಖನಗಳನ್ನು ಒದಗಿಸಿಕೊಟ್ಟ ವಿದ್ವಾಂಸರು ಮತ್ತು ಇದನ್ನು ಸಂಪಾದಿಸಿದ ಡಾ. ಆರ್. ಗೋಪಾಲ್ ಹಾಗೂ

ಸಿದ್ಧಪಡಿಸಿದ ಇಲಾಖೆಯ ಅಧಿಕಾರಿಗಳು ಪ್ರಶಂಸಾರ್ಹರು. ಅವರಿಗೆಲ್ಲರಿಗೂ ನನ್ನ ಅಭಿನಂದನೆಗಳು.

ಈ ಸಂಪುಟವನ್ನು ಓದುಗರು ಆದರದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.



(ರಮೇಶ್ ಬಿ. ಝುಳಕಿ)

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದ ವೈಶಾಲ್ಯತೆಗೆ ಅನುಗುಣವಾಗಿ ತನ್ನ ರಾಜಧಾನಿಯ ಗಾತ್ರವನ್ನು ಬೆಳಸಿಕೊಂಡು ಹಲವಾರು ನಗರಗಳನ್ನು ಅಂದರೆ ಉಪನಗರಗಳನ್ನು ಹೊಂದಿ, ವಿಜಯನಗರವೆಂದರೆ ರಾಜಧಾನಿ ವಿಜಯನಗರವೆಂದೇ ಹೆಸರಾದ, ಅಂದಿನ ಕಾಲದ ಏಷ್ಯಾದ ಅತಿದೊಡ್ಡ ಮಾರುಕಟ್ಟೆಯಾಗಿ ಬೆಳೆದುದು ಈ ನಗರದ ಮತ್ತು ಸಾಮ್ರಾಜ್ಯದ ಹೆಗ್ಗಳಿಕೆ. ವಿಜಯನಗರ ಸಾಮ್ರಾಜ್ಯದ ಅತಿಮುಖ್ಯ ಸಾಮ್ರಾಟನಾದ ಕೃಷ್ಣದೇವರಾಯನ ಕಾಲವಂತೂ ಸಾಮ್ರಾಜ್ಯದ ಇತಿಹಾಸದ ಎಲ್ಲಾ ವಿಭಾಗಗಳಲ್ಲಿ ಅತ್ಯಂತ ಯಶಕಂಡ ಹಾಗೂ ಔನ್ನತ್ಯವನ್ನು ಪಡೆದು ವೈಭವಕ್ಕೆ ಮತ್ತು ಸಿರಿಸಂಪತ್ತಿಗೆ ವಿದೇಶೀಯ ಪ್ರವಾಸಿಗರಿಂದ ಅಂದಿನ ಕಾಲದಲ್ಲಿ ಮತ್ತು ಆನಂತರದ ಕಾಲದಲ್ಲಿ ವಿಶೇಷವಾಗಿ ಬಣ್ಣಿಸಿಕೊಂಡ ಹಾಗೂ ಬಣ್ಣಿಸಿ ಕೊಳ್ಳುತ್ತಿರುವ ಕಾಲ. ಈ ಸಾಮ್ರಾಜ್ಯದ ಬಗ್ಗೆ ಬರೆದಷ್ಟೂ, ಓದಿದಷ್ಟೂ, ಚಿಂತಿಸಿದಷ್ಟೂ ಕಡಿಮೆಯೇ; ಅಂದರೆ ಅದರ ಬಗೆಗಿನ ಅಧ್ಯಯನ, ಸಂಶೋಧನೆ ನಿರಂತರ.

ಕಳೆದ ವರ್ಷ ಕೃಷ್ಣದೇವರಾಯನ ಪಟ್ಟಾಭಿಷೇಕವಾಗಿ 500 ವರ್ಷಗಳ ಸಂದಸಮಯದಲ್ಲಿ ಅವನ ಜೀವನ ಸಾಧನೆಗಳನ್ನು ಕುರಿತಾಗಿ ಮಹತ್ವವಾದ ಅಧ್ಯಯನ ಕೈಗೊಳ್ಳುವ ಸಲುವಾಗಿ ಕರ್ನಾಟಕ ಸರ್ಕಾರ ಹಲವಾರು ಯೋಜನೆ ಗಳನ್ನು ರೂಪಿಸಿಕೊಂಡಿತು. ಆ ದಿಸೆಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಕ್ಕೆ ಬದಲಾಗಿ ಕೃಷ್ಣದೇವರಾಯನ ಜೀವನ ಮತ್ತು ಸಾಧನೆಯ ಬಗೆಗೆ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿತು. ಹಾಗಾಗಿ *ವಿಜಯನಗರ ಅಧ್ಯಯನ* ಮಾಲಿಕೆಯ ವಿಚಾರ ಸಂಕಿರಣ ನೆರವೇರಿಸಲು ಕಾಲಾವಕಾಶವಾಗಲಿಲ್ಲ. ಆದರೂ ಮಾಲಿಕೆಯು ನಿಲ್ಲಬಾರದೆಂದು, ಮಾಲಿಕೆಯಲ್ಲಿ ಪ್ರಕಟಿಸಲು ಬಂದ ವಿದ್ವಾಂಸರ ಲೇಖನಗಳನ್ನು ಒಟ್ಟುಮಾಡಿ, ವಿಜಯನಗರ ಅಧ್ಯಯನ ಮಾಲಿಕೆಯ ಹದಿನೈದನೆಯ ಸಂಪುಟವನ್ನು ಹೊರತರಲಾಗುತ್ತಿದೆ. ಸಂಶೋಧನೆಯಲ್ಲಿ ತೊಡಗಿಸಿಕೊಂಡು ಈ ಮಾಲಿಕೆಯನ್ನು ತರಲು ಸಹಕರಿಸಿದ ವಿದ್ವಾಂಸರುಗಳನ್ನು ಅಭಿನಂದಿಸುತ್ತಿದ್ದೇನೆ. ಈ ಲೇಖನ ಮಾಲೆಯನ್ನು ಹೊರತರುವಲ್ಲಿ ಹಲವು ಮಹನೀಯರು ಸಹಕರಿಸಿದ್ದಾರೆ. ಅವರುಗಳನ್ನೆಲ್ಲಾ ಇಲ್ಲಿ ಸ್ಮರಿಸುತ್ತಾ ಅವರುಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಖ್ಯಾತ ವಿದ್ವಾಂಸರು ಇದರಲ್ಲಿ ಭಾಗವಹಿಸಿ ತಾವು ಮಾಡಿದ ಹೊಸ

ಸಂಶೋಧನೆಗಳ ಮೂಲಕ ಪ್ರಬಂಧಗಳನ್ನು ಕಳುಹಿಸಿ, ವಿಜಯನಗರ ಸಾಂಸ್ಕೃತಿಕ ಇತಿಹಾಸದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಶಾಸನ, ವಾಸ್ತುಶಿಲ್ಪ, ರಾಜಕೀಯ, ಆಡಳಿತ, ಸಾಹಿತ್ಯ, ಧರ್ಮ ಮುಂತಾದ ವಿಷಯಗಳನ್ನು ಕುರಿತ ಪ್ರಬಂಧಗಳನ್ನು ಇಲ್ಲಿ ಸಂಪಾದಿಸಲಾಗಿದೆ. ಇವುಗಳನ್ನು ಕಳುಹಿಸಿಕೊಟ್ಟ ಎಲ್ಲ ವಿದ್ವಾಂಸರಿಗೂ ನಮ್ಮ ಕೃತಜ್ಞತೆಗಳು.

ನಮ್ಮ ಇಲಾಖೆಯ ಎಲ್ಲ ಕಾರ್ಯಗಳಲ್ಲಿಯೂ ನಮಗೆ ಮಾರ್ಗದರ್ಶನ ನೀಡುತ್ತಿರುವ ಹಾಗೂ ನಮ್ಮನ್ನು ಪ್ರೋತ್ಸಾಹಿಸುತ್ತಿರುವ ಸರ್ಕಾರದ ಮಾನ್ಯ ಕಾರ್ಯದರ್ಶಿಗಳಾಗಿರುವ ಶ್ರೀ ರಮೇಶ್. ಬಿ. ಝುಳಕಿ ಭಾ.ಆ.ಸೇ. ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ವಿಚಾರ ಸಂಕಿರಣಕ್ಕೆ ಮಾರ್ಗದರ್ಶನ ನೀಡಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಮಂತ್ರಾಲಯದ ಅಂದಿನ ಕಾರ್ಯದರ್ಶಿಗಳಾಗಿದ್ದ ಶ್ರೀ ಬಿ. ಆರ್. ಜಯರಾಮ ರಾಜೇ ಅರಸ್, ಭಾ.ಆ.ಸೇ, ಅವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥವನ್ನು ಹೊರತರುವಲ್ಲಿ ಹಲವಾರು ವ್ಯಕ್ತಿಗಳು, ಇಲಾಖೆಯ ಸಿಬ್ಬಂದಿ ನಮ್ಮೊಂದಿಗೆ ಸಹಕರಿಸಿದ್ದಾರೆ. ಅವರೆಲ್ಲರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ಮತ್ತು ಅವರಿಗೆ ಅಭಿನಂದನೆ ಸಲ್ಲಿಸುವುದು ನಮ್ಮ ಕರ್ತವ್ಯ. ನಮ್ಮ ಇಲಾಖೆಯ ಶ್ರೀ ಗಂಗಾಧರ್, ಟಿ. ಎನ್, ಸಹಾಯಕ ನಿರ್ದೇಶಕರು ಮತ್ತು ಡಾ. ಲ. ನ. ಸ್ವಾಮಿ, ವಿಷೇಶಾಧಿಕಾರಿ, ಇವರ ಶ್ರಮ ಈ ಸಂಪುಟದ ಪ್ರಕಟಣೆಯ ಹಿಂದಿದೆ. ಇವರುಗಳಿಗೆ ಇಲಾಖೆಯ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಉಪನಿರ್ದೇಶಕರಾದ ಶ್ರೀ ಚಿಕ್ಕಮಾರೇಗೌಡರ ಸಹಕಾರಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಪುಸ್ತಕವನ್ನು ಹೊರತರುವಲ್ಲಿ ಸಹಕರಿಸಿದ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಭಾಷಾಂತರಕಾರರಾದ ಶ್ರೀ ಎಸ್. ಎನ್. ಶಾರದಾ ಪ್ರಸಾದ್‌ರವರಿಗೆ, ಅಕ್ಷರ ಜೋಡಿಸಿ ಅಂದವಾಗಿ ಮುದ್ರಿಸಿ ಕೊಟ್ಟ ಶ್ರೀ ಸದ್ಗುರು ಪ್ರಿಂಟರ್ಸ್‌ನ ಆರ್. ಎಸ್. ವಾಸುದೇವ ಮೂರ್ತಿಯವರಿಗೆ ಹಾಗೂ ರಕ್ಷಾಪುಟವನ್ನು ವಿನ್ಯಾಸಗೊಳಿಸಿದ ಬೆಂಗಳೂರು ಸುಹಾಸ್ ಗ್ರಾಫಿಕ್ಸ್‌ನ ಶ್ರೀ ಮುರಳೀಧರ್ ಅವರಿಗೂ ನನ್ನ ವಂದನೆಗಳು.

ಈ ಗ್ರಂಥವು ಇತಿಹಾಸ ಮತ್ತು ಸಂಸ್ಕೃತಿ ಪ್ರಿಯರಿಗೆ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇನೆ.

(ಡಾ. ಆರ್. ಗೋಪಾಲ್)
ನಿರ್ದೇಶಕರು

ಮೈಸೂರು

ಪರಿವಿಡಿ

೧. ವಿಜಯನಗರ ಸಾಮ್ರಾಜ್ಯ ಸ್ಥಾಪನಾಪೂರ್ವದ ಹಂಪೆ

(ಶಾಸನಗಳನ್ನಾಧರಿಸಿ)

ಡಾ. ಬಿ. ವ್ಹಿ. ಮಲ್ಲಾಪುರ

ಪ್ರಾಚೀನ ಪುರಾಣ ಮತ್ತು ಐತಿಹ್ಯಗಳು ಹಂಪಿಯನ್ನು ಕುರಿತು ಹಲವಾರು ವಿಷಯಗಳನ್ನು ಪ್ರಸ್ತಾಪಿಸುತ್ತವೆ. ಅವುಗಳ ಪ್ರಕಾರ ಹಂಪಿಯ ಪ್ರಾಚೀನತೆ ರಾಮಾಯಣದ ಕಾಲಕ್ಕೆ ಹೋಗುತ್ತದೆ. ಹರಿಹರ ಕವಿಯ 'ಗಿರಿಜಾ ಕಲ್ಯಾಣ' ಹೇಳುವಂತೆ ಶಿವ ಪಾರ್ವತಿಯರ ವಿವಾಹ ನಡೆದದ್ದು ಹಂಪಿಯ ಹೇಮಕೂಟದಲ್ಲಿ. ಪಾರ್ವತಿಗೆ 'ಪಂಪಾ' ಎಂಬ ಇನ್ನೊಂದು ಹೆಸರೂ ಇದೆ. ಆ ಪಂಪಾದೇವಿ ಶಿವನ ಒಲುಮೆ ಸಂಪಾದಿಸಲು ತಪಸ್ಸು ಮಾಡಿದ ಆ ಪವಿತ್ರಸ್ಥಳಕ್ಕೆ 'ಪಂಪಾತೀರ್ಥ', 'ಪಂಪಾಕ್ಷೇತ್ರ' ಹೆಸರುಗಳು ಬಂದವೆಂದು ಹೇಳಲಾಗುತ್ತದೆ. ಶಿವನ ವಾಸಸ್ಥಾನ ಹೇಮಕೂಟವಾಗಿದ್ದು ಅವನಿಗೆ 'ವಿರೂಪಾಕ್ಷ' ಹೆಸರಿರುವುದರಿಂದ ಆ ಸ್ಥಳವನ್ನು 'ವಿರೂಪಾಕ್ಷತೀರ್ಥ' ಎಂದೂ ಕರೆಯಲಾಗುತ್ತದೆ.

ವಿಜಯನಗರ ಸಾಮ್ರಾಜ್ಯಸ್ಥಾಪನಾಪೂರ್ವದ ಕೆಲವು ಶಾಸನಗಳು ಇತ್ತೀಚೆಗೆ ನಡೆದ ಹಂಪಿಯ ಪರಿಸರದ ಉತ್ಖನನಗಳಲ್ಲಿ ಸಿಕ್ಕಿವೆ. ಅವುಗಳಲ್ಲಿ "ತರಸಪುತಸ ದಾನಮ್" ಎಂಬ ಉಲ್ಲೇಖವಿರುವ ಬ್ರಾಹ್ಮೀಲಿಪಿಯಲ್ಲಿ ಬರೆದ ಒಂದು ಶಾಸನ ಇರುವುದು ಗಮನಾರ್ಹ. ಲಿಪಿಯ ಸ್ವರೂಪವನ್ನಾಧರಿಸಿ ಅದರ ಕಾಲವನ್ನು ವಿದ್ವಾಂಸರು ಕ್ರಿ. ಶ. 1–2ನೆಯ ಶತಮಾನವೆಂದು ಊಹಿಸಿದ್ದಾರೆ.[1] ಇದರಿಂದ ಹಂಪೆಯ ಪ್ರದೇಶದ ಪ್ರಾಚೀನತೆ ಕ್ರಿ. ಶ ಮೊದಲನೆಯ ಶತಮಾನದಷ್ಟು ಹಿಂದೆ ಹೋಗುತ್ತದೆ. ಅದು ಬೌದ್ಧ ಶಾಸನವಾಗಿರುವುದರಿಂದ ಹಂಪಿಯ ಆ ಪ್ರದೇಶದಲ್ಲಿ ಒಂದು ಕಾಲಕ್ಕೆ ಬೌದ್ಧಧರ್ಮ ಪ್ರಚಲಿತವಿದ್ದುದು ಸ್ಪಷ್ಟವಾಗುತ್ತದೆ.

ಬಾದಾಮಿಯ ಚಾಲುಕ್ಯ ದೊರೆ ವಿನಯಾದಿತ್ಯನ ಕಾಲದ ಕ್ರಿ. ಶ 689ರ ಒಂದು ತಾಮ್ರಶಾಸನ ಹಂಪಿಯನ್ನು 'ಪಂಪಾತೀರ್ಥ' ಎಂದು ಕರೆದಿದೆ.[2]

ಮಹಾನವಮಿ ದಿಬ್ಬದ ಪರಿಸರ ಪ್ರದೇಶದಲ್ಲಿ ನಡೆಸಿದ ಭೂ ಅಗೆತದಲ್ಲಿ ಒಂದು ಕನ್ನಡ ಶಾಸನ ದೊರೆತಿದೆ.[3] ಅದರ ಕಾಲ ಕ್ರಿ. ಶ 1076 (ವಿಕ್ರಮ ಶಕ 1). ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯನೆಂಬವನು ಮಠದಲ್ಲಿ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ಪ್ರತಿವರ್ಷ ಎಂಭತ್ತು ಲೊಕ್ಕಿಗದ್ಯಾಣದಷ್ಟು ಉತ್ಪನ್ನ ಬರುವ ಭೂಮಿಯನ್ನು ದಾನ ಮಾಡಿದ ಬಗ್ಗೆ

ಇದು ತಿಳಿಸುತ್ತದೆ. ಇದರಿಂದ ಆ ಹೊತ್ತಿಗಾಗಲೆ ಹಂಪಿಯ ಆ ಪ್ರದೇಶದಲ್ಲಿ ದೇವಾಲಯ ಹಾಗೂ ಮಠಗಳು ಅಸ್ತಿತ್ವಕ್ಕೆ ಬಂದಿದ್ದು ಅವು ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದುದು ವಿದಿತವಾಗುತ್ತದೆ. ದಂಡನಾಯಕರು, ರಾಜರು, ರಾಜ್ಯಾಧಿಕಾರಿಗಳು ಪಂಪಾಕ್ಷೇತ್ರಕ್ಕೆ ಆಗಾಗ ಬಂದು ವಿರೂಪಾಕ್ಷನ ದರ್ಶನ ಪಡೆಯುತ್ತಿದ್ದುದನ್ನು ಇದು ಸೂಚಿಸುತ್ತಿದೆ.

ಪಂಪಾಸರೋವರದ ಹತ್ತಿರ ಲಕ್ಷ್ಮೀದೇವಸ್ಥಾನಕ್ಕೆ ಹತ್ತಿ ಹೋಗುವುದಕ್ಕೆ ಮಾಡಿದ ಮೆಟ್ಟಿಲಿನ ಒಂದು ಕಲ್ಲಿನ ಮೇಲಿರುವ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಆಹವಮಲ್ಲನು ಪ್ರಧಾನಮಂತ್ರಿ ಅಣ್ಣಮಯ್ಯನಿಗೆ ಭೂಮಿದಾನ ಮಾಡಿದ ಉಲ್ಲೇಖ ಬರುತ್ತದೆ. ಈ ಶಾಸನದ ಕಾಲ ಕ್ರಿ. ಶ 988.

ಹಂಪಿಯ ಮನ್ಮಥ ಹೊಂಡದ ದಂಡೆಯ ಮೇಲೆ ಇರುವ ದುರ್ಗಾ ದೇವಾಲಯದ ಬಲಗಡೆ ನಿಲ್ಲಿಸಿರುವ ನಯಗೊಳಿಸಿದ ಕಲ್ಲಿನಲ್ಲಿ ಒಂದು ಶಾಸನವನ್ನು ಕೆತ್ತಲಾಗಿದೆ. ಶಾಸನ ಶಿಲೆಯ ಮೇಲ್ಭಾಗದಲ್ಲಿ ಅರ್ಧಚಂದ್ರ, ಅದರ ಕೆಳಗೆ ನಿಂತು ಕೊಂಡಿರುವ ಜಟಾಧಾರಿ ಪೂಜಕ ಶಿವಲಿಂಗ, ಮೇಲ್ಮುಖ ಮಾಡಿ ನಿಲ್ಲಿಸಿರುವ ಖಡ್ಗ, ಲಿಂಗದ ಎದುರಿಗೆ ನಿಂತಿರುವ ಉದ್ದಕೋಡಿನ ವೃಷಭ ಇತ್ಯಾದಿ ಆಕೃತಿಗಳನ್ನು ಬಿಡಿಸಲಾಗಿದೆ. ಇವೆಲ್ಲ ತುಂಬಾ ಅಭ್ಯಾಸಾರ್ಹವಾಗಿವೆ.

ಈ ಶಾಸನದ ಕಾಲ ಕ್ರಿ. ಶ. 1199 'ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ' ಎಂಬ ಶಿವಸ್ತುತಿ ಶ್ಲೋಕದ ಅನಂತರ ಹೇಮಕೂಟವನ್ನು ಒಂದು ಪದ್ಯದಲ್ಲಿ ಬಣ್ಣಿಸಿ ಅದಕ್ಕೆ ಅಧೀಶನಾದ ವಿರೂಪಾಕ್ಷನು ದಾನಕೊಟ್ಟ ಮೈದುನ ಚೌಡಯ್ಯನ ಅಭೀಷ್ಟವನ್ನು ಈಡೇರಿಸಲೆಂದು ಪ್ರಾರ್ಥಿಸಲಾಗಿದೆ. ಆಮೇಲೆ ಚೌಡಯ್ಯನ ಹೆಂಡತಿ ಬಾಚಲೆಯ ಬಯಕೆಯನ್ನು ಪಂಪಾಂಬಿಕೆಯು ಪೂರೈಸ ಲೆಂದು ಶಾಸನ ಕವಿ ಬೇಡಿಕೊಂಡಿದ್ದಾನೆ. ಮುಂದೆ ಕುಂತಳ ಧರೆ ಬಲ್ಲ ಕುಂದೆನಾಡು, ಅದರ ಮುಖ್ಯ ಪಟ್ಟಣ ಕುರಗೋಡು, ಕಲಿದೇವನೃಪ (ಕುರುಗೋಡು ಸಿಂದವಂಶದ ದೊರೆ ಎರಡನೆಯ ರಾಚಮಲ್ಲ) ಅಲ್ಲಿಂದ ರಾಜ್ಯವಾಳುತ್ತಿದ್ದ ಬಗ್ಗೆ ಶಾಸನ ತಿಳಿಸುತ್ತದೆ. ಆ ಬಲ್ಲಕುಂದೆ ನಾಡಿನಲ್ಲಿಯ ಪಂಪಾತೀರ್ಥದ ವರ್ಣನೆ ಬಹಳ ಸುಂದರವಾಗಿ ಎರಡು ಪದ್ಯಗಳಲ್ಲಿ ಬಂದಿದೆ. ಶಾಸನ ದೃಷ್ಟಿಯಲ್ಲಿ ಅಲ್ಲಿ ಹರಿಯುವ ತುಂಗಭದ್ರೆ ಗಂಗಾನದಿ ತಾಪಸ ತತಿಯಿಂದ ಅದು ಶೋಭಾಯವಾಗಿದ್ದ ಬಗ್ಗೆಯೂ ಕವಿ ತಿಳಿಸಿದ್ದಾನೆ. ಅವನ ಪ್ರಕಾರ ಪಂಪಾಕ್ಷೇತ್ರ ಪುಣ್ಯೋದಯದ ಜನ್ಮಭೂಮಿ, ಸುಖಲತಾ ಸಂವರ್ಧನ ಕ್ಷೇತ್ರ, ಭಕ್ತರಿಗೆ ಅವರವರ ವಾಂಛಿತ ವನ್ನೀಯುವ ಸಂಸ್ಥಾನ ಮುಂತಾಗಿ ಇನ್ನೂ ಹಲವಂದದಿಂದ ಎದೆದುಂಬಿ ಆ ಕ್ಷೇತ್ರವನ್ನು ಬಣ್ಣಿಸಿದ್ದಾನೆ. ಹಂಪಿಯನ್ನು ಕುರಿತ ಈ ಬಗೆಯ ವರ್ಣನೆಗಳು ಶಾಸನಗಳಲ್ಲಿ ತುಂಬಾ ಅಪರೂಪ.

ಹೇಮಕೂಟಾಧೀಶ ವಿರೂಪಾಕ್ಷನ ವರ್ಣನೆ ಈ ಶಾಸನದಲ್ಲಿ ತುಂಬಾ ಅರ್ಥವತ್ತಾಗಿದ್ದು ಚಮತ್ಕಾರಪೂರ್ಣವಾಗಿದೆ "ಈ ಪಂಪಾಕ್ಷೇತ್ರ, ಸತಿಯಾದ ಪಾರ್ವತಿಯೊಡಗೂಡಿ ನೆಲಸಲು ತಕ್ಕುದಾಗಿದೆ. ಶ್ರೀದೇವಿಯು ಮೈವೆತ್ತು ಒಪ್ಪುವ ಬಂಗಾರದ ಶಿಲೆಯಿದು" ವಿರೂಪಾಕ್ಷನಾದ ಶಿವನು ಭಾವಿಸಿ ಹೇಮಕೂಟವನ್ನೇ ತನ್ನ ಶಾಶ್ವತ ಮನೆಯನ್ನಾಗಿ ಮಾಡಿಕೊಂಡಿದ್ದಾನೆ. ಹೀಗೆ ವರ್ಣನೆ ಮುಂದು ವರಿದಿದೆ. ಪಂಪಾಂಬಿಕೆಯನ್ನು ಬಣ್ಣಿಸುವ ಪದ್ಯ ಹೀಗಿದೆ:

ನಳಿ ತೋಳ್ ಶಾಖೆಗಳಂ ತಳಂ ತಳಿರ್ಗಳಂ ವೃತ್ತಸ್ತನಂ ಪಾಜ್ವಮಂ
ವಿಳಸತ್ ಕುಂಡಲ ಮಾಲೆ ಭೃಂಗ ತತಿಯಂ ನೀಳ್ದೋಳ್ ಬೆರಲ್ ಕುಟ್ಮಂ
ಗಳ ಚೆಲ್ವಂ ಗೆಲೆ ಕಲ್ಪವೃಕ್ಷದವೊಲಾ ಪಂಪಾಂಬಿಕಾದೇವಿ ಕೋ
ಮಳೆ ಚೌಡಯ್ಯನ ಕಾಂತೆ ಬಾಚಲೆಗೆ ಮಾಳ್ಕಿಷ್ಟಾರ್ಥ ಸಿದ್ಧಿಯಂ"

ಈ ಪದ್ಯ ಕನ್ನಡ ಚಂಪೂಕಾವ್ಯಗಳಲ್ಲಿ ಬರುವ ಯಾವ ಪದ್ಯಕ್ಕೂ ಕಡಿಮೆಯಲ್ಲ. ಮುಂದೆ ಈ ಶಾಸನದಲ್ಲಿ ದಾನದತ್ತಿಯ ವಿವರ ಬರುತ್ತದೆ. ವಿರೂಪಾಕ್ಷದೇವರ ಬಲದ ಹಂಪಾದೇವಿಯ ಭೈರವ ದೇವರ ನಿತ್ಯ ಪಡಿಯ ನೈವೇದ್ಯಕ್ಕೆ ವಿರೂಪಾಕ್ಷ ದೇವರ ದೆಸೆಯ ಸತ್ರಶಾಲೆಯಲ್ಲಿ ನಡೆವ ಅತಿಥಿಗಳ ಮತ್ತು ಹತ್ತುಜನ ಬ್ರಾಹ್ಮಣರ ಊಟಕ್ಕೆ ಚೌಡಯ್ಯನ ಏಳುನೂರ್ವರ ಸಮ್ಮುಖದಲ್ಲಿ ದೇವಯ್ಯನೆಂಬುವನಿಗೆ ಭೂದಾನವನ್ನು ಮಾಡಿದ್ದಾನೆ. ಆ ಮೂರು ದೇವರ ಗೃಹಗಳಿಗೆ ಸುತ್ತುವಳಿಯನ್ನು ಚೌಡಯ್ಯ ಮಾಡಿಸುವ ಜೊತೆಗೆ ಅವಕ್ಕೆ ಘಂಟೆ, ಅಡ್ಡಣಿಗೆ, ಆರತಿ, ಧೂಪದ ಘಟ್ಟಿ, ಪರಿಯಾಣ ಕಲಶ, ಬಟ್ಟಲು, ಚಂದನ ಕಸ್ತೂರಿಯನ್ನಿಡುವ ಸಿಪ್ಪು ಹಾಗೂ ವಸ್ತ್ರಭೂಷಣಾದಿಗಳನ್ನು ನೀಡುತ್ತಾನೆ. ದೇವರ ಪೂಜೆಗೆ ಬೇಕಾಗುವ ಅಡಕೆಗೆಂದು ಒಂದು ಅಡಿಕೆಯ ತೋಟವನ್ನೇ ದಾನವಾಗಿ ಬಿಡುತ್ತಾನೆ.

ಈ ಶಾಸನದಲ್ಲಿ ಮನ್ಮುಖ (ಮನ್ಮಥ?) ತೀರ್ಥ, ಕೋಡಿಯ ಬೆನಕ, ಇಮ್ಮಡಿ ರಾಚಮಲ್ಲೇಶ್ವರ ದೇವ ಇತ್ಯಾದಿ ಬೇರೆ ಬೇರೆ ತೀರ್ಥ ಮತ್ತು ದೇವರುಗಳ ಹೆಸರುಗಳು ಬರುತ್ತವೆ. ಜೊತೆಗೆ ಹಂಪೆಯಕಟ್ಟೆಯ ಬಯಲು ಒಸರ ಕಡಹು ಬಮ್ಮಿಸೆಟ್ಟಿಯ ಹಸಲು, ಸ(ಶ) ತ ಖಂಡದ ಗದ್ದೆ ಬಾಯ್ಕಾಲು ನಾಯಕರ ದೇವದೋಟ ಇತ್ಯಾದಿ ಗದ್ದೆ ತೋಟ, ಕಾಲುವೆ, ಹುಲ್ಲಾವಲುಗಳ ಹೆಸರುಗಳೂ ಉಲ್ಲೇಖಗೊಂಡಿವೆ.

ವಿಜಯನಗರ ಸಾಮ್ರಾಜ್ಯಸ್ಥಾಪನಾ ಪೂರ್ವದ ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಮಹತ್ವದ ಮಾಹಿತಿಗಳನ್ನು ಈ ಶಾಸನಗಳು ಒದಗಿಸುತ್ತವೆ. ಕ್ರಿ. ಶ. 1076ರ ಶಾಸನ, ಮಠದಲ್ಲಿ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ದಾನ ಮಾಡಿದುದನ್ನು ಉಲ್ಲೇಖಿಸುವ

ಮೂಲಕ ಹಂಪಿಯು ಆಗ ಒಂದು ವಿದ್ಯಾಕೇಂದ್ರವಾಗಿದ್ದುದನ್ನು ಸೂಚಿಸಿದರೆ ಕ್ರಿ. ಶ. 1199ರ ಶಾಸನ ಹಂಪಿ ಏಳುನೂರು ಜನ ಬ್ರಾಹ್ಮಣರ ವಾಸಸ್ಥಾನವಾಗಿ ಬ್ರಹ್ಮಪುರಿಯಾಗಿ, ವಿರೂಪಾಕ್ಷ ಪಂಪಾಂಬಿಕೆಯರ ದೇವಸ್ಥಾನಗಳಂತೂ ಸರಿಯೆ ಜೊತೆಗೆ ದುರ್ಗಾ, ನಗರೇಶ್ವರ, ಶಿವಾಲಯ, ಭೈರವದೇವ, ರಾಚಮಲ್ಲೇಶ್ವರ, ಕೋಡಿಯಬೆನಕ, ಇತ್ಯಾದಿ ಹಲವಾರು ದೇವಾಲಯಗಳನ್ನು ಮನ್ಮಥ ಕುಂಡದಂತಹ ತೀರ್ಥಗಳನ್ನು ಒಳಗೊಂಡ ಒಂದು ಸುಪ್ರಸಿದ್ಧ ತೀರ್ಥ ಕ್ಷೇತ್ರವಾಗಿ ಪುಣ್ಯತೀರ್ಥವಾಗಿ ಶೈವಧರ್ಮದ ಕೇಂದ್ರವಾಗಿ ಅಭಿವೃದ್ಧಿ ಪಡೆದುದನ್ನು ಕಾಣುತ್ತೇವೆ.

ಕ್ರಿ.ಶ 1199ರ ಶಾಸನದಲ್ಲಿ ಬರುವ ಬಿಜವಾರಿ ಗದ್ದೆ, ಶತಖಂಡುನಗದ ಗದ್ದೆ, ಭೂಮಿಗೆ ನೀರುಣ್ಣಿಸುವ 'ಹಂಪೆಯ ಕಟ್ಟೆ' ಹೆಸರಿನ ಕೆರೆ, ಒಡ್ಡಿನ ಕಲ್ಲು, ನಾಯಕರ ದೇವದೋಟ, ಬಾಯ್ಕಾಲು (ಕಾಲುವೆ) ಇತ್ಯಾದಿ ಉಲ್ಲೇಖಗಳು ಹಂಪಿಯಲ್ಲಿ ನೀರಾವರಿಯ ವ್ಯವಸ್ಥೆಯಿದ್ದು ರೈತರು ಸಮೃದ್ಧವಾಗಿ ಬೆಳೆಯುತ್ತ ಅಲ್ಲಿಯೆ ವಾಸಿಸುತ್ತಿದ್ದುದರ ಸೂಚನೆಯನ್ನು ಕೊಡುತ್ತದೆ.

ಕನ್ನಡದ ಕ್ರಾಂತಿಕಾರಿ ಕವಿ ಹರಿಹರದೇವ ಹಂಪೆಯವ. ಅವನ ಗುರುಗಳೆಲ್ಲರ ಹೆಸರುಗಳಲ್ಲಿ ಹಂಪೆಯ ಶಂಕರದೇವ, ಹಂಪೆಯ ಮಾಯಿದೇವ ಮುಂತಾಗಿ ಹಂಪಿಯ ಹೆಸರು ಆರಂಭದಲ್ಲಿ ಬಂದೇಬರುತ್ತದೆ. ಆದುದರಿಂದ ಅವರು ಹಂಪೆಯವರೆಂಬುದು ನಿರ್ವಿವಾದ. ಅವನ 'ಪಂಪಾಶತಕ' ವಿರೂಪಾಕ್ಷನ ಸ್ತುತಿರೂಪ ವಾಗಿದೆ. ಅವನ 'ಪುಷ್ಪರಗಳೆ' ವಿರೂಪಾಕ್ಷ ಭಕ್ತಿಯ ರಸಗಟ್ಟಿಯಂತಿದೆ. ಅವನು ತನ್ನ 'ಗಿರಿಜಾ ಕಲ್ಯಾಣ' ಚಂಪೂಕಾವ್ಯದಲ್ಲಿ ಶಿವ–ಪಾರ್ವತಿಯರ ವಿವಾಹವನ್ನು ಪಂಪಾಪುರದಲ್ಲಿಯೆ ನೆರವೇರಿಸಿ ಸ್ಥಳೀಯ ಐತಿಹ್ಯಗಳನ್ನು ಸತ್ಯಗೊಳಿಸಲು ಪ್ರಯತ್ನಿಸಿ ದ್ದಾನೆ. ತನ್ನನ್ನು ತಾನು "ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ ಸುಪುತ್ರಂ" ಎಂದು ಹೇಳಿಕೊಂಡಿದ್ದಾನೆ. ಹಂಪೆಯಲ್ಲಿ ಹರಿಹರನ ಮತ್ತು ಅವನ ಗುರುಗಳ ಮಠ ಇರಲೇಬೇಕು. ಹರಿಹರದೇವನ ಕಾಲವನ್ನು ವಿದ್ವಾಂಸರು ಇತ್ತೀಚೆ ಹದಿಮೂರನೆಯ ಶತಮಾನದ ಪೂರ್ವಾರ್ಧದವರೆಗೆ ಎಳೆದುತರುತ್ತಿದ್ದಾರೆ. ಹರಿಹರನ ಕಾಲವನ್ನು ಕ್ರಿ. ಶ 1210 ಎಂದು ಪರಿಗಣಿಸಿದರೆ ಕ್ರಿ. ಶ. 1199ರ ಈ ಶಾಸನವನ್ನು ಲಿಖಿಸುವ ಹೊತ್ತಿಗೆ ಹರಿಹರ ಹಂಪೆಯಲ್ಲಿರಬಹುದಾದ ಸಾಧ್ಯತೆಯಿದೆ.

ಈ ಶಾಸನದಲ್ಲಿ ಚೌಡನನ್ನು ಮದೇಭಕ್ಕೆ ಹೋಲಿಸಿ "ಇರದೆಯ್ದಿಱಿಡಟ್ಟಿ ಮುಟ್ಟಿತ್ತು ಅಡಸಿ ಹಿಡಿದುದು, ಒತ್ತಿತ್ತು ಸುತ್ತಿತ್ತು ಕುತ್ತಿತ್ತು ಒರಸಿತ್ತು ಎತ್ತಿತ್ತು ಬೀಸಿತ್ತು ಒಗೆದುದು ಒಡೆದುದು ಈಡಾಡಿತ್ತು ಔಂಕಿತ್ತು ಉರುಳಿತ್ತು ಉರಮಂ ಮೆಟ್ಟಿತ್ತು ಮಾರಾಂತರನ್ ಹೊಯ್ದು ಒಕ್ಕಲಿಕ್ಕಿತ್ತು... ಚೌಡನೆಂಬ ಮದೇಭಂ" ಎಂದು ಬಣ್ಣಿಸಿದೆ. ಈ ಪದ್ಯವನ್ನು ಓದುವಾಗ ನಮಗೆ ಹರಿಹರನು 'ಗಿರಿಜಾಕಲ್ಯಾಣ' ದಲ್ಲಿ ಶಿವನ ಫಾಲನೇತ್ರಾಗ್ನಿಯನ್ನು ಬಣ್ಣಿಸಿರುವ

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋರಿದತ್ತು ಬಾ
ನ್ಕೊಗೆದುದು ನಿಂದು ಪೊಂಬೆಳಗುಮಂ ಪರಪುತ್ತದು ಧಂದಗಿಲ್‌ದಗಿಲ್
ಧಗಿಲೆನುತಟ್ಟತಟ್ಟದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ

ಎಂಬ ಪದ್ಯ ನೆನಪಿಗೆ ಬರುತ್ತದೆ. ಹರಿಹರನಿಂದ ಶಾಸನ ಕವಿ ಪ್ರಭಾವಿತ ನಾಗಿರ ಬಹುದೆ? ಅಥವಾ ಸ್ವತಃ ಹರಿಹರನೇ ಶಾಸನ ಬರೆದಿರಬಹುದೆ? ವಿಚಾರಣೀಯ.

ಕ್ರಿ. ಶ. ಸುಮಾರು ಹನ್ನೊಂದನೆಯ ಶತಮಾನದ ಶಾಸನವೊಂದು ಮಹಾ ನವಮಿದಿಬ್ಬದ ವಾಯವ್ಯಭಾಗದಲ್ಲಿ ದೊರೆತಿದ್ದು (ಮೂಲತಃ ಒಡೆದುಹೋದ ಒಂದು ಶಿಲ್ಪದ ಎರಡು ತುಂಡುಗಳ ಮೇಲೆ ಈ ಶಾಸನವಿದೆ) ಮಲಧಾರಿದೇವನೆಂಬ ಜೈನಯತಿ ಮುಡಿಪಿದುದನ್ನು ಅದು ತಿಳಿಸುತ್ತದೆ.[5] ಭಾಷೆ ಸಂಸ್ಕೃತ ಮತ್ತು ಕನ್ನಡ. ಜೈನಧರ್ಮ ಆಗ ಹಂಪೆಯ ಆ ಪ್ರದೇಶದಲ್ಲಿ ಇದ್ದುದನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ.

ವಿರೂಪಾಕ್ಷ ದೇವಸ್ಥಾನದ ಉತ್ತರದ್ವಾರದ ಬಳಿ ಇರುವ ಕ್ರಿ. ಶ. 1237ರ ಶಾಸನ ಹೊಯ್ಸಳ ಸೋಮೇಶ್ವರ ದೇವನು ವಿರೂಪಾಕ್ಷ ದೇವರಿಗೆ ಅಲ್ಲಿಯ ಸತ್ರದ ಬ್ರಾಹ್ಮಣರ ಭೋಜನಕ್ಕೆ ಹಣ ದಾನ ಮಾಡಿದುದನ್ನು ಉಲ್ಲೇಖಿಸುತ್ತದೆ.[6] ಇದರಿಂದ ಹಂಪೆಯ ಪ್ರದೇಶ ಹದಿಮೂರನೇ ಶತಮಾನದಲ್ಲಿ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದುದು ಸ್ಪಷ್ಟವಾಗುತ್ತದೆ.

ಚಿಂತಾಮಣಿ ಮಠದ ಎದುರು ನದಿಯಲ್ಲಿರುವ ಒಂದು ಕಲ್ಲುಗುಂಡಿನ ಮೇಲೆ ಸುಮಾರು 13ನೆಯ ಶತಮಾನದ ಒಂದು ಶಾಸನ ಸಂಸ್ಕೃತ ಕನ್ನಡದಲ್ಲಿದ್ದು ಪ್ರಧಾನ ಬುದ್ಧರಾಜನ ಹೆಂಡತಿ ಕಲುಬಾಯಿ ಸಮ್ಯಕ್ತ್ವದಿಂದ ಮಡಿದುದನ್ನು ಅದು ತಿಳಿಸುತ್ತದೆ.[7] ಜೈನಧರ್ಮ ಹಂಪಿಯ ಆ ಪ್ರದೇಶದಲ್ಲಿದ್ದದರ ಸೂಚನೆಯಿದು.

ತುಂಗಭದ್ರಾ ನದಿಯಲ್ಲಿರುವ 64 ಕಂಬಗಳ ಮಂಟಪದ ಹತ್ತಿರ ಒಂದು ಕಲ್ಲುಗುಂಡಿನ ಮೇಲೆ ಇರುವ 1325ರ ಕನ್ನಡ ಶಾಸನ ಒಬ್ಬ 'ರಾಯರಾಜಗುರು'ವನ್ನು ಉಲ್ಲೇಖಿಸುತ್ತದೆ.[9] ಇದು ಕ್ರಿಯಾಶಕ್ತಿಯನ್ನು ಸೂಚಿಸುತ್ತದೆಯೆ?

ಆನೆಗೊಂದಿಯ ಉತ್ತರ ಬಾಗಿಲದ ಹತ್ತಿರ ಹೊಲದಲ್ಲಿ ಒಂದು ಕನ್ನಡ ತಾಮ್ರಶಾಸನ ದೊರೆತಿದ್ದು ಅದು 'ವಿವಾಹ ಪುರಾಣ' (ಶಿವ–ಪಾರ್ವತಿಯರ ವಿವಾಹದ ಕಥೆ) ಮತ್ತು 'ಅಮೃತಮಥನ ಪುರಾಣ' (ಅಮೃತಕ್ಕಾಗಿ ದೇವ–ದಾನವರು ಸಮುದ್ರಮಥನ ಮಾಡಿದ ಕಥೆ) ಎಂಬ ಎರಡು ಸಾಹಿತ್ಯ ಕೃತಿಗಳನ್ನು ಉಲ್ಲೇಖಿಸುತ್ತದೆ. ಅವು ಕನ್ನಡ ಕೃತಿಗಳೆ?

ಕಂಪಿಲಿಯ ದೊರೆ ವೀರಕಂಪಿಲರಾಯನ (ಕ್ರಿ. ಶ. 1300-1327) ಕಾಲದ ಒಂದು ಶಾಸನ ಹೇಮಕೂಟದ ಮೇಲಿರುವ ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿದೆ. ಮುಮ್ಮಡಿ ಸಿಂಗೆಯನಾಯಕನ ಮಗನಾದ ವೀರಕಂಪಿಲನು ಶಿವದೇವಾಲಯ ನಿರ್ಮಿಸಿ ಅಲ್ಲಿ ತನ್ನ ತಾಯಿ ಮಾದನಾಯಕಿತಿ, ತಂದೆ ಸಿಂಗೆಯ ನಾಯಕ ಮತ್ತು ಪೆರುಮೆಯ ನಾಯಕರ ನೆನಪಿಗಾಗಿ ಮೂರು ಲಿಂಗಗಳನ್ನು ಪ್ರತಿಷ್ಠಾಪಿಸಿದಂತೆ ಈ ಶಾಸನ ತಿಳಿಸುತ್ತದೆ.[10] ಇದರಿಂದ ಹದಿನಾಲ್ಕನೆಯ ಶತಮಾನದ ಆರಂಭದ ಎರಡು ಮೂರು ದಶಕಗಳಲ್ಲಿ ಹಂಪೆಯ ಪ್ರದೇಶ ಕಂಪಿಲದೇವನ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯುತ್ತದೆ. ಕ್ರಿ. ಶ. 12ನೆಯ ಶತಮಾನದಿಂದ ಮೊದಲುಗೊಂಡು ಹದಿನಾಲ್ಕನೆಯ ಶತಮಾನದ ಮೊದಲೆರಡು ದಶಕಗಳವರೆಗಿನ ಅರ್ಥಾತ್ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲಿನ ಹಂಪಿಯ ಪ್ರದೇಶದ ಧಾರ್ಮಿಕ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದು ಪಕ್ಷಿನೋಟ.

ಅಡಿಟಿಪ್ಪಣಿಗಳು

1. *ಇಂಡಿಯನ್ ಆರ್ಕಿಯಾಲೊಜಿ : 1975 ಎ ರಿವ್ಯೂ*, ಪು. 62
2. *ಇಂಡಿಯನ್ ಆಂಟಿಕ್ವರಿ– 6*, ಪು. 85 ರಿಂದ
3. *ಇಂಡಿಯನ್ ಆರ್ಕಿಯಾಲೊಜಿ – 1975–76 ಎ ರಿವ್ಯೂ*, ಪು. 62
4. *ವಿಜಯನಗರ (ಹಂಪೆಯ) ಶಾಸನಗಳು*: ಶಾಸನ ಸಂಖ್ಯೆ 45 ಸಂ. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ್ ಪ್ರ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1996
5. *ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್*, ಸಂಪುಟ–4, ಸಂ.260
6. ಅದೇ, ಸಂಪುಟ – 5, ಶಾಸನ ಸಂ. 221
7. *ಆನ್ಯುಯಲ್ ರಿಪೋರ್ಟ ಆನ್ ಸೌಥ್ ಇಂಡಿಯನ್ ಎಪಿಗ್ರಫಿ, 1934–35*, ಸಂ. ಬಿ. 355
8. *ವಿಜಯನಗರ (ಹಂಪೆಯ) ಶಾಸನಗಳು*: ಶಾಸನ ಸಂಖ್ಯೆ 242
9. ಅದೇ, ಶಾಸನ ಸಂಖ್ಯೆ 38
10. ಅದೇ, ಶಾಸನ ಸಂಖ್ಯೆ 1
11. *ಆನ್ಯುಯಲ್ ರಿಪೋರ್ಟ ಆನ್ ಸೌಥ್ ಇಂಡಿಯನ್ ಎಪಿಗ್ರಫಿ, 1934–35*, ಶಾಸನ ಸಂಖ್ಯೆ ಬಿ. 353

೨. ಒಂದನೆಯ ದೇವರಾಯನ ಧಾರ್ಮಿಕ ಶಾಸನಗಳು

(ಕ್ರಿ. ಶ. 1405 ರಿಂದ 1426)

ಡಾ. ಡಿ. ಎಂ. ನಾಗರಾಜು

ಸಂಗಮ ವಂಶದ ಇಮ್ಮಡಿ ಹರಿಹರ ಮತ್ತು ಮೇಳಾದೇವಿಯರ ಪುತ್ರನಾದ ಒಂದನೇ ದೇವರಾಯನಿಗೆ ಮಹಾರಾಜಾಧಿರಾಜ, ಪರಮೇಶ್ವರ, ವೀರಪ್ರತಾಪ, ಪೂರ್ವ ಪಶ್ಚಿಮ ದಕ್ಷಿಣೋತ್ತರ ಚತುಷ್ ಸಮುದ್ರಾಧೀಶ್ವರ, ಹಿಂದೂರಾಯ ಸುರತ್ರಾಣ ಎಂಬ ಬಿರುದುಗಳಿದ್ದವು. ಚಾಮರಾಜನಗರ ಶಾಸನದಲ್ಲಿ ದೇವರಾಜ ಒಡೆಯರ್ ಎಂದೂ, ನಂಜನಗೂಡಿನ ಶಾಸನದಲ್ಲಿ ದೇವರಾಯ ಮಹಾರಾಯನೆಂದೂ, ತಿರುಮಕೂಡಲು ನರಸೀಪುರ ಶಾಸನಗಳಲ್ಲಿ ವಿಜಯ ವಿದ್ಯಾದೇವರಾಯ ಮತ್ತು ವೀರ ಪ್ರತಾಪದೇವರಾಯ ಒಡೆಯರ್ ಎಂಬುದಾಗಿಯೂ ಒಂದನೇ ದೇವರಾಯನನ್ನು ಕರೆಯಲಾಗಿದೆ. ಮಳವಳ್ಳಿ ಶಾಸನದಲ್ಲಿ ವೀರದೇವರಾಯ ಒಡೆಯರ್ ಎಂದು ಕರೆಯಲಾಗಿದೆ. ಮಳವಳ್ಳಿಯ ಮತ್ತೊಂದು ಶಾಸನದಲ್ಲಿ ಪ್ರತಾಪವಂಶ ಬೆಳೆದಂತೆ ತುರುಷ್ಕರು ಒಣಗಿ ಹೋದರು–ಪ್ರತಾಪವಂಶೇ ಪರಿಜೃಂಭಮಾಣೇ ಶುಷ್ಯಾಸ್ತುರಷ್ಯಾ ಅಪಿಯಷ್ಯರಾಜ್ಞಃ ಎಂಬುದಾಗಿ ವರ್ಣಿಸಲಾಗಿದೆ.

ದೇವರಾಯನು ಶೈವ ಧರ್ಮಾವಲಂಬಿಯಾಗಿದ್ದನು. ಸಂಗಮವಂಶದ ರಾಜರು ಶೈವಧರ್ಮಕ್ಕೆ ಹೆಚ್ಚಿನ ಉತ್ತೇಜನವನ್ನಿತ್ತರು. ಹಂಪೆಯ ವಿರೂಪಾಕ್ಷನು ಕೇವಲ ಪಂಪಾತಿಯಾಗಿರಲಿಲ್ಲ. ಸಾಮ್ರಾಜ್ಯಾಧಿದೇವನೂ ಆಗಿದ್ದನು. ಸಂಗಮ ಸಂತತಿಯ ದೊರೆಗಳು ಶ್ರೀ ವಿರೂಪಾಕ್ಷನ ಕಿಂಕರರಾಗಿದ್ದರು. ಕಾಳಾಮುಖ ಪಂಥದ ಆಚಾರ್ಯ ಕಾಶೀವಿಲಾಸ ಕ್ರಿಯಾಶಕ್ತಿ ಎಂಬುವರು ರಾಜಗುರುವೆನಿಸಿದ್ದರು. ಕ್ರಿ. ಶ 1405 ರಿಂದ 1426 ರವರೆಗೆ ಒಂದನೇ ದೇವರಾಯನು ಧಾರ್ಮಿಕವಾಗಿ ಮಂಡಳಿಕರು ಮಂತ್ರಿಗಳು ಮಾಡಿದ ದಾನದತ್ತಿ ದೇವಾಲಯಗಳ ನಿರ್ಮಾಣ ಜೀರ್ಣೋದ್ಧಾರ ಸೇವೆಗಳನ್ನು ಶಾಸನಗಳ ಮೂಲಕ ನಾವು ತಿಳಿಯಬಹುದು. ಕ್ರಿ. ಶ. 1405ರ ಆರಗ ಶಾಸನದಲ್ಲಿ ಬಾಣದೇವತೆಗೆ ಶ್ರೀಸೂಕ್ತಪಠಣ ಮಾಡುವವರಿಗೆ, ಪೂಜೆ, ನೈವೇದ್ಯಗೋಸ್ಕರ ಒಂದು ಭೂಮಿಯನ್ನು ಹಾಗೂ ಹಣ ದಾನ ನೀಡಿದ ವಿವರವಿದೆ. ಇದೇ ಕಾಲದ ತಂಬಳಪಲ್ಲೆ ಶಾಸನದಲ್ಲಿ ಮಾರ್ಜವಾಡಿನಾಡಿನಲ್ಲಿ (ಮಹಾರಾಜವಾಡಿ– ನಾಡು) ಚಂದ್ರಗಿರಿ ತಂಮ್ಮಡಿಹಳ್ಳಿ ಮಲ್ಲಿಕಾರ್ಜುನ ದೇವರ ದೇವಸ್ಥಾನಕ್ಕೆ ರಾಜನ ಆಜ್ಞೆಯ ಮೇರೆಗೆ ಮಯಿಲಪ್ಪ ಅಧಿಕಾರಿ ತಂಮ್ಮಡಿಹಳ್ಳಿಯನ್ನು

ದಾನ ನೀಡಿ ಶಿವರಾತ್ರಿ ಹಬ್ಬದಲ್ಲಿ ತೆರಿಗೆ ಹಣದ ಆದಾಯದಿಂದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ದಾನ ನೀಡಿದ ದಾಖಲೆಯಿದೆ.

ಕ್ರಿ. ಶ. 1407ರ ಪಾಂಡೇಶ್ವರ ಶಾಸನದಲ್ಲಿ ಪಾಂಡೇಶ್ವರ ಶಂಕರನಾರಾಯಣ ದೇವರ ದೀಪ ಬೆಳಗಿಸಲು ನಿಗದಿಪಡಿಸಿದ ಭೂಮಿಯನ್ನು ರಾಜನು, ಪ್ರಜೆಗಳು, ಹೆಗ್ಗಡೆ ಮತ್ತು ಗ್ರಾಮದವರು ದಾನನೀಡಿದ್ದಾರೆ. ಇದೇ ಕಾಲದ ನೀಲಾವಾರ ಶಾಸನದಲ್ಲಿ ಬಾಚಣ ಒಡೆಯನು ಬಾರಕೂರ ರಾಜ್ಯ ಆಳುತ್ತಿರುವಾಗ, ಶಿವದಾಸಿದೇವ ಈ ಗ್ರಾಮದ ಹಳ್ಳಿಯ ಉಸ್ತುವಾರಿ ವಹಿಸಿಕೊಂಡಿರುವಾಗ ನೀಲಾವಾರ ದುರ್ಗಾ ದೇವಿಯ ಪೂಜೆಗೋಸ್ಕರ ದಾನ ನೀಡಿದ ವಿವರವಿದೆ. ಇದೇ ಕಾಲದ ಸಂಗೂರ ಶಾಸನದಲ್ಲಿ ಸೇನಾಧಿಪತಿ ಸಂಗಮ ಮತ್ತು ಅವನ ಮೊಮ್ಮಗ ಬೈಚವೆಗ್ಗಡೆ ಕಂಪಿಲರಾಯನ ಅಧೀನದಲ್ಲಿರುವ ಒಬ್ಬ ಅಧಿಕಾರಿಯು ಗೋವೆಯ ರಾಜ್ಯದಲ್ಲಿ ಚಂದ್ರಗುತ್ತಿ ನಾಡಿನಲ್ಲಿ ಚೆಂಗಾಪುರದಲ್ಲಿ ಕುಮಾರ ರಾಜನಾಥದೇವರ ವಿಗ್ರಹ ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಉಳುವಾಡಿ ಶಾಸನದಲ್ಲಿ ಹೊಳೆಯಹಾಳುವಿನ ಗೋಪಿನಾಥದೇವರಿಗೆ ಮಾಗೂಡೆ ಸಿಂಗಯನಾಯಕನ ಮಗ ವಾಬಯ್ಯನಾಯಕನು ವೂಬಸಮುದ್ರ ಗೊಂಡನಹಳ್ಳಿಗೆ ಹೊಂದಿಕೊಂಡಿರುವ ದೇವಸ್ಥಾನದ ಸ್ಥಾನಿಕನಿಗೆ ದಾನ ನೀಡಿದ್ದಾರೆ. ಕ್ರಿ. ಶ. 1407–08ರ ಹಳೆ ಅಗ್ರಹಾರ ಶಾಸನದಲ್ಲಿ ನಂದಿನಾಥ ದೇವರಿಗೋಸ್ಕರ ವೊಮ್ಮಳಿಗೆ ನಾಡಿನ ಮುಖ್ಯಸ್ಥನ ಒಂದು ಅಗ್ರಹಾರವನ್ನು ದಾನ ನೀಡಿದ್ದು ಹಾಗೂ ಅಪ್ಪಣ ಎಂಬ ಸುಂಕಾಧಿಕಾರಿಯು ಮತ್ತು ಬೇರೆಯವರು ತೆರಿಗೆ ಆದಾಯದಿಂದ ದಾನ ನೀಡಿದ ದಾಖಲೆಯಿದೆ. ಕ್ರಿ. ಶ. 1408ರ ಕಣ್ಣೇಹಳ್ಳಿ ಶಾಸನದಲ್ಲಿ ಕುಕ್ಕಲನಾಡಿನ ಕಣ್ಣೆಲ್ಲಿನಲ್ಲಿ ತಿರುಮಲನಾಥದೇವರಿಗೆ ಎರಡು ಮಗ್ಗಗಳನ್ನು ಅಧಿಕಾರಿ ಹಯಕಸವನು ದಾನ ನೀಡಿದ್ದಾನೆ. ಹನುಮಂತದೇವರ ಪೂಜೆ ನೈವೇದ್ಯಗೋಸ್ಕರ ಒಂದು ಗ್ರಾಮ ವನ್ನು ದಾನ ಮಾಡಿದ ವಿವರವಿದೆ. ಇದೇ ಕಾಲದ ಬೂದಿಪಾಡಗ ಗ್ರಾಮದ, ಗಾಜನೂರು ಮಲ್ಲಿಕಾರ್ಜುನ ದೇವರ ಒಂದು ದೀಪ ಮತ್ತು ಅಂಗರಂಗಭೋಗಕ್ಕೆ ಮುದುವಾಂಕನಾಡಿನ ಎಲ್ಲಾ ಪ್ರಜೆಗಾವುಂಡಗಳು ದಾನಮಾಡಿದ್ದಾರೆ.

ಕ್ರಿ. ಶ. 1408–09ರ ಕುಂದಾಪುರ ಶಾಸನದಲ್ಲಿ ಹನುಮದೇವರ ಸೇವೆಗೋಸ್ಕರ ಹೆಚ್ಚಿನ ಕಂದಾಯ, ಒಂದು ಹಳ್ಳಿಯನ್ನು ದಾನ ನೀಡಿದ ವಿವರವಿದೆ. ಕ್ರಿ. ಶ. 1409ರ ಕೂಡಲಿ ಶಾಸನದಲ್ಲಿ ಕೂಡಲಿರಾಮನಾಥನ ದೇವಸ್ಥಾನದಲ್ಲಿ ಪುರಾಣ ಪಠಣ ಮಾಡಿಸಲು ವೆಂಕಣ ಉಪಾಧ್ಯಾಯನಿಗೆ ಹಣ ಹಾಗೂ ನಂತರ ಒಂದು ದೀಪ ಬೆಳಗಿಸಲು 15 ಗದ್ಯಾಣಗಳನ್ನು ವಿಟ್ಟಣವೊಡೆಯ ಆರಗ ರಾಜ್ಯವಾಳುತ್ತಿರು ವಾಗ ಒಬ್ಬ ಅಧಿಕಾರಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಕುದೇರು ಶಾಸನದಲ್ಲಿ ಮುಗೂರುನಾಡಿನ ಕುದೇರಿನ ಮಲ್ಲಿನಾಥದೇವರ ಒಂದು ದೀಪ

ನಿರ್ವಹಣೆಗೋಸ್ಕರ ತೊರೆಯರ ದೊಡ್ಡತಮ್ಮನ ಮಗ ಕೊಂಡಿನಮೂರಭೂವನು ಮಗ್ಗದ ತೆರಿಗೆಯಿಂದ ದೇವರ ಒಡೆಯನು ನಿಗದಿಪಡಿಸಿದ್ದನ್ನು ತಿಳಿಸುತ್ತದೆ. ಗಂಗವಾಡಿ ಶಾಸನದಲ್ಲಿ ಮಗ್ಗಗಳ ತೆರಿಗೆ ಬಾಡಿಗೆ ಬಾಕಿಯಿಂದ ನಂಜನಾಥದೇವರ ಸೇವೆಗೋಸ್ಕರ ನಂಜರಸ ಒಡೆಯನು ದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ. ಶ. 1410ರ ಹಂಪಿ ಶಾಸನದಲ್ಲಿ ಮಂತ್ರಿಯ ಕನಸಿನಲ್ಲಿ ವಿನಾಯಕದೇವರು ತಿಳಿಸುತ್ತಾ, ಪಂಪಾಕ್ಷೇತ್ರ ಮಾಲಯವಂತ ಬೆಟ್ಟದ ಹತ್ತಿರ ಪೂರ್ವ ಭಾಗದ ಗುಹೆಯಲ್ಲಿ ವಿಗ್ರಹ ಪ್ರತಿಷ್ಠಾಪಿಸಲು ತಿಳಿಸುತ್ತದೆ. ಇದೇ ಕಾಲದ ಮತ್ತೊಂದು ಶಾಸನದಲ್ಲಿ ವೀರನಾರಾಯಣದೇವರ ಸೇವೆಗೋಸ್ಕರ ಭೂಮಿಗಳನ್ನು ಒಟ್ಟುಗೂಡಿಸಿ ದಾನ ನೀಡಿದ ವಿವರ ಹಾಗೂ ಅಯಿಯ್ಯನಮಗ ಕೇಶವ ದಾಸನ ಬಗ್ಗೆ ತಿಳಿಸುತ್ತದೆ. ಹೆಗ್ಗವಾಡಿ ಶಾಸನದಲ್ಲಿ ಹೆಗ್ಗವಾಡಿಯ ಶಂಭುನಾಥದೇವರ ದೇವಾಲಯಕ್ಕೆ ಒಂದು ದೀಪ ನಿರ್ವಹಣೆಗೋಸ್ಕರ ಪ್ರಹಾನಿದೇವ ದಾನ ನೀಡಿದ್ದಾನೆ.

ಕ್ರಿ. ಶ. 1411ರ ಕೋಟೇಶ್ವರ ಶಾಸನದಲ್ಲಿ ಬಾಚಣ ಒಡೆಯ ಬಾರಕೂರ ರಾಜ್ಯವನ್ನು ಆಳುತ್ತಿರುವಾಗ ಕೊಟೆನಾಥದೇವರ ದೀಪಗೋಸ್ಕರ ಹರಿಯಪರಸನು ಭೂಮಿ ದಾನ ಮಾಡಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಚಿತ್ರದುರ್ಗದ ಶಾಸನದಲ್ಲಿ ಹಿಡಿಂಬನಾಥದೇವರ ಪೂಜೆ ನೈವೇದ್ಯಕ್ಕೋಸ್ಕರ ದೇವರಾಯನ ಮಗ ಮಹಾಮಂಡಲೇಶ್ವರ ಮಲ್ಲಣ ಒಡೆಯ ಬೆಮ್ಮತನಕಲ್ಲುಗೆ ಹೊಂದಿಕೊಂಡಿರುವ ಕುಂಚೆಗನಹಳ್ಳಿ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಈ ದಾನವನ್ನು ತಾಯಿ ಮಲ್ಲಯ್ಯವ್ವೆಯ ಜ್ಞಾಪಕಾರ್ಥವಾಗಿ ಈ ದಾನ ಮಾಡಿದ ಗ್ರಾಮವನ್ನು ಮಲ್ಲಪುರ ಎಂದು ಹೆಸರಿಸಿ ಈ ದಾನವನ್ನು ದೇವಸ್ಥಾನದ ಸನ್ಯಾಸಿಗಳಿಗೆ ಕೊಟ್ಟ ವಿಷಯ, ಯಿಡುಂಬಜೀಯ ಮತ್ತು ಸಿರಿಗಿರಿಜೀಯ ಎಂಬುವವರು ದೇವಸ್ಥಾನದ ದಕ್ಷಿಣದ ಬಾಗಿಲು ಗೋಪುರವನ್ನು ಹೆಚ್ಚಿಸಿದ ಬಗ್ಗೆ ತಿಳಿಸುತ್ತದೆ. ಇವರು ತ್ರಿಯಂಬಕದೇವರ ಭಕ್ತರು. ಕ್ರಿ.ಶ. 1412ರ ಹಡಗಲಿ ಶಾಸನದಲ್ಲಿ ಮೈಲಾರ ದೇವರ ಭಂಡಾರಿಯಾದ ನಾಗರಸನ ಮಗನಾದ ಗಂಗರಸನು ಮಾಳಲದೇವಿಗೆ ಸುಖನಾಸಿ ಮತ್ತು ನವರಂಗ ಮಂಟಪವನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಕ್ರಿ. ಶ. 1413ರ ಬಾಳೇಹಳ್ಳಿ ಶಾಸನದಲ್ಲಿ ಬೊಮ್ಮರಸ ಬಾಳೆಯಹಳ್ಳಿ ಹೂಳಗದರಲ್ಲಿ ಬಾಳೆಯಹಳ್ಳಿ ಭೂಮಿಯನ್ನು ನಿಜವಾದ ಬಾಡಿಗೆದಾರರಿಂದ ಬಿಡಿಸಿ ವೀರೇಶ್ವರ ದೇವರಿಗೆ ದಾನ ನೀಡಿದ್ದಾನೆ. ಇದೇ ಕಾಲದ ಕತ್ತರಿಗುಪ್ಪೆ ಶಾಸನದಲ್ಲಿ ವಡಗಿಹಳ್ಳಿ ರಾಮನಾಥದೇವರಿಗೆ ಬಳವಂಕ ಅಂಕಿಯನಾಯಕನ ಮಗ ತಿಂಮನಾಯಕನು ಅಂಬತ್ತಕ್ಕಿ ನಾಡಿನಲ್ಲಿ ಕತ್ತರಿಗುಪ್ಪೆ ಗ್ರಾಮವನ್ನು ದಾನ ನೀಡಿದ ವಿವರಣೆ ಇದೆ. ಇದೇ ಕಾಲದ ಮುಡೂಳ್ಳ ಶಾಸನದಲ್ಲಿ ನಾಲ್ಕು ತಿಂಗಳು ಚಾತುರ್ಮಾಸದಲ್ಲಿ

ಶಂಭುದೇವಯ್ಯನು ಗುಣವಂತೇಶ್ವರ ದೇವರ ಮುಂದೆ ದಾನ ನೀಡಿದ ದಾಖಲೆಯಿದೆ.

ಕ್ರಿ. ಶ 1414ರ ಬೇಲೂರು ಶಾಸನದಲ್ಲಿ ಚನ್ನಕೇಶವ ದೇವರ ಡೋಲೋತ್ಸವ, ಕಾರ್ತಿಕ ದೀಪೋತ್ಸವಕ್ಕೋಸ್ಕರ ಮಹಾಪ್ರಧಾನ ದಂಡನಾಯಕ ದೀಪಸ್ತಂಭವನ್ನು ಮಾಡಿಸಿದ ವಿವರವಿದೆ. ಕೈವಾರ ಶಾಸನದಲ್ಲಿ ಕೈವಾರ ಅಮರನಾರಾಯಣದೇವರಿಗೆ ದಾನ ನೀಡಿದ ವಿವರವಿದೆ. ಬೆಂಕಿಪುರ ಶಾಸನದಲ್ಲಿ ಲಕ್ಷ್ಮೀನರಸಿಂಹ ದೇವಸ್ಥಾನ ಕಟ್ಟಿಸಿ ಎರಡು ಪಟ್ಟಿಗಳಾದ ಲಕ್ಷ್ಮೀಪುರ ಮತ್ತು ನರಸಿಂಹಪುರ ಎಂದು ಹೆಸರಿಸಿ ಮದುವೆತೆರಿಗೆ, ಸಾರಿಗೆ, ಸಕ್ಕರೆ ಕಾರ್ಖಾನೆ, ಅಡಿಕೆ ತೋಟಗಳ ಆದಾಯದಿಂದ ಬಂಕಿಯಪುರದ ದೇವರಿಗೆ ಗೌಡಗಳ ಮತ್ತು ಪ್ರಜೆಗಳ ಎರಡು ಸ್ಥಳಗಳಲ್ಲಿ ದಾನ ನೀಡಿದ ವಿವರವಿದೆ. ಇದೇ ಕಾಲದ ಕುಲ್ಮೆ ಶಾಸನದಲ್ಲಿ ಕೇಶಪ್ಪ ಮಂಗಳೂರು ರಾಜ್ಯ ಆಳುತ್ತಿರುವಾಗ ಚಿತ್ರಾಪುರದ ದುರ್ಗದೇವಸ್ಥಾನಕ್ಕೆ ಮಹಾಪ್ರಧಾನ ಬಾಯಿಚಯ್ಯದಂಡನಾಯಕನು ಶ್ರೀ ವರದೇಂದ್ರ ತೀರ್ಥ ಶ್ರೀ ಪಾದಂಗಳಿಕಯ್ಯಲು ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಹಾನೇಹಳ್ಳಿ ಶಾಸನದಲ್ಲಿ ಸೋಮನಾಥದೇವಪ ದೇವಸ್ಥಾನಕ್ಕೆ ಚಿದಾಡಿ ಸೋಮಣ್ಣಸೆಟ್ಟಿಯರು ದಾನ ನೀಡಿದ ವಿವರವಿದೆ.

ಕ್ರಿ. ಶ. 1415ರ ಕೊಟಕೇರಿ ಶಾಸನದಲ್ಲಿ ಕೊಟೀಯಕೇರಿ ಮಾರ್ಕಂಡೇಶ್ವರ ದೇವರ ಪೂಜೆ ನೈವೇದ್ಯಕ್ಕೋಸ್ಕರ ಹಂಪಣ್ಣನು ಭೂಮಿ ದಾನ ನೀಡಿದ ದಾಖಲೆ ಯಿದೆ. ಇದೇ ಕಾಲದ ಹರದನಹಳ್ಳಿ ಶಾಸನ ಸವೆದಿದೆ. ಅಣಿಲೇಶ್ವರ ದೇವರ ದೀಪ, ಪೂಜೆ ಸೇವೆಗೋಸ್ಕರ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ. ಶ. 1416ರ ಜುಗ್ ಶಾಸನದಲ್ಲಿ ಬಾಚಮದಂಡ ಒಡೆಯ ಹೊನ್ನಾವರ ಭಾಗದ ಗೋವೆ, ಐವೇ, ತುಳು, ಮತ್ತು ಕೊಂಕಣ ಆಳುತ್ತಿರುವಾಗ ಬೊಮ್ಮನಾಯಕ ಮತ್ತು ಬೇರೆಯವರು ಛತ್ರಕ್ಕೆ ಗೋಕರ್ಣ ಕ್ಷೇತ್ರದ ಮಹಾಬಲೇಶ್ವರ ದೇವರ ಮುಂದೆ ದಾನ ಮಾಡಿದ್ದನ್ನು ತಿಳಿಸುತ್ತದೆ. ಕ್ರಿ. ಶ. 1417ರ ಸಾವಂಜ ಶಾಸನದಲ್ಲಿ ಪಾಳುಂಜ ಮಹದೇವ ದೇವರಿಗೆ ಪ್ರತಿವರ್ಷ ವೃಶ್ಚಿಕ ತಿಂಗಳಲ್ಲಿ ಒಂದು ಹಾಡ ಕೊಬ್ಬರಿ ಎಣ್ಣೆಯನ್ನು ವಿಟ್ಟಲದೇವಿಗೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇ ಕಾಲದ ಮಡಿವಾಳ ಶಾಸನದಲ್ಲಿ ತೆಂಡತ್ತಿ ಮಡಿವಾಳ ಮೂಲಸ್ಥಾನ ದೇವರ ಪೂಜೆ ನೈವೇದ್ಯಕ್ಕೋಸ್ಕರ ತೆಂಡತ್ತಿ ಹತ್ತಿರ ಮಡಿವಾಳ ಗ್ರಾಮವನ್ನು ಯರಗಿ ಸೆಟ್ಟಿ ಮಗ ಮಹಾಪ್ರಭು ಬೈರಿಸೆಟ್ಟಿ ದಾನ ನೀಡಿದ ವಿವರವಿದೆ. ಕ್ರಿ. ಶ. 1418ರ ಕೈಕಿಣಿ ಶಾಸನದಲ್ಲಿ ಪಾಯಣ್ಣ ಒಬ್ಬ ಜೈನಭಕ್ತ ಅವನ ಶಿಷ್ಯ ವಿದ್ಯಾನಂದಮುನಿ ಕೈಕಿಣಿಯಲ್ಲಿ ಒಂದು ಚೈತ್ಯಾಲಯ ಕಟ್ಟಿಸಿ ಪಾರ್ಶ್ವನಾಥ ವಿಗ್ರಹಪ್ರತಿಷ್ಠಾಪಿಸಿ ನಿತ್ಯ

ನಿರ್ವಹಣೆ ದೇವಾಲಯದ ಪೂಜೆ ನೈವೇದ್ಯಕ್ಕೋಸ್ಕರ ಭೂಮಿ ದಾನ ನೀಡಿದ ದಾಖಲೆಯಿದೆ. *ಹಾಗೂ ಬೇರೆಯವರಿಗೆ ದಾನ ನೀಡಿದ ವಿವರವಿದೆ.*

ಕ್ರಿ. ಶ. 1416ರ ಪಡುವರಿ ಶಾಸನದಲ್ಲಿ ಸೇನೇಶ್ವರ ದೇವರಿಗೆ ಬಯಿದೂರನಾಡು ನಡಗಿಯರು ಸಮಸ್ತರ ಕೈಯಲು ತತ್ಕಾಲೋಚಿತ ಕ್ರಯ ದಾನವಾಗಿ ಕೊಂಡು ಬಂದ ದೇವೆಸ್ವರ ಚಿಕ್ಕನಕೇರಿಯ ಹರಿಹರಪುರದಲ್ಲಿ ಭೂಮಿಯನ್ನು ಬಯಿದೂರು ಸೆಟ್ಟಿಕಾಱರು ಸಮಸ್ತರು ಗಉತಮಗೋತ್ರದ ಮಲ್ಲಪ್ಪಗಳ ಮಕ್ಕಳು ವಿಠಪಗಳ ಮಾಯಂಣಗಳಿಗೆ ಕೊಟ್ಟ ವಿವರವಿದೆ. ಇದೇ ಕಾಲದ ಕಳಸ ಶಾಸನ ಸವೆದಿದೆ. ಕಳಸನಾಥದೇವರ ಮುಂಜಾನೆ ಕಾಲದ ನಿತ್ಯ ನೈವೇದ್ಯಕೋಸ್ಕರ ಕಳಸದ ಹುಂಜ ಮಾಕಣ್ಣ ಕನ್ಯಾನದ ಸಿಂಗರಸನು ಭೂಮಿ ಖರೀದಿಸಿ ದಾನ ನೀಡಿದ ವಿವರವಿದೆ. ಇದೇ ಕಾಲದ ಚಿದ್ರವಳ್ಳಿ ಶಾಸನದಲ್ಲಿ ಚಿದರವಳ್ಳಿಯ ಸೋಮಯ್ಯ ದೇವಸ್ಥಾನದ ಸ್ಥಾನಿಕರು. ಇವರುಗಳಿಗೆ ತೆರಿಗೆರಹಿತ ತಳಕಾಡುನಾಡಿನ 42 ಪುರಗಳು, ಮುಖ್ಯಸ್ಥರು, ಬೇರೆ ಬೇರೆ ಸ್ಥಳಗಳನ್ನು ಹೆಸರಿಸಿ ಪುರಭೂವಗಳು ಕೊಟ್ಟಿದ್ದಾರೆ. ತೋಟ ಮತ್ತು ಕೆರೆ ಭೂಮಿಗಳು ದೇವರಿಗೆ ಸೇರಿಸಲ್ಪಟ್ಟವು. ಬೆಳಕವಾಡಿಯ ಶಾಸನದಲ್ಲಿ ಸ್ವಯಂಭುನಾಥ ದೇವರ ಒಂದು ದೀಪೋತ್ಸಕೋಸ್ಕರ ದೇವರಸ ಒಡೆಯರು ದಾನ ನೀಡಿದ ದಾಖಲೆಯಿದೆ. ಮುಗುಳಗೆರೆ ಒಂದು ತಾಮ್ರ ಶಾಸನದಲ್ಲಿ ಬೇರೆ ಬೇರೆ ವಿಧದ ಬೆದ್ದಲು ಭೂಮಿ ಯರೆಭೂಮಿ, ವಸಬುಭೂಮಿಗಳೆಂದು ಅಳತೆ ಮಾಡಿ ನಿಗದಿಪಡಿಸಿದ ಹಣವನ್ನು ಹಂಪೆ ಮಲ್ಲಿಕಾರ್ಜುನ ಹನುಮಂತಾ, ರಾಮನಾಥ ಮತ್ತು ಶಂಕರ ದೇವರುಗಳಿಗೆ ನಿಗದಿಪಡಿಸಿದ ಭೂಮಿಗಳನ್ನು ಬೇರ್ಪಡಿಸಿ ಹಣ ಭೂಮಿಯನ್ನು ದಾನ ನೀಡಿದ್ದನ್ನು ಹೆಸರಿಸುತ್ತದೆ.

ಕ್ರಿ. ಶ. 1421ರ ತೀರ್ಥಮತ್ತೂರು ಶಾಸನದಲ್ಲಿ ಕಾಂತಿದೇವಿ, ಶಂಕರದೇವ, ಮಲ್ಲಿಕಾರ್ಜುನ, ಖಾಂಡೇಶ್ವರ ಮತ್ತು ಬ್ರಹ್ಮದೇವ ದೇವರುಗಳನ್ನು ತಿಳಿಸುತ್ತದೆ. ಕ್ರಿ. ಶ. 1423ರ ಆರಗ ಶಾಸನದಲ್ಲಿ ಅಖಂಡ ಬ್ರಹ್ಮೇಶ್ವರ ದೇವರ ದೇವಸ್ಥಾನದ ಪೂಜೆಗೆ ಹಾಗೂ ದೀಪ ಬೆಳಗಿಸುವುದಕ್ಕೆ ಆರಗ ರಾಜ್ಯದ ರಾಜ್ಯಪಾಲ ದಾನ ನೀಡಿದ ದಾಖಲೆಯಿದೆ. ಕ್ರಿ. ಶ. 1426ರಲ್ಲಿ ಆನೆಸಾಲಿ(ಹಂಪಿ) ಶಾಸನದಲ್ಲಿ ರಾಜನು ಅವನ ಬುದ್ಧಿವಂತಿಕೆಗೆ ಪ್ರಖ್ಯಾತನಾಗಿದ್ದು, ಇವನು ವಿಜಯನಗರ ಕ್ರಮುಕಪರ್ಣಾಪಣ ಬೀದಿಯಲ್ಲಿ ಕಲ್ಲಿನ ಪಾರ್ಶ್ವ ಚೈತ್ಯಾಲಯವನ್ನು ನಿರ್ಮಿಸಿರುವುದನ್ನು ತಿಳಿಸುತ್ತದೆ.

ದೇವರಾಯನು ಶೈವ ಧರ್ಮಾವಲಂಬಿಯಾಗಿದ್ದನು. ವಿಜಯನಗರದಲ್ಲಿ ಅವನು ನಿರ್ಮಿಸಿದ ದೇವಾಲಯಗಳನ್ನು ಈಗಲೂ ನೋಡಬಹುದು. ಅವನು ಕವಿಗಳಿಗೂ, ಕಲಾವಿದರಿಗೂ ದಾರ್ಶನಿಕರಿಗೂ ಕನಕಾಭಿಷೇಕ ಮಾಡಿದನು ಎಂದು ಹೇಳಲಾಗಿದೆ.

ಗ್ರಂಥ ಋಣ

1. ಎ. ಆರ್. ಐ. ಇ
2. ಎಸ್. ಐ. ಐ. ಸಂಖ್ಯೆ IV, VII, IX, Pt.II XVIII, XXVII
3. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ, IV, V, VI, VII, VIII, IX, X, XI
4. ಕೆ. ಐ. ಸಂಪುಟ. I, VI
5. *History of Karnataka* - P. B. Desai

೩. ಚಕ್ರವರ್ತಿ ಬುಕ್ಕರಾಯನ ಶಾಸನವೊಂದರ ಮರುನೋಟ

ಡಾ. ಪಿ. ಎನ್. ನರಸಿಂಹಮೂರ್ತಿ

ವಿಜಯನಗರ ಸಾಮ್ರಾಜ್ಯದ ಸ್ಥಾಪನಾನಂತರದ ಕಾಲದಿಂದ ದಕ್ಷಿಣ ಭಾರತದ ಇತಿಹಾಸದಲ್ಲೊಂದು ಹೊಸಯುಗ ಪ್ರಾರಂಭವಾಯಿತು. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳೆಲ್ಲವು ಅಭೂತಪೂರ್ವ ಸಾಧನೆಯನ್ನು ಕಂಡವು. ನ್ಯಾಯಪರ ಆಡಳಿತ ಶಾಂತಿ ಮತ್ತು ಸಮೃದ್ಧಿಗಳಿಂದ ಚಿಂತನಶೀಲ ಮತ್ತು ಧರ್ಮಪರ ಸಮಾಜವೊಂದರ ಬೆಳವಣಿಗೆ ಆಯಿತು. ವಿಜಯನಗರ ಸಾಮ್ರಾಜ್ಯವನ್ನಾಳಿದ ಪ್ರಥಮ ರಾಜವಂಶವಾದ ಸಂಗಮ ವಂಶದ ರಾಜರು ಈ ತೆರನಾದ ಬೆಳವಣಿಗೆಗಳಿಗೆ ಚಾಲನೆ ನೀಡಿ ಭದ್ರ ಬುನಾದಿ ಹಾಕಿದರು.[1] ಈ ಕಾರ್ಯದ ಮೂಲಪುರುಷರೆಂದರೆ ಒಂದನೆಯ ಹರಿಹರ ಮತ್ತು ಉತ್ತರಾಧಿಕಾರಿಯಾಗಿ ಬಂದ ಈತನ ತಮ್ಮ ಒಂದನೆಯ ಬುಕ್ಕರಾಯ. ಇವರು ಕ್ರಮವಾಗಿ ಕ್ರಿ. ಶ. 1336 ರಿಂದ 1357 ಮತ್ತು 1357 ರಿಂದ 1377ರ ವರೆಗೆ ಆಳ್ವಿಕೆ ನಡೆಸಿದರು. ಗುರುಗಳಾದ ವಿದ್ಯಾರಣ್ಯರ ಮಾರ್ಗದರ್ಶನ ಮತ್ತು ಸ್ವಸಾಮರ್ಥ್ಯದಿಂದ ಇವರು ಭಾರತದ ಒಂದು ವಿನೂತನ ಸಾಮ್ರಾಜ್ಯವನ್ನು ನಿರ್ಮಿಸಿದರು. ಇವರ ಕಾರ್ಯಶೀಲತೆಯ ಅರಿವು ಇವರುಗಳ ಕಾಲದ ಶಾಸನಗಳಿಂದ ಆಗುತ್ತದೆ. ಸಂಖ್ಯೆಯಲ್ಲಿ ಅಣ್ಣನ ಕಾಲದ ಶಾಸನಗಳಿಗಿಂತ ತಮ್ಮ ಬುಕ್ಕರಾಯನ ಕಾಲದ ಶಾಸನಗಳು ಅಧಿಕವಾಗಿವೆ. ಇವುಗಳಲ್ಲಿ ಕೆಲವು ತಮ್ಮದೇ ಆದ ಧೋರಣೆಗಳೊಂದಿಗೆ ವಿಶೇಷತೆಯನ್ನು ಪಡೆದಿವೆ. ಅದರಲ್ಲಿ ಒಂದನ್ನು ಪ್ರಸ್ತುತ ಮರುಅವಲೋಕನಕ್ಕೆ ಆರಿಸಿಕೊಂಡಿದ್ದೇನೆ. ಇದು ವಿಜಯನಗರ ಆಡಳಿತಕ್ಕೆ ಸಂಬಂಧಿಸಿದಂತೆ ಶ್ರವಣ ಬೆಳಗೊಳದಲ್ಲಿ ದೊರೆಯುವ ಪ್ರಪ್ರಥಮ ದಾಖಲೆ.[2] ಕ್ರಿ. ಶ. 1368 ಆಗಸ್ಟ್ 24 ಗುರುವಾರಕ್ಕೆ ಸೇರುವ ಬುಕ್ಕರಾಯನ ಈ ಶಾಸನ ಅದು ಪತ್ತೆಯಾದಂದಿನಿಂದ (ಕ್ರಿ. ಶ. 1809) ಇಂದಿನವರೆಗೆ ಹಲವಾರು ಮಂದಿ ವಿದ್ವಾಂಸರ ಗಮನ ಸೆಳೆದಿದೆ.[3] ಅವರು ತಮ್ಮದೇ ರೀತಿಯಲ್ಲಿ ಇದನ್ನು ವ್ಯಾಖ್ಯಾನಿಸಿದ್ದಾರೆ.

ಶಾಸನದ ಮುಖ್ಯ ವಿಷಯ–ಜೈನರಿಗೂ ಭಕ್ತರಿಗೂ (ವೈಷ್ಣವರಿಗೂ) ತಿಕ್ಕಾಟವಾದಾಗ ವೈಷ್ಣವರಿಂದ ತೀವ್ರ ಘಾಸಿಗೊಂಡ ಜೈನರು ಚಕ್ರವರ್ತಿ ಬುಕ್ಕರಾಯನಲ್ಲಿ ಈ ಬಗ್ಗೆ ಬಿಂನಹ ಮಾಡಿಕೊಂಡರು. ಆಗ ಚಕ್ರವರ್ತಿಯು ಜೈನ ಮತ್ತು ವೈಷ್ಣವ ಸಮಯಗಳೆರಡೂ ಸಮಾನವೆಂದು ಘೋಷಿಸಿ ಜೈನರಿಗೆ ಸಲ್ಲಬೇಕಾದ

ಮರ್ಯಾದೆಗಳೆಲ್ಲವೂ ನಿರಾತಂಕವಾಗಿ ನಡೆಯುವುದೆಂದು ಅಪ್ಪಣೆ ಮಾಡಿದ. ಇದನ್ನು ವೈಷ್ಣವರು ಪಾಲಿಸುವರೆಂದೂ ಅದಕ್ಕಾಗಿ ಇಪ್ಪತ್ತು ಜನರ ವೈಷ್ಣವ ರಕ್ಷಕಪಡೆ ಸಿದ್ಧ ಮಾಡುವುದೆಂದೂ, ಇದರ ನಿರ್ವಹಣೆಗಾಗಿ ರಾಜ್ಯಾದ್ಯಂತ ಇದ್ದ ಜೈನರ ಪ್ರತಿ ಮನೆಗೆ ವರ್ಷ ಒಂದಕ್ಕೆ ಒಂದುಹಣ ನೀಡಬೇಕೆಂದೂ ಕಟ್ಟುಮಾಡ ಲಾಯಿತು. ಈ ತೀರ್ಮಾನದಲ್ಲಿ ಮುಖ್ಯ ಪಾತ್ರ ವಹಿಸಿದವರು ವೈಷ್ಣವರ ಪರವಾಗಿ ತಿರುಮಲೆ ತಾತಯ್ಯ ಮತ್ತು ಜೈನರ ಪರವಾಗಿ ಕಲ್ಲೆಹದ ಹರ್ವ್ವಿಸೆಟ್ಟಿಯ ಮಗ ಬಸುವಿಸೆಟ್ಟಿ. ಇದರಿಂದಾಗಿ ಬುಕ್ಕರಾಯ ತನ್ನ ರಾಜ್ಯದಲ್ಲಿ ಧರ್ಮ ಸಾಮರಸ್ಯವನ್ನು ಸ್ಥಿರಗೊಳಿಸಿ ಮೆರೆದಿದ್ದಾನೆ ಎಂಬುದು ವಿದ್ವಾಂಸರ ಅಭಿಮತ.

ಶ್ರವಣಬೆಳಗೊಳದ ಶಾಸನ ಕಾಲಕ್ಕೆ ಸುಮಾರು ಐದು ವಾರ ಮೊದಲೇ ಈ ಶಾಸನದ ಪ್ರತಿಯೊಂದನ್ನು ಕಲ್ಲೆಹ (ಬೆಂಗಳೂರು ಜಿಲ್ಲೆ, ಮಾಗಡಿ ತಾಲೂಕು ಕಲ್ಯಗ್ರಾಮ) ದಲ್ಲಿ ಹಾಕಿಸಲಾಯಿತು.[4] ಈ ಶಾಸನ ಬಹಳ ಹಿಂದೆಯೇ ಪ್ರಕಟವಾಗಿದ್ದರೂ ವಿದ್ವಾಂಸರ ಗಮನ ಇತ್ತಕಡೆ ಹರಡಿಲ್ಲ. ಚಿದಾನಂದಮೂರ್ತಿ ಯವರ ಪ್ರಯತ್ನದಿಂದ ಈ ಶಾಸನದ ಪೂರ್ಣಪಾಠ ದೊರೆತಿರುವುದೇ ಅಲ್ಲದೆ ಅದರ ಪ್ರಾಮುಖ್ಯತೆಯೂ ಬೆಳಕಿಗೆ ಬಂದಿದೆ. ಇದು ಆ ಕಾಲದ ಧಾರ್ಮಿಕ ಇತಿಹಾಸ ಅಧ್ಯಯನಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ.

ಕಲ್ಯ ಶಾಸನದ ಕಾಲ ಕ್ರಿ. ಶ. 1368 ಜುಲೈ 17 ಸೋಮವಾರ. ಈ ಶಾಸನ ದಲ್ಲಿ ತಿರುಮಲೆ ತಾತಯ್ಯ ಮತ್ತು ಬಸುವಿ ಸೆಟ್ಟಿಯರ ಉಲ್ಲೇಖ ಇಲ್ಲ. ಆದರೆ ಶ್ರವಣಬೆಳಗೊಳದ ಶಾಸನದಲ್ಲಿ ಇಲ್ಲದ ಒಂದು ಮುಖ್ಯ ವಿಷಯ ಇಲ್ಲಿದೆ. ಅದೇನೆಂದರೆ "ಸಮಸ್ತ ನಾಡ ಜನರು ಬುಕ್ಕರಾಯರಿಗೆ ಭಕ್ತರು ಅನ್ಯಾಯದಲು ಕೊಲುವದನ್ನು ಬಿಂನಹ ಮಾಡಲಾಗಿ[5] ವೈಷ್ಣವರು ಜೈನರನ್ನು ಕೊಲ್ಲುತ್ತಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ. ಇದಕ್ಕೇನು ಕಾರಣ ಎಂಬುದು ಸ್ಪಷ್ಟವಾಗದಿದ್ದರೂ ಇಲ್ಲಿ ಬಳಕೆಯಾಗಿರುವ ಪದ '<u>ಅನ್ಯಾಯದಲು</u>' ಎಂಬುದು ವೈಷ್ಣವರು ನಡೆಸಿದ ಮೋಸ, ವಂಚನೆ ಮತ್ತು ದರ್ಪದ ಪ್ರಕರಣಗಳಿವು ಎನ್ನುವುದು ಸ್ಪಷ್ಟವಾಗುತ್ತದೆ. ಪರಿಸ್ಥಿತಿ ಇಷ್ಟೊಂದು ಗಂಭೀರವಾಗಿದ್ದರೂ ಶ್ರವಣಬೆಳಗೊಳ ಶಾಸನಗಳ ಪರಿಷ್ಕೃತ ಸಂಪುಟದಲ್ಲಿ ಬಾ. ರಾ. ಗೋಪಾಲ್ ದಾಖಲಿಸಿರುವ ಮಾತು ಚೋದ್ಯವೆನಿಸುತ್ತದೆ.

"ಜೈನರು ಪ್ರಾಯಶಃ ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಯತ್ನಿಸಿದರಾದರೂ ಅವರಿಗೆ ಸಲ್ಲಬೇಕಾದುದಷ್ಟನ್ನೇ ಪಡೆದರು ಹಾಗೂ ಅರಸನು ಧಾರ್ಮಿಕ ಸಹಿಷ್ಣುತೆಯ ನೀತಿಯನ್ನು ಮೆರೆಸುವ ಅವಕಾಶವನ್ನು ಉಪಯೋಗಿಸಿಕೊಂಡನೆಂದು ಇದರಿಂದ ವಿದಿತವಾಗುತ್ತದೆ."

ಇದು ಗೋಪಾಲರ ಮಾತು.[6] ಜೈನರು ಹೆಚ್ಚಿನದೇನನ್ನು ಬಯಸಿದರು ಎಂಬುದನ್ನು ಇವರು ಸಾದರಪಡಿಸಿಲ್ಲ. ಅದು ಮಾಡಿದ್ದರೆ ಅಧ್ಯಯನಾಸಕ್ತರಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು. ಈ ಸಂದರ್ಭದಲ್ಲಿ ಶ್ರವಣಬೆಳಗೊಳದ ಶಾಸನ ಹೇಳುವ ಮಾತನ್ನು ಗಮನಿಸುವುದು ಸೂಕ್ತ.

"ಜೈನರಿಗೂ ಭಕ್ತರಿಗೂ ಸಂವಾಜವಾದಲ್ಲಿ ಆನೆಯಗೊಂದಿ ಹೊಸಪಟ್ಟಣ ಪೆನುಗೊಂಡೆ ಕಲ್ಲೆಹದ ಪಟ್ಟಣವೊಳಗಾದ ಸಮಸ್ತ ನಾಡ ಭವ್ಯಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅನ್ಯಾಯಂಗಳನೂ ಬಿಂನಹಂ ಮಾಡಲಾಗಿ".[7]

ಶಾಸನದ ಈ ಭಾಗವು ಬಹಳ ಸ್ಪಷ್ಟವಾಗಿ ವಿಷಯತಿಳಿಸುತ್ತದೆ. ಇಲ್ಲಿ ಗೋಪಾಲರು ಸಂಶಯಪಡುವಂತೆ ಹೆಚ್ಚಿನದೇನಿದೆ? ಭಕ್ತರು ಮಾಡುವ ಅನ್ಯಾಯ ಗಳನ್ನು ಜೈನರು ರಾಜನಲ್ಲಿ ಬಿಂನಹ ಮಾಡಿದ್ದೇ ಹೆಚ್ಚಾಯಿತೇ? ಅಥವಾ ಅದು ತಪ್ಪಿನ ನಡೆ ಆಯಿತೋ? ಸಂಶಯಕ್ಕೆಡೆಮಾಡುವ ಮಾತುಗಳನ್ನು ಗೋಪಾಲರು ಸ್ಪಷ್ಟ ಮಾಡಿದ್ದರೆ ಒಳ್ಳೆಯದಿತ್ತು. ಅಷ್ಟೇ ಅಲ್ಲ "<u>ಅವರಿಗೆ ಸಲ್ಲಬೇಕಾದುದಷ್ಟನ್ನೇ ಪಡೆದರು</u>" ಎಂದು ಇವರು ಹೇಳಿದ್ದಾರೆ. ಅಂದರೆ ಗೋಪಾಲ್ ಅವರ ಪ್ರಕಾರ ಜೈನರು ತಮ್ಮ ಪರಿಮಿತಿಗೆ ತಕ್ಕ ನ್ಯಾಯ ಪಡೆದಿದ್ದಾರೆ. ಇಲ್ಲೂ ಅಷ್ಟೇ ಜೈನರ ಇತಿ-ಮಿತಿಗಳಿಗೆ ಇವರ ಮಾಪಕ ಏನು ಅದು ಎಷ್ಟು ಸೂಕ್ತವಾದುದು ಎಂಬುದನ್ನು ಇವರು ಸ್ಪಷ್ಟಪಡಿಸಿಲ್ಲ.

ಸ್ವತಃ ಶಾಸನತಜ್ಞರಾಗಿ ಶ್ರವಣಬೆಳಗೊಳದ ಶಾಸನಗಳ ಪರಿಷ್ಕೃತ ಸಂಪುಟದ ರಚನಾಕಾರ್ಯದ ಹೊಣೆಹೊತ್ತು ಅದರ ಪೀಠಿಕೆಯನ್ನೂ ಬರೆದಿರುವ ಬಾ. ರಾ. ಗೋಪಾಲ್ ಅವರು ತಮ್ಮ ಪೀಠಿಕೆ ಪ್ರೌಢವಾಗಿರುವಂತೆ ಎಚ್ಚರ ವಹಿಸಿ ಅದನ್ನು ಸಾಧಾರಗೊಳಿಸಿದ್ದಾರೆ. ಆದರೆ ಶ್ರವಣಬೆಳಗೊಳದ ಈ ಶಾಸನಕ್ಕೆ ಸಂಬಂಧಿಸಿದಂತೆ ಕಲ್ಯದ ಶಾಸನವನ್ನೇಕೆ ಇವರು ಗಮನಿಸಿಲ್ಲ? ಅಥವಾ ಗಮನಿಸಿದ್ದರೂ ಇಲ್ಲಿ ಉದಹರಿಸಿಲ್ಲ? ಎಂಬ ಪ್ರಶ್ನೆಗಳಿಗೆ ಉತ್ತರ ಇಲ್ಲ. ಗೋಪಾಲ್ ಅವರು ಈ ಬಗ್ಗೆ ಸ್ವಲ್ಪ ಎಚ್ಚರ ವಹಿಸಿದ್ದರೆ ಒಳ್ಳೆಯದಿತ್ತು.

ಬುಕ್ಕರಾಯನ ಈ ಶಾಸನವು ಜೈನರ ಪರವಾಗಿದ್ದು, ಜೈನರ ರಕ್ಷಣಾ ಭಾರವನ್ನು ಶ್ರೀವೈಷ್ಣವರ ಮೇಲೆ ರಾಜ ಹೊರಿಸಿದ ಎಂಬುದಾಗಿ ಎಸ್. ಆರ್. ಶರ್ಮ ಅರ್ಥೈಸಿದ್ದಾರೆ.[8] ಸ್ವಲ್ಪ ಇದೇ ರೀತಿಯಲ್ಲಿ ಎನ್ನುವಂತೆ ಪಿ. ಬಿ. ದೇಸಾಯಿ ಯವರು ಈ ಶಾಸನ ಅಲ್ಪಸಂಖ್ಯಾತರ ಹಿತರಕ್ಷಣೆಯ ಜವಾಬ್ದಾರಿಯನ್ನು ಬಹುಸಂಖ್ಯಾತರ ಮೇಲೆ ರಾಜ ಹೊರಿಸಿದ್ದನ್ನು ನಿರೂಪಿಸುತ್ತದೆ ಎಂದಿದ್ದಾರೆ.[9]

ಎಸ್. ನಾಗರಾಜು ಅವರು ಜೈನ ಸಮಾಜಕ್ಕೆ ಆಗ ಬಂದೊದಗಿದ ಪರಿಸ್ಥಿತಿಯ ಬಗ್ಗೆ ಬೆಳಕು ಚೆಲ್ಲಲು ಪ್ರಯತ್ನಿಸಿದ್ದಾರೆ. "ವಿಜಯನಗರ ಕಾಲದ ಆರಂಭದ

ಹೊತ್ತಿಗೆ ವೈಷ್ಣವ–ಜೈನ ಕಲಹಗಳು ಹುಟ್ಟಿಕೊಂಡ ಪ್ರಸ್ತಾಪ ಶ್ರವಣಬೆಳಗೊಳ ಇತ್ಯಾದಿ ಜೈನಕ್ಷೇತ್ರಗಳಲ್ಲಿರುವ ಬುಕ್ಕನ ಶಾಸನಗಳಲ್ಲಿ ದೊರಕುತ್ತವೆ. ಬುಕ್ಕ ಜೈನರಿಗೂ ವೈಷ್ಣವರಿಗೂ ರಾಜಿ ಮಾಡಿಸಿದ್ದು, ಜೈನಕ್ಷೇತ್ರಗಳ ರಕ್ಷಣೆಗೆ ವೈಷ್ಣವರ ಬೆಂಬಲವನ್ನು ಪಡೆದುಕೊಂಡುದು. ಇವು ಆ ಹೊತ್ತಿಗೆ ಜೈನದರ್ಮದ ಉಳಿವು ಅಂದಿನ ಜೈನ ಅನುಯಾಯಿಗಳಿಂದ ಅಲ್ಲ, ಇತರ ಅನುಯಾಯಿಗಳ ಸಹಿಷ್ಣುತಾ ನೀತಿಯಿಂದ ಮಾತ್ರ ಸಾಧ್ಯ–ಎನ್ನುವ ಸ್ಥಿತಿಯನ್ನೇ ಹೇಳುವಂತಿದೆ" ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.[10]

ಈ ಶಾಸನದ ಆಧಾರದಲ್ಲಿ ಶ್ರವಣಬೆಳಗೊಳದಂತಹ ಪ್ರಮುಖ ಜೈನ ಕ್ಷೇತ್ರವು ಅಂದು ಎಷ್ಟು ಅರಕ್ಷಿತ ಸ್ಥಿತಿಯಲ್ಲಿದ್ದು ಅಲ್ಲಿನ ಬಸದಿಗಳು 14ನೆಯ ಶತಮಾನದ ವೇಳೆಗೆ ಶ್ರೀವೈಷ್ಣವರ ದಾಳಿಗಳಿಂದ ತೀವ್ರ ಹಾನಿಗೊಳಗಾಗಿದ್ದು, ಅವು ಆನಂತರದ ಕಾಲದಲ್ಲಿ ಪುನರ್‌ನಿರ್ಮಾಣಗೊಂಡವಾಗಿರಬೇಕು ಎಂಬ ಅಭಿಪ್ರಾಯವೂ ಇದೆ.[11] ಈ ಶಾಸನವು ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದಲ್ಲಿ ಮತ ಸಹಿಷ್ಣುತೆಯ ನೀತಿಯನ್ನು ಎತ್ತಿಹಿಡಿದಿರುವ ಸಂಕೇತ ಎಂಬ ಅಭಿಪ್ರಾಯವೂ ಇದೆ.[12] ಈ ಎಲ್ಲ ಅಭಿಪ್ರಾಯಗಳು ಕೇವಲ ಶ್ರವಣಬೆಳಗೊಳ ಶಾಸನವೊಂದರ ಆಧಾರದಿಂದ ಮೂಡಿಬಂದವು. ಹಾಗಾಗಿ ಪ್ರತಿಯೊಂದು ಅಭಿಪ್ರಾಯವೂ ತನ್ನದೇ ಆದ 'ಮಿತಿ' ಯೊಳಗಿರುವಂತೆ ಭಾಸವಾಗುತ್ತದೆ. ಪುನರವಲೋಕನಕ್ಕೆ ಒಳಪಡಿಸಬಹುದಾದ ಕೆಲವು ಅಂಶಗಳು ಇಲ್ಲಿವೆ. ಅವುಗಳೆಂದರೆ:

1. ಇದು ಎಷ್ಟರ ಮಟ್ಟಿಗೆ ಜೈನರ ಪರವಾಗಿತ್ತು?
2. ಅಲ್ಪಸಂಖ್ಯಾತರಾದ ಜೈನರ ರಕ್ಷಣೆಯ ಭಾರವನ್ನು ರಾಜ ಬಹುಸಂಖ್ಯಾತರಾದ ಶ್ರೀವೈಷ್ಣವರ ಮೇಲೆ ಹೊರೆಸಿದ್ದೇ?
3. ಇದು ಎಷ್ಟರಮಟ್ಟಿಗೆ ಮತಸಹಿಷ್ಣುತೆಯನ್ನು ಬಿಂಬಿಸುತ್ತದೆ?

ಇಲ್ಲಿ ವಸ್ತುಸ್ಥಿತಿಯ ವಿಡಂಬನೆ ಇದೆ ಎಂದೆನಿಸುತ್ತದೆ. ಸತ್ಯಾಂಶದ ಒಳನೋಟ ಗಳನ್ನು ಹುಡುಕಬೇಕಾಗಿದೆ. ಇದು ಋಣಾತ್ಮಕ ಭಾವವನ್ನು, ಗುಣಾತ್ಮಕವಾಗಿ ಹೇಳಿದಂತಿದೆ. ಮುಂದೆ ಮಾಡಿರುವ ಈ ನಿಟ್ಟಿನ ಚರ್ಚೆ ಇದನ್ನು ಹೆಚ್ಚು ಸ್ಫುಟ ಗೊಳಿಸುತ್ತದೆ.

ಎಂ. ಚಿದಾನಂದಮೂರ್ತಿಯವರು ಮಾತ್ರ ಈ ಶಾಸನದೊಂದಿಗೆ ಕಲ್ಯಶಾಸನ ದಲ್ಲಿರುವ ಮುಖ್ಯ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಿವೇಚಿಸಿದ್ದಾರೆ. ಅತ್ಯಂತ ನೋವಿನಿಂದ ಆದರೆ ಅಷ್ಟೇ ದೃಢವಾಗಿ ನೀಡಿದ್ದ ಬುಕ್ಕನ ತೀರ್ಪು "ಘರ್ಷಣೆಗಳ ಮೊನಚನ್ನು ಮೊಂಡುಮಾಡಿರಬಹುದು; ಅನಾಹುತಗಳ ಪ್ರಮಾಣವನ್ನು ತಗ್ಗಿಸಿರಬಹುದು. ಆದರೆ ಘರ್ಷಣೆಗಳನ್ನು ಸಂಪೂರ್ಣವಾಗಿ

ನಿಲ್ಲಿಸಿತೇ ಎಂಬುದು ಅನುಮಾನಾಸ್ಪದ" ಎಂಬ ವಾಸ್ತವತೆ ಕಡೆಗೆ ಇವರು ನಮ್ಮ ಗಮನ ಸೆಳೆದಿದ್ದಾರೆ.[13] ಆದರೆ ಇವರೂ ಸಹ 'ಬುಕ್ಕನ ತೀರ್ಪು ಆಕ್ರಮಣಕ್ಕೆ ಒಳಗಾಗಿದ್ದ ಜೈನರ ಪರವಾಗಿದೆ' ಎಂದಿದ್ದಾರೆ.

ಶ್ರೀವೈಷ್ಣವರಿಂದ ಜೈನರಿಗಾಗುತ್ತಿದ್ದ ಅನ್ಯಾಯದ ಸ್ಪಷ್ಟ ಚಿತ್ರಣ ಕಲ್ಯ ಶಾಸನದಲ್ಲಿದೆ. ಶ್ರೀವೈಷ್ಣವರು ಜೈನರನ್ನು ಅನ್ಯಾಯವಾಗಿ ಕೊಲ್ಲುತ್ತಿದ್ದ ಮಾಹಿತಿ ಇಲ್ಲಿದೆ. ಶ್ರವಣಬೆಳಗೊಳದ ಶಾಸನ ಈ ವಿಷಯವನ್ನು ಮುಚ್ಚಿಟ್ಟು ಅದನ್ನು ಕೇವಲ 'ಅನ್ಯಾಯ' ಎಂದಷ್ಟೇ ಹೇಳಿದೆ. ಕಲ್ಯಶಾಸನ ಶ್ರವಣಬೆಳಗೊಳದ ಶಾಸನ ಹುಟ್ಟುವುದಕ್ಕೂ ಐದು ವಾರ ಮೊದಲೇ ಹುಟ್ಟಿದ್ದು ಎಂಬುದನ್ನೂ ಇಲ್ಲಿ ನೆನಪಿಸಿ ಕೊಳ್ಳಬೇಕು.[14]

ಈ ಶಾಸನ "ಪಂಚ ಬಸ್ತಿಗಳಲ್ಲಿ ಕಳಸ ಜಗಳೆ ಜಗಟೆ ಮೊದಲಾದ ಪಂಚ ಮಹಾವಾದ್ಯಉಸಲುಉದು" ಎಂಬ ವಿಷಯವನ್ನು ತಿಳಿಸುತ್ತದೆ.[15] ಆದರೆ ತಿರುಮಲೆ ತಾತಾಚಾರ್ಯನನ್ನಾಗಲೀ ಬಸುವೀಸೆಟ್ಟಿಯನ್ನಾಗಲೀ ಹೆಸರಿಸಿಲ್ಲ. ಅಂತೆಯೆ ವೈಷ್ಣವ ಅಂಗರಕ್ಷೆಗೋಸುಗ ರಾಜ್ಯದಲ್ಲಿರುವ ಪ್ರತಿ ಜೈನ ಮನೆಯೂ ಪ್ರತಿ ವರ್ಷವೂ ಒಂದು ಹಣ ಕೊಡಬೇಕೆಂಬ ತೀರ್ಮಾನದ ವಿಷಯ ಇದರಲ್ಲಿಲ್ಲ. ಇದು ಬಹಳ ಗಮನಾರ್ಹವಾದುದೆ. ಎರಡೂ ಶಾಸನಗಳು ಶ್ರೀರಾಮಾನುಜಾಚಾರ್ಯರ ಸ್ತುತಿ ಯಿಂದ ಪ್ರಾರಂಭವಾಗಿವೆ. ಜಿನಸ್ತುತಿ ಇಲ್ಲಿ ಇಲ್ಲ. ಇದ್ದಿದ್ದರೆ ವಿದ್ವಾಂಸರುಗಳು ಅಭಿಪ್ರಾಯಪಟ್ಟಿರುವಂತೆ ಧರ್ಮಸಮನ್ವಯತೆಗೆ ಮಹತ್ತಮವಾದ ಒಂದು ಕೊಡುಗೆ ಆಗುತ್ತಿತ್ತು. ಈ ಕೊರತೆಯ ಬಗ್ಗೆ ವಿದ್ವಾಂಸರು ಇದುವರೆವಿಗೂ ಏನನ್ನೂ ಹೇಳದಿರುವ ಕಾರಣ ಅವರು ಈವರೆವಿಗೂ ಗಮನಹರಿಸಲಿಲ್ಲ ಎಂದು ಕಾಣುತ್ತದೆ.

ಎರಡೂ ಶಾಸನಗಳಲ್ಲಿ ವ್ಯಕ್ತವಾಗಿರುವ ಇನ್ನೊಂದು ಮುಖ್ಯ ವಿಷಯವೆಂದರೆ ಶ್ರೀವೈಷ್ಣವರ ಪರವಾಗಿ ನೆರೆದಿದ್ದ ಬೃಹದ್ ಶ್ರೀವೈಷ್ಣವ ಸಮೂಹ. ನಿಜವಾಗಿ ಸಂಕಷ್ಟಕ್ಕೆ ಒಳಗಾಗಿದ್ದವರು ಜೈನರು. ಇವರ ಕಷ್ಟವನ್ನು ರಾಜನಲ್ಲಿ ಹೇಳಿಕೊಳ್ಳಲು ಹೋದ ಜೈನರು ಆನೆಗೊಂದಿ, ಹೊಸಪಟ್ಟಣ, ಪೆನುಗೊಂಡೆ ಮತ್ತು ಕಲ್ಲೆಹ ಪಟ್ಟಣಗಳ ಮತ್ತು ಸಮಸ್ತನಾಡ ಜೈನರು. ಆದರೆ ಇವರ ಪ್ರಮುಖರಾರೂ ಶಾಸನ ಗಳಲ್ಲಿ ಹೆಸರಿಸಲ್ಪಟ್ಟಿಲ್ಲ. ಮೊದಲೇ ಅಲ್ಪಸಂಖ್ಯಾತರಾಗಿದ್ದ ಜೈನರ ನಿಯೋಗದಲ್ಲಿ ದ್ದವರ ಸಂಖ್ಯೆ ಎಷ್ಟಿರಬಹುದು? ತೀರ ನಗಣ್ಯ ಎಂದರೆ ಉತ್ಪ್ರೇಕ್ಷೆ ಏನಾಗುವುದಿಲ್ಲ.

ಇದಕ್ಕೆ ಪ್ರತಿಯಾಗಿ ಶಾಸನಗಳು ಅಲ್ಲಿ ಭಾಗವಹಿಸಿದ್ದ ಪ್ರತಿಯೊಂದೂ ಶ್ರೀವೈಷ್ಣವ ವರ್ಗ, ಪಂಗಡ, ಕುಲ ಇತ್ಯಾದಿ ವಿವರಗಳನ್ನು ನೀಡುತ್ತವೆ. ಇವರಲ್ಲಿ ಪ್ರಮುಖ ನೇತಾರರು ತಿರುಮಲೆ (ತಿರುಪತಿ), ಕಂಚಿ, ಶ್ರೀರಂಗ ಮತ್ತು ಮೇಲುಕೋಟೆ ನಗರಗಳಿಂದು ಬಂದವರು. ಶ್ರೀ ರಾಮಾನುಜಾಚಾರ್ಯರ ಕಾರ್ಯಕ್ಷೇತ್ರದ ಪ್ರಮುಖ

ನೆಲೆಗಳಾದ ಇವು ಶ್ರೀ ವೈಷ್ಣವರ ಪವಿತ್ರಕ್ಷೇತ್ರಗಳು. ವಿಜಯನಗರ ಸಾಮ್ರಾಜ್ಯದೊಳಗೆ ಇದ್ದ ಇವು ಅಲ್ಲಿನ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮೇಲೆ ಪ್ರಮುಖವಾಗಿ ಪ್ರಭಾವ ಬೀರಬಲ್ಲ ಕ್ಷೇತ್ರಗಳು ಇವು.

ನಂತರದಲ್ಲಿದ್ದವರು ಸಕಲಾಚಾರ್ಯರು, ಸಕಲ ಸಮಯಿಗಳು, ಸಾತ್ವಿಕರು, ಮೋಷ್ಟಿಕರು, ತಿರುಪಡಿ ತಣ್ಣೀರವರು ಮೊದಲಾಗಿ 48 ಜನರುಗಳು, ಇಲ್ಲಿ 'ಸಕಲ ಸಮಯಿಗಳು' ಎಂದು ಹೇಳಿರುವುದು. ಶ್ರೀವೈಷ್ಣವ ವಿವಿಧ ಗುಂಪುಗಳನ್ನೇ ಹೊರತು ಬೇರಲ್ಲ. ಹಾಗಾಗಿ ಇಲ್ಲಿ ಹೆಸರಿಸಿರುವ ಎಲ್ಲ ವರ್ಗಗಳೂ ಶ್ರೀವೈಷ್ಣವ ಸಮಯದವು.

ಇನ್ನು ಮೂರನೆಯ ಗುಂಪಾಗಿ ಇದ್ದವರು ತೀರ ಸಾಮಾನ್ಯ ಮತ್ತು ಕೆಳವರ್ಗದವರು. ಸಾವಂತ ಬೋವಕ್ಕಳು, ತಿರುಕುಲ, ಜಾಂಬವಕುಲಸಹಿತವಾಗಿ 18 ಕುಲದವರು. ಇವರು ಸಹ ಶ್ರೀವೈಷ್ಣವ ಸಮಯದವರೇ. ಶಾಸ್ತ್ರಾರ್ಥ ಮತ್ತು ಧರ್ಮಸೂಕ್ಷ್ಮತೆಗಳ ಅರಿವಿಲ್ಲದ, ದುಷ್ಕರ್ಮಗಳಿಗೆ ಶೀಘ್ರ ಮನಸೋಲುವಂತಿದ್ದ ಇವರನ್ನು ಯಾವುದೇ ರೀತಿಯಲ್ಲಾದರೂ ಬಳಸಿಕೊಳ್ಳುವ ಸಾಧ್ಯತೆಗಳಿದ್ದುವು. ಶಾಸನದಲ್ಲಿ "ಅನ್ಯಾಯವಾಗಿ ಜೈನರನ್ನು ಕೊಲ್ಲುವ" ಎಂದಿರುವ ಮಾತು ಇದನ್ನು ಸೂಚ್ಯವಾಗಿ ತಿಳಿಸುತ್ತದೆ.

ಈ ಪರಿಸ್ಥಿತಿಯಲ್ಲಿ ಸಮಸ್ಯೆಯೊಂದರ ಪರಿಹಾರಕ್ಕೆ ನಿಜಕ್ಕೂ ಅಲ್ಲಿ ಸೌಹಾರ್ದಯುತ ವಾತಾವರಣ ಸೃಷ್ಟಿಯಾಗಿತ್ತೇ ಎಂಬ ಅನುಮಾನ ಹುಟ್ಟುತ್ತದೆ. ಮೊದಲೇ ಬಲ ವೃದ್ಧಿಸಿಕೊಂಡು ಜೈನರನ್ನು ಅನ್ಯಾಯವಾಗಿ ಕೊಲ್ಲುತ್ತಿದ್ದ ಶ್ರೀವೈಷ್ಣವರ ಶಕ್ತಿಪ್ರದರ್ಶನ ಇಲ್ಲಿ ಆಗಿದ್ದಂತೆ ಭಾಸವಾಗುತ್ತದೆ. ಪ್ರಾಯಶಃ ಗಾಯದ ಮೇಲೆ ಬರೆ ಎಳೆದಂತಾಗಿತ್ತು ಜೈನರ ಪರಿಸ್ಥಿತಿ. ಈ ವಿಷಯ ಮತ್ತು ವಿಷಯದ ಗಂಭೀರತೆಯನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಲ್ಲವೇ?

ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ಪರಿಹರಿಸುವ ಸಂದರ್ಭಗಳಲ್ಲಿ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿದ ಸಮಾಜದ ಎಲ್ಲ ವರ್ಗದವರೂ, ಸಮಯದವರೂ ಸಭೆಯಲ್ಲಿ ಉಪಸ್ಥಿತರಿರುವುದು ನ್ಯಾಯ ಸಮ್ಮತವಾದ್ದು. ಆದರೆ ಇಲ್ಲಿ ಅಂತಹ ವಾತಾವರಣ ಇದ್ದಂತೆ ಕಾಣುವುದಿಲ್ಲ. ಶಕ್ತಿಪ್ರದರ್ಶನದೊಂದಿಗೆ ನಡೆಯುವ ನ್ಯಾಯತೀರ್ಮಾನ ಏಕಪಕ್ಷೀಯ. ಇಲ್ಲಿ ಆಗಿರುವುದು ಅದೆ. ಬಸದಿಗಳಲ್ಲಿ ನಿಂತುಹೋಗಿದ್ದ ಪಂಚವಾದ್ಯಸಹಿತದ ಪೂಜೆಯ ಪುನರಾರಂಭಕ್ಕೆ ಅನುವು ಮಾಡಿಕೊಟ್ಟುದೇ ದೊಡ್ಡದೆಂದು ಭಾವಿಸುವುದಾದರೆ ಅದನ್ನೂ ಧರ್ಮ ಸಮನ್ವಯತೆಯ ಶಿಖರಕ್ಕೊಯ್ಯಲು ಹೇಗೆ ಸಾಧ್ಯ?

ಇನ್ನು ಕಲ್ಯಶಾಸನದಲ್ಲಿ ಕಂಡುಬರದ ಒಂದು ಚಮತ್ಕಾರೀ ನಿರ್ಧಾರ ಶ್ರವಣಬೆಳಗೊಳದ ಶಾಸನದಲ್ಲಿದೆ. ಅದೇನೆಂದರೆ – "ಶ್ರೀ ತಿರುಮಲೆ ತಾತಯ್ಯಂಗಳು

ಸಮಸ್ತ ರಾಜ್ಯದ ಭವ್ಯ ಜನಂಗಳ ಅನುಮತದಿಂದ ಬೆಳಗುಳದ ತೀರ್ಥದಲ್ಲಿ ವೈಷ್ಣವ ಅಂಗರಕ್ಷೆಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಹ ಜೈನರ ಬಾಗಿಲುಗಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ 1 ಹಣ ಕೊಟ್ಟು ಆಯೆತ್ತಿದ ಹೊಂನಿಂಗೆ ದೇವರ ಅಂಗರಕ್ಷೆಗೆ ಯಿಪ್ಪತ್ತಾಳನೂ ಸಂತವಿಟ್ಟು ಮಿಕ್ಕ ಹೊಂನಿಂಗೆ ಜೀರ್ಣ ಜಿನಾಲಯಂಗಳಿಗೆ ಸೊದೆಯನಿರೂದು" (ಶಾಸನಪಾಠ: ಸಾಲು 21–26)

ಬಸದಿಗಳಲ್ಲಿ ಪೂಜೆಯನ್ನು ನಿಲ್ಲಿಸಿ ಅವುಗಳನ್ನು ಹಾಳುಗೆಡವಿದ್ದು ಮತ್ತು ಅನ್ಯಾಯದಲಿ ಜೈನರು ಕೊಲೆಗೀಡಾಗುತ್ತಿದ್ದುದು– ಎಲ್ಲವೂ ಶ್ರೀವೈಷ್ಣವರ ಉಪಟಳದಿಂದಾಗಿ ಎಂಬ ವಿಚಾರ ಶಾಸನಗಳಲ್ಲಿ ಸ್ಪಷ್ಟವಾಗಿದೆ. ಅರ್ಥಾತ್ ಇದು ಜೈನರ ಅಸಹಾಯಕ ಸ್ಥಿತಿಯ ಚಿತ್ರಣ ನೀಡುತ್ತದೆ. ಅಂದಮೇಲೆ ಆಗ ನಿಜಕ್ಕೂ ರಕ್ಷಣೆ ಬೇಕಾದ್ದು ಜೈನರಿಗೆ ಮತ್ತು ಅವರ ಪೂಜಾಕೇಂದ್ರಗಳಿಗೆ. ಆದರೆ ಅಲ್ಲಿ ಆದದ್ದೇನು? ಎಂಥ ವಿಪರ್ಯಾಸ! ತಿರುಮಲೆ ತಾತಯ್ಯನ ಚಮತ್ಕಾರೀ ನಿರ್ವಹಣೆಯಿಂದ ಬೆಳಗುಳ ತೀರ್ಥದಲ್ಲಿ ಶ್ರೀವೈಷ್ಣವರಿಗೆ ಅಂಗರಕ್ಷೆಯನ್ನೇರ್ಪಡಿಸಲಾಯಿತು. ಅದೂ ಸಮಸ್ತ ರಾಜ್ಯದ ಜೈನರ ಅನುಮತಿಯಿಂದ! ಶಾಸನದಲ್ಲಿ 'ಸಮಸ್ತ ರಾಜ್ಯದ ಭವ್ಯ ಜನಂಗಳ ಅನುಮತದಿಂದ' ಎಂದಿದೆ. ಈ ಮಾತಿನ ಔಚಿತ್ಯವನ್ನು ಸ್ವಲ್ಪ ಅವಲೋಕಿಸಬೇಕಾಗಿದೆ.

ಉತ್ತರ ಕರ್ನಾಟಕದಲ್ಲಿ ವೀರಶೈವ ಧರ್ಮದ ಪ್ರಾದುರ್ಭಾವದಿಂದ ಮತ್ತು ಅದರ ಚಟುವಟಿಕೆಗಳಿಂದ ಜೈನಧರ್ಮ ಅಲ್ಲಿ ನೆಲಕಚ್ಚಿತ್ತು. ಶಾಸನದ ಕಾಲಕ್ಕೆ ಆ ಭಾಗ ಬಹಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗಾಗಿ ಇಲ್ಲಿನ ಸಮಸ್ಯೆಗೆ ಆ ಭಾಗದ ಜೈನರು ಸ್ಪಂದಿಸುವ ಸ್ಥಿತಿಯಲ್ಲಿರಲಿಲ್ಲ.

ಆದರೆ ಕರಾವಳಿಯ ಸ್ಥಿತಿ ಹೀಗಿರಲಿಲ್ಲ. ಸಂಪೂರ್ಣವಾಗಿ ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದು ಈ ಭಾಗದಲ್ಲಿ ಹಲವಾರು ಜೈನರಾಜ ವಂಶಗಳು ಆಳ್ವಿಕೆ ನಡೆಸಿದ್ದವು. ಧರ್ಮಸಮನ್ವಯತೆಯ ಪಾಠ ಈ ಭಾಗದ ಜನರಿಗೆ ಅತ್ಯಂತ ಪ್ರಾಚೀನ ಕಾಲದಿಂದಲೇ ಆಗಿತ್ತು. ಆಡಳಿತದಲ್ಲಿ ಇದರ ಆಚರಣೆ ಅನೂಚಾನವಾಗಿತ್ತು.[16] ಶಾಸನದಲ್ಲಿನ ಜೈನ–ಶ್ರೀವೈಷ್ಣವ ಸಮಸ್ಯೆ ಮಾಹಿತಿ ಇವರಿಗೆ ದೊರೆತಿದ್ದರೆ ಖಂಡಿತವಾಗಿಯೂ ಜೈನ ಪರವಾಗಿ ಮಾತನಾಡಲು ಈ ಭಾಗದ ಜಿನಮುನಿಗಳ ನೇತೃತ್ವದಲ್ಲಿ ನಿಯೋಗಗಳು ಚಕ್ರವರ್ತಿಯಲ್ಲಿಗೆ ಹೋಗುತ್ತಿದವು. ಆದರೆ ಇವರು ಅಲ್ಲಿಗೆ ಹೋಗಿರಲಿಲ್ಲ. ಶಾಸನಗಳ ಪ್ರಕಾರ ಸಭೆಯಲ್ಲಿ ಇದ್ದವರೆಂದರೆ ಆನೆಗೊಂದಿ, ಹೊಸಪಟ್ಟಣ (ಇಂದಿನ ಹಂಪೆ), ಪೆನುಗೊಂಡೆ ಮತ್ತು ಕಲ್ಲೆಹ (ಇಂದಿನ ಕಲ್ಯ) ಪಟ್ಟಣಗಳ ಜೈನಪ್ರತಿನಿಧಿಗಳು ಮಾತ್ರ. ಆಶ್ಚರ್ಯವೆಂದರೆ ಶ್ರವಣಬೆಳಗೊಳದ ಪ್ರತಿನಿಧಿಗಳೂ ಇಲ್ಲಿ ಇದ್ದಂತಿಲ್ಲ. ಇಂತಿರುವಾಗ ಈ ನಾಲ್ಕು ಊರಿನ ಜನಪ್ರತಿನಿಧಿ

ಗಳು ಹೇಗೆ ಸಮಸ್ತ ರಾಜ್ಯದ ಪ್ರತಿನಿಧಿಗಳಾಗುವುದು ಸಾಧ್ಯ? ಇದನ್ನೇ ನಾನು ತಿರುಮಲೆ ತಾತಯ್ಯನ ಚಮತ್ಕಾರ ಎಂದು ಮೇಲೆ ಹೇಳಿರುವುದು.

ಇದು ಜೈನರ ಮೇಲಿನ ಶ್ರೀವೈಷ್ಣವರ ಉಪಟಳ ಎಷ್ಟು ಘೋರವಾಗಿದ್ದಿರಬಹುದೆಂಬುದನ್ನು ಸೂಚಿಸುತ್ತದೆ. ಜೈನರ ತಪ್ಪುಗಳೇನಾದರೂ ಇದ್ದಿದ್ದರೆ ಅದನ್ನೂ ಅತಿರಂಜಿತವಾಗಿಯಾದರೂ ಹೇಳುವ ಅವಕಾಶ ಇಲ್ಲಿತ್ತು. ಆದರೆ ಅದಾವುದೂ ಶಾನಗಳಲ್ಲಿಲ್ಲ. ಅಂದಮೇಲೆ ಶ್ರೀವೈಷ್ಣವರ ಉಪಟಳ ಬಹಳ ವ್ಯವಸ್ಥಿತವಾಗಿದ್ದು ಮಾಹಿತಿ ಎಲ್ಲೂ ಸೋರಿಹೋಗದಂತೆ ಎಚ್ಚರವಹಿಸಲಾಗಿತ್ತು. ಸಂಕಷ್ಟಕ್ಕೊಳಗಾಗಿದ್ದ ಜೈನ ಸಮಾಜ ಪ್ರಾಯಶಃ ಭಯದ ನೆರಳಿನಲ್ಲಿ ಏನನ್ನೂ ಯಾರೊಡನೆಯೂ ಹೇಳಿಕೊಳ್ಳದ ಸ್ಥಿತಿಯಲ್ಲಿತ್ತು. ಹಾಗಾಗಿ ಈ ಮಾಹಿತಿ ಎಲ್ಲೂ ಹರಡಲಿಲ್ಲ. ಇಷ್ಟೊಂದು ನಿಖರವಾಗಿ ಕಾರ್ಯನಿರ್ವಹಿಸುವ ತಂತ್ರಗಾರಿಕೆಯನ್ನು ಹಾಗು ಆ ಬಗೆಗಿನ ವ್ಯವಸ್ಥೆಯನ್ನು ಶ್ರೀ ವೈಷ್ಣವರು ರೂಪಿಸಿದ್ದರು ಎನ್ನುವುದನ್ನು ಸಾಮಾಜಿಕ ನ್ಯಾಯ-ಅನ್ಯಾಯಗಳ ನೆಲೆಯಲ್ಲಿ ಮೆಚ್ಚಲಾಗದಿದ್ದರೂ ಅದು ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶ.

ಸಂತ್ರಸ್ತರಿಗೆ ಪರಿಹಾರವೊದಗಿಸುವುದು ಸಾಮಾನ್ಯ ಧರ್ಮ. ಇದು ರಾಜ ಧರ್ಮವೂ ಹೌದು. ರಾಜರು ಮತ್ತು ಅವರ ಅಧಿಕಾರಿ ಸಾಮಂತ ವರ್ಗದವರು ಇಂತಹ ಪರಿಹಾರ ಕಾರ್ಯಗಳಲ್ಲಿ ತಮ್ಮನ್ನು ತಾವು ಕೊಡಗಿಸಿಕೊಂಡಿರುವ ಉದಾಹರಣೆಗಳು ಕರ್ನಾಟಕದಲ್ಲಿ ಬಹಳವಾಗಿವೆ. ಆದರೆ ಪ್ರಸಕ್ತ ಶಾಸನದ ರೀತ್ಯ ಇಲ್ಲಿ ಆದುದು ಏನು? - ಸಂತ್ರಸ್ತರಾದ ಜೈನರೇ ಪ್ರತಿವರ್ಷವೂ ದಂಡಕಟ್ಟು ವಂತಾದುದು, ಅದೂ ಒಂದು ಚಿನ್ನದ ನಾಣ್ಯ ಪ್ರಮಾಣದಷ್ಟು. ಇಷ್ಟು ದೊಡ್ಡ ಪ್ರಮಾಣದ ದಂಡವನ್ನು ತೆರಲು ಎಲ್ಲ ಜೈನ ಮನೆಯವರಿಗೂ ಸಾಧ್ಯವಿತ್ತೇ ಎಂಬುದು ಸಂದೇಹಾಸ್ಪದವಾದುದು. ಆದರೆ ಅದನ್ನು ವಸೂಲು ಮಾಡಲು ಶ್ರೀವೈಷ್ಣವ ನೇತೃತ್ವದ ಶ್ರೀವೈಷ್ಣವ ಪಡೆ ಮಾತ್ರ ಸಿದ್ಧವಾಗಿತ್ತು.

ಸಂಗ್ರಹಿಸಲಾದ ಹಣದಿಂದ ಅಂಗರಕ್ಷಕ ಪಡೆಯ ಖರ್ಚನ್ನು ನಿಭಾಯಿಸಿ ನಂತರ ಹಣ ಉಳಿದರೆ ಅದರಲ್ಲಿ ಜೀರ್ಣವಾದ ಬಸದಿಗಳಿಗೆ ಸುಣ್ಣ ಬಳಿಸುವುದೆಂದು ಶಾಸನ ತಿಳಿಸುತ್ತದೆ. ಈ ವಿಚಾರವನ್ನು ಎಲ್ಲ ಊರಿನ ಬಸದಿಗಳ ಮುಂದೆ ಶಾಸನ ಹಾಕಿಸಿ ಪ್ರಚುರಪಡಿಸುವುದೆಂದೂ ಶಾಸನ ತಿಳಿಸುತ್ತದೆ. ಶ್ರೀವೈಷ್ಣವ ಧುರೀಣರ ಕಾರ್ಯಕ್ಷಮತೆ ಮತ್ತು ಬುದ್ಧಿವಂತಿಕೆಯನ್ನು ಇಲ್ಲೂ ನಾವು ಗಮನಿಸಬೇಕು. ಜೈನರು ತೆರಬೇಕಾದ ಹಣವನ್ನು ಶಾಸನದಲ್ಲಿ 'ದಂಡ' ಎಂದು ಕರೆದಿಲ್ಲ. ಹಾಗಾಗಿ ಇದು ಈವರೆವಿಗೆ ಯಾವ ವಿದ್ವಾಂಸರ ಗಮನವನ್ನೂ ಸೆಳೆದಿಲ್ಲ. ಸಮಷ್ಟೀ ಭಾವದಲ್ಲಿ ಶಾಸನದ ಈ ಭಾಗವನ್ನು ಅವಲೋಕಿಸಿದ್ದರೆ ಶ್ರೀವೈಷ್ಣವ ಅಂಗರಕ್ಷಕ ಪಡೆಯ

ರಚನೆಯ ಔಚಿತ್ಯವನ್ನೇ ಪ್ರಶ್ನಿಸಬಹುದಿತ್ತು. ಇಲ್ಲವೇ ಆ ಪಡೆಯ ರಚನಾ ವಿಧಾನ ಮತ್ತು ಅದರ ಖರ್ಚನ್ನು ಸಂತ್ರಸ್ತ ವರ್ಗದ ಮೇಲೆ ಹಾಕಿರುವುದನ್ನು ಪ್ರಶ್ನಿಸಬಹುದಿತ್ತು. ಆದರೇಕೋ ವಿದ್ವಾಂಸರೆಲ್ಲರೂ ಈ ಬಗ್ಗೆ ಶ್ರೀಮದ್ಗಾಂಭೀರ್ಯದ ಮೌನ ವಹಿಸಿದ್ದಾರೆ. ಇದೇಕೆ ಹೀಗೆ ಎಂಬ ಪ್ರಶ್ನೆ ಇವರಲ್ಲಿ ಉದ್ಭವಿಸದಿರುವುದು ಆಶ್ಚರ್ಯದ ಸಂಗತಿ. ಶಾಸನದಲ್ಲಿರುವ "ಮಹಾರಾಯನು ವೈಷ್ಣವ ದರ್ಶನಕ್ಕೆ ಭೇದವಿಲ್ಲವೆಂದು ರಾಜನು ವೈಷ್ಣವರ ಕೈಯಲು ಜೈನರ ಕೈವಿಡಿದುಕೊಟ್ಟು" (ಶಾಸನಪಾಠ ಸಾಲು 14–15) ಎಂಬ ಮಾತೇ ಶಿಖರಪ್ರಾಯ ವಾಗಿ ಉಳಿದೆಲ್ಲವೂ ಇವರಿಗೆ ಗೌಣವಾಯಿತೇ? ಏನೇ ಆಗಲಿ ಶಾಸನದಲ್ಲಿರುವ ಕೆಲವು ನಿರ್ಧಾರಗಳ ಔಚಿತ್ಯತೆಯ ಬಗ್ಗೆ ಗಮನ ಹರಿಯದಿರುವುದು ಮತ್ತು ಆ ಬಗ್ಗೆ ನ್ಯಾಯಯುತ ಅಭಿಪ್ರಾಯ ಇದುವರೆವಿಗೂ ಮೂಡದಿರುವುದು ಒಂದು ದುರದೃಷ್ಟಕರ ಸಂಗತಿ.

ಸಭೆಯ ಈ ಎಲ್ಲ ನಿರ್ಣಯಗಳಿಗೆ ಜೈನರ ಒಪ್ಪಿಗೆ ಕೇವಲ ಔಪಚಾರಿಕವಾಗಿತ್ತು. ಜೈನರ ವಿರೋಧ ಇದಕ್ಕಿದ್ದರೂ ಅದನ್ನು ಪ್ರಕಟಿಸುವ ಧೈರ್ಯವಿದ್ದಂತೆ ಕಾಣುವುದಿಲ್ಲ. ಅಲ್ಲದೆ ಇಲ್ಲಿ ನಡೆದದ್ದು ಮೇಲೆ ಹೇಳಿದಂತೆ ಏಕಪಕ್ಷೀಯ ಶಕ್ತಿ ಪ್ರದರ್ಶನದ ಸಭೆ. ಹಾಗಾಗಿ ಈ ನಿರ್ಧಾರಕ್ಕೆ ಜೈನರ ವಿರೋಧ ಒಂದು ವೇಳೆ ಪ್ರಕಟವಾಗಿದ್ದರೂ ಅದನ್ನು ಕಡೆಗಣಿಸಿ ಅವರ ಮೇಲೆ ಇದನ್ನು ಹೇರುವ ಸಂಭವವೇ ಹೆಚ್ಚಾಗಿತ್ತು.

ಇನ್ನು ಈ ತೀರ್ಮಾನದಲ್ಲಿ ಬಸುವಿಸೆಟ್ಟಿಯ ಪಾತ್ರವನ್ನು ಶಾಸನದ ಮುಖ್ಯ ಭಾಗದಲ್ಲಿ ಹೇಳಿಲ್ಲ. ಬದಲಿಗೆ ಚಿಕ್ಕಅಕ್ಷರಗಳಲ್ಲಿ ಶಾಸನದ ಮೇಲ್ಭಾಗದಲ್ಲಿ ಆನಂತರ ಕೆತ್ತಲಾಗಿದೆ. ಇದೇಕೆ ಹೀಗಾಗಿದೆ ಎಂಬುದು ಅರ್ಥವಾಗದಾಗಿದೆ. ತಾವು ಶೋಷಿಸಿ ಕೊಂಡು ಬರುತ್ತಿದ್ದ ವರ್ಗದ ನೇತಾರನನ್ನಾಗಿ ಈತನನ್ನು ಗುರುತಿಸಿ ಗೌರವಿಸುವ ಇರಾದೆ ಶ್ರೀವೈಷ್ಣವರಿಗೆ ಮೊದಲು ಇದ್ದಂತೆ ಕಾಣುವುದಿಲ್ಲ. ಪ್ರಾಯಶಃ ಈತನ ಬಗ್ಗೆ ಅವರಿಗೆ ಸಂಶಯ ಮತ್ತು ವೈಮನಸ್ಯವೇ ಹೆಚ್ಚಾಗಿದ್ದಿರಬಹುದು. ಕಾರಣ ಈತ ಭಕ್ತರ ಅನ್ಯಾಯಗಳನ್ನು ರಾಜನಲ್ಲಿ ಬಿಂನಹ ಮಾಡಿದ ಮತ್ತು ಧೈರ್ಯ ಮಾಡಿ ಇವನ ನೇತೃತ್ವದಲ್ಲಿ ಜೈನರ ನಿಯೋಗ ರಾಜನನ್ನು ಭೇಟಿ ಮಾಡಿತ್ತು. ಹೀಗಾಗಿ ಶಾಸನದ ಮೇಲ್ಭಾಗದಲ್ಲಿ ಸಣ್ಣ ಅಕ್ಷರಗಳಲ್ಲಿರುವ ಬುವಿಸೆಟ್ಟಿಯ ಕಾರ್ಯ ಉಲ್ಲೇಖ ಶ್ರೀವೈಷ್ಣವರ ಕಾರ್ಯವಲ್ಲ ಎಂದು ಕಾಣುತ್ತದೆ. ಬದಲಿಗೆ ಪರಿಸ್ಥಿತಿ ಸಂಪೂರ್ಣ ತಿಳಿಯಾದ ಮೇಲೆ ಬುವಿಸೆಟ್ಟಿಯ ಹಿತೈಷಿಗಳಾರೋ ಈ ಮಾಹಿತಿ ಕೆತ್ತಿಸಿರಬೇಕು. ಅಥವಾ ತಮ್ಮ ಪ್ರಯೋಜನಕ್ಕೆ ಬಸುವಿ ಸೆಟ್ಟಿಯನ್ನು ಬಳಸಿಕೊಳ್ಳುವ ಸಲುವಾಗಿ ಶಾಸನ ಸಿದ್ಧವಾದ ನಂತರ ಬಸುವಿಸೆಟ್ಟಿಯ ಉಲ್ಲೇಖವನ್ನು ಶ್ರೀವೈಷ್ಣವರು ಈ ರೀತಿ ಮಾಡಿರಬೇಕು.

ಇನ್ನು ಈ ನ್ಯಾಯತೀರ್ಮಾನದಲ್ಲಿ ರಾಜ ಬುಕ್ಕರಾಯನ ಪಾತ್ರವೇನು ಎಂಬುದು ಮುಖ್ಯವಾಗುತ್ತದೆ. ನಾಲ್ಕು ಪಟ್ಟಣದ ಜೈನ ಪ್ರತಿನಿಧಿಗಳು ಭಕ್ತರು ಅನ್ಯಾಯದಲ್ಲಿ ಜೈನರನ್ನು ಕೊಲ್ಲುತ್ತಿದ್ದುದನ್ನು ಬಿಂನಹ ಮಾಡುವವರೆಗೆ ರಾಜನಿಗೆ ಈ ಬಗ್ಗೆ ಮಾಹಿತಿ ಇದ್ದಂತಿಲ್ಲ. ಇದು ಆತನ ಆಡಳಿತದಲ್ಲಿದ್ದ ವೈಫಲ್ಯಗಳತ್ತ ಬೊಟ್ಟುಮಾಡುತ್ತದೆ. ಈ ತೆರನಾದ ವಿಚಾರಗಳ ಬಗ್ಗೆ ಕಾರ್ಯನಿರ್ವಹಿಸುತ್ತಿದ್ದ ರಾಜ್ಯದ ಅಧಿಕಾರಿಗಳು ರಾಜನಿಗೆ ಸೂಕ್ತ ಮಾಹಿತಿಯನ್ನು ರವಾನಿಸಿಲ್ಲ ಎಂದು ಕಾಣುತ್ತದೆ. ಇಲ್ಲಿ ಅಧಿಕಾರಿಗಳಿಂದ ಕರ್ತವ್ಯಲೋಪವಾಗಿದೆ. ಆದರೆ ಕೊಲೆಯಂತಹ ಹೇಯ ಕೃತ್ಯಗಳು ಒಂದು ವರ್ಗದ ಮೇಲೇ ಅವ್ಯಾಹತವಾಗಿ ಆಗುತ್ತಿದ್ದಾಗ ಅಧಿಕಾರಿಗಳು ಈ ಬಗೆಗಿನ ಪತ್ತೆಕಾರ್ಯ ಮತ್ತು ವಿಚಾರಣೆಯನ್ನು ಮಾಡದಿರುವುದು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ಕರ್ತವ್ಯಲೋಪವಾಗಿರುವುದು ಇಲ್ಲಿ ಸ್ಪಷ್ಟವಾಗಿದೆ. ಪೂರ್ವನಿರ್ಧರಿತ ಯೋಜನಾಬದ್ಧ ಶ್ರೀವೈಷ್ಣವ ಕೃತ್ಯಗಳು ಆಕಸ್ಮಿಕ ಘಟನೆಗಳೆಂಬ ರೀತಿಯಲ್ಲಿ ನಡೆದಿರಬಹುದು. ಇದು ಅಧಿಕಾರಿಗಳ ದಾರಿಯನ್ನೂ ತಪ್ಪಿಸಿರಬಹುದು. ಒಟ್ಟಿನಲ್ಲಿ ರಾಜ ಬುಕ್ಕರಾಯನಿಗೆ ವಿಷಯದ ಅರಿವಾಗಿದ್ದು ಜೈನರ ಬಿಂನಹದಿಂದ. ಇದಕ್ಕೆ ರಾಜನ ಆಜ್ಞೆ ಶ್ರವಣಬೆಳಗೊಳ ಶಾಸನದಲ್ಲಿ ಇಂತಿದೆ:

> "ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವದರ್ಶನಕ್ಕೆಉೂ
> ಜೈನದರ್ಶನಕ್ಕೆಉೂ ಭೇದವಿಲ್ಲವೆಂದು ರಾಜನು ವೈಷ್ಣವರ
> ಕೈಯಲು ಜೈನರ ಕೈವಿಡಿದುಕೊಟ್ಟು ಯೀ ಜೈನ ದರ್ಶನಕ್ಕೆ
> ಪೂರ್ವಮರಿಯಾದೆಯಲು ಪಂಚಮಹಾವಾದ್ಯಂಗಳೂ ಕಳಶಉ
> ಸಲುವುದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿ
> ಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು ಯೀ
> ಮರ್ಯ್ಯಾದೆಯಲು ಯಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ
> ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು"

(ಶಾಸನಪಾಠ ಸಾಲು 14–19)

ಕಲ್ಯ ಶಾಸನದಲ್ಲಿ ಇದು ಮೂಡಿಬಂದಿರುವ ರೀತಿ ಇಂತಿದೆ:

> "ಪಂಚಬಸ್ತಿಗಳಲ್ಲಿ ಕಳಸ ಜಗಳೆ ಜಗಟೆ ಮೊದಲಾದ
> ಪಂಚ ಮಹಾ ವಾದ್ಯ ಉ ಸಲ್ಲುಉದು ಅನ್ಯರಿ[ಗೆ] ಬರಕೂಡದು
> ಜಇನ ಸಮಯಕೆ ಸಲುವುದೆಂದು" (ಶಾಸನಪಾಠ, ಸಾಲು 40–45)

ಈ ಆಜ್ಞೆ ಧರ್ಮಸಮನ್ವಯತೆಯನ್ನು ಎತ್ತಿಹಿಡಿದಿದೆ. ಬಸದಿಗಳಲ್ಲಿ ಪೂಜಾದಿ ಕಾರ್ಯಗಳು ಎಂದಿನಂತೆ ನಡೆಯಲು ಅನುವು ಮಾಡಿಕೊಟ್ಟಿದೆ. ಆದರೆ

ದುಷ್ಕೃತ್ಯಗಳನ್ನು ನಡೆಸುತ್ತಿದ್ದವರಿಗೆ ಶಿಕ್ಷೆ ಆಯಿತೇ ಎಂಬುದು ಮಾತ್ರ ತಿಳಿಯುವುದಿಲ್ಲ. ಅಂತೆಯೇ 20 ಜನರ ಒಂದು ಶ್ರೀವೈಷ್ಣವ ಅಂಗರಕ್ಷಕ ಪಡೆಯ ನಿರ್ಮಾಣ ಮತ್ತು ಅದರ ಖರ್ಚುವೆಚ್ಚಕ್ಕಾಗಿ ಪ್ರತಿ ಜೈನಮನೆಯಿಂದ ಒಂದು ಹಣ ಚಿನ್ನದ ನಾಣ್ಯವನ್ನು ವಸೂಲು ಮಾಡುವ ವಿಚಾರ ರಾಜನ ಅಂಕಿತ ಪಡೆದಿತ್ತೇ ಎಂಬುದು ಪರಿಶೀಲನಾರ್ಹ. ಜೈನರ ಅನುಮತಿ ಇದೆ ಎಂದು ನಂಬಿಸಿ ರಾಜನ ಅನುಮತಿಯ ಹೊರತಾಗಿ ಕೈಗೊಂಡ ತೀರ್ಮಾನ ಇದು ಎಂದೆನಿಸುತ್ತದೆ. ರಾಜನೇ ಈ ಬಗ್ಗೆ ತೀರ್ಮಾನ ಕೈಗೊಂಡಿದ್ದರೆ ಅಂಗರಕ್ಷಕ ಪಡೆ ಕೇವಲ ಶ್ರೀವೈಷ್ಣವ ಪಡೆ ಆಗಲು ಸಾಧ್ಯವಿರುತ್ತಿರಲಿಲ್ಲ. ಅಲ್ಲದೆ ಅದರ ಖರ್ಚು ರಾಜ್ಯದ ಬೊಕ್ಕಸಕ್ಕೆ ಹೋಗುತ್ತಿತ್ತು. ಇಲ್ಲವೇ ಎರಡೂ ಸಮಯಗಳವರ ಮೇಲೆ ಬಹಳ ಮೃದುವಾಗಿ ಹೇರಲಾಗುತ್ತಿತ್ತು. ಆದರೆ ಇಲ್ಲಿ ಎಲ್ಲವೂ ಏಕಪಕ್ಷೀಯವಾಗಿದೆ. ತಿರುಮಲೆ ತಾತಯ್ಯನ ಪ್ರಭಾವೀ ಪೂರ್ಣ ನಂಬಿಕೆಯ ಪಾತ್ರ ಇಲ್ಲಿ ನಿಖರವಾದ ಉದ್ದೇಶಗಳೊಂದಿಗೆ ಕೆಲಸಮಾಡಿದೆ ಎಂದು ಕಾಣುತ್ತದೆ.

ಈ ನಿಟ್ಟಿನಲ್ಲಿ ಅವಲೋಕಿಸಿದರೆ ಪ್ರಾಯಶಃ ಶ್ರವಣಬೆಳಗೊಳದ ಶಾಸನಕ್ಕಿಂತ ಮೊದಲು ಕಲ್ಯದ ಶಾಸನ ಹುಟ್ಟದೇ ಇರುತ್ತಿದ್ದರೆ "ಜೈನರನ್ನು ಶ್ರೀ ವೈಷ್ಣವರು ಅನ್ಯಾಯವಾಗಿ ಕೊಲ್ಲುತ್ತಿದ್ದರು" ಎಂಬ ಒಂದು ಮುಖ್ಯ ವಿಷಯವೇ ಬಯಲಾಗು ತ್ತಿರಲಿಲ್ಲ.

ಈ ಎಲ್ಲ ವಿವರಣೆಯೂ ಜೈನರಿಗೆ ನಿಜವಾಗಿಯೂ ನ್ಯಾಯದೊರೆಯಲಿಲ್ಲ ಎಂಬುದನ್ನು ಶ್ರುತಪಡಿಸುತ್ತದೆ. "ಅವರಿಗೆ ಸಲ್ಲಬೇಕಾದುದಷ್ಟನ್ನೇ ಪಡೆದರು" ಎಂಬ ಬಾ. ರಾ. ಗೋಪಾಲರ ಮಾತು ಕೇವಲ ಇದರ ಒಂದು ಅಣಕದಂತಿದೆ ಅಷ್ಟೇ. ಆದರೆ ಚಿದಾನಂದಮೂರ್ತಿಯವರ ಮಾತು "ಬುಕ್ಕನ ತೀರ್ಪು ಘರ್ಷಣೆಗಳ ಮೊನಚನ್ನು ಮೊಂಡು ಮಾಡಿರಬಹುದು; ಅನಾಹುತಗಳ ಪ್ರಮಾಣವನ್ನು ತಗ್ಗಿಸಿರಬಹುದು. ಆದರೆ ಘರ್ಷಣೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿತೇ ಎಂಬುದು ಅನುಮಾನಾಸ್ಪದ" ಎಂಬುದು ವಾಸ್ತವತೆಯನ್ನು ತೆರೆದಿಡುವಂತಿದೆ.

ಒಟ್ಟಿನಲ್ಲಿ ಯಾವ ಶಾಸನವನ್ನು ಧರ್ಮಸಮನ್ವಯತೆಯ ಶ್ರೇಷ್ಠಸಂಕೇತ ಎಂದು ವಿದ್ವಾಂಸರು ಇದುವರೆವಿಗೂ ಗೌರವಿಸಿದ್ದರೋ ಅದರ ನಿಜವಾದ ಅರ್ಥ ಏನೆಂಬುದು ಈಗ ವಿಶದವಾಗಿದೆ ಎಂದು ಭಾವಿಸುತ್ತೇನೆ.

ಅಡಿಟಿಪ್ಪಣಿ

1. Mahalingam T. V. *Administrative and Social life in the Vijayanagara Empire.*

   B. A. Saletore: *Social and Political Life in the Vijayangara empire,* Vols. I and II, Madras-1934

   R. Sewell: *A Forgotten Empire*

   P.B. Desai: *A History of Karnataka*

   Laxminarayana Rao. N and R. S. Panchamukhi: *Karnataka Arasu Manetanagalu*, 1940

   M. V. Krishna Rao and M. Keshava Bhatta: *Karnataka Ithihasa Darshana*, Bangalore 1970

   D. P. Karmarkar (ed.) *Vijayanagara Sex Centenary Volume*, 1936, Dharwar

2. *Ep. Carn*, Vol. II Rev. 1973, No. 475 (344)
3. B. L. Rice, R. Narasimhachar, B. R. Gopal, M. Chidananda Murthy etc
4. *Ep. Carn*, Vol. IX (Old-Rice) Magadi. No. 18
5. ಅದೇ ಶಾಸನ ಪಾಠ ಸಾಲು 21–25
6. *Ep. Carn*, Vol. II, 1973 ಪೀಠಿಕೆ ಪು. XLiX
7. ಅದೇ. ಸಂ. 475 ಶಾಸನ ಪಾಠ ಸಾಲು 7–10
8. S. R. Sharma, *Jainism and Karnataka Culture* (1940) p.44
9. P. B. Desai: ಕರ್ನಾಟಕ ಪರಂಪರೆ–2, *A History of Karnataka,* ಪು. 19–20
10. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, *ಕನ್ನಡ ಸಾಹಿತ್ಯ ಚರಿತ್ರೆ* 4–1, ಪು.145
11. ಎಂ. ಎಂ. ಕಲಬುರ್ಗಿ, *ಮಾರ್ಗ–3,* ಪು.37
12. *ಭಾರತೀಯ ಸಂಸ್ಕೃತಿ ದರ್ಶನ* – ಇದರಲ್ಲಿ ಜಿ. ಹನುಮಂತ ರಾವ್ ಅವರ ಲೇಖನ, ಪು. 332
13. ಕನ್ನಡ ವಿಶ್ವವಿದ್ಯಾಲಯ, *ಹೊಸತು ಹೊಸತು*(1993) ಪು.232, 237
14. ಶಾಸನದ ಕಾಲ ಶಕ 1290, ಕೀಲಕ ಸಂ. ಶ್ರಾವಣ ಶು. 2 ಸೋಮವಾರ. ಇದು ಕ್ರಿ. ಶ. 1368 ಜುಲೈ 17 ಸೋಮವಾರಕ್ಕೆ ಸರಿಹೊಂದುತ್ತದೆ.

15. ಶಾಸನ ಪಾಠ ಸಾಲು 40–43
16. K. V. Ramesh: *A History of South Kanara* (1970)

ಬುಕ್ಕರಾಯನ ಶ್ರವಣಬೆಳಗೊಳ ಶಾಸನ
ಶಾಸನ ಪಾಠ

1. ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ॥ ಪಾಷಂಡ, ಂಗರ ಮಹಾ ಬಡ–
2. ವಾಮುಖಾಗ್ನಿ ಶ್ರೀರಂಗರಾಜ ಚರಣಾಂಬುಜ ಮೂಲದಾಸ ಶ್ರೀ ವಿಷ್ಣು
3. ಲೋಕ ಮಣಿಮಂಟಪ ಮಾರ್ಗದಾಯೀ ರಾಮಾನುಜೋ ವಿಜಯತೇ ಯತಿ
4. ರಾಜರಾಜ॥ ಶಕವರ್ಷ 1290ನೆಯ ಕೀಲಕ ಸಂವತ್ಸರದ ಭಾದ್ರಪ
5. ದ ಶು 10 ಬೃ ಸ್ವಸ್ತಿ ಶ್ರೀ ಮನ್ಮಹಾಮಂಡಳೇಶ್ವರಂ ಅರಿರಾಯವಿಭಾಡ ಭಾ
6. ಷೆಗೆ ತಪ್ಪುವರಾಯರ ಗಂಡ ಶ್ರೀವೀರಬುಕ್ಕರಾಯರು ಪ್ರಿಥ್ವೀರಾ–
7. ಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾಜವಾದಲ್ಲಿ ಆ–
8. ನೆಯಗೊಂದಿ ಹೊಸಪಟ್ಟಣ ಪೆನುಗೊಂಡೆ ಕಲ್ಲೇ ಹದ ಪಟ್ಟಣವೊಳಗಾದ ಸ –
9. ಮಸ್ತ ನಾಡ ಭವ್ಯಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅಂನ್ಯಾಯ
10. ಂಗಳನು ಬಿಂನಹಂ ಮಾಡಲಾಗಿ ಕೋವಿಲ್ ತಿರುಮಲೆ ಪೆರುಮಾಳ್ ಕೋವಿಲ್ ತಿರುನಾ
11. ರಾಯಣ ಪುರ ಮುಖ್ಯವಾದ ಸಕಳಾಚಾರ್ಯರೂ ಸಕಳ ಸಮಇಗಳೂ ಸಕಳಸಾ–
12. ತ್ವಿಕರೂ ಮೋಷ್ಟಿಕರು ತಿರುಪಣಿ ತಿರುವಿಡಿ ತಂಣ್ನೀರವರು ನಾಲ್ವತೆಂಟು ಜನಂಗ–
13. ಳು ಸಾವಂತ ಬೋವಕ್ಕಳು ತಿರುಕುಲ ಜಾಂಬುವಕುಲ ವೊಳಗಾದ ಹದಿನೆಂಟುನಾ–
14. ಡ ಶ್ರೀ ವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವದರ್ಶನಕ್ಕೆ ಊ ಜೈನದರ್ಶನಕ್ಕೆಊ

15. ಭೇದವಿಲ್ಲೆಂದು ರಾಜನು ವೈಷ್ಣವರ ಕೈಯುಲು ಜೈನರಕೈ ವಿಡಿದುಕೊಟ್ಟುಯೀ ಜೈ
16. ನದರ್ಶನಕ್ಕೆ ಪೂರ್ವಮರಿಯಾದೆಯಲು ಪಂಚಮಹಾವಾದ್ಯಂಗಳೂ ಕಳಶಲುಸ–
17. ಲುಉದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ
18. ಹಾನಿವೃದ್ಧಿಯಾಗಿ ಪಾಲಿಸುವರು ಯೀ ಮರ್ಯಾದೆಯಲು ರಾಜ್ಯ ದೊಳಗುಳ್ಳ–
19. ೦ತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವನಟ್ಟು ಪಾಲಿಸುವರು ಚಂದ್ರಾರ್ಕಸ್ಥಾಯಿ–
20. ಯಾಗಿ ವೈಷ್ಣವಸಮಯಲು ಜೈನದರ್ಶನವ ರಕ್ಷಿಸಿಕೊಂಡು ಬಹೆಲು ವೈಷ್ಣವರೂ ಜೈ–
21. ನರೂವೊಂದು ಭೇದವಾಗಿ ಕಾಣಲಾಗದು ಶ್ರೀ ತಿರುಮಲೆ ತಾತಯ್ಯಂಗಳು
22. ಸಮಸ್ತರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳುಗುಳದ ತೀರ್ಥದಲ್ಲಿ ವೈಷ್ಣವ
23. ಅಂಗರಕ್ಷೆಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಹ ಜೈನ(ರು) ಬಾಗಿಲು ಗಟ್ಟಳೆ
24. ಯಾಗಿ ಮನೆಮನೆಗೆ ವರ್ಷಕ್ಕೆ 1 ಹಣಕೊಟ್ಟು ಆಯೆತ್ತಿದ ಹೊಂನಿಂಗೆ ದೇವರ
25. ಅಂಗರಕ್ಷೆಗೆ ಯಿಪ್ಪತ್ತಾಳನೂ ಪಂತವಿಟ್ಟು ಮಿಕ್ಕ ಹೊಂನಿಂಗೆ ಜೀರ್ಣ್ನಜಿ
26. ನಾಲಯಂಗಳಿಗೆ ಸೊದೆಯನಿಕೂದು ಯಿಮರಿಯಾದೆಯಲು ಚಂದ್ರರ್ಕ
27. ರುಳ್ಳಂನಂತಪ್ಪಲಿಯದೆ ವರ್ಷವರ್ಷಕ್ಕೆ ಕೊಟ್ಟು ಕೀರ್ತಿಯನೂ ಪುಂಣ್ಯವನೂ ಉಪಾ–
28. ರ್ಜಿಸಿಕೊಂಬುದು ಯಿ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿದವನು ರಾ–
29. ಜದ್ರೋಹಿ ಸಂಘಸಮುದಾಯಕ್ಕೆ ದ್ರೋಹಿ ತಪಸ್ವಿಯಾಗಲಿ ಗ್ರಾಮಿಣಿಯಾಗಲಿ ಯಿ
30. ಧರ್ಮವ ಕೆಡ್ಸಿದರಾದಡೆ ಗಂಗೆಯ ತಡಿಯಲ್ಲಿ ಕಪಿಲೆಯನೂ ಬ್ರಾಹ್ಮಣನನೂ ಕೊ–

31. ಂದ ಪಾಪದಲ್ಲಿ ಹೋಹರು ॥ಶ್ಲೋಕ॥ ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂ
32. ಧರಾಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಂಯಾಂ ಜಾಯುತೆಕ್ರಿಮಿ॥ (ಮೇಲ್ಭಾಗದಲ್ಲಿ)
33. ಕಲ್ಲೆಹದ ಹರ್ವ್ವಿಸೆಟ್ಟಿಯ ಸುಪುತ್ರ ಬುಸುವಿಸೆಟ್ಟಿ ಬುಕ್ಕರಾಯರಿಗೆ ಬಿಂನಹಂ ಮಾಡಿ ತಿರುಮಲೆಯ ತಾತಯ್ಯ
34. ಂಗಳ ಬಿಜಯಂಗೈಸಿತಂದು ಜೀರ್ನ್ನೋದ್ಧಾರವ ಮಾಡಿಸಿದರು ಉಭಯ ಸಮಯಉೂ ಕೂಡಿ ಬುಸುವಿ ಸೆಟ್ಟಯರಿಗೆ ಸಂಘ
35. ನಾಯ್ಕ ಪಟ್ಟವ ಕಟ್ಟಿದರು॥ (*)

ಬುಕ್ಕರಾಯನ ಕಲ್ಯಾ ಶಾಸನ

ಶಾಸನ ಪಾಠ

ಶಾಸನದ ಕಾಲ ಶಕ 1290, ಕೀಲಕ ಸಂ ಶ್ರಾವಣ ಶು.2 ಸೋಮವಾರ – ಕ್ರಿ ಶ. 1368 ಜುಲೈ 12, ಸೋಮವಾರ

1. ಸ್ವಸ್ತಿ ಸಮಸ್ತಪ್ರ
2. ಶಸ್ತಿ ಸಹಿತಂ॥ ಪಾಸ
3. ಂಡ ಸಾಗರ ಮಹಾವಡವಾ
4. ಮುಖಾಗ್ನಿ ಶ್ರೀರಂಗರಾ
5. ಜ ಚರಣಾಂಬುಜಮೂ
6. ಲದಾಸಃ ಶ್ರೀವಿಷ್ಣುಲೋಕ
7. ಮಣಿ ಮಂಟಪ ಮಾರ್ಗ
8. ದಾಯೀ ರಾಮಾನುಜೋ ವಿಜಯ
9. ತೇ ಯತಿರಾಜರಾಜ[॥*] ಶಕವ –
10. ರ್ಷ 1290ನೆಯ ಕೀಲಕ ಸಂ–
11. ವತ್ಸರದ ಶ್ರಾವಣ ಶು2 ಸೋ
12. ದಲು ಶ್ರೀ ಮನ್ಮಹಾ ಮಂ–
13. ಡಳೇಶ್ವರಂ ಅರಿರಾಯ ವಿಭಾ –
14. ಡ ಭಾಷೆಗೆ ತಪ್ಪುವರಾ –

15. ಯರಗಂಡ ಶ್ರೀ ವೀರಬುಕ್ಕ
16. ರಾಯನು ಪ್ರಿತುವೀರಾಜ್ಯವ
17. ನಾಳುವಕಾಲದಲಿ ಜಇನ
18. ರಿಗೆ ಭಕ್ತರಿಗೆ ಸಂವಾದವಾದ
19. ಲ್ಲಿ ಆನೆಯಗೊಂದಿ ಹೊಸಪ–
20. ಟ್ಟಣ ಪೆನುಗೊಂಡೆ ಕಳ್ಯಹ
21. ವೊಳಗಾದ ಸಮಸ್ತ ನಾಡ
22. ಜಇನರು ಬುಕ್ಕರಾಯಂಗೆ ಭ–
23. ಕ್ತರು ಅನ್ಯಾಯದಲು ಕೊಲ್ಲು
24. ವುದನು ಬಿಂನಹಂ ಮಾಡ
25. ಲಾಗಿ ಕೋವಿಲು ತಿರುಮಲೆ
26. ಪೆರು(ಮಾಳ್) ಕೋವಿಲು ತಿರುನಾ–
27. ರಾಯಣ ಪುರ ಮುಖ್ಯವಾ–
28. ದ ಸಕಳಾಚಾರ್ಯ್ಯರು ಸ–
29. ಕಳಸಮಯಿಗಳು ಸಕಳ
30. ಸಾತ್ವಿಕರು ಮೋಷ್ಟಿಕರುತಿ–
31. ರಮಣಿ ತಿರುವಿಡಿ ತಂ–
32. ದವರು ನಾಲ್ವತ್ತೆಂಟು ತಲೆ,
33. ಮಕ್ಕಳು ಸಾವಂತ ಬೋವ
34. ರ್ಕ್ಗಳು ತಿರುಕುಲ ಜಾಂಬವಕುಲ
35. ವೊಳಗಾದ ಪದಿನೆಂಟು ನಾಡಾ–
36. ಶ್ರೀ ವೈಷ್ಣವರ ಕಯ್ಯಲು ಮಹಾ–
37. ರಾಯನು. . . . ನಿಂದು
38. ವಇಷ್ಣವ ದರುಸನದ ಮಜಿಬ
39. ಕ್ಕೆವುವೆಂದು ಕೊಟ್ಟ ಸಂಮಂಧ
40. ಪಂಚಬಸ್ತಿಗಳಲಿ ಕಳಸ ಜ–
41. ಗಳೆ ಜಗಟೆ ಮೊದಲಾದ ಪಂ–
42. ಚ ಮಹಾವಾದ್ಯಲು ಸಲು–

43. ಉದು ಅನ್ಯರಿ(ಗೆ) ಬರಕೂಡದು
44. ಜಇನ ಸಮಯಕೆ ಸಲು
45. ವುದೆಂದು ವ್ರಿದ್ಧಿಯಾದ –
(ಕಲ್ಲಿನ ಎಡಪಾರ್ಶ್ವದಲ್ಲಿರುವ ಬರಹ)
46. ಶ್ರೀವಇ
47. ಷ್ಣವ ಸಮಹ
48. . . . .
49. . . . . ಯೀ
50. ಮರ್ಯ್ಯಾದೆ
51. . . . . .
52. ದೊಳಗುಳ
53. ಬಸ್ತಿ
54. ಶ್ರೀ ವೈಇಷ್ಣವ
55. . . . . .
56. ನಟ್ಟು ಕೊಟ್ಟೆವು
(ಮುಂದಕ್ಕೆ ಬರಹ ಅಸ್ಪಷ್ಟ)

೪. ಹಿರಿಯೂರು ತಾಲೂಕಿನ ವಿಜಯನಗರ ಕಾಲದ ಶಾಸನಗಳು

ಡಾ. ಜೆ ಕರಿಯಪ್ಪ ಮಾಳಿಗೆ

ಚಿತ್ರದುರ್ಗದ ಇತಿಹಾಸವನ್ನು ಸಾರುವ ಸುಮಾರು 550ಕ್ಕೂ ಹೆಚ್ಚು ಶಾಸನಗಳು ಲಭ್ಯವಿದ್ದು ಇವು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ರಚಿತವಾಗಿವೆ. ಅವುಗಳಲ್ಲಿ 100 ಕ್ಕೂ ಹೆಚ್ಚು ಶಾಸನಗಳು ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಪಟ್ಟಿವೆ. ಇವುಗಳೆಲ್ಲಾ ಎ.ಕ. ಸಂಪುಟಗಳು ಮತ್ತು MAR ಮತ್ತು ಹಾಗೂ ಸಂಶೋಧನಾ ಕೃತಿಗಳಲ್ಲಿ ಪ್ರಕಟಗೊಂಡಿವೆ. ಹಿರಿಯೂರಿಗೆ ಸಂಬಂಧಿಸಿ ಹೇಳುವುದಾ ದರೆ, ವೇದಾ ವತಿ ನದಿಯ ಬಲದಂಡೆಯ ಮೇಲಿರುವ ಹಿರಿಯೂರನ್ನು ಮೊದಲು 'ಘನಪುರಿ' ಯೆಂದೂ, 'ಹೊನ್ನ ಹಿರಿಯೂರು' ಯೆಂದೂ, 'ಹಿರಿಯಕೆರೆ' ಯೆಂದೂ ಕರೆದಿದ್ದು, ಮುಂದೆ ಹಿರಿಯೂರು ಎನ್ನುವುದೇ ಶಾಶ್ವತವಾಗಿ ಉಳಿದುಬಂದಿದೆ. ಈ ಪ್ರದೇಶ ತನ್ನದೇ ಆದ ಪ್ರಾಚೀನ ಕಾಲದ ಇತಿಹಾಸವನ್ನು, ಸಂಸ್ಕೃತಿಯನ್ನು ಒಳಗೊಂಡಿದೆ. ಪುರಾತತ್ವ ದೃಷ್ಟಿಯಿಂದಲೂ, ದೇವಾಲಯ, ಶಾಸನಗಳ ಶೋಧನೆ ಮತ್ತು ಅಧ್ಯಯನ ದೃಷ್ಟಿಯಿಂದ ಹೆಚ್ಚು ಮಹತ್ವ ಪಡೆದಿರುವ ಈ ಪ್ರದೇಶದ ತಾಲೂಕಿನಾದ್ಯಂತ ಇರುವ ಅನೇಕ ದೇವಾಲಯಗಳು, ಶಿಲಾ ಶಾಸನಗಳು, ಕೆರೆ, ಕಟ್ಟೆ, ಕಾಲುವೆಗಳು ಇತಿಹಾಸಾಕ್ತರಿಗೆ, ಸಂಶೋಧಕರಿಗೆ ಅಧ್ಯಯನಾಸಕ್ತಿ ಮೂಡಿಸುತ್ತದೆ.

ವಿಜಯನಗರ ಸಾಮ್ರಾಜ್ಯ 1336 ರಿಂದ 1565ರವರೆಗೆ ಸುಮಾರು 220 ವರ್ಷಗಳ ಅವಧಿಯ ಆಳ್ವಿಕೆ ನಡೆಸಿದ್ದು, ಆಗ ಈ ಪ್ರದೇಶ ಅದರ ಅಧೀನ ದಲ್ಲಿತ್ತೆಂಬುದಕ್ಕೆ ಇಲ್ಲಿ ಲಭ್ಯವಿರುವ ಸುಮಾರು 20ಕ್ಕೂ ಹೆಚ್ಚು ಶಾಸನಗಳು ಸಾಕ್ಷಿಯಾಗಿವೆ. ಈ ಶಾಸನಗಳನ್ನು ಆಧಾರವಾಗಿಟ್ಟುಕೊಂಡು, ಅವುಗಳ ವಿಶೇಷತೆಯನ್ನು ಗುರುತಿಸುವ ಪ್ರಯತ್ನ ಇದಾಗಿದೆ. ವಿಜಯನಗರದ ಅರಸರು ತಮ್ಮ ನಾಡಿನಲ್ಲಿ ನೀರಾವರಿ ಕೃಷಿಪದ್ಧತಿಯನ್ನು ಅಳವಡಿಸಿಕೊಳ್ಳಲು, ಪ್ರಾಕೃತಿಕ ಜಲಸಂಪತ್ತನ್ನು ಸಂಗ್ರಹಿಸಲು ಹಲವಾರು ಕೆರೆ, ಕಟ್ಟೆ, ಕಾಲುವೆಗಳನ್ನು ನಿರ್ಮಿಸಿದ್ದಾರೆ. ಅಷ್ಟೇ ಮುಖ್ಯವಾಗಿ ದೇವಾಲಯಗಳ ನಿರ್ಮಾಣ ಅಥವಾ ಜೀರ್ಣೋದ್ಧಾರ ಮಾಡಿ, ಅವುಗಳ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯುವುದಕ್ಕೆ ಹೇರಳವಾಗಿ ದಾನ – ಧರ್ಮಗಳನ್ನು ನೀಡಿದ ಮಾಹಿತಿ ಇದೆ. ಅಲ್ಲದೆ ಕೆಲವು ಜಾತಿ ಜನಾಂಗಗಳ ಮೇಲೆ, ಪ್ರಜೆಗಳ ಮೇಲೆ ವಿಧಿಸಿದ್ದ ತೆರಿಗೆಗಳನ್ನು ರದ್ದು ಮಾಡಿದ ಬಗ್ಗೆ ಅಥವಾ ವಿನಾಯಿತಿ ನೀಡಿದ ಬಗ್ಗೆ ಸ್ಪಷ್ಟ ಮಾಹಿತಿ ಇದೆ.

ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಸಿದಂತೆ ಶಾಲಿವಾಹನ ಶಕವರುಷ 1339 ಅಂದರೆ ಕ್ರಿ. ಶ. 1417ರ ಸೋಮೇರ ಹಳ್ಳಿಯಲ್ಲಿ ದೊರೆತ ಶಾಸನವೇ ಮೊದಲನೆಯದಾಗಿದ್ದು, ವಿಜಯನಗರದ ಅರಸ ವೀರ ಪ್ರತಾಪ ಹರಿಹರ ಮಹಾರಾಯನ ಕಾಲಕ್ಕೆ ಸಂಬಂಧಿಸಿದ್ದು, ಅದರ ವಿವರ ಇಂತಿದೆ. ಕಾರೆಯ ಪಟ್ಟಣದ ಪಾಯಣನ ಪತ್ನಿ ಕಾಮಾಯಿ ತನ್ನ ಮಗ ಜಕ್ಕದೇವನ ಜೊತೆ ಐದು ಜನ ಮಕ್ಕಳ ಸಮೇತ ಈ ಪ್ರದೇಶಕ್ಕೆ ಬರಲು, ಕಂದಿಕೆರೆ ಸೀಮೆಯ ಭೈರೇನಾಯಕರು ತಮ್ಮ ಕುಲದೇವರಾದ ಸೌರಾಷ್ಟ್ರದ ಸೋಮೇಶ್ವರ ದೇವರನ್ನು ಹಿರಿಯೂರಿನ ದಕ್ಷಿಣ ಭಾಗದಲ್ಲಿರುವ ಮೆದ್ದೇರಹಳ್ಳವೆಂಬ ನದಿಯ ದಕ್ಷಿಣಕ್ಕೆ ಪ್ರತಿಷ್ಠಾಪನೆ ಮಾಡಲು, ನದಿ ದಡದಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡಿ, ಅಲ್ಲಿಯೆ ಕೆರೆಯೊಂದನ್ನು ಕಟ್ಟಿಸಿದ ಮಾಹಿತಿ ಈ ಶಾಸನದಿಂದ ತಿಳಿಯುತ್ತದೆ. (52)

ಶಾಲಿವಾಹನ ಶಕವರುಷ 1466, ಅಂದರೆ ಕ್ರಿ. ಶ. 1544ರ ಶಾಸನವೊಂದು ಧರ್ಮಪುರದ ಶಾನುಭೋಗ ಸುಬ್ಬರಾಯರ ಗದ್ದೆಯಲ್ಲಿ ದೊರೆತಿದ್ದು, ವಿಜಯನಗರ ಸಾಮ್ರಾಜ್ಯದ ವೀರ ಪ್ರತಾಪ ಸದಾ ಶಿವರಾಯನ ಕಾಲಕ್ಕೆ ಸಂಬಂಧಪಟ್ಟಿದೆ. ಶ್ರೀ ವಿರೂಪಾಕ್ಷನೆಂಬ ಸಹಿಯಿಂದ ಅಂತ್ಯಗೊಂಡಿರುವ ಈ ಶಾಸನದ ವಿವರ ಮಹಾ ಮಂಡಲೇಶ್ವರನಾದ ರಾಮರಾಜಯ್ಯ ವಿಠಲೇಶ್ವರ ದೇವರಲ್ಲಿ ನಾಯಿಂದ ವರ್ಗ ದವರು 4 ಬಾರಿ ಮನವಿ ಮಾಡಿಕೊಂಡಿದ್ದರ ಪರಿಣಾಮ, ನಾಯಿಂದರ ಮೇಲಿನ ಎಲ್ಲಾ ತೆರಿಗೆಗಳನ್ನು ಮನ್ನ ಮಾಡಿ, ಅವರಿಗೆ ದಾನ, ಧರ್ಮಗಳನ್ನು ನೀಡಿದ ವಿಷಯ ಉಲ್ಲೇಖಗೊಂಡಿದೆ. ಇದೇ ರೀತಿ ಈ ಜನಾಂಗದವರಿಗೆ ವಿವಿಧ ತೆರಿಗೆಗಳ ವಿನಾಯಿತಿಯನ್ನು ಮಾಡಿದ್ದರ ಬಗ್ಗೆ ಅನೇಕ ಶಾಸನಗಳು ತಿಳಿಸುತ್ತವೆ.(29)

ಧರ್ಮಪುರದ ಪೋಲೀಸ್ ಸ್ಟೇಷನ್ ಹತ್ತಿರ ಜೈನ ಶಾಸನವೊಂದು ಲಭ್ಯವಿದ್ದು, ವಿಜಯನಗರದ ವೀರ ಪ್ರತಾಪ ದೇವರಾಯನ ಕಾಲಕ್ಕೆ(1410) ಸಂಬಂಧಿಸಿದ್ದಾಗಿದೆ. ಓಂ ನಮೋ ಶಾಂತಿನಾಥಾಯ ಎಂಬ ಜಿನಸ್ತುತಿಯೊಂದಿಗೆ ಆರಂಭವಾಗುವ ಈ ಶಾಸನದಲ್ಲಿ ನಿಡುಗಲ್ಲು ಮಹಾದುರ್ಗದ ಆಳ್ವಿಕೆ ನಡೆಸುತ್ತಿದ್ದ ಗೋಪ ಚಮೂಪತಿ ಎನ್ನುವವರಿಗೆ ಜಿನ ಸಮಯದಲ್ಲಿ ಅತ್ಯುತ್ತಮ ಮಂತ್ರಿಪದವಿಯನ್ನು ಅನುಗ್ರಹಿಸಿದ ಮಾಹಿತಿ ಇದೆ. (28)

ಶಾಲಿವಾಹನ ಶಕವರುಷ 1470 (ಕ್ರಿ. ಶ. 1548) ರಲ್ಲಿನ ವಿಜಯನಗರದ ಅರಸ ಸದಾಶಿವರಾಯನ ಕಾಲದ ಶಾಸನವೊಂದು ವೇಣುಕಲ್ಲುಗುಡ್ಡ ಗ್ರಾಮದಲ್ಲಿದೆ. ಮಹಾ ಮಂಡಲೇಶ್ವರನಾದ ಪ್ರತಿಕೊಂಡ ಕೊಂಡಯ್ಯದೇವನು ಗುಳ್ಯ ಎಂಬ ಹಳ್ಳದಲ್ಲಿದ್ದ ಹಾಳಾದ ಕೆರೆಯೊಂದನ್ನು ಜೀರ್ಣೋದ್ಧಾರ ಮಾಡಿಸಿ, ಆ ಕೆರೆಯ ನೀರಿನಿಂದ ಭತ್ತ ಬೆಳೆಯಲು ಅನುಕೂಲವಾಗುವಂತೆ ಕೆರೆತೂಬುಗಳನ್ನು ಕಟ್ಟಿಸಿ

ಕೊಟ್ಟಿರುವುದು ತಿಳಿಯುತ್ತದೆ. ಶಾಸನದ ಅಂತ್ಯದಲ್ಲಿ ಇದನ್ನು ನಾಶಮಾಡಿದರೆ, ಅಥವಾ ಹಾಳು ಮಾಡಿದರೆ ನಾಯಮಾಂಸ ತಿಂದಂತೆ ಎಂಬ ಶಾಪಾಶಯದ ಮಾತು ಉಲ್ಲೇಖಗೊಂಡಿದೆ. (35)

ಶಾಲಿವಾಹನ ಶಕವರುಷ 1475 (ಕ್ರಿ. ಶ. 1553) ರಲ್ಲಿನ ವಿಜಯನಗರದ ಅರಸ ಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ ಧರ್ಮಶಾಸನವೊಂದು ವೇಣುಕಲ್ಲುಗುಡ್ಡ ಗ್ರಾಮದ ಬಸವಣ್ಣನ ಗುಡಿಯ ಹತ್ತಿರ ಇದೆ. ಮಹಾ ಮಂಡಲೇಶ್ವರನಾದ ಅಯ್ಯಣ ವೀರಲಿಂಗದೇವರು, ಗುಡ್ಡದ ಸೀಮೆಯ ಗೌಡರು, ಗ್ರಾಮಸ್ಥರು ಸೇರಿ ಗೋಸಿಕೆರೆಯ ಲಿಂಗದ ವೀರಯ್ಯನ ಮಗ ಅಯನ ಮದಕರೆ ಲಿಂಗವೀರಯ್ಯನಿಗೆ ಹೊಲಮಾನ್ಯವನ್ನು ದಾನಕೊಟ್ಟ ವಿಷಯವಿದೆ. ಅಲ್ಲದೆ ಲಿಂಗದ ವೀರಯ್ಯನವರಿಗೆ ಈ ಗುಡ್ಡದ ಸೀಮೆಗೆ ಸೇರಿದ ಪ್ರತಿ ಹಳ್ಳಿಯಲ್ಲಿ ವರ್ಷದ 12 ತಿಂಗಳು 2 ವರಹ, 4 ಖ ಭತ್ತವನ್ನು ಮತ್ತು ದೇವರ ಹೊಲದಲ್ಲಿ ಬೆಳೆದ 1 ಖ ಭತ್ತವನ್ನು ಜೀವನಪರ್ಯಂತ ನೀಡುವುದು. ಜೊತೆಗೆ ಈ ಶಾಸನವನ್ನು ಬರೆಸಿ ದಂದಿನಿಂದ ಈ ದಾನವನ್ನು ಅವರು ವಂಶಪಾರಂಪರ್ಯವಾಗಿ ಅನುಭವಿಸಬಹು ದೆಂಬ ಉಲ್ಲೇಖ ಈ ಶಾಸನದಲ್ಲಿದೆ.(34)

ಶಾಲಿವಾಹನ ಶಕವರುಷ 1470 (ಕ್ರಿ. ಶ. 1554) ರಲ್ಲಿನ ವಿಜಯನಗರದ ಅರಸ ವೀರ ಪ್ರತಾಪ ಸದಾಶಿವರಾಯನ ಕಾಲದ ಶಾಸನವೊಂದು ಉಪ್ಪಾರಹಳ್ಳಿಯ ಪಟೇಲ ರಂಗಣ್ಣನ ಹೊಲದಲ್ಲಿ ಸಿಕ್ಕಿದೆ. ಅಂಬಲಿಗೆರೆಯ ಶ್ರೀ ತಿರುವೆಂಗಳನಾಥ ದೇವರಿಗೆ ಮಹಾಮಂಡಲೇಶ್ವರ ಅಪ್ರತಿಕಮಲ್ಲ ಸೂರ್ಯವಂಶಾಧೀಶ್ವರರಾದ ಮನೋಬಲ – ಅಹೋಬಲ ರಾಜಗಳ ಮೊಮ್ಮಗ ವೆಂಗಳರಾಜರುಗಳ ಪುತ್ರ ಪಾಪ್ಪೈದೇವ ಚೋಳ ಮಹಾಅರಸುಗಳು, ಶ್ರೀಮಾನ್ ಮಹಾಮಂಡಲೇಶ್ವರ ರಾಮರಾಜ ವಿಠಲೈದೇವ ಮಹಾ ಅರಸುಗಳ ಕುಮಾರ ತಿರುಮಲರಾಜರುಗಳು ತಮಗೆ ಉಂಬಳಿಯಾಗಿ ನಿಲಿಸಿದ ರಾಯದುರ್ಗ ರಾಜ್ಯದ ಗೋಸೀಕೆರೆ ನಾಡೊಳಗಣ ಹರತಿ ಸ್ತಳಕ್ಕೆ ಸೇರಿದ ಉಪರಿಕರಹಳ್ಳಿಯನ್ನು ಪ್ರತಿನಾಮವಾದ ವೆಂಗಳಾಪುರ ಗ್ರಾಮವನ್ನು ತಮ್ಮ ತಂದೆ ಮತ್ತು ವೆಂಗಳ ರಾಜರುಗಳಿಗೆ ಪುಣ್ಯವಾಗಲೆಂದು, ಆ ಗ್ರಾಮಕ್ಕೆ ಸೇರಿದ ಸಮಸ್ತವನ್ನು ಆ ಗ್ರಾಮದ ಸುಂಕವನ್ನು ತಿರುವೆಂಗಳನಾಥ ದೇವರಿಗೆ ಉಂಬಳಿಯಾಗಿ ನೀಡಿದ ಮಾಹಿತಿ ಈ ಶಾಸನದಲ್ಲಿದೆ. (82)

ಶಾಲಿವಾಹನ ಶಕವರುಷ 1496 (ಕ್ರಿ. ಶ. 1573)ರಲ್ಲಿನ ವಿಜಯನಗರದ ಅರಸ ವೀರಪ್ರತಾಪ ಸದಾಶಿವರಾಯನ ಕಾಲದ ಶಾಸನವೊಂದು ಸಿದ್ಲಯ್ಯನ ಕೋಟೆ ಗ್ರಾಮದ ಓಲೆಗಾರ ಸಿದ್ಧಯ್ಯನ ಹೊಲದಲ್ಲಿ ಸಿಕ್ಕಿದೆ. ಗ್ರಾಮದ ಗೌಡ,

ಶಾನುಭೋಗ, ಗ್ರಾಮಸ್ಥರೆಲ್ಲಾ ಸೇರಿ ಹರತಿಯ ಮಹಾನಾಯಕಾಚಾರ್ಯ ಪದಣನಾಯಕರಿಗೆ ಕೆರೆಕಟ್ಟಲು ಮನವಿ ಮಾಡಿದ್ದರಿಂದ, ಅದರಂತೆ ನಾಯಕರು ಸಿಡ್ಲಯ್ಯನಕೋಟೆ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಕೆರೆಯನ್ನು ಕಟ್ಟಿಸಿರುವ ಮಾಹಿತಿ ಈ ಶಾಸನದಲ್ಲಿದೆ. (25)

ಶಾಲಿವಾಹನ ಶಕವರುಷ 1510 (ಕ್ರಿ. ಶ. 1588)ರಲ್ಲಿನ ವಿಜಯನಗರ ಸಾಮ್ರಾಜ್ಯದ ವೀರಪ್ರತಾಪ ವೆಂಕಟಪತಿರಾಯರ ಕಾಲದ ತಾಮ್ರ ಶಾಸನವೊಂದು ಮಸ್ಕಲ್ ಗ್ರಾಮದ ಶ್ಯಾನುಭೋಗ ಸಿದ್ಧರಾಮಯ್ಯನ ಮನೆಯಲ್ಲಿ ಲಭ್ಯವಿದೆ. ಅದರಲ್ಲಿನಂತೆ ಮಹಾಮಂಡಲೇಶ್ವರರಾದ ಕೆಂಚಣ್ಣನಾಯಕರು ಗ್ರಾಮ ಸೇವಕ ಕಾರೆವೀರಯ್ಯನ ಸೇವೆಯನ್ನು, ಆತನ ಪೂರ್ವ ವೃತ್ತಾಂತವನ್ನು ತಿಳಿದು, ಕಾರೆ ವೀರಯ್ಯ ಸೇವೆಗಳನ್ನು ಮೆಚ್ಚಿ, ಶಾನುಭೋಗ ತಿಪ್ಪರಸಯ್ಯಗಳಿಂದ ಬರೆದು ಕೊಟ್ಟ ದಾನಪತ್ರ, ಅದರ ವಿವರಣೆ ಇಂತಿದೆ.(88)

ಹಿರಿಯೂರು ಸ್ಥಳದ 53 ಗ್ರಾಮದ 1 ಖ

ಬಗ್ಗನಡು ಸ್ಥಳದ 11 ಗ್ರಾಮದ 1 ಖ

ಹೊಸೂರು ಸ್ಥಳದ 21 ಗ್ರಾಮದ 1 ಖ

ಗೌಡನಹಳ್ಳಿ ಸ್ಥಳದ 10 ಗ್ರಾಮದ 1 ಖ

ಕುರುಬರಹಳ್ಳಿ ಸ್ಥಳದ 10 ಗ್ರಾಮದ 1 ಖ

ಲಕ್ಕಿಹಳ್ಳಿ ಸ್ಥಳದ 7 ಗ್ರಾಮದ 1 ಖ

ಬಸಾಪಟ್ಟಣ ಸ್ಥಳದ 14 ಗ್ರಾಮದ 1 ಖ

ಅರಳಿಹಳ್ಳಿ ಸ್ಥಳದ 3 ಗ್ರಾಮದ 1 ಖ

ಪವನಿಧಿ ಸ್ಥಳದ 12 ಗ್ರಾಮದ 1 ಖ

ಬುಕ್ಕಾಪಟ್ಟಣ ಸ್ಥಳದ 26 ಗ್ರಾಮದ 1 ಖ

ಇಕ್ಕನೂರು ಸ್ಥಳದ 11 ಗ್ರಾಮದ 1 ಖ

ಒಟ್ಟು 185 ಗ್ರಾಮಗಳನ್ನು ಒಳಗೊಂಡ 11 ಸ್ಥಳಗಳಿಂದ ಒಂದೊಂದು ಕಟ್ಟೆಯನ್ನು (ಭತ್ತ ಬೆಳೆಯುವ) ದಾನವಾಗಿ ನೀಡಲಾಗಿದೆ. ಈ ದಾನವನ್ನು ಕಾರೆ ವೀರಯ್ಯನ ವಂಶಸ್ಥರು ವಂಶಪಾರಂಪರ್ಯವಾಗಿ ಅನುಭವಿಸತಕ್ಕದೆಂದು ಆದೇಶಿಸುವ ಶಾಸನ ಇದಾಗಿದೆ.

ಶಾಲಿವಾಹನ ಶಕವರುಷ 1514 (ಕ್ರಿ. ಶ. 1592)ರಲ್ಲಿನ ವಿಜಯನಗರದ ಅರಸ ವೀರಪ್ರತಾಪ ವೆಂಕಟಪತಿ ಮಹಾರಾಯರ ಕಾಲದ ಶಾಸನವೊಂದು

ಹೇಮದಳದ ಬಸವಣ್ಣನ ಗುಡಿಯ ಹತ್ತಿರ ಇದೆ. ಇದರಲ್ಲಿ ಹರತಿಪಾಳೇಗಾರರ ವಂಶಾವಳಿಯ ಮಾಹಿತಿಯ ಜೊತೆಗೆ ಹರತಿ ಪಾಳೇಗಾರರ ಗುರುಪರಂಪರೆಯ ಮಾಹಿತಿಯೂ ಉಲ್ಲೇಖವಾಗಿದೆ. ರಾಯದುರ್ಗದ ವೇಂಟೆಯಕೆ ಸಲುವ ಹರತಿ ಸ್ಥಳದೊಳಗಣ ಹೆಂಮಡಿಹಾಳು (ಹೇಮದಳ)ಎಂಬ ಗ್ರಾಮವನ್ನು ಹರತಿನಾಯಕ ಚಿಕ್ಕರಂಗಪ್ಪನಾಯಕನು ತಮ್ಮ ಕುಲಗುರುಗಳಾದ ಗೋಸೀಕೆರೆಯ ಗುರುಗಳಾದ ಹೊಟೆಈಶ್ವರಯ್ಯಗಳ ಸಿಂಹಾಸನ ಮಠಕ್ಕೆ "ಅಮೃತಭೋಗ ಪಡಿಗೆ" ಸಲುಹ ಬೇಕೆಂದು ಮಂತ್ರೀಜನಸಮೇತನಾಗಿ ದಾನಕೊಟ್ಟ ಮಾಹಿತಿ ಇದೆ. ಹೆಂಮಡಿಹಾಳು ಗ್ರಾಮದ ಕೆರೆ ಕುಂಟಿ ಕಾಲುವೆ, ಕಾಡು, ಅಡವಿ, ಹುಲ್ಲು ಮೊದಲಾದ ಸಮಸ್ತ ಭೂ ಪ್ರದೇಶವನ್ನು ದಾನ ನೀಡಿದ ವಿಷಯವಿದೆ.

ಸದಾಶಿವರಾಯನ ಕಾಲದ ತೆಲುಗು ಶಾಸನವೊಂದು ಜವನಗೊಂಡನ ಹಳ್ಳಿ ಹೋಬಳಿಯ ರಂಗಸಮುದ್ರ ಗ್ರಾಮದಲ್ಲಿ ದೊರೆತಿದ್ದು, ಪರಮಹಂಸ, ಪರಿವ್ರಾಜಾಕಾಚಾರ್ಯ, ವೇದಾಂತ ಪಂಡಿತರಾದ ರಾಮಾನುಜ *ಜೀಯಲು?* ಅವರಿಗೆ ಅರಕೆರೆ ಎಂಬ ಗ್ರಾಮವನ್ನು ದಾನ ನೀಡಿದ ಧರ್ಮಶಾಸನ ಇದಾಗಿದೆ. (75)

ಹಿರಿಯೂರು ತಿರುಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸದಾಶಿವರಾಯನ ಕಾಲದ ಎರಡು ಶಾಸನಗಳು ಲಭ್ಯವಿದ್ದು, ಪಕ್ಕದ ವೆಂಕಟರಮಣ ದೇವಸ್ಥಾನದಲ್ಲಿ ಸದಾಶಿವರಾಯನ ಕಾಲದ ಮತ್ತೊಂದು ಶಾಸನ ಲಭ್ಯವಿದೆ. ಹಾಗೆಯೇ ಕೃಷ್ಣದೇವರಾಯನ ಕಾಲದ ಶಾಸನವೊಂದು ಬಬ್ಬೂರಿನಲ್ಲಿದ್ದು, ಇವುಗಳಲ್ಲಿನ ಮಾಹಿತಿ ಅಸ್ಪಷ್ಟವಾಗಿದೆ.

ಹೀಗೆ ಈ ಪ್ರದೇಶದಲ್ಲಿ ವಿಜಯನಗರ ಕಾಲದ ಪುರಾವೆಗಳು (ದೇವಾಲಯ, ಶಾಸನ, ಕೆರೆ, ಕಟ್ಟೆ, ಕಾಲುವೆ) ಮಹತ್ವದ್ದಾಗಿದ್ದು, ಇತಿಹಾಸ ಪುನಾರಚನೆಗೆ ಸಹಾಯವಾಗಿವೆ.

ಆಧಾರ ಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕ* : ಸಂಪುಟ: 11 (ರೈಸ್ ಆವೃತ್ತಿ)
2. *ಇತಿಹಾಸ ದರ್ಶನ* ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡಮಿ
3. *Chitradurga Gazetteer* 1967. Ed: B.N. Sathyan.

೫. ಜಗಳೂರು ತಾಲ್ಲೂಕಿನ ವಿಜಯನಗರ ಕಾಲದ ಶಾಸನಗಳು

ಡಾ. ಬಿ. ಸುರೇಶ್

ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿರುವ ಜಗಳೂರು ತಾಲ್ಲೂಕು ಪ್ರದೇಶವು ಈ ಹಿಂದೆ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಪ್ರದೇಶವಾಗಿತ್ತು. ಕ್ರಿ. ಶ. 1997 ನವೆಂಬರ್ 1 ರಂದು ದಾವಣಗೆರೆ ಜಿಲ್ಲೆಯನ್ನು ಹೊಸದಾಗಿ ರಚಿಸಿ ಜಗಳೂರು ತಾಲ್ಲೂಕು ಪ್ರದೇಶವನ್ನು ದಾವಣಗೆರೆ ಜಿಲ್ಲೆಗೆ ಸೇರ್ಪಡೆ ಮಾಡಲಾಗಿದೆ. ಜಗಳೂರು ತಾಲ್ಲೂಕು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಸುಮಾರು 50 ಕಿ. ಮೀ ದೂರದಲ್ಲಿದೆ.

ಈ ಪ್ರದೇಶವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದಿದ್ದು, ಬೃಹತ್ ಶಿಲಾಯುಗ ಕಾಲದಿಂದಲೂ ಇಲ್ಲಿ ಜನವಸತಿ ಇತ್ತು ಎನ್ನುವುದಕ್ಕೆ ಅಲ್ಲಲ್ಲಿ ಕುರುಹುಗಳು ದೊರೆತಿವೆ. ಹಾಗೂ ಈ ಪ್ರದೇಶದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ರಚನೆಯಾದ ಅನೇಕ ದೇವಾಲಯಗಳು, ಶಿಲ್ಪಗಳು, ಶಾಸನಗಳು, ಕೋಟೆ-ಕೊತ್ತಲಗಳು ಇಲ್ಲಿಯ ಸಾಂಸ್ಕೃತಿಕ ಹಿರಿಮೆಯನ್ನು ತೋರುತ್ತವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ರಾಷ್ಟ್ರಕೂಟರ ಕಾಲದಿಂದ ವಿಜಯನಗರ, ವಿಜಯನಗರೋತ್ತರ ಕಾಲದವರೆಗೆ ಸುಮಾರು 70ಕ್ಕೂ ಅಧಿಕ ಶಾಸನಗಳು ಲಭ್ಯವಿವೆ. ಅವು *ಎ. ಕ ಸಂಪುಟ* – 11, ಡಾ. ಬಿ. ರಾಜಶೇಖರಪ್ಪರವರ *ಇತಿಹಾಸ ಕಥನ*, ಇತ್ಯಾದಿ ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಪ್ರಸ್ತುತ ಲಭ್ಯವಿರುವ ಶಾಸನಗಳಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಸುಮಾರು 15ಕ್ಕೂ ಅಧಿಕ ಶಾಸನಗಳನ್ನು ಗುರುತಿಸಲಾಗಿದ್ದು, ಅವು ಈ ಮುಂದಿನಂತಿವೆ.

ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ದೊರೆಯುವ ಮೊದಲ ಶಾಸನವೆಂದರೆ, ಗುತ್ತಿದುರ್ಗ ಶಾಸನ. ಈ ಶಾಸನವು ಕ್ರಿ. ಶ. 1395ರಲ್ಲಿ ರಚನೆಯಾಗಿದ್ದು, ಬುಕ್ಕರಾಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಗುತ್ತಿದುರ್ಗದ ಭೈರವೇಶ್ವರ ದೇವಾಲಯದ ಮುಂದೆ ಪಾದಶಿಲ್ಪವೊಂದರ ಪೀಠದಲ್ಲಿದ್ದು, ಬುಕ್ಕರಾಯನ ಗಜಸೈನ್ಯಾಧಿಪತಿಯಾಗಿದ್ದ ಮಾಯನಾಯಕ ಎಂಬುವವನ ಮಕ್ಕಳು ಕೊಮಾರಬಲ್ಲಪ್ಪ ಮತ್ತು ಅವನ ತಮ್ಮ ಬಿಮ್ಮಣ್ಣ ಇಬ್ಬರೂ ಸೇರಿ ಈ ಭೈರವದೇವರ ಪಾದಪ್ರತಿಷ್ಠೆ ಮಾಡಿಸಿದರು ಎನ್ನುವ ವಿಷಯ ತಿಳಿದುಬರುತ್ತದೆ. ಹಾಗೆಯೇ ಶಾಸನದ ಕೊನೆಯಲ್ಲಿ ಲಿಪಿಕಾರರಾದ ಮಲ್ಲೋಜ ಮತ್ತು ಗೋಪೋಜರ ಹೆಸರುಗಳು ಕಂಡುಬರುತ್ತವೆ.

ರಾಕ್ಷಸರನ್ನು ಸಂಹಾರ ಮಾಡಿದ ಲುಂಕೆಯ ಭೈರವ (ದೇವರು) ಹಳುವ ದಂಡೆಯ ಸೀಮೆಯ ಹುತ್ತ (ಗುತ್ತಿದುರ್ಗ)ದಲ್ಲಿ ಪ್ರತ್ಯಕ್ಷವಾಗಿದ್ದನೆಂದು ಶಾಸನವು ತಿಳಿಸುತ್ತದೆ. ಬುಕ್ಕರಾಯನ ಕಾಲಾವಧಿಯಲ್ಲಿ ಗಜಸೈನ್ಯಾಧಿಪತಿಯಾಗಿದ್ದ ಮಾಯನಾಯಕ ಮತ್ತು ಆತನ ಮಕ್ಕಳು ಮೂಲತಃ ಈ ಸ್ಥಳಕ್ಕೆ ಸೇರಿದವರಾಗಿರಬೇಕು.

ಕೃಷ್ಣದೇವರಾಯನ ಕಾಲಕ್ಕೆ ಸೇರಿದ ನಾಲ್ಕೈದು ಶಾಸನಗಳು ಈ ಪ್ರದೇಶದಲ್ಲಿದ್ದು, ಅವುಗಳಲ್ಲಿ ನಿಬಗೂರಿನ ಆಂಜನೇಯ ದೇವಾಲಯದ ಪಡಸಾಲೆಯಲ್ಲಿರುವ ಶಾಸನವು ಕ್ರಿ. ಶ. 1526 (1448)ರಲ್ಲಿ ರಚನೆಯಾಗಿದೆ. ಕೃಷ್ಣದೇವರಾಯನ ಕಾಲಾವಧಿಯಲ್ಲಿ ಜಗಳೂರು ಸೀಮೆಯ ನಾಯಕನಾಗಿದ್ದ ಅರೆಯ ಕ್ಷತ್ರಿಯನಾದ ವಿಶ್ವನಾಥರಾವುತನ ಮಗ ರಂಗನಾಥ ರಾವುತ ಎನ್ನುವವನು, ಜಮದಗ್ನಿ ಋಷಿಗಳ ಆಶ್ರಯವಿದ್ದ ಜಾಗ ಎಂದು ಹೆಸರಾಗಿದ್ದ ಹನತೊರೆಯ ತೀರದ ಶ್ರೀಕಲ್ಲಿನಾಥ ಪುರವರಾಧೀಶ್ವರ (ಕಲ್ಲೇದೇವರಪುರ?) ಕಲ್ಲಿನಾಥ ದೇವರ ಸನ್ನಿಧಿಯಲ್ಲಿ ದೊರೆ ಕೃಷ್ಣದೇವರಾಯನಿಗೆ ಧರ್ಮವಾಗಬೇಕೆಂದು ಬ್ರಾಹ್ಮಣಭೋಜನ ಷಡ್‌ದರ್ಶನ ಮೊದಲಾದವರಿಗೆ ಸತ್ರ (ಛತ್ರ) ನಡೆಸುವುದಕ್ಕೆ ನಿಬಗೂರು ಗ್ರಾಮವನ್ನು ಧಾರೆಯೆರೆದುಕೊಟ್ಟನು ಎನ್ನುವ ವಿವರವಿದೆ. ಹಾಗೆಯೇ ದಾನ ನೀಡಿದ ನಿಬಗೂರು ಗ್ರಾಮದ ಚತುಸ್ಸೀಮೆಯನ್ನು ಸಹ ಈ ಶಾಸನದಲ್ಲಿ ಹೇಳಲಾಗಿದೆ.

ಮೂಡಣ ದಿಕ್ಕಿನಲ್ಲಿ – ಕಟ್ಟಿಗೆಹಳ್ಳಿ ಹೊಲಮೇರೆ

ಪಡುವಣ ದಿಕ್ಕಿನಲ್ಲಿ – ಬಿದರಕೆರೆಯ ಹೊಲಮೇರೆ

ಬಡಗಣ ದಿಕ್ಕಿನಲ್ಲಿ – ಮಾಕುಂಟೆ ಹೊಲಮೇರೆ

ತೆಂಕಣ ದಿಕ್ಕಿನಲ್ಲಿ – ಕೋಡಿಹಳ್ಳಿಯ ಹೊಲಮೇರೆ.

ಕೃಷ್ಣದೇವರಾಯನಿಗೆ ಸಂಬಂಧಿಸಿದ ಮತ್ತೊಂದು ಶಾಸನ ಬಿಳಿಚೋಡು ಗ್ರಾಮದ ರಾಮೇಶ್ವರ ದೇವಾಲಯದ ಬಾಗಿಲಿನ ಪೂರ್ವಭಾಗದಲ್ಲಿದೆ. ವಿಜಯನಗರ ಅರಸ ಕೃಷ್ಣ(ದೇವ)ರಾಯನಿಗೆ ಪುಣ್ಯವಾಗಲೆಂದು ಈ ಪ್ರದೇಶದ ಭಂಡಾರದ ತಿಮ್ಮಯ್ಯನವರು ಬಿಳಿಚೋಡು ಮೂಲಸ್ಥಾನದ ರಾಮೇಯ ದೇವರಿಗೆ ಕೋಟೆ ಗ್ರಾಮವನ್ನು ದಾನವಾಗಿ ಕೊಟ್ಟನೆಂದು ತಿಳಿಸುತ್ತದೆ. ಈ ಶಾಸನದಲ್ಲಿ ಬಿಳಿಚೋಡು ಗ್ರಾಮವನ್ನು ಬಿಳಿಚೇಡು ಎಂದು ನಮೂದಿಸಲಾಗಿದೆ.

ಕೃಷ್ಣದೇವರಾಯನಿಗೆ ಸಂಬಂಧಿಸಿದ ಮತ್ತೊಂದು ಶಾಸನ ಬಿಳಿಚೋಡು ಗ್ರಾಮದ ಕೋಟೆಯ ಬಳಿಯಿದ್ದು, ಶಾಸನದ ಮೇಲ್ಭಾಗ ಭಗ್ನಗೊಂಡಿದ್ದು, ಕೆಳಗಿನ ಅರ್ಧಭಾಗ ಮಾತ್ರ ಸುಸ್ಥಿತಿಯಲ್ಲಿವೆ. ಕೃಷ್ಣರಾಯ ಮಹಾರಾಯರ ಅಠಾವಣಿಯ ಚೆನ್ನರಸರಿಗೆ ಸಹಸ್ರಗೋದಾನ, ಕೋಟಿ ಕನ್ಯಾದಾನ, ಅಶ್ವಮೇಧಯಾಗ,

ಕೋಟಿಯಜ್ಞದ ಫಲವಾಗಿ ಶಾಸನವನ್ನು ಹಾಕಿಸಿರುವನು. ಶಾಸನದ ಉದ್ದೇಶ ಮದುವೆಯ ಸುಂಕವ ಬಿಡಿಸಿದುದೇ ಆಗಿದೆ.

ಕೃಷ್ಣಪುರ ಗ್ರಾಮದಲ್ಲಿರುವ ಶಾಸನ ಕ್ರಿ. ಶ. 1550ರಲ್ಲಿ ರಚನೆಯಾಗಿದ್ದು, ವಿಜಯನಗರ ಅರಸ ಸದಾಶಿವರಾಯನ ಕಾಲಾವಧಿಗೆ ಸಂಬಂಧಿಸಿದ್ದಾಗಿದೆ. ಹಸ್ತಿನಾವತಿಯ (ಆನೆಗುಂದಿ) ವಳಿತಕ್ಕೆ (ಭಾಗಕ್ಕೆ) ಪಾಂಡ್ಯನಾಡಿನ ಉಚ್ಚಂಗಿ ವೇಠೆಗೆ (ವಿಭಾಗ) ಸೇರಿದ ಬಿಳಿಚೋಡು ಸೀಮೆಯ ಹೊಸಕೆರೆಯ ಪ್ರತಿನಾಮ ವಾದಂಥ ಕೃಷ್ಣಸಮುದ್ರದ ಹಳ್ಳಿಗಳು ಗೌರಾಪುರ ಹಳ್ಳಿಗಳು – 17 ಸಹಾಸರ್ವ ಮಾನ್ಯದ ಅಗ್ರಹಾರವಾಗಿ ಬಿಟ್ಟಿದ್ದನ್ನು ನಿರೂಪಿಸುತ್ತದೆ. ಈ ಶಾಸನದ ಕರ್ತೃ ಕಂದಾಚಾರದ ಲಕ್ಷ್ಮಣಭಟ್ಟರು.

ಬಿಳಿಚೋಡು ಗ್ರಾಮದ ರಾಮೇಶ್ವರ ದೇವಾಲಯದ ಬಾಗಿಲ ಮುಂದಿನ ಪಡಸಾಲೆಯ ಪೂರ್ವದ ಕಂಬದಲ್ಲಿರುವ ಶಾಸನದ ಕಾಲ ಕ್ರಿ. ಶ. 1553 (1475). ಈ ಶಾಸನವು (ಬೇಲೂರು) ಕೃಷ್ಣಪ್ಪ ನಾಯಕನ ಕಾರ್ಯಕರ್ತನಾದ ದಮ್ಮಪ್ಪ ನಾಯಕನೆಂಬುವನು ಕುರುಬರಿಗೆ, ಕುರಿಯ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಬಿಟ್ಟಿದ್ದನ್ನು ತಿಳಿಸುತ್ತದೆ.

ಈ ಪ್ರದೇಶದ ಮತ್ತೆರಡು ಶಾಸನಗಳು ವಿಜಯನಗರದ ಆಳ್ವಿಕೆಯ ಕೊನೆಕಾಲಕ್ಕೆ ಸೇರಿದ್ದು, ಅವುಗಳಲ್ಲಿ ರೆಡ್ಡಿಹಳ್ಳಿ ಗ್ರಾಮದ ಆಂಜನೇಯ ದೇವಾಲಯದ ಹತ್ತಿರವಿರುವ ಒಂದು ಶಾಸನವು ಕ್ರಿ. ಶ. 1567ರಲ್ಲಿ ರಚನೆಗೊಂಡಿದ್ದು, ಸ್ಥಳೀಯ ಬರಮಪ್ಪನವರು (ಕಾಮಗೇತಿ ಕಸ್ತೂರಿ ರಂಗಪ್ಪ ನಾಯಕರ ದಳವಾಯಿ) ಜಗಲೂರ ವಿರಕ್ತಮಠಕ್ಕೆ ಹಲವಾರು ಗ್ರಾಮಗಳ ದಾನ ನೀಡಿದ ಉಲ್ಲೇಖವಿದೆ.

ಕೊಟದಗುಡ್ಡದ (48) ವೀರಭದ್ರ ದೇವಾಲಯದ ಹಿಂದಿರುವ ಶಾಸನವು ಕ್ರಿ. ಶ. 1574 (1496)ರ ಕಾಲಾವಧಿಯಲ್ಲಿ ರಚನೆಗೊಂಡಿದ್ದು ವಾರಣಾಸಿಯ ಸಿದ್ಧಭಿಕ್ಷಾವರ್ತಿ ಒಡೆಯರು, ಭದ್ರದೇವ ಒಡೆಯರು, ಅರವತ್ತೂಕಾಲ ಸಂಬಂಧ ಸದಾಶಿವಯೋಗಿ ಒಡೆಯರ ಮಕ್ಕಳು ಚನ್ನಯೋಗಿ ಒಡೆಯ ಕೊಟದ ವೀರಭದ್ರ ದೇವರಿಗೆ ಸಿಡುಬನಾಯಕ ಭಕ್ತಿಯಿಂದ ನಮಸ್ಕರಿಸಿ ನಂದಾದೇವಿಗೆ ಕೊಟ್ಟಿದ ಸಲುವ ಗಣಾಚಾರದ ಹೊಂನನ್ನೂ ನಿತ್ಯ ನೈವೇದ್ಯಕ್ಕೆ ದಾನ ನೀಡಿದ ಉಲ್ಲೇಖವಿದೆ.

ಈ ಶಾಸನಗಳಷ್ಟೇ ಅಲ್ಲದೆ, ಇತ್ತೀಚೆಗೆ ಈ ಪ್ರದೇಶದಲ್ಲಿ ಎರಡು ಹೊಸ ಶಾಸನಗಳನ್ನು ಶೋಧಿಸಲಾಗಿದ್ದು, ಅವುಗಳಲ್ಲಿ ಕಾಲಮಾನದ ಉಲ್ಲೇಖವಿಲ್ಲದಿದ್ದರೂ ಲಿಪಿಯ ದೃಷ್ಟಿಯಿಂದ ಅವುಗಳನ್ನು ವಿಜಯನಗರ, ವಿಜಯನಗರೋತ್ತರ ಕಾಲಕ್ಕೆ ಸೇರಿಸಬಹುದಾಗಿದೆ. ಅವುಗಳಲ್ಲಿ ಒಂದು ಶಾಸನವು ಅಣಬೂರು ಗ್ರಾಮದ ಹೊರವಲಯದ ಜಮೀನೊಂದರಲ್ಲಿ ದೊರೆತಿದ್ದು, ಅದರಲ್ಲಿ ಜಗಳೂರು ಪ್ರದೇಶದ

ಉಲ್ಲೇಖವಿದ್ದು, ಬಸಪ್ಪ ನಾಯಕನ ಮಗ ಸುಂದಯನ ಉಲ್ಲೇಖವಿದೆ. ಮತ್ತೊಂದು ಶಾಸನವು ಹೊಸಹಟ್ಟಿಯ ಜಮೀನೊಂದರಲ್ಲಿ ದೊರೆತಿದ್ದು, ಅದರಲ್ಲಿಯೂ ಜಗಳೂರಿನ ಉಲ್ಲೇಖವಿದೆ. ಹೀಗೆ ಜಗಳೂರು ತಾಲ್ಲೂಕಿನ ವಿಜಯನಗರ ಕಾಲದ ಶಾಸನಗಳಲ್ಲಿ ವಿವಿಧ ಸಾಂಸ್ಕೃತಿಕ ಅಂಶಗಳು ಕಂಡುಬರುತ್ತದೆ.

ಆಕರ ಗ್ರಂಥಗಳು

1. ಡಾ. ಬಿ. ರಾಜಶೇಖರಪ್ಪ – *ಇತಿಹಾಸ ಕಥನ*, ಸಿ. ವಿ. ಜಿ. ಪ್ರಕಾಶನ, ಬೆಂಗಳೂರು, 1996
2. ಡಾ. ಬಿ. ಸುರೇಶ, *ಚಿತ್ರದುರ್ಗ– ದಾವಣಗೆರೆ ಜಿಲ್ಲೆಗಳ ದೇವಾಲಯಗಳು*, ಸಂಶೋಧನಾ ಪ್ರಕಾಶನ, ಬಾಲೇನಹಳ್ಳಿ, 2008
3. B. N. Sathyan – *Chitradurga District Gazetteer*, 1967
4. *Epigraphia Carnatica*, Vol. 11

೬. ಕೃಷ್ಣದೇವರಾಯನ ಕಾಲದ ಬೆಂಗಳೂರು ಜಿಲ್ಲೆಯ ದಾನಶಾಸನಗಳು

ಎಚ್. ಜಯಮ್ಮ ಕರಿಯಣ್ಣ

ವಿಜಯನಗರ ಸಾಮ್ರಾಜ್ಯವು ಕ್ರಿ. ಶ. 1336ರಿಂದ ಕ್ರಿ. ಶ. 1680ರವರೆಗೆ ಅಸ್ತಿತ್ವದಲ್ಲಿದ್ದಿತು. *ಈ ಸಾಮ್ರಾಜ್ಯವು ಮೊದಲ ಮತ್ತು ಎರಡನೇ ವಂಶಗಳ ಆಳ್ವಿಕೆಯ ಕಾಲದಲ್ಲಿ ವಿಸ್ತಾರವಾಗಿ ಬೆಳೆಯತೊಡಗಿತು.* ತುಳುವರ ಆಳ್ವಿಕೆಯ ಕಾಲದಲ್ಲಿ ಅಂದರೆ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಔನ್ನತ್ಯವನ್ನು ಪಡೆದು ವಿಶ್ವದಾದ್ಯಂತ ಬೆಳಗಿತು. ಕೃಷ್ಣದೇವರಾಯನನಂತರ ವಿಜಯನಗರ ಸಾಮ್ರಾಜ್ಯದ ಪೂರ್ವ ಮತ್ತು ಉತ್ತರ ಭಾಗಗಳು ಕೈತಪ್ಪಲಾರಂಭಿಸಿದವು. ಕ್ರಿ. ಶ. 1565ರಲ್ಲಿ ನಡೆದ ರಕ್ಕಸ ತಂಗಡಿ ಯುದ್ಧದಲ್ಲಿ ಮುಸಲ್ಮಾನರಿಂದ ಸೋಲನ್ನು ಅನುಭವಿಸಿತು. ಕಡೆಗೆ ಕ್ರಿ. ಶ. 1680ರಲ್ಲಿ ತನ್ನ ಅಂತ್ಯವನ್ನು ಕಂಡಿತು.

ಬೆಂಗಳೂರು ಜಿಲ್ಲೆಗೆ ಕೃಷ್ಣದೇವರಾಯನ ಕಾಲದಲ್ಲಿ ನೀಡಿದ ದಾನ ದತ್ತಿ ಕೊಡುಗೆಗಳ ಬಗ್ಗೆ ಈ ಲೇಖನದಲ್ಲಿ ಗಮನಿಸಲಾಗಿದೆ. ಕ್ರಿ. ಶ. 1509ರಿಂದ ಕ್ರಿ ಶ 1530ರೊಳಗಿನ ಶಾಸನಗಳನ್ನು ಆಧರಿಸಿ ಈ ಲೇಖನವನ್ನು ಬರೆಯಲಾಗಿದೆ. ಭಂಡಿ ನಡೆಗೆ, ಅಗ್ರಹಾರವನ್ನಾಗಿ, ಪುನರ್ ದತ್ತಿಯನ್ನಾಗಿ ನೀಡಿದ ಭೂದಾನಗಳ ಜೊತೆಗೆ ದೇವಾಲಯದಲ್ಲಿ ದೇವರ ಸೇವೆಗಳಾದ ಅಂಗ-ಭೋಗ-ರಂಗ-ಭೋಗಗಳು ನಡೆಸಲು, ಅಮೃತ ಪಡಿಗೆ, ಗುರುವಿಗೆ, ಹಿರಿಯರಿಗೆ ಪುಣ್ಯವಾಗಲಿ ಎಂದು ನೀಡಿದ ದಾನಗಳ ಕೊಡುಗೆಗಳನ್ನು ಕೊಡಲಾಗಿದೆ.

ಬೆಂಗಳೂರು ತಾಲೂಕಿನ ಅಗರ ಗ್ರಾಮದ ಕ್ರಿ. ಶ. 1505ರ ಶಾಸನ ವಿಜಯನಗರದ ಅರಸ ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸಿವಪ್ಪಣ್ಣ ನಾಯಕರು ತಮ್ಮ ತಂದೆಗೆ ಧರ್ಮವಾಗಬೇಕೆಂದು ಅಗರದ ಕೆರೆಗೆ 'ಭಂಡಿನಡೆವುದಕೆ' ಕೊಟ್ಟ ಹೊಲ, ಕೆರೆಯಿಂದ ಮಣ್ಣು ತೆಗೆದು ಹೊರಗೆ ಸಾಗಿಸುವುದಕ್ಕಾಗಿ ಮಾಡಿದ ಏರ್ಪಾಡು, ಇದಕ್ಕೆ ಪ್ರತಿಫಲವಾಗಿ ಹೊಲವನ್ನು ದಾನವಾಗಿ ನೀಡಿರುವುದು ತಿಳಿಯುತ್ತದೆ. (ಬೆಂಗಳೂರು – 80) ದೊಡ್ಡಬಳ್ಳಾಪುರ ತಾಲೂಕಿನ ಗ್ರಾಮದ ಪೂರ್ವದಲ್ಲಿರುವ ಲಕ್ಷ್ಮೀದೇವಿಯ ಗರ್ಭಗುಡಿಯಲ್ಲಿರುವ ಕ್ರಿ. ಶ. 1511ರ ಶಾಸನ ಶ್ರೀಕೃಷ್ಣದೇವರಾಯ ಮಹಾರಾಯರ ಆಳ್ವಿಕೆಯಲ್ಲಿ ಅವರ ತಂದೆ ನರಸಣ್ಣನಾಯಕರು ತನ್ನ ಕೈಕೆಳಗಿನ ದಳವಾಯಿ ಗಂಡರಗೂಳಿ ನಾಯಕನ ಮಕ್ಕಳು ಗಂಡರಗೂಳಿಪುರ

ಎಂಬ ಗ್ರಾಮವನ್ನು ರಚಿಸಿದನ್ನು ಹೇಳಿದೆ. ಶಾಸನದಲ್ಲಿ ಮುಖ್ಯವಾದ ಬಹುಭಾಗ ತ್ರುಟಿತವಾಗಿರುವುದರಿಂದ ದಾನ ನೀಡಿದ ಕಾರಣ ಮತ್ತು ಇತರ ವಿವರಗಳು ತಿಳಿಯುತ್ತಿಲ್ಲ. ಶಾಸನದಲ್ಲಿ ಉಲ್ಲೇಖವಾಗಿರುವ ಗಂಡರಗೂಳಿ ನಾಯಕನ ಹೆಸರಿನ 'ಗಂಡರಗೂಳಿಪುರ' ಎಂಬ ಗ್ರಾಮವಿರುವುದು ತಿಳಿಯುತ್ತದೆ. (ದೊಡ್ಡಬಳ್ಳಾಪುರ – 1)

ಹೊಸಕೋಟೆ ತಾಲೂಕಿನ ಗ್ರಾಮದಲ್ಲಿ ಆಂಜನೇಯ ದೇವಾಲಯಕ್ಕೆ ಉತ್ತರದಲ್ಲಿ ನಿಲ್ಲಿಸಿರುವ ಕ್ರಿ. ಶ. 1512ರ ಶಾಸನದಲ್ಲಿ ವೀರನರಸಿಂಹರಾಯರ ಕಾರ್ಯಕ್ಕೆ ಕರ್ತನಾದ ನಾಯ್ಕನು ಐದು ಗುಳ ಗದ್ದೆಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸಿದೆ. (ಹೊಸಕೋಟೆ–24) ಇದೇ ಮಾಗಡಿ ತಾಲೂಕಿನ ಅರಿಶಿನ ಕುಂಟೇ ಗ್ರಾಮದ ಆಂಜನೇಯ ದೇವಾಲಯದ ಬಳಿಯ ಕ್ರಿ. ಶ. 1516ರ ಶಾಸನದಲ್ಲಿ ಕೃಷ್ಣರಾಯರು ಆಳುತ್ತಿರುವಾಗ ಅವರ ಕಾರ್ಯಕರ್ತರಾದ ಊಳಿಗದ ಮಾದೇ ನಾಯಕರು ಅರಿಸಿನಗುಂಟೆಯ ಪುರದ ಜಗ್ಗೆಯ ವೀರಣ್ಣ ಒಡೆಯರು ದೇವರಿಗೆ ಕಾರ್ತೀಕದಲ್ಲಿ ಮಂಗಳವಾರ ದಿನದಲ್ಲಿ ಶ್ರೀ ವಿರೂಪಾಕ್ಷನ ಸನ್ನಿಧಿಯಲ್ಲಿ ಕೊಟ್ಟ ಪುರಧರ್ಮ ಶಾಸನದ ಕ್ರಮವೆಂತೆಂದರೆ ಕೃಷ್ಣರಾಯರು 'ನಮಗೆ ನಾಯ್ಕತನಕ್ಕೆ ಪಾಲಿಸಿದ ಸೋಲೂರು ಸೀಮೆಯ ಒಳಗಣ ಅರಿಸಿನಗುಂಟೆಯ ಪುರವನ್ನು ಕೃಷ್ಣರಾಯ ಮಹಾರಾಯರಿಗೆ ಧರ್ಮವಾಗಬೇಕೆಂದು ರಾಯರಿಗೆ ಬಿನ್ನಹ ಮಾಡಿ ಆ ಜೋಡಿಯನ್ನು ಬಿಡಿಸಿ ನಿಮಗೆ ಸರಿಸಮಾನವಾಗಿ ಕೊಟ್ಟ ಸಂಬಂಧ' ಈ ಪುರಕ್ಕೆ ಸಲ್ಲುವಂಥಾ ಚತುಸ್ಸೀಮೆಯ ಒಳಗಾದ ನಿಧಿ ನಿಕ್ಷೇಪ ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯಗಳೆಂಬ ಅಷ್ಟಭೋಗ ತೇಜ ಸ್ವಾಮ್ಯಸುಂಕ ಸುವರ್ಣಾದಾಯ ಮುಂತಾದ ಸರ್ವವನ್ನು ಆಗುಮಾಡಿಕೊಂಡು ನೀವು ಅನುಭವಿಸುವುದು ಎಂದು ಕೊಟ್ಟ ಪುರಧರ್ಮಶಾಸನವೆಂದು ಉಲ್ಲೇಖ ಮಾಡಿದೆ. ಇಷ್ಟೆಲ್ಲಾ ವಿವರವಿರುವ ಶಾಸನದಲ್ಲಿ ದಾನವನ್ನು ಯಾರಿಗೆ ಕೊಟ್ಟರೆಂದು ಸ್ಪಷ್ಟವಾಗುತ್ತಿಲ್ಲ. (ಮಾಗಡಿ–68)

ದೊಡ್ಡಬಳ್ಳಾಪುರಕ್ಕೆ ಸೇರಿದ ಕಂಚಿಗನಾಳು ಗ್ರಾಮದ ಕ್ರಿ. ಶ. 1519ರ ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಭಾರದ್ವಾಜ ಗೋತ್ರದ ಆಪಸ್ತಂಭ ಸೂತ್ರದ ರಾಮಭಟ್ಟ ಪುರಾಣಿಕ ಗೌಂಡಿಯ ಗೋತ್ರದ ಯಜು ಶಾಖೆಯ ಪಂಡಿತನಿಗೆ ಕಂಚಿಗನಾಳು ಗ್ರಾಮಕ್ಕೆ ಪ್ರತಿನಾಮವಾಗಿ ಸಿಂಗ ಸಮುದ್ರ ಎಂಬ ಅಗ್ರಹಾರವನ್ನು ರಚಿಸಿ ದಾನ ಮಾಡಿದ್ದನ್ನು ಹೇಳಿದೆ. (ದೊಡ್ಡಬಳ್ಳಾಪುರ – 128) ಮಾಗಡಿ ತಾಲೂಕಿನ ನಾಗಶೆಟ್ಟಿಹಳ್ಳಿ ಬಸವಣ್ಣನ ದೇವಾಲಯದ ಪಶ್ಚಿಮ ಗೋಡೆಯಲ್ಲಿನ ಕ್ರಿ. ಶ. 1520ರ ಶಾಸನ ಕೃಷ್ಣರಾಯ ಮಹಾರಾಯರಿಗೆ ಧರ್ಮದ ಪ್ರತಿಪಾಲಕರಾಗಿ

ಕಾರ್ಯಕ್ಕೆ ಕರ್ತರಾದ ಸಾಳುವ ತಿಮ್ಮರಸಯ್ಯನ ಅಳಿಯ ಅಪ್ಪರಯ್ಯನಿಗೆ ಕೃಷ್ಣದೇವರಾಯರು ನಾಯಕತನಕ್ಕೆ ಪಾಲಿಸದ ಸೋಲೂರು ಸೀಮೆಗೆ ಸಲುವನಾಗಿ ಸೆಟ್ಟಿಹಳ್ಳಿಯನ್ನು ಕೃಷ್ಣರಾಯ ಮಹಾರಾಯರಿಗೆ ಧರ್ಮವಾಗಲೆಂದು ನಾವು ನಮ್ಮ ಆರಾಧ್ಯರು ತಾತಯ್ಯನವರ ದೇವೀರುನಲ್ಲಿ ದಾಯಂಮನವರಿಗೆ ಏಕಸ್ವಾಮ್ಯವಾಗಿ ನಾವು ನಮ್ಮ ತ್ರಿಕರಣಪೂರ್ವಕವಾಗಿ ಧಾರೆನೆರೆದು ಕೊಟ್ಟ ಅಗಾರ ಆ ಗ್ರಾಮಕೆ ಸಲುವ ಚತುಸ್ಸೀಮೆಯೊಳಗಾದ ಗದ್ದೆ, ಬೆದ್ದಲು, ತೋಟ, ತುಡಿಕೆ, ಏತ, ಗೂಡೆ, ಗುಯ್ಯಲು ಮನೆವಣ ಸುಂಕ ಕಾಡಾರಂಭ ನೀರಾರಂಭ ಸಿದ್ಧ ಸಾಧ್ಯ ನಿಧಿ ನಿಕ್ಷೇಪ ಜಲಪಾಸಾಣ ಮೊದಲಾದವನ್ನು ಕೃಷ್ಣರಾಯ ಮಹಾರಾಯರಿಗೆ ಧರ್ಮವಾಗಲೆಂದು ಕೊಟ್ಟ ಅಗ್ರಾರ ಎಂದು ಹೇಳಿದೆ. (ಮಾಗಡಿ – 11)

ನೆಲಮಂಗಲ ತಾಲೂಕಿನ ದಾಸನಪುರದ ಪೂರ್ವರಂಗೇಗೌಡನ ಗದ್ದೆಯಲ್ಲಿರುವ ಕ್ರಿ. ಶ. 1523ರ ಶಾಸನ, ಕೃಷ್ಣದೇವರಾಯನು ಆಳುತ್ತಿರುವಾಗ ಕುಕ್ಕಲನಾಡನ್ನು ಕೊಮನಾಯಕನು ಪಾಲಿಸುತ್ತಿದ್ದ. ಈತ ತಿರುವೆಂಗಡನಾಥ ದೇವರಿಗೆ ಪೂರ್ವದಲ್ಲಿ ದಾನವಾಗಿ ಬಿಟ್ಟಿದ್ದ ದಾಸನಪುರವನ್ನು ಪುನರ್‌ದತ್ತಿಯನ್ನಾಗಿ ನೀಡಿದ್ದನ್ನು ಹೇಳುತ್ತದೆ. (ನೆಲಮಂಗಲ – 170) ಇದೇ ತಾಲೂಕಿನ ಇದೇ ಕಾಲದ ಚಿಕ್ಕಮಾರನಹಳ್ಳಿ ಆಂಜನೇಯ ದೇವಾಲಯದ ದಕ್ಷಿಣ ಬಂಡೆಯ ಮೇಲಿನ ಶಾಸನ ಅಂಣಚ ಅಯ್ಯನವರ ಕಾರ್ಯಕ್ಕೆ ಕರ್ತರಾದ ಮಲ್ಲರಸಯ್ಯನು ಸೋಲೂರಿನ ಸೋಮೇದೇವರು, ತಿರುಮಲದೇವರು, ಲಿಂಗೇಶ್ವರದೇವರು, ವೀರಭದ್ರದೇವರುಗಳ ಅಂಗರಂಗ ಭೋಗಗಳ ಸೇವೆಗಾಗಿ ಚಿಕ್ಕಮಾರಹಳ್ಳಿ ಮೇರೆಗೆ ಸಲ್ಲುವ ಹಣವನ್ನು ದಾನವಾಗಿ ನೀಡಿದ ಉಲ್ಲೇಖವಿದೆ. (ನೆಲಮಂಗಲ–173) ಇದೇ ಕಾಲಕ್ಕೆ ಸೇರಿದ ಬೆಂಗಳೂರು ಪುರಾತತ್ವ ಇಲಾಖೆ ಕಡತದಲ್ಲಿದ್ದ ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಶ್ರೇಷ್ಠ ವಿದ್ವಾಂಸರಾದ ಶ್ರೀರಂಗದೇಶಿಕನ ಮಗ ಅಹೋಬಲರಾಯ, ಅವನ ಮಗನು ವೆಂಕಟತಾತಾರ್ಯನೆಂಬ ಗುರುವಿಗೆ ಭೂಮಿಯನ್ನು ನೀಡಿದನು ಮತ್ತು ಇದೇ ಶಾಸನ ಚಂದ್ರಗಿರಿ ಮತ್ತು ಗುತ್ತಿದುರ್ಗಗಳನ್ನು ಉಲ್ಲೇಖ ಮಾಡಿದೆ. (ಬೆಂಗಳೂರು– 174)

ಯಲಹಂಕ ಹೋಬಳಿಯ ಚಿಕ್ಕಬೆಟ್ಟಹಳ್ಳಿ ಗ್ರಾಮದ ಹನುಮಂತ ದೇವಾಲಯದ ಬಳಿಯಲ್ಲಿರುವ ಕ್ರಿ. ಶ. 1524ರ ಶಾಸನ ದೊರೆ ಕೃಷ್ಣದೇವರಾಯನು ರಾಜ್ಯಭಾರ ಮಾಡುತ್ತಿರುವಾಗ ಸಿಂಗಪನಾಯಕರು ಸಿಂಗಾಪುರದಲ್ಲಿರುವ ತಿರುವೆಂಗಳ ದೇವಾಲಯಗಳ ದೇವರ ಅಮೃತಪಡಿಗೆ, ನೈವೇದ್ಯಕ್ಕೆ, ರಾಮಾನುಜಕೂಟಕ್ಕೆ ಪಟ್ಟಣ ತಿಮ್ಮಣ್ಣಯ್ಯನವರ ಮಕ್ಕಳು ಹಿರಿಯ ವರದರಾಯಯ್ಯನವರಿಗೆ ಚಿಕ್ಕಬೆಟ್ಟಹಳ್ಳಿಯನ್ನು ದಾನಮಾಡಿದ ವಿಷಯವನ್ನು ತಿಳಿಸುತ್ತದೆ. (ಬೆಂಗಳೂರು–19) ಕ್ರಿ. ಶ. 1524ರಲ್ಲಿ ಮಾಗಡಿ ತಾಲೂಕಿನ ತಿರುಮಲೆ ರಂಗನಾಥ ದೇವಾಲಯದ ಗರುಡಗಂಭದಲ್ಲಿರುವ

ಶಾಸನದಲ್ಲಿ ಮಾಗಡಿಯ ತಿರುವೆಂಗಳೇಶ್ವರ ದೇವರಿಗೆ ಆಭರಣ ಸೇವೆಗೆ, ಕೃಷ್ಣದೇವ ರಾಯ ಮಹಾರಾಯರಿಗೆ ಪುಣ್ಯವಾಗಬೇಕೆಂದು ಆ ಮಠದ ತಿರುಮರಸರು ಮಾಡಿದ ಸೇವೆ ಸ್ವಾಮಿಗೆ ಸಲುವ ಗ್ರಾಮಂಗಳಲಿ. . . ಸುಂಕ ವಿಶೇಷ ಆದಾಯ ಬಿಟ್ಟಿ ಬಿರಾಡೆಯೇನುಂ ಸ್ವಾಮಿಯ ಸುಂಕ ಮೊದಲಾದ ವಿಶೇಷ ಆದಾಯವನ್ನು ಸ್ವಾಮಿಯ ಭಂಡಾರಕ್ಕೆ ಕೊಟ್ಟದ್ದನ್ನು ಹೇಳಿದೆ. (ಮಾಗಡಿ – 6)

ಮಾರೇನಹಳ್ಳಿ ಆಂಜನೇಯ ದೇವಾಲಯದ ಹಿಂಭಾಗದಲ್ಲಿರುವ ಕ್ರಿ. ಶ. 1524ರ ಶಾಸನದಲ್ಲಿ ಶ್ರೀಕೃಷ್ಣದೇವ ಮಹಾರಾಯನ ಉದರಾಬ್ಧಿಚಂದ್ರ ಶ್ರೀ ತಿರುಮಲ ದೇವಮಹಾರಾಯರ ಕಾಲದಲ್ಲಿ ಮಹಾ ಸೇನಾ ಸಾಳುವ ಚತುಸಮುದ್ರಾದೀಶ್ವರ ತಿಮ್ಮಣ್ಣ ದಂಡನಾಯಕರ ದೇಶದಲು ಶ್ರೀ ಅಭಿನವಕಾಂಬೇಸಮಾಕಲು ಊರ ವರದರಾಜ ದೇವರ ಉತ್ತಮ ಸಂದಿದ ದ್ಸಂನದ ವಸರಕೆ ಶ್ರೀ ಕೃಷ್ಣದೇವರಾಯರಿಗೆ ಗಂಗೋದಕ ಸೇವಿತರಪ್ಪಯ್ಯ ಕೋನಪನಾಯಕರು ತಿರುಮಲ ದೇವ ಮಹಾ ರಾಯರಿಗೂ ತಿಮ್ಮಣ್ಣ ದಂಡನಾಯಕರಿಗೂ ಧರ್ಮವಾಗಬೇಕೆಂದು ಮಾರಯ್ಯನ ಹಳ್ಳಿಗೆ ಪ್ರತಿನಾಮವಾದ ಡಣಾಯಕಪುರವೆಂದು ಕರೆದು ವರದರಾಜದೇವರಿಗೆ ಸಮರ್ಪಿಸಿದ. ತಾವು ಮಾಡಿದ ಸೇವೆ ಆಚಂದ್ರಾರ್ಕಸ್ಥಾಯಿಯಾಗಿ ನಡೆದುಕೊಂಡು ಹೋಗಬೇಕೆಂದು ಉಲ್ಲೇಖಿಸಿ, ಈ ಶಾಸನಕ್ಕೆ ತಪ್ಪಿದವರು ಗೋಬ್ರಾಹ್ಮಣರನ್ನು, ತಂದೆ ತಾಯಿಯರನ್ನು ವಾರಣಾಸಿಯಲಿ ಕೊಂದ ಪಾಪಕ್ಕೆ ಹೋಗುವರೆಂಬ ಶಾಪಾಶಯವೂ ಇದೆ. (ಮಾಗಡಿ – 82) ಹೊಸಕೋಟೆ ತಾಲೂಕಿನ ಸಿದ್ದೇನಹಳ್ಳಿ ಗ್ರಾಮಕ್ಕೆ ಸೇರಿದ ಮುನಿಸಾಮಿತೋಟದಲ್ಲಿನ ಕ್ರಿ. ಶ. 1524ರ ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕುಮಾರ ಸಾಕ್ಷಿ ಚಿನ್ನಮನಾಯ್ಕನು ಪಾಲ್ಸಿದ ಮುಳುವಾಗಿಲು ಸೀಮೆಯೊಳಗಣ ಬೆಟ್ಟಹಳ್ಳಿಯ ಕಳದೊಳನ ಸೀಮೆಯನ್ನು ಪುರವನ್ನಾಗಿ ಮಾಡಿ ಬೆಟ್ಟಹಳ್ಳಿಯ ಬೆಂಕೆಯಗೌಡನು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಮುಳುವಾಗಿಲು ಸೀಮೆಯ ಬೆಟ್ಟಹಳ್ಳಿಯ ಮೂಡಣದೆಸೆಯ ಸ್ಥಳದ ಹೊಸಕೆರೆಯ ಕೆಳಗೆ ಖ ಒಂದು ಗದ್ದೆಯ ಭೂಮಿಯನ್ನು ಪೂಜೆಯ ವೀರಣ್ಣೊಡೆಯನಿಗೆ ಕೊಟ್ಟು ಆ ಚಂದ್ರಾರ್ಕಸ್ತಾಯಿಯಾಗಿ ಶಿವಪೂಜೆ ಮಾಡಿ ಕೊಂಡಿರುವಂತೆ ಹೇಳಿ ಲಿಂಗಮುದ್ರೆ ಕಲ್ಲು ನೆಟ್ಟು ದಾನ ನೀಡಿರುವುದನ್ನು ಉಲ್ಲೇಖಿ ಸಿದೆ. ಶಾಸನದಲ್ಲಿ ಗುಡಿಯ ಹೆಸರು ಉಲ್ಲೇಖವಾಗಿರುವುದಿಲ್ಲ. (ಹೊಸ ಕೋಟೆ – 57)

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೇವಶೆಟ್ಟಿಹಳ್ಳಿ ಮಾರಮ್ಮನ ಗುಡಿ ಬಳಿಯ ಕ್ರಿ. ಶ. 1526ರ ಶಾಸನದಲ್ಲಿ ಕೃಷ್ಣದೇವರಾಯನ ಅಪ್ಪಣೆ ಪಡೆದು ದಳವಾಯಿಯೊಬ್ಬನು ಹುಲ್ಲೂರ ಸೀಮೆಯ ದೇವಿ ಶೆಟ್ಟಿ ಹಳ್ಳಿಯನ್ನು ಸಿದ್ಧಲಿಂಗ ಅಯ್ಯನಿಗೆ . . ಸೇವಾದವರಿಗೆ 29 ವ್ರಿತ್ತಿಗಳನ್ನೂ ವೊಗಟ್ಟದ (ವಾಗಟ) ದೇವರಿಗೆ

6 ವ್ರಿತ್ತಿಯನ್ನೂ, ವರಾಹ ದೇವರಿಗೆ 2 ವ್ರಿತ್ತಿಯನ್ನು ದಾನ ನೀಡಿದ ಉಲ್ಲೇಖವಿದೆ. ಶಾಸನದ ನಡುವೆ ಅನೇಕ ಕಡೆ ತ್ರುಟಿತವಾಗಿರುವುದರಿಂದ ಯಾರು ಯಾರಿಗೆ ಎಷ್ಟೆಷ್ಟು ವ್ರಿತ್ತಿಗಳನ್ನಾಗಿ ವಿಂಗಡಿಸಿ ದಾನ ನೀಡಿರುವುದನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ. (ಹೊಸಕೋಟೆ – 201) ಚನ್ನಪಟ್ಟಣದ ಕೋಟಹಳ್ಳಿಗೆ ವಾಯವ್ಯ ಶಿದ್ದಾಬೋಯ ಹೊಲದ ಹುಟ್ಟುಬಂಡೆಯ ಮೇಲಿನ ಕ್ರಿ. ಶ. 1527ರ ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ತಿಪ್ಪಣ್ಣವಡೆಯ ಅರಸನ ನಿರೂಪದಿಂದ ಪುಣ್ಯಕಾಲ. . . . ಧರ್ಮಶಾಸನದ ಕ್ರಮವೆಂತೆಂದರೆ ತಿರುಮಲೆಯಲ್ಲಿ ಯೀಶ್ವರದೇವರಿಗೆ ಕೊಟ್ಟ ... ಕೃಷ್ಣದೇವರಾಯ ಮಹಾರಾಯ...ಹಳ್ಳಿಸಬಕೆರೆಯನ್ನು ಸಾಲು ರಾಮೇಶ್ವರ ದೇವರಿಗೆ ಅಮೃತಪಡಿ, ಅಂಗರಂಗ ಭೋಗ ಮೊದಲಾದ ಪೂಜೆಗಳಿಗೆ ದಾನ ಮಾಡಿದ ಭೂಮಿಯೊಳಗಿನ ನಿಧಿ ನಿಕ್ಷೇಪ ಇತ್ಯಾದಿಗಳನ್ನು ಧಾರಾಪೂರ್ವಕವಾಗಿ ದಾನಮಾಡಿದಂತೆ ಹೇಳಿದರೂ ಕೆಲವು ಮುಖ್ಯ ಭಾಗಗಳು ತ್ರುಟಿತವಾಗಿದ್ದು ಪೂರ್ಣಪಾಠದ ಪ್ರಯೋಜನ ಪಡೆಯಲಾಗಿರುವುದಿಲ್ಲ. (ಚನ್ನಪಟ್ಟಣ – 24)

ಆನೇಕಲ್ಲು ತಾಲೂಕಿನ ಸರ್ಜಾಪುರ ಕೋಟೆಯ ಪಾಳು ಚನ್ನಕೇಶವ ದೇವಾಲಯದ ದಕ್ಷಿಣ ಗೋಡೆಯಲ್ಲಿನ ಶಾಸನವು ಇದೇ ಕಾಲದ ಇದೇ ಅರಸನ ಆಳ್ವಿಕೆಯಲ್ಲಿ ಒಂದು ಊರನ್ನು ಗೌಡನೊಬ್ಬನಿಗೆ ದಾನಕೊಟ್ಟ ವಿಷಯವಿದೆ. ದಾನ ನೀಡಿದ ಸ್ಥಳ ಮತ್ತು ದಾನ ಪಡೆದ ವ್ಯಕ್ತಿಯ ಹೆಸರು ತ್ರುಟಿತವಾಗಿದೆ. (ಆನೇಕಲ್ಲು – 235) ನೆಲಮಂಗಲ ತಾಲೂಕಿನ ಶಿವಗಂಗೆ ಬೆಟ್ಟದಲ್ಲಿ ಗಂಗಾಧರೇಶ್ವರ ದೇವಾಲಯದ ಮಾಳಿಗೆ ಗುಂಡಿನಲ್ಲಿರುವ ಕ್ರಿ. ಶ. 1528ರ ಶಾಸನವು ಕೃಷ್ಣ ದೇವರಾಯನ ಆಳ್ವಿಕೆಯಲ್ಲಿ ಚನ್ನಮಲ್ಲಶೆಟ್ಟಿಯ ಮಗ ಚೆನ್ನಣ್ಣ ಶೆಟ್ಟಿಯು ಶಿವಗಂಗೆ ಬೆಟ್ಟದ ಗಂಗಾಧರೇಶ್ವರ ದೇವರ ಪಲ್ಲಕ್ಕಿಯ ಪ್ರದಕ್ಷಿಣೆ ಪಥವನ್ನು ಮಾಡಿಸಿದ ಉಲ್ಲೇಖವಿದೆ. ಮತ್ತು ವಿಜಯಪುರದ ರಾಮಚಂದ್ರ ಪಂಡಿತರ ಮಗ ಚಂದರಸನ ಪಾರುಪತ್ಯದಲ್ಲಿ ಪ್ರದಕ್ಷಿಣಾ ಪಥವನ್ನು ನಿರ್ಮಿಸಿದಂತೆ ತಿಳಿಸುತ್ತದೆ. (ನೆಲಮಂಗಲ – 240) ಇದೇ ಕಾಲದ ಮತ್ತು ಇದೇ ತಾಲೂಕಿನ ಶಿವಗಂಗೆ ಮಠದ ಬಾಗಿಲಲ್ಲಿರುವ ಪೂರ್ವ ಕಂಬದ ಮೇಲಿರುವ ಶಾಸನದಲ್ಲಿ ಕೃಷ್ಣದೇವರಾಯನ ಅರಮನೆ ಕುದುರೆಯನ್ನು ನೋಡಿಕೊಳ್ಳುತ್ತಿದ್ದ ಚನ್ನಮಲ್ಲ ಸೆಟ್ಟಿಯ ಮಗ ಚೆನ್ನಣ್ಣ ಸೆಟ್ಟರು ಶಿವಗಂಗೆಯ ಗಂಗಾಧರ ದೇವರ ಮಜ್ಜನದ ಸೇವೆಗಾಗಿ ಗೋಪುರವನ್ನು ಕಟ್ಟಿಸಿದಂತೆಯೂ ಇದಕ್ಕೆ ವಿಜಯಪುರದ ಚಂದ್ರಪಂಡಿತರ ಮಗ ಚಂದರಸನ ನೆರವು ಪಡೆದಿರುವಂತೆ ಉಲ್ಲೇಖವಾಗಿದೆ. (ನೆಲಮಂಗಲ – 254)

ದೇವನಹಳ್ಳಿಯ ವಡಿಗೇನಹಳ್ಳಿ ಗ್ರಾಮದ ಚನ್ನಕೇಶವ ದೇವಾಲಯದಲ್ಲಿನ ಕ್ರಿ. ಶ. 1525ರ ಶಾಸನ 'ರಾಜಾಧಿರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಕೃಷ್ಣ ರಾಯ ಮಹಾರಾಯ ಪೃಥಿವಿ ರಾಜ್ಯಂ' ಎಂದಿರುವ ಭಾಗ ಮಾತ್ರ ಉಳಿದಿದ್ದು

ಮಿಕ್ಕ ಭಾಗ ತ್ರುಟಿತವಾಗಿದೆ. (ದೇ. ಹಳ್ಳಿ – 31) ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಚನ್ನೇಶವ ದೇವಾಲಯದಲ್ಲಿನ ಕ್ರಿ. ಶ. 1527ರ ಶಾಸನವು ಕೃಷ್ಣದೇವರಾಯ 'ಕಾಡಕೇಶವನ ದೇವಾಲಯ'ವನ್ನು ಕಟ್ಟಿಸಿದಂತೆ ಹೇಳಿದೆ. ಮುಖ್ಯ ವಿಷಯಗಳನ್ನು ತಿಳಿಸುವ ಭಾಗಗಳು ತ್ರುಟಿತವಾಗಿದೆ. ಇಂತಹ ಕೆಲವು ಶಾಸನಗಳನ್ನು ಕೈಬಿಡಲಾಗಿದೆ. ಇಂತಹವುಗಳನ್ನು ಹೊರತುಪಡಿಸಿದರೆ, ಮೇಲಿನ ಶಾಸನಗಳ ಅಧ್ಯಯನದ ಮೂಲಕ ಅಂದಿನವರ ಸಾಮಾಜಿಕ ಸಾಂಸ್ಕೃತಿಕ ಕಳಕಳಿಯನ್ನು ತಿಳಿಯಬಹುದು.

ಗ್ರಂಥ ಋಣ

1. *E.C.* Vol. IX

೭. ಹೊಸನಗರ ತಾಲ್ಲೂಕು ಬೇಹಳ್ಳಿ ಶಾಸನ

ಜಯದೇವಪ್ಪ ಜೈನಕೇರಿ

ಇತ್ತೀಚಿನ ನಮ್ಮ ಕ್ಷೇತ್ರಕಾರ್ಯದಲ್ಲಿ ಶಿವಮೊಗ್ಗ ಜಿಲ್ಲೆ ಹೊಸನಗರ (ತಾ) ಹುಂಚ ಹೋಬಳಿ ಬೇಹಳ್ಳಿ ಗ್ರಾಮಕ್ಕೆ ಸೇರಿದ ಸ. ನಂ. 68 ರಲ್ಲಿ ತೀರ್ಥಪ್ಪ ಎಂಬುವರ ಹೊಲದ ಅಂಚಿನಲ್ಲಿ ನೆಲದಲ್ಲಿ ಹೊತು ಹೋಗಿದ್ದ ಒಂದು ಶಾಸನವಿರುವ ಸಂಗತಿ ತಿಳಿದು ಅಲ್ಲಿಗೆ ಹೋಗಿ ಶಾಸನ ಶಿಲೆಯನ್ನು ಮೇಲೆ ಎತ್ತಿಸಿ, ಶುಚಿಗೊಳಿಸಿದೆವು. ಸುಮಾರು 4' ಎತ್ತರ 1½ ಅಡಿ ಅಗಲದ ಬಿಳಿ ಕಣಶಿಲೆಯ ಶಾಸನದ ಮೇಲ್ಭಾಗ ಅರ್ಧ ವೃತ್ತಾಕಾರವಾಗಿದ್ದು ಕಂಡು ಶಾಸನದ ಛಾಯಾಚಿತ್ರ ತೆಗೆದೆವು. ಕಲ್ಲಿನ ಎರಡೂ ಬದಿಯಲ್ಲಿಯೂ ಒಂದೇ ಶಾಸನವನ್ನು ಕೆತ್ತಿರುವುದು ಕಂಡುಬಂದಿತು. ಇದೊಂದು ದಾನಶಾಸನ. ಶಾಸನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರ ನಂದಿ, ವಾಮನ ಚಿತ್ರಗಳ ಕೆತ್ತನೆ ಇದೆ.

ಶಿಲಾಫಲಕದ ಎರಡೂ ಬದಿ ಶಾಸನ ಕೆತ್ತಲಾಗಿದೆ. ಸುಮಾರು 51 ಸಾಲುಗಳ ಶಾಸನ ಅಲ್ಲಲ್ಲಿ ಅಕ್ಷರಗಳು ಸವೆದುಹೋಗಿದೆ. ಶಾಸನವನ್ನು ಪರಿಶೀಲಿಸಿದೆವು. ವಿಷಯ ಒಂದೇ ಇದ್ದು ಎರಡು ಬಾರಿ ಕೆತ್ತಿರುವುದು ಕಂಡುಬಂದಿತು. ಇದು ವಿಜಯನಗರ ಅರಸು ವೀರಹರಿಹರರಾಯನ ಕಾಲಕ್ಕೆ ಸೇರಿದ ಶಾಸನವಾಗಿದೆ. ಕ್ರಿ. ಶ. 1407ಕ್ಕೆ ಸೇರಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ.

ಆರಂಭದಲ್ಲಿ ಶಿವಸ್ತುತಿ ಎರಡು ಸಾಲು ಮೂರನೇ ಸಾಲಿನಲ್ಲಿ ಶಕವರುಷ 1329ನೇ ಸರ್ವಜಿತು ಸಂ. ಜೇಷ್ಟ ಬಹುಳ (ಹತ್ತು) ಶ್ರೀ ವೀರಹರಿರಾಯ ಮಹಾರಾಯರು ವಿಜಯನಗರದಲ್ಲಿ ಆಳುತ್ತಿರುವಾಗ ಆರಗದ ರಾಜ್ಯವನ್ನು ವಿಠಲೊಡೆಯರು ಸದ್ಧರ್ಮದಿಂದ ಆಳುತ್ತಿರುವಾಗ ಆರಗದ ಹದಿನೆಂಟು ಕಂಪಣಕ್ಕೆ ಸೇರಿದ ಬೆಹಳ್ಳಿ ಮೂಲ ನಿವಾಸಿ ಬಾಳಗೌಂಡನು ತನ್ನ ಕುಟುಂಬಸಹಿತ ಕೊಟ್ಟ ಕ್ರಯದಾನ ಶಾಸನ ಪತ್ರವಾಗಿದೆ.

ನಿಧಿ ನಿಕ್ಷೇಪ ಜಲ ಪಾಷಾಣ ಅಷ್ಟಭೋಗ ತೇಜ ಸಾಮ್ಯ ಸಹಿತ ಆ ಬೇಹಳ್ಳಿಯ 35 ಹೊನ್ನು ಕೊಟ್ಟು ಭೂಮಿಯ ಕ್ರಯ ದಾನ ಮಾಡಿರುವ ಸಂಗತಿ ಉಲ್ಲೇಖವಾಗಿದೆ. ಸಾಲು 33ರಲ್ಲಿ ಪುನಃ 230 ವರಹಗಳನ್ನು ಗದ್ಯಾಣ ಸಲ್ಲಿಸಿಕೊಂಡು ಆ ಬೇಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟ ಉಲ್ಲೇಖವಿದೆ.

ಈ ದಾನ ಆ ಬೆಹಳ್ಳಿಗೆ ನಮ್ಮ ನಮ್ಮ ಹೆಂಣಿಗೆ ದಾನ ಗಂಡಿಂಗೆ ಮೂಲಕ್ಕೆ ಸಲ್ಲದೆಂದು ಚಂದ್ರ ಗ್ರಹಣ ಪುಣ್ಯ ಕಾಲದಲ್ಲಿ ದಾನ ನೀಡಿದ ಉಲ್ಲೇಖವಿದೆ. 41ನೇ ಸಾಲಿನಲ್ಲಿ ಕ್ರಯದಾನ ಧಾರಾ ಪೂರ್ವಕವಾಗಿ ನಿಮ್ಮ ಹೆಂಣಿಂಗೆ ದಾನ ಗಂಡಿಗೆ ಮೂಲವಾಗಿ ನಿಮ್ಮ ಸಂತತಿ ತಪ್ಪದೆ ಸುಖದಿಂ. . . ನಮ್ಮ ಸಾಕ್ಷಿಯಲು ಕೊಟ್ಟ ಕ್ರಯದಾನ ಸ್ಥಿರ ಶಾಸನಪತ್ರ ಯಿಂತೆಪ್ಪುದಕ್ಕೆ ಆ ಐವತ್ತು ನಾಡ ಸೇನಬೋವನ ಬರಹ ಎಂದಿದೆ. ಕೊನೆಯಲ್ಲಿ ಮಂಗಳ ಮಹಾಶ್ರೀಶ್ರೀಶ್ರೀಶ್ರೀಶ್ರೀ ಎಂದಿದೆ.

ಈ ಶಾಸನವಿರುವ ಗ್ರಾಮದ ಹೆಸರು "ಬೇಹಳ್ಳಿ". ಬೇಹಳ್ಳಿಯ ಉಲ್ಲೇಖ ಈ ಶಾಸನದಲ್ಲಿ ಎಂಟು ಸಾರಿ ಕಂಡುಬರುತ್ತಿರುವುದು ವಿಶೇಷ ಎನ್ನಬಹುದು ಈ ರೀತಿ ಅಪ್ರಕಟಿತ ದಾನಶಾಸನಗಳು, ವೀರಗಲ್ಲುಗಳು, ಮಲೆನಾಡಿನ ಭಾಗದಲ್ಲಿ ವಿಶೇಷವಾಗಿ ಹೊಸನಗರ ತಾಲ್ಲೂಕಿನಲ್ಲಿ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಕಂಡು ಬರುತ್ತವೆ. ಸಮೀಪದ ಹುಲಿಕಲ್ಲಿನಲ್ಲಿ ದೊರಕಿರುವ ಶಾಸನ ಸಂಖ್ಯೆ VIII 80 *MAR*. 1931 ನಂ. 75 ಸಂಗಮ ದೇವರಾಯ ಶಾ. ಶ. 1331 ರ ಶಾಸನದಲ್ಲಿ ವಿಠಲರಾಯ ವಡೆಯರು ಆರಗ ರಾಜ್ಯವನ್ನು ಆಳುತ್ತಿರುವಾಗ ಭೂದಾನ ನೀಡಿದ ವಿವರಗಳಿವೆ.

ಶಾಸನದಲ್ಲಿ ಹತ್ತಿರದಲ್ಲೇ ಒಂದು ಮೂರು ಹಂತದ ವೀರಗಲ್ಲು ಶಾಸನವಿದೆ. ಅಕ್ಷರಗಳು ಸವೆದು ಓದಲುಬಾರದಂತಿವೆ. ಪ್ರಾಚೀನ ಶಿವಲಿಂಗ ಮತ್ತು ಮಹಿಷ ಮರ್ದಿನಿ ವಿಗ್ರಹಗಳು ಅನಾಥವಾಗಿ ಬಿದ್ದಿವೆ. ಈ ಪಳೆಯುಳಿಕೆಗಳಿಂದಾಗಿ ಬೇಹಳ್ಳಿ ಪ್ರಾಚೀನವಾಗಿ ಪ್ರಮುಖ ಗ್ರಾಮವಾಗಿದ್ದಿರಬಹುದು.

ಬೇಹಳ್ಳಿ ಗ್ರಾಮ ಹೊಸನಗರ ತಾಲೂಕು ಶಿವಮೊಗ್ಗ ಜಿಲ್ಲೆ ವಿಜಯನಗರ ವೀರ ಹರಿಹರರಾಯನ ಶಾಸನ ಕ್ರಿ. ಶ 1407.

1. ಶ್ರೀ ಶುಭಮಸ್ತು । ಅವಿರ್ಘಮಸ್ತು । ನಮಸ್ತುಂಗಶಿರಶಿರಶ್ಚುಂಬಿ ಚಂದ್ರ ಚಾ
2. ಮಂ ಚಾರವ್ಯೆ ತ್ರೈಲೊಕನಗರಾರಂಭ ಮೂಲಸ್ತಂಭಾಯ ಶಂಭವೆ ॥ ಸ್ವಸ್ತಿ ಶ್ರೀ ಜ
3. ಯಾಭ್ಯುದಯ ಶಕ ವರುಷ·1329ನೆಯ ವರ್ತ್ತಮಾನ ಸರ್ವ್ವಜಿತು ಸಂ ಜೇಷ್ಟ ಬ
4. ಹುಳ [ಹತ್ತು]॥ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಹರರಾಯ
5. ಮಹಾರಾಯರು ವಿಜಯಾನಗರದಲ್ಲಿ ಸುಖಸಂಕಥಾ ವಿನೋದದಲಿ ಏಕಚಥ್ರದಿಂ

6. ಚತುಸ್ಸಮುದ್ರಮುಂ ಪ್ರಥಿವಿ ಭೂಮಂಡಳವನೂ ಸಧರ್ಮ್ಮದಿಂ ಪ್ರತಿಪಾಲಿಸುತ್ತ
7. ಂ ಇರಲು ತತ್ಪಾದಪದ್ಮೋಪಜೀವಿ ಸಳಹರಾಯ . . . ಯ. ಮೊ. ಕ. ವಿಠಲೊ
8. ಒಡೆಯರು ಆರಗದ ರಾಜ್ಯವನು ಸಧರ್ಮದಿಂ ಪ್ರತಿಪಾಲಿಸುತ್ತ ಇರಲು ಆರಗದ ಹ
9. ದಿನೆಂಟು ಕಂಪಣಕ್ಕೆ . . . ನಾಡೆನ್ಸಿದ ಆ. . ವತ್ತು . ಮಂ. ಅಯ
10. ಹಂನೆರಡಱ ಒಳಗಣ ಹೊಗ. . . ತು ಅಂಗೆ ತೆಱುಮಹಾ ಸಮಸ್ತ ಗ..
11. ಪ್ರಯಗಸ ಬೆಹಳ್ಳಿಯ . . ಮೂಲಿಗ. . ಬಾಳಗೌಂಡ ಮ. ಗೌಂಡ . . ಬೆ
12. ಹಳ್ಳಿಯ ದಾನ ಮೂಲಿಗರು ಸಹವಾಗಿ ತಂಮೊಳು ಸಮ್ಮೈಕಮಥವಾಗಿ ತಂಮತಂ
13. ಮ ಸ್ತ್ರೀ ಪುತ್ರಜ್ಞಾತಿ ಸಆವಂತ ದಾಯಾದ್ಯ . . ಱಂದ. . . . . ಬಾಹ್ಯ
14. ರಸರ ಮಕಳು ರಾಯಸದ . ಗೆಕೊಟ್ಟ ಕ್ರಯದಾನ ಶಾಸನ ಪತ್ರದ
15. ಕ್ರಮವೆಂತೆಂದರೆ ನಂಮ ಅಯಿವತ್ತು ನಾಡೊಳಗಣ ಗೋಡಿನ ಬೆಹಳ್ಳಿಯ
16. . . . ಬತ್ತು ಸೀಮೆಯ ವಿವರ ಮೂಡಲು ಬಳಿ ಮೂಡ ಬೆಟ್ಟವೆ ಗಡಿ ಪಡುವಲು
17. ನಾಲೆಯ. . . ಬಂನ ಕಲ್ಲಮಾನಿಯ ಗದ್ದೆ. . . ಯ ಬಾ ಹೊಲ. . .
18. . .ರದ ಹೊಲನ ಸೀಮೆ ಗಡಿ ಬಡಗಲು ಕೊ. . .ಗೆಹೊಹ ದಾರಿಯ . . .ಕೊವಲ
19. ಪ್ಮರದ ಒಱನಲು ನೆಟ್ಟ ವಾಮನ ಮುದ್ರಿಯ ಕಲು ಕಾಮಗೌಂಡನು ಕೊಟ್ಟ ಕಾರಗದ್ದೆಯ ಕೆ
20. ಳಗಣ ಹಳ್ಳದ ಮೊರಡಿ. . ಬಱೆನ. . .
21. ಗದ್ದೆ ಅದಕ್ಕೆ ಸಲುವ ನಿರುಂಬುವ ನೆಲ ನೆಱಕಲು ಹೊಲ ಜಂಗಮ. ..

22. ಳಿಗೆ ಕೊಟ್ಟ ಯಿದಕೆ ಕಂಕ. . ಯ ಗದ್ದೆ. . ಹೊಲ ಬಾಳಗೌಂಡ ಮಾಡುವ ಗದ್ದೆ. . ಅ

23. . . .ಚತುಸ್ಸಿಮೆಯೊಳಗುಳ ಆಗ್ರಮದಕುಳ. . ಲೈದು ಹೊಂನಕುಳಕ್ಕೆ ಸಲುವ ಗ

24. ದ್ದೆ ಬೆದ್ದೆಲು ಮತ್ತೆ ಹಕಲು ಕೊಹು ಕಾಡಗೆ ಸರುವಲ ಕುಂಮರಿ ಕಾಡಾರಂಭ ಕೊಪ್ಪ ಚಪ್ಪರ. .

25. . . ಮನೆಮನೆಯ ಸ್ತಳ ನಿರುಂಬನೆಲ ನೆಱಕಲು ಹೊಲಸು ಮಾದ ಮೆಣಸು ಮೊದಲಾದ ಆ

26. ಗ್ರಾಮದೊಳಗುಳ್ಳ ನಿಧಿನಿಕ್ಷೇಪ ಜಲಪಾಷಾಣ ಅಕ್ಷಿಣಿ ಆಗಾಮಿ ಸಿದ್ದಸಾದ್ಯವೆಂಬ ಅಷ್ಟ

27. ಭೆಗತೇಜ ಸಾಂಮ್ಯ ಸಹಿತ ಆ ಬೆಹಳ್ಳಿಯ ಮೂವತ್ತೈದು ಹೊಂನು ಕೊಟ್ಟು ಭೂಮಿಯ

28. ಮಾಕ್ರೆಯದಾನ ಧಾರಪೂರ್ವ್ವಕವಾಗಿ ಕೊಟ್ಟಪಾಲಿಗೆ ಆಕುಳಕ್ಕೆ ಬಂದ ಹೊದಿಕೆ

29. . . .ಗ್ರಾಮ. . . ಬಾಗಿಲುವನ. . ಬಿಟ್ಟಿ ಬಿಡಾರ ಕೊಟ್ಟಣ ಹೊಂಬಳಿ ಹೊಂ

30. ಹೊಱುಸುಂಕ ತಱವಾ ಮೊದಲಾಅದು ನವಂಗಳೆಲ್ಲವ

31. ನೂ ನಂಮ ನಾಡಿನಕುಳದ ಮೇಲೆಹೇಳಿಹಕೊಂಡು ಆ ಬೆಹಳ್ಳಿ ಯ ಗ್ರಮಕ್ಕೆ ತತ್ಕಾ

32. ಲೋಚಿತ ಮದ್ಯಸ್ತ ಪತಿ ಕಲ್ಪಿತ ವಾದ ಸಂಪ್ರತಿ ಪಂನವಹ ಕ್ರಯದ ದ್ರವ್ಯ ವ

33. ರಹ ಗುಳಿಗೆ ಗ 230 ವರಹನು ಗುಳಿಗೆ ಗದ್ಯಾಣ ಯಿಂನೂಱಮೂವತ್ತು ಹೊಂನನೂ

34. ಮಾದರ್ಸರ ಹಸ್ತದಿಂ ತಾರ ವಿಸಡಿಳಿಯದಿ ಸಲ್ಲಿಸಿಕೊಂಡು ಆ ಬೆಹಳ್ಳಿಯ ಗ್ರಮವನೂ

35. ಸರ್ವ್ವಮಾನ್ಯವಾಗಿ ಆಚಂದ್ರಾರ್ಕ್ಕಸ್ಥಾಯಿಯಾಗಿ ನಂಮ ನಾಡೆಲ್ಲಯ ನಂಮು ನಂಮ ಹೆ

36. ಂಣು ಗಂಡಿನ ಒಡಂಬಡಿಕೆಯಲೂ ಆ ಬೆಹಳ್ಳಿ ಯ ದಾನಮೂಲಿಗರ ಅನುಮತದಿಂ

37. ಂದಲೂ ಬೆಹಳ್ಳಿ ಗೆ ನಂಮ ನಂಮ ಹೆಂಣಿಗೆ ದಾನ ಗಂಡಿಂಗೆ ಮೂಲಕ್ಕೆ ಸಲ್ಲದೆಂದು ನಂ
38. ಮ ನಂಮ ಸ್ವರೂಯಿಂದಲೂ ತತ್ಸಲವತ್ಸ ಜೇಷ್ಟ ಶುದ್ಧ ಪೌರ್ಣ್ಣಮ್ರಿ ವಡ್ಡವಾ
39. ರ ಚೆ ನಕ್ಷತ್ರ ಸಾದ್ಯಯೋಗ ಭದ್ರಕರಣಯುಕ್ತ ವಹ ಸೋಮಗ್ರಹಣ ಪುಂಣ್ಯಕಾಲ
40. ದಲುನಂಮ ನಾ. .ಲ್ಲೆರೂ ಕೂಡಿ ಆ ಬೆಹಳ್ಳಿ ಯ ಗ್ರಾ
41. ವನೂ ರಾಯಸದ ವೀರ್ರ್ವಗಳಿಗೆ ಸಹಿ. . . ವಹ। ಕ್ರಯದಾನ ಧಾರಾಪೂ
42. ರ್ವ್ವಕವಾಗಿ ನಿಂಮ ಹೆಂಣಿಂಗೆ ದಾನ ಗಂಡಿಗೆ ಮೂಲವಾಗಿನಿಂಮ ಸಂತತಿ ಸಂತತಿ ತಪ್ಪದೆ ಸು
43. ಖದಿಂ. . ಂದು ನಂಮ ನಂಮ ಸಾಕ್ಷಿಯಲು ಕೊಟ್ಟ ಕ್ರಯದಾನ
44. ಸ್ಥಿರ ಶಾಸನ ಪತ್ರ ಯಿಂತೆಪ್ಪುದಕ್ಕೆ ಆ ಅಯಿವತ್ತುನಾಡ ಸೇನಬೋವನ ಬರಹ
45. ಆ ಅಯಿವತ್ತುನಾಡಮಂದು ಅಯಿಪ್ಪ ಹಂನೆರಡಱ ವಪ್ಪ ಅರಶಂಖರ
46. ನಾಥ ದೇವರು ॥ ಯೀ ಧರ್ಮಶಾಸನ ಕೇವಲ ಗ್ರಂಥ ॥ ದಾನಪಾಲನರ್ಯ್ಯೋರ್ಮದ್ಧ್ಯೆಶ್ರೇಯೋ
47. ಪಾಲನಂ।. . .ಪಾಲೆ ಪಾಲನಾದಚ್ಚ್ಯುತಂಪದಂ॥
48. ಸ್ವದತ್ತಂ ಪರದತ್ತಂ ವಾಯೋಹರೆತಿ ವಸುಂಧರಾ ಷಷ್ಟಿರ್ವ್ವರುಷ
49. ಸಹಸ್ರಾಣಿ ವಿಷ್ಟಾಯಂ ಜಾಯತೆ ಕ್ರಿಮಿ। ಯೀ ಕಲ್ಲ
50. ಮಾದನ ವಿರು ಪೂಜಿನಂ ॥ ಮಂಗಳ ಮಹಾ ಶ್ರೀ ಶ್ರೀ
51. ಶ್ರೀಶ್ರೀಶ್ರೀ

೮. ಕೃಷ್ಣರಾಯನ ತಿರುಪತಿ ಮತ್ತು ಕಾಳಹಸ್ತಿಯ ಕನ್ನಡ ದಾನಶಾಸನಗಳು

ಡಾ. ಲ. ನ. ಸ್ವಾಮಿ

ಕೃಷ್ಣರಾಯನು ವಿಜಯನಗರದ ಅರಸರಲ್ಲಿ ಅತ್ಯಂತ ಪ್ರಖ್ಯಾತನೂ, ಧರ್ಮಭೀರುವೂ, ದೈವನಿಷ್ಠನೂ ಆಗಿದ್ದನೆಂದು ಆತನ ಶಾಸನಗಳು ಶ್ರುತಪಡಿಸುತ್ತವೆ. ಕೃಷ್ಣರಾಯನು ನೀಡಿರುವ ಹಲವಾರು ದಾನಶಾಸನಗಳು ಉಪಲಬ್ಧವಿದೆ. ಈ ದಾನಶಾಸನಗಳು ಆತನು ಹಂಪೆಯಲ್ಲಿ ನಿರ್ಮಿಸಿದ ಕೃಷ್ಣನ ದೇವಾಲಯಕ್ಕೆ, ಲಕ್ಷ್ಮೀ ನರಸಿಂಹಸ್ವಾಮಿ ಆಲಯಕ್ಕೆ ನೀಡಿದ ದತ್ತಿಗಳನ್ನು ಮತ್ತು ವಿರೂಪಾಕ್ಷನ ದೇವಾಲಯಕ್ಕೆ, ವಿಠಲನ ದೇವಾಲಯಕ್ಕೆ ನೀಡಿದ ದತ್ತಿಗಳನ್ನು ಅಲ್ಲದೆ ರಾಜಧಾನಿಯಿಂದ ಹೊರಗೆ ಹಲವಾರು ದೇವಾಲಯಗಳಿಗೆ ದಾನ ಕೊಟ್ಟಿರುವುದನ್ನು ಉಲ್ಲೇಖಿಸುತ್ತವೆ. ಒರಿಸ್ಸಾ ದಂಡಯಾತ್ರೆಗೆ ಹೋಗುವಾಗ ಮತ್ತು ವಿಜಯಿಯಾಗಿ ಹಿಂತಿರುಗುವಾಗ ಸಹ ದಾರಿಯಲ್ಲಿ ಹಲವಾರು ದೇವಾಲಯಗಳಿಗೆ ದತ್ತಿಗಳನ್ನು ಕೊಟ್ಟಿದ್ದಾನೆ. ಕೃಷ್ಣರಾಯನು ತಾನು ನಿರ್ಮಿಸಿದ ದೇವಾಲಯಗಳಿಗೆ ದತ್ತಿಗಳನ್ನು ಕೊಟ್ಟಾಗ ತನ್ನ ತಂದೆ-ತಾಯಿಗಳಿಗೆ ಪುಣ್ಯವಾಗಲೆಂದು ಕೊಟ್ಟಿರುವ ದಾನಗಳೇ ಹೆಚ್ಚು. ಕೃಷ್ಣರಾಯನೇ ನೇರವಾಗಿ ದಾನಿಯಾಗಿರುವ ದಾನ ಶಾಸನಗಳ ಉದ್ದೇಶಗಳನ್ನು ಈ ಮುಂದಿನಂತೆ ವಿಭಾಗಿಸಬಹುದು

1. ವಿಜಯಯಾತ್ರೆ ಸಫಲವಾಗಲೆಂದು
2. ದಂಡಯಾತ್ರೆಯಲ್ಲಿ ವಿಜಯಶಾಲಿಯಾಗಿದ್ದನ್ನು ಕೊಂಡಾಡುವ ಸಲುವಾಗಿ
3. ದೈವತ್ವದ ಅರ್ಚನೆಯ ಸಲುವಾಗಿ
4. ಪುಣ್ಯಾರ್ಜನೆಗಾಗಿ, ದೇವರ ಅಮೃತ ಪಡಿಗೆ, ನಂದಾದೀವಿಗೆಗೆ ಮತ್ತು ಇತರ ವೆಚ್ಚಗಳಿಗೆ
5. ಪಿತೃಗಳಿಗೆ ಪುಣ್ಯಲೋಕ ಪ್ರಾಪ್ತವಾಗಲೆಂದು ಅಥವಾ ಮಾತಾ-ಪಿತೃಗಳಿಗೆ ಪುಣ್ಯವಾಗಲೆಂದು

ತಿರುಪತಿಯ ದೇವಸ್ಥಾನ ಮತ್ತು ಕಾಳಹಸ್ತಿಯ ದೇವಸ್ಥಾನಗಳಲ್ಲಿರುವ ಕೃಷ್ಣರಾಯನ ಕಾಲದ ಕನ್ನಡ ಶಾಸನಗಳನ್ನು ಅವಲೋಕಿಸಿದಾಗ ಆತನ ದೈವಭಕ್ತಿ ವೇದ್ಯವಾಗುತ್ತದೆ. ತಿರುಮಲದ ಆರಾಧ್ಯದೈವ ವೆಂಕಟನಾಥನ ಪರಮಭಕ್ತನಾಗಿದ್ದ ಕೃಷ್ಣರಾಯನಲ್ಲದೆ ಆತನ ಪತ್ನಿಯರಾದ ತಿರುಮಲದೇವಿ, ಚಿನ್ನಾದೇವಿಯರು ಸಹ ದಾನ ನೀಡಿರುವುದು ವಿಶೇಷವೆನಿಸುತ್ತದೆ. ಕೃಷ್ಣರಾಯನು ತಿರುಪತಿಯ ವೆಂಕಟನಾಥನಿಗೆ ಕನಕಾಭಿಷೇಕಕ್ಕೋಸ್ಕರವೇ ವೆಂಕಟೇಶ್ವರನ ಚಿತ್ರವುಳ್ಳ ಚಿನ್ನದ

ನಾಣ್ಯಗಳನ್ನು ಅಚ್ಚು ಹಾಕಿಸಿ ಅವುಗಳನ್ನು ಕನಕಾಭಿಷೇಕಕ್ಕೆ ಬಳಸಿದ್ದುದು ಆತನ ನಾಣ್ಯಗಳ ಅಧ್ಯಯನದಿಂದ ತಿಳಿದುಬರುತ್ತದೆ. ಅಲ್ಲದೆ ತಿರುಮಲೆಯಲ್ಲಿನ ಆತನ ಶಾಸನವೊಂದು ಸಹ ಇದನ್ನು ಉಲ್ಲೇಖಿಸುತ್ತದೆ. ಇದೆಲ್ಲಕ್ಕಿಂತ ಮಿಗಿಲಾಗಿ ಕೃಷ್ಣರಾಯನು ವೆಂಕಟನಾಥನಲ್ಲಿಟ್ಟಿದ್ದ ಅಪಾರ ಭಕ್ತಿಯನ್ನು ತನ್ನ ಕಂಚಿನ ವಿಗ್ರಹಗಳನ್ನು ದೇವಾಲಯದಲ್ಲಿರಿಸಿರುವುದರ ಮೂಲಕ ಮತ್ತೂ ದೃಢಪಡಿಸುತ್ತಾನೆ.

ಕೃಷ್ಣರಾಯನ ಪತ್ನಿ ತಿರುಮಲಾದೇವಿ ತಿರುವೇಂಗಳನಾಥನಿಗೆ ನೈವೇದ್ಯ ವನ್ನಿಡುವುದಕ್ಕೆ ಚಿನ್ನದ ಬಟ್ಟಲುಗಳನ್ನು ದಾನವಾಗಿ ನೀಡಿದ್ದನ್ನು ಹಲವಾರು ಶಾಸನಗಳು ಉಲ್ಲೇಖಿಸುತ್ತವೆ. ಇದೇ ರೀತಿ ಚಿನ್ನಮ್ಮಾಜಿ ಸಹ ಚಿನ್ನದ ಬಟ್ಟಲುಗಳನ್ನು ನೀಡಿದ್ದನ್ನು ತಿಳಿಸುತ್ತದೆ. ಅದೇ ದೇವಾಲಯದ ಕ್ರಿ. ಶ. 1513ರ ಕೃಷ್ಣರಾಯನ ಶಾಸನವು ದೇವರ ಸೇವೆಗಾಗಿ ನವರತ್ನ ಖಚಿತವಾದ ಕಿರೀಟವನ್ನು, ಪದಕವನು, ಹದಿನೈದು ಬೆಳ್ಳಿಯ ಆರತಿಗಳನ್ನು ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನದ ಮತ್ತೊಂದು ವಿಶೇಷವೆಂದರೆ ಕಿರೀಟದಲ್ಲಿ ಬಳಸಿದ ನವರತ್ನಗಳ ಸಂಖ್ಯೆಯನ್ನು ಮತ್ತು ತೂಕವನ್ನು ಉಲ್ಲೇಖಿಸುತ್ತದೆ.

ಮತ್ತೆರಡು ಶಾಸನಗಳಲ್ಲಿ ಸಹ ಇದೇ ವಿಷಯ ಉಲ್ಲೇಖಿತವಾಗುತ್ತದೆ. ಆದರೆ ಕಿರೀಟಕ್ಕೆ ಬಳಸಲಾದ ಚಿನ್ನದ ತೂಕ ಮತ್ತು ದಾನ ನೀಡಿದ ಬೆಳ್ಳಿಯ ಆರತಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಈ ದಾನಗಳನ್ನು ಉಲ್ಲೇಖಿಸುವ ಶಾಸನಗಳ ಮೂಲ ಶಾಸನದ ಪ್ರತಿಗಳನ್ನು ಕನ್ನಡ, ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಯ ಶಾಸನಗಳಲ್ಲಿ ಕಾಣಬಹುದಾಗಿದೆ. ಈ ಬಗೆಯ ಉಲ್ಲೇಖ ತೂಕ ಹಾಗೂ ಇತರ ವಿವರಗಳನ್ನು ಶಾಸನದಲ್ಲಿ ನಮೂದಿಸಿರುವುದು ಆತನು ನೀಡಿದ ದಾನವನ್ನು ಹೆಗ್ಗಳಿಕೆಯ ವಿಷಯವಾಗಿಸದೆ ದಾನ ನೀಡಿದ ಪದಾರ್ಥವನ್ನು ಗುರುತಿಸುವ ಹಾಗೂ ಅದನ್ನು ಪರಂಪರೆಯಲ್ಲಿ ಬದಲಾಗದಂತೆ ಮುಂದಿನ ದಿನಗಳಲ್ಲಿ ಕಾಪಾಡುವ ಸಲುವಾಗಿ ನೋಂದಾಯಿಸಿರುವ ಸಂದರ್ಭ ಒದಗಿತ್ತೆಂದು ಊಹಿಸಬಹುದಾಗಿದೆ. ಕ್ರಿ. ಶ. 1513ರ ಮೇ ತಿಂಗಳಿನಲ್ಲಿ ತಿರುವೇಂಗಳನಾಥನಿಗೆ ಉಡಿದಾರ, ಕಠಾರಿ ಕಠಾರಿಯ ಕುಚ್ಚು, ಒರೆ, ಅಡ್ಡಿಗೆ, ಭುಜಕೀರ್ತಿ, ಉತ್ಸವ ದೇವರಿಗೆ ಮೂರು ಕಿರೀಟಗಳನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. 1513ರ ಜೂನ್ 13ರಲ್ಲಿ ಕೃಷ್ಣರಾಯನು ತಿರುವೇಂಗಳನಾಥ ದೇವರಿಗೆ ಹರಿವಾಣಗಳು, ಗಂಧಗಳ, ಕರ್ಪೂರ ಕಣ, ಕಸ್ತೂರಿ ಕಣ, ಶುದ್ಧ ಕುಂಕುಮ ಅಡಕೆ 300 ಎಲೆ 600 ಗಳನ್ನು ಅಲ್ಲದೆ ಚಂದ್ರಗಿರಿ ರಾಜ್ಯದ ನಾರಣವರದ ಅಂತಾಡಿ ಚಿತ್ತವಾಟಿ ಗ್ರಾಮಗಳನ್ನು ದಾರಧ ಗ್ರಾಮ, ಕರ ಕಂಪೇವಾಟಿ ಗ್ರಾಮಗಳನ್ನು ದಾನ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ. ಕ್ರಿ. ಶ. 1514ರ ಜುಲೈ 6 ರಂದು ಉದಯಗಿರಿ ಹಂಪಯಾತ್ರೆಯನ್ನು ಸಾಧಿಸಿ ಹಿಂತಿರುಗುವ ದಾರಿಯಲ್ಲಿ ತಿರುವೇಂಗಳನಾಥ

ದೇವರಿಗೆ ಕನಕಾಭಿಷೇಕವನ್ನು ಮಾಡಿಸಿ ಮುತ್ತು, ರತ್ನಖಚಿತವಾದ ಮೂರು ಎಳೆಯ ಸರವನ್ನು ದೇವರಿಗೆ ನೀಡಿದ್ದಲ್ಲದೆ, ಹಲವಾರು ಗ್ರಾಮಗಳನ್ನು ದೇವರ ಸೇವೆಗೆ ದಾನ ನೀಡಿದ್ದನ್ನು ಮತ್ತೊಂದು ಶಾಸನ ಉಲ್ಲೇಖಿಸುತ್ತದೆ. ಅದೇ ದಿನದಂದು ಚಿನ್ನಾದೇವಿ ದೇವರಸೇವೆಗಾಗಿ ಮುತ್ತು, ರತ್ನ, ವಜ್ರದಿಂದ ಕೂಡಿದ ಕಂಠಹಾರವನ್ನು ದೇವರಿಗೆ ಸಮರ್ಪಿಸುತ್ತಾಳೆ. ತಿರುಮಲಾದೇವಿ ಸಹ ಇದೇ ರೀತಿಯ ದಾನ ಮಾಡಿರುವುದನ್ನು ಮತ್ತೊಂದು ಶಾಸನ ಉಲ್ಲೇಖಿಸುತ್ತದೆ.

ಕ್ರಿ. ಶ. 1515ರ ಅಕ್ಟೋಬರ್ 25ರಂದು ಕೃಷ್ಣರಾಯನು ಕೃಷ್ಣಾನದಿ ತೀರದ ಅಮರೇಶ್ವರಕ್ಕೆ ಬಂದು ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿ ಯರಿಂದ ಅಮರೇಶ್ವರನಿಗೆ ಮಹಾದಾನವನ್ನು ಮಾಡಿ, ತಿರುವೇಂಗಳನಾಥನ ದರ್ಶನ ಮಾಡಿ ಆತನಿಗೆ ನವರತ್ನಖಚಿತವಾದ ಪ್ರಭಾವಳಿಯನ್ನು ನೀಡುತ್ತಾನೆ. ಈ ಶಾಸನ ಪ್ರಭಾವಳಿಗೆ ಬಳಸಿದ ನವರತ್ನಗಳ ಸಂಖ್ಯೆಯನ್ನು, ಪ್ರಭಾವಳಿಗೆ ಬಳಸಿದ ತಗಡುಗಳ ತೂಕ ಮುಂತಾದ ವಿವರಗಳನ್ನು ಒದಗಿಸುತ್ತದೆ. 1521ರ ಫೆಬ್ರವರಿ 17ರ ಶಾಸನ ಕೃಷ್ಣರಾಯನು ತಿರುಪತಿಗೆ ಆಗಮಿಸಿ ದೇವರಿಗೆ ನವರತ್ನಖಚಿತವಾದ ಪೀತಾಂಬರ, ನವರತ್ನಖಚಿತವಾದ ಎರಡು ಚಾಮರಗಳು, ಒಂದು ಪದಕ ಮತ್ತು ಹತ್ತು ಸಾವಿರ ವರಹಗಳನ್ನು ದಾನ ನೀಡುತ್ತಾನೆ. ಅಲ್ಲದೆ ತನ್ನ ರಾಣಿ ತಿರುಮಲಾದೇವಿಯ ಕೈಯಿಂದ ತಿರುವೇಂಗಳನಾಥನಿಗೆ ಪದಕವನ್ನು ದಾನ ಕೊಡಿಸುತ್ತಾನೆ.

ಕ್ರಿ. ಶ. 1513ರ ಫೆಬ್ರವರಿ 10ರ ಗುರುವಾರದಂದು ಕೃಷ್ಣರಾಯನು ಕಾಳಹಸ್ತಿಯ ಕಾಳಹಸ್ತೇಶ್ವರ ಸ್ವಾಮಿಗೆ ಮುತ್ತಿನ ಕಂಠಮಾಲೆ, ಮಾಣಿಕ್ಯದ ಕಂಠಮಾಲೆ, ಚಿನ್ನದ ಬಟ್ಟಲು, ಚಿನ್ನದ ಪುರುಷಾಮೃಗದ ಆರತಿ, ಗಿರಿಯಾರತಿ ಅಲ್ಲದೆ 25 ಬೆಳ್ಳಿಯ ಆರತಿಗಳನ್ನು ದಾನ ಮಾಡಿದ್ದಾನೆ. ಮತ್ತೊಂದು ಶಾಸನ ಇದೇ ಸಂಖ್ಯೆಯ ಮತ್ತು ಮೇಲೆ ಹೇಳಿದ ಪದಾರ್ಥಗಳನ್ನು ದಾನ ನೀಡಿದಾಗಿ ಉಲ್ಲೇಖಿಸುತ್ತದೆ. ಬಹುಶಃ ಇದು ಮೊದಲ ಶಾಸನದ ಪ್ರತಿಯಾಗಿರಬೇಕು. ಕ್ರಿ. ಶ. 1513ರ ಮೇ 11ರಲ್ಲಿ ಕೃಷ್ಣರಾಯನು ಕಾಳಹಸ್ತೇಶ್ವರ ದೇವರಿಗೆ ನವರತ್ನ ಖಚಿತವಾದ ಪದಕವನ್ನು ಸಮರ್ಪಿಸಿದ್ದಾನೆ. ಕ್ರಿ. ಶ. 1513ರ ಮತ್ತೊಂದು ಶಾಸನ ಕಾಳಹಸ್ತಿಯ ಕಾಳಹಸ್ತೇಶ್ವರ ಸ್ವಾಮಿಗೆ ಕೃಷ್ಣರಾಯನು ತನ್ನ ಮಾತಾಪಿತೃಗಳಿಗೆ ಪುಣ್ಯವಾಗಲೆಂದು ರತ್ನಖಚಿತವಾದ ಚಿನ್ನದ ಪ್ರಭಾವಳಿಯನ್ನು ಮಾಡಿಸಿಕೊಟ್ಟಿದುದನ್ನು ಅಲ್ಲದೇ, ಪೂಜೆಗಾಗಿ ತೆಂಗಿನಕಾಯಿ, ಏಲಕ್ಕಿ, ಲವಂಗ, ಸಂಪಿಗೆ, ಸಕ್ಕರೆ, ಎಳನೀರು, ಬಾಳೆಹಣ್ಣು, ಜೇನುತುಪ್ಪ, ವಡೆ, ಎಲೆ, ಅಡಕೆ, ಕರ್ಪೂರ, ಕಜ್ಜಾಯ, ತುಪ್ಪ, ಕಸ್ತೂರಿ ಮುಂತಾದವುಗಳನ್ನು ರಥೋತ್ಸವಗಳಿಗೆ ಅನೇಕ ಗ್ರಾಮಗಳನ್ನು ಕೊಟ್ಟಿದುದನ್ನು

ಉಲ್ಲೇಖಿಸುತ್ತದೆ. ಇದಲ್ಲದೆ 50 ಮಂದಿ ಬ್ರಾಹ್ಮಣರು ಪ್ರತಿನಿತ್ಯ ಊಟ ಮಾಡುವ ಛತ್ರಕ್ಕೆ ಸಹ ಹಲವಾರು ಗ್ರಾಮಗಳನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.

ಕ್ರಿ. ಶ. 1517ರ ಮಾರ್ಚ್ 17ರಂದು ತನಗೆ ಪುಣ್ಯವಾಗಲೆಂದು ಕಾಳಹಸ್ತೇಶ್ವರ ದೇವರ ಅಮೃತಪಡಿಗೆ, ದೇವರ ನೈವೇದ್ಯಕ್ಕೆ ಗೋಧಿಯ ಕಜ್ಜಾಯ, ಅಕ್ಕಿ–ತುಪ್ಪ, ಹೆಸರು ಬೇಳೆ ಮೊಸರು, ಬೆಲ್ಲ, ಏಲಕ್ಕಿ ಮುಂತಾದ ವಸ್ತುಗಳನ್ನು ಕೃಷ್ಣರಾಯ ಸಮರ್ಪಿಸುತ್ತಾನೆ.

ಈ ದಾನಶಾಸನಗಳನ್ನು ಅಧ್ಯಯನ ಮಾಡಿದಾಗ ಲೇಖನದ ಪ್ರಾರಂಭದಲ್ಲಿ ಹೇಳಿದ ದಾನದ ಕೆಲವು ಉದ್ದೇಶಗಳು ಪೂರ್ಣವಾಗಿರುವುದು ತಿಳಿದುಬರುತ್ತದೆ. ಕೃಷ್ಣರಾಯನು ಕೆಲವು ಬಾರಿ ಪುಣ್ಯಾರ್ಜನೆಗಾಗಿ, ಕೆಲವು ಬಾರಿ ಕೋರಿಕೆಯ ಸಂಕೇತವಾಗಿ, ಕೋರಿಕೆ ಫಲಪ್ರದವಾದದ್ದನ್ನು ಒಪ್ಪಿ ಹರಕೆ ತೀರಿಸುವ ರೀತಿ ಮತ್ತೆ ಕೆಲವು ಬಾರಿ ಮಾತಾ–ಪಿತೃಗಳಿಗೆ ಪುಣ್ಯಲೋಕ ಪ್ರಾಪ್ತಿಗಾಗಿ ದಾನ ಮಾಡಿದ್ದನ್ನು ಖಚಿತಪಡಿಸಿಕೊಳ್ಳಬಹುದು. ಈ ಎಲ್ಲಾ ದಾನಗಳು ಅಭೀಷ್ಟಗಳನ್ನು ಪೂರೈಸಿಕೊಳ್ಳುವ ಉದ್ದೇಶದಿಂದಲೇ ನೀಡಿರುವುದು ಖಚಿತವಾಗುತ್ತದೆ.

ಆಕರ ಗ್ರಂಥಗಳು

1. ಡಿ. ವಿ. ಪರಶಿವಮೂರ್ತಿ (ಸಂ.), *ಕೃಷ್ಣರಾಯನ ಶಾಸನಗಳು*, ಸಂಪುಟ 1, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010
2. *ತಿರುಪತಿ ತಿರುಮಲ ದೇವಸ್ಥಾನಂ* ಇನ್‌ಸ್ಕ್ರಿಪ್ಷನ್ಸ್ ಸಂಪುಟಗಳು.

೯. ವಿಜಯನಗರದಲ್ಲಿರುವ ಕೃಷ್ಣದೇವರಾಯನ ಕ್ರಿ. ಶ. 1513ರ ನಾಲ್ಕು ಶಾಸನಗಳು

ಮೂಲ : ಲೀಲಾ ವರ್ಗೀಸ್, ಅನುವಾದ : ವಿನೋದಾ ಪಾಟೀಲ

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನಲ್ಲಿರುವ ವಿಜಯನಗರ ಪಟ್ಟಣವು (ಈಗಿನ ಹಂಪೆ) ತುಂಗಭದ್ರ ನದಿಯ ದಕ್ಷಿಣ ದಂಡೆಯ ಮೇಲಿದೆ. ಈ ಸಾಮ್ರಾಜ್ಯದ ಅವಶೇಷಗಳು ನದಿಯಿಂದ ಮತ್ತು ಹಂಪೆ ಗ್ರಾಮದಿಂದ ದಕ್ಷಿಣಕ್ಕೆ 25 ಕಿ. ಮೀ ರವರೆಗೆ ಹಬ್ಬಿವೆ. ಹೀಗೆ ಹಬ್ಬಿದ ಪ್ರದೇಶವನ್ನು ಧಾರ್ಮಿಕ ಪ್ರದೇಶ, ನೀರಾವರಿ ಕೊಳ್ಳ ಅಥವ ಕೃಷಿ ಭೂಮಿ, ಜನವಸತಿಯ ಪಟ್ಟಣ ಪ್ರದೇಶ ಮತ್ತು ಉಪನಗರ (Sub urban) ಪ್ರದೇಶ ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಧಾರ್ಮಿಕ ಪ್ರದೇಶವು ತುಂಗಭದ್ರ ನದಿಯ ದಕ್ಷಿಣ ದಿಕ್ಕಿನಲ್ಲಿದೆ. ಈ ಪ್ರದೇಶದಲ್ಲಿ ಅನೇಕ ದೊಡ್ಡ ದೇವಸ್ಥಾನಗಳ ಆವರಣಗಳು ಅನೇಕ ಸಣ್ಣ ದೇವಸ್ಥಾನಗಳು, ವಿಗ್ರಹಗಳು ಕಂಡುಬರುತ್ತವೆ. ಧಾರ್ಮಿಕ ಪ್ರದೇಶದ ದಕ್ಷಿಣಕ್ಕೆ ಕೃಷಿಭೂಮಿ ಮತ್ತು ಇದರ ದಕ್ಷಿಣಕ್ಕೆ ಪಟ್ಟಣ ಪ್ರದೇಶಗಳಿವೆ. ಪಟ್ಟಣಪ್ರದೇಶವು ಕೋಟೆಯ ಗೋಡೆಯಿಂದ ಸುತ್ತುವರಿಯಲ್ಪಟ್ಟಿತ್ತು. ಈ ಪ್ರದೇಶದ ನೈಋತ್ಯ ಭಾಗದಲ್ಲಿ ಅರಮನೆಗಳ ಆವರಣವಿತ್ತು. ಪಟ್ಟಣ ಪ್ರದೇಶದ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿ ಅಂದರೆ ಈಗಿನ ಹೊಸಪೇಟೆ ಯವರೆಗೂ ಜನವಸತಿ ಪ್ರದೇಶವಿದೆ. ಪಟ್ಟಣದ ಒಳಗೆ ಈಗಲೂ 350 ದೇವಸ್ಥಾನ ಗಳು ಮತ್ತು ಗುಡಿಗಳ ಅವಶೇಷಗಳಿವೆ.

ವಿಜಯನಗರವನ್ನು ಸಂಗಮ, ಸಾಳುವ, ತುಳುವ, ಅರವೀಡು ವಂಶದ ಅನೇಕ ಅರಸರು ಆಳಿದ್ದಾರೆ. ಇವರೆಲ್ಲ ಹಿಂದೂ ಧರ್ಮದ ರಕ್ಷಕರಾಗಿದ್ದು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ದಾನ ನೀಡಿ ಪ್ರೋತ್ಸಾಹಿಸಿದ್ದಾರೆ. ವಿಜಯನಗರ ವನ್ನಾಳಿದ ಅರಸರಲ್ಲಿ ಕೃಷ್ಣದೇವರಾಯನು ಪ್ರಮುಖ ವ್ಯಕ್ತಿಯಾಗಿ ನಿಲ್ಲುತ್ತಾನೆ. ಈತನು ಕೇವಲ ಪ್ರಸಿದ್ಧ ಅರಸ ಮತ್ತು ಆಡಳಿತಗಾರನಾಗಿರದೆ ಧರ್ಮ, ಸಂಸ್ಕೃತಿ, ಕಲೆಗಳ ಪ್ರೋತ್ಸಾಹಕನಾಗಿದ್ದ. ಈತನು ಸಿಂಹಾಸನಕ್ಕೆ ಬರುವ ಸಮಯದಲ್ಲಿ ರಾಜ್ಯದ ಪರಿಸ್ಥಿತಿಯು ಅಸ್ಥಿರವಾಗಿತ್ತು. ಉಮ್ಮತ್ತೂರಿನ ನಾಯಕನು ಮೈಸೂರು ದೇಶದ ಒಡೆಯನಾಗಬೇಕೆಂದು ಪ್ರಯತ್ನಿಸುತ್ತಿದ್ದ. ಒರಿಸಾವನ್ನಾಳುತ್ತಿದ್ದ ಗಜಪತಿಯು ಈಶಾನ್ಯ ಭಾಗವನ್ನು ವಶಪಡಿಸಿಕೊಂಡಿದ್ದ ಮತ್ತು ಉತ್ತರದ ಭಾಗದಿಂದ ಬಹಮನಿಯ ಅರಸರು ವೈರಿಗಳಾಗಿದ್ದರು. ಕೃಷ್ಣದೇವರಾಯನು ತನ್ನ ಆಡಳಿತದ

ಪ್ರಾರಂಭದ ಕಾಲದಲ್ಲಿ ಬಹಮನಿಯರನ್ನು ಧೈರ್ಯದಿಂದ ಎದುರಿಸಿ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡನು. ನಂತರ ಉಮ್ಮತ್ತೂರು ನಾಯಕನನ್ನು ಸದೆಬಡಿದನು. ಹೀಗೆ ಕ್ರಿ. ಶ. 1513ರ ಸಮಯಕ್ಕೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ನಂತರದಲ್ಲಿ ಆತನಿಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯ ಕ್ಷೇತ್ರಗಳತ್ತ ಗಮನಹರಿಸಲು ಅವಕಾಶವಾಯಿತು. ದೇವಸ್ಥಾನಗಳಿಗೆ ದಾನ ನೀಡಲು, ದುರಸ್ತಿಕಾರ್ಯ ಕೈಗೊಳ್ಳಲು ಸಮಯ ಮತ್ತು ಸಂಪತ್ತು ದೊರಕಿತೆಂದು ಹೇಳಬಹುದು. ಈ ಸಮಯಕ್ಕೆ ಆತನು ಸಾಕಷ್ಟು ರಾಜಕೀಯ ಸ್ಥಿರತೆಯನ್ನು ಮತ್ತು ಭದ್ರತೆಯನ್ನು ಪಡೆದಿದ್ದರಿಂದ ಈ ಕಾರ್ಯಗಳನ್ನು ಕೈಗೊಳ್ಳಲು ಸಮರ್ಥನಾಗಿದ್ದ. ಒರಿಸ್ಸಾ ಯುದ್ಧದಲ್ಲಿ ಗೆದ್ದು ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಕೃಷ್ಣದೇವರಾಯನು ರಾಜ್ಯದ ಒಳಗೆ ಮತ್ತು ಹೊರಗೆ ಪ್ರವಾಸ ಕೈಗೊಂಡು ಧಾರ್ಮಿಕ ಕ್ಷೇತ್ರಗಳಿಗೆ ಉದಾರ ಕೊಡುಗೆಗಳನ್ನು ನೀಡಿದನು.

ಕ್ರಿ. ಶ. 1513ರಲ್ಲಿ ಸಂಭವಿಸಿದ ಸೂರ್ಯಗ್ರಹಣದಂದು ಕೃಷ್ಣದೇವರಾಯನು ವಿರೂಪಾಕ್ಷ, ಪ್ರಸನ್ನ ವಿರೂಪಾಕ್ಷ, ವಿಠಲ ಮತ್ತು ರಾಮಚಂದ್ರ ಈ ನಾಲ್ಕೂ ದೇವಸ್ಥಾನಗಳಿಗೆ ಒಂದೇ ಬಗೆಯ ದಾನ ನೀಡಿ ಶಾಸನಗಳನ್ನು ಬರೆಯಿಸಿದ್ದಾನೆ. ಇವುಗಳಲ್ಲಿ ವಿರೂಪಾಕ್ಷ ದೇವಸ್ಥಾನದಲ್ಲಿ ಮಾತ್ರ ಈಗಲೂ ಪೂಜೆ ನಡೆಯುತ್ತಿದ್ದು ಉಳಿದ ಮೂರು ದೇವಸ್ಥಾನಗಳಲ್ಲಿ ವಿಗ್ರಹಗಳು ಸಹ ಕಾಣೆಯಾಗಿವೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕಿಂತ ಪೂರ್ವದಲ್ಲಿಯೇ ವಿರೂಪಾಕ್ಷ ದೇವರು ವಿಜಯನಗರ ಸಾಮ್ರಾಜ್ಯದ ಪ್ರಧಾನ ದೇವತೆಯಾಗಿದ್ದ ನಂತರದ ಕಾಲದಿಂದ ಇಂದಿನವರೆಗೂ ಈತ ಪ್ರಧಾನ ದೇವರಾಗಿಯೇ ಜನರ ಮನಸ್ಸಿನಲ್ಲುಳಿದಿದ್ದಾನೆ. ಕೃಷ್ಣದೇವರಾಯನು ಸೂರ್ಯಗ್ರಹಣದಂದು ತನ್ನ ತಂದೆ-ತಾಯಿಗಳಿಗೆ ಪುಣ್ಯ ದೊರೆಯಲೆಂದು ಒಂದೇ ನಾಲ್ಕು ದಿನ ದೇವಸ್ಥಾನಗಳಿಗೆ ದಾನ ನೀಡಿ ಶಾಸನಗಳನ್ನು ಬರೆಯಿಸಿದ್ದು ಒಂದು ಮಹತ್ವದ ಕಾರ್ಯವೆನಿಸುತ್ತದೆ. ಯಾಕೆಂದರೆ ಅಚ್ಯುತರಾಯನನ್ನು ಹೊರತುಪಡಿಸಿ ಉಳಿದ ಯಾವುದೇ ವಿಜಯನಗರ ಅರಸರು ಒಂದೇ ದಿನ ಹೀಗೆ ದಾನ ನೀಡಿಲ್ಲ. ಅಚ್ಯುತರಾಯನು ಪಟ್ಟಕ್ಕೇರಿದ ದಿವಸ ಏಕಾಂಬರನಾಥ ದೇವಸ್ಥಾನಕ್ಕೆ ನಾಲ್ಕು ಗ್ರಾಮಗಳನ್ನು ದಾನ ನೀಡಿದ್ದಾನೆ.

ಒಂದನೆಯ ದೇವರಾಯನ ಕಾಲದಿಂದ (ಕ್ರಿ. ಶ. 1406-1422) ರಾಮನನ್ನು ಪೂಜಿಸುವ ಸಂಪ್ರದಾಯವು ಪ್ರಾರಂಭವಾಗಿ ಅರಮನೆಯ ಆವರಣದಲ್ಲಿ ಹೃದಯಭಾಗದಲ್ಲಿ ರಾಮನಿಗೆ ದೇವಸ್ಥಾನ ಕಟ್ಟಲಾಯಿತು. ಇದರಿಂದ ರಾಮದೇವರು ಅರಸರ ಮನೆದೇವರಾಗಿ ಪೂಜಿಸಲ್ಪಡುತ್ತಿದ್ದನೆಂಬುದು ತಿಳಿದುಬರುತ್ತದೆ. ಇಲ್ಲಿ ರಾಮನ ದೇವಸ್ಥಾನವಿರುವುದರಿಂದ ಹಂಪೆ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು

ರಾಮಾಯಣದಲ್ಲಿ ಬರುವ ಕಿಷ್ಕಿಂಧೆಯಾಗಿತ್ತೆಂದು ಊಹಿಸಲಾಗಿದೆ. ವಿಠಲ ದೇವರನ್ನು ಸಹ ಇದೇ ಕಾಲದಿಂದ ಪೂಜಿಸಲು ಪ್ರಾರಂಭಿಸಲಾಯಿತು.

ವಿಠಲ ದೇವಸ್ಥಾನದಲ್ಲಿ ಶಾಸನಗಳನ್ನು ಎರಡು ಸ್ಥಳಗಳಲ್ಲಿ ಕೆತ್ತಲಾಗಿದೆ. ರಂಗಮಂಟಪದ ಪೂರ್ವದ ಬಾಗಿಲಿನ ಮೇಲೆ ಮತ್ತು ದಕ್ಷಿಣಕ್ಕಿರುವ ಬಾಗಿಲಿನ ಮೇಲೆ ಕೆತ್ತಿದ್ದಾರೆ. ಇದಕ್ಕೆ ಕಾರಣ ಬಹುಶಃ ದೇವರ ದರ್ಶನಕ್ಕೆ ಬರುವ ಭಕ್ತರು ಯಾವ ಬಾಗಿಲಿನಿಂದ ಬಂದರೂ ಅವರ ಗಮನಕ್ಕೆ ಈ ಶಾಸನಗಳು ಬರಬೇಕೆಂದು ಎರಡು ಸ್ಥಳಗಳಲ್ಲಿ ಕೆತ್ತಿರಬಹುದು. ವಿಠಲ ದೇವಸ್ಥಾನಕ್ಕೆ ಕ್ರಿ. ಶ. 1513ರಲ್ಲಿ ಕೃಷ್ಣ ದೇವರಾಯನು ನೀಡಿದ ದಾನವು ಮೊಟ್ಟ ಮೊದಲ ದಾನವಾಗಿದೆ ಮತ್ತು ಈ ಸಮಯದಲ್ಲಿ ಬರೆಯಿಸಿದ ಎರಡು ಶಾಸನಗಳು ಪ್ರಥಮವಾಗಿ ಬರೆಯಿಸಿದ ಶಾಸನಗಳಾಗಿವೆ. ನಂತರ 1564ರವರೆಗೆ ಕೃಷ್ಣದೇವರಾಯನನಂತರ ಆಳಿದ ಅರಸರು, ಅಧಿಕಾರಿಗಳು, ನಾಗರಿಕರು ಈ ದೇವಸ್ಥಾನಕ್ಕೆ ದಾನನೀಡಿದ್ದಾರೆ. ಕ್ರಿ. ಶ. 1516–17ರಲ್ಲಿ ಕೃಷ್ಣದೇವರಾಯನು ಈ ದೇವಸ್ಥಾನದ ಆವರಣದಲ್ಲಿ 100 ಕಂಬಗಳುಳ್ಳ ಮೊಗಸಾಲೆ ಮತ್ತು ಕ್ರಿ. ಶ 1513–26ರ ಮಧ್ಯಕಾಲದಲ್ಲಿ ಬೇರೆ ಬೇರೆ ಐದು ಸಂದರ್ಭಗಳಲ್ಲಿ ದಾನ ನೀಡಿದ್ದಾನೆ. ಈ ಸಮಯದಲ್ಲಿ ವೈಷ್ಣವಧರ್ಮ, ವಿಶೇಷವಾಗಿ ವಿಠಲನ ಆರಾಧನೆ, ವಿಜಯನಗರ ಪಟ್ಟಣದಲ್ಲಿ ಪ್ರಾರಂಭವಾಯಿತು. ನಂತರ ವಿರೂಪಾಕ್ಷ ದೇವರ ಆರಾಧನೆ ಮತ್ತು ಶೈವಧರ್ಮದ ಪ್ರಾಮುಖ್ಯತೆ ಕಡಿಮೆಯಾಯಿತೆಂದು ಹೇಳಬಹುದು. ಕ್ರಿ. ಶ. 1513ಕ್ಕಿಂತ ಪೂರ್ವಕಾಲದ ಯಾವುದೇ ಶಾಸನ ಕೃಷ್ಣದೇವರಾಯನು ವೈಷ್ಣವ ದೇವರಿಗೆ ದಾನ ನೀಡಿದ ವಿಷಯ ತಿಳಿಸುವುದಿಲ್ಲ ಮತ್ತು ಈ ಕಾಲದನಂತರದ ಯಾವುದೇ ಶಾಸನವು ಶೈವ ದೇವರಿಗೆ ದಾನ ನೀಡಿದ ವಿಷಯ ತಿಳಿಸುವುದಿಲ್ಲ.

ವಿರೂಪಾಕ್ಷ ದೇವಸ್ಥಾನಕ್ಕೆ ಕೃಷ್ಣದೇವರಾಯನು ಎಂಟು ಗ್ರಾಮಗಳನ್ನು, ತೋಟ ಮತ್ತು ತೆರಿಗೆರಹಿತ ಭೂಮಿಯನ್ನು ದಾನ ನೀಡಿದ್ದಾನೆ. ಅಲ್ಲದೆ ನಾಗಾಭರಣ, ಒಂದು ಚಿನ್ನದ ತಟ್ಟೆ, ಎರಡು ಚಿನ್ನದ ಆರತಿ ತಟ್ಟೆ ಮತ್ತು ಕೆಲವು ಬೆಳ್ಳಿ ತಟ್ಟೆಗಳನ್ನು ದಾನ ನೀಡಿದ್ದಾನೆ. ಇಲ್ಲಿ ಶಾಸನವನ್ನು ರಂಗಮಂಟಪಕ್ಕೆ ಹೋಗುವ ದಕ್ಷಿಣದ ಪ್ರವೇಶ ಬಾಗಿಲಿನ ಎರಡೂ ಪಾರ್ಶ್ವಗಳ ಮೇಲೆ ಕೆತ್ತಲಾಗಿದೆ. ಕ್ರಿ. ಶ. 1509–10ರಲ್ಲಿ ಆತನ ಪಟ್ಟಾಭಿಷೇಕದ ಸಮಯದಲ್ಲಿ ಕೃಷ್ಣದೇವರಾಯನು ವಿರೂಪಾಕ್ಷ ದೇವಸ್ಥಾನಕ್ಕೆ ಮಾತ್ರ ಪ್ರಾಶಸ್ತ್ಯ ನೀಡಿದ್ದು ತಿಳಿದುಬರುತ್ತದೆ. ಈ ಸಮಯದಲ್ಲಿ ದೇವಸ್ಥಾನದ ಮಹಾರಂಗಮಂಟಪ ಮತ್ತು ಗೋಪುರವನ್ನು ಕಟ್ಟಿಸಿ, ಪೂರ್ವಕ್ಕಿರುವ ದೊಡ್ಡಗೋಪುರವನ್ನು ದುರಸ್ತಿ ಮಾಡಿಸಿದ್ದನು. ಈತನ ಅಜ್ಜಿಯಾದ ಬುಕ್ಕಾಜಿ ಅಮ್ಮನೂ ಇದೇ ಸಮಯದಲ್ಲಿ ದೇವಸ್ಥಾನಕ್ಕೆ ಭೂಮಿ ದಾನ ನೀಡಿದಳು. ಇದು ಆತನು ಈ ದೇವಸ್ಥಾನಕ್ಕೆ ನೀಡಿದ ಕೊನೆಯ ದಾನವಾಗಿದೆ.

ರಾಮಚಂದ್ರ ದೇವಸ್ಥಾನವು ಚಿಕ್ಕದಾಗಿದ್ದುದರಿಂದ ಇಲ್ಲಿ ಶಾಸನವನ್ನು ದೇವಸ್ಥಾನದ ಅಂಗಳದಲ್ಲಿ ಈಶಾನ್ಯ ಮೂಲೆಯಲ್ಲಿರುವ ಮಂಟಪದ ಹೊರಭಾಗದ ದಕ್ಷಿಣದ ಗೋಡೆಯ ಮೇಲೆ ಕೆತ್ತಲಾಗಿದೆ. ದೇವಸ್ಥಾನದ ಪೂರ್ವಕ್ಕಿರುವ ಮುಖ್ಯ ದ್ವಾರದ ಮೂಲಕ ದೇವಸ್ಥಾನಕ್ಕೆ ಪ್ರವೇಶಿಸುವ ಪ್ರತಿಯೊಬ್ಬರೂ ಈ ಶಾಸನವನ್ನು ನೋಡಿಯೇ ಒಳಗೆ ಪ್ರವೇಶಿಸಬೇಕೆಂಬುದು ಇಲ್ಲಿ ಶಾಸನ ಕೆತ್ತಲು ಕಾರಣವಾಗಿರ ಬಹುದು. ಈ ದೇವಸ್ಥಾನಕ್ಕೆ ಆರು ಗ್ರಾಮಗಳನ್ನು ದಾನ ನೀಡಿದ್ದಾನೆ.

ಪ್ರಸನ್ನ ವಿರೂಪಾಕ್ಷ ದೇವಸ್ಥಾನದಲ್ಲಿ ಮಾತ್ರ ಶಾಸನವನ್ನು ದೇವಸ್ಥಾನದ ಯಾವುದೇ ಭಾಗದಲ್ಲಿ ಕೆತ್ತದೆ, ಒಂದು ಕಲ್ಲಿನ ಹಲಗೆಯ ಮೇಲೆ ಕೆತ್ತಿದ್ದಾರೆ. ಅದು ದೇವಸ್ಥಾನದ ಆವರಣದೊಳಗೆ ಬಿದ್ದಿದೆ. ವಿರೂಪಾಕ್ಷ ಮತ್ತು ವಿಠಲ ದೇವಸ್ಥಾನಗಳು ಧಾರ್ಮಿಕ ಕೇಂದ್ರದಲ್ಲಿ ಮತ್ತು ರಾಮಚಂದ್ರ ಮತ್ತು ಪ್ರಸನ್ನ ವಿರೂಪಾಕ್ಷ ದೇವಸ್ಥಾನಗಳು ಅರಮನೆ ಆವರಣದಲ್ಲಿರುವುದನ್ನು ಗಮನಿಸಿದಾಗ ಕೃಷ್ಣದೇವರಾಯನು ಶೈವ ಮತ್ತು ವೈಷ್ಣವ ಧರ್ಮಗಳನ್ನು ತನ್ನ ರಾಜಧಾನಿಯಲ್ಲಿ ಸಮಾನವಾಗಿ ಕಾಣುತ್ತಿದ್ದನೆಂಬುದನ್ನು ತಿಳಿಸುವುದಲ್ಲದೆ, ಇಡೀ ವಿಜಯನಗರವನ್ನು ಶೈವ ಮತ್ತು ವೈಷ್ಣವ ದೇವರ ರಕ್ಷಣೆಯಲ್ಲಿಟ್ಟಿದ್ದುದನ್ನು ತಿಳಿಸುತ್ತದೆ. ಅಲ್ಲದೆ ಇದು ಅರಸನ ಚತುರತೆ ಮತ್ತು ರಾಜಕೀಯ ಚಾಣಾಕ್ಷ ಬುದ್ಧಿಯನ್ನು ತೋರಿಸುತ್ತದೆ. ಇದೇ ನೀತಿಯನ್ನು ಆತನನಂತರ ಆಳಿದ ಅಚ್ಯುತರಾಯನು ಮುಂದುವರೆಸಿದನು. ಆದರೆ ನಂತರ ಆಳಿದ ಸದಾಶಿವರಾಯ ಮತ್ತು ರಾಮರಾಯರು ಇದನ್ನು ಪಾಲಿಸಲಿಲ್ಲ. ಆದ್ದರಿಂದ, ಈ ಗುಣವು ಕೃಷ್ಣದೇವರಾಯನ ವೈಯಕ್ತಿಕ ಧಾರ್ಮಿಕ ಪ್ರವೃತ್ತಿ ಮತ್ತು ಎಲ್ಲ ಧರ್ಮಗಳ ಸಮನ್ವಯತೆಯ ಗುಣವನ್ನು ತೋರಿಸುತ್ತದೆ.

ಆದಾಗ್ಯೂ ಕೃಷ್ಣದೇವರಾಯನು ಎರಡೂ ಧರ್ಮಗಳಿಗೆ ಸಮಾನ ಪ್ರೋತ್ಸಾಹ ಕೊಟ್ಟಿದ್ದರೂ ಶಾಸನಗಳನ್ನು ಗಮನಿಸಿದಾಗ ವೈಷ್ಣವ ಧರ್ಮಕ್ಕೆ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ತಿಳಿಯುತ್ತದೆ. ಈ ನಾಲ್ಕು ಶಾಸನಗಳನ್ನು ಗಮನಿಸಿದಾಗ ವಿಠಲ ದೇವಸ್ಥಾನಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾನೆ. ಈ ದೇವಸ್ಥಾನಕ್ಕೆ ಮೂರು ಗ್ರಾಮಗಳನ್ನು, ಒಂದು ತೆರಿಗೆರಹಿತ ಗದ್ದೆಯನ್ನು, ಚಿನ್ನ, ಬೆಳ್ಳಿಯ ವಸ್ತುಗಳನ್ನು ದಾನ ನೀಡಿದ್ದಾನೆ. ಅಲ್ಲದೆ ಈತನ ಪತ್ನಿಯರಾದ ಚಿನ್ನಾದೇವಿ ಮತ್ತು ತಿರುಮಲ ದೇವಿಯರು ವಿಠಲ ದೇವಸ್ಥಾನದ ಮೂರು ಗೋಪುರಗಳನ್ನು ಕಟ್ಟಿಸಿ ಕೆಲವು ಚಿನ್ನ, ಬೆಳ್ಳಿಯ ಆರತಿ ತಟ್ಟೆಗಳನ್ನು ಮತ್ತು ಬೆಳ್ಳಿ ದೀಪಗಳನ್ನು ಕಾಣಿಕೆ ನೀಡಿದ್ದಾರೆ. 200 ಹಸುಗಳನ್ನು ದಾನ ನೀಡಿದ್ದಾರೆ. ಕೃಷ್ಣದೇವರಾಯನು ಪತ್ನಿಯರ ಸಮೇತವಾಗಿ ತಿರುಪತಿ–ತಿರುಮಲ ವೆಂಕಟೇಶ್ವರ ದೇವಸ್ಥಾನಕ್ಕೂ ದಾನ ನೀಡಿದ್ದಾನೆ. ಇದನ್ನು ಗಮನಿಸಿದಾಗ ಮತ್ತು ವಿಠಲ ದೇವಸ್ಥಾನದಲ್ಲಿ ಶಾಸನವನ್ನು ಎರಡು ಬಾರಿ

ಕೆತ್ತಿಸಿದ್ದರಿಂದ ಈತನು ವೆಂಕಟೇಶ್ವರನ ಭಕ್ತನಾಗಿದ್ದನೆಂಬುದು ಮತ್ತು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ಸ್ಪಷ್ಟವಾಗುತ್ತಿದೆ.

ಕೃಷ್ಣದೇವರಾಯನ ಈ ನಾಲ್ಕೂ ಶಾಸನಗಳ ಸಾರಾಂಶದಲ್ಲಿ ವ್ಯತ್ಯಾಸವಿದ್ದರೂ ಉಳಿದ ಕೆಲವು ವಿಷಯಗಳಲ್ಲಿ ಸಾಮ್ಯತೆಯಿದೆ. ಈ ನಾಲ್ಕೂ ದಾನಗಳನ್ನು ಸೂರ್ಯ ಗ್ರಹಣದಂದು ನೀಡಲಾಗಿದ್ದು ಇವು ಕನ್ನಡ ಭಾಷೆಯಲ್ಲಿವೆ. ಈ ದಾನದ ಪುಣ್ಯವು ತನ್ನ ತಂದೆ ತಾಯಿಗಳಾದ ನರಸನಾಯಕ ಮತ್ತು ನಾಗಾಜಿ ಅಮ್ಮನವರಿಗೆ ದೊರೆಯ ಬೇಕೆಂಬುದು ಈ ದಾನಗಳ ಉದ್ದೇಶವಾಗಿದೆ. ಈ ದಾನವನ್ನು ಶಾಲಿ ವಾಹನ ಶಕ ವರ್ಷ 1435, ಚೈತ್ರ ಮಾಸ ಶುಕ್ಲ ಪಕ್ಷದ 5ನೇ ದಿನದಂದು ನೀಡ ಲಾಗಿದೆ. ಈ ದಿನವು ಮಾರ್ಚ್ 12, ಕ್ರಿ.ಶ. 1513 ರಂದು ಆಗಿದೆ. ಕ್ರಿ ಶ. 1513 ರ ಶಾಸನಗಳಲ್ಲಾಗಲೀ ಅಥವಾ ಬೇರೆ ಆಕರಗಳಲ್ಲಾಗಲಿ ಮಾರ್ಚ್ 12 ರಂದು ಸಂಭವಿಸಿದ ಈ ಸೂರ್ಯಗ್ರಹಣದ ವಿಶೇಷತೆ ಏನೆಂಬುದು ತಿಳಿದು ಬರುವುದಿಲ್ಲ. ಈ ದಿನ ಹೆಚ್ಚು ದಾನಗಳನ್ನು ನೀಡಿದ್ದುದರಿಂದ ಕೃಷ್ಣದೇವರಾಯನಿಗೆ ಈ ದಿನವು ತುಂಬ ವಿಶೇಷದ್ದಾಗಿರಬಹುದು.

ಏನೇ ಆಗಲಿ ಕೃಷ್ಣದೇವರಾಯನ ಈ ನಾಲ್ಕೂ ಶಾಸನಗಳು ಕೃಷ್ಣದೇವರಾಯನು ಒಬ್ಬ ಉದಾರ ಧಾರ್ಮಿಕ ಮತ್ತು ಪ್ರಭಾವಿ ವ್ಯಕ್ತಿಯೆಂಬುದನ್ನು ಬಿಂಬಿಸುತ್ತವೆ. ಅಲ್ಲದೆ ವಿವಿಧ ಧರ್ಮಗಳಲ್ಲಿ ಸಮತೋಲನವನ್ನು ಕಾಪಾಡಿಕೊಂಡು ಬಂದಂತಹ ವ್ಯಕ್ತಿ ಎಂಬುದನ್ನು ತೋರಿಸುತ್ತವೆ.

ಗ್ರಂಥಋಣ

ಅನಿಲಾ ವರ್ಗಿಸ್‌ರವರ "Four Inscriptions of Krishnadevaraya, Dated A.D. 1513, at Vijayanagara" ಎಂಬ ಪ್ರಬಂಧದ ಕನ್ನಡ ಅನುವಾದ.

೧೦. ದಾವಣಗೆರೆ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಶಾಸನಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ವಿಜಯನಗರ ಅರಸರು ಆಳಿದ ಅವಧಿಯಲ್ಲಿ ಶ್ರೀ ಕೃಷ್ಣದೇವರಾಯನ ಆಳ್ವಿಕೆ ಕಾಲವನ್ನು ಸುವರ್ಣಕಾಲ ಎಂದು ಕರೆಯುತ್ತೇವೆ. ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಈಗಿನ ದಕ್ಷಿಣ ಭಾರತದ ಬಹುಭಾಗದ ಆಡಳಿತವನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿತ್ತು. ಈಗಿನ ಕರ್ನಾಟಕವಲ್ಲದೆ ನೆರೆಯ ತಮಿಳುನಾಡು, ಕೇರಳ, ಮಹಾರಾಷ್ಟ್ರ, ಒರಿಸ್ಸದ ಭೂಭಾಗದಲ್ಲಿ ಕೃಷ್ಣರಾಯ ಹಾಕಿಸಿದ ಶಾಸನಗಳು ಸಿಕ್ಕಿರುವುದು ಇದಕ್ಕೆ ಪ್ರಮುಖ ಸಾಕ್ಷಿಯಾಗಿದೆ. ಅದಕ್ಕಾಗಿಯೇ ಇವನಿಗೆ ಪೂರ್ವ ದಕ್ಷಿಣ ಪಶ್ಚಿಮೋತ್ತರ ಚತುಸಮುದ್ರಾಧಿಪತಿ, ಕನ್ನಡ ರಾಜ್ಯ ರಮಾರಮಣ, ಆಂಧ್ರಭೋಜ, ಯವನರಾಜ್ಯ ಪ್ರತಿಷ್ಠಾಪನಾಚಾರ್ಯ, ಮೂರುರಾಯರ ಗಂಡ, ಅರಿರಾಯ, ಗಜಪತಿ ವಿಘಾಡ, ಪರರಾಯಭಯಂಕರ, ಮಹಾರಾಜಾಧಿರಾಜ, ರಾಜಪರಮೇಶ್ವರ ಇತ್ಯಾದಿ ಬಿರುದುಗಳನ್ನು ಪಡೆದಿದ್ದ. ಇಂತಹ ರಾಜಾಧಿರಾಜನ ಆಳ್ವಿಕೆಗೆ ಈಗಿನ ದಾವಣಗೆರೆ ಜಿಲ್ಲೆಯೂ ಸೇರಿದ್ದರಲ್ಲಿ ಅತ್ಯಾಶ್ಚರ್ಯವೇನೂ ಇಲ್ಲ.

ದಾವಣಗೆರೆ ಜಿಲ್ಲೆ ದಾವಣಗೆರೆ ಶಾಸನ ದೊರೆತಿದ್ದು, ಹರಿಹರ, ಜಗಳೂರು, ಹರಪನಹಳ್ಳಿ, ಚನ್ನಗಿರಿ, ಹೊನ್ನಾಳಿ ಸೇರಿ ಆರು ತಾಲೂಕುಗಳನ್ನು ಒಳಗೊಂಡಿದ್ದು, ಈ ಆರು ತಾಲೂಕುಗಳಲ್ಲಿ ವಿಜಯನಗರ ಅರಸು ಕೃಷ್ಣದೇವರಾಯನ ಉಲ್ಲೇಖಿಸುವ ಎಂಟು ಶಾಸನಗಳು ಈವರೆಗೆ ದೊರೆತಿವೆ. ಇವುಗಳಲ್ಲಿ ಜಗಳೂರು ತಾಲೂಕಿನಲ್ಲಿ ಮೂರು, ಹರಿಹರ, ಹರಪಹಳ್ಳಿ ತಾಲೂಕುಗಳಲ್ಲಿ ತಲಾ ಎರಡು, ಹೊನ್ನಾಳಿ ತಾಲೂಕಿನಲ್ಲಿ, ದಾವಣಗೆರೆ, ಚನ್ನಗಿರಿ ತಾಲ್ಲೂಕಿನಲ್ಲಿ ಒಂದು ಶಾಸನವೂ ಈವರೆಗೆ ದೊರೆತಿಲ್ಲ. ಆದರೆ ಕೈಫಿಯತ್ತು ಮತ್ತಿತರ ದಾಖಲೆಗಳಲ್ಲಿ ಕೃಷ್ಣದೇವರಾಯ ಈ ತಾಲೂಕಿಗೆ ಭೇಟಿಕೊಟ್ಟ ಬಗ್ಗೆ ಮಾಹಿತಿ ಸಿಗುತ್ತದೆ. ಈ ಎಲ್ಲಾ ಎಂಟು ಶಾಸನಗಳೂ ಶಿಲಾಶಾಸನವೇ ಆಗಿದ್ದು, ಅವುಗಳೆಲ್ಲ ಕನ್ನಡ ಭಾಷೆ ಮತ್ತು ಲಿಪಿಯಲ್ಲಿದ್ದು ಈ ಎಲ್ಲಾ ಶಾಸನಗಳನ್ನು ಅವನ ಹೆಸರಿನಲ್ಲಿ ಅವನ ಮಾಂಡಲಿಕರು ಕೃಷ್ಣದೇವರಾಯನಿಗೆ ಒಳಿತಾಗಲಿ ಎಂದು ಹಾರೈಸಿ ಶಾಸನ ಹಾಕಿಸಿದ್ದಾರೆ. ನಮಗೆಲ್ಲಾ ತಿಳಿದಿರುವಂತೆ ಶ್ರೀ ಕೃಷ್ಣದೇವರಾಯನ ಮಗಳು ಮೋಹನಾಂಗಿ ಬರೆದಿರುವ 'ಮಾರಿಚೀ ಪರಿಣಯಂ' ಎಂಬ ಕಾವ್ಯದಲ್ಲಿ ನಮೂದಿಸಿದಂತೆ ಶಕ 1393 ವಿಕೃತಿ ಸಂವತ್ಸರದ

ಪುಷ್ಯ ಬಹಳ ದ್ವಾದಶಿ ಕೃಷ್ಣರಾಯ ಜನ್ಮವೆತ್ತಿದ. ಅದರಂತೆ ಕ್ರಿ. ಶ. 1471ನೇ ಜನವರಿ 17 ಆತನ ಜನ್ಮದಿನ. ಹಂಪಿಯ ವಿರೂಪಾಕ್ಷ ದೇವಸ್ಥಾನದ ರಂಗ ಮಂಟಪದ ಬಳಿ ಇರುವ ಶಾಸನದಂತೆ ಶಕ 1430ನೇ ಶುಕ್ಲ ಸಂವತ್ಸರದ ಮಾಘ ಶುದ್ಧ 14 ಅಂದರೆ ಕ್ರಿ. ಶ. 1510ನೇ ಜನವರಿ 24 ಆತ ಪಟ್ಟಾಭಿಷಿಕ್ತನಾದ ದಿನ. ಅದರ ನೆನಪಿಗಾಗಿ ಈಗ ನಾಡಿನಾದ್ಯಂತ ಶ್ರೀ ಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ಉತ್ಸವವನ್ನು ನಾಡಿನ ಜನತೆ, ಸರ್ಕಾರ ವೈಭವದಿಂದ ಆಚರಿಸುತ್ತಿದೆ. ಹಾಗೆಯೇ ಅವನ ದೈವಾಧೀನನಾಗುವವರೆಗೂ ಅಂದರೆ ಕ್ರಿ. ಶ. 1529ನೇ ಅಕ್ಟೋಬರ್ 27 ರಿಂದ ಡಿಸೆಂಬರ್ 28ವರೆಗೂ ಅವನೇ ಸ್ವತಃ ರಾಜ್ಯಾಡಳಿತ ನಡೆಸುತ್ತಿದುದಾಗಿ ಅನೇಕ ದಾಖಲೆಗಳಿಂದ ತಿಳಿದುಬರುತ್ತದೆ. ಹೀಗಾಗಿ ಅವನ ಆಡಳಿತ ಅವಧಿಯನ್ನು ಕ್ರಿ.ಶ. 1510–1529ರವರೆಗೆ ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ದೊರೆತ ಎಲ್ಲಾ ಶಾಸನಗಳು ಅವನ ಆಡಳಿತಾವಧಿಗೆ ಸರಿಹೊಂದುತ್ತದೆ.

ಈ ಜಿಲ್ಲೆಯ ಹೊನ್ನಾಳಿ ತಾಲೂಕಿನ ಚಿಕ್ಕಗೋಣಿಗೆರೆಯಲ್ಲಿ ಸಿಕ್ಕ ಕ್ರಿ. ಶ. 1510ರ ಶಾಸನವೇ ಈ ಜಿಲ್ಲೆಯ ಆತನ ಪ್ರಥಮ ಶಿಲಾಶಾಸನವಾಗಿದ್ದು, ಇದೇ ಜಿಲ್ಲೆಯ ಜಗಳೂರು ತಾಲೂಕಿನ ಬಿಳಿಚೋಡು ಗ್ರಾಮದಲ್ಲಿ ದೊರೆತ ಕ್ರಿ. ಶ. 1529ರ ಶಾಸನವೇ ಆತನ ಈ ಜಿಲ್ಲೆಯ ಕಡೆಯ ಶಾಸನವಾಗಿದೆ. ಅವನ ಎಂಟು ಶಾಸನಗಳೂ ದಾನ ಶಾಸನಗಳಾಗಿದ್ದು ಇವುಗಳಲ್ಲಿ ಕರ್ನಾಟಕ ಶಾಸನ ಪಿತಾಮಹ ಬಿ. ಎಲ್. ರೈಸರು ತಮ್ಮ ಚಿತ್ರದುರ್ಗ ಶಾಸನ ಸಂಪುಟದಲ್ಲಿ ಜಗಳೂರಿನ–3, ಹರಿಹರದ–2 ಶಾಸನಗಳನ್ನು, *ಶಿವಮೊಗ್ಗ ಜಿಲ್ಲಾ ಶಾಸನ ಸಂಪುಟ* 1ರಲ್ಲಿ ಹೊನ್ನಾಳಿಯ ತಾಲೂಕಿನ ಒಂದು ಶಾಸನವನ್ನು ಪ್ರಕಟಿಸಿದ್ದು, ದಕ್ಷಿಣ ಭಾರತದ ಶಾಸನ ಸಂಪುಟದಲ್ಲಿ ಈಗಾಗಲೇ ಪ್ರಕಟವಾಗಿದ್ದು ಹರಪನಹಳ್ಳಿಯ ಎರಡು ಶಾಸನಗಳನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯ ತನ್ನ ಬಳ್ಳಾರಿ ಜಿಲ್ಲಾ ಶಾಸನ ಸಂಪುಟದಲ್ಲಿ ಪುನಃ ಪ್ರಕಟಿಸಿದೆ.

1) ಚಿಕ್ಕಗೋಣಿಗೆರೆ ಶಾಸನ 1510

ಹೊನ್ನಾಳಿ ತಾಲೂಕು ಕೇಂದ್ರದ ಈಶಾನ್ಯಕ್ಕೆ 10 ಕಿ. ಮೀ ದೂರ ಇರುವ ಚಿಕ್ಕಗೋಣಿಗೆರೆಯ ಕಲ್ಲೇಶ್ವರ ದೇವಸ್ಥಾನದ ಕೈಸಾಲೆಯಲ್ಲಿರುವ 23 ಸಾಲುಗಳ ಈ ಶಾಸನದಲ್ಲಿ ವಿಜಯನಗರ ಕೃಷ್ಣದೇವ ಮಹಾರಾಯರಿಂದ ತಾನು ಉಂಬಳಿಯಾಗಿ ಪಡೆದ ಚಿಕ್ಕಗೋಣಿಗೆರೆ ಎಂಬ ಗ್ರಾಮವನ್ನು ಗಾಜನೂರಿನ ಶಂಬರಿಗೌಡ ಎಂಬುವನು, ತನ್ನ ತಂದೆ ತಾಯಿಯವರಿಗೆ ಪುಣ್ಯಲಭಿಸಲೆಂದು ಪ್ರಮಾಧಿ ಸಂವತ್ಸರದ ಮಾಘಶುದ್ಧ 11 ಸೋಮವಾರದಂದು ತಿರುಮಲೆದೇವಿ ಪಟ್ಟಣದಲ್ಲಿ

ನಿವಾಸಿಮಠವನ್ನು ಕಟ್ಟಿಕೊಂಡಿರುವ ಸುರಗಿ ಒಡೆಯರಿಗೆ ಶಿವಾರ್ಪಣವಾಗಿ ದಾನ ಕೊಟ್ಟ ವಿಚಾರ ತಿಳಿಸುತ್ತದೆ. ಪ್ರಮಾಧಿ ಸಂದ ಮಾಘ ಶುದ್ಧ 11 ಎಂದರೆ ಎಫಿಮರೀಸ್ ಪ್ರಕಾರ ಬುಧವಾರ ದಿನಾಂಕ 15.2.1520 ಆಗುತ್ತದೆ. ಆದರೆ ಕ್ರಿ ಶ 1510 ಎಂದು ರೈಸರ ದಾಖಲೆ ಪರಿಗಣಿಸಿದರೆ ಅದು ಪ್ರಮೋಧ ಸಂವತ್ಸರದ ಮಾಘ ಶುದ್ಧ ಆದರೂ ಅದು ಶುಕ್ರವಾರ ದಿನಾಂಕ 10.01.1511 ಆಗುತ್ತದೆ. ಕಾರಣ ಈ ಶಾಸನದಲ್ಲಿ ನಮೂದಾದ, ದಿನ, ತಿಥಿ ಅನುಮಾನಕ್ಕೆ ಎಡೆಮಾಡುತ್ತದೆ. ಶಾಸನದಲ್ಲಿ ಈಗಿನ ಚಿಕ್ಕಗೋಣಿಗೆರೆಯನ್ನು ಚಿಕ್ಕಗೋಳಿಗೆರೆ ಎಂದು ಉಲ್ಲೇಖಿಸಲಾಗಿದೆ. ಈ ಶಾಸನವನ್ನು ಬಿ.ಎಲ್ ರೈಸರು ತಮ್ಮ *ಶಿವಮೊಗ್ಗ ಶಾಸನ ಸಂಪುಟ–7*, ಭಾಗ–1 ರಲ್ಲಿ ಹೊನ್ನಾಳಿ–101ನೇ ಶಾಸನವಾಗಿ ಪ್ರಕಟಿಸಿದ್ದಾರೆ. ತಿರುಮಲದೇವಿ ಪಟ್ಟಣ ಈಗಿನ ಹೊಸಪೇಟೆ ತಾಲೂಕು ಕೆ. ತಿಮ್ಮಲಾಪುರ ಎಂಬ ಅಭಿಪ್ರಾಯವಿದೆ. ಮಾವೂರು ಸೀಮೆ ಒಳಗಣ ಚಿಕ್ಕ ಗೋಳಿಗೆರೆ ಎಂದಿದ್ದು ಬಹುಶಃ ಅದು ಆ ಗ್ರಾಮದ ಹತ್ತಿರ ಇರುವ ಬೇಲಿಮಲ್ಲೂರು ಸೀಮೆ ಆಗಿರುವ ಸಾಧ್ಯತೆ ಹೆಚ್ಚಾಗಿದೆ.

2) ಬಿಳಿಚೋಡು ಶಾಸನ – 1511

ಜಗಲೂರು ತಾಲೂಕು ಬಿಳಿಚೋಡು ಗ್ರಾಮದಲ್ಲಿ ದೊರೆತ ಈ ತ್ರುಟಿತ ಶಾಸನದ ಮೇಲ್ಭಾಗ ಸಿಡಿದುಹೋಗಿದ್ದು, ದೊರೆತ ಕೆಳಗಿನ 14 ಸಾಲುಗಳನ್ನು ಬಿ. ಎಲ್. ರೈಸರು ತಮ್ಮ ಚಿತ್ರದುರ್ಗ ಶಾಸನ ಸಂಪುಟದಲ್ಲಿ ಜಗಳೂರು – 7 ಶಾಸನವಾಗಿ ಪ್ರಕಟಿಸಿದ್ದಾರೆ. ಇದು ಇಲ್ಲಿನ ಕೋಟೆ ವಿಘ್ನೇಶ್ವರ ದೇವಸ್ಥಾನದ ಬಳಿ ಇರುವುದಾಗಿ ನಮೂದಿಸಿದ್ದಾರೆ. ಈ ಶಾಸನದ ಕಾಲವನ್ನು 1511 ಎಂದು ಅವರು ನಿರ್ಣಯಿಸಿದ್ದು, ಇದನ್ನು ವಿಜಯನಗರ ಕೃಷ್ಣ (ದೇವ) ರಾಯರು ಆಠವಣೆಯ (ಅರಮನೆಯ ಓರ್ವ ಅಧಿಕಾರಿ) ಚೆಂಗರಸರಿಗೆ ಕೊಟ್ಟ ದಾನದ ಬಗ್ಗೆ ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಅದನ್ನು ಬರೆದ ರಾಜ್ಯದ ನಾಡ ಸೇನ ಭಾಗ ಮಂಕಣ್ಣ (ವೆಂಕಣ್ಣ), ಪ್ರತಿ ಮಾಡಿದವನು ಕಂಮ್ಮಾರ ಮಾ ದೋಜನ... ಣೆಮಗಳು ಬಸವೋಜನುದೇಮ್ಮೈಯ ಎಂಬ ವಿಚಾರ ಮಾತ್ರ ತಿಳಿಸುವುದಲ್ಲದೆ, ಅದಕ್ಕೂ ಪೂರ್ವ ಮದುವೆಸುಂಕವನು ಬಿಡಿಸಿದ ಕೃಷ್ಣರಾಯ ಮಹಾರಾಯ ಎಂಬ ಉಲ್ಲೇಖವಿದೆ. ಆಗ ಮದುವೆಗೆ ಹಾಕಿಸಿದ ಸುಂಕವನ್ನು ಬರೆಸಿದ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ. ಇದರಲ್ಲಿ ಬಿಳಿಚೋಡನ್ನು ಬಿಣಚೋಡು ಎಂದು ಕರೆದಿದೆ. ಆ ಗ್ರಾಮದಲ್ಲಿ ಇದಕ್ಕೂ ಪೂರ್ವದ ಇನ್ನೊಂದು ಶಾಸನದಲ್ಲಿ ಇದನ್ನು ಬಿಣಚೋಡು ಎಂದು ಉಲ್ಲೇಖಿಸಿದ್ದು, ಬಿಣಚೇಡು ಅದರ ಮುಂದಿನ ಭಾಗವಾಗಿದ್ದು, ಅದೇ ಈಗ ಬಿಳಿಚೋಡು ಎಂದು ಕರೆಯಲ್ಪಟ್ಟಿದೆ. ಶಾಸನದ ಮೊದಲ ಭಾಗವಿಲ್ಲದ ಇದರ ನಿರ್ದಿಷ್ಟ ಕಾಲ ಹೇಳಲಾಗುತ್ತಿಲ್ಲ.

3) ಮಲೆಬೆನ್ನೂರು ಶಾಸನ – 1516

ಹಿಂದೆ ದಾವಣಗೆರೆ ತಾಲೂಕಿನ ಭಾಗವಾಗಿದ್ದ ಈಗಿನ ಹರಿಹರ ತಾಲೂಕಿನ ಮಲೇಬೆನ್ನೂರು ಭೈರದೇವರ ಗುಡಿ ಬಳಿ ಇರುವ 41 ಸಾಲುಗಳ ಈ ಶಾಸನವನ್ನು ಬಿ.ಎಲ್. ರೈಸರು ಚಿತ್ರದುರ್ಗ ಜಿಲ್ಲೆಯ ಶಾಸನ ಸಂಪುಟದ ದಾವಣಗೆರೆ – 107 ರಲ್ಲಿ ದಾಖಲಿಸಿದ್ದಾರೆ. ಶಾ. ಕ 1438ನೇ ಯುವ ಸಂವತ್ಸರದ ಕಾರ್ತೀಕ ಶುದ್ಧ 12ರ ಈ ಶಾಸನ ಕೃಷ್ಣರಾಯ ಮಹಾರಾಯ ಆಳುತ್ತಿದ್ದಾಗ ಗಜಪತಿ ಶ್ರೀ ಪ್ರತಾಪರುದ್ರ ಮಹಾರಾಜನ ಕುಮಾರ ಶ್ರೀ ವೀರಭದ್ರ ಮಹಾರಾಜರು ಮಲೆಬೆನ್ನೂರು ಸೀಮೆಯ ಮದುವೆಸುಂಕವನ್ನು ಅವರ ತಂದೆ ಪ್ರತಾಪರುದ್ರ ದೇವರಿಗೆ ಹಾಗೂ ಕೃಷ್ಣರಾಯನಿಗೆ ಧರ್ಮವಾಗಲಿ ಎಂದು ಬಿಟ್ಟ ಧರ್ಮಶಾಸನ ಇದು ಎಂದು ಉಲ್ಲೇಖಿಸಲಾಗಿದೆ. ಈ ಶಾಸನದ ಶಿಲ್ಪಿ ವಿರೋಜ ಎಂದು ದಾಖಲಿಸಲಾಗಿದೆ. ಈ ಶಾಸನದಿಂದ ವಿಜಯನಗರ ಕಾಲದಲ್ಲಿ ಮಲೆಬೆನ್ನೂರು ಒಂದು ಸೀಮೆ ಆಗಿತ್ತೆಂದು ತಿಳಿಯಬಹುದಾಗಿದೆ. ಈ ಶಾಸನ ಎಫಿಮರೀಸ್ ದಾಖಲೆಯಂತೆ 6–11–1516 ಗುರುವಾರಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಪ್ರಸ್ತಾಪಿಸಲಾದ ಹದಡೆ(ಹದಡಿ), ಕೂಲಂಬಿ, ಕುಂಬಲೂರು (ಕುಂಬಳೂರು), ನಿಟ್ಟೂರು ಗ್ರಾಮಗಳು ಈಗಲೂ ಇವೆ.

4) ಚಟ್ನಹಳ್ಳಿ ಶಾಸನ–1524

ಹರಪನಹಳ್ಳಿ ತಾಲೂಕು ಚಟ್ನಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಬಳಿ ಇರುವ 67 ಸಾಲುಗಳ ಈ ಶಾಸನವನ್ನು ಮೊದಲು ದಕ್ಷಿಣ ಭಾರತ ಶಾಸನ ಸಂಪುಟದಲ್ಲಿ ಪ್ರಕಟವಾಗಿದ್ದನ್ನು ಈಚೆಗೆ *ಬಳ್ಳಾರಿ ಜಿಲ್ಲಾ ಶಾಸನ ಸಂಪುಟ* ದಲ್ಲಿ *ಹರಪನಹಳ್ಳಿ – 3* ರಲ್ಲಿ ಪುನಃ ಪ್ರಕಟಿಸಿದೆ. ಶ್ರೀಮನ್ ಮಹಾರಾಜಾಧಿರಾಜ, ರಾಜ ಪರಮೇಶ್ವರ, ಶ್ರೀ ವೀರಪ್ರತಾಪ ಕೃಷ್ಣರಾಯ ಮಹಾರಾಯರು ಪ್ರಥ್ವಿಸಾಮ್ರಾಜ್ಯ ಪರಿಪಾಲನೆ ಮಾಡುತ್ತಿರುವಾಗ ಶಾಶಕ 1447ನೇ ಸ್ವಭಾನು ಸಂವತ್ಸರದ ಕಾರ್ತಿಕ ಶುದ್ಧ 12 ಸೋಮವಾರ ಉತ್ಥಾನದ್ವಾದಶಿಯ ಪುಣ್ಯಕಾಲದಲ್ಲಿ ತಮ್ಮ ನಾಯಕತನಕ್ಕೆ ಪಾಲಿಸಿದ ಕವಳಿ ಚರ್ವಿ ಸೀಮೆ ಒಳಗಣ ಚಟನಹಳ್ಳಿ ಗ್ರಾಮವನ್ನು ಆರಿಯ ಕ್ಷತ್ರಿಯ ಕುಲದ ಕಾಶ್ಯಪಗೋತ್ರದ ರುಕುಶಾಖೆಯ ಮುರಾರಿ ರಾವುತನ ಮಗನಾದ ವಿಸಣ ರಆವುತಸ ಗೌತಮ ಗೋತ್ರದ ದೇವರು ಭಟ್ಟನ ಮಗನಾದ ನಾರಾಯಣ ಭಟ್ಟಗೆ ಉಚ್ಚಂಗಿ ನಾಡೊಳಗಣ ಚಟ್ಟನಹಳ್ಳಿ ಗ್ರಾಮವನ್ನು ಕೃಷ್ಣರಾಯಗೆ ಪುಣ್ಯವಾಗಲಿ ಎಂದು ತುಂಗಭದ್ರ ತೀರದ ಹರಿಹರನಾಥ ದೇವರ ಸನ್ನಿಧಿಯಲ್ಲಿ ದಾನ ನೀಡಿದ ವಿಚಾರ ತಿಳಿಸುತ್ತದೆ. ಈ ಶಾಸನದಿಂದ ವಿಸಣ ರಾವುತ್ತನು ಆ ಕಾಲದಲ್ಲಿ ಆ

ಸೀಮೆಯ ಆಡಳಿತವನ್ನು ನಡೆಸುತ್ತಿದ್ದುದನ್ನು ತಿಳಿಯಬಹುದಾಗಿದೆ. ಈ ಜಿಲ್ಲೆಯ ದೊರೆತ ಕೃಷ್ಣರಾಯನ ಸುದೀರ್ಘ ಶಾಸನ ಇದಾಗಿದ್ದು, ಎಫಿಮರೀಸ್ ದಾಖಲೆಯಂತೆ ಶಾಸನ ದಿನಾಂಕ 28-10-1525 ಶನಿವಾರ ಆಗುತ್ತದೆ. ಆದರೆ ಶಾಸನದಲ್ಲಿ ಸೋಮವಾರ ಎಂದಿದೆ. ಶಾಸನದಲ್ಲಿ ಉಲ್ಲೇಖಿತ ಉಚ್ಚಂಗಿ ವೇಠೆ ಈಗಿನ ಪ್ರಸಿದ್ಧ ಉಚ್ಚಂಗಿ ದುರ್ಗವಾಗಿದ್ದು, ಕೆವಿಳಿಚರ್ವಿ ಸೀಮೆ ಯಾವುದೆಂದು ಗುರುತಿಸಲಾಗಿಲ್ಲ.

5) ನಿಬ್ಬಗೂರು ಶಾಸನ – 1526

ಜಗಲೂರು ತಾಲೂಕು ನಿಬ್ಬಗೂರು ಆಂಜನೇಯ ದೇವಸ್ಥಾನದ ಪಡಸಾಲೆಯಲ್ಲಿರುವ 56 ಸಾಲುಗಳ ಈ ಶಾಸನವನ್ನು ಶಾಶಕ 1448ನೇ ವ್ಯಯ ಸಂವತ್ಸರದ ಚೈತ್ರ ಶುದ್ಧ 15 ಪೌರ್ಣಿಮೆಯಂದು ಕೃಷ್ಣದೇವ ಮಹಾರಾಯರು ರಾಜ್ಯ ಆಳುತ್ತಿರುವಾಗ ತಮ್ಮ ನಾಯಕತನಕ್ಕೆ ಪಾಲಿಸಿದ ಜಗಲೂರು ಸೀಮೆಯೊಳಗಣ ನಿಬಗೂರು ಗ್ರಾಮವನ್ನು ಕಾಶ್ಯಪ ಗೋತ್ರದ ಆಶ್ವಲಾಯನ ಸೂತ್ರದ ಅರೆಯಕ್ಷತ್ರಿಯರಾದ ವಿಶ್ವನಾಥರಾವುತರ ಮಕ್ಕಳು ರಂಗನಾಥ ರಾವುತರು ಜಮದಗ್ನಿ ಋಷಿಯ ಆಶ್ರಮದ ಹನತೊರೆ ತೀರದ ಕಲ್ಲಿನಾಥಪುರದ (ಈಗಿನ ಕಲ್ಲೇದೇವರಪುರದ) ಶ್ರೀ ಕಲ್ಲಿನಾಥ ದೇವರ ಸಂನಿಧಿಯಲ್ಲಿ ಕೃಷ್ಣದೇವರಾಯ ಮಹಾರಾಯರಿಗೆ ಧರ್ಮ ಆಗಬೇಕೆಂದು ನಿತ್ಯ ಬ್ರಾಹ್ಮಣ ಮತ್ತಿತರರು ಭೋಜನ ಮಾಡಲು ಸತ್ರನಡೆಸುವುದಕ್ಕೆ ಸಹಿರಣ್ಯೋದಕವಾಗಿ ಗ್ರಾಮವನ್ನು ದಾನಕೊಟ್ಟ ವಿಚಾರ ತಿಳಿಸುತ್ತದೆ. ದಾನ ಶಾಸನ ಚತುಸ್ಸೀಮೆಯನ್ನು ಗುರುತಿಸುವಾಗ ಮೂಡಲು ಕಟ್ಟಿಗೆಹಳ್ಳಿ, ವಾಯವ್ಯಕ್ಕೆ ಬಿದರಕೆರೆ, ಮೂಡಲು ಮಾಲುಕುಂಟೆ, ಈಶಾನ್ಯಕ್ಕೆ ಕೋಡಿಹಳ್ಳಿ ಹೆಸರು ಸೂಚಿಸಲಾಗಿದೆ. ಮಾಲುಕುಂಟೆಯನ್ನು ಈಗ ಮರಿಕುಂಟೆ ಎಂದು ಕರೆಯಲಾಗುತ್ತಿದೆ. ಈ ಹಿಂದೆ ಪ್ರಸ್ತಾಪಿಸಲಾದ ಹರಪಹಳ್ಳಿ ತಾಲೂಕು ಚಟ್ನಹಳ್ಳಿ ಶಾಸನದ ಕಾಲಕ್ಕೂ, ಈ ಜಗಲೂರಿನ ನಿಬಗೂರು ಶಾಸನದ ಕಾಲಕ್ಕೂ ಕಾಲ ಕೇವಲ ಎರಡು ವರ್ಷ ಮಾತ್ರ ವ್ಯತ್ಯಾಸವಿದ್ದು, ದಾನಿಗಳ ಹೆಸರು, ವಿವರ ಪರಿಶೀಲಿಸಿದಾಗ ಇರ್ವರೂ ಒಂದೇ ಕುಟುಂಬದವರಾಗಿ ಕಂಡುಬರುತ್ತದೆ. ಚಟ್ನಹಳ್ಳಿ ಶಾಸನ ವಿಸುಣರಾವುತನು ಬರೆಸಿ ಕೊಟ್ಟಿದ್ದರೆ ಈ ನಿಬ್ಬಗೂರು ಶಾಸನ ಅದೇ ಗೋತ್ರ, ಅರೆಯ ಕ್ಷತ್ರಿಯ ಕುಲದ ರಂಗನಾಥರಾವುತ ಬರೆಸಿಕೊಟ್ಟಿದ್ದಾನೆ. ಬಮುಶಃ ಈ ಸೋದರ ಸಂಬಂಧಿಗಳಿರ್ವರು ಕೃಷ್ಣರಾಯನ ಕಾಲದಲ್ಲಿ ಅಕ್ಕಪಕ್ಕದ ಸಣ್ಣ ಪ್ರಾಂತ್ಯದ ಆಡಳಿತಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದುದಾಗಿ ಕಂಡುಬರುತ್ತದೆ. ಎಫಿಮರೀಸ್ ದಾಖಲೆಯಂತೆ ಶಾಸನ 28-03-1526ನೇ ಬುಧವಾರಕ್ಕೆ ಸರಿಹೊಂದುತ್ತದೆ.

6) ಕೆರೆಗುಡಿಹಳ್ಳಿ ಶಾಸನ – 1527

ಹರಪನಹಳ್ಳಿ ತಾಲೂಕು ಕೆರೆಗುಡಿಹಳ್ಳಿ ಈಶ್ವರ ದೇವಾಲಯದ ಮುಂದಿನ ಮಂಟಪದ ಕಂಬದಲ್ಲಿರುವ 24 ಸಾಲುಗಳ ಈ ದ್ವಿಮುಖ ಶಾಸನ ದಕ್ಷಿಣ ಭಾರತ ಶಾಸನ ಸಂಪುಟದಲ್ಲಿ ಈಗಾಗಲೇ ಪ್ರಕಟವಾಗಿದ್ದು, ಹಂಪಿಯ ಕನ್ನಡ ವಿಶ್ವವಿದ್ಯಾಲಯ ತನ್ನ *ಬಳ್ಳಾರಿ ಜಿಲ್ಲಾ ಶಾಸನ ಸಂಪುಟದಲ್ಲಿ ಹರಪನಹಳ್ಳಿ*–206ರಲ್ಲಿ ಪುನಃ ಪ್ರಕಟಿಸಿದೆ.

ಶಾ.ಶ. 1449ನೆಯ ಸರ್ವಜಿತು ಸಂವತ್ಸರದ ಶ್ರಾವಣ ಶುಕ್ಲ 10ಕ್ಕೆ ಸರಿಯಾದ ದಿನಾಂಕ 7–8–1527ರ ಬುಧವಾರದಂದು ವಿಜಯನಗರ ಅರಸ ಕೃಷ್ಣದೇವರಾಯ ರಾಜ್ಯಭಾರ ಮಾಡುತ್ತಿದ್ದಾಗ ಚೆಂನ ಭಂಡಾರದ ತಿಮ್ಮರಸರ ಮಗ ರಾಯಸದ ನಾರಣಪ್ಪನು ಕೊಟ್ಟೂರು ಸೀಮೆ ಬಳಿತಕ್ಕೆ ಸೇರಿದ ನೊಣಬಿನರಸಿಕೆರೆಯನ್ನು ಆಳುತ್ತಿದ್ದಾಗ ಅವನ ಕಾರ್ಯಕರ್ತನಾದ ನಾಗರಸಾಯನು ಕೊಟ್ಟೂರು ಸೀಮೆ ಪಾರುಪತ್ಯ ಮಾಡುವಾಗ ಇವನ ನಿರೂಪದಂತೆ ರಂಗದಾಸನ ಮಗ ತಿಂಮರಸನು ಅರಸೀಕೆರೆ ಅಧಿಕಾರ ಮಾಡುತ್ತಿದ್ದಾಗ ಅರಸೀಕೆರೆ ತೂಬು ಮುರಿದಿದ್ದು, ಅದನ್ನು ಕಿತ್ತು, ಜೀರ್ಣೋದ್ಧಾರ ಮಾಡಿಸಿದ ವಿಚಾರ ಈ ಶಾಸನದಿಂದ ತಿಳಿದುಬರುತ್ತದೆ. ಕಡೆಯಲ್ಲಿ ರಂಗಯತಿಯನು ಎಂಬ ಸಹರಘದಲ್ಲಿ ಹೆಸರಿರುವುದು ಶಾಸನದ ವಿಶೇಷ. ಈ ಶಾಸನದಿಂದ ವಿಜಯನಗರ ಅರಸರು ನೀರಾವರಿಗೆ ಕೆರೆ ರಿಪೇರಿ ಮಾಡಿಸಿ ಅದಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದ ಬಗ್ಗೆ ತಿಳಿಯಬಹುದಾಗಿದೆ.

7) ಮಲೆಬೆನ್ನೂರು ಶಾಸನ – 1528

ಈಗಿನ ಹರಿಹರ ತಾಲೂಕು ಮಲೆಬೆನ್ನೂರು ಗ್ರಾಮ ಭೈರವೇಶ್ವರ ದೇವಸ್ಥಾನದ ಬಳಿ ಇರುವ 32 ಸಾಲಿನ ಈ ಶಾಸನವನ್ನು ಬಿ. ಎಲ್. ರೈಸರು ತಮ್ಮ ಚಿತ್ರದುರ್ಗ ಜಿಲ್ಲೆಯ ಶಾಸನ ಸಂಪುಟದಲ್ಲಿ ಆಗ ದಾವಣಗೆರೆ ತಾಲೂಕಿಗೆ ಇದು ಸೇರಿದ್ದರಿಂದ ಇದನ್ನು ದಾವಣಗೆರೆ – 106ರಲ್ಲಿ ಪ್ರಕಟಿಸಿದ್ದಾರೆ. ಶಾಲಿವಾಹನ ಶಕ 1450ನೇ ಸರ್ವಧಾರಿ ಸಂವತ್ಸರದ ವೈಶಾಖ ಶುದ್ಧ 10 ಗುರುವಾರದಲ್ಲಿ ಅಂದರೆ ಎಫಿಮರೀಸ್ ನಂತೆ ದಿನಾಂಕ 4–4–1528ರ ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ, ಶ್ರೀ ಕೃಷ್ಣದೇವರಾಯರು ವಿಜಯನಗರದಲ್ಲಿ ರಾಜ್ಯ ಪರಿಪಾಲಿಸು ತ್ತಿದ್ದಾಗ ಆದಿಯಪ್ಪ ನಾಯಕರು ತಮ್ಮ ನಾಯಕತ್ವಕ್ಕೆ ಪಾಲಿಸಿದ ಮಲೆಬೆನ್ನೂರು ಗ್ರಾಮದಲ್ಲಿ ಕಬ್ಬಿನ ಮೇಲೆ ಸುಂಕವನ್ನು ಹರಿಹರ ದೇವರ ಸ್ಥಾನಿಕ ಚೆಂನಪ್ಪಯಗಳ ಮಗ ಹರಿಯಂಣಗುನು ಹೇಳಿಕೆಯಂತೆ ಬಿಟ್ಟವಿಚಾರ ತಿಳಿಸುತ್ತದೆ. ಈ ಶಾಸನ ಬಿಟ್ಟು ಕಾರ್ಯಕರ್ತ ಆದಿನಾರ್ಯಯನವರ ಪುತ್ರ ಭೈರವನಾಯಕ.

8) ಬಿಳಿಚೋಡು ಶಾಸನ – 1529

ಜಗಳೂರು ತಾಲೂಕಿನ ಒಂದನೇ ಶಾಸನವನ್ನಾಗಿ ರೈಸರು ಇದನ್ನು ತಮ್ಮ ಚಿತ್ರದುರ್ಗ ತಾಲೂಕಿನ ಶಾಸನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಈ 14 ಸಾಲುಗಳ ಶಾಸನ ತಾಲ್ಲೂಕಿನ ಬಿಳಿಚೋಡು ಗ್ರಾಮದ ರಾಮೇಶ್ವರ ದೇವಾಲಯದ ಬಳಿ ನೆಡಲಾಗಿದೆ. ಶಾಸನದಲ್ಲಿ ಬಹಳ ಅಕ್ಷರಗಳು ತ್ರುಟಿತವಾಗಿದ್ದು, ಶಾಸನಕಾಲ ನಿರ್ದಿಷ್ಟವಾಗಿ ಗುರ್ತಿಸಲಾಗಿಲ್ಲ. ರೈಸರು ಇದನ್ನು 1529ರ ಕಾಲದ್ದಿರಬೇಕೆಂದು ಊಹಿಸಿದ್ದಾರೆ. ಕೃಷ್ಣದೇವರಾಯ ಮಹಾರಾಯರ ಅಧಿಕಾರಿ ಸ್ಥಳದ ಭಂಡಾರ ತಿಂಮಯ ಬಿಳಿಚೇಡ ಮೂಲಸ್ಥಾನದ ರಾಮೆಯ ದೇವರ ಎರಡು ಹೊತ್ತಿನ ನಿಯೋಗಕ್ಕೆ ತನ್ನ ದೊರೆ ಕೃಷ್ಣರಾಯನಿಗೆ ಸಕಲ ಪುಣ್ಯವಾಗಲಿ ಎಂದು ಮಹರಾವುತರ ಮಕ್ಕಳ ವಯ .... ರಾವುತರಿಗೆ ಒಂದು ಗ್ರಾಮ ದತ್ತಿ ಕೊಟ್ಟ ವಿಚಾರ ಈ ಶಾಸನ ತಿಳಿಸುತ್ತದೆ. ಬಹುಶಃ ಈ ಗ್ರಾಮ ಈಗಿನ ಕೆಳಕೋಟೆ ಅಥವ ಬಸವನಕೋಟೆ ಆಗಿರುವ ಸಂಭವವಿದೆ. ಈ ಶಾಸನದಲ್ಲಿ ದತ್ತಿ ಕೊಟ್ಟ ಗ್ರಾಮ.... ಕೋಟೆ ಎಂಬ ಅಕ್ಷರವೂ ಕಾಣಸಿಗುತ್ತದೆ. ರಾಮೆಯ ದೇವರಿಗೆ ಅಂದರೆ ಇಂದಿನ ರಾಮೇಶ್ವರ ದೇವರಿಗೆ ಎಂದು ತಿಳಿಯಬಹುದಾಗಿದೆ. ಶಾಸನದಲ್ಲಿ ಈ ಗ್ರಾಮಕ್ಕೆ ಬಿಳಿಚೆಡ ಎಂದಿದ್ದು, ಆಗ ಇದು ವಿಜಯನಗರ ಒಂದು ಸೀಮೆಯಾಗಿತ್ತೆಂದು ತಿಳಿಯಬರುತ್ತದೆ.

ಹೀಗೆ ಈ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಉಲ್ಲೇಖ ಇರುವ ಎಂಟು ಶಾಸನಗಳನ್ನು ಗುರುತಿಸಲಾಗಿದೆ. ಇವುಗಳಲ್ಲದೆ ಬಿ. ಎಲ್. ರೈಸರು ದಾವಣಗೆರೆ–146, ಜಗಲೂರು 48 ಮತ್ತು 18ನೇ ಶಾಸನಗಳನ್ನು ಕೃಷ್ಣದೇವರಾಯನದೆಂದು ಉಲ್ಲೇಖಿಸಿದ್ದಾರೆ. ಆದರೆ ಆ ಶಾಸನಗಳಲ್ಲಿ ಕೃಷ್ಣರಾಯನ ಹೆಸರೇ ನಮೂದಿಸಿಲ್ಲ. ಬಹುಶಃ ತಪ್ಪಾಗಿ ಅದು ಕೃಷ್ಣದೇವರಾಯನದೆಂದು ನಿರ್ಣಯಿಸಿದ್ದಾರೆ.

ಈ ಶಾಸನಗಳಿಂದ ಕೃಷ್ಣದೇವರಾಯನ ಕಾಲದಲ್ಲಿ ಗಾಜನೂರು ಪ್ರಾಂತ್ಯವನ್ನು ಶಂಬರಿಗೌಡ ಎಂಬಾತನು (ಹೊನ್ನಾಳಿ– ಚಿಕ್ಕಗೋಣಿಗೆರೆ ಶಾಸನ) ಮಲೆಬೆನ್ನೂರು ಸೀಮೆಯನ್ನು ವೀರಭದ್ರ ಮಹಾರಾಜ ಎಂಬಾತನ (ಹರಿಹರ– ಮಲೆಬೆನ್ನೂರು ಶಾಸನ) ವಿಸಣ್ಣರಾವುತ ಎಂಬಾತ (ಹರಪನಹಳ್ಳಿ– ಚಟ್ನಹಳ್ಳಿ) ಉಚ್ಚಂಗಿ ವೇಂಠೆ ಕೆಸಲ್ಲುವ ಕವಳಿಚವಿನ ಸೀಮೆಯನ್ನು, ಜಗಲೂರು ಸೀಮೆ ಒಳಗಣ ನಿಬಗೂರನ್ನ ರಂಗನಾಥ ರಾವುತ ಎಂಬಾತನ ರಾಯಸದ ನಾರಣಪ್ಪನ ಕಾರ್ಯ ಕರ್ತ ನಾಗರಸಯ್ಯ ಎಂಬಾತ ಕೊಟ್ಟೂರು ಸೀಮೆ ಒಳಗ) ನೊಣಬಿನರಸಿಕೆರೆ ಗ್ರಾಮವನ್ನು (ಕೆರೆಗುಡಿಹಳ್ಳಿ – ಹರಪನಹಳ್ಳಿ) ಅದಿಯಪ್ಪ ನಾಯಕ ಎಂಬುವನು ಮಲೆಬೆನ್ನೂರು ಸೀಮೆಯನ್ನು (ಹರಿಹರ) ಭಂಡಾರದ ತಿಮಯ್ಯ ಎಂಬಾತನು (ಜಗಳೂರು)

ಬಿಳಿಚೋಡು ಸೀಮೆ ಆಳಿಳುತ್ತಿದ್ದ ವಿಚಾರ ತಿಳಿದುಬರುತ್ತದೆ. ಆದರೆ ಈ ಶಾಸನದಲ್ಲಿ ಉಲ್ಲೇಖಿತ ಕೃಷ್ಣದೇವರಾಯನ ಸಾಮಂತರ ಅರಸರ ಪ್ರಸ್ತಾಪ ಜಿಲ್ಲೆಯ ಇತಿಹಾಸದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿ ಇರದೇ ಇರುವುದು ವಿಸ್ಮಯ ತರಿಸುತ್ತದೆ.

ಆಧಾರ ಗ್ರಂಥಗಳು

1. *ಎಪಿಗ್ರಾಫಿಯಾ ಕರ್ನಾಟಿಕ* (ಶಿವಮೊಗ್ಗ ಜಿಲ್ಲೆ ಸಂ. 7 ಭಾಗ – 1) ಬಿ. ಲೂಯಿಸ್ ರೈಸ್ (1902)
2. *ಎಪಿಗ್ರಾಫಿಯಾ ಕರ್ನಾಟಿಕ* (ಚಿತ್ರದುರ್ಗ ಜಿಲ್ಲೆ ಸಂ. 11) ಬಿ. ಲೂಯಿಸ್
3. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1* (ಬಳ್ಳಾರಿ ಜಿಲ್ಲೆ) ಕನ್ನಡ ವಿಶ್ವವಿದ್ಯಾಲಯ ಹಂಪಿ (1998)
4. *ಶ್ರೀ ಕೃಷ್ಣದೇವರಾಯ* – ಟಿ. ಆರ್. ಶಿವಪ್ರಸಾದ್
5. *ಮರೆತುಹೋದ ಮಹಾ ಸಾಮ್ರಾಜ್ಯ – ವಿಜಯನಗರ* ಮೂಲ: ರಾಬರ್ಟ್ ಸಿವೆಲ್ ಅನು: ಸದಾನಂದ ಕನವಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ (1992)
6. *ಪ್ರವಾಸಿ ಕಂಡ ವಿಜಯನಗರ* ಸಂ. ಡಾ. ಬಿ. ಎ. ವಿವೇಕರೈ, ಕನ್ನಡ ವಿಶ್ವವಿದ್ಯಾಲಯ, ಹಂಪಿ (2005)
7. *ವಿಜಯನಗರ ಅಧ್ಯಯನ*, ಸಂಪುಟ 11 ಮತ್ತು 13, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು
8. *ಇಂಡಿಯನ್ ಎಫಿಮರೀಸ್* ಸಂ. 5 – *ಸ್ವಾಮಿ ಕಣ್ಣನ್ ಪಿಳ್ಳೆ*

೧೧. ಸದಾಶಿವದೇವರಾಯನ ಆಂಧ್ರಪ್ರದೇಶದ ಶಾಸನಗಳು

ಚೆನ್ನಕ್ಕ ಪಾವಟೆ

ವಿಜಯನಗರದ ದೊರೆ ಸದಾಶಿವದೇವರಾಯ ವಿದ್ಯುಕ್ತವಾಗಿ ಪಟ್ಟವೇರಿ 1543 ರಿಂದ ಕ್ರಿ. ಶ. 1571ರವರೆಗೆ ಕೇವಲ ನಾಮಮಾತ್ರರಾಜನಾಗಿದ್ದವನು, ವಾಸ್ತವವಾಗಿ ಅಧಿಕಾರವೆಲ್ಲ ರಾಮರಾಯನಲ್ಲಿಯೆ ನೆಲೆಸಿತ್ತು. ಕಿರೀಟಧಾರಣ ಸಂದರ್ಭದಲ್ಲಿ ಸದಾಶಿವದೇವರಾಯ ಪ್ರಾಪ್ತವಯಸ್ಕನಾಗದುದರಿಂದ ರಾಮರಾಯನ ರಾಜ ಪ್ರತಿನಿಧಿಯಾಗಿ ಅನತಿಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯದ ಸಾರಸರ್ವಸ್ವವನ್ನು ಅಪಹರಿಸಿದನು. ಸುಮಾರು ಎಂಟು ವರ್ಷಗಳ ಕಾಲ, ಎಂದರೆ ಕ್ರಿ. ಶ. 1543 ರಿಂದ ಕ್ರಿ. ಶ. 1550ರವರೆಗೆ, ಸದಾಶಿವದೇವರಾಯನೇ ಶಾಸನಸಮ್ಮತ ರಾಜನಾಗಿದ್ದು ರಾಮರಾಯನು ಕೇವಲ ಪ್ರತಿನಿಧಿ ಎನಿಸಿಕೊಂಡಿದ್ದನು. ಈ ಅವಧಿಯಲ್ಲಿ ಸದಾಶಿವ ದೇವರಾಯನು ನಾಮಮಾತ್ರರಾಜನಾಗಿದ್ದು, ವಾಸ್ತವ ರಾಜ್ಯಾಧಿಕಾರವೆಲ್ಲ ರಾಮರಾಯನಲ್ಲಿ ಮೇಳೈಸಿತ್ತು. ಇಷ್ಟು ವೇಳೆಗೆ 24 ವಸಂತಗಳ ತರುಣನಾದ ಸದಾಶಿವದೇವರಾಯನು ರಾಜ್ಯಭಾರದ ರಹಸ್ಯಾಂತರಗಳನ್ನು ಅರಿತುಕೊಂಡುದದ ರಿಂದ 'ಒತ್ತಾಯದ ಸಾಕ್ಷಿಗೆ' ಒಪ್ಪದೇ ಹೋದನು. ಇವನನ್ನು ಹೀಗೆಯೇ ಬಿಟ್ಟರೆ ತನಗೆ ಭವಿಷ್ಯಕ್ಕೆ ಧಕ್ಕೆ ಬರುವದೆಂಬುದನ್ನು ಸಾಕ್ಷಿ ಬಗೆದ ರಾಮರಾಯನು ಅವನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದರು. ಸೆರೆಮನೆಯಲ್ಲಿಟ್ಟಿದ್ದ ರಾಮರಾಯನನ್ನು ಸದಾಶಿವ ರಾಯನನ್ನು ರಾಮರಾಯನು ಗೌರವದಿಂದಲೇ ನಡೆಸಿಕೊಂಡಿದ್ದನು. ಸದಾಶಿವ ದೇವರಾಯನ ಬಂಧನಕ್ಕೆ ಅವನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ಇಬ್ಬರೂ ರಾಮರಾಯನ ಬಗ್ಗೆ ಅಸಂತುಷ್ಟರಾಗಿದ್ದರಂತೆ.

ಆದರೆ ಕರ್ನಾಟಕದಲ್ಲಿ ದೊರಕಲಾರದ ಸದಾಶಿವದೇವರಾಯ ಕನ್ನಡ ಶಾಸನಗಳು ಆಂಧ್ರಪ್ರದೇಶದಲ್ಲಿ ದೊರೆತಿದೆ. 'ಆಂಧ್ರ ಪ್ರದೇಶದ ಕನ್ನಡ ಶಾಸನಗಳು' ಎಂಬ ಕೃತಿಯಲ್ಲಿ ಸದಾಶಿವದೇವರಾಯನ ಮೂವತ್ತು ಶಾಸನಗಳು ದೊರಕಿದ್ದು ಅವುಗಳನ್ನು ಬಳಸಿಕೊಂಡು ಒಂದು ಸಂಪ್ರಬಂಧವನ್ನು ಬರೆದಿದ್ದೇನೆ. ವಿಜಯ ನಗರದ ದೊರೆ ಸದಾಶಿವದೇವರಾಯನ ಆಳ್ವಿಕೆಯಲ್ಲಿ ಕಶಕದಾಟ ದೊರೆಯ ದಳವಾಯಿ ಚೆನ್ನಮ್ಮನಾಯಕನ ಮಗ ದಳವಾಯಿ ಕೃಷ್ಣನಾಯಕರು ದೊರೆಗೆ ಸ್ಥಿರಪಟ್ಟ, ಸಾಮ್ರಾಜ್ಯ ಪಟ್ಟವಾಗಬೇಕೆಂದು ದೇವತಾಕಾರ್ಯ ಕೈಕೊಂಡ ಸಂದರ್ಭದಲ್ಲಿ ಪೆನುಂಗೊಂಡೆಯ ಯರಮಂಚಿ ಬಾಗಿಲಿನ ಚೆನ್ನಕೇಶವ ದೇವರಿಗೆ

ತನ್ನ ನಾಯಕತನದಿಂದ ಪಾಲಿಸುತ್ತಿರುವ ಪೆನುಗೊಂಡ ರಾಜ್ಯದ ಚೆನ್ನಕೇಶವಪುರ ವೆಂದು ಪ್ರತಿನಾಮವಿರುವ ಚೆನ್ನೂರು ಎಂಬ ಗ್ರಾಮವನ್ನೇ ಸರ್ವಮಾನ್ಯವಾಗಿ ಬಿಟ್ಟುಕೊಟ್ಟಿರುವರು.[1] ಬಹುಶಃ ರಾಮರಾಯನ ಉಪಟಳ ಅಧಿಕವಾದುದರಿಂದ ವಿಜಯನಗರದ ಪ್ರಜೆಗಳು ಸದಾಶಿವದೇವರಾಯನಿಗೆ ಸ್ಥಿರಪಟ್ಟವಾಗಬೇಕೆಂದು ದೇವತಾ ಪ್ರಾರ್ಥನೆ ಮಾಡಿದ್ದಾರೆ.

ಸದಾಶಿವದೇವರಾಯನ ಆಳ್ವಿಕೆಯಲ್ಲಿ ಮನುಬೋಲಿಯ ಮಹಾಮಂಡಳೇಶ್ವರ ತಿರುಮಲದೇವ ಮಹಾಅರಸುಗಳು ಮಾಳಿಗೊಂಡ ಮತ್ತು ಸರುಪಗೊಂಡರಿಗೆ ಕಟ್ಟುಕೊಡುಗೆಯಾಗಿ ದೊಡ್ಡಗಟ್ಟದ ಕೆರೆ ಒಡೆದು ಹಾಳಾಗಿದ್ದಾಗ ಕೆರೆಯನ್ನು ದುರಸ್ತಿ ಮಾಡಿ ದತ್ತಿ ಕೊಟ್ಟಿರುವರು.[2] ಇಲ್ಲಿಯ ಮೂರು ಶಾಸನಗಳು ನಾಯಿಂದರಿಗೆ ತೆರಿಗೆ ಮಾನ್ಯ ಮಾಡಿಕೊಟ್ಟ ವಿಷಯವನ್ನು ಹೇಳುತ್ತವೆ.[3] ಪೆನುಗೊಂಡೆಯ ವಿರುಪಣ್ಣನು ದೇವರಾಯಪುರ ಎಂದು ಪ್ರತಿನಾಮವಿರುವ ಸದಾಶಿವಪುರದ ಅರ್ಧಭಾಗವನ್ನು 108 ಘಟ್ಟ ವರಹಗಳನ್ನು ಕೊಟ್ಟುಕೊಂಡು ಲೇಪಾಕ್ಷಿಯ ವೀರಭದ್ರದೇವರಿಗೆ ದತ್ತಿಕೊಡುತ್ತಾರೆ. ಇದಕ್ಕಿಂತ ಮುಂಚಿತವಾಗಿಯೇ ಪ್ರೌಢ ಪ್ರತಾಪದೇವರಾಯ ದೇವರಾಯ ಸೋಮರಾಜಿ ಎಂಬುವರಿಗೆ ಈ ಕೊಡುಗೆಯನ್ನು ನೀಡಿರುತ್ತಾರೆ.[4] ದೊರೆಯ ನಿರೂಪದಿಂದ ಆದವಾನಿ ಸೀಮೆಯ ಕುರುಕುಂದ ಗ್ರಾಮದ ನಾಯಿಂದರಿಗೆ ಸರ್ವಮಾನ್ಯವಾದ ಬಿಟ್ಟಿಬಿರಾಡ ಸುಂಕಗಳನ್ನು ಬಿಟ್ಟಿರುವರು. ಈ ಮಾನ್ಯಕ್ಕೆ ಕಂದನ ಪೊಳಲಿನ ತಿಮ್ಮೋಜನ ಮಕ್ಕಳಾದ ಕೊಂಡೋಜ ಮತ್ತು ಭದ್ರೋಜ ಕಾರಣರೆಂದು ಹೇಳಿದೆ.[5]

ಮಹಾಮಂಡಳೇಶ್ವರ ರಾಮರಾಜವಿಠಲ ಮಹಾಅರಸು ಅವರ ಕಾರ್ಯಕರ್ತನಾದ ವೀರಣ್ಣನಾಯಕನು ಬಾಗಿನಾಯಕನ ಹಳ್ಳಿಯ ಕೆರೆ ಒಡೆದಿದ್ದ ಕಾರಣ ಅದನ್ನು ಕಟ್ಟುವುದಕ್ಕೆ ಐದು ಜನರಿಂದ ಕಟ್ಟುಮಾನ್ಯ ಹೊಲಗದ್ದೆಗಳನ್ನು ಕೊಡಲಾಗಿದೆ.[6] ದೊರೆಯ ನಿರೂಪದಂತೆ ಮುರಾರಿ ರಾವುತ ಅಯ್ಯನವರ ಕುಮಾರ ತಿಂಮ ಮತ್ತು ಕಂಬದೂರಿನ ಯಲ್ಲಪ್ಪ ಇವರುಗಳ ಮುಳ್ಳನಹಳ್ಳಿಯ ಬನದ ಚೌಡೇಶ್ವರಿ ದೇವಿಗೆ ಕೊಟ್ಟ ಭೂದಾನವನ್ನು ದಾಖಲಿಸಿದೆ. ಈ ದಾನವನ್ನು ಬಯಪನಾಯಕನ ಮಗ ಕೃಷ್ಣಪ್ಪನಾಯಕ ಅಯ್ಯನವರಿಗೆ ಪುಣ್ಯವಾಗಲಿ ಎಂದು ಭೂದಾನ ನೀಡಿರುವನು.[7] ಅಪ್ಪಲರಾಜ ಅಯ್ಯನೆಂಬುವನು ಉರ್ವಕೊಂಡ ಸೀಮೆಯ ಗೌಡ ಸೇನಬೋವರಿಗೆ 'ಉರ್ಮಕೊಂಡದ ಭಂಗಾರಿ ಗ್ರಾಮ' ಅಗ್ರಹಾರ ದೇವಸ್ಥಾನ ಗ್ರಾಮಗಳಲ್ಲಿರುವ ನಾಯಿಂದರಿಗೆ ತೆರಿಗೆ, ಹೊರಿಗೆ, ಕಾಣಿಕೆ ಕಪ್ಪು, ಬಿಟ್ಟಿಬಿರಾಡ ಯಾವದೂ ಇಲ್ಲ ಎಂದು ನಿರೂಪಕೊಟ್ಟಿರುವನು.[8] ಪೆನುಗೊಂಡೆಯ ವಿರುಪಣ್ಣನು ದೇವರಾಯಪುರ ಎಂದು ಪ್ರತಿನಾಮವಿರುವ ಸದಾಶಿವಪುರ ಗ್ರಾಮದ ಅರ್ಧಭಾಗವನ್ನು 108 ಘಟ್ಟ ವರಹಗಳನ್ನು ಕೊಟ್ಟು ಲೇಪಾಕ್ಷಿಯ ವೀರಭದ್ರದೇವರಿಗೆ

ದತ್ತಿ ನೀಡುತ್ತಾನೆ.[9] ರಾಮರಾಜ ಕೊಂಡಯ್ಯಗಳ ಮಗ ಕೋನೇಟಿ ತಿಮ್ಮರಾಜನು ತನ್ನ ದಳವಾಯಿ ಯಲ್ಲಪ್ಪ ನಾಯಕನಿಗೆ ಕಸಬಾಪುರವನ್ನು ಉಂಬಳಿಯಾಗಿ ಕೊಟ್ಟಿರುವನು. ಕಸಬಾಪುರದ ಪಿಲಿಅಪ್ಪನ ಬೋವನ ಮಕ್ಕಳ ಬಿನ್ನಹದಂತೆ ದಳವಾಯಿ ಎಲ್ಲಪ್ಪ ನಾಯಕನು ತೆರಿಗೆ ಹೊರಿಗೆ ಸಿದ್ಧಾಯ ಬಿಟ್ಟಿ ಬಿರಾಡಗಳನ್ನು ಬಿಡಿಸಿದನೆಂದಿದೆ.[10] ರಾಮರಾಜಯ್ಯನೆಂಬುವನು ತಮ್ಮ ಕ್ಷೌರದ ಕೆಲಸದ ನಾಯಿಂದ ಕೊಂಡಜನಿಗೆ ಹಾಗೂ ತಮ್ಮ ಸೀಮೆಯ ನಾಯಿಂದರಿಗೆ ಸಿದ್ಧಿಯ ಕಟ್ಟಳೆ ಸುಂಕ ಸರ್ವಸಾಮಾನ್ಯವಾಗಿ ಬಿಟ್ಟುಕೊಟ್ಟಿರುವನು.[11]

ಸಿರಿಯಪ ನಾಯಕ ಅಯ್ಯನವರ ಕಾರ್ಯಕರ್ತರಾದ ಗುಂಡಮರಸಯ್ಯನವರು ದೊರೆಯ ದಳವಾಯಿ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ಕೊಟನೂರಿನ ಚೌಡೇಶ್ವರಿ ದೇವಾಲಯದ ನಾಲ್ಕು ಮಂದಿ ಜೇಡ ಒಕ್ಕಲಿಗರಿಗೆ ಅರಮನೆಗೆ ಕೊಡಬೇಕಾದ ಬಿಟ್ಟಿ ಬಿರಾಡ ಮೊದಲಾದ ಸುಂಕಗಳನ್ನು ಸರ್ವಮಾನ್ಯವಾಗಿ ಬಿಟ್ಟಿರುತ್ತಾರೆ.[12] ಚೌಡೇಶ್ವರಿ ಊಳಿಗರ ಒಕ್ಕಲು ತಿಪಸೆಟ್ಟಿ, ಚಿಕ್ಕಯ್ಯನ ಮಗ ತಿಮ್ಮಯ್ಯನು ಚಿಲೂಮತೂರ ದೇವಿಸೆಟ್ಟಿಯ ಮಗ ಬಸವಪ್ಪ ಬೆಳಿಬರಲ ಕೀರ್ತಿಸೆಟ್ಟಿ ಮುಂತಾದವರ ಹೆಸರುಗಳಿವೆ.[13] ಆನೆಗೊಂದಿಯ ಲಿಂಗಧರನಾದ ಕಾಡವೀರ ಎಂಬುವನು ರಾಮರಾಜಯ್ಯನವರ ನಾಯಕತನಕ್ಕೆ ಸೇರಿದ ಕನಗೊಂಡನಹಳ್ಳಿಯ ವೀರೇಶ್ವರ ಸೇವೆಗೆ ಆ ಗ್ರಾಮದಲ್ಲಿ ಲಿಂಗಧಾರಿಗಳು ಕೊಡುವಂತಹ ತೆರಿಗೆಗಳನ್ನು ಕೊಟ್ಟಿದ್ದನ್ನು ಈ ಶಾಸನ ಸೂಚಿಸಿದೆ.[14] ಮನುಬೋಲಿಯ ಕಟ್ಟು ಕೊಡುಗೆಯಾಗಿ ದೊಡ್ಡಗಟ್ಟದ ಕೆರೆ ಒಡೆದು ಹಾಳಾಗಿದ್ದಾಗ ಕೆರೆಯ ವಡಕಿಯನ್ನು ಕಟ್ಟಿದ್ದಕ್ಕೆ ದತ್ತಿ ಕೊಟ್ಟಿರುತ್ತಾರೆ.[15]

ದೊರೆಯ ಆಳ್ವಿಕೆಯಲ್ಲಿ ಲಿಂಗದ ವೀರಣ್ಣ ಒಡೆಯನ ಶಿಷ್ಯನೊಬ್ಬ ಪ್ರತಾಪ ದೇವರಾಯಪುರ ಎಂದು ಪ್ರತಿನಾಮವಿರುವ ಸರ್ವಮಾನ್ಯ ಅಗ್ರಹಾರದ ಸೋಮೇಶ್ವರ ದೇವರ ಕಾರ್ತಿಕ ದೀಪಾರಾಧನೆಗೆ ಹೊನ್ನಿನ ರೊಕ್ಕವನ್ನು ದತ್ತಿಯಾಗಿ ಕೊಟ್ಟಿರುವನು.[16] ದೊರೆಯ ಆಳ್ವಿಕೆಯಲ್ಲಿ ರೊದ್ದನಾಡಿನ ಪೆನುಗೊಂಡ ರಾಜ್ಯದ ಕೋಕಾಪುರ ಸ್ಥಳದ ತಿಮ್ಮಸಮುದ್ರ ಎಂದು ಪ್ರತಿನಾಮವಿರುವ ಕಗ್ಗಲ್ಲಿನಲ್ಲಿ ಮಲ್ಲಿಕಾರ್ಜುನದೇವರ ದೀಪಾರಾಧನೆಗೆ ದತ್ತಿ ನೀಡಲಾಗಿದೆ.[17] ಸದಾಶಿವದೇವ ರಾಯನ ಆಳ್ವಿಕೆಯಲ್ಲಿ ಹಸ್ತಿನಾವತಿಯ ಮೂಡಿನಾಡು ರಾಯದುರ್ಗ ದೊರೆ ಊರುಕೊಂಡ ಸೀಮೆಯ ಲಿಂಗಸಮುದ್ರ ಎಂಬ ಪ್ರತಿನಾಮವಿರುವ ರಾಗನಗಾಳು ಎಂಬ ಅಗ್ರಹಾರದ ಹನುಮಂತದೇವರ ಸೇವೆಗಾಗಿ ಗೋವಿಂದಯ್ಯ, ಕೇಶವಯ್ಯ, ಬಸವಯ್ಯ, ದಕ್ಷಿಣಾಮೂರ್ತಿ, ವಲ್ಲಭಯ್ಯ ಈ ಐದು ಜನ ವಿಪ್ರನೋದಿಗಳಿಗೆ ಪುಣ್ಯವಾಗಲಿ ಎಂದು ಪದ್ಮನಾಭಯ್ಯ ಕೇಶವಯ್ಯ ಮತ್ತು ಮಾಧವಯ್ಯ ಎಂಬ ವಿಪ್ರವಿನೋದಿಗಳ ಧಾರೆಯೆರೆದುಕೊಟ್ಟ ಧರ್ಮಶಾಸನ ಎಂದು ತಿಳಿಸಿದೆ.[18]

ವಿಪ್ರವಿನೋದಿಗಳ ಸ್ಥಾನಮಾನ

ಇಲ್ಲಿಯ ವಿಪ್ರವಿನೋದಿಗಳ ಹೆಸರು ಕುತೂಹಲಕಾರಿಯಾಗಿದೆ. ವಿಪ್ರವಿನೋದಿ ಎಂಬ ವೈಷ್ಣವರ ಪಂಗಡದವರ ಬಗ್ಗೆ ಆಂಧ್ರಪ್ರದೇಶದಲ್ಲಿ ಕನ್ನಡ ಮತ್ತು ತೆಲುಗು ಶಾಸನಗಳು ಉತ್ತಮ ಮಾಹಿತಿಯನ್ನು ಒದಗಿಸಿಕೊಡುತ್ತವೆ. ವಿಜಯನಗರ ಸದಾಶಿವದೇವರಾಯನ ಆಳ್ವಿಕೆಯಲ್ಲಿ ಮಾತ್ರ ಬಹುಪಾಲು ಶಾಸನಗಳು ಆಂಜನೇಯ ದೇವಸ್ಥಾನದ ಮುಂದೆ ದೊರೆತಿವೆ. ಈ ಶಾಸನಗಳು ವಿಪ್ರವಿನೋದಿಗಳು ತಮಗೆ ಬರುತ್ತಿದ್ದ 'ತ್ಯಾಗವರ್ತನೆ'ಯನ್ನು ದೇವಾಲಯಗಳಿಗೆ ದತ್ತಿಯಾಗಿ ನೀಡಿದ ವಿಷಯ ವಿದೆ. ಆದರೆ ಅವರ ಆಚಾರ ವಿಚಾರ ವ್ಯವಹಾರ ಪದ್ಧತಿಗಳ ಬಗೆಗೆ ಶಾಸನಗಳು ಮೌನವಹಿಸಿವೆ.

ವಿಪ್ರವಿನೋದಿಗಳು ತಮ್ಮನ್ನು ಶುಕ್ಲಯಜುಶಾಖೆಯ ಪ್ರಥಮ ಶಾಖೆಯ ಬ್ರಾಹ್ಮಣರೆಂದೇ ಕರೆಯಿಸಿಕೊಂಡಿದ್ದಾರೆ. ಬೇರೆ ಬೇರೆ ಗೋತ್ರದ ಆಪಸ್ತಂಭಸೂತ್ರ, ಕಾತ್ಯಾಯನ ಸೂತ್ರದ ವಿಪ್ರವಿನೋದಿಗಳಾಗಿದ್ದು, ದೇವರನ್ನು 'ಚೆನ್ನಕೇಶ್ವರ ಪೆರುಮಾಳ್' ಎಂದು, ಹಬ್ಬಗಳನ್ನು 'ತೆಪ್ಪ ತಿರುನಾಳ್', 'ವೈಶಾಖ ತಿರುನಾಳ್', 'ಪೆರುಮಾಳ್ ದಶಮಿ' ಎಂದು ಕರೆದಿರುವರು. ವಿಪ್ರವಿನೋದಿಗಳದು ತಮಿಳು ಮೂಲವನ್ನು ಸೂಚಿಸುತ್ತದೆ. ಅವರು ತಾವು ವಲಸೆ ಬಂದ ಪ್ರದೇಶದ ಕನ್ನಡ–ತೆಲುಗು ಭಾಷೆಯಲ್ಲಿ ಸಹಜವಾಗಿ ವ್ಯವಹಾರದಲ್ಲಿ ಬಳಸಿ ಅದಕ್ಕೆ ಒಗ್ಗಿಕೊಂಡರೆಂದು ತೋರುತ್ತದೆ.

ವಿಪ್ರವಿನೋದಿಗಳು ಎಂದರೆ ವಿಪ್ರರಿಗೆ ವಿನೋದವನ್ನು ಒದಗಿಸುವವರು ಎಂದೂ, ಯಕ್ಷಿಣಿ, ಜಾದೂ ಮಾಡುವುದರಿಂದ ವಿನೋದವನ್ನುಂಟು ಮಾಡುವ ಬ್ರಾಹ್ಮಣರು ಎಂದೂ ಎರಡು ವ್ಯಾಖ್ಯಾನಗಳಿವೆ. ವೈದಿಕ ವರ್ಗದ ಬ್ರಾಹ್ಮಣರಂತೆ ಕರ್ಮನಿಷ್ಠರಾದರೂ ಅವರಿಂದ ಗೌರವವನ್ನು ಪಡೆಯದೇ ಇದ್ದವರು ವಿಪ್ರವಿನೋದಿಗಳು. ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವರಾದ ಪ್ರಥಮಶಾಖೆಯ ಈ ವರ್ಗಕ್ಕೆ ಈಗ ಬ್ರಾಹ್ಮಣವರ್ಗದಿಂದ ಮಾನ್ಯತೆ ದೊರೆತಂತಿಲ್ಲ. ಪ್ರಥಮ ಶಾಖೆಯವರು ಶೈವರೇ ಆಗಿರಲಿ, ವೈಷ್ಣವರೇ ಆಗಿರಲಿ, ಇವರ ಶಾಖೆಯ ಬ್ರಾಹ್ಮಣರು ಅವರನ್ನು ಕೀಳಾಗಿ ಕಾಣುವದು, ಕರ್ನಾಟಕದಲ್ಲಿ ಬಹುಕಾಲ ಮುಂದುವರೆದಿದೆ.

ಕಡಪ, ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ವಿಪ್ರವಿನೋದಿಗಳಿಗೆ ಸಂಬಂಧಿಸಿದಂತೆ ಒಟ್ಟು 21 ಶಾಸನಗಳಿವೆ. ಅದರಲ್ಲಿ ರಾಗುಲಪಾಡು ಮತ್ತು ಚ್ಯಬಲಗಳಲ್ಲಿರುವದು ಮಾತ್ರ ಕನ್ನಡ ಶಾಸನಗಳು. ಬಹುಶಃ ವಿಪ್ರವಿನೋದಿಗಳೆಂಬ ಹೆಸರೇ ನಮಗರಿಯದು. ವೈಷ್ಣವ ಪಂಥದಲ್ಲಿ ವಿಪ್ರವಿನೋದಿಗಳ ಒಂದು ಪಂಥವಿತ್ತು ಎಂದು ನಂಬುವದಾದರೆ ಅವರ ಪಳೆಯುಳಿಕೆಗಳಾದರೂ ಉಳಿದಿರಬಹುದೆ?

ಸದಾಶಿವದೇವರಾಯನ ಧಾರ್ಮಿಕ ಪ್ರಕ್ರಿಯೆಗಳು

ಸದಾಶಿವದೇವರಾಯ ಆಳ್ವಿಕೆಯಲ್ಲಿ ಆನೆಗೊಂದಿಯ ಕೊಮರವೀರಯ್ಯನ ಮಗ ಕೊಮರವೀರ ಎಂಬುವವನು ವಿರೂಪಾಕ್ಷಪುರದ ದೇವರಿಗೆ ಕಾರ್ತಿಕ ಪೂಜೆ ದೇವತಾರಾಧನೆಗೆ ಯಾರೋ ಮಹಂತರಿಗೆ ಭೂಮಿ ದತ್ತಿ ಬಿಟ್ಟಿರುತ್ತಾರೆ.[19] ಡೊಂಬರ ಚೌಡಿನಾಯಕನ ಮಗ ತಿಮ್ಮರಾಜನು ತಿಮ್ಮ ಕುಲಕ್ಕೆ ಹಾಗೂ ರಾಮರಾಜ ಅಯ್ಯ ಕೊಂಡರಾಜಯ್ಯನವರಿಗೆ ಪುಣ್ಯವಾಗಲಿ ಎಂದು ದೇವರ ಸೇವೆಗೆ ದತ್ತಿ ಕೊಟ್ಟಿರುವನು.[20] ಮಹಾಮಂಡಳೇಶ್ವರ ರಾಮರಾಜ ಅಪ್ಪಯ್ಯದೇವಗಳ ಮಗ ಕೋನೇಟಿ ದೇವರಾಯ ಮಹಾಅರಸು ರಾಯದುರ್ಗ ವೇಂಠೆಯಕೆ ಸಲುವ ಉರುವಕೊಂಡ ಸೀಮೆಯ ಅಗ್ರಹಾರಗಳಾದ ಆನಕತಿ, ನಿಂಬೆಗಲ್ಲು, ರಾಯಪನಹಳ್ಳಿ, ಕಲಿದೇವನ ಹಳ್ಳಿ, ಸಿರಿವರ, ದೇವಿನಾಯಕಹಳ್ಳಿ, ಯದ್ರ ಗುರಿ ತುಂಬೆಗನೂರು ರಾಗನಹಾಳು, ತಾವರೆಕೊಳ, ಚಿಕ್ಕಚೋಪಲ, ತಿಂಮಾಪುರ ಹೀಗೆ ಹೋತೂರು, ಬೆನಕನಹಳ್ಳಿ, ಅಂಬರಸನಹಳ್ಳಿ, ತಮಳಗಾಳ ಮಹಾಜನರಿಗೆ ತಳವಾರಿಗೆ ಬೇಡಿಕೆ, ರಾಯಸರ ವರ್ತನೆ, ಕರಣಿಕರ ವರ್ತನೆ, ಹರಳಬಿತ್ತಿ ಮೊದಲಾದ ತೆರಿಗೆಗಳಿಂದ ವಿನಾಯತಿ ನೀಡಿರುವರು. ತಂದೆ ಅಪ್ಪಲರಾಜು ಅಯ್ಯ ಹಾಗೂ ಅಣ್ಣ ತಿರುಮಲ ರಾಯನಿಗೆ ಪುಣ್ಯವಾಗಬೇಕೆಂದು ಪಿನಾಕಿನಿ ನದಿತೀರದ ಹೊನ್ನ ಅಹೋಬಲ ನಾರಸಿಂಹನ ಸನ್ನಿಧಿಯಲ್ಲಿ ದತ್ತಿಯನ್ನು ಪೂರೈಸಲಾಗಿದೆ.[21] ವಿಪ್ರವಿನೋದಿಗಳಿಗೆ ಸಂಬಂಧಿಸಿದಂತೆ ಚ್ಯಬಲ ಗ್ರಾಮದಲ್ಲಿ ಒಂದು ಶಾಸನವಿದೆ. ವಿಪ್ರವಿನೋದಿ ಗೋವಿಂದಯ್ಯ ಕಶ್ಯಪ ಗೋತ್ರದವನು. ವಲ್ಲಭಯ್ಯ ವಿಶಿಷ್ಟಗೋತ್ರ ದವನು. ವಿಪ್ರವಿನೋದಿಯ ತಮ್ಮ ತೀತಾರಯ್ಯ ಮತ್ತು ವಲ್ಲಭಯ್ಯರು ಈ ಮೂವರು ಬರೆದುಕೊಟ್ಟ ಶಾಸನ. ಇಬ್ಬರೂ ಆಪಸ್ತಂಭಸೂತ್ರ ಯಜುರ್ವೇದ ಶಾಖೆಯವರು. ಇವರು ರಾಯದುರ್ಗ ತಾಲೂಕಿನ ಉರುವ ಕೊಂಡವನ್ನು ಕೃಷ್ಣರಾಯಪುರವೆಂದು ಪ್ರತಿನಾಮ ಇರುವ ಸರ್ವಮಾನ್ಯ ಅಗ್ರಹಾರ ತಾವರೆಕೊಳದ ಚೆನ್ನಕೇಶವ ದೇವರಿಗೆ ವಿಪ್ರವಿನೋದಿಗಳಿಗೆ ಕೊಡುವ ತ್ಯಾಗ ವರ್ತನೆಯನ್ನು ದತ್ತಿಯಾಗಿ ಬಿಟ್ಟಿರುವರು.[22]

ಸದಾಶಿವದೇವರಾಯನ ಆಳ್ವಿಕೆಯಲ್ಲಿ ವಿರುಪಣ್ಣ ನಾಯಕನೆಂಬವ ಕಂಬದೂರಿನ ಮಲ್ಲಿಕಾರ್ಜುನ ದೇವಾಲಯಕ್ಕೆ ತಮ್ಮ ತಂದೆ ತಿಮ್ಮಪ್ಪನಾಯಕನಿಗೆ ಪುಣ್ಯವಾಗಲಿ ಎಂದು ಪಾರುಪತ್ತೆಗಾರರು ಅದುವರೆಗೆ ಮಾನ್ಯಗ್ರಾಸವಾಗಿ ತೆಗೆದು ಕೊಳ್ಳುತ್ತಿದ್ದ 50 ವರಹಗಳನ್ನು ಕೊಡುಗೆಯಾಗಿ ಕೊಟ್ಟಿರುವರು.[23] ಪೈಲಬಂಧದ ಶಾಸನವೊಂದು ಮಹಾಮಂಡಳೇಶ್ವರ ರಾಮರಾಜು ತಿರುಮಲಯ್ಯದೇವ ಮಹಾಅರಸುಗಳ ನಿರೂಪದಿಂದ ಮಹಾನಾಯಕಾಚಾರ್ಯ ನಿಡುಗಲ್ಲಿನ ತಿಮ್ಮಣನಾಯಕರು ನಿಡುಗಲ್ಲು ಸೀಮೆಯ ಸೇನಬೋವ ಗವುಡ ಪ್ರಜೆಗಳು ಸೆಟ್ಟಿ

ಪಟ್ಟಣಸ್ವಾಮಿಗಳು ಗುತ್ತಿ ತಿರುಮಲಯ್ಯ, ರಾಜಯ್ಯದೇವ ಹಾಗೂ ಕೆಂಚಪ ನಾಯಕರನ್ನು ಮುಂದಿಟ್ಟುಕೊಂಡು ಪೆಲಬಂಡೆಯ ತಿರುವೇಂಗಳನಾಥದೇವರ ಸೇವೆಗೆ ನಿಡುಗಲ್ಲ ರಾಜ್ಯದ ತುಮುಕುಂಟೆ ಗ್ರಾಮವನ್ನು ದತ್ತಿಯಾಗಿ ನೀಡಿರುವರು.[24] ಮಹಾಮಂಡಳೇಶ್ವರ ರಾಮರಾಜು ಅಯ್ಯಪದೇವ ಮಹಾ ಅರಸರು ಪಲುಪಡಿಯ ಹೊಲದೊಳಗೆ ಪಲಿಗ್ರಾಮವಾಗಿ ಕಟ್ಟಿದ ಅಪಲಪುರದ ಗೌಡ ಸೇನಬೋವರು ವಕ್ಕಲು ತಿಮ್ಮಅಡಿ ಮೊದಲಾದ ಸಮಸ್ತ ಪ್ರಜೆಗಳಿಗೆ ಕೊಟ್ಟ ಸಾಗುವಳಿಯ ಶಾಸನ ದೊರೆಯು ಅಯ್ಯಪದೇವನಿಗೆ ಪೆಲುಪಡಿಗೆ ಗ್ರಾಮವನ್ನು ಅಮರನಾಯಕತನಕ್ಕೆ ಕೊಟ್ಟಿರುತ್ತಾನೆ. ಪಾಳು ಬಿದ್ದಿದ್ದ ಹೊಲವನ್ನು ಸಾಗುವಳಿಗೆ ಗುತ್ತಿಗೆಯ ಮೇಲೆ ಕೊಟ್ಟ ಸರ್ವಮಾನ್ಯವಾಗಿ ಬಿಡಲಾಗಿದೆ.[25]

ಸದಾಶಿವದೇವರಾಯನ ಆಳ್ವಿಕೆಯಲ್ಲಿ ಅಧಿಕಗೊಳಿಸಿದ ಸುಂಕವನ್ನು ತಡೆಯಲಾರದೆ ಚ್ಯಬಲಗ್ರಾಮದ ಜನತೆ ಊರನ್ನೇ ಬಿಟ್ಟುಹೋಗಿದ್ದರು. ಮಹಾಮಂಡಳೇಶ್ವರ ಕೊಂಡೆಯ್ಯದೇವಮಹಾ ಅರಸನ ಪಾರುಪತ್ಯಗಾರನಾದ ದಳವಾಯಿ ಅಪ್ಪಲನಾಯಕನು ಜನಗಳಿಗೆ ನಂಬುಗೆಯನ್ನು ಕೊಟ್ಟು ಮತ್ತೆ ಜನರು ಹಿಂದಕ್ಕೆ ಬರುವಂತೆ ಮಾಡಿರುವನು. ಈ ಗ್ರಾಮದ ಜನರು ಮೂರು ವರ್ಷಗಳ ಕಾಲ ಅರಮನೆಯ ಸೇನಬೋವ ವರ್ತನೆ, ರಾಯಸರ ವರ್ತನೆ, ಊಳಿಗರ ವರ್ತನೆ, ಕಾಣಿಕೆ ಕಡ್ಡಾಯ ಮುಂಜಿ ಮದುವೆಗಳ ಸುಂಕ ಮೊದಲಾದವು ಗಳಿಂದ ವಿನಾಯಿತಿ ಪಡೆದಿರುವರು. ಹೆನ್ನೆಯ ದೇವರಿಗೆ ಬಿಟ್ಟ ಸೇವೆಯು ದೊರಕಿತು. ಮೂರು ವರ್ಷದ ನಂತರ ಉಳಿದ ಕಡೆ ಇರುವಂತೆಯೆ ತೆರಿಗೆ ಹಾಕಲಾಗುವದು ಹಾಗೂ ಭತ್ತವಳಿಯ ರೊಕ್ಕವನ್ನು ಹಸಿಗೆಯ ಮೇಲೆ ತೆಗೆದು ಕೊಳ್ಳಲಾಗುವದು.[26] ಮಹಾಮಂಡಳೇಶ್ವರ ವೆಂಕಟಾದ್ರಿ ರಾಜಅಯ್ಯಗಳಿಗೆ ಆದವಾನಿ ಸೀಮೆಯ ಅಮರನಾಯಕತನ ದೊರೆತು, ಆ ಸೀಮೆಯ ಬೂದೂರು ಗ್ರಾಮದ ಮಹಾಮಂಡಳೇಶ್ವರ ಗೋಬೂರಿ ಅವುಬಳ ರಾಜನಿಗೆ ವುಂಬಳಿಯಾಗಿ ಕೊಟ್ಟಿರು ವನು. ಈ ಅವುಬಳ ರಾಜಯ್ಯ ಬೂದೂರಿನ ಅಹೋಬಲ ನಾರಸಿಂಹದೇವರ ಸೇವೆಗೆ ಹೊಲವನ್ನು ದತ್ತಿಯಾಗಿ ನೀಡಿರುವರು.[27]

ಮಹಾಮಂಡಳೇಶ್ವರ ತಿರುಮಲರಾಜದೇವ ಮಹಾ ಅರಸು ಸುರುಳಿವಾಯಿಯ ಕಲ್ಲಿನಾಥ ದೇವರಿಗೆ ಎರಡು ಗ್ರಾಮಗಳ ಹಣ ಒಂದು ಕಾಸಿನ ಮೂಲ ವೀಸವನ್ನು ಕೊಟ್ಟಿದ್ದಾರೆ.[28] ಪೆನುಗೊಂಡೆಯ ವಿರುಪಣ್ಣನು ದೇವರಾಯಪುರ ಎಂದು ಪ್ರತಿನಾಮ ವಿರುವ ಸದಾಶಿವ ದೇವರಪುರ ಗ್ರಾಮದ ಅರ್ಧಭಾಗವನ್ನು 108 ಘಟ್ಟ ವರಹಗಳನ್ನು ಕೊಟ್ಟು ಕೊಂಡು ಲೇಪಾಕ್ಷಿಯ ವೀರಭದ್ರ ಸೇವೆಗೆ ದತ್ತಿಯಾಗಿ ಕೊಡುತ್ತಾರೆ. ಈ ಗ್ರಾಮವನ್ನು ಹಿಂದೆ ಪ್ರೌಢದೇವರಾಯನು ದೇವರಾಯ ಸೋಮಯಾಜಿ

ಎಂಬುವವರಿಗೆ ಕೊಡುಗೆ ನೀಡಿರುತ್ತಾರೆ ಎಂದೂ ದಾಖಲಿಸಿದೆ.[29] ವಿಜಯನಗರ ಸದಾಶಿವದೇವರಾಯನ ಆಳ್ವಿಕೆಯಲ್ಲಿ ರೊದ್ದನಾಡಿನ ಪೆನುಗೊಂಡೆ ರಾಜ್ಯದ ಕೋಕಾಪುರ ಸ್ಥಳದ ತಿಮ್ಮಸಮುದ್ರ ಎಂಬ ಪ್ರತಿನಾಮವಿರುವ ಕಗ್ಗಲ್ಲಿನಲ್ಲಿ ಮಲ್ಲಿಕಾರ್ಜುನ ದೇವರಿಗೆ ದತ್ತಿ ನೀಡಿರುವರು.[30] ದೊರೆಯ ಆಳ್ವಿಕೆಯಲ್ಲಿ ಆನೆ ಗೊಂದಿಯ ಕೊಮರ ವೀರಯ್ಯನ ಮಗ ಕೊಮರವೀರ ಎಂಬುವವರು ವಿರೂಪಾಕ್ಷ ದೇವಪುರದ ದೇವರಿಗೆ ಕಾರ್ತಿಕ ಪೂಜೆ ದೇವರಾಧನೆಗೆ ಯಾರೋ ಮಹಂತನ ಭೂಮಿ ದತ್ತಿ ಬಿಟ್ಟುಕೊಟ್ಟಿದ್ದಾರೆ.[31]

ಈ ಶಾಸನಗಳನ್ನು ಗಮನಿಸಿದಾಗ ಸದಾಶಿವದೇವರಾಯ ಸಿದ್ಧಪಟ್ಟಕ್ಕಾಗಿ ಪ್ರಜೆಗಳು ಅನೇಕ ದೇವತಾಪೂಜೆಗಳನ್ನು ಮಾಡಿಸಿದಂತೆ ಕಾಣುತ್ತಿದೆ. ರಾಮರಾಯನ ಉಪಟಳದಿಂದ ಬೇಸತ್ತ ಜನತೆ ಅವನಿಂದ ಆದಷ್ಟು ಬೇಗ ಬಿಡುಗಡೆ ಹೊಂದಲೆಂದು ಕೇಳಿಕೊಂಡಿರುವರು. ದೊಡ್ಡಗಟ್ಟದ ಕೆರೆ ಹಾಳಾಗಿದ್ದಾಗ ಕೆರೆಯನ್ನು ದುರಸ್ತಿ ಮಾಡಿಕೊಟ್ಟಿರುವನು. ಸದಾಶಿವದೇವರಾಯನ ಕಾಲದಲ್ಲಿ ಅನೇಕ ದಳವಾಯಿಗಳು, ಕಾರ್ಯದವರು ಅಲ್ಲಿ ಕಾಣಿಸಿಕೊಂಡಿದ್ದಾರೆ. ದೊರೆಯ ದಳವಾಯಿ ಚೆನ್ನಮ್ಮ ನಾಯಕನ ಮಗ ದಳವಾಯಿ ಕೃಷ್ಣಪ್ಪನಾಯಕ ಆದವಾನಿವಳಿತದಲ್ಲಿ ನಾಯಕತನ ದಿಂದ ಆಳುತ್ತಿದ್ದ ಮಹಾಮಂಡಳೇಶ್ವರ ರಾಮರಾಜ ಕೋನೇತಿ ತಿಂಮಯದೇವ ಮಹಾಅರಸು, ಸಿರಿಯಪನಾರ್ಯ ಅಯ್ಯನ ಕಾರ್ಯಕರ್ತ ಗುಂಡಮರಸಯ್ಯ ಆದವಾನಿ ಸೀಮೆಯನ್ನು ಅಮರನಾಯಕತನಕ್ಕೆ ಪಡೆದಿದ್ದ ಮಹಾಮಂಡಳೇಶ್ವರ ಸೋಮವಂಶದ ವೆಂಕಟಾದ್ರಿ ರಾಜಅಯ್ಯ ಮುಂತಾದವರ ರಾಮರಾಜಯ್ಯ ನೆಂಬುವನು ತಮ್ಮ ಕೆಲಸದ ಕ್ಷೌರಿಕ ನಾಯಿಂದ ಕೊಂಡೊಜ ಹಾಗೂ ಸೀಮೆಯ ನಾಯಿಂದರಿಗೆ ಅವರು ಪೂರ್ವದಲ್ಲಿ ಕೊಡುತ್ತಿದ್ದ ಸಿದ್ಧಿಯನ್ನು ಸರ್ವಮಾನ್ಯವಾಗಿ ಬಿಟ್ಟುಕೊಟ್ಟಿರುವರು. ಬಂಗಿನಾಯಕನ ಹಳ್ಳಿಯ ಕೆರೆ ಒಡೆದದ್ದರಿಂದ ಅದನ್ನು ಕಟ್ಟುವದಕ್ಕೆ ಕಟ್ಟುಗುತ್ತಿಗೆಯಾಗಿ ಹೊಲ ಗದ್ದೆಗಳನ್ನು ಕೊಟ್ಟಿರುವರು. ಚವುಂಡೇಶ್ವರ ದೇವರಿಗೆ ನಾಲ್ಕು ಮಂದಿ ಜೇಡ ಒಕ್ಕಲಿಗರಿಗೆ ಅರಮನೆಗೆ ಕೊಡಬೇಕಾದ ಬಿಟ್ಟಿ ಬಿರಾಡ ಮೊದಲಾದ ಸುಂಕಗಳನ್ನು ಸರ್ಮಮಾನ್ಯವಾಗಿ ಬಿಟ್ಟಿರುವರು. ಹೀಗೆ ದೊರೆ ಸದಾಶಿವರಾಯನ ಶಾಸನಗಳು ಸಿಕ್ಕಿವೆ.

ಅಡಿ ಟಿಪ್ಪಣಿಗಳು

1. *ಆ. ಪ್ರ. ಶಾ.* ಕೊಂಡಾಪುರ (ಕ್ರಿ. ಶ. 1538)
2. *ಆ. ಕ. ಶಾ.* 91 ಹಲಕೂರು (ಕ್ರಿ. ಶ. 1551)
3. *ಆ. ಕ. ಶಾ.* 55 ಅಮರಾಪುರ (ಕ್ರಿ. ಶ. 1544)

4. ಆ. ಕ. ಶಾ. 45 ಲೇಪಾಕ್ಷಿ (ಕ್ರಿ. ಶ. 1548)
5. ಆ. ಕ. ಶಾ. 314 ಕುರ ಕುಂದಿ (ಕ್ರಿ. ಶ. 1545)
6. ಆ. ಕ. ಶಾ. 204 ಬಾಗಿನಾಯಕನ (ಕ್ರಿ. ಶ. 1546)
7. ಆ. ಕ. ಶಾ. 183 ಮಲ್ಲಿಪಲ್ಲ (ಕ್ರಿ. ಶ. 1547)
8. ಆ. ಕ. ಶಾ. 128 ಗಡೇಕಲ್ಲು (ಕ್ರಿ. ಶ. 1547)
9. ಆ. ಕ. ಶಾ. 116 ಕನಕಾಪುರ (ಕ್ರಿ. ಶ. 1547)
10. ಆ. ಕ. ಶಾ. 203 ಮುದಡಿ (ಕ್ರಿ. ಶ. 1544)
11.
12. ಅ. ರ. ಖಾಸ 6 ಕೊಟ್ಟೂರು (ಕ್ರಿ. ಶ. 1550)
13. ಆ. ಕ. ಶಾ. 213 ಕನಗಿನಹಾಳ (ಕ್ರಿ. ಶ. 1550)
14. ಆ. ಕ. ಶಾ. 91 ಹುಲಗೂರು (ಕ್ರಿ. ಶ. 1551)
15. ಆ. ಕ. ಶಾ. 77 ಪಾತಿಸುವರಂ (ಕ್ರಿ. ಶ. 1551)
16. ಆ. ಕ. ಶಾ. 1 ಕಗ್ಗಲ್ಲು (ಕ್ರಿ. ಶ. 1553)
17. ಆ. ಕ. ಶಾ. 162 ರಾಗುಲಪಾಜು (ಕ್ರಿ. ಶ. 1554)
18. ಆ. ಕ. ಶಾ. 109 ಗುತ್ತೀತಾ ಆವುಲಪಲ್ಲಿ (ಕ್ರಿ. ಶ. 1555)
19. ಆ. ಕ. ಶಾ. 27 ಪುಲಮಿತಿ (ಕ್ರಿ. ಶ. 1555)
20. ಆ. ಕ. ಶಾ. 155 ಪನ್ನೆಹೋಬಲಂ (ಕ್ರಿ. ಶ. 1556)
21. ಆ. ಕ. ಶಾ. 146 ಚ್ಯಬಲ (ಕ್ರಿ. ಶ. 1556)
22. ಆ. ಕ. ಶಾ. 172 ಕಂಬದೂರು (ಕ್ರಿ. ಶ. 1556)
23. ಆ. ಕ. ಶಾ. 78 ಪೈಲಬಂಡೆ (ಕ್ರಿ. ಶ. 1556)
24. ಆ. ಕ. ಶಾ. 165 ರಾಗುಲಪಾಡು (ಕ್ರಿ. ಶ. 1558)
25. ಆ. ಕ. ಶಾ. 147 ಚ್ಯಬಲ (ಕ್ರಿ. ಶ. 1556)
26. ಆ. ಕ. ಶಾ. 305 ಬೂದೂರು (ಕ್ರಿ. ಶ. 1560)
27. ಆ. ಕ. ಶಾ. 333 ಸುಳುವಾಯಿ (ಕ್ರಿ. ಶ. 1561)
28. ಆ. ಕ. ಶಾ. 44 ಲೇಪಾಕ್ಷಿ (ಕ್ರಿ. ಶ. –)
29. ಆ. ಕ. ಶಾ. 1 ಕಗ್ಗಲ್ಲು (ಕ್ರಿ. ಶ. 1553)
30. ಆ. ಕ. ಶಾ. 109 ಗುತ್ತೀತ ಆವುಲಪಲ್ಲಿ (ಕ್ರಿ. ಶ. 1555)

೧೨. ವಿಜಯನಗರ ಕಾಲದ ಶಾಸನೋಕ್ತ ಮಂಡ್ಯ ಪ್ರದೇಶ – ಒಂದು ಐತಿಹಾಸಿಕ ಅಧ್ಯಯನ

ಡಾ. ಎಸ್. ಶಿವರಾಮು

ವಿಜಯನಗರ ಕಾಲದಲ್ಲಿ ಮಂಡ್ಯ ಹೆಸರಿನ ಉಲ್ಲೇಖ ಪ್ರಪ್ರಥಮವಾಗಿ ಕ್ರಿ. ಶ. 1516ನೇ ವರ್ಷದ ಕೃಷ್ಣದೇವರಾಯನ ಕಾಲದ ಒಂದು ತಾಮ್ರಶಾಸನದಲ್ಲಿದೆ. ಕೃಷ್ಣದೇವರಾಯನು ಧಾತು ಸಂವತ್ಸರದ ಕಾರ್ತಿಕ ಪೌರ್ಣಿಮೆ ಭಾನುವಾರದಂದು ಉಭಯ ವೇದಾಂತ ತಂತ್ರ ವ್ಯಾಖ್ಯಾನಗಳಲ್ಲಿ ಪ್ರಖ್ಯಾತರಾದ ವರದಾಚಾರ್ಯರ ಮಕ್ಕಳಾದ ಗೋವಿಂದರಾಜರುಗಳಿಗೆ 'ಮಂತೆಯ' ಎಂಬ ಗ್ರಾಮ ಹಾಗೂ ಆ ಗ್ರಾಮಕ್ಕೆ ಸೇರಿದ ಉಪಗ್ರಾಮಗಳಾದ ಚಿಕ್ಕಮಂತೆಯ, ಹೊಸಹಳ್ಳಿ, ಕಲ್ಲಹಳ್ಳಿ, ತಂಡಸೇಹಳ್ಳಿ ಹಾಗೂ ಕೋಣನಹಳ್ಳಿಗಳನ್ನು ದಾನಮಾಡಿದ್ದಾನೆ. ಮಂಡ್ಯವನ್ನು 'ಮಂತೆಯ' ಎಂದು ಕರೆದಿದ್ದು, ಅದಕ್ಕೆ 'ಚಿಕ್ಕಮಂಟೆಯ' ಎಂಬ ಉಪಗ್ರಾಮವಿದ್ದುದ್ದು ಸ್ಪಷ್ಟ. ಈ 'ಮಂತಯ'ವೇ ಈಗ 'ಮಂಡ್ಯ' ಎಂಬ ರೂಪವನ್ನು ಪಡೆದಿದೆ. 'ಮಂಡೆಯ' ಗ್ರಾಮವು 'ಮಂತೆಯ' ಗ್ರಾಮವಾಗಿ ಈಗ ಏಳು ತಾಲ್ಲೂಕುಗಳನ್ನೊಳಗೊಂಡ 'ಮಂಡ್ಯ' ಜಿಲ್ಲೆಯಾಗಿ ಬೆಳೆದಿದೆ.ಈ ಅರಸರ ಆಡಳಿತಕ್ಕೆ ಈಗಿನ ಮಂಡ್ಯ ಜಿಲ್ಲೆಯ ಪ್ರದೇಶವೆಲ್ಲ ಸೇರಿದ್ದಿತು. ಇವರ ಕಾಲದ ಈ ಪ್ರದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಶಾಸನಗಳೇ ಪ್ರಧಾನ ಆಕರಗಳು.

ಮಂಡ್ಯ ಜಿಲ್ಲೆಯಲ್ಲಿ ವಿಜಯನಗರ ಕಾಲದ ಸುಮಾರು 120ಕ್ಕೂ ಹೆಚ್ಚಿನ ಶಾಸನಗಳು ದೊರಕಿವೆ. ಮೊದಲನೇ ಹರಿಹರನ ಕಾಲದ ಶಾಸನವೊಂದು ಮಂಡ್ಯ ತಾಲ್ಲೂಕಿನಲ್ಲಿ ಕಂಡುಬಂದಿರುವುದರಿಂದ ವಿಜಯನಗರದ ಸಾಮ್ರಾಜ್ಯಕ್ಕೂ ಮತ್ತು ಈ ಜಿಲ್ಲೆಗೂ ಇದ್ದ ಪ್ರಾಚೀನ ಸಂಬಂಧಗಳಿಗೆ ಮೂಲ ಆಧಾರವಾಗಿದೆ. ಮಂಡ್ಯ ತಾಲ್ಲೂಕಿನ ಬೀಚೇನಹಳ್ಳಿಯ ಶಾಸನವು ನವಲುವಶಿ ಎಂಬ ಸ್ಥಳದ ಭೀಮವೆಂಬ ವೀರನ ಪತ್ನಿ ತಿಮ್ಮವ್ವೆಯು ತನ್ನ ಪತಿಯ ಸ್ಮರಣಾರ್ಥವಾಗಿ ಹಾಕಿಸಿದ ವೀರಗಲ್ಲು ಶಾಸನವಾಗಿದ್ದು, ವಿಜಯನಗರದ ವೀರಬುಕ್ಕಣ್ಣ ಒಡೆಯರ ಆಳ್ವಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನವನ್ನು ಕ್ರಿ. ಶ. 1341ರ ಮೊದಲನೇ ಹರಿಹರನ ಕಾಲದ್ದೆಂದು ಗುರುತಿಸಲಾಗಿದೆ. ಈ ಪ್ರದೇಶವನ್ನು ಮೊದಲನೇ ಹರಿಹರನು ಆಳುತ್ತಿದ್ದು ತನ್ನ ತಮ್ಮನಾದ ಬುಕ್ಕನು ಈತನ ಆಡಳಿತದಲ್ಲಿ ನೆರವಾಗುತ್ತಿದ್ದನೆಂಬ ಅಂಶವು ನಂತರದ ಶಾಸನಗಳಿಂದ ವ್ಯಕ್ತವಾಗುತ್ತದೆ.[1]

ಬುಕ್ಕರಾಯನ ಕ್ರಿ. ಶ. 1358ರ ಮದ್ದೂರು ತಾಲ್ಲೂಕಿನ ಆರುವನಹಳ್ಳಿಯ ಶಾಸನವೇ ವಿಜಯನಗರ ಅರಸರ ಅತ್ಯಂತ ಪ್ರಾಚೀನ ಶಾಸನ. ಈ ಶಾಸನದಲ್ಲಿ ಬಡವಾರವಂಶದ ಭಟ್ಟರ ಬಾಚೆಯಪ್ಪ ಮತ್ತು ಅವನ ವಂಶದ ವಿವರಗಳು ಕಂಡುಬರುತ್ತವೆ. ಈತನು ಕೀರ್ತಿದೇವನ ಮಗನಾಗಿದ್ದು, ಅವನು ಬುಕ್ಕರಾಯ ಸಮುದ್ರ ಕೀರ್ತಿ ಸಮುದ್ರ ಮಾಳವ್ವೆಯಕೆರೆ, ಬಾಚಪ್ಪನ ಕೆರೆಗಳನ್ನು ಅನುಕ್ರಮವಾಗಿ ಅರಸನ, ತಂದೆಯ, ತಾಯಿಯ ಮತ್ತು ತನ್ನ ಹೆಸರಿನಲ್ಲಿ ನಿರ್ಮಿಸಿ ಬಾಚಪಟ್ಟಣ ಎಂಬ ಊರನ್ನೂ ನೆಲೆಗೊಳಿಸಿ ಸಾಲುಮರಗಳನ್ನು ನೆಡಿಸಿದನೆಂದೂ ಶಾಸನದಲ್ಲಿ ಉಲ್ಲೇಖಿಸಲಾಗಿದೆ ಹಾಗೂ ಇದಲ್ಲದೇ ತನ್ನ ಮಕ್ಕಳಿಗೆ ಬುಕ್ಕಣ್ಣ, ಕಂಪಣ್ಣ ಎಂದು ಹೆಸರಿಟ್ಟು ವಿಜಯನಗರದ ಅರಸರಲ್ಲಿ ತನಗಿದ್ದ ನಿಷ್ಠೆಯನ್ನು ವ್ಯಕ್ತಪಡಿಸಿದ್ದಾನೆ.[2]

ಈ ಬುಕ್ಕರಾಯ ಮಹಾರಾಜನಿಗೆ ಮಹಾಮಂಡಳೇಶ್ವರ, ಅರಿರಾಯ ವಿಭಾಡ, ಭಾಷೆಗೆ ತಪ್ಪದ ರಾಯರಗಂಡ, ಹಿಂದೂರಾಯ ಸುರತ್ರಾಣ, ಪೂರ್ವಪಶ್ಚಿಮ ಸಮುದ್ರಾಧಿಪತಿ, ಶ್ರೀವೀರಸಂಗಮೇಶ್ವರದ ರಾಯಬಾಹುತು ಮುಂತಾದ ಬಿರುದುಗಳಿದ್ದವು.[3] ಶ್ರೀರಂಗಪಟ್ಟಣ ಶಾಸನವೊಂದರಲ್ಲಿ ಇದೇ ಅರಸನನ್ನು ವೀರಬುಕ್ಕಣ್ಣರಾಯನೆಂದೂ, ಮದ್ದೂರಿನ ಶಾಸನವೊಂದರಲ್ಲಿ ಬುಕ್ಕಣ ಒಡೆಯರ್ ಎಂದು ಕರೆಯಲಾಗಿದೆ. ಕೃಷ್ಣರಾಜಪೇಟೆ ತಾಲ್ಲೂಕಿನ ಬಾಚೆಹಳ್ಳಿಯ ಕ್ರಿ. ಶ. 1377ರ ಒಂದು ಶಾಸನದಿಂದ ಎರಡನೇ ಹರಿಹರನು ಹೊಸಣ ರಾಜ್ಯದ ಕಬಹುಜಿಲ್ಲೆಗೆ ಸೇರಿದ ಬಾಚೆಹಳ್ಳಿಯನ್ನು ಅದರ 13 ಪಾಳೆಯಗಳೊಡನೆ ಮತ್ತು ದಂಡೆಮರೆಗಟ್ಟ ಗ್ರಾಮವನ್ನು ಅದರ ಮೂರು ಪಾಳೆಯಗಳೊಡನೆ "ಇಮ್ಮಡಿ ಬುಕ್ಕರಾಜಪುರ" ಎಂಬ ಹೆಸರಿನ ಅಗ್ರಹಾರ ಮಾಡಿ ಅದನ್ನು 60 ವೃತ್ತಿಗಳಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ದಾನಮಾಡಿದನೆಂದು ತಿಳಿದುಬರುತ್ತದೆ.[4]

ಮಳವಳ್ಳಿ ಶಾಸನಗಳಲ್ಲಿ ಇಮ್ಮಡಿ ಹರಿಹರನನ್ನು ವೀರಹರಿಹರೇಶ್ವರ, ವೀರಹರಿಹರಮಹಾರಾಯ ಎಂಬುದಾಗಿಯೂ ಕರೆಯಲಾಗಿದೆ. ಮಂಡ್ಯತಾಲ್ಲೂಕಿನ ಡಣ್ಣಾಯಕನಪುರದ ಕ್ರಿ. ಶ. 1459ರ ಲಿಂಗಮುದ್ರೆ ಶಾಸನವು ಪೆನುಗೊಂಡೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ತಿಮ್ಮಣ್ಣದಣ್ಣಾಯಕನ ಆದೇಶದನ್ವಯ ಹಾಗೂ ಮಳಲಿಯ ತಿಪ್ಪಯ್ಯನ ಒಪ್ಪಿಗೆಯ ಮೇರೆಗೆ ಬೆಳತೂರಿನ ರಾಮನಾಥ ದೇವರಿಗೆ ಅಂಗ ರಂಗಭೋಗಕ್ಕೆಂದು ಈ ಸ್ಥಳವನ್ನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[5]

ಮದ್ದೂರು ತಾಲ್ಲೂಕಿನ ಹಾಗಲಹಳ್ಳಿಯ ಕ್ರಿ. ಶ. 1420ರ ಅಸ್ಪಷ್ಟ ಶಾಸನವು ಪ್ರತಾಪ ಅಥವಾ ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು, ಹಾದಿರವಾಗಿಲ ಗ್ರಾಮದ ಮಾದಿಗೌಡ ಎಂಬ ಅಧಿಕಾರಿಯ ಬಗ್ಗೆ ಮಾತ್ರ ತಿಳಿಸುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಕ್ರಿ. ಶ

1420ರ ತಾಮ್ರ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು, ಇಮ್ಮಡಿದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದೆ. ದೇವರಾಯನು ತೋರಿನಾಡ ವೇಂಠೆಯ ಮೇಣಾಪುರ ಮಾಗನೀಯ ವ್ಯಾಪ್ತಿಯಲ್ಲಿದ್ದ ಚಂದಿಗಾಲವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ "ಪ್ರತಾಪ ದೇವರಾಯಪುರ" ವೆಂದು ಕರೆದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[6] ಕ್ರಿ. ಶ. 1440ರ ಮಳವಳ್ಳಿ ತಾಲ್ಲೂಕು ಕಿರಗಸೂರು ಗ್ರಾಮ ಶಾಸನದಲ್ಲಿ ಅಮಾತ್ಯ ಶಿರೋಮಣಿ ಲಕ್ಕಣ್ಣ ದಣ್ಣಾಯಕನು ತನ್ನ ದೊರೆಗಳ ದೀರ್ಘಾಯುಸ್ಸು, ಆರೋಗ್ಯ, ಐಶ್ವರ್ಯಾಭಿವೃದ್ಧಿಯಾಗಿ ಕಿರಗಸೂರು ಗ್ರಾಮದ ತೆರಿಗೆಹಣವನ್ನು ಕಾವೇರಿ ದಡದಲ್ಲಿರುವ ತಲಕಾಡುವೈದ್ಯನಾಥ ದೇವರಿಗೆ ಅರ್ಪಿಸಬೇಕೆಂದು ತನ್ನ ಅಧಿಕಾರಿ ಪಟ್ಟಣದ ರಾಯಣ್ಣ ಒಡೆಯರಿಗೆ ಆಜ್ಞಾಪಿಸಿದ್ದನ್ನು ಹೇಳುತ್ತದೆ. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಭಂಢಾರದಲ್ಲಿರುವ ಕ್ರಿ. ಶ. 1447ರ ತಾಮ್ರ ಶಾಸನವು ವಿಜಯನಗರದ ಎರಡನೇ ದೇವರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಇದರಲ್ಲಿ ಕನ್ನಂಬಾಡಿ ಸ್ಥಳದ ಮೊದನಾಡು ವ್ಯಾಪ್ತಿಯಲ್ಲಿರುವ ಹೊಸಹಳ್ಳಿ ಗ್ರಾಮವನ್ನು ದತ್ತಿಬಿಟ್ಟ ವಿಚಾರವಿದೆ. ಮೇಲುಕೋಟೆಯ ಜೀಯರ್ ದೇವಾಲಯ ದಲ್ಲಿರುವ ಕ್ರಿ. ಶ. 1458ರ ಶಾಸನವು ಇಮ್ಮಡಿ ಪ್ರೌಢದೇವರಾಯನ ಆಳ್ವಿಕೆಯ ಅವಧಿಯಲ್ಲಿ ತಿಮ್ಮಣ್ಣದಣ್ಣಾಯಕನ ಪತ್ನಿ ರಂಗಾಂಬಿಕೆಯು ರಂಗಮಠವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ. ಈ ಮಠಕ್ಕಾಗಿ ಹೊಯ್ಸಳ ರಾಜ್ಯ ಕುರುವಂಕನಾಡ ವೇಂಠೆಯ ವ್ಯಾಪ್ತಿಯಲ್ಲಿದ್ದ ಬಲ್ಲೇನಹಳ್ಳಿ ಮತ್ತು ಯಳವದಹಳ್ಳಿಗಳನ್ನು ದತ್ತಿ ಬಿಟ್ಟ ವಿಚಾರವನ್ನು ಶಾಸನದಲ್ಲಿ ದಾಖಲಿಸಲಾಗಿದೆ.[7] ಕ್ರಿ. ಶ. 1545ಕ್ಕೆ ಸೇರಿದ ಮೇಲುಕೋಟೆಯ ಒಂದು ಶಾಸನವು ಕ್ಷಾಮದ ಕಾರಣ ಗ್ರಾಮದ ವಾರ್ಷಿಕ ಕಂದಾಯವನ್ನು 2000 ವರಹಗಳಿಂದ 1200 ವರಹಕ್ಕೆ ಇಳಿಸಿದುದನ್ನು ದಾಖಲಿಸಿದೆ.[8]

ಕ್ರಿ. ಶ. 1430ರ ಶ್ರೀರಂಗಪಟ್ಟಣದ ಒಂದು ಶಾಸನದ ಪ್ರಕಾರ ಸೈನ್ಯಕ್ಕೆ ತರಬೇತಿ ಹೊಂದಿದ ಮುಸಲ್ಮಾನ ಅಶ್ವಾರೋಹಿಗಳನ್ನು, ಬಿಲ್ಲಾರರನ್ನು ಸೇರಿಸಿ ಕೊಳ್ಳುವುದಕ್ಕಿಂತ ಮುಂಚಿತವಾಗಿ, ಇಮ್ಮಡಿರಾಯನ ಸೇವೆಯಲ್ಲಿ ಸುಮಾರು 10,000 ಜನ ಅಶ್ವಾರೋಹಿಗಳಿದ್ದರು. ರಾಬರ್ಟ್ ಸಿವೆಲ್ ಹೇಳುವಂತೆ ಅವರು ಬಹುಶಃ ಉತ್ತರದಿಂದ ಬಂದವರು.[9] ಮಳವಳ್ಳಿ ತಾಲ್ಲೂಕಿನ ದಾಸನದೊಡ್ಡಿಯ ಕ್ರಿ. ಶ. 1463ರ ಶಾಸನವು ಬಹಳಷ್ಟು ಶಿಥಿಲವಾಗಿದ್ದು, ಮಲ್ಲಿಕಾರ್ಜುನ ಮಹಾ ರಾಯನು ವಿಜಯನಗರವನ್ನು ಆಳುತ್ತಿದ್ದಾಗ ನೀಡಿದ ಗ್ರಾಮ ದಾನವನ್ನು ದಾಖಲಿಸಿದೆ.[10] ತುಳುವ ನರಸನಾಯಕನು ದಕ್ಷಿಣದತ್ತ ದಂಡೆತ್ತಿ ಹೋಗಿ ತುಂಬಿ ಹರಿಯುತ್ತಿದ್ದ ಕಾವೇರಿಯನ್ನು ತಾತ್ಕಾಲಿಕವಾಗಿ ನಿರ್ಮಿಸಲ್ಪಟ್ಟ ಸೇತುವೆಯ ನೆರವಿನೊಂದಿಗೆ ಕ್ರಿ. ಶ. 1465ರಲ್ಲಿ ದಾಟಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ

ಅಂಶವನ್ನು ಶ್ರೀರಂಗಪಟ್ಟಣದ ಕ್ರಿ. ಶ. 1509ರ ತಾಮ್ರಪಟವು ಸೇರಿದಂತೆ ಹಲವಾರು ಶಾಸನಗಳು ದಾಖಲಿಸಿವೆ. ಮಂಡ್ಯ ಜಿಲ್ಲೆಯ ಕೃ.ರಾ. ಪೇಟೆ ತಾಲ್ಲೂಕಿನ ಕೈಗೋಳಹಳ್ಳಿಯಲ್ಲಿದ್ದ ಕ್ರಿ. ಶ. 1462ರ ತಾಮ್ರಪಟವು ಹೊಯ್ಸಳ ದೇಶದ ಸಿಂಧಘಟ್ಟ ಸೀಮೆಯ ವ್ಯಾಪ್ತಿಯಲ್ಲಿದ್ದ ಕೈಗೊಮಡಹಳ್ಳಿ ಅಥವಾ ವೀರನರಸಿಂಹಪುರವನ್ನು ಸಪ್ತಸಾಗರದಾನದ ಸಮಯದಲ್ಲಿ ವಿಜಯನಗರದ ವೀರನರಸಿಂಹನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[11]

ಕ್ರಿ. ಶ 1467ರ ಪಾಂಡವಪುರ ತಾಲ್ಲೂಕಿನ ಸೀತಾಪುರಶಾಸನ ಒಂದೇ ಶಾಸನ ವಾದರೂ ಇದು ಎರಡು ಪ್ರತ್ಯೇಕ ಕಲ್ಲುಗಳ ಮೇಲೆ ಕೆತ್ತಲ್ಪಟ್ಟಿದೆ. ವಿಜಯನಗರದ ಅರಸರಲ್ಲಿ ಸಂಗಮ ವಂಶದ ಕೊನೆಯ ದೊರೆ ಶ್ರೀ ವೀರಪ್ರತಾಪ ಶ್ರೀ ವಿರೂಪಾಕ್ಷ ಎಂದರೆ ಮೂರನೆಯ ವಿರೂಪಾಕ್ಷನ ಆಳ್ವಿಕೆಯನ್ನು ಪ್ರಸ್ತಾಪಿಸಿದೆ. ನಾಗಮಂಗಲದ ಶಿಂಗಣವೊಡೆಯನ ಮಗ ದೇವರಾಜನು ಶ್ರೀರಾಮಚಂದ್ರ ದೇವರು ಮತ್ತು ಹೆಸರುವಾಸಿಯಾದ 32 ಮಹಾಜನರಿಗೆ ಕೊಟ್ಟ ಧರ್ಮ ಸಾಧನವನ್ನು ಶಾಸನ ಪ್ರಸ್ತಾಪಿಸಿದೆ. ದೇವರಾಜನು ಕ್ರಿ. ಶ. 1467ರ ಹೊತ್ತಿಗೆ ಕಾವೇರಿನದಿಗೆ ಹೊಸದಾಗಿ ಒಂದು ಕಟ್ಟೆಯನ್ನು ಕಟ್ಟಿಸಿ ಕಾಲುವೆ ತೋಡಿಸಿದ್ದ ವಿಷಯ ಶಾಸನದಲ್ಲಿ ಪ್ರಸ್ತಾಪಿತ ವಾಗಿದೆ.[12] ಅದರಂತೆ ನೀರಾವರಿ ಉದ್ದೇಶಕ್ಕೆಂದೇ ಕಾಲುವೆಯನ್ನು ನಿರ್ಮಿಸಿದ್ದಕ್ಕಾಗಿ ಈ ಅಧಿಕಾರಿಗೆ ಹೊಸಹಳ್ಳಿಯ ಯಜಮಾನಭೋಗವನ್ನು ನೀಡಲಾಗಿದೆ.[13] ಈ ಕಾಲುವೆಯಿಂದ ಹರವು ಮಹಾಜನಗಳು ತಮ್ಮ ಹರವು ಗ್ರಾಮಸೀಮೆಗೆ ಕಾಲುವೆಯನ್ನು ತೋಡಿಕೊಳ್ಳುವುದಕ್ಕೆ ದೇವರಾಜನ ಒಪ್ಪಿಗೆ ಪಡೆದಿದ್ದರು. ಒಪ್ಪಂದದ ಪ್ರಕಾರ ಕಾಲುವೆಯಿಂದ ಗ್ರಾಮಸೀಮೆಗೆ ಸಾಧನದ ಒಂದು ಭಾಗ ಮತ್ತು ದೇವರಾಜನಿಗೆ ಯಜಮಾನ ಭಾಗವಾಗಿ ಮತ್ತು ದೇವರಾಯ ಹಾಗೂ ಬ್ರಹ್ಮದಾಯಗಳಿಗೆ ಮೂರುಭಾಗ ಸಾಧನವನ್ನು ಕೊಟ್ಟುಕೊಳ್ಳಲಾಗಿತ್ತು. ಕೊಂಡವರಲ್ಲಿ ಮುಖ್ಯವಾಗಿ ಕಾಣುವವನು ಹೆಬ್ಬಾರುವ ಶ್ರೀರಂಗನಾಥರ ಮಗ ಯದುವಂಣ ಕಾಲುವೆಯ ಉಪಯೋಗ ಪಡೆದಿದ್ದ ಯದುವಂಣ ಚಿಕ್ಕಮಳಲಿ, ಹೊಸಹಳ್ಳಿ ಮತ್ತು ಕೆಂದನವಾಳು ಗ್ರಾಮದಲ್ಲಿ ಅರ್ಧ ಭಾಗವನ್ನು 400 ಹೊನ್ನಿಗೆ ಕ್ರಯಕ್ಕೆ ಪಡೆದು, ಹೊಸಹಳ್ಳಿ ಗ್ರಾಮವನ್ನು ತನ್ನ ತಾಯಿ ಸೀತಾಯಮ್ಮನಿಗೆ ಧರ್ಮ ವಾಗಲೆಂದು ಗ್ರಾಮ ದೇವತೆಯಾದ ಶ್ರೀರಾಮಚಂದ್ರ ದೇವರು ಮತ್ತು 72 ಮಹಾಜನರಿಗೆ 268 ವೃತ್ತಿಗಳಾಗಿ ವಿಂಗಡಿಸಿಕೊಟ್ಟಿದ್ದಾನೆ. ಸಾಮಾನ್ಯವಾಗಿ ಶಿಷ್ಟ ದೇವತೆಗಳು ಗ್ರಾಮದೇವತೆಗಳಾಗಿರುವುದಿಲ್ಲ. ಆದರೆ ಹೊಸಹಳ್ಳಿಯಲ್ಲಿ ಶ್ರೀರಾಮ ಚಂದ್ರ ದೇವರಿಗೆ ಗ್ರಾಮಾಧಿದೇವತೆಯ ಪಟ್ಟ ನೀಡಿರುವುದು ಕುತೂಹಲದ ವಿಷಯ ವಾಗಿದೆ. ಶಾಸನದ ಮುಂದುವರಿದ ಭಾಗದಲ್ಲಿ ಮಹಾಜನರು ಮತ್ತು ಅವರಿಗೆ ನೀಡಲಾದ ಭೂಮಿ ದಾನದ ಉಲ್ಲೇಖವಿದೆ.[14] ಈ ರೀತಿ ದಾನ ಪಡೆದ ವ್ಯಕ್ತಿ

ಯಜಮಾನ ಭಾಗವೆಂದು ಶ್ರೋತ್ರೀಯವಾಗಿ ಪಡೆದ ಗ್ರಾಮದ ಹುಟ್ಟುವಳಿ ಯನ್ನು ಅನುಭವಿಸಲು ಹಕ್ಕನ್ನು ಪಡೆಯುತ್ತಾನೆಯೇ ಹೊರತು ಪರರಿಗೆ ದಾನ ಮಾಡುವಂತಿಲ್ಲ ಎಂಬ ಸಂಗತಿ ಅಂದಿನ ರಾಜನೀತಿ ಕಟ್ಟುಪಾಡನ್ನು ಪ್ರತಿಬಿಂಬಿಸಿದೆ. ಮಳವಳ್ಳಿಯ ಒಂದು ಶಾಸನವು ದೇವಾಲಯದಲ್ಲಿ ನಿತ್ಯದೀಪೋತ್ಸವಕ್ಕಾಗಿ ಸುತ್ತಮುತ್ತಲಿನ ರೈತರಿಂದ ಕಾಣಿಕೆಗಳನ್ನು ಸಂಗ್ರಹಿಸಿದ ವಿಚಾರವನ್ನು ಉಲ್ಲೇಖಿಸಿದೆ.[15]

ನಾಗಮಂಗಲ ಕೋಟೆಯನ್ನು ಮೊಟ್ಟಮೊದಲು ಕಟ್ಟಿದವ ತಿಮ್ಮಣ್ಣನಾಯಕ ವಿಜಯನಗರದ ಶ್ರೀಕೃಷ್ಣದೇವರಾಯನ ದಂಡನಾಯಕರಲ್ಲೊಬ್ಬನೀತ. ಕ್ರಿ. ಶ. 1515ರ ಸುತ್ತಮುತ್ತ ನಾಗಮಂಗಲದ ಬಗ್ಗೆ ಕ್ರಿ. ಶ. 1807ರಲ್ಲಿ ಬರೆದ ಮೂಲ ಕೈಫಿಯತ್ತಿನಲ್ಲಿ ಇದರ ಬಗ್ಗೆ ಸವಿಸ್ತಾರ ಮಾಹಿತಿ ಇದೆ. ನಾಗಮಂಗಲದ ಹೊರಕೋಟೆ ಯನ್ನು ಕ್ರಿ. ಶ. 1578ರಲ್ಲಿ ಚನ್ನಪಟ್ಟಣದ ಜಗದೇವರಾಯನು ಕಟ್ಟಿಸಿದನು.[16]

ಕ್ರಿ. ಶ. 1517ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಉಂಬಳಿಬಿಟ್ಟನೆಂದು ತಿಳಿದುಬರುವುದಲ್ಲದೆ ಕ್ರಿ. ಶ. 1551ರ ಮೇಲುಕೋಟೆಯ ಒಂದು ದಾಖಲೆಯಲ್ಲಿ ರಾಯನು ಮೈಸೂರಿನ ಮೇಲೆ ದಾಳಿ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ.[17] ನಾಗಮಂಗಲದ ಒಂದು ಶಾಸನವು ಮಾವಿನಹಳ್ಳ ಮತ್ತು ನಾಮಿಹಳ್ಳಗಳ ಸಂಗಮದಲ್ಲಿ ವೀರಣ್ಣ ಎಂಬುವವನು ಒಂದು ಕೆರೆಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ.[18] ಕ್ರಿ. ಶ. 1519ರ ಕೃಷ್ಣ ದೇವರಾಯನ ಆಡಳಿತದ ಮೇಲುಕೋಟೆ ಶಾಸನವು ತೂಬು ಒಡೆದುಹೋದ ಕೋಡಿ ಹಾಗೂ ಕೆರೆಯ ದುರಸ್ತಿಯನ್ನು ತಿಳಿಸುತ್ತದೆ. ಈ ಕಾರ್ಯಕ್ಕೆ ತಗುಲಿದ 300 ಗದ್ಯಾಣ ಸುವರ್ಣ ನಾಣ್ಯಗಳನ್ನು ಲಕ್ಷ್ಮೀಪತಿಶೆಟ್ಟಿ ಎಂಬ ವ್ಯಾಪಾರಿಯು ನೀಡಿದ. ಈ ಎಲ್ಲಾ ಕಾರ್ಯಗಳಿಗೆ ಪ್ರತಿಫಲವಾಗಿ ದೇವಾಲಯದವರು ದೇವರಿಗೆ ವಿಶೇಷ ಪೂಜೆಯನ್ನು, ಲಕ್ಷ್ಮೀಪತಿಯವರ ತಂದೆ ತಿಬ್ಬಾಶೆಟ್ಟಿಯ ಹೆಸರಿನಲ್ಲಿ ಮಾಡಿ ದಾನಿಗೆ ಪ್ರಸಾದ ನೀಡುತ್ತಿದ್ದರು.[19]

ಮಂಡ್ಯ ಜಿಲ್ಲೆಯಲ್ಲಿ ಕೃಷ್ಣದೇವರಾಯನ ಕಾಲದ ಸುಮಾರು 11 ಶಾಸನಗಳು ಲಭ್ಯವಾಗಿವೆ. ನಾಗಮಂಗಲದಲ್ಲಿ ದೊರೆತಿರುವ ಕ್ರಿ. ಶ 1511ರ ಶಾಸನವು ಕೃಷ್ಣ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ನಾಗಮಂಗಲ ಅಥವಾ ವೀರಬಲ್ಲಾಳ ಚತುರ್ವೇದಿ ಭಟ್ಟರತ್ನಾಕರ ಅಗ್ರಹಾರದಲ್ಲಿದ್ದ ವೀರಭದ್ರ ದೇವಾಲಯದ ರಂಗ ಮಂಟಪ ದುರಸ್ತಿಮಾಡಿ, ಮುಂಭಾಗದ ಗಂಧಾಗೋಡಿ ಮಂಟಪವನ್ನು ಗುಮ್ಮಾಲಪುರದ ಅಕ್ಕಣ್ಣ ಚೆನ್ನಶೆಟ್ಟಿಯ ಮಗನಾದ ಹೊನ್ನಿಶೆಟ್ಟಿಯು ನಿರ್ಮಿಸಿದನೆಂದು ಹಾಗೂ ಅರಮನೆಯ ಬೇಹಾರಿಯೂ ಈ ಕೈಂಕರ್ಯಕ್ಕೆ ಅವಶ್ಯಕವಾದ ಮಾರ್ಗದರ್ಶನ ಮಾಡಿದನೆಂದು ಶಾಸನದಲ್ಲಿ ದಾಖಲಿಸಲಾಗಿದೆ.

ಕ್ರಿ. ಶ. 1512ರ ನಾಗಮಂಗಲ ತಾಲ್ಲೂಕು ದೊಡ್ಡಜಟಕದ ಒಂದು ಶಾಸನದ ಪ್ರಕಾರ ಕೃಷ್ಣದೇವರಾಯ ಹಿರಿ ಜತ್ತಿಗ ಗ್ರಾಮವನ್ನು ಅವರ ನಾಲ್ಕು ಪಾಳೆಯಗಳೊಡನೆ ಚಿನ್ನದೇವಿಪುರನೆಂಬ ಹೆಸರನ್ನಿಟ್ಟು ಶ್ರೀನಿವಾಸದಾಸರಿಗೆ ದಾನ ಮಾಡಿದನು. ಶ್ರೀನಿವಾಸದಾಸರು ಹತ್ತು ವೃತ್ತಿಗಳನ್ನು ಸ್ವಂತಕ್ಕೆ ಇಟ್ಟುಕೊಂಡು ಉಳಿದ 20 ವೃತ್ತಿಗಳನ್ನು ಅರ್ಹರಾದ ಬ್ರಾಹ್ಮಣರಿಗೆ ಕೊಟ್ಟನು.[20]

ನಾಗಮಂಗಲ ತಾಲ್ಲೂಕಿನ ದೇವಲಾಪುರ ತಾಮ್ರಪಟವು ಕ್ರಿ. ಶ. 1513ರಲ್ಲಿ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ಮದನಪುರ ಹಾಗೂ ಮಲ್ಲಿಗೆರೆ ಗ್ರಾಮಗಳನ್ನು "ಕೃಷ್ಣರಾಯಪುರ" ಎಂದು ನಾಮಕರಣ ಮಾಡಿದ ಬಗ್ಗೆ ಉಲ್ಲೇಖಿಸುತ್ತದೆ.[21] ಕ್ರಿ. ಶ.1516ರಲ್ಲಿ ಕೃಷ್ಣದೇವರಾಯ ನಾಗಮಂಗಲ ರಾಜ್ಯದಲ್ಲಿದ್ದ ಚಿಕ್ಕಬ್ಬೆಹಳ್ಳಿಯನ್ನು ಅದರ ಮೂರು ಪಾಳಯಗಳೊಡನೆ ಹಾಗೂ ಚೆನ್ನಪಟ್ಟಣ ರಾಜ್ಯದ ಹಲವು ಮರ ಹೊಸಹಳ್ಳಿ ಮತ್ತು ಬಿಲ್ಲಗೊಂಡನ ಹಳ್ಳಿ ರಾಜ್ಯದ ಮಂಗೇನಹಳ್ಳಿ ಈ ಮೂರು ಗ್ರಾಮಗಳನ್ನು ವ್ಯಾಸತೀರ್ಥರೆಂಬ ಸದ್ಗುಣ ತಪಸ್ವಿಗೆ ಕೊಟ್ಟನು.[22] ನಾಗಮಂಗಲ ತಾಲ್ಲೂಕಿನ ತಿಬ್ಬನಹಳ್ಳಿಯ ಕ್ರಿ. ಶ. 1524ರ ಕೃಷ್ಣದೇವರಾಯನ ಅವಧಿಯಲ್ಲಿ ದೇವಾಲಪುರದ ಸ್ಥಾನದ ತಿಬ್ಬನಹಳ್ಳಿಯನ್ನು "ಕೃಷ್ಣದೇವರಾಯಸಮುದ್ರ" ಎಂದು ಕರೆದು ಚನ್ನಪಟ್ಟಣದ ವೀರಪ್ಪ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.

ಕ್ರಿ. ಶ. 1528ರ ಪಾಂಡುವಪುರದ 134ನೇ ಮೇಲುಕೋಟೆ ಶಾಸನವು ಬಹಳ ಮುಖ್ಯವಾಗಿದೆ. ಈ ಶಾಸನದ ಪ್ರಕಾರ ಕೃಷ್ಣದೇವರಾಯನು ತನಗೆ ನಾಯಕತನ ದಯಪಾಲಿಸಿದುದಕ್ಕಾಗಿ ದಂಡುಅಹೋಬಳದ ಮಗನಾದ ಕೃಷ್ಣನಾಯಕನ ಶ್ರೀರಂಗಪಟ್ಟಣದ ದೇವಾಲಯಗಳಿಗೆ ಸಿಂಧುಘಟ್ಟ ಸೀಮೆಯೊಳಗಿನ ಎರಡು ಗ್ರಾಮಗಳನ್ನು ದಾನಮಾಡಿದ ವಿಷಯವಲ್ಲದೆ ಮೇಲುಕೋಟೆ ದೇವಸ್ಥಾನದ ಭೂಮಿಗಳನ್ನು ಉಳುಮೆ ಮಾಡುತ್ತಿದ್ದ ಒಕ್ಕಲಿಗರನ್ನೆ ತೊಂಡನ್ನೂರಿನ ದೇವಸ್ಥಾನಕ್ಕೆ ಸೇರಿದ ಭೂಮಿಗಳನ್ನು ಉಳುಮೆಮಾಡಲು ಕರೆದೊಯ್ಯಲಾಗುತ್ತಿತ್ತೆಂಬ ಕುತೂಹಲಕರ ಅಂಶ ತಿಳಿದು ಬರುತ್ತದೆ.[23] ಇದರಿಂದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾಗಿದ್ದ ಮೇಲುಕೋಟೆ ಹಾಗೂ ತೊಂಡನೂರು ದೇವಾಲಯಗಳು ಬ್ರಹ್ಮಾದಾಯದ ಮೂಲಕ ಭೂ-ಒಡೆತನವನ್ನು ಹೊಂದಿದ್ದು, ಅವುಗಳನ್ನು ಉಳುಮೆ ಮಾಡಲು ಸ್ಥಳೀಯ ಒಕ್ಕಲಿಗರನ್ನು ಅಂದರೆ ರೈತಾಪಿ ಗೇಣಿದಾರರನ್ನು ಬಳಸಿಕೊಳ್ಳುತ್ತಿದ್ದರೆಂಬ ವಿಚಾರ ಗೊತ್ತಾಗುತ್ತದೆ.[24]

ಹೊಯ್ಸಳ ಮೂರನೇ ಬಲ್ಲಾಳನ ನಂತರ ವಿಜಯನಗರವು ಕ್ರಮೇಣ ವಿಸ್ತಾರಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತು. ಮೈಸೂರು,

ಮಂಡ್ಯ ಮತ್ತು ಇತರ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟು ಮನೆತನಗಳು ತಲೆಯೆತ್ತಿ ವಿಜಯನಗರ ಸಾಮ್ರಾಟರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರದ ಸುಪ್ರಸಿದ್ಧ ಸಾಮ್ರಾಟನಾದ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಸಾಮಂತಕುಮಾರ ವೀರಯ್ಯನ ತಿರುಮಲಾದೇವಿ ಕೃಷ್ಣದೇವರಾಯನ ಪಟ್ಟದ ರಾಣಿಯರಲ್ಲಿ ಒಬ್ಬಳು.[25] ತಿರುಮಲದೇವಿಯ ವಿವಾಹವು ಕ್ರಿ. ಶ. 1510 ರಲ್ಲಿ ಈಗ ಹೊಸಪೇಟೆ ಎಂದು ಕರೆಯುವ 'ತಿರುಮಲ ದೇವಿಪಟ್ಟಣ' ದಲ್ಲಿ ನಡೆಯಿತು. ತಿರುಮಲದೇವಿ ಅಮ್ಮನ್ ಕ್ರಿ. ಶ. 1513ರಲ್ಲಿ ತಿರುಮಲ ಶ್ರೀ ವೆಂಕಟೇಶ್ವರನಿಗೆ ಪೂಜಾದಿ ಕೈಂಕರ್ಯಗಳಿಗಾಗಿ ಚಿನ್ನದ ಬಟ್ಟಲನ್ನು ಕೊಡುಗೆಯಾಗಿ ಕೊಟ್ಟಳೆಂದು ತಿಳಿದುಬರುತ್ತದೆ.[26] ತಿರುವೆಂಗಳನಾಥದೇವರಿಗೆ 3742 ತೂಕದ ಚಿನ್ನದ ಪಾತ್ರೆಯನ್ನು ಪೂಜಾದಿಗಾಗಿ ಮತ್ತು 102 ತೂಕದ ಚಿನ್ನದ ತಟ್ಟೆಯನ್ನು ದೇವರಿಗೆ ಪುಷ್ಪಾರ್ಚನೆಗಾಗಿ ನೀಡಿದ ವಿಷಯವು ದಾಖಲೆಗಳಿಂದ ತಿಳಿದುಬರುತ್ತದೆ.[27] ಕೃಷ್ಣದೇವರಾಯನು ಬಹುಪತ್ನಿಯರನ್ನು ಹೊಂದಿದ್ದು ಸರ್ವವಿದಿತವಾಗಿದ್ದರೂ ಹಿರಿಯ ರಾಣಿ ಯಾರು ಎಂಬ ಬಗ್ಗೆ ಜಿಜ್ಞಾಸೆಯಿದೆ. ಕ್ರಿ. ಶ. 1517ರ ಶಾಸನವು ತಿರುಮಲ ದೇವಿಯು ಪಟ್ಟಮಹಿಷಿ ಎಂಬ ಅಂಶವನ್ನು ದೃಢಪಡಿಸುತ್ತದೆ. ಆಕೆಯ ಉನ್ನತ ಸಂಸ್ಕಾರ ಮತ್ತು ರಸಿಕತೆಯನ್ನು ಗ್ರಹಿಸಿ ತುಂಗಾಭದ್ರ ತೀರದಲ್ಲಿ "ಚಿತ್ರವಾಟಿಕಾ" ಎಂಬ ಉದ್ಯಾನವನ್ನು ನಿರ್ಮಿಸಿದನು. ಈ ಚಿತ್ರವಾಟಿಕಾ ನಾಗಲಾಪುರಕ್ಕೆ ಎರಡು ಮೈಲು ದೂರದಲ್ಲಿದ್ದಿತು. ಇಷ್ಟೇ ಅಲ್ಲದೇ ಕೃಷ್ಣದೇವರಾಯನು ರಾಜಧಾನಿಯ ಭಾಗವನ್ನು 'ತಿರುಮಲದೇವಿಪುರ' ಎಂದು ನಾಮಕರಣ ಮಾಡಿದ್ದನು.[28]

ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನಿಗೆ ಪ್ರೀತಿಪಾತ್ರಳಾದ ತಿರುಮಲಾಂಬೆಯನ್ನು ಮಂಡ್ಯ ಪ್ರಾಂತ್ಯ ಒದಗಿಸಿಕೊಟ್ಟದ್ದು ಒಂದು ಅಭೂತಪೂರ್ವ ಘಟನೆ. ಕ್ರಿ. ಶ. 1517ರಲ್ಲಿ ಕೃಷ್ಣದೇವರಾಯನು ಮತ್ತೊಂದು ಉಂಬಳಿಯನ್ನು ಶ್ರೀರಂಗಪಟ್ಟಣ ರಾಜಧಾನಿಯಲ್ಲಿನ ಗಂಗಾಧರೇಶ್ವರ ದೇವಸ್ಥಾನಕ್ಕೆ ಮಾಡಿಕೊಟ್ಟ ವಿಷಯವು ತಿಳಿದುಬರುತ್ತದೆ.[29]

ಕೃಷ್ಣದೇವರಾಯನು ಉಮ್ಮತ್ತೂರು ರಾಜ್ಯವನ್ನು ಆಳುತ್ತಿದ್ದ ಗಂಗ ಶಾಖೆಯ ರಾಜನನ್ನು ಸೋಲಿಸಿ ಕ್ರಿ. ಶ. 1511ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಉಮ್ಮತ್ತೂರು ಗಂಗರಸರ ಕಾಲದಲ್ಲಿ ಶಿವನ ಸಮುದ್ರವು ಒಂದು ಮುಖ್ಯ ಪಟ್ಟಣವಾಗಿತ್ತು. ಕೃಷ್ಣದೇವರಾಯನ ನಂತರ ಆಳಿದ ಅಚ್ಯುತರಾಯನೂ ಕ್ರಿ. ಶ. 1532ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿನೀಡಿದನು.[30] ಕ್ರಿ. ಶ. 1521ರಲ್ಲಿ ನಾಗಮಂಗಲದ ಸಮಸ್ತ ಮಹಾಜನರು ವಿಠ್ಠಣ್ಣನೆಂಬುವನಿಗೆ, ಹೊಸಹಳ್ಳಿಗೆ ಪೂರ್ವಕ್ಕೆ ನದಿಯ ಹತ್ತಿರ

ಕೆರೆಯೊಂದನ್ನು ಕಟ್ಟಲು ಒಂದು ಓಲೆಯನ್ನು ಕೊಟ್ಟರು. ಕೆರೆಯನ್ನು ಕಟ್ಟದುದಕ್ಕೆ ಅವರು ವಿಠ್ಠಣ್ಣನಿಗೆ 'ಕೆರೆಗೊಡಂಗ'ಯಾಗಿ ಮಾಯಿದೇವಿ ಕೆರೆಯ ಹತ್ತಿರ ಭೂಮಿಯನ್ನು ಮತ್ತು ತೂಬಿನ ಕೆಳಗಡೆ ಹೊಲಗಳಲ್ಲಿ ಒಂದು ಭಾಗವನ್ನು ಕೊಟ್ಟರು. ನೀರಾವರಿ ಕಾರ್ಯಗಳನ್ನು ನಡೆಸಿದ ಶ್ರೀಮಂತ ವ್ಯಕ್ತಿಗಳನ್ನು ಅರಸರು ಪುರಸ್ಕರಿಸುತ್ತಿದ್ದರು. ಬಾಚೆಯಪ್ಪ ಎನ್ನುವವನು ಅನೇಕ ಕೆರೆಗಳನ್ನು ಕಟ್ಟಿಸಿ, ತೋಟಗಳನ್ನು ಬೆಳೆಸಿದುದನ್ನು ಮೆಚ್ಚಿ ವಿಜಯನಗರದ ರಾಜಹರಿಹರನು ಅವನಿಗೆ ಚಿನ್ನದ ಪಲ್ಲಕ್ಕಿ, ಚಿನ್ನದಚಾಮರಗಳು ಮತ್ತು ಚಿನ್ನದ ಒಂದು ಕೊಡೆಯನ್ನು ನೀಡಿ ಪುರಸ್ಕರಿಸಿದರು.[31] ಮಳವಳ್ಳಿ 22ನೆಯ ಶಾಸನವು ಅದನ್ನೂ ಹೇಳಿ ಇನ್ನು ಒಂದು ಮಾತು ಕೊಡಿಸುತ್ತದೆ. ತಾನು ಕಟ್ಟಿಸಿದ ಕೆರೆಗಳಿಗೆ ತಾನೇ ತೂಬುಗಳನ್ನು ಮಾಡಿಸಿದನು ಎಂದು ಹೇಳುತ್ತದೆ.[32] ಹೀಗೆ ನೀರಾವರಿ ಕಾರ್ಯಗಳಲ್ಲಿ ಸಾಮುದಾಯಿಕ ಪರಿಶ್ರಮವನ್ನು ಅರಸರು ಉತ್ತಮ ರೀತಿಯಲ್ಲಿ ಬೆಂಬಲಿಸುತ್ತಿದ್ದರು.

ಮಂಡ್ಯ ಪ್ರದೇಶದಲ್ಲಿ ಅಚ್ಯುತರಾಯನ ಕಾಲದ ಹಲವು ಶಾಸನಗಳು ಲಭ್ಯವಿದ್ದು, ಮಳವಳ್ಳಿ ತಾಲ್ಲೂಕಿನ ಮಾರೇಹಳ್ಳಿಯಲ್ಲಿ ದೊರೆತಿರುವ ಕ್ರಿ. ಶ. 1530ರ ಶಾಸನವು ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಮೂಲಸ್ಥಾನ ದೇವರಿಗೆ ಈ ಪ್ರದೇಶವನ್ನು ಆಳುತ್ತಿದ್ದ ತಿಪ್ಪಣ್ಣ ನಾಯಕನು ದತ್ತಿಬಿಟ್ಟ ವಿಚಾರವನ್ನು ದಾಖಲಿಸಿದೆ.[33] ಇದೇ ತಾಲ್ಲೂಕಿನ ಕೊಡಗಹಳ್ಳಿಯ ಕ್ರಿ. ಶ. 1530 ರ ಶಾಸನವು ಅಚ್ಯುತರಾಯನ ಆಳ್ವಿಕೆಯಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ರಾಯಣ್ಣನಾಯಕನೆಂಬ ಅಧಿಕಾರಿಯು ಮಾರಯನಪುರವೆಂಬ ಗ್ರಾಮವನ್ನು ತಲಕಾಡಿನ ಕೀರ್ತಿನಾರಾಯಣ ದೇವರಿಗೆ ದತ್ತಿ ಬಿಟ್ಟ ವಿಚಾರವನ್ನು ದಾಖಲಿಸಿದೆ.[34]

ವಿಜಯನಗರದ ಅರಸ ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಹರಿಗಲ ಅಬ್ಬರಾಜನ ಮಗ ತಿರುಮಲರಾಜಯ್ಯನು ಯಾದವಗಿರಿಯಾದ ತಿರುನಾರಾಯಣಪುರದ ಶ್ರೀಸಂಪತ್ಕುಮಾರದೇವರ ಪಾದ ಪದ್ಮಾರಾಧಕರಾದ ಮತ್ತು ರಾಮಾನುಜಾಚಾರ್ಯರ ಶಿಷ್ಯರಾದ 52 ಜನಗಳಿಗೆ ನೀಡಿದ ಗ್ರಾಮದಾನವನ್ನು ಮೇಲುಕೋಟೆಯ ಒಂದು ಶಾಸನ ಪ್ರಸ್ತಾಪಿಸಿದೆ.[35] ಅಂದಿನ ಅರಸರು ನೀಡುತ್ತಿದ್ದ ಗ್ರಾಮದಾನಗಳು ಕೆಲವೊಮ್ಮೆ ಏಕಭೋಗವಾಗಿರುತ್ತಿದ್ದರೆ ಮತ್ತೆ ಕೆಲವು ವೇಳೆ ವಂಶಪಾರಂಪರ್ಯವಾಗಿರುತ್ತಿದ್ದವು. ಏಕಭೋಗವಾಗಿದ್ದಲ್ಲಿ ದಾನಪಡೆದವನ ಮರಣಾನಂತರ ಆ ಗ್ರಾಮದ ಒಡೆತನ ಮತ್ತೇ ಅರಸನಿಗೆ ಸೇರುತ್ತಿತ್ತೆಂದು ಕೃ. ರಾ. ಪೇಟೆ ತಾಲ್ಲೂಕಿನ ಅಚ್ಯುತರಾಯನ ಕ್ರಿ. ಶ. 1532ರ ತಾಮ್ರಶಾಸನದಿಂದ ತಿಳಿದುಬರುತ್ತದೆ.[36] ಕೃಷ್ಣದೇವರಾಯನ ಉತ್ತರಾಧಿಕಾರಿಯಾದ ಅಚ್ಯುತರಾಯನ ಬಗ್ಗೆ ಕೃ. ರಾ. ಪೇಟೆ ಮತ್ತು ನಾಗಮಂಗಲದ ಶಾಸನಗಳು ಕೆಲವು ವಿಚಾರಗಳನ್ನು

ಕೊಟ್ಟಿವೆ. ಅಚ್ಯುತನು ಕೃಷ್ಣದೇವರಾಯನ ತಮ್ಮನೆಂದೂ ಅಂಗ, ಕಳಿಂಗ, ವಂಗ ಮತ್ತಿತರ ಅರಸರು ಅವನಿಗೆ ವಿಜಯವನ್ನು, ದೀರ್ಘಾಯುಸ್ಸನ್ನು ಹಾರೈಸಿದರೆಂದು ಕೃ. ರಾ. ಪೇಟೆಯ ಶಾಸನದಲ್ಲಿ ತಿಳಿಸಲಾಗಿದೆ.[37] ನಾಗಮಂಗಲದ ಶಾಸನದಲ್ಲಿ ನರಸನ ಮೂರನೆಯ ಹೆಂಡತಿಯಾದ ಓಬಾಂಬಿಕೆಯಲ್ಲಿ ರಂಗಕ್ಷಿತೀಂದ್ರ ಮತ್ತು ಅಚ್ಯುತದೇವರಾಯನು ಜನಿಸಿದರೆಂದು ತಿಳಿಸಲಾಗಿದೆ.

ಕ್ರಿ. ಶ. 1545ರ ನಾಗಮಂಗಲ ತಾಲ್ಲೂಕು ಹೊನ್ನೇನಹಳ್ಳಿ ಗ್ರಾಮದ ಸದಾ ಶಿವರಾಯನ ಶಾಸನವು ಹಲವು ಚಾರಿತ್ರಿಕ ಅಂಶಗಳನ್ನು ಒಳಗೊಂಡಿದೆ. ಈ ಶಾಸನವು ಸದಾಶಿವರಾಯ ಸುರಗಿರಿಯ ಶತ್ರುಗಳನ್ನು ನಿಗ್ರಹಿಸಿದ ವಿಷಯ 'ಸುರಗಿಶೌಸಂಹೃತ್ಯ ವಿದ್ವೇಷಿಣ' ಎಂಬ ಮಾತುಗಳಲ್ಲಿ ವ್ಯಕ್ತವಾಗಿದೆ.[38] ಮುಂದೆ ಇದೇ ಶಾಸನದಲ್ಲಿ ಹೊಯ್ಸಳನಾಡು ಪೆನುಗೊಂಡೆ ರಾಜ್ಯಕ್ಕೆ ಸೇರಿತ್ತೆಂದು ಹೇಳಿದೆ. ತುಳುವ ನರಸನಾಯಕನು ಕ್ರಿ. ಶ. 1503ರ ವೇಳೆಗೆ ಮರಣಹೊಂದಿದ ವಿಚಾರ ಕೃ. ರಾ ಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿಯ ಶಾಸನ ತಿಳಿಸಿದೆ.[39]

ಮೇಲುಕೋಟೆಯ ಕ್ರಿ. ಶ. 1564ರ ಶಾಸನವು ಸದಾಶಿವರಾಯನ ಕಾಲಕ್ಕೆ ಸೇರಿದ್ದು, ಇದರಲ್ಲಿ ಯಾದವಗಿರಿಯಾದ ತಿರುನಾರಾಯಣಪುರದ ಶ್ರೀಸಂಪತ್ಕರ ಶ್ರೀನಾರಾಯಣದೇವರಾದ ಶ್ರೀ ಚೆಲ್ಲಪಿಳ್ಳೆರಾಯರ ಶ್ರೀ ಪಾದಕ್ಕೆ ಕೊಂಡರಾಜಯದೇವ ಮಹಾಅರಸರುಗಳು ತಮಗೆ ಸದಾಶಿವರಾಯರಿಂದ ಅಮರ ನಾಯಕತನಕ್ಕೆ ದೊರೆತಿದ್ದ ಚೆನ್ನಪಟ್ಟಣ ಸ್ಥಳದ ಹೊಂಗನೂರು ಗ್ರಾಮ ಸಹಿತ ಅದಕ್ಕೆ ಸಲ್ಲುವ ನಾಲ್ಕು ಕಾಲುವಳಿಗಳಾದ ಸಣಬಿನಹಳ್ಳಿ, ಕೋಡಿಪುರ, ನೀಲಸಮುದ್ರ ಓಪಣಪುರ ಹಾಗೂ ಗುಳೂರು ಸ್ಥಳದ ಹೊನ್ನುಡಿಗೆ ಗ್ರಾಮ ಸಹಿತ ಅದಕ್ಕೆ ಸಲ್ಲುವ ಎರಡು ಕಾಲುವಳಿಗಳಾದ ಅಂಣಪನಹಳ್ಳಿ ಮತ್ತು ಅರೆಹಳ್ಳಗಳ ಸಕಲ ಸ್ವಾಮ್ಯವನ್ನು ಪಡೆದು ನಾಚಿಯಾರ್ ಹಾಗೂ ಪೆರಿಯಜೀಯರ ತಿರುನಕ್ಷತ್ರಗಳಂದು ದೇವಾಲಯದಲ್ಲಿ ನಡೆಯುವ ರಥೋತ್ಸವ, ಹೂತೋಟದ ಉಸ್ತುವಾರಿ, ರಾಮಾನುಜಕೂಟ ಮತ್ತು ಇತರ ಸೇವೆಗಳಿಗೆ ದಾನವಾಗಿ ನೀಡಿರುವ ವಿಷಯವನ್ನು ದಾಖಲಿಸಿದೆ.[40]

ಕ್ರಿ. ಶ. 1569ರ ತಗ್ಗರೆ ಗ್ರಾಮದ ಶಾಸನವು 'ನಾಗಮಂಗಲ ರಾಜ್ಯದ ಕೊಪ್ಪದ ಸೀಮೆಗೆ' ಸಲ್ಲುವ ಗ್ರಾಮಗಳನ್ನು ಉಲ್ಲೇಖಿಸುತ್ತದೆ. ಪೆನುಗೊಂಡೆಯಂತೆ ಶ್ರೀರಂಗಪಟ್ಟಣವೂ ವಿಜಯನಗರಕಾಲದಲ್ಲಿ ಒಂದು ಪ್ರಮುಖ ಉಪರಾಜಧಾನಿ ಯಾಗಿತ್ತು. ಅಂತೆಯೇ ಕ್ರಿ. ಶ.1500ರ ಮಳವಳ್ಳಿ ತಾಲ್ಲೂಕಿನ ವಡಗಲಪುರದ ಶಾಸನವು 'ಶ್ರೀರಂಗಪಟ್ಟಣದ ರಾಜ್ಯಾಧಿಪತಿ' ಎಂಬ ಉಲ್ಲೇಖವನ್ನು ಮಾಡುತ್ತದೆ.

ಕ್ರಿ. ಶ. 1565ರ ತಾಳಿಕೋಟೆಯ ಕದನದ ಬಳಿಕ ವಿಜಯನಗರ ಸಾಮ್ರಾಜ್ಯವು ಛಿದ್ರಗೊಂಡಿತು. ರಾಮರಾಯನ ತಮ್ಮನಾದ ತಿರುಮಲರಾಯನು ಪೆನುಗೊಂಡೆ

ಯಿಂದ ಆಳುತ್ತಿದ್ದಾಗ ತನ್ನ ಮಕ್ಕಳಲ್ಲೊಬ್ಬನಾದ ರಾಮರಾಜನನ್ನು ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳ ಮಾಂಡಲೀಕನಾಗಿ ನೇಮಿಸಿದನು. ಅವನು ಶ್ರೀರಂಗ ಪಟ್ಟಣದಿಂದ ಆಡಳಿತ ನಿರ್ವಹಿಸುತ್ತಿದ್ದು, ಶಿವನಸಮುದ್ರ ಮತ್ತು ಮೇಲುಕೋಟೆಯ ದೇವಾಲಯಗಳಿಗೆ ದತ್ತಿಗಳನ್ನು ನೀಡಿದನು. ಅವನ ಮರಣಾನಂತರ ಕ್ರಿ. ಶ. 1584 ರಲ್ಲಿ ಅವನ ಮಗನಾದ ಎರಡನೇ ತಿರುಮಲನು ಶ್ರೀರಂಗಪಟ್ಟಣ ಪ್ರಾಂತ್ಯದ ಆಡಳಿತವನ್ನು ವಹಿಸಿಕೊಂಡನು.[41]

ಕೊನೆಯ ಹಂತದ ರಾಜರುಗಳ ಕೆಲವು ಶಾಸನಗಳು ಮಂಡ್ಯ ಜಿಲ್ಲೆಯಲ್ಲಿ ಲಭ್ಯವಿದ್ದು, ಅವುಗಳಲ್ಲಿ ಹಿಂದಿನ ದಾನದತ್ತಿಗಳ ನವೀಕರಣದ ವಿಷಯವನ್ನು ಉಲ್ಲೇಖಿಸಲಾಗಿದೆ. ಶ್ರೀರಂಗಪಟ್ಟಣದ ರಂಗನಾಥ ದೇವಾಲಯದಲ್ಲಿಯ ಕ್ರಿ. ಶ. 1571ರ ಶಾಸನವು ಅಳಿಯರಾಮರಾಯನ ಮಗ ಒಂದನೆಯ ತಿರುಮಲ ರಾಯನ ಆಳ್ವಿಕೆಗೆ ಸೇರಿದ್ದು, ಈ ಪ್ರದೇಶವನ್ನು ಆಳುತ್ತಿದ್ದ ಒಡೆಯನಿಗೆ ರಂಗನಾಥ ದೇವರ ದೈನಂದಿನ ಪೂಜಾದಿ ಕೈಂಕರ್ಯಕ್ಕಾಗಿ ಒಣಂಗಟ್ಟಿ ಗ್ರಾಮವನ್ನು ದತ್ತಿಬಿಟ್ಟ ವಿಚಾರ ವನ್ನು ದಾಖಲಿಸಿದೆ. ಕ್ರಿ ಶ 1662ರ ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ಭಂಡಾರದಲ್ಲಿರುವ ತಾಮ್ರಪಟವು ಅರವೀಡುವಂಶದ ಮೂರನೇ ರಂಗರಾಯನ ಆಳ್ವಿಕೆಗೆ ಸೇರಿದ್ದು, ಆತನ ವಂಶಾವಳಿಗೆ ಸಂಬಂಧಿಸಿದ ದಾಖಲೆಯಾಗಿದೆ.[42]

15ನೇ ಶತಮಾನದ ಕೊನೆಯ ವೇಳೆಗೆ ಸೋಮರಾಜಒಡೆಯರ್ ಮಗನಾದ ದೇಪಣ್ಣ ಒಡೆಯನು ವಿಜಯನಗರ ಸರ್ಕಾರದ ಅಧಿಪತ್ಯವನ್ನು ಧಿಕ್ಕರಿಸಿ ಗೌರವ ನೀಡಲು ಓಗೊಡಲಿಲ್ಲ. ದೇವಣ್ಣ ಒಡೆಯನ ದಂಗೆಯ ಬಗ್ಗೆ ತಿಳಿದು ಅವನ ದಿಟ್ಟತನದ ಸೊಕ್ಕಡಗಿಸಲು ನರಸನಾಯಕನು ದಂಡೆತ್ತಿ ಹೊರಟನು. ಕಾವೇರಿ ಕಣಿವೆಯ ಮೂಲಕ ಸಾಗಿದ ಅವನು ಶ್ರೀರಂಗಪಟ್ಟಣವನ್ನು ತಲುಪಿದನು. ನದಿಯು ತುಂಬುಪ್ರವಾಹದಿಂದ ಹರಿಯುತ್ತಿದ್ದುದರಿಂದ ಕೋಟೆಯ ಮೇಲೆ ಕೈಗೊಳ್ಳಬೇಕಾಗಿದ್ದ ದಾಳಿಯು ಅಸಾಧ್ಯವೆನಿಸಿತು. ಕಷ್ಟ ಕಾಣದೆ ನದಿಗೆ ಅಡ್ಡಲಾಗಿ ತುರ್ತಾಗಿ ಸೇತುವೆ ಯೊಂದನ್ನು ನಿರ್ಮಿಸಿ ನದಿಯನ್ನು ದಾಟುವುದರಲ್ಲಿ ಅವನು ಸಫಲನಾದನು. ಈ ರೀತಿ ಶ್ರೀರಂಗಪಟ್ಟಣದ ಕೋಟೆಯನ್ನು ಹಾಳುಗೆಡವಿ ವಿಜಯಸ್ತಂಭವೊಂದನ್ನು ಅಲ್ಲಿ ನೆಟ್ಟನು. ಯುದ್ಧಕೈದಿಯಾಗಿ ಸಿಕ್ಕ ನಾಯಕನಿಗೆ ಮತ್ತೊಮ್ಮೆ ಅಲ್ಲಿನ ಕೋಟೆ ಹಾಗೂ ಅದಕ್ಕೆ ಹೊಂದಿಕೊಂಡಂತಿದ್ದ ಪ್ರದೇಶಗಳನ್ನು ಹಿಂತಿರುಗಿಸುವುದು ಬಹು ಅವಶ್ಯವೆಂದು ಅವನು ಮನಗಂಡನು.[43]

ವಿಜಯನಗರ ಕಾಲದಲ್ಲಿ ಈಗಿನ ಮಂಡ್ಯ ಜಿಲ್ಲೆಯಲ್ಲಿರುವ ಮದ್ದೂರು, ನರಸಿಂಹ ಚತುರ್ವೇದಿ ಮಂಗಲ ಎಂಬ ಹೆಸರುಳ್ಳ ಅಗ್ರಹಾರವಾಗಿದ್ದಿತು. ಕ್ರಿ ಶ. 1406ರ ಒಂದು ಶಾಸನದಿಂದ ಮದ್ದೂರು, ನರಸಿಂಹ ಚತುರ್ವೇದಿ

ಮಂಗಳವೆಂದು ಕರೆಯಲ್ಪಡುತ್ತಿದ್ದಿತೆಂದು ತಿಳಿಯುತ್ತದೆ. ದೇವಸ್ಥಾನಗಳಿಗೆ ದಾನಗಳನ್ನು ಕೊಡುವುದು ಅಗ್ರಹಾರ ಸಭೆಯ ಒಂದು ಮುಖ್ಯ ಕರ್ತವ್ಯವಾಗಿತ್ತು. ವೈದ್ಯನಾಥ ದೇವರ ಪೂಜೆಗೆ ಆ ಸ್ಥಳದ ಎಲ್ಲಾ ನಿವಾಸಿಗಳು ಹಲವು ತೆರಿಗೆಗಳನ್ನು ಬಿಟ್ಟುಕೊಟ್ಟರು.[44] ಕ್ರಿ. ಶ. 1589ರಲ್ಲಿ ಮಹಾಮಂಡಲೇಶ್ವರ ತಿರುಮಲರಾಯನ ಮಕ್ಕಳು ರಾಮರಾಜಯ್ಯ ಮತ್ತು ತಿರುಮಲರಾಜಯ್ಯ ಮದ್ದೂರಿಗೆ ಸೇರಿದ ಕಬ್ಬರೆ ಗ್ರಾಮವನ್ನು ಇಬ್ಬರು ಬ್ರಾಹ್ಮಣರಿಗೆ ಅಗ್ರಹಾರವಾಗಿ ಕೊಟ್ಟರು.[45]

ವಿಜಯನಗರ ಅರಸರ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಜಿಲ್ಲಾ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಮುಖ್ಯ ನಾಡುಗಳೆಂದರೆ ಕುರುವಂಕನಾಡು, ಕಳಲೆನಾಡು, ತಲಕಾಡು ನಾಡು, ಮದರನಾಡು ಎಂಬುವು ಹೊಯ್ಸಳರ ಆಡಳಿತದಲ್ಲಿ ಒಂದು ಪ್ರಮುಖ ಕೇಂದ್ರವಾಗಿದ್ದ ಮೇಲುಕೋಟೆ ಕುರುವಂಕನಾಡು ವಿಜಯನಗರ ಕಾಲದಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದ ಬಗ್ಗೆ ಕ್ರಿ. ಶ. 1458ರ ಮೇಲುಕೋಟೆ ಮತ್ತು 1467ರ ಸೀತಾಪುರ ಗ್ರಾಮಗಳಲ್ಲಿನ ಶಾಸನಗಳು ಆಧಾರ ಒದಗಿಸುತ್ತವೆ. ಗಂಗ, ಚೋಳ, ಹೊಯ್ಸಳರ ಕಾಲದಲ್ಲೂ ಪ್ರಸಿದ್ಧವಾಗಿದ್ದ ಕಳಲೆನಾಡು ವಿಜಯನಗರ ಕಾಲದಲ್ಲಿ ಕಳಲೆನಾಡು ಎಂದು ರೂಪಾಂತರಗೊಂಡು ಅಸ್ತಿತ್ವದಲ್ಲಿದ್ದ ಸಂಗತಿ ಕ್ರಿ. ಶ. 1406ರ ವೈದ್ಯನಾಥಪುರ, 1459ರ ಮಂಡ್ಯ ತಾಲ್ಲೂಕು ಡಣ್ಣಾಯಕನಪುರ ಹಾಗೂ 1623ರ ಮದ್ದೂರಿನ ಶಾಸನಗಳಲ್ಲಿ ತಿಳಿಯುತ್ತದೆ.[46]

ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ ನಾಡಿಗೆ ಪರ್ಯಾಯವಾಗಿ ಸೀಮೆ ಎಂಬ ಪ್ರತ್ಯಯವನ್ನು ಹೊಂದಿರುವ ಅನೇಕ ಆಡಳಿತ ಘಟಕಗಳು ತಲೆಯೆತ್ತಿದ್ದವು. ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಕಾಣಿಸಿಕೊಂಡ ಅಂಥ ಸೀಮೆಗಳಲ್ಲಿ ಸಿಂಧಘಟ್ಟಸೀಮೆ, ಬೆಳ್ಳೂರು ಸೀಮೆ, ಶ್ರೀರಂಗಪಟ್ಟಣಸೀಮೆ, ಕನ್ನಂಬಾಡಿ ಸೀಮೆ, ತಲಕಾಡು ಸೀಮೆ, ಕೊಪ್ಪದ ಸೀಮೆ, ಮದ್ದೂರು ಸೀಮೆ ಎಂಬುವು ಮುಖ್ಯವಾದುವಾಗಿವೆ.

ಸೀಮೆಯ ಕೆಳಹಂತದ ಆಡಳಿತ ಘಟಕವೆಂದರೆ 'ಸ್ಥಳ'. ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಅನೇಕ ಗ್ರಾಮಗಳು ಅಂತರ್ಗತವಾಗಿರುತ್ತಿದ್ದವು. ಮಂಡ್ಯ ಜಿಲ್ಲೆಯಲ್ಲಿ ವಿಜಯನಗರ ಕಾಲದಲ್ಲಿ ಅನೇಕ ಸ್ಥಳಗಳು ಶಾಸನೋಕ್ತವಾಗಿವೆ. ಅವೆಂದರೆ ಅರಸನಕೆರೆ ಸ್ಥಳ, ಅರನಿಯ ಸ್ಥಳ, ದೇವಲಾಪುರ ಸ್ಥಳ, ಧನಗೂರು ಸ್ಥಳ, ನಾಗಮಂಗಲ ಸ್ಥಳ, ಮದ್ದೂರು ಸ್ಥಳ, ಕನ್ನಂಬಾಡಿ ಸ್ಥಳ, ಕುಂದೂರು ಸ್ಥಳ, ಸಿಂಧಘಟ್ಟ ಸ್ಥಳ, ಹುಲಿವಾನ ಸ್ಥಳ ಮುಂತಾದವು.[47]

ವಿಜಯನಗರದಲ್ಲಿ ಪಟ್ಟಣವನ್ನು ಸ್ಥಾಪಿಸಲು ಮುಖಂಡತ್ವ ವಹಿಸಿಕೊಂಡವರಿಗೆ ಪ್ರೋತ್ಸಾಹ ಕೊಡಲಾಗುತ್ತಿತ್ತು. ಮಂಡ್ಯ ಜಿಲ್ಲೆಯ ತಿಗಡಹಳ್ಳಿಯ ಒಂದು ಶಾಸನವು

ತಲಕಾಡಿನ ಸ್ಥಾನಪತಿ ನಾಗಪಂಡಿತನ ಮಗ ಮಲ್ಲಪ್ಪ ಮಾರಭಕ್ತ ಮತ್ತು ಇತರ ಹಲವರಿಗೆ ಪ್ರತಿಯೊಬ್ಬರ ಪಾಲನ್ನು ನಿರ್ಧರಿಸಿ ಒಂದು ಗ್ರಾಮವನ್ನು 'ಪುರ' ವಾಗಿ ದಾನ ಮಾಡಿದನು. ದಾನ ಪಡೆದವರು ಕ್ರಿ. ಶ. 1339ರ ವರೆಗೆ ಅಲ್ಪಹಣವನ್ನು ಕೊಡಬೇಕಾಗಿದ್ದಿತು. ಇದನ್ನು ಕ್ರಿ. ಶ. 1339 ರಿಂದ ಕ್ರಿ. ಶ. 1342ರವರೆಗೆ ಸ್ವಲ್ಪ ಹೆಚ್ಚಿನ ಹಣವನ್ನು ಅನಂತರ ನಿಗದಿಯಾದ ಮೊತ್ತವನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು.[48]

ವಿಜಯನಗರ ಕಾಲದ ಗ್ರಾಮಾಡಳಿತದಲ್ಲಿ ಗೌಡನ ಪಾತ್ರ ಮುಖ್ಯವಾಗಿದ್ದು, ಗೌಡನ ಮುಖ್ಯ ಜೀವನಾಧಾರ 'ಗೌಡ–ಗೊಡಗೆ' ಅಥವಾ ಕಂದಾಯ ರಹಿತವಾದ 'ಇನಾಂ' ಭೂಮಿಯಾಗಿತ್ತು. ಮಳವಳ್ಳಿ ತಾಲ್ಲೂಕಿನ ಬೊಮ್ಮನಹಳ್ಳಿ ಒಂದು ಶಾಸನವು ಕ್ರಿ. ಶ. 1562ರಲ್ಲಿ ವೀರಣ್ಣ 'ಗೌಡ–ಗೊಡಗೆಯಾಗಿ' ಎಲ್ಲ ಹಕ್ಕುಗಳೊಡನೆ ಧನಗೂರು ಸ್ಥಳದ ಬೊಮ್ಮನಹಳ್ಳಿಯನ್ನು ಚಿಕ್ಕಸವಿಯಪ್ಪನಿಗೆ ಕೊಡಲಾಯಿತೆಂದು ದಾಖಲೆ ಮಾಡಿದ.[49] ಊರು ಎಂಬ ಗ್ರಾಮಸಭೆಯು ಅನೇಕ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ಹಾಗೆಯೇ ಅಗ್ರಹಾರದ ಮಹಾಜನಸಭೆಯು ಮತೀಯ ಆಡಳಿತ, ಸಾರ್ವಜನಿಕ ಮತ್ತು ನ್ಯಾಯ ವಿತರಣೆಗೆ ಸಂಬಂಧಪಟ್ಟ ಅನೇಕ ಕರ್ತವ್ಯಗಳನ್ನು ಮಾಡುತ್ತಿದ್ದಿತು. ಮಹಾಜನಸಭೆಗಳ ಒಂದು ಮುಖ್ಯ ಕರ್ತವ್ಯ ಛತ್ರಗಳು ಮುಂತಾದ ದಾನಸಂಸ್ಥೆಗಳನ್ನು ನಡೆಸುತ್ತಿದ್ದವು. ಅವುಗಳ ದೇವಸ್ಥಾನಗಳಿಗೆ ದತ್ತಿಗಳನ್ನು ಕೊಡುತ್ತಿದ್ದವು. ಕ್ರಿ. ಶ. 1549ರಲ್ಲಿ ಮಂಡ್ಯ ಜಿಲ್ಲೆಯ ಭಟ್ಟರತ್ನಾಕರ (ನಾಗಮಂಗಲ) ಮಹಾಜನರು ವೀರಭದ್ರ ದೇವರಿಗೆ ಪ್ರತಿ ವರ್ಷವೂ ಆ ದೇವಸ್ಥಾನಕ್ಕೆ ಸಲ್ಲುತ್ತಿದ್ದ ಮೊದಲ ಐದು ಪಣವನ್ನು ದಾನ ಮಾಡಿದರು.[50]

ಮಾಸವೆಗ್ಡೆ ಅಥವಾ ತಿಂಗಳವಧಿಯ ಮುಖಂಡರು ಕ್ರಿ. ಶ. 14ನೆಯ ಶತಮಾನದ ಪ್ರಾರಂಭದಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಹಲವು ಭಾಗಗಳಲ್ಲಿ ಗ್ರಾಮಗಳಲ್ಲಿದ್ದ ಗಾವುಂಡ ಅಥವಾ ಗೌಡಿಕೆಯನ್ನು ಹೋಲುವ 'ಮಾಸವೆಗ್ಗಡೆ' ಪದ್ಧತಿಯು ಅಸ್ತಿತ್ವದಲ್ಲಿದ್ದಿತೆಂದು ತೋರುತ್ತದೆ. ಮಾಸವೆಗ್ಗಡೆಗಳು ತಮ್ಮ ಅಧಿಕಾರವನ್ನು ಅಗ್ರಹಾರಗಳಲ್ಲಿ ಪ್ರತಿ ತಿಂಗಳ ಸರದಿಯ ಮೇಲೆ ಚಲಾಯಿಸುತ್ತಿದ್ದರು.[51] ಅಗ್ರಹಾರ ಗ್ರಾಮಗಳ ಆಡಳಿತ ಮಹಾಜನರನ್ನೊಳಗೊಂಡ ಸಭೆಗೆ ಸೇರಿದ್ದಿತು. ಎರಡು ರೀತಿಯ ಸಭೆಗಳಿದ್ದವು. ಮೊದಲನೆಯದರಲ್ಲಿ ಮನೆಯ ಯಜಮಾನರು ಸಭೆಯ ಸದಸ್ಯರಾಗಿದ್ದರು. ಅವರು ವಿಧಿಬದ್ಧ ಸದಸ್ಯರಾಗಿದ್ದರು. ಈ ವಿವಿಧ ಸಭೆಯ ಸದಸ್ಯರು ಸಂಖ್ಯೆಯು ದಾನವನ್ನು ಪಡೆದವರ ಸಂಖ್ಯೆಯನ್ನು ಅವಲಂಬಿಸಿದ್ದಿತು. ಕ್ರಿ ಶ 1468ರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ರಾಮ – ಸೀತಾಪುರದಲ್ಲಿ 76 ಮಹಾಜನರಿದ್ದರು.[52] ವಿಜಯನಗರ ಕಾಲದ ಸಮಾಜದಲ್ಲಿ ಸತಿಪದ್ಧತಿ ಇದ್ದಿತ್ತೆಂಬುದಕ್ಕೆ ಮಂಡ್ಯ ಜಿಲ್ಲೆಯ ಮಳವಳ್ಳಿಯ ಕ್ರಿ. ಶ. 1430ರಲ್ಲಿ ದೊರೆತಿರುವ

ಶಾಸನವು ತಿಳಿಸುತ್ತದೆ. ಈ ಶಾಸನವು ಮಳವಳ್ಳಿಯ ಪ್ರಭುಗೌಡ ಎಂಬ ವ್ಯಕ್ತಿಯು ಮರಣ ಹೊಂದಿದಾಗ ಆತನ ಪತ್ನಿ ಮಲಭೆ ಸತಿಯಾದಳು, ಆತನ ಮಗ ಬಸಪ್ಪ ಮಹಾಸತಿಕಲ್ಲನ್ನು ನೆಟ್ಟ ವಿಚಾರವನ್ನು ತಿಳಿಸುತ್ತದೆ.[53]

ವಿಜಯನಗರ ಅರಸರು ಧಾರ್ಮಿಕ ಸಹಿಷ್ಣುರಾಗಿದ್ದರೆಂಬುದಕ್ಕೆ ಮಂಡ್ಯ ಜಿಲ್ಲೆಯ ಸಿಂಧಘಟ್ಟದ ಒಳಕೇರಿಯಲ್ಲಿ ಬಾಬುಸೆಟ್ಟಿ ಎಂಬಾತ ಕಟ್ಟಿಸಿದ ಕಲ್ಲು ಮಸೀದಿಗೆ ರಂಗೈನಾಯಕ ಶಿವಪುರ ಗ್ರಾಮ, 14 ಗದ್ಯಾಣ ಕಾಣಿಕೆಯನ್ನು ಕೊಟ್ಟು ಮಸೀದಿಯ ಮೇಲ್ವಿಚಾರಕನಾದ ಹಬೀಬನಿಗೆಂದು ಮನೆಯನ್ನು ಕೊಟ್ಟಿರುವುದನ್ನು ಗಮನಿಸಿದಾಗ ಅಂದಿನ ಜನಗಳಲ್ಲಿ ಮನೋವೈಶಾಲ್ಯದ ಅರಿವಾಗುವುದಲ್ಲದೆ ಧಾರ್ಮಿಕ ಸೌಹಾರ್ದತೆಯ ಕುರುಹು ಆಗಿದೆ. ಇದಲ್ಲದೆ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಅಲಲುಮಲಕವೊಡೆಯನೆಂಬ ಮಹಮ್ಮದೀಯ ಅಧಿಕಾರಿಯೂ ಇದ್ದನೆಂದು ತಿಳಿಸುತ್ತದೆ.[54] ವಿಜಯನಗರ ಕಾಲದಲ್ಲಿ ಹೊಸಕಟ್ಟಡಗಳ ನಿರ್ಮಾಣದ ಜತೆ ಹಳೆಯವುಗಳ ಜೀರ್ಣೋದ್ಧಾರ ಕಾರ್ಯವೂ ನಡೆಯಿತು. ಗುಂಡಪ್ಪ ದಂಡನಾಯಕನಿಂದ ಬೇಲೂರು ತಿಮ್ಮದಂಡನಾಯಕನ ಪತ್ನಿ ರಂಗನಾಯಕಿಯಿಂದ 1458ರಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ದೇವಾಲಯಗಳ ಜೀರ್ಣೋದ್ಧಾರ ನಡೆಯಿತು.

ಅಡಿ ಟಿಪ್ಪಣಿಗಳು

1. *ಮಂಡ್ಯ ಜಿಲ್ಲಾ ಗ್ಯಾಸೆಟಿಯರ್* – ಬೆಂಗಳೂರು 2003, ಪು. 63
2. *E. C.* VII. MU. 93
3. *E. C.* III. MU. 22
4. *MAR* 1914. pp, 57-58. para 88
5. *E. C.* VII. Md. 39. 1459 AD. pp. 227-228
6. *E. C.* VI. Sr. 25. 1420 AD. pp. 359
7. *E. C.* VI. pp. 179. 1458 AD. pp. 254
8. *E. C.* VI. pp. 129. 1545 AD. pp. 221
9. ಡಾ. ಎಚ್. ಎಂ. ನಾಗರಾಜು – *ವಿಜಯನಗರದ ಇಮ್ಮಡಿ ದೇವರಾಯ* – ಪುಟ– 36
10. E. C. VII. M1. 90. 1463 AD. pp. 397
11. *E. C.* VI. pp. 129. 1545 AD. pp. 221
12. *E. C.* VI. K.R. Pe T71.1462 AD. pp. 52

13. ಕೊಟ್ರಯ್ಯ C. T. M , *ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,* ಪುಟ 62–63

14. *E. C.* VI. P.Pura – 218

15. *E. C.* VI PP. 19. 1467 A. D

16. Dr. K. S. Shivanna, *The Agrarian system of Karnataka,* pp- 127

17. *Mysore Gazetteer*, pp. 484

18. *Mysore Gazetteer*, pp. 1788

19. *E. C.* IV. Ng. 82 pp. 389

20. *E. C.* VI. Pp. 135 pp. 228.29

21. *MAR* 1914 – 15 para 92-93

22. *E. C.* VII. Ng. 160. 1513. A. D. pp. 155-156

23. *MAR* 1919. para90

24. *E. C.* VI. Pp. 134. 1528. AD

25. ಡಾ. ಎ. ಮುರಿಗೆಪ್ಪ (ಸಂ) – *ಕೃಷ್ಣದೇವರಾಯ (ಆಯ್ದ ಲೇಖನ ಸಂಪುಟ)* ಪು. 106

26. *QJMS*. XII. Pp. 624-625

27. *TTD Inscriptions III* pp. 168.171

28. Dr. N. Saraswathi, *The position of Women during Vijayanagara period (1336-1646),* p.55

29. *Mysore Gazetteer,* VOl. 11. Part III. pp. 1789

30. ಪ್ರೊ ॥ ಬಿ. ಷೇಕ್ ಅಲಿ(ಸಂ), *ಕರ್ನಾಟಕ ಚರಿತ್ರೆ,* ಸಂ, ಪು. 1321

31. *E. C.* IV Ng. 82

32. *E. C.* 3 M1. 21 1382 AD

33. Ibid

34. *E.C.* VII, M1, 78, 1530 AD

35. *E.C.* VII, M1, 108, 1530 AD, pp. 410

36. *E.C.* VII, pp.127, 1534 AD, pp.219-220

37. *E. C.* VI, K. R. Pet, 99, 81-82

38. *E. C.* IV, K. R. Pet. 11

39. *E. C.* VII. Ng. 107

40. *E. C.* VI, K.R. Pet. 63
41. *E. C.* VI, pp.128, 1564 AD
42. ಜಿ. ಆರ್. ರಂಗಸ್ವಾಮಯ್ಯ, *ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ–ಇಕ್ಷುಕಾವೇರಿ* (48ನೇ ಕ.ಸಾ.ಪ. ನೆನಪಿನ ಸಂಪುಟ), ಪು. 81–82
43. *E. C.* VI. Sr. 22.1662 AD, pp-348
44. Venkataramanayya. N, *Further sources of Vijayanagara History,* Madras 1946, pp-158
45. *E. C.* III, Md. 28
46. Ibid – 25
47. *E. C.* VII, Mu.75.1406 AD, p-299; E.C. VII. Md. 39. 1459 AD, pp. 227-228
48. ಡಾ. ಆರ್ ಗೋಪಾಲ್ (ಸಂ), *ಮಂಡ್ಯಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪು. 282
49. *MAR.* 1920.p p. 35
50. *E. C.* X. Sd. 15
51. ಡಾ. ಎ. ವಿ. ವೆಂಕಟರತ್ನಂ, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,* ಪು. 59
52. *E. C.* IX. Ng. 5
53. *E. C.* III. Sr. 139
54. *MAR* 1920. Malavalli Taluk
55. *E. C.* VII. Ng - 40

೧೩. ಗೋಕರ್ಣ ಶಾಸನಗಳಲ್ಲಿ ಉಲ್ಲೇಖಗೊಂಡಂತೆ ವಿಜಯನಗರ ಇತಿಹಾಸ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ಕರ್ನಾಟಕದ ಇತಿಹಾಸ ಮತ್ತು ಸಮಕಾಲೀನ ಇತಿಹಾಸದ ಮೇಲೆ ಬೆಳಕು ಚೆಲ್ಲುವಂಥ ಹಲವಷ್ಟು ದಾಖಲೆಗಳು ಕೆಳದಿ ವಸ್ತುಸಂಗ್ರಹಾಲಯದಲ್ಲಿವೆ. ಇವು ಕೆಳದಿ ಮತ್ತು ಸಮಕಾಲೀನ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಲು ಸಹಕಾರಿಯಾಗಿವೆ. ಗೋಕರ್ಣದ ದಾಖಲೆಗಳು, ಚಿನ್ನಭಂಡಾರದ ಅರಮನೆಯ ದಾಖಲೆಗಳು, ಕಡತಗಳು, ಕಾಸರವಳ್ಳಿ ಮನೆತನದ ದಾಖಲೆಗಳು ಹೀಗೆ ಸಾಕಷ್ಟು ದಾಖಲೆಗಳ ಪಡಿಯಚ್ಚುಗಳನ್ನು ವಸ್ತುಸಂಗ್ರಹಾಲಯ ಸಂಗ್ರಹಿಸಿದೆ. ಇವುಗಳಲ್ಲಿ ಕೆಲವು ಭೂದಾನ, ವರಹದಾನಗಳಿಗೆ ಸಂಬಂಧಿಸಿದಂತಹವಾಗಿವೆ

ಇಂತಹ ದಾಖಲೆಗಳಲ್ಲಿ ವಸ್ತುಸಂಗ್ರಹಾಲಯವು ಕಳೆದ ಎರಡು ವರ್ಷದಲ್ಲಿ ಗೋಕರ್ಣ ಇತಿಹಾಸಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಸುಮಾರು ಎರಡುನೂರ ಐದು ಶಾಸನಗಳನ್ನು ಸಂಗ್ರಹಿಸಿ, ಸಂಪಾದಿಸಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಧನಸಹಾಯದಿಂದ ಪ್ರಕಟಿಸಿದೆ. ಗೋಕರ್ಣ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಇವು ಸಹಕಾರಿಯಾಗಿವೆ. ಇವುಗಳ ಮೂಲಕ ಆ ಕಾಲದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಸಾಕಷ್ಟು ಮಾಹಿತಿ ಲಬ್ಧವಿವೆ. ಗೋಕರ್ಣ ಪ್ರದೇಶದ ಸ್ಥಳನಾಮ, ವ್ಯಕ್ತಿನಾಮಗಳ ಅಧ್ಯಯನಕ್ಕೂ ಇವು ಸಹಕಾರಿಯಾಗಿದೆ.

ಗೋಕರ್ಣ ಶಾಸನ ಪರಂಪರೆಯ ಬಗ್ಗೆ ಮೊದಲ ಸಂಪುಟದಲ್ಲಿ ಉಪೋದ್ಘಾತದಲ್ಲಿ ಚರ್ಚಿಸಲಾಗಿದೆ. ಈಗ ಇಲ್ಲಿ ಪ್ರಕಟಿಸುತ್ತಿರುವ ಗೋಕರ್ಣದ ಶಾಸನಗಳು ಇದುವರೆಗೆ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಈ ಶಾಸನಗಳು ಸುಮಾರು 12ನೇ ಶತಮಾನದಿಂದ 15ನೇ ಶತಮಾನದವರೆಗಿನದಾಗಿವೆ. ಇದರಲ್ಲಿ ವಿಜಯನಗರದ ಜೊತೆಗೆ ಕೆಳದಿ, ಬಿಳಗಿ, ಸಾಳುವ ಅರಸು ಮನೆತನದ ಜೊತೆಗೆ ಹೈವ, ತುಳು, ಕೊಂಕಣ ಮಂಡಲ ಪ್ರಧಾನಿಗಳ ಶಾಸನವಿದೆ. ಇವು ನಿತ್ಯಕಟ್ಟಲೆ, ಹೆಚ್ಚುಕಟ್ಟಲೆ, ನಂದಾದೀಪ, ಛತ್ರಗಳು ಮೊದಲಾದ ಧಾರ್ಮಿಕ ಕೆಲಸಗಳಿಗೆ ದಾನ ಕೊಟ್ಟಿರುವ ಶಾಸನವಾಗಿವೆ. ಗೋಕರ್ಣದ ನಂದಿ ಮಂಟಪದಲ್ಲಿ ಕೊಟ್ಟ ಶಾಸನ ಮೊದಲಾದವು ಗಮನ ಸೆಳೆಯುವಂತಹ ಶಾಸನಗಳು ಇದರಲ್ಲಿವೆ. ಇವು

ಚರಿತ್ರೆಯ ಮೇಲೆ ಹೊಸ ಬೆಳಕು ಬೀರುವದರ ಜೊತೆಗೆ ಇನ್ನೂ ಸರಿಯಾಗಿ ಬೆಳಕಿಗೆ ಬಾರದ ಗೋಕರ್ಣದ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಾಜಕೀಯ ಸ್ಥಿತಿಗತಿಗಳನ್ನು ಅರಿಯಲೂ ಈ ದಾಖಲೆಗಳು ಉಪಯುಕ್ತವಾಗಿದೆ. ಶಾಸನಗಳ ಕೊನೆಯಲ್ಲಿ ಬರುವ 'ಆವನಾನೊಬ್ಬನೂ ಯಿಾ ಧರ್ಮವ ಪಾಲಿಸಿದವನೂ ಆರ್ದೋದಯ ಕಪಿಲ ಶಷ್ಠಿ ಸೊಮಸೂರ್ಯೋಪರಾಗ ಪುಂಣ್ಯ ತಿಥಿಗಳಲ್ಲಿ ಶ್ರಿ ಗೊಕರ್ಣ ವಾರಣಾಸಿ ರಾಮೆಶ್ವರ ಶ್ರಿ ಪರ್ವತ ಮೊದಲಾದ ಪುಣ್ಯಕ್ಷಿತ್ರಗಳಲ್ಲಿ ಸತ್ತುಲ ಪ್ರಸೂತೆಯ ಕನ್ಯಾದಾನ ವನೂ ಸಾವಿರ ಕಪಿಲೆಯನೂ ಧಾರೆಯನೆರದ ಪುಂಣ್ಯವನ್ನೈದುವರು। ಸ್ವದತ್ತಾಂ ಪರದತ್ತಾಂವಾಯೊಹರೇತ ವಸುಂಧರಾಂ ಷಷ್ಟಿರ್ವರ್ಶ ಸಹಸ್ರಾಣಿ ವಿಷ್ಟಾಯಾಂ ಜಾಯುತೆ ಕ್ರಿಮಿ। ಮಹಾಬಲದೆವರ ಶ್ರಿ ಕಾರ್ಯ' ಎಂಬ ಮಾತುಗಳು ಪ್ರತಿ ಶಾಸನದಲ್ಲಿಯೂ ಕಂಡುಬರುತ್ತದೆ. ಇಂತಹ ದಾಖಲೆಗಳ ಪ್ರಕಟಣೆ ಇಂದು ಅಗತ್ಯವಾಗಿದೆ. ಅಲ್ಲಲ್ಲಿ ಹುದುಗಿರುವ, ಮನೆಗಳ ಅಟ್ಟದಲ್ಲಿರುವ ಇಂತಹ ದಾಖಲೆಗಳು ಪ್ರಕಟವಾಗುವುದರಿಂದ ಇತಿಹಾಸಕ್ಕೆ ಹೊಸ ಆಕರ ಲಭ್ಯವಾದಂ ತಾಗುತ್ತದೆ. ಈಗ ಪ್ರಕಟವಾಗಿರುವ ಶಾಸನಗಳಲ್ಲಿ ಹೆಚ್ಚಿನವು ಪ್ರತಾಪ ದೇವರಾಯನ ಕಾಲ, ವೀರ ಹರಿಹರನ ಕಾಲ ಮತ್ತು ಬುಕ್ಕರಾಯನ ಕಾಲದ್ದಾಗಿದೆ. ಶಾಸನಗಳಲ್ಲಿ ಲಭ್ಯವಾಗಿರುವ ವಿವರ ಈ ಕೆಳಗಿನಂತಿದೆ.

ಪ್ರತಾಪ ದೇವರಾಯನ ಕಾಲಕ್ಕೆ ಅನ್ವಯವಾಗುವ ಶಾಸನಗಳು

ಪ್ರತಾಪ ದೇವರಾಯನ ಕಾಲದಲ್ಲಿ ಹೈವೆಯ ಅಧಿಕಾರಿಯಾದ ಮಲ್ಪ ಒಡೆಯರು ಕ್ರೋಧನ ಸಂವತ್ಸರದ ಪುಷ್ಯ ಶುದ್ಧ ಐದು ಗುರುವಾರದಲ್ಲಿ ಕೈಗೊಂಡ ವ್ಯವಹಾರ, ಮೊಸಗೆಯ ಚಿಕ್ಕ ತಮ್ಮ ನಾಯಕನು ಯಾಳಿಯ ಕೂಡಲಿಯ ಸಂಗಡ ಮಾಡಿದ ಧರ್ಮ, ಇಮ್ಮಡಿ ದೇವರಾಯನ ಕಾಲದಲ್ಲಿ ಹೈವೆಯ ಬಾಯಣ್ಣ ಒಡೆಯರು ಆಳುತ್ತಿದ್ದಾಗ ವಿಭವ ಸಂವತ್ಸರದ ಫಾಲ್ಗುಣ ಶುದ್ಧ 12 ಗುರುವಾರದಲ್ಲಿ ಶ್ರಿಂಗೇರಿಯ ಶ್ರೀ ಪುರುಶೋತ್ತಮ ಭಾರತಿ ಶಿಷ್ಯ ನರಸಿಂಹ ದೇವ ಛತ್ರ ಧರ್ಮ ದಲ್ಲಿದ್ದಾಗ ಕೈಗೊಂಡ ವ್ಯವಹಾರದ ಕ್ರಮ ಮೊದಲಾದವು ಶಾಸನದಲ್ಲಿ ದಾಖಲಾಗಿದೆ. ಶಾ.ಶ 1314 ಪ್ರಜೋತ್ಪತ್ತಿ ಸಂವತ್ಸರದ ಆಶ್ವೀಜ ಶುದ್ಧ 1 ಆದಿವಾರ ಭಾನುವಾರ 1.10.1391 ಆಗುತ್ತದೆ. ಹೆಗ್ಗಡೆ ಮೈಲಣ್ಣಗಳು ಮಹಬಲದೇವರ ಸನ್ನಿಧಿಯಲ್ಲಿ ಶಾಶ್ವತ ಛತ್ರ ಧರ್ಮಕ್ಕಾಗಿ ನೀಡಿದ ಭೂಮಿಯ ವಿವರಗಳಿವೆ. ಶಾ.ಶ. 1314ನೆಯ ಪ್ರಜೋತ್ಪತ್ತಿ ಸಂ.ದ ಆಶ್ವಿಜ ಶು 1 ಆದಿವಾರದಲ್ಲಿ ಹೆಗ್ಗಡೆ ಮೈಲಣ್ಣಗಳು ಶ್ರೀ ಮಹಾಬಲ ದೇವರ ಸನ್ನಿಧಿಯಲ್ಲಿ ಛತ್ರ ಧರ್ಮಕ್ಕಾಗಿ ಅಂಕಲೆಯ ನಾಡಿನ ತುರುವನ ಬಳಿಯ ಕರಿಶೆಟ್ಟಿ ನೀಡಿದ ಭೂದಾನದ ಕ್ರಮದ ಭೂಮಿಯ ವಿವರ ಇದೆ. ಪ್ರತಾಪ ದೇವರಾಯರ ಪ್ರತಿನಿಧಿ ಸೋಮಣ್ಣ ಒಡೆಯರು ರಾಜಧಾನಿ

ಹೊನ್ನಾವರದಲ್ಲಿ (ಸರ್ವ)ಜಿತು ಸಂವತ್ಸರದ ಭಾದ್ರಪದ ಬ 6 ಬುಧವಾರದಲ್ಲಿ ಶ್ರೀ ಮಹಾಬಲ ದೇವರ ಅಮೃತ ಪಡಿಗೆ ವರ್ಷಾವಧಿ ನಡೆಯುವ ಕಟ್ಟಳೆಯ ಬಗ್ಗೆ ನೀಡಿದ ಭೂದಾನದ ವಿವರಗಳಿವೆ. ಶಾ. ಶ. 1314 ಪ್ರಜಾಪತಿ ಸಂ.ದ ಪುಷ್ಯ ಶು 5 ಆದಿತ್ಯವಾರ ದಿನಾಂಕ 31.12.1391 ಗೋಕರ್ಣ ಮಹಬಲದೇವರ ವರ್ಷಂಪ್ರತಿ ಸಲ್ಲುವ ಸೇವೆಗೆ ಮತ್ತು ವಿಜಯನಗರ ರಾಯನ ಛತ್ರಕ್ಕೆ ಗೋಕರ್ಣದಲ್ಲಿರುವ ಸಾರಿಶೆಟ್ಟಿಯ ಮಗ ಬೊಂಮ್ಮಣ್ಣ ಶೆಟ್ಟಿ ಸಲ್ಲಿಸಿದ ಭೂದಾನದ ವಿವರ ಇದೆ. ಶಾ.ಶ. 1315ನೆಯ ಆಂಗಿರಸ ಸಂ.ದ ವೈಶಾಖ ಶು 15 ಸೋಮವಾರ ದಿನಾಂಕ 6.5.1392ರಲ್ಲಿ ಚಂದಾವರದ ಶೆಟ್ಟಿಗಾರ ಸಾಯಿಶೆಟ್ಟಿಯರ ಮಗ ತೊಳಹರ ಬಳಿಯ ಉಮ್ಮಣ್ಣ ಸೆಟ್ಟಿಯರು ಮಹಬಲದೇವರಿಗೆ ಶಾಶ್ವತ ಛತ್ರ ಧರ್ಮಕ್ಕಾಗಿ ಎಂಟು ಭಾಗದ ಊರವರುಗಳಿಗೆ ಸೇರಿದ ಗುಡಕಲ್ಲ ಗಜನಿಯ ಭೂಮಿಗಳನ್ನು ಬೊಮ್ಮಣ್ಣ ಶೆಟ್ಟಿಗಳು ಅರ್ಥ ಪರಿಛಿತವಾಗಿ ಕೊಂಡು ಮೂಲ ಪರಿಛಿತವಾಗಿ ನೀಡಿದ ಸರ್ವಮಾನ್ಯದ ವಿವರವಿದೆ. ಶಾ. ಶ. 1315ನೆಯ ಆಂಗಿರಸ ಸಂವತ್ಸರದ ಚೈತ್ರ ಶು. 10 ಗುರುವಾರದಲ್ಲಿ ದಿನಾಂಕ 3/4–4–1392 ಚಂದಾವರದ ನಾರಿ ಶೆಟ್ಟಿಯರ ಮಗ ಬೊಮ್ಮಣ್ಣ ಸೆಟ್ಟಿಯ ಗೋಕರ್ಣದ ಮಹಾಬಲದೇವರ ಸನ್ನಿಧಿಯಲ್ಲಿ ಆಚಂದ್ರಾರ್ಕವಾಗಿ ಛತ್ರ ಧರ್ಮ ನಡೆಸಲು ಗುರು ಬನಕನಾಯಕನ ಮಗಳು ಬಯಿರಕ್ಕ, ಗಂಗಣ್ಣ, ಮಲ್ಲಪ್ಪ ಇವರಲ್ಲಿ ಮಾಡಿದ ವ್ಯವಹಾರದ ಕ್ರಮದಲ್ಲಿ ಭೂದಾನದ ವಿವರವಿದೆ. ಆಂಗೀರಸ ಸಂ.ದ ಚೈತ್ರ ಶು 3 ಬುಧವಾರದಲ್ಲಿ ಶ್ರೀ ಮಹಬಲದೇವರಿಗೆ ಮಾರ್ಕಂಡೆಯ ತೀರ್ಥದ ಕೆಳಗಿನ ಭೂಮಿ ದಾನವಿಟ್ಟಿದ್ದು. ಪ್ರಜಾಪತಿ ಸಂ.ದ ಫಾಲ್ಗುಣ ಶು 12 ಯೂ ಬುಧವಾರದಲ್ಲಿ ಹೆಗ್ಗತ್ತಿಯ ಶ್ರಾಹೆಯಾಗಿ ಮಾಡಿದ ವ್ಯವಹಾರ, ಬೊಮ್ಮಣ್ಣ ಸೆಟ್ಟಿಯರು ಮಾಡಿದ ಛತ್ರ ಧರ್ಮದಲ್ಲಿ ಭೂಮಿಯ ವಿವರಗಳು, ಸಾಯಣ, ಗದ್ಯಾಣ ವಿವರಗಳಿವೆ. ಶಾ.ಶ ವರ್ಷ ಇಲ್ಲ ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ 3 ಆದಿವಾರ ಮಹಾ ಪ್ರಧಾನ ಮಲ್ಲಪ ಒಡೆಯರು ಕಾಲ ಮಾಜನಗೇರಿಯ ಬೀರ ಹೆಗ್ಗಡೆಯ ಅಳಿಯಂದಿರು ವಜ್ರನಾಯಕ ಮಾವಲಜೆಟ್ಟಿ ಇವನ ಮೊಮ್ಮಗ ಬೀರನಾಯ್ಕ ಇವರು ಮಹಾಪ್ರಧಾನ ಮುದ್ರೆಯ ದಣಾಯ್ಕರ ದೇಹಾರದ ಕೇಶಸ್ವ ಭಾಟ್ಟರ ಕೈಯಲ್ಲಿ ನೀಡಿದ ಭೂದಾನ ಪಟ್ಟಿ ಶಾ. ಶ. 1382 ಪ್ರಮಾದಿ ಸಂ.ದ ಭಾದ್ರಪದ ಶು 5 ಸ್ವಾತಿ ನಕ್ಷತ್ರ ಆದಿವಾರ ದಿನಾಂಕ 2.9.1459 ಈತನು ವೀರ ಮೂರನೇ ದೇವರಾಯ (ವೀರ ಮಲ್ಲಿಕಾರ್ಜುನರಾಯ ಇರಬಹುದೇ?) ಗೋಕರ್ಣ ಮಹಬಲ ದೇವರ ಸನ್ನಿಧಿಯಲ್ಲಿ ಗುತ್ತಿಮನೆ ಹಾಕೆ ಬಳಿ ಲಕುಮಣ್ಣ ನಾಯಕರ ಅಳಿಯ ಹನಿಹಳ್ಳಿಯ ಸಾತಣ್ಣ ನಾಯಕನು ಸತ್ರ ಧರ್ಮಕ್ಕೆ ಬರಸಿದ ಭೂದಾನ ಶಾಸನ. ಶಾ.ಶ 1335 ನಂದನ ಸಂದ ಚೈತ್ರ ಶು. 1 ಆದಿವಾರ ದಿನಾಂಕ 13.3.1412 ಈಚಪ್ಪ ಒಡೆಯನು ಹೊನ್ನಾವರದ ಪ್ರಾಂತ್ಯಾಧಿಕಾರಿಗಳಾಗಿದ್ದಾಗ ಬುಕ್ಕರಸ ಒಡೆಯರ ಮಕ್ಕಳು ವಿರ್ಪ ಒಡೆಯರು

(ವಿರ್ಪ>ವೀರಪ್ಪ) ಗೋಕರ್ಣದಲ್ಲಿ ಮಾಡಿದ ಸತ್ರ ಧರ್ಮಕ್ಕೆ ಹೊನ್ನಾವರದ ಕರಣಿಕ ಆರಾಧ್ಯ ದೇವ ಮಕ್ಕಳು ಬಸವಣ್ಣಗಳು ಕೊಟ್ಟ ಭೂಮಿಯ ಮೂಲ ಪತ್ರ ಶಾ. ಶ 1134ನೇ ಖರ ಸಂವತ್ಸರದ ಚೈತ್ರ ಬ 10 ಗುರುವಾರ ದಿನಾಂಕ 18.4.1411 ಶನಿವಾರವಾಗುತ್ತದೆ. ಗುರುವಾರ 16ನೇ ದಿನಾಂಕವಾಗುತ್ತದೆ. ಇದು ಪ್ರಧಾನಿ ಈಚಪ್ಪ ಒಡೆಯರ ಕಾಲ. ಬಂಕರಸ ಒಡೆಯರ ಮಕ್ಕಳು ವೀರಪ್ಪ ಒಡೆಯರಿಗೆ ಸೇನಭೋವರ ಗೋಪರಸನ ಮಕ್ಕಳು ಆರಾಧ್ಯ ದೇವರು ಕೊಟ್ಟ ಮೂಲ ಪತ್ರದ ಕ್ರಮ. ಶಾ.ಶ 1332 ವಿರೋಧಿ ಸಂದ ಮಾಘ ಬ 5 ದಿನಾಂಕ 25.1.1410 ಆದಿವಾರ. ದಿನಾಂಕ 25 ಶನಿವಾರವಾಗಿದ್ದು 26ನೇ ತಾರೀಖು ಭಾನುವಾರವಾಗುತ್ತದೆ. ವಿಜಯನಗರ ದೇವರಾಯನ ಪ್ರಧಾನಿ ಈಚಪ್ಪ ಒಡೆಯ ಹೈವೆಯ ಆಡಳಿತಾಧಿಕಾರಿ ಆಗಿದ್ದನು. ಮೂಡಣಗೇರಿಯ ಮಾಯಣ್ಣಗಳ ಮಕ್ಕಳು ಮಹಾಬಳ ದೇವಗಳು ಮಹಬಲ ದೇವರ ಸನ್ನಿಧಿಯಲ್ಲಿ, ಮಹಾಬಲದೇವರು, ವಿಶ್ವಾಮಿತ್ರೇಶ್ವರ ದೇವರು, ಶ್ರೀ ಕೇಶವನಾಥ ದೇವರು, ಬ್ರಹ್ಮೇಶ್ವರ ದೇವರುಗಳಿಗೆ ಹಯಗ್ರೀವ ಶ್ರೀಪಾದಂಗಳೂ ಸಲ್ಲಿಸಿದ ಭೂದಾನ ಸೇವಾದಿಗಳ ವಿವರವಲ್ಲದೆ ಗೋಪಾಲ ಮಠದ ಉಲ್ಲೇಖವೂ ಇದರಲ್ಲಿ ಕಂಡು ಬರುತ್ತದೆ ದುಂದುಭಿ ಸಂವತ್ಸರದ ಭಾದ್ರಪದ ಶು 5 ಗುರುವಾರ ಅಶೋಕ ತೀರ್ಥದ ಶ್ರೀ ಮಲ್ಲಿಕಾರ್ಜುನ ದೇವರಿಗೆ ಅಮೃತ ಪಡಿಗೆ ನೀಡಿದ ಸೇವಾ ವಿವರ. ಶಾ.ಶ 1359ನೇ ನಳ ಸಂ॥ದ ಶ್ರಾವಣ ಬ 5 ಗುರುವಾರ ದಿ 2.8.1436. ಪ್ರಧಾನಿ ಚಂದರಸ ಒಡೆಯರು ಆಡಳಿತ ನಡೆಸುತ್ತಿದ್ದ ಈ ಕಾಲದಲ್ಲಿ ಭೋಗವರ್ಧನವಾಳ ಪರುಶಾಧಿಷ್ಟಿತ ಶ್ರೀ ರಾಘವೇಂದ್ರ ಶ್ರೀಪಾದಂಗಳ ಶಿಷ್ಯರು ಶಂಕರ ಸರಸ್ವತೀ ಶ್ರೀಪಾದಂಗಳಿಗೆ ಕೊಂಕೇರಿಯ ಗೋವಿಂದ ಭಟ್ಟರ ಮಗ ನರಹರಿ ಕೊಟ್ಟ ಮೂಲ ಪತ್ರ, ಶಾ. ಶ 137?ನೇ ಶುಕ್ಲ ಸಂ॥ದ ಕಾರ್ತೀಕ ಶು? ಲೂ ಇಮ್ಮಡಿ ದೇವರಾಜ ಚಕ್ರವರ್ತಿಯ ಅಧೀನ ಬೊಯ್ಯಗಳು ಮಹಬಲದೇವರ ಮುದ್ರಾಹಸ್ತ ಪಾಯಕದ ರಾಮಣ್ಣಗಳು ಲಖ್ಖಪ್ಪಗಳ ಮಕ್ಕಳು ಬಾಯ್ಯಗಳಿಗೆ ಕೊಟ್ಟ ಮೂಲ ಪತ್ರ ಕ್ರಮ. ಶಾ. ಶ 1364ನೆ ದುರ್ಮತಿ ಸಂ.ದ ಮಾಘ ಶು 15 ಗುರುವಾರ ದಿ 25.1.1442ರ ಗಜ ಬೇಂಟೆಗಾರ ಪ್ರಧಾನಿ ಮಾಳಪ್ಪ ಒಡೆಯರು ಪ್ರಾಂತ್ಯಾಧಿಕಾರಿ ವರದಣಾಯಕ ಶ್ರೀ ಮಹಾಬಲ ದೇವರ ಸನ್ನಿಧಿಯಲ್ಲಿ ಕೋಟಿ ತೀರ್ಥದ ಈಶಾನ್ಯ ದಿಕ್ಕಿನಲ್ಲಿ ನಿರ್ಮಿಸಿದ 24 ಮಂದಿ ಧರ್ಮಛತ್ರ ವಿಬುಧೇಂದ್ರ ಭಾರತೀ ಶ್ರೀಪಾದಂಗಳಿಗೆ ಸಲ್ಲಿಸುವುದು. ಬಾಹ್ಮಣ್ಯ ಭೋಜನದ ಬಗ್ಗೆ ಕಟ್ಟಾಜ್ಞೆ, ಮಠದ ಜೀರ್ಣೋದ್ಧಾರವನ್ನೂ ಕೈಗೊಳ್ಳುವುದು. ಶಾ.ಶ. 134? ನೆ ದುರ್ಮತಿ ಸಂ॥ದ ಮಾಘ ಶು 3 ಸೋಮವಾರ ಪ್ರಧಾನ ಮಾಳ್ಪ ಒಡೆಯರೂ ಹೊನ್ನಾವರದ ರಾಜಧಾನಿಯಲ್ಲಿದ್ದು ಹಯಿವ ತುಳು ಕೊಂಕಣ ರಾಜ್ಯಂಗಳನು ಪ್ರತಿಪಾಲಿಸುತ್ತ ಯಿದ್ದ ಕಾಲದಲ್ಲಿ ಮೂರು ಪರಿಷತ್ತಿನ ಯೆತಿಶ್ವರರುಗಳ

ಸಮಕ್ಷಮದಲ್ಲಿ ಶ್ರೀಮಂನ್ಮಹಾಪ್ರಧಾನಗಳು ಕೊಟ್ಟ ಮಠದ ನಿವೇಶನದ ಕ್ರಯ ಮೂಲ ಪತ್ರ ಇದಾಗಿದೆ. ಕೀಲಕ ಸಂ॥ದ ಪಾಡ್ಯ ಪ್ರಧಾನ ಗೋವೆಯ ಮಾದರಸ ಒಡೆಯರ ಕುಮಾರ ಬಾಚಣ್ಣ ಒದೇಯ ಆರನಬಟ್ಟಿಯ ವೀರಪ್ಪಗಳ ಮಕ್ಕಳು ಚೌಡಪ್ಪ ಸೆನಬೊವರಿಗೆ ಕೊಟ್ಟ ಮೂಲ ಗೇಣೀಯ ಪತ್ರ. ಶಾ.ಶ. 1384ನೇ ವಿಷು ಸಂ॥ದ ಆಶ್ವೀಜ ಶು 3 ಸೋಮವಾರ ದಿ. 7.9.1416 ಹೊನ್ನಾವರದಲ್ಲಿ ಗೋವಿಂದ ದೇವ ಒಡೆಯರಿದ್ದಾಗ ಗೋಕರ್ಣದಲ್ಲಿ ಮಹಬಲ ದೇವರ, ವಿನಾಯಕ ದೇವರ, ನಂದಾದೀಪ್ತಿ, ಬ್ರಾಹ್ಮಣ ಭೋಜನ, ವೇದ ಪಾರಾಯಣ ಮುಂತಾದ ಧರ್ಮಕ್ಕೆ ಮೊದಲು ಮಾಡಿದ ಶಾಸನದ ಕಟ್ಟಳೆಗೆ ಕೊಂಡ ಸ್ಥಳದ ವಿವರ ಕಾಲ? ಪ್ರಧಾನಿ ಗೋವಿಂದೇ ಒಡೆಯರು ಹೊನ್ನಾವರ ಪ್ರಾಂತದಲ್ಲಿದ್ದಾಗ ವೇದೇಶ್ವರ ದೇವರ ಯತೀಶ್ವರರುಗಳ ಸಾಳ ಗ್ರಾಮ ದೇವರಸರ ದೀಪ್ತಿ, ಅಧ್ಯಯನ, ಗಂಗಾಷ್ಟಮಿ, ಪಿತ್ರುಕಾರ್ಯ ಮುಂತಾದ ಧರ್ಮಕಾರ್ಯಗಳ ವಿವರಗಳನ್ನೊಳಗೊಂಡ ಉಲ್ಲೇಖ ಇರುವ ಪತ್ರ, ಕಾಲ? ಹೊನ್ನಾವರ ರಾಜಧಾನಿಯಲ್ಲಿದ್ದ ಹಯಿಶ್ವರ ದೇವ ಒಡೆಯರು ಮನಗೇರಿಯ ದಾರಿಯ ಬಳಿಯ ಸಾತಣ್ಣ ನಾಯ್ಕರ ಮಗ ಹನಿಹಳ್ಳಿಯ ಸಾತಣ್ಣನಾಯ್ಕರು ಪೊಡವಟ್ಟು ಕೊಟ್ಟ ಧರ್ಮಸಾಧನ. ಶಾ. ಶ. 1360 ನೇ ಆನಂದ ಸಂ॥ದ ಶಿವರಾತ್ರಿ ಪುಣ್ಯ ಕಾಲ. ಕ್ರಿ. ಶ. 1438 ವಿಜಯನಗರ ಚಕ್ರವರ್ತಿ ವೀರ ಪ್ರತಾಪ ದೇವರಾಯ ಮಹಾಪ್ರಧಾನ? ಭೋಗವರ್ಧನ ಪರುಷಾಧಿಷ್ಠಿತರಾದ ಅಮರೇಶ್ವರ ಭಾರತಿ ಶ್ರೀಪದಂಗಳ ಶಿಷ್ಯರು ಮಹೇಂದ್ರ ಭಾರತೀ ಶ್ರೀಪಾದಂಗಳು ಶ್ರೀ ವರದೇಶ್ವರ ದೇವರಿಗೆ ದಿನಂಪ್ರತಿಯಲ್ಲು ಪಡಿಯ ಒಪ್ಪಾನೆ ಎಣ್ಣೆಯ ಅಕ್ಕಿಯ ನೈವೇದ್ಯ ಒಂದು ನಂದಾ ದೀಪ್ತಿಯನ್ನು ಮಾಡುವುದಕ್ಕೆ ಧಾರೆಯನೆರೆದು ಮಾಡಿದ ಧರ್ಮ ಶಾಸನ. ಶಾ.ಶ. 1364 ದುಂದುಭಿ ಸಂ॥ದ ಮಾರ್ಗಶಿರ ಶು 5 ಗುರುವಾರ ದಿ 8.11.142 ವಿಜಯನಗರ ಚಕ್ರವರ್ತಿ ವೀರ ಪ್ರತಾಪದೇವರಾಯ ಮಾಳ್ವ ಒಡೆಯ ದೇವರಾಯ ಮಹಾರಾಯರ ಮಕ್ಕಳು ವರದಣ ನಾಯ್ಕರಿಂಗೆ ಕೆಯಮನೆ ಮಹಬಳನ ಮಗಂದಿರು ಕಟ್ಟಿಗೆಯ ಶ್ರೀಧರನೂ ವರದೈನೂ ಕೊಟ್ಟ ತೆರು ಮೂಲ ಪತ್ರದ ಕ್ರಮ ಅಂತ್ಯ ಸಾಲು ಯಿಂತ್ತಿ ಚತುಸಿಮೆಯಿಂದ ಒಳಗಣ ಗದ್ದೆ ಎಂಬ ಉಲ್ಲೇಖ. ಶಾ.ಶ. ವರುಷ 1331 ಸರ್ವಧಾರಿ ಸಂ॥ದ ಆಷಾಢ ಶು 10 ಮಂಗಳವಾರ ದಿ 3.7.1408 ವಿಜಯನಗರ ಚಕ್ರವರ್ತಿ ವಿರ ಪ್ರತಾಪದೇವರಾಯ ಸಾವಣ್ಣ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದಾಗ ರಾಮೇಶ್ವರ ಸರ್ವ ಅಮರೇಂದ್ರ ಪುರಿ ಶ್ರೀಪಾದಂಗಳಿಗೆ ಸಾವಣ್ಣ ಒಡೆಯರು ಕೊಟ್ಟ ಭೂದಾನ ಧರ್ಮಶಾಸನ. ಖರ ಸಂವತ್ಸರದ ಜೇಷ್ಟ ಶು 10 ಸೋಮವಾರ ವಿಜಯನಗರ ಚಕ್ರವರ್ತಿ ವೀರ ಪ್ರತಾಪ ದೇವರಾಯ ಹೈವೆಯ ಅಧಿಕಾರಿ ಈಚಪ್ಪ ಒಡೆಯ ಮಹಬಳ ಭಟ್ಟರ ಮಗಂದಿರು ವಿಠಲ ಭಟ್ಟರು ವಾಸ್ತೆವ ಭಟ್ಟರು ತಮ್ಮೊಳಗೆ ಒಡಂಬಟ್ಟು ಬರಸಿದ

ಹಸಿಗೆಯ ಪತ್ರ, ಮಹಾಬಲ ದೇವರು ವಿಠಲ ದೇವರಲ್ಲಿ ಬರುವ ಪರಿಜೀವಿತ ಗೋದಾನ ಓಲಗ ದಕ್ಷಿಣೆ ಮೊದಲಾದ ನಿತ್ಯ ನೈಮಿತ್ತಿಕದಲ್ಲಿ ವರ್ಷಂಪ್ರತಿ ಬರುವ ಉಪಾರ್ಜನೆಯನ್ನು ಕೋಟಿ ತೀರ್ಥದ ದಡದಲ್ಲಿ ಸರಿಯಾಗಿ ಹಂಚಿಕೊಳ್ಳುವ ಧರ್ಮಸಾಧನ. ಸಾಕ್ಷಿ ಬಿಜ್ಜೂರ ಪರಮೇಶ್ವರ ಭಟ್ಟರು ಮುಂತಾದವರ ಉಭಯಾನುಮತದಿಂದ ಮಹೇಶ್ವರ ಭಟ್ಟರ ಬರಹ ಸ್ಥಿತಿ ಹೆರಿಯ ಮಹೇಶ್ವರ ಭಟ್ಟರ ಮನೆಯಲ್ಲಿ ಹೀಗೆ ಮೊದಲಾದ ಮಾಹಿತಿಯನ್ನು ಈ ಶಾಸನಗಳು ಒದಗಿಸುತ್ತವೆ.

ಹರಿಹರರಾಯನ ಕಾಲದ ಶಾಸನಗಳು

ವಿಜಯನಗರ ಹರಿಹರರಾಯನ ಕಾಲದಲ್ಲಿ ಹೈವೆಯ ಆಡಳಿತಾಧಿಕಾರಿ ಪ್ರಧಾನಿ ಮಲ್ಪ ಒಡೆಯರು ಕ್ರೋಧನ ಸಂವತ್ಸರದ ಪುಷ್ಯ ಶುದ್ಧ? ಗುರುವಾರದಲ್ಲಿ ಕರಣಿಕ ನರಸಿಂಹ ಬಿಹಾರಿಯ ವಿಷ್ಣು ನಾರಾಯಣ ಮುಂತಾದ ಐದು ಜನರು ಮಠದ ಧಾರ್ಮಿಕ ಸಂಪ್ರದಾಯದಲ್ಲಿ ಕೈಗೊಳ್ಳಬೇಕಾದ ಕ್ರಮಕ್ಕೆ ನೀಡಿದದಾನ ಕರಣಿಕ ನರಸಿಂಹ ಗೋಕರ್ಣ ಮಹಾಬಲದೇವರ ಬಗ್ಗೆ ನಿರ್ಮಿಸಿದ ಛತ್ರದ ಧರ್ಮಕ್ಕೆ ಧಾರ್ಮಿಕ ವ್ಯವಹಾರಗಳು ಕಟ್ಟು ಕಟ್ಟಳೆಯ ಕುರಿತು ತಾಮ್ರಶಾಸನ ಬರೆಸಿದ್ದು ಸದರಿಯವರು ಮೃತಪಟ್ಟಿದ್ದರಿಂದ ಮಲ್ಪ ಒಡೆಯರ ನಿರೂಪದ ಮೇರೆಗೆ ನಾಗಪ್ಪ ಅಧಿಕಾರಿಗಳು ಕೈಗೊಂಡ ಏರ್ಪಾಟು. ದುರ್ಮುಖಿ ಸಂವತ್ಸರದ ಮಾರ್ಗಶಿರ ಬ 5ರಲ್ಲು ಶ್ರೀ ಮಹಾಬಲ ದೇವರಿಗೆ ಮಾದಪ್ಪ ಅಧಿಕಾರಿಗಳು ನೀಡಿದ ಭಾಷಾ ಕ್ರಮ. ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶು 3 ಆದಿವಾರ ಮಲ್ಪ ಒಡೆಯರ ಆಳ್ವಿಕೆ ಮಹಾ ಪ್ರಧಾನ ಮುದ್ರೆ ದಣಾಯ್ಕರ ಕೇಶವ ಬಟ್ಟರ ಕೈಯಿಂದ ವಸತಿಕೊಂಡು ಶ್ರಿ ಮಹಬಲದೇವರ ಸನ್ನಿಧಿಯಲ್ಲಿ ಬ್ರಾಹ್ಮಣರ ಛತ್ರ ಭೋಜನ ಧರ್ಮಕ್ಕೆ ನೀಡಿದ ಭೂದಾನದ ಮೂಲ ಶಾಸನ ಶಾ. ಶ ವರ್ಷ 1308 ಕ್ರೋಧನ ಸಂವತ್ಸರದ ಕಾರ್ತೀಕ ಶು 5 ಸೋಮವಾರ ದಿ. 9.10.1385 ಹೈವ ಕೊಂಕಣಾಧಿಪತಿ ಮಲ್ಪ ಒಡೆಯ ಮಹಬಲ ದೇವರ ಸನ್ನಿಧಿಯಲ್ಲಿ ಬ್ರಾಹ್ಮಣ ಭೋಜನ ಛತ್ರ ಧರ್ಮಕ್ಕೆ ನೀಡಿದ ಭೂದಾನ 1319ನೇ ವಿಭವ ಸಂವತ್ಸರದ ಮಾರ್ಗಶಿರ ಬ 5 ಗುರುವಾರ, ದಿನಾಂಕ 19.11.1388 ಹರಿಹರ ರಾಯನ ಪ್ರಧಾನಿ ಮಲ್ಪ ಒಡೆಯರು ಹೈವ ಆಡಳಿತಾಧಿಕಾರಿ. ಹರಿಹರನ ಕುಮಾರಿ ವಿಜಯ ಲಕ್ಷ್ಮಿ ಶ್ರೀ ಮಹಬಲ ದೇವರ ಸೇವೆಗೆ ನೀಡಿದ ಭೂ ಶಾಸನದ ವಿವರಗಳಿವೆ. ಶಾ. ಶ. 1313ನೇ ಪ್ರಮೋದ ಸಂವತ್ಸರದ ಶ್ರಾವಣ ಶು 15 ಸೋಮವಾರ ಕ್ರಿ. ಶ. 1391 ಕೊಂಕಣ ಪ್ರಾಂತ್ಯಾಧಿಕಾರಿ ಮಲ್ಲಪ್ಪ ಒಡೆಯ. ಹರಿಹರನ ಕುಮಾರಿ ವಿಜಯಲಕ್ಷ್ಮಿ ಮಹಬಲ ದೇವರಿಗೆ ಸೇವಾದಿಗಳಿಗೆ ನೀಡಿದ ಭೂದಾನ ಶಾಸನ. ಅಂತ್ಯದಲ್ಲಿ ಮಲ್ಲ ಒಡೆಯರ

ನಿರೂಪದಿಂದ ಕಟ್ಟಿಗೆ ವಿಸಂಣ್ಣನು ಬರೆಸಿದ ಪತ್ರ ಎಂಬ ಉಲ್ಲೇಖವಿದೆ. ಶಾ. ಶ. 1308 ಕ್ರೋಧನ ಸಂವತ್ಸರದ ಕಾರ್ತೀಕ ಶು 5 ಸೋಮವಾರ ದಿನಾಂಕ 9.10.1385 ವಿಜಯನಗರ ಹರಿಹರನ ಕಾಲದಲ್ಲಿ ಆಳುತ್ತಿದ್ದ ಮಲ್ಲ ಒಡೆಯ ಹನಿಹಳ್ಳೀ ಭೋಜ ಹೆಗ್ಗಡೆ ಮಗ ವರದ ಹೆಗ್ಗಡೆ ನಂದಿನಾಯಕ ಹಿರಿಯ ಬೊಮ್ಮನಾಯಕ ಸಣ ಬೊಮ್ಮನಾಯಕ ಭಂಡಾರಿ ಇವರುಗಳು ನೀಡಿದ ಭೂದಾನ ಪಾಟ್ಟಿ ಶಾ.ಶ. 1311 ವಿಭವ ಸಂವತ್ಸರದ ಮಾರ್ಗಶಿರ ಬ 5 ಗುರುವಾರ ದಿನಾಂಕ 19.11.1388. ಪ್ರಧಾನಿ ಮಲ್ಲ ಒಡೆಯ ಅಧಿಕಾರಿ ಹರಿಹರನ ಕುಮಾರಿ ವಿಜಯಲಕ್ಷ್ಮಿ ಶ್ರೀ ಮಹಬಲ ದೇವರ ಛತ್ರ ಧರ್ಮಕ್ಕೆ ನೀಡಿದ ಭೂದಾನ ವಿವರವಿದೆ. ಆಂಗೀರಸ ಸಂವತ್ಸರದ ಜೇಷ್ಠ ಶು 5. ಹರಿಹರನ ಪ್ರಧಾನಿ ಮಲ್ಲ ಒಡೆಯರ ಅಧಿಕಾರ. ಹರಿಹರನ ಕುಮಾರಿ ವಿಜಯಲಕ್ಷ್ಮಿ ಮಹಾಬಲದೇವರ ಛತ್ರ ಧರ್ಮಕ್ಕೆ ನೀಡಿದ ಭೂದಾನ ವಿವರ. ಅಂತ್ಯದಲ್ಲಿ ಹರಿಹರ ಬರೆದ ಪತ್ರ ಎಂಬ ಉಲ್ಲೇಖವಿದೆ. ಶಾ.ಶ. 1327 ಸ್ವಭಾನು ಸಂವತ್ಸರದ ಫಾಲ್ಗುಣ ಶು 8 ಸೋಮವಾರ ದಿನಾಂಕ 18.2.1403 ಹರಿಹರ ರಾಯನ ಕಾಲದಲ್ಲಿ ವಿರೂಪಣ್ಣ ಒಡೆಯ ಹೈವ ಪ್ರಾಂತ್ಯದ ಅಧಿಕಾರಿಗಳಾಗಿದ್ದಾಗ ಹೊಯ್ಸಳ ನಾಡ ಸಾಳ್ವ ಅರಸರು ಲಖ್ಖಣ್ಣಗಳು ಬರಸಿದ ಶಾಸನ. ಭೋಗವರ್ಧನ ವಾಳ ಪರುಷಾಧೀಷ್ಠಿತ ಸರ್ವಜ್ಞೇಶ್ವರ ಭಾರತಿ ಶ್ರೀಪಾದಂಗಳವರಿಗೆ ನೀಡಿದ ಭೂದಾನ ವಿವರ. ಶಕ 1305 ರುಧಿರೋದ್ಗಾರಿ ಸಂ॥ದ ವೈಶಾಖ ಶು 5 ಗುರುವಾರ ದಿ. 8/9–4–1383 ಮಹಾಬಲ ದೇವರಿಗೆ ಸೋಮ ಗ್ರಹಣದಲ್ಲಿ ಅಮೃತ ಪಡಿಗೆ ನೀಡಿದ ಭೂದಾನ ವಿವರಗಳು. ಯಾಜಿಗಳ ಮನೆಯಲ್ಲಿ ಮೊದಲಾದ ಉಲ್ಲೇಖವಿದೆ. ವಿಜಯನಗರ ಶ್ರೀ ವೀರ ಹರಿಹರರಯರ ಕಾಲದಲ್ಲಿ ಶ್ರೀಮಂನ್ಮಹಾ ಪ್ರಧಾನ ಗೋವಿಂದೆವ ಒಡೆಯರವರು ಹೊಂನ್ನಾವರದ ರಾಜಧಾನಿಯಲ್ಲಿದ್ದು ಹಯಿವೆ ತುಳು ಕೊಂಕಣ ರಾಜ್ಯಗಳನ್ನು ಪ್ರತಿಪಾಲಿಸುತ್ತಿದ್ದ ಶಕ ವರುಶ 1324ನೇ ವಿಷು ಸಂವತ್ಸರದ ಫಾಲ್ಗುಣ ಬ 3 ಗುರುವಾರದಲ್ಲಿ ಬುಕ್ಕರಾಯ ಪ್ರಥಮಾರಾಧ್ಯ ಶ್ರೀ ಮನ್ಮಹಾಪ್ರಧಾನ ಸಾಯಂಣಯ್ಯಗಳ ಮಕ್ಕಳು ಸಮ್ಮಣಯ್ಯಗಳೂ ಮಾದಳಿತಂಗಬ್ಬೆಯ ವರದಮಾಲಗಾರನೂ ಸಿಂಗಣ್ಣಯ್ಯನು ಮಾಡಿದ ಛತ್ರ ಧರ್ಮಕ್ಕೆ ಬಿಟ್ಟಿ ದಾನದ ವಿವರ. ಶಾ.ಶ. 1317 ಭಾವ ಸಂ॥ದ ಶ್ರಾವಣ ಬ 10 ಆದಿವಾರ ಕ್ರಿ. ಶ. 1395. ಬುಕ್ಕರಾಯ ಪ್ರಥಮಾರಧ್ಯ ಪ್ರಧಾನ ಸಾಯಣ್ಣಗಳ ಮಕ್ಕಳು ನೀಡಿದ ಭೂದಾನ ಶಾಸನ. ಸೋಮೇಶ್ವರ ಭಟ್ಟರ ಬರಹ. ಶಾ.ಶ. ವರುಷ 1317 ಭಾವ ಸಂ॥ದ ಭಾದ್ರಪದ ಬ 6 ಮಂಗಳವಾರ ದಿ 15/16.09.1394 ವಿಜಯನಗರ ಹರಿಹರರಾಯನ ಪ್ರಧಾನಿ ಮಲ್ಲಪ್ಪ ಒಡೆಯ ಹೊನ್ನಾವರದಲ್ಲಿದ್ದ ಕಾಲ. ಭೂವ್ಯವಹಾರ ಈ ನಿಟ್ಟಿನಲ್ಲಿ ಮಹಾಬಲ ದೇವರ ಕಟ್ಟುಗುತ್ತಗೆಯ ವರಾಡಿ ಬಂದ ಹಾಂಗೆ ಅಲ್ಲದೆ ಮತ್ತಾವ ತೆರೂ ಇಲ್ಲವೆಂದು

ಉಲ್ಲೇಖಿಸಿ ಕ್ರೋಧನ ಸಂ॥ದ ಪುಷ್ಯ ಶು 2 ಸೋಮವಾರ. ವಿಜಯನಗರ ಹರಿಹರರಾಯ ಚಕ್ರವರ್ತಿ ಕಾಲದಲ್ಲಿ ಮಲ್ಲಪ್ಪ ಒಡೆಯರು ಹೈವೆಯಲ್ಲಿದ್ದಾಗ ಕರಣಿಕ ನರಸಿಂಹ ದೇವರ ಮಗಳು ತಂಗಣ್ಣೆ ಮಾಡಿದ ಸಂವರ್ತಕ ದೇವರಿಗೆ ಸಲ್ಲಿಸಿದ ಭೂ ವ್ಯವಹಾರ. ಶಾ.ಶ. 1125ನೇ ಚಿತ್ರಭಾನು ಸಂ॥ದ ಶ್ರಾವಣ ಬ 3 ಗುರುವಾರ ವಿಜಯನಗರ ಹರಿಹರರಾಯ ಚಕ್ರವರ್ತಿ ಪ್ರಧಾನ ಗೋವಿಂದ ಒಡೆಯರು ಹೊನ್ನಾವರ ರಾಜಧಾನಿಯಲ್ಲಿದ್ದಾಗ ಶ್ರೀವತ್ಸ ಗೋತ್ರದ ವಲ್ಲಭ ದೇವರ ಮಕ್ಕಳು ದೇವರಸರು ಮಾಡಿದ ವ್ಯವಹಾರ. ಶಾ.ಶ. ವರುಷ 1325ನೇ ಭಾನು ಸಂ॥ ದ ಶ್ರಾವಣ ಶು 5 ಗುರುವಾರ ದಿ. 26.7.1403 ವಿಜಯನಗರ ಹರಿಹರರಾಯನ ಪ್ರಧಾನಿ ಗೋವಿಂದ ಒಡೆಯರು ಹೊನ್ನಾವರ ರಾಜಧಾನಿಯಯಲ್ಲಿದ್ದಾಗ ಶ್ರೀವತ್ಸ ಗೋತ್ರದ ವಲ್ಲಭ ದೇವಗಳ ಮಕ್ಕಳು ಗೋಕರ್ಣ ಕ್ಷೇತ್ರದಲ್ಲಿ ಭೋಗವರ್ಧನವಾಳ ಪರುಶಾಧಿಷ್ಟಿತ ಪ್ರಕಾಶ ಭಾರತೀ ಶ್ರೀಪಾದಂಗಳು, ಆನಂದವಾಳ ಪುರಿ ಶ್ರೀಪಾದಂಗಳು ಭೂರಿವಾಳ ಪರುಶಾಧಿಷ್ಟಿತ ಸರ್ವಜ್ಞಪುರಿ ಶ್ರೀ ಪಾದಂಗಳು ಭೋಗವರ್ಧನ ವಾಳ ಅಮರೇ ದೇವರ ಭಾರತಿ ಇವರುಗಳಿಗೆ ನೀಡಿದ ಶಾಸನದ ವಿವರಗಳು. ಶಾ.ಶ. 13+5 ಆಶಾಢ ಶು 5 ವಿಜಯನಗರ ಹರಿಹರ ಚಕ್ರವರ್ತಿ ಗೋವಿಂದ ದೆವ ಒಡೆಯರ ಕಾಲದಲ್ಲಿ ಶ್ರೀವತ್ಸ ಗೋತ್ರದ ವಲ್ಲಭ ದೇವರ ಮಕ್ಕಳು ದೇವರಸರು ಚಂದಾವರದ ನರಸುನಾಯಕರ ಆದಿಯಾಗಿ ನಾವರ ಕೈಯಲ್ಲಿದ್ದ ಭೂಮಿಯ ವ್ಯವಹಾರದ ವಿಷಯ ಶಾ.ಶ. ವರುಷ 1324ನೇ ವಿಕ್ರಮ ಸಂ॥ದ ಚೈತ್ರ ಶುದ್ಧ 10 ಗುರುವಾರ ದಿ 25.3.1401 ವಿಜಯನಗರ ಹರಿಹರ ಚಕ್ರವರ್ತಿ ಹೈವೆ ಪ್ರಾಂತ್ಯಾಧಿಕಾರಿ ಗೋವಿಂದ ದೇವ ಒಡೆಯರ ಕಾಲದಲ್ಲಿ ಭಾರದ್ವಾಜ ಗೋತ್ರದ ರುಕ್ಕು ಶಾಖೆಯ ವಿನಾಯಕ ದೇವರ ಪೂಜಾರಿ ಗರುಢ ರಾಮಡಿಗಳ ಮಕ್ಕಳು ನಾರಾಯಣಡಿಗಳು ಮೂಲಗಾರ ಬೊಮ್ಮಿಯ ಮಗಳು ಪಡುಮಣ್ಣಗೂ ಆಕೆಯ ಮಗ ಮಾಣೆಯೂ ಆಕೆಯ ತಂಗಿ ನಾಗು, ನಾಗುವ ಮಕ್ಕಳು ಶ್ರೀವತ್ಸ ಗೋತ್ರದ ಯಜುಶ್ಯಾಖೆಯ ವಲ್ಲಭ ದೇವಗಳ ಮಕ್ಕಳು ದೆವರ್ಸರಿಂಗೆ ಕೊಟ್ಟ ಕ್ರಯ ಪತ್ರ ವಿವರ. ವಿನಾಯಕ ದೇವರ ಸೇವಾ ಸಲುವಾಗಿ ನೀಡಿದ ಭೂದಾನ ಶಾಸನ. ಶಾ.ಶ. 1325ನೆ ಚಿತ್ರ ಭಾನು ಸಂ॥ದ ಭಾದ್ರಪದ ಚೌತಿ ಮಂಗಳವಾರ ಕ್ರಿ. ಶ. 1403 ವಿಜಯನಗರ ಹರಿಹರ ಚಕ್ರವರ್ತಿ ಹೊನ್ನಾವರದ ರಾಜಧಾನಿಯಲ್ಲಿ ಗೋವಿಂದ ಒಡೆಯರಿದ್ದಾಗ ಮಹಾಬಲದೇವರ ಸಮಕ್ಷಮದಲ್ಲಿ ಲಕುಮನ್ನವೆಖರಿ ನಾಗಣ್ಣ ವೆಖರಿ ಹೊನ್ನಾವರ ವಲ್ಲಭದೆವಗಳ ಮಕ್ಕಳು ದೇವರಸರಿಗೆ ಕೊಟ್ಟ ಪತ್ರದ ಕ್ರಮ ಧರ್ಮದ ಅಧ್ಯಕ್ಷ ಮಹಾಬಲ ದೇವರಲ್ಲಿ ವಿನಾಯಕ ದೇವರ ಸೇವಾದಿಗಳ ಬಗ್ಗೆ ನೀಡಿದ ಭೂದಾನ. ಸಾಕ್ಷಿ ಶಾ. ಶ. 1323 ನೆ ವಿಕ್ರಮ ಸಂ॥ ದ ವೈಶಾಖ ಶುದ್ಧ 1 ಆದಿವಾರ ದಿ. 17.4.1401

ವಿಜಯನಗರ ಚಕ್ರವರ್ತಿ ಹರಿಹರ ಹೊನ್ನಾವರದ ರಾಜಧಾನಿಯಲ್ಲಿದ್ದ ಗೋವಿಂದ ದೇವ ಒಡೆಯ ಮಹಬಲ ದೇವರಿಗೆ ದೇವರಸರು ಮಾಡಿದ ಭೂದಾನದ ವಿವರಗಳು. ಶಾ. ಶ. 1327ನೇ ತಾರಣ ಸಂ॥ದ ಆಷಾಢ ಶು 15 ಸೋಮವಾರ ದಿ. 23.6.1404. ವಿಜಯನಗರ ಹರಿಹರರಾಯ ಚಕ್ರವರ್ತಿ ಹೊನ್ನಾವರದ ರಾಜಧಾನಿಯಲ್ಲಿ ಗೋವಿಂದ ದೇವ ಒಡೆಯರ ಕುಮಾರ ವಿರುಪಣ್ಣ ಒಡೆಯರ ಕಾಲ ವಲ್ಲಭ ದೇವಗಳ ಮಕ್ಕಳು ದೇವರಸರಿಗೆ ಕಲ್ಲಾಕೊಟೆಯ ಶಂಕರನೂ ಕೊಟ್ಟ ಪತ್ರದ ಕ್ರಮ. ಶಾ. ಶ. ವರುಷ 1319 ಧಾತು ಸಂ॥ದ ಭಾದ್ರಪದ ಶು 5 ಗುರುವಾರ ದಿ. 9/10–8–1396 ವಿಜಯನಗರ ಹರಿಹರ ಚಕ್ರವರ್ತಿ ಹೊನ್ನಾವರದ ರಾಜಧಾನಿಯಲ್ಲಿದ್ದ ಪ್ರಧಾನ ಮಲ್ಲಪ್ಪೊಡೆಯರ ಅಳಿಯಂದಿರು ಹರಿಯಣ್ಣೊಡೆಯರ ಕಾಲ – ಗೋವೆಯ ಭಚಣ್ಣಗಳು ಮುತ್ತಿಗೊಣೆಯ ಪಂಡರಿಯ ತ್ರಿವಿಕ್ರಮ ಕೊಟ್ಟ ಮೂಲ ಪಟ್ಟಿ ಶಾ.ಶ. ವರ್ಷ 1319ನೆಯ ಧಾತು ಸಂ॥ ದ ಭಾದ್ರಪದ ಬ 5 ಗುರುವಾರ ದಿ 9/10–8–1396 ವಿಜಯನಗರ ಹರಿಹರ ಚಕ್ರವರ್ತಿ ಮಹಾಪ್ರಧಾನ ಮಲ್ಲಪ್ಪ ಒಡೆಯನ ಅಳಿಯಂದಿರು ಹರಿಯಣ್ಣ ಒಡೆಯ ಹೊನ್ನಾವರದ ರಾಜಧಾನಿಯಲ್ಲಿದ್ದಾಗ ಗೋವೆಯ ಬಾಚಣ್ಣಗಳು ಮಹಬಲ ದೇವರ ಸನ್ನಿಧಿಯಲ್ಲಿ ಮಾಡಿದ ಛತ್ರಧರ್ಮಕ್ಕೆ ಅಂಕಲೆ(ಅಂಕೋಲೆ)ನಾಡ ಸಮಸ್ತರ ಕಯ್ಯಲೂ ಅರ್ಥ ಪರಿಭದ ಕೊಟ್ಟು ಮೂಲ ಅರಿಭದ ಸರ್ವಮಾನ್ಯ ಮೂಲವಾಗಿ ಕೊಂಡಾಳುತ್ತಂ ಯಿದ್ದ ಭೂಮಿಗೆ ನೀಡಿದ ದಾನ ಶಾಸನ ವಿವರಗಳು. ಪ್ರಮೋದ ಸಂ॥ದ ಭಾದ್ರಪದ ಶು 5 ಗುರುವಾರ ಮಲ್ಲಪ್ಪ ಒಡೆಯರು ಭೋಗವರ್ಧನವಾಳ ಪ್ರರುಶಾಧಿಷ್ಟತ ಸರ್ವಜ್ಞ ತೀರ್ಥ ಶ್ರೀಪಾದಂಗಳ ಶಿಷ್ಯರು ಪ್ರಕಾಶ ಭಾರತೀ ಶ್ರೀಪಾದಂಗಳು ಹನಹಳ್ಳಿಯ ಬೆಳ್ಳಿಯ ತಮ್ಮನಾಯ್ಕನು ಮಾಡಿದ ವ್ಯವಹಾರದ ಕ್ರಮ ಶಾ.ಶ. ವರುಷ 1308 ನೇ ಕ್ರೋಧನ ಸಂ॥ದ ಆರಂಭದಲ್ಲಿ ಮಲ್ಲಪ್ಪನ ಅಧಿಕಾರದಲ್ಲಿದ್ದಾಗ ಹರಿಹರರಾಯನ ಅವಸರದ ಪೂರ್ನಭಟ್ಟ ಇವರ ಮಗ ಆರಾಧ್ಯ ದೇವಗೆ ಮಹಾಬಲದೇವರ ಸನ್ನಿಧಿಯಲ್ಲಿ ಸತ್ರ ಧರ್ಮದ ಏರ್ಪಾಟಿಗಾಗಿ ಭೂ ವ್ಯವಹಾರ ಕೈಗೊಂಡು ಪೂರ್ನ ಭಟ್ಟರು ಆರಾಧ್ಯ ದೇವಗಳು ಗೋಕರ್ಣ ಕ್ಷೇತ್ರದಲ್ಲಿ ಮಹಾಬಲ ದೇವರ ಸನ್ನಿಧಿಯಲ್ಲಿ ನಿಯಮಿತವಾದ ಧರ್ಮಗಳನ್ನೆಲ್ಲವನ್ನೂ ಆಚಂದ್ರಾರ್ಕ ಸ್ಥಾಯಿಗಳಾಗಿ ಪರಿಪಾಲಿಸಿಕೊಂಡು ಬರಲು ನೀಡಿದ ಧರ್ಮಸಾಧನ. ಚಿತ್ರಭಾನು ಸಂ॥ದ ವಿಶಾಖ ಶು 12 ಸೋಮವಾರ ವಿಜಯನಗರ ಹರಿಹರರಾಯ ಚಕ್ರವರ್ತಿ ಹೈವ ಪ್ರಾಂತದಲ್ಲಿ ಅಧಿಕಾರಿ ಗೋವಿಂದ ದೇವ ಒಡೆಯರು. ಸರ್ವಜ್ಞಗಿರಿ ಶ್ರೀಪಾದಂಗಳು ರಾಯರ ಬಳಿಗೆ ಹೋಗಿ ಮೈಲಣ್ಣನ ಮಠದಲೂ ಮಠವನ್ನು ಬೇಡಲಾಗಿ ರಾಯರು ಛತ್ರ ಧರ್ಮಕ್ಕಾಗಿ ಧಾರಾಪೂರ್ವಕವಾಗಿ ಕೊಡಿಸಿ ಗೋವಿಂದ ದೇವ ಒಡೆಯರಿಗೆ ರಾಯಸ ಕಳಿಸಿದ ಸಂಗತಿಯ ವಿವರವಿದೆ.

ವೀರ ಬುಕ್ಕಣ್ಣ ಒಡೆಯರ ಕಾಲದ ಶಾಸನಗಳು

ಶ್ರೀ ವೀರ ಬುಕ್ಕಣ್ಣ ಒಡೆಯರ ಪ್ರಧಾನ ಮಾದರಸಯ್ಯರಿಗೆ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ಹಂನೆರಡು ಪ್ರಜೆ ಬ್ರಾಂಹ್ಮಣರಿಗೆ ಅನ್ನಛತ್ರ ಮತ್ತು ಶ್ರೀ ದೇವರಿಗೆ ಅಮೃತಪಡಿಗೆ ಬಿಟ್ಟ ದಾನದ ವಿವರವನ್ನು ಒಳಗೊಂಡ ಶಾಸನ ಇದಾಗಿದೆ. ಶಾ.ಶ. 1290ನೆ ಆನಂದ ಸಂವತ್ಸರದ ಚೈತ್ರ ಶು. 1 ಮಂಗಳವಾರ ಕ್ರಿ.ಶ. 1368 ಮಲ್ಪ ಒಡೆಯರು ಪ್ರಾಂತ್ಯಾಧಿಕಾರಿ ಅನಂತರಸ ಒಡೆಯರು ಗೋಕರ್ಣದಲ್ಲಿ ಛತ್ರ ಧರ್ಮಕ್ಕೆ ನೀಡಿದ ಭೂದಾನ ಶಾ.ಶ. 129? ಆನಂದ ಸಂವತ್ಸರದ ಫಾಲ್ಗುಣ? 5 ಯೂ ಗುರುವಾರ ಮಹಾ ಪ್ರಧಾನ ಅನಂತಪ್ಪ ಒಡೆಯರು ಗೊಕರ್ಣದಲ್ಲಿ ಸತ್ರ ಬ್ರಾಹ್ಮಣ ಭೋಜನಾದಿಗಳಿಗೆ ನೀಡಿದ ಭೂದಾನ ಶಾಸನ. ಶಾ.ಶ. 1216ನೆಯ ಪ್ರಮಾಥಿ ಸಂವತ್ಸರದ ಕಾರ್ತೀಕ ಶು 1 ಶನಿವಾರ ಕ್ರಿ. ಶ. 1294 ಬುಕ್ಕರಾಯನ ಪತ್ನಿ ಹೊನ್ನಲದೇವಿ ಶ್ರೀ ಮಹಬಲದೇವರಿಗೆ ಛತ್ರ ಧರ್ಮ ಅಮೃತ ಪಡಿ ಬಗ್ಗೆ ನೀಡಿದ ಭೂದಾನ ವಿವರ. ಅಂತ್ಯದಲ್ಲಿ ಮುಗುಂಡಿಯ ಹಡಹಿನ ಪ್ರಜೆಗಳು ಈ ಧರ್ಮದ ಪಾರುಪತ್ಯದವನ ಮುಖದಲ್ಲಿ ತರುತ ಬಹದು ಎಂಬ ಉಲ್ಲೇಖವಿದೆ. ಸಾಧಾರಣ ಸಂವತ್ಸರದ ಚೈತ್ರ ಶು 5 ಸೋಮವಾರ ಅರಮನೆಯ ಹರವರಿಯವರು ಸೇರಿ ಬರಗಿಯ ಊರ ದೇವಾಲ್ಯವನೂ, ದೇವಸ್ವವನೂ ಹರೆಯ ಗದ್ದೆ ಬರಗಿಯ ಮಾರಯನ ಗದ್ದೆ ಸಹಿತವಾಗಿ ಅರ್ಥ ಪರಿಛಿತವಗೊಂಡು ಮೂಲ ಪರಿಛಿತವಾಗಿ ಕೊಟ್ಟರು. ಕೇಶವ ಬರೆದ ಪತ್ರ ಇದಾಗಿದೆ. ಮಲ್ಲಪ್ಪ ಒಡೆಯರು ರಾಜ್ಯವನ್ನು ಪ್ರತಿಪಾಲಿಸುತ್ತ ಯಿದ್ದ ಕುಂಭದಲ್ಲಿ ಬೃಹಸ್ಪತಿಯಿದ್ದ ಸೌಮ್ಯ ಸಂವತ್ಸರದ ಫಾಲ್ಗುಣ ಶುಕ್ಲ ತ್ರಯೋದಶಿ ಚೈತ್ರವಾರ ಮಾಡಿದ ವ್ಯವಹಾರದ ಕ್ರಮದ ವಿವರ. ಆನಂದ ಸಂವತ್ಸರದ ಚೈತ್ರ ಶು 5 ಆದಿತ್ಯವಾರ ಮಲ್ಲಪ್ಪ ಒಡೆಯರೂ ಕಾಲದಲ್ಲಿ ಪುರೊಷೋತ್ತಮ ಶ್ರೀಪಾದಂಗಳ ಸಮಕ್ಷಮದಲ್ಲಿ ವಾಸುದೇವ ಭಟ್ಟರ ಮಕ್ಕಳು ಸೋಮೇಶ್ವರ ಭಟ್ಟರು ಮಹಾಬಳ ಭಟ್ಟರು ತಮ್ಮೊಳಗೆ ಒಡಂಬಟ್ಟು ಬರಿಸಿದ ಹಸಿಗೆಯ ಪತ್ರ ದೇವರಲ್ಲಿ ವಿಶೇಷ ಪೂಜೆಗಳಲ್ಲಿ ಬಂದ ಆಚಾರ್ಯ ದಕ್ಷಿಣೆ, ಕಳಶ ದಕ್ಷಿಣೆ, ಹೊನ್ನು, ಹಚ್ಚಡ ಉಡುಗೊರೆ ಓಲಗ ದಕ್ಷಿಣೆಗಳನೂ ಹಂಚಿಕೊಳ್ಳುವ ಧರ್ಮಸಾಧನದ ವಿವರಗಳಿವೆ.

ವಿಜಯನಗರ ಇತಿಹಾಸಕ್ಕೆ ಅನ್ವಯವಾಗುವಂತೆ ಇರುವ ಈ ಶಾಸನಗಳು ಕರ್ನಾಟಕ ಇತಿಹಾಸಕ್ಕೆ ಮುಖ್ಯವಾಗಿ ಗೋಕರ್ಣ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗಿದೆ. ಇಲ್ಲಿ ಉಲ್ಲೇಖಗೊಂಡಿರುವ ದಿನಾಂಕಗಳು, ರಾಜ, ಅಂದಿನ ಆಡಳಿತ ಮೊದಲಾದವುಗಳ ಕುರಿತು ಮತ್ತು ಈ ಶಾಸನಗಳು ಎಷ್ಟು ಸತ್ಯಾಸತ್ಯತೆಗೆ ಒಳಗೊಂಡಿದೆ ಎಂಬ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಆಗ ಬೇಕಾಗಿದೆ.

೧೪. ಮಹಾಮಂಡಳೇಶ್ವರ ಸಾಳುವ ಗೋಪರಾಜ

ಸುಂಕಂ ಗೋವರ್ಧನ

ವಿಜಯನಗರ ಸಾಮ್ರಾಜ್ಯದಲ್ಲಿ ಚಕ್ರವರ್ತಿಗಳ ಅಧೀನರಾಗಿ, ಸಣ್ಣ ಪುಟ್ಟ ಪ್ರದೇಶವನ್ನು ಆಳಿದ ಮಹಾಮಂಡಳೇಶ್ವರರು ಚಕ್ರವರ್ತಿಗಳ ನೆರಳಾಗಿ ಮಾತ್ರ ತಮ್ಮ ಅಸ್ತಿತ್ವವನ್ನು ಇತಿಹಾಸದ ಪುಟಗಳಲ್ಲಿ ಉಳಿಸಿಕೊಂಡಿದ್ದಾರೆ. ಇವರು ಸ್ವಾಮಿನಿಷ್ಠೆಯಿಂದ ನಡೆಸಿದ ಹಲವಾರು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಂದಲೇ ಸಾಮಾನ್ಯ ಜನರು ಸಾಮ್ರಾಜ್ಯದ ಮೇಲೆ ನಂಬಿಕೆಯನ್ನು ಇಡಲು ಸಾಧ್ಯವಾಗುವುದು. ನಿಜವಾಗಿಯೂ ಇವರ ಕೊಡುಗೆಗಳನ್ನು ತಿಳಿಯ ಬೇಕಾದರೆ ಸಣ್ಣ ಪ್ರಾಂತ್ಯದ ಅಧ್ಯಯನ ಆವಶ್ಯಕವೇ ಸರಿ. ಇಂಥ ಮಹಾ ಮಂಡಲೇಶ್ವರರಲ್ಲಿ ಮುಳಬಾಗಿಲು ರಾಜ್ಯದಲ್ಲಿ ಅಂತರ್ಗತವಾಗಿದ್ದ ತೇಕಲ್ ನಾಡನ್ನು ಆಳಿದ ಸಾಳುವ ಗೋಪರಾಜ ಕೂಡ ಮುಖ್ಯನಾದವನು. ಹಲವಾರು ಕುತೂಹಲಕರ ಪ್ರಶ್ನೆಗಳಿಗೆ ಈತ ವಸ್ತುವಾಗಿದ್ದಾನೆ.

ಸಾಳುವರು ಎಂದ ತಕ್ಷಣ ನಮಗೆ ಮೊದಲು ಅನಿಸುವುದೆಂದರೆ ಸಂಗಮ ವಂಶದ ತರುವಾಯ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಸಾಳುವರು ಎಂದು. ಸಂಗಮ ಅರಸರಲ್ಲೇ ದುರ್ಬಲನಾದ ವಿರೂಪಾಕ್ಷರಾಯನನ್ನು ಪದಚ್ಯುತಗೊಳಿಸಿ 1485ರಲ್ಲಿ ಸಾಳುವ ಸಾಮ್ರಾಜ್ಯವನ್ನು ಸ್ಥಾಪಿಸಿದ ಸಂಗತಿ ಎಲ್ಲರಿಗೂ ತಿಳಿದಿರುವುದೇ. ಹಾಗಾದಲ್ಲಿ ಎರಡನೆಯ ದೇವರಾಯನ ಕಾಲದ ಈ ಸಾಳುವ ಗೋಪರಾಜ ಯಾರು?

ಸಾಳುವ ವಂಶ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೂ ಮುಂಚಿನಿಂದ ಮಂಚೂಣಿಯಲ್ಲಿರುವ ವಂಶ. ಪಿ. ಬಿ. ದೇಸಾಯಿಯವರ ಪ್ರಕಾರ[1] ಇವರು ಮೂಲತಃ ಉತ್ತರ ಕರ್ನಾಟಕದವರು. ಸೇವುಣರ ಕಾಲದಿಂದಲೂ ಇವರು ಪ್ರಮುಖರು. ವಿಜಯನಗರ ಸ್ಥಾಪನೆಯಾಗುವುದಕ್ಕೆ ಮುಂಚೆ ಉತ್ತರ ಕರ್ನಾಟಕದಿಂದ ನಿರಂತರವಾಗಿ ಮುಸಲ್ಮಾನರ ವಿರುದ್ಧ ಯುದ್ಧಗಳನ್ನು ಮಾಡಿ ವಿಜಯ ಸಂಪಾದಿಸಿದರು. ಅಂತಲೇ ಸಂಗಮರು ಸಾಮ್ರಾಜ್ಯ ಸ್ಥಾಪನೆಗೆ ನಿಂತಾಗ ಸಾಳುವರು ಇವರಿಗೆ ಸಹಾಯ ಮಾಡಿದರು. ಸೇವುಣರ ಕಾಲದಲ್ಲಿ ಸೇನಾನಿಗಳಾಗಿದ್ದ ಇವರು, ಮಂತ್ರಿಗಳಾಗಿ, ಸಣ್ಣ–ಪುಟ್ಟ ಪ್ರಾಂತ್ಯದ ಅಧಿಕಾರಿಗಳಾಗಿ, ಮಹಾಮಂಡಲೇಶ್ವರರಾಗಿ ಕಡೆಗೆ ಚಕ್ರವರ್ತಿಗಳಾಗಿ ಕ್ರಮೇಣ ಬೆಳೆದು ಮಿನುಗಿದವರು ಇವರು.

ಸಾಳುವ ಮನೆತನದ ಮೊದಲ ಐತಿಹಾಸಿಕ ವ್ಯಕ್ತಿ ವಂಕಿದೇವ. ಈತನ ಮಗ ಗುಂಡಭೂಪ. ಈತನ ಮಗ ಮಂಗಿದೇವ. ಮಂಗಿದೇವನ ಮಗ ಗೌತನ. ಗೌತನ ಇಬ್ಬರು ಗಂಡು ಮಕ್ಕಳಲ್ಲಿ ಕಿರಿಯವನು ಗುಂಡನಾದರೆ, ಕಿರಿಯವನೇ ತಿಪ್ಪರಾಜ. ಈ ಗುಂಡನ ಮಗ ನರಸಿಂಹರಾಯ ಸಾಳುವ ಮನೆತನದ ಮೂಲಕ ವಿಜಯನಗರ ಸಾಮ್ರಾಜ್ಯವನ್ನು ಆರಂಭಿಸಿದವನು. ತಿಪ್ಪರಾಜನ ಮಗ ಸಾಳುವ ಗೋಪರಾಜನು ತೇಕಲ್ ನಾಡಿನಲ್ಲಿದ್ದು ಮಹಾಮಂಡಳೇಶ್ವರನಾಗಿದ್ದನು.

ಈ ಸಾಳುವ ವಂಶದ ಕವಲೊಡೆದ ಕೊಂಬೆಯಲ್ಲಿರುವ ಸಾಳುವ ಗೋಪ ರಾಜನು ಸಾಳುವ ತಿಪ್ಪರಾಜನ ಮಗ ಗೋಪರಾಜನ ತಾಯಿ ಸಂಗಮವಂಶದ ದೊರೆ ವಿಜಯರಾಯನ ಪುತ್ರಿ ಹಾಗೂ ಎರಡನೇ ದೇವರಾಯನ ತಂಗಿಯಾದ ಹರಿಮಾದೇವಿ. ಎರಡನೆಯ ದೇವರಾಯನ ಸೋದರಳಿಯನಾದ ಈತ ದೇವರಾಯ ಮಹಾರಾಯರ ನಿರೂಪದಂತೆ ತೇಕಲ್ ನಾಡಿನ ಮಹಾಮಂಡಳೇಶ್ವರನಾಗಿ ನಿಯುಕ್ತನಾಗುತ್ತಾನೆ. ಸಾಳುವ ಗೋಪರಾಜನನ್ನು ಉಲ್ಲೇಖಿಸುವ ಶಾಸನಗಳು ತೇಕಲ್‌ನಾಡಿನಲ್ಲಿ ಸುಮಾರು ಕ್ರಿ. ಶ. 1430 ರಿಂದ ಆರಂಭಿಸಿ ಕ್ರಿ. ಶ. 1442ರವರೆಗೆ ಸಿಗುತ್ತದೆ.

ಈ ತೇಕಲ್ ನಾಡು ಕ್ರಿ. ಶ. 9ನೆಯ ಶತಮಾನದಿಂದ ಅಸ್ತಿತ್ವದಲ್ಲಿರುವ ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಆವೃತವಾಗಿರುವ, ಹಲವಾರು ಬೆಟ್ಟಶ್ರೇಣಿಗಳು ಇರುವ ಪ್ರಮುಖವಾದ ಪಟ್ಟಣ. ಒಂಬತ್ತನೆಯ ಶತಮಾನದಲ್ಲೇ ರೂಪುಗೊಂಡ ತೇಕಲ್ ನಾಡು ಪ್ರಾದೇಶಿಕವಾಗಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ, ಬಂಗಾರಪೇಟೆ ತಾಲ್ಲೂಕಿನ, ಇಂದಿನ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು ತಾಲ್ಲೂಕಿನ ಕೆಲ ಭಾಗವನ್ನು ಒಳಗೊಂಡ ಭೂಭಾಗವಾಗಿತ್ತು.[2] ಹೊಯ್ಸಳರ ಆಳ್ವಿಕೆಯ ಕಡೆಯ ಕಾಲಕ್ಕೆ ಪ್ರವರ್ಧಮಾನಕ್ಕೆ ಬಂದ ತೇಕಲ್‌ನಾಡು ವಿಜಯನಗರ ರಾಜ್ಯದಲ್ಲಿ ಮುಳಬಾಗಿಲು ರಾಜ್ಯದಲ್ಲಿ ಅಂತರ್ಗತವಾದ ನಾಡಾಗಿತ್ತು. ಪ್ರಾಚೀನ ಕಾಲದಿಂದಲೂ ಸುರಕ್ಷಿತವೂ ದುರ್ಗಮವೂ ಆದ ತೇಕಲ್‌ನಾಡು ಹೊಯ್ಸಳರ ಕಾಲಕ್ಕೇ ಅಭಿವೃದ್ಧಿಗೊಂಡಿತ್ತು. ವಿಶೇಷವಾಗಿ ಮೂರನೇ ಬಲ್ಲಾಳನ ದಂಡನಾಯಕನಾದ ವಲ್ಲಪ್ಪದಣ್ಣಾಯಕನು ಈ ಪ್ರದೇಶದ ಅಭಿವೃದ್ಧಿಗೆ ಕಾರಣ ಪುರುಷ. ಈತನ ಕಾಲಕ್ಕೆ ತೇಕಲ್ಲಿನಲ್ಲಿ ವರದರಾಜಸ್ವಾಮಿ ದೇಗುಲದ ರಚನೆಯಾಗಿತ್ತು. ಮೂರನೇ ಬಲ್ಲಾಳನಿಗೆ ವಿಜಯಪ್ರಾಪ್ತಿಯಾಗಲೆಂದು ಈ ದೇವಾಲಯಕ್ಕೆ ವಲ್ಲಪ್ಪ ದಣ್ಣಾಯಕರನು ಹಲವಾರು ದಾನ – ದತ್ತಿಗಳನ್ನು ನೀಡಿದ್ದನು. ಅಲ್ಲದೇ ತೇಕಲ್ಲಿನಲ್ಲಿ ಎರಡು ಸುತ್ತಿನ ಕೋಟೆಯೊಂದನ್ನು ಸಹ ನಿರ್ಮಾಣ ಮಾಡಿದ್ದನು.

ಇಂತಹ ಹಿನ್ನೆಲೆಯಿರುವ ಮುಳುಬಾಗಿಲು ರಾಜ್ಯಕ್ಕೆ ಸೇರಿದ ತೇಕಲ್ಲನ್ನು ದೇವರಾಯ ಮಹಾರಾಯರ ನಿರೂಪದಂತೆ ದೇವರಾಯನ ಪ್ರಧಾನಿಗಳಾದ ಲಕ್ಕಣ್ಣ ಒಡೆಯರು ಮತ್ತು ಮಾದಣ್ಣ ಒಡೆಯರು ಬಂದು ಗೋಪರಾಜನಿಗೆ ಆಳಲು ಕೊಟ್ಟರು. ಈ ವಿಷಯವನ್ನು ತಿಳಿಸುವ ಶಾಸನವು ತೇಕಲ್ಲಿನ ವರದ ರಾಜಸ್ವಾಮಿ ದೇಗುಲದ ಬಳಿಯಿರುವ ಹುಲೀಬಂಡೆಯ ಮೇಲಿದೆ.[3] ಈ ಶಾಸನದಲ್ಲಿ ಶಕವರುಷವನ್ನು 1434 ಎಂದೂ ಹೇಳಿ ಪ್ರಮಾದೀಚ ಸಂವತ್ಸರದ ಫಾಲ್ಗುಣ ಶುದ್ಧ 1 ಗುರುವಾರ ಎಂದು ದಾಖಲಿಸಿದೆ. ಇದು ಕ್ರಿ. ಶ. 1516 ಎಂದಾಗುತ್ತದೆ. ಇದು ತಪ್ಪಾಗುತ್ತದೆ. ಇದು ಕ್ರಿ. ಶ. 1434 ಇದ್ದಿರಬಹುದೇ?. ಪಾಠವನ್ನು ಓದುವಾಗ ವ್ಯತ್ಯಾಸ ಮಾಡಿದರೇ ಎಂದು ಯೋಚಿಸಿದರೆ ಸಂವತ್ಸರ ತಾಳೆ ಹೊಂದುವುದಿಲ್ಲ. ಡಿ.ವಿ. ಪರಮಶಿವಮೂರ್ತಿಯವರು ಹೇಳಿರುವಂತೆ ಪ್ರಮಾದೀಚ ಸಂವತ್ಸರವು 1434ರಲ್ಲಿ ಬರುತ್ತದೆ. ಇದನ್ನು ಒಪ್ಪುವುದಾದರೆ ಕ್ರಿ. ಶ. 1438ರಲ್ಲಿ ಗೋಪರಾಜನಿಗೆ ತೇಕಲ್ಲನ್ನು ಆಳಲು ಕೊಟ್ಟರು ಎಂದಾಗುತ್ತದೆ. ಆದರೆ 1430, 1432ರ ಗೋಪರಾಜನ ಶಾಸನಗಳು ಅವನು ಅಲ್ಲಿ ಮಾಡಿದ ದಾನಾದಿಗಳನ್ನು, ನಿರ್ಮಾಣಗಳನ್ನು ತಿಳಿಸುತ್ತದೆ. ನನಗೆ ತೋಚುವ ಹಾಗೆ ಶಕವರುಷ 1438 ಎಂದು ಅಚ್ಚಾಗಿರುವ ಜಾಗದಲ್ಲಿ 1348 ಎಂದು ತಿದ್ದಿಕೊಂಡರೆ ಎಲ್ಲಾ ಗೊಂದಲ ದೂರವಾಗುತ್ತದೆ. ಇದು ಕ್ರಿ ಶ 1426 ಎಂದಾಗುತ್ತದೆ. (ಆದರೆ ಸಂವತ್ಸರ ಇಲ್ಲಿಯೂ ಹೊಂದುವುದಿಲ್ಲ.) (ಶಾಸನದ ಮೂಲಪಾಠವನ್ನು ನೋಡೋಣವೆಂದರೆ ಇಂದಿಗೆ ಆ ಜಾಗದಲ್ಲಿ ಶಾಸನವೇ ಇಲ್ಲ.) ಕ್ರಿ. ಶ. 1424ರಲ್ಲಿ ಚಕ್ರವರ್ತಿಯಾದ ಎರಡನೇ ದೇವರಾಯನ ನಂತರದ ಎರಡೇ ವರ್ಷದಲ್ಲಿ ತನ್ನ ಸಹೋದರಿಯ ಮಗನಾದ ಸಾಳುವ ಗೋಪರಾಜನಿಗೆ ತನಗೆ ಪ್ರೀತಿಪಾತ್ರನಾದ ಲಕ್ಕಣ್ಣ ದಂಡನಾಯಕನ ಸ್ವಂತ ನಾಡಾದ ಮುಳುಬಾಗಿಲು ರಾಜ್ಯದಲ್ಲಿ ಅಂತರ್ಗತವಾಗಿದ್ದ ತೇಕಲ್‌ನಾಡನ್ನು ಆಳಲು ಕೊಟ್ಟನು ಎಂದು ಊಹಿಸಬಹುದಾಗಿದೆ.

ಈ ಸಂದರ್ಭದಲ್ಲಿ ಈ ಹಿಂದೆ ಹೇಳಲಾದ ವಲ್ಲಪ್ಪ ದಣ್ಣಾಯಕರು ಕಟ್ಟಿಸಿದ ಕಲ್ಲುಕೋಟೆ ತಳಮಟ್ಟವಾಗಿ ಬಿದ್ದುಹೋಗಿತ್ತು. ಗೋಪರಾಜನು ಆಡಳಿತ ವಹಿಸಿ ಕೊಂಡ ತಕ್ಷಣ ಈ ಕಲ್ಲುಕೋಟೆಯ ಕಡೆಗೆ ಗಮನಹರಿಸಿ ಮೊದಲು ಇದರ ಪುನಪ್ರತಿಷ್ಠೆಯಾಗಬೇಕೆಂದು ಅಪ್ಪಣೆ ಕೊಡಿಸಿದ. ಆಗ ಸಾಳುವ ಗೋಪರಾಜನ ಮಹಾಪ್ರಧಾನನಾದ ಸಿಂಗರಾಜನು ಒಳಕೋಟೆ ಮತ್ತು ಹೊರಕೋಟೆಯನ್ನು ಕಟ್ಟಿಸಿ ವರದರಾಜದೇವರ ದೇವಾಲಯದ ಮುಖಮಂಟಪದ ಸನಿಹದಲ್ಲಿ ರಾಜ ಗಂಭೀರ ಎನ್ನುವ ಕೊತ್ತಳವನ್ನು ಕಟ್ಟಿಸುತ್ತಾನೆ. ಈ ಕೊತ್ತಳದಲ್ಲಿ ಗೋಪರಾಜನೂ, ಆತನ ಮಗನಾದ ತಿಪ್ಪಯ್ಯನು ಹುಲಿಗಳನ್ನು ಹಿಡಿದು ತರಿಸಿ ಬೇಟೆಯಾಡಿದರು.

ಈ ಮೊದಲ ಶಾಸನದಲ್ಲಿಯೇ ಗೋಪರಾಜನನ್ನು ಹಲವಾರು ಪ್ರಮುಖ ಬಿರುದುಗಳಿಂದ ಸಂಬೋಧಿಸಲಾಗಿದೆ. "ಮಹಾಮಂಡಲೇಶ್ವರ, ಮೇದಿ ನೀ ಮೀಸೆಯರ ಗಂಡ, ಕಟಾರಿ ಸಾಳುವ, ತ್ರಿಭುವನೀರಾಯ, ಗಂಡರಗೂಳಿ, ಸಂಬುರಾಯ ಸ್ಥಾಪನಾಚಾರ್ಯ, ದಕ್ಷಿಣ ಸುರತಾಳ, ವಿಭಾಡರಾಯ, ಪಕ್ಷಿಸಾಳುವ, ಸಾಳುವ ತಿಪ್ಪರಾಜ ಒಡೆಯರ ಕುಮಾರ ಗೋಪರಾಜ" ಎಂದಿದೆ. ಈ ಬಿರುದುಗಳಲ್ಲಿ ಕೆಲವು ಸಂಗಮ ಅರಸರದ್ದಾದರೆ ಕೆಲವು ಸಾಳುವ ವಂಶದವರ ಬಿರುದುಗಳಾಗಿವೆ.

ಒಟ್ಟಿನಲ್ಲಿ ರೈಸ್‌ರವರು ಪ್ರಕಟಿಸಿರುವ ಮಾಲೂರು.[೪] ಶಾಸನವು ಕೆಲವು ಅನುಮಾನಗಳನ್ನು ಹುಟ್ಟಿಸುವುದರಲ್ಲಿ ಅನುಮಾನವಿಲ್ಲ. ಇದರ ಜೊತೆಯಲ್ಲಿಯೇ ಇರುವ ಇನ್ನೊಂದು ಶಾಸನವು ಬಹುಶಃ ಈ ಸಂದರ್ಭದಲ್ಲಿಯೇ 'ಸಂಪಿಗೆ' ಎಂಬ ಗಂಡುಗನು ಹುಲಿಗಳನ್ನು ಹಿಡಿದು ತಂದು ಹೋರಾಟಕ್ಕೆ ಸಹಕರಿಸಿರುವುದನ್ನು ತಿಳಿಸುತ್ತದೆ.[5]

ವರದರಾಜಸ್ವಾಮಿ ಗುಡಿಯ ಗೋಪುರದ ಬಾಗಿಲಲ್ಲಿರುವ ಶಕವರುಷ 1352, ಸಾಧಾರಣ ಸಂವತ್ಸರದ, ಮಾಘ, ಶು10, ಗುರುವಾರದ (23–1–1431) ಶಾಸನವು[6] ಸಾಳುವ ಗೋಪರಾಜನ ಮಹಾಪ್ರಧಾನನಾದ ಮಲ್ಲಮರಾಜನ ಮಗನಾದ ಸಿಂಗರಾಜನು ಪೊಲನಾಡ ಮಾದನಹಳ್ಳಿಯ ಪಡುವಣ ಮಾರಗೌಡನ ಕಟ್ಟೆಮೇಲೆ ಇದ್ದಂತಹ ಗಂಡಭೇರುಂಡದಂತೆ ಎರಡು ಟಿಸಿಲಲ್ಲಿ ಇದ್ದ ಮಾವಿನಮರವನ್ನು ತರಿಸಿ ತೇಕಲ್ಲಿನ ಬಡಗಿ ಬೇವೋಜನ ಮಗ ಚೋಜದೇವೋಜಗಳ ಕೈಯಿಂದ ಮರಗೆಲಸವನ್ನು, ಕಮ್ಮಾರನಾದ ಅಂಜಲಲಿಂಗೋಜನ ಕೈಯಲ್ಲಿ ಕಬ್ಬಿಣದ ಕೆಲಸ ವನ್ನು ಮಾಡಿಸಿ ವರದರಾಜಸ್ವಾಮಿ ದೇಗುಲದ ಮುಖಮಂಟಪದ ಗೋಪುರವನ್ನು ಕಟ್ಟಿಸಿ ಅದಕ್ಕೆ ಕದವನ್ನು ಇಡುತ್ತಾನೆ. ಈ ಸಂದರ್ಭದಲ್ಲಿ ಗೋಪರಾಜನು ಈ ಇಬ್ಬರಿಗೆ ಕುದುರೆ, ಸತ್ತಿಗೆ (ಛತ್ರಿ)ಗಳನ್ನು ನೀಡಿ ಸನ್ಮಾನಿಸಿ ಭೂದಾನವನ್ನು ನೀಡುತ್ತಾನೆ.

ಇದಲ್ಲದೇ ಈ ಸಂದರ್ಭದಲ್ಲಿ ಚೊಕ್ಕಪೆರುಮಾಳುದಾಸರ ಅಳಿಯ ನಾಯಿನಾರು ದಾಸರಿಗೆ, ಪೂಜೆ ಪುನಸ್ಕಾರ ಮಾಡುವ ತಿಗುಳ ಬ್ರಾಹ್ಮಣರಿಗೆ, ಪರಿಚಾರಕರಿಗೆ, ದೇವರಿಗೆ ಬೋನವ ಮಾಡುವವರಿಗೆ, ದೇವರನಾಮ ಸ್ಮರಣೆ ಮಾಡುವವರಿಗೆ, ಹೂವಿನ ದಂಡೆ ಕಟ್ಟುವವರಿಗೆ, ಈ ಸ್ಥಾನದ ಅಂಗಭೋಗ ಮತ್ತು ರಂಗಭೋಗದವರಿಗೆ, ನಟ್ಟುವರಿಗೆ, ಶಂಭ ನುಡಿಸುವವರಿಗೆ, ಉಪಾಂಗ ದವರಿಗೆ, ಹಾಡುವವರಿಗೆ, ಹಲವಾರು ಗ್ರಾಮದಾನಗಳನ್ನು ಗೋಪರಾಜನು ನೀಡು ತ್ತಾನೆ. ಈ ದಾನವು ತೇಕಲ್ಲಿನ ವರದರಾಜ ದೇಗುಲದ ಔನ್ನತ್ಯವನ್ನು ಶ್ರೀಮಂತಿಕೆ ಯನ್ನು ಪ್ರಕಟಪಡಿಸುತ್ತದೆ.

10-2-1434ರ ಶಾಸನವು[7] ದೇವರಾಯ ಮಹಾರಾಯರು ಚತುಸ್ಸಮುದ್ರಾಧಿಪತಿಯಾಗಿ ಆಳುತ್ತಿದ್ದನು. ಅವನ ಬಲದ ಭುಜಪ್ರತಾಪನಾಗಿದ್ದಂತಹ ಗೋಪರಾಜನು ತೇಕಲ್ಲಿನ ಪಟ್ಟಣವನ್ನು ಆಳುತ್ತಾ ಇರುವಾಗ ಅವನ ಪ್ರಧಾನನಾದ ಸಿಂಗರಾಜನು ತೇಕಲ್ಲು ಪಟ್ಟಣದಲ್ಲಿ ಎರಡು ಸುತ್ತಿನ ಕೋಟೆಯನ್ನು ಕಟ್ಟಿಸಿ ನಾಯನಾರು ದೇವರ ನಿರೂಪದಂತೆ ಎಲ್ಲರಿಗೂ ಕಾಣಿಸುವ ಹಾಗೆ ದೇವರ ತಿರುಮಾನಕೆ (ಉತ್ಸವ) ದೇವಾಲಯದ ಹಿಂದೆ ಮತ್ತು ಮುಂದಿನ ಭಾಗದಲ್ಲಿ ಮಂಟಪವನ್ನು ಕಟ್ಟಿಸಿ, ಗೋಪರಾಜನ ಹೆಸರಿನಲ್ಲಿ ಗೋಪಸಮುದ್ರ ಎನ್ನುವ ಕೊಳವನ್ನು ಕಟ್ಟಿಸಿ, ಆ ಕೊಳದ ಪಶ್ಚಿಮಕ್ಕೆ ಗೋಪರಾಜನಿಗೆ ಅರಮನೆಯನ್ನು ಕಟ್ಟಿಸಿಕೊಟ್ಟು ತಾನು ಮಾತ್ರ ತೇಕಲ್ಲಿನಲ್ಲಿ ವರದರಾಜ ದೇವರ ಬಲಗಡೆಯಲ್ಲಿ ಅರಮನೆ ಕಟ್ಟಿಸಿಕೊಂಡು, ಪ್ರತಿದಿನವೂ ಎರಡು ಹೊತ್ತಿನ ಸ್ನಾನವನ್ನು ಮಾಡಿ ಔಪಾಸನೆಯನ್ನು ಮಾಡಿ, ವರದರಾಜ ದೇವರ ಶಿಖರ ಸಂದರ್ಶನ ಮಾಡಿ ದೇವರಿಗೆ ನೈವೇದ್ಯ, ತಾಂಬೂಲ ಮುಂತಾದವನ್ನು ಸಮರ್ಪಿಸಿ ತುಳಸಿ ತೀರ್ಥವನ್ನು ಕೊಂಡು ಅಂಗಭೋಗವನ್ನು, ರಂಗಭೋಗವನ್ನು ಪ್ರತಿಷ್ಠೆ ಮಾಡಿ ದೇವರ ಮುಖಮಂಟಪದ ಮುಂದೆ ಈ ಹಿಂದೆ ಕುಂಡಪ್ಪ ದಣ್ಣಾಯಕರು ಕಟ್ಟಿಸಿದ ಮೂಡಣ ಗೋಪುರಕ್ಕೆ ಕದವನ್ನು ಮಾಡಿಸುವ ವಿವರಗಳಿವೆ. ಮತ್ತು ಗೋಪರಾಜರಿಗೆ ಒಳ್ಳೆಯದಾಗಲೆಂದು (ಜೊತೆಗೆ ಲಖ್ಖಣ್ಣ ಒಡೆಯರಿಗೆ, ಮಾದಣ್ಣ ಒಡೆಯರಿಗೆ, ಸಾಳುವ ತಿಪ್ಪರಾಜ ಒಡೆಯರಿಗೆ) ಚಿಕಟಿಮಂಗಲದ ಅಗ್ರಹಾರದಾನ ನೀಡಲಾಗಿದೆ.

ಗೋಪರಾಜನ ಉಲ್ಲೇಖವಿರುವ ಕಡೆಯ ಶಾಸನವು ಕ್ರಿ. ಶ. ಸೆಪ್ಟೆಂಬರ್ 1442ಕ್ಕೆ ಸೇರಿದ್ದು.[8] ಪ್ರತಾಪ ದೇವರಾಯನ ಬಲದ ಭುಜದಂತಿರುವ ಸಾಳುವ ತಿಪ್ಪರಾಜನಿಗೆ ಮತ್ತು ಅವನ ಮಗನಾದ ಗೋಪರಾಜನಿಗೆ ಪುಣ್ಯವಾಗಬೇಕೆಂದು ಸಿಂಗರಾಜನು ತೇಕಲ್ಲಿನ ವರದರಾಜ ದೇವರಿಗೆ ತಿರುನಾಳ ಉತ್ಸವಕ್ಕೆಂದು ದಾನವನ್ನು ಬಿಟ್ಟಿದ್ದಾನೆ.

ಹೀಗೆ ಗೋಪರಾಜನ ಶಾಸನಗಳೆಲ್ಲವೂ ತೇಕಲ್ಲಿನ ವರದರಾಜಸ್ವಾಮಿ ದೇಗುಲಕ್ಕೆ ನೀಡಿದ ದಾನಗಳನ್ನು ಕುರಿತು ಹೇಳುತ್ತದೆ. ಇದರ ಜೊತೆಗೆ ಈತನಿಗಾಗಿ ಕಟ್ಟಿಸಿದ ಗೋಪಸಮುದ್ರ (ಇಂದಿನ ಗೋಪಸಂದ್ರ) ಮತ್ತು ಇಲ್ಲಿನ ಅರಮನೆ ವಿಚಾರ, ಈತನು ಹುಲಿಬೇಟೆಯಾಡಿದ ವಿಚಾರ, ದೇವರಾಯನಿಗೆ ಬಲಭುಜನಾಗಿದ್ದ ವಿಚಾರಣೆಗೆ ತುಂಬಿಹೋಗಿದೆ.

ಗೋಪರಾಜನ ಎಲ್ಲಾ ಕೆಲಸಗಳ ಹಿಂದೆ ಪ್ರೇರಕಶಕ್ತಿಯಾಗಿ ಬಹುಶಃ ಗೋಪರಾಜನಿಗಿಂತ ವಯಸ್ಸಿನಲ್ಲಿ ಹಿರಿಯನಾಗಿದ್ದ ಮಹಾಪ್ರಧಾನನಾದ ಸಿಂಗರಾಜನ ಪಾತ್ರ ದೊಡ್ಡದಿದೆ.

ಅಡಿ ಟಿಪ್ಪಣಿಗಳು

1. ಪಿ. ಬಿ. ದೇಸಾಯಿ, *ವಿಜಯನಗರ ಸಾಮ್ರಾಜ್ಯ*
2. ಸುಂಕಂ ಗೋವರ್ಧನ, ತೇಕಲ್ ನಾಡು, *ಇತಿಹಾಸ ದರ್ಶನ:22*, ಸಂ॥ ಪಿ. ವಿ. ಕೃಷ್ಣಮೂರ್ತಿ ಮತ್ತು ಎಂ. ಜಿ. ನಾಗರಾಜ್
3. *ಎಪಿಗ್ರಾಫಿಯಾ ಕರ್ನಾಟಿಕಾ* (ರೈಸ್ ಆವೃತ್ತಿ), ಸಂ.10, ಮಾಲೂರು 1
4. ಸಂ॥ ಡಾ॥ ಡಿ. ವಿ. ಪರಮಶಿವಮೂರ್ತಿ, *ಪ್ರೌಢದೇವರಾಯನ ಶಾಸನಗಳು*, 2007; ಹಂಪಿ
5. *ಎಪಿಗ್ರಾಫಿಯಾ ಕರ್ನಾಟಿಕಾ* (ರೈಸ್ ಆವೃತ್ತಿ), ಸಂ–10, ಮಾಲೂರು 2
6. ಅದೇ–ಮಾಲೂರು 3 ಮತ್ತು *ಎಪಿಗ್ರಾಫಿಯಾ ಕರ್ನಾಟಿಕಾ*, ಸಂ. 17 (ಪುಟ 38) – 1965; ಮೈಸೂರು
7. *ಎ. ಕ* – ಸಂ.10, ಮಾಲೂರು 4
8. *ಎ. ಕ.* ಸಂ. 17 – ಪು. 66, ಮಾಲೂರು 191

೧೫. ಶ್ರೀ ಕೃಷ್ಣದೇವರಾಯ ಮತ್ತು ಪೋರ್ಚುಗೀಸ್ ಗೌರ್ನರ್ ಅಪೋನ್ಸ್ ಡಿ ಅಲ್ಬುಕರ್ಕ್‌ರ ನಡುವಣ ರಾಜತಾಂತ್ರಿಕ ಸಂಬಂಧಗಳು

ಡಾ॥ ನಿರ್ಮಲ್‌ರಾಜ್

ವಿಜಯನಗರ ಸಾಮ್ರಾಜ್ಯದ ಸುಪ್ರಸಿದ್ಧ ಸಾಮ್ರಾಟ ಶ್ರೀಕೃಷ್ಣದೇವರಾಯನು ದೇಶ ವಿದೇಶಗಳೊಂದಿಗೆ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದನು. ವಿದೇಶೀಯರಾದ ಪೋರ್ಚುಗೀಸರೊಂದಿಗೆ ಅವನು ಹೊಂದಿದ್ದ ರಾಜತಾಂತ್ರಿಕ ಸಂಬಂಧಗಳು ದಕ್ಷಿಣ ಭಾರತದ ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಅಪಾರ ಪ್ರಭಾವ ಬೀರಿದ್ದವೆನ್ನಬಹುದು. ಶ್ರೀಕೃಷ್ಣದೇವರಾಯ ಮತ್ತು ಅವನ ಸಮಕಾಲೀನನಾದ ಪೋರ್ಚುಗೀಸ್ ಗೌರ್ನರ್ ಅಪೋನ್ಸ್ ಡಿ ಅಲ್ಬುಕರ್ಕ್‌ರವರು ಹೊಂದಿದ್ದ ರಾಜತಾಂತ್ರಿಕ ನೈಪುಣ್ಯತೆಯು ಪರಸ್ಪರರ ಸೌಹಾರ್ದಯುತ ಒಡನಾಟ ಹಾಗೂ ರಾಜಕೀಯ ಏಳಿಗೆಗೆ ಸಾಧನವಾಯಿತು. 16ನೇ ಶತಮಾನದ ಆರಂಭದ ವೇಳೆಗೆ ಅಂದರೆ ಕ್ರಿ.ಶ.1509ರ ಏಕಕಾಲದಲ್ಲಿ ಈ ಇಬ್ಬರು ಮಹಾನ್ ನಾಯಕರು ಅಧಿಕಾರಕ್ಕೆ ಬಂದದ್ದು ಕಾಕತಾಳೀಯ ಎನಿಸಿದರೂ ಅಂದಿನ ರಾಜಕೀಯ ಪ್ರಕ್ಷುಬ್ಧತೆಯು ಸ್ವದೇಶಿ ಮತ್ತು ವಿದೇಶಿ ಶಕ್ತಿಗಳ ನಡುವಣ ಸ್ನೇಹ ಸೌಹಾರ್ದಯುತ ಸಂಬಂಧಗಳಿಗೆ ಸೂಕ್ತ ಅಡಿಪಾಯವನ್ನು ಹಾಕಿಕೊಟ್ಟಿತೆಂದರೆ ಅತಿಶಯೋಕ್ತಿಯಾಗಲಾರದು.

ವಿಜಯನಗರದರಸರು ಈಗಾಗಲೇ ಐರೋಪ್ಯರೊಂದಿಗೆ ರಾಯಭಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದರೆಂಬುದಕ್ಕೆ ಇಟಲಿಯ ವೆನಿಶ್ ನಗರದ ನಿಕಾಲೋಕಾಂತಿ ಹಾಗೂ ರಷ್ಯಾದ ನಿಕತಿನ್‌ರವರ ವರದಿಗಳು ಚಾರಿತ್ರಿಕ ದಾಖಲೆಗಳಾಗಿವೆ. ಪೋರ್ಚುಗೀಸರು ವಿಜಯನಗರ ಸಾಮ್ರಾಜ್ಯದೊಂದಿಗೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದುವುದರ ಮೂಲಕ ಹೊಸ ರಾಜತಾಂತ್ರಿಕ, ವ್ಯಾವಹಾರಿಕ ಹಾಗೂ ಸಾಂಸ್ಕೃತಿಕ ಬಾಂಧವ್ಯಗಳಿಗೆ ನಾಂದಿ ಹಾಡಿದರು. ಇದಕ್ಕೆ ಪೂರಕವಾಗಿ ತುಳುವ ಸಂತತಿಯ ವೀರನರಸಿಂಹನ ಕಾಲಕ್ಕಾಗಲೇ ಪೋರ್ಚುಗೀಸ್ ವೈಸ್‌ರಾಯ್ ಫ್ರಾನ್ಸಿಸ್ಕೋ ಡಿ ಅಲ್ಮೇಡಿಯಾ ವಿಜಯನಗರದೊಂದಿಗೆ ರಾಯಭಾರ ಹಾಗೂ ವಾಣಿಜ್ಯ ಸಂಬಂಧಗಳನ್ನು ಆರಂಭಿಸಿದ್ದನೆಂಬುದು ಪೀತ್ರೋದಲ್ಲಾವೆಲ್ಲಾ

ಹಾಗೂ ಫೆರ್ನೋ ಲೋಪೆಜ್ ಡಿ ಕಾಸ್ಟೋನ್ಹೇಡಾರವರ ವರದಿಗಳಿಂದ ತಿಳಿದು ಬರುತ್ತದೆ. ಇದರಿಂದ ಕೃಷ್ಣದೇವರಾಯನು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿತವಾಗಿಯೇ ಪೋರ್ಚುಗೀಸರು ಮತ್ತು ವಿಜಯನಗರ ಸಾಮ್ರಾಜ್ಯದ ನಡುವೆ ಸಾಮರಸ್ಯಪೂರ್ಣ ಸಂಪರ್ಕವೇರ್ಪಟ್ಟಿದ್ದು ಅವನ ಆಳ್ವಿಕೆಯಲ್ಲಿ ಸ್ನೇಹ ಸಂಬಂಧಗಳು ಮತ್ತಷ್ಟು ಗಟ್ಟಿಗೊಂಡವೆಂದು ಅಭಿಪ್ರಾಯಪಡಬಹುದು. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿಯು ಅತ್ಯಂತ ಕ್ಲಿಷ್ಟಕರ ಹಾಗೂ ಸವಾಲಿನಿಂದ ಕೂಡಿತ್ತು. ವಿಜಯನಗರವು ಆಂತರಿಕ ಮತ್ತು ಬಾಹ್ಯ ಶತ್ರುಗಳಿಂದ ಜರ್ಝರಿತವಾಗಿತ್ತು. ಇಂತಹ ಸಂದಿಗ್ಧ ಸಮಯದಲ್ಲಿ ಅಧಿಕಾರ ವಹಿಸಿಕೊಂಡ ಕೃಷ್ಣದೇವರಾಯನು ಬಹಳ ಎಚ್ಚರಿಕೆಯಿಂದ ತನ್ನ ರಾಜಕೀಯ ಹೆಜ್ಜೆಯನ್ನು ಇಡಬೇಕಾಗಿತ್ತು. ಇದೇ ಸಂದರ್ಭದಲ್ಲಿ ಪೋರ್ಚುಗೀಸ್ ಗೌರ್ನರ್ ಆಗಿ ಅಧಿಕಾರ ವಹಿಸಿಕೊಂಡ ಅಲ್ಬುಕರ್ಕ್ (ಕ್ರಿ.ಶ.1509) ಭಾರತದಲ್ಲಿ ಪೋರ್ಚುಗೀಸರ ಪರಮಾಧಿಕಾರವನ್ನು ಸ್ಥಾಪಿಸಬೇಕೆನ್ನುವ ಹಂಬಲವನ್ನಿಟ್ಟುಕೊಂಡಿದ್ದನು. ಹೀಗೆ ಕೃಷ್ಣದೇವರಾಯ ಮತ್ತು ಅಲ್ಬುಕರ್ಕ್‌ರವರು ಅಧಿಕಾರಕ್ಕೆ ಬಂದ ಆರಂಭದಲ್ಲಿಯೇ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತಲ್ಲದೆ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಬೇಕಾದ ಅವಶ್ಯಕತೆಯೂ ಇತ್ತು. ಪರಿಣಾಮವಾಗಿ ಶ್ರೀಕೃಷ್ಣದೇವರಾಯ ಮತ್ತು ಅಲ್ಬುಕರ್ಕ್‌ರವರು ಪರಸ್ಪರ ಸೌಹಾರ್ದಯುತ ಶಾಂತಿ ಒಡಂಬಡಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಬಂದೊದಗಿತ್ತು.

ಕೃಷ್ಣದೇವರಾಯನ ಆಳ್ವಿಕೆಯು ವಿಜಯನಗರ ಸಾಮ್ರಾಜ್ಯ ಮತ್ತು ಪೋರ್ಚುಗೀಸರ ನಡುವಣ ಸಂಬಂಧಗಳ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವದ ಕಾಲವಾಗಿತ್ತು. ರಾಯನು ಪೋರ್ಚುಗೀಸರೊಡನೆ ಸ್ನೇಹದಿಂದಿದ್ದು ವ್ಯಾಪಾರ ವಾಣಿಜ್ಯ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿಕೊಂಡು, ರಾಜ್ಯದ ಶತ್ರುಗಳನ್ನು ನಿಗ್ರಹಿಸಿ, ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಅನುಕೂಲಕರ ವಾತಾವರಣವನ್ನು ನಿರ್ಮಿಸಿಕೊಳ್ಳಲು ನಿರ್ಧರಿಸಿದನು. ಅದೇ ರೀತಿ ಪಶ್ಚಿಮ ಕರಾವಳಿಯಾದ್ಯಂತ ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿ ಗೋವಾವನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದ ಅಲ್ಬುಕರ್ಕ್ ಸಹ ರಾಯನ ಸ್ನೇಹವನ್ನು ಯಾಚಿಸುತ್ತಿದ್ದನು.

ರಾಯನ ಬೆಂಬಲದಿಂದ ಪ್ರೇರಣೆಗೊಂಡ ಅಲ್ಬುಕರ್ಕ್ ಗೋವಾವನ್ನು ಬಿಜಾಪುರ ಸುಲ್ತಾನನಿಂದ ಕ್ರಿ.ಶ.1510ರಲ್ಲಿ ವಶಪಡಿಸಿಕೊಂಡು ಅದನ್ನು ತಮ್ಮ ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳ ರಾಜಧಾನಿಯನ್ನಾಗಿ ಮಾಡಿಕೊಂಡನು. ಗೋವಾ ವಿಜಯನಗರ, ಬಿಜಾಪುರ ಸುಲ್ತಾನ ಹಾಗೂ ಪೋರ್ಚುಗೀಸರ ನಡುವಣ ಹೋರಾಟದ ಕೇಂದ್ರಬಿಂದುವಾಗಿ, ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳನ್ನೊಳಗೊಂಡ ಪ್ರತಿಷ್ಠೆಯ ಸಂಕೇತವಾಗಿತ್ತು. ಚಾಣಾಕ್ಷನಾದ ಅಲ್ಬುಕರ್ಕ್

ವಿಜಯನಗರ ಮತ್ತು ಬಿಜಾಪುರ ಸುಲ್ತಾನರ ನಡುವಿದ್ದ ರಾಜಕೀಯ ಶತ್ರುತ್ವವನ್ನು ತನ್ನ ಅನುಕೂಲಕರ ದಾಳವನ್ನಾಗಿ ಮಾಡಿಕೊಂಡು ಪಶ್ಚಿಮ ಕರಾವಳಿಯಲ್ಲಿ ಆಯಕಟ್ಟಿನ ಪ್ರದೇಶವಾಗಿದ್ದ ಗೋವಾವನ್ನು ಆಕ್ರಮಿಸಿಕೊಳ್ಳುವುದರಲ್ಲಿ ಯಶಸ್ವಿ ಯಾದನು. ಬಿ.ಎಸ್.ಶಾಸ್ತ್ರಿಯವರು ಅಭಿಪ್ರಾಯಪಟ್ಟಿರುವಂತೆ "16ನೇ ಶತಮಾನದ ಆರಂಭಕಾಲದ ಭಾರತದ ರಾಜಕೀಯ ಚದುರಂಗದಾಟದಲ್ಲಿ ಗೋವಾವನ್ನು ಬಿಜಾಪುರ ಸುಲ್ತಾನರಿಂದ ಪೋರ್ಚುಗೀಸರು ಗೆದ್ದುಕೊಳ್ಳುವುದಕ್ಕೆ ವಿಜಯನಗರ ಸಾಮ್ರಾಜ್ಯಾಧಿಪತಿಯಾದ ಕೃಷ್ಣದೇವರಾಯನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯಹಸ್ತ ನೀಡಿದ್ದು ಅತ್ಯಂತ ನಿರ್ಣಾಯಕ ಘಟನೆಯಾಗಿದೆ." ಇದಕ್ಕೆ ಕಾರಣವೇನೆಂದರೆ ಆದಿಲ್‌ಷಾಹಿಗಳ ನೇತೃತ್ವದಲ್ಲಿ ಗೋವಾ ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿ ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿತ್ತಲ್ಲದೆ ಪಶ್ಚಿಮ ಕರಾವಳಿಯಲ್ಲಿ ಅರಬ್ ವರ್ತಕರ ವ್ಯಾಪಾರ ವಹಿವಾಟುಗಳು ತೀವ್ರಗೊಂಡಿದ್ದವು. ಇದು ಸಹಜವಾಗಿ ವಿಜಯನಗರ ಸಾಮ್ರಾಜ್ಯದಲ್ಲಿದ್ದ ಎರಡು ಪ್ರಮುಖ ರೇವು ಪಟ್ಟಣಗಳಾದ ಹೊನ್ನಾವರ ಮತ್ತು ಭಟ್ಕಳಗಳ ಪ್ರಾಮುಖ್ಯತೆಯ ಕುಸಿತಕ್ಕೆ ಕಾರಣವಾಗಿತ್ತು. ವಾಣಿಜ್ಯ ವ್ಯಾಪಾರಗಳ ಹಿನ್ನಡೆಯನ್ನು ಸಹಿಸದ ವಿಜಯನಗರ ಸಾಮ್ರಾಟನು ರಾಜಕೀಯ ಕಾರಣಗಳಿಗಾಗಿ ಮಾತ್ರವಲ್ಲದೆ ತನ್ನ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಈ ಕ್ರಮಕೈಗೊಳ್ಳಬೇಕಾಯಿತು. ಆದುದರಿಂದ ರಾಯನು ಪಶ್ಚಿಮ ಕರಾವಳಿಯ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ತಿಮ್ಮಯ್ಯ ದಂಡನಾಯಕ ಹಾಗೂ ಗೇರುಸೊಪ್ಪದ ಸಾಮಂತನನ್ನು ಪೋರ್ಚುಗೀಸರ ಸಹಾಯಕ್ಕಾಗಿ ನಿಯೋಜಿಸಿದ್ದನು. ಏಕೆಂದರೆ ಈ ಹಿಂದೆ ಗೋವಾವನ್ನು ವಶಪಡಿಸಿ ಕೊಳ್ಳಲು ಹಲವು ಸಂದರ್ಭಗಳಲ್ಲಿ ಪ್ರಯತ್ನಿಸಿ ವಿಫಲಗೊಂಡಿದ್ದ ವಿಜಯನಗರ ಸೈನ್ಯವು ಪ್ರವರ್ಧಮಾನಕ್ಕೆ ಬರುತ್ತಿದ್ದ ಪೋರ್ಚುಗೀಸರಿಗೆ ನೆರವಾಗುವುದರ ಮೂಲಕ ಗೋವಾವನ್ನು ಬಿಜಾಪುರದ ಸುಲ್ತಾನರಿಂದ ವಶಪಡಿಸಿಕೊಳ್ಳುವುದರಲ್ಲಿ ಪ್ರಧಾನ ಪಾತ್ರವಹಿಸಿತು. ಆ ಮೂಲಕ ದಕ್ಷಿಣ ಭಾರತದ ರಾಜಕೀಯ ಕ್ಷೇತ್ರದಲ್ಲಿ ತನಗೆ ಪ್ರಬಲ ಎದುರಾಳಿಗಳಾಗಿದ್ದ ಬಿಜಾಪುರದ ಸುಲ್ತಾನರನ್ನು ಮಣಿಸುವುದು ವಿಜಯ ನಗರದರಸನ ಪ್ರಮುಖ ಗುರಿಯಾಗಿದ್ದರೆ, ಆಯಕಟ್ಟಿನ ಪ್ರಮುಖ ಬಂದರು ಪ್ರದೇಶವಾಗಿದ್ದ ಗೋವಾವನ್ನು ಗೆದ್ದುಕೊಂಡು ಅದನ್ನು ತನ್ನ ಸೈನಿಕ, ಆಡಳಿತ, ಧಾರ್ಮಿಕ ಹಾಗೂ ಇತರ ಉದ್ದೇಶಗಳ ಕೇಂದ್ರವನ್ನಾಗಿ ಮಾಡಿಕೊಳ್ಳುವುದು ಪೋರ್ಚುಗೀಸರ ಪ್ರಧಾನ ಉದ್ದೇಶವಾಗಿತ್ತು.

ಕೃಷ್ಣದೇವರಾಯ ಮತ್ತು ಅಲ್ಬುಕರ್ಕ್‌ರವರ ಸಂಬಂಧಗಳು ವೈಯಕ್ತಿಕ ಹಿತಾಸಕ್ತಿಗಳಿಂದ ಕೂಡಿರದೆ, ಎರಡು ಪ್ರಮುಖ ರಾಜಕೀಯ ಶಕ್ತಿಗಳ ಐಕ್ಯತೆಯ ಸಂಕೇತವಾಗಿತ್ತೆಂಬುದು ಡಾ॥ಕೆ.ಎಸ್.ಶಿವಣ್ಣನವರ ಅಭಿಪ್ರಾಯವಾಗಿದೆ. ಈ

ಸ್ವದೇಶಿ ಮತ್ತು ವಿದೇಶಿ ಶಕ್ತಿಗಳು ತಮ್ಮ ರಾಜಕೀಯ ಪರಮಾಧಿಕಾರದ ಸ್ಥಾಪನೆ ಹಾಗೂ ಆರ್ಥಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಅದರಲ್ಲೂ ಪ್ರಮುಖವಾಗಿ ತಮ್ಮ ಪ್ರತಿಸ್ಪರ್ಧಿಗಳಾಗಿದ್ದ ಬಿಜಾಪುರದ ಆದಿಲ್‌ಷಾಹಿ ಸುಲ್ತಾನರ ವಿರುದ್ಧ ಸೇಡು ತೀರಿಸಿಕೊಳ್ಳಲು ಪೋರ್ಚುಗೀಸರೊಂದಿಗೆ ತಮ್ಮ ರಾಜತಾಂತ್ರಿಕ ಸಂಬಂಧಗಳನ್ನು ಆಯಾಯ ಸಂದರ್ಭಗಳಿಗನುಗುಣವಾಗಿ ಉತ್ತಮಪಡಿಸಿಕೊಂಡರೆಂಬುದು ಇಲ್ಲಿ ಉಲ್ಲೇಖಾರ್ಹ. 'ಶತ್ರುವಿನ ಶತ್ರು ಎನಗೆ ಮಿತ್ರನೆಂಬ' ಉಕ್ತಿಯು ವಿಜಯನಗರ ಹಾಗೂ ಪೋರ್ಚುಗೀಸರ ನಡುವಣ ಸಂಬಂಧಗಳಿಗೆ ಬೆಸುಗೆಯಾಗಿತ್ತೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಏಕೆಂದರೆ ವಿಜಯನಗರ ಸಾಮ್ರಾಜ್ಯ ಹಾಗೂ ಪೋರ್ಚುಗೀಸರ ರಾಜಕೀಯ ಪರಮಾಧಿಕಾರದ ವಿಸ್ತರಣೆಗೆ ಬಿಜಾಪುರದ ಆದಿಲ್‌ಷಾಹಿಗಳು ಪ್ರಮುಖ ಅಡ್ಡಿಯಾಗಿದ್ದರು. ಮಾತ್ರವಲ್ಲದೆ ಪೋರ್ಚುಗೀಸರ ಪಶ್ಚಿಮ ಕರಾವಳಿಯ ವಾಣಿಜ್ಯ ವ್ಯಾಪಾರ ಚಟುವಟಿಕೆಗಳಿಗೆ ಅರಬ್ ವರ್ತಕರು ತೀವ್ರ ಪ್ರತಿಸ್ಪರ್ಧಿಗಳಾಗಿದ್ದರು. ಅರಬ್ಬಿ ಸಮುದ್ರದಿಂದ ಹಿಡಿದು ಪರ್ಷಿಯನ್ ಕೊಲ್ಲಿಯವರೆಗೂ ಸಮುದ್ರ ವ್ಯಾಪಾರದ ಮೇಲೆ ಏಕಸ್ವಾಮ್ಯ ಪಡೆದು ತಮ್ಮ ನಿಯಂತ್ರಣವನ್ನು ಸಾಧಿಸಿದ್ದ ಅರಬ್ ವರ್ತಕರನ್ನು ಅಡಗಿಸಬೇಕೆಂಬುದು ಅಲ್ಬುಕರ್ಕ್‌ನ ಪ್ರಮುಖ ಗುರಿಯಾಗಿದ್ದರೆ, ತನ್ನ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಸೈನ್ಯ ಸಂಘಟನೆಗೆ ಅವಶ್ಯಕವಾಗಿ ಬೇಕಾಗಿದ್ದ ಉತ್ಕೃಷ್ಟ ದರ್ಜೆಯ ಕುದುರೆಗಳನ್ನು ಪರ್ಷಿಯಾ, ಅರೇಬೀಯಾ, ಸಿರಿಯಾ, ತುರ್ಕಿ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆಯು ರಾಯನಿಗಿತ್ತು. ಅರಬ್ ವರ್ತಕರು ಬಿಜಾಪುರ ಸುಲ್ತಾನರೊಂದಿಗೆ ಹೊಂದಿದ್ದ ಉತ್ತಮ ಒಡನಾಟದಿಂದಾಗಿ ವಿಜಯನಗರದರಸರಿಗೆ ಅವಶ್ಯಕವಾಗಿ ಬೇಕಾಗಿದ್ದ ಯುದ್ಧ ಕುದುರೆಗಳು ಮತ್ತು ಶಸ್ತ್ರಾಸ್ತ್ರಗಳ ಪೂರೈಕೆಗೆ ಭಾರಿ ತೊಂದರೆಯಾಗಿತ್ತು. ಈ ರಾಜಕೀಯ ಹಾಗೂ ಆರ್ಥಿಕ ಕಾರಣಗಳ ಹಿನ್ನೆಲೆಯಲ್ಲಿ ಸಮಾನ ಮನಸ್ಕರಾಗಿದ್ದ ರಾಯ ಮತ್ತು ಅಲ್ಬುಕರ್ಕ್‌ರವರ ನಡುವೆ ರಾಜತಾಂತ್ರಿಕ ಸಂಬಂಧಗಳು ಏರ್ಪಟ್ಟವು. ಅದಕ್ಕಾಗಿ ಪರಸ್ಪರ ರಾಯಭಾರ ನಿಯೋಗಗಳನ್ನು ಕಳುಹಿಸುವ ಮತ್ತು ಸ್ವೀಕರಿಸುವ ಪ್ರಕ್ರಿಯೆಗಳು ಯಶಸ್ವಿಯಾಗಿ ನಡೆದವು. ಪೋರ್ಚುಗೀಸರ ರಾಯಭಾರಿಗಳಾಗಿ ಫ್ರಾನ್ಸಿಸ್ಕನ್ ಫ್ರೈರ್ ಲೂಯಿಸ್ ಡಿ ಸಾಲ್ವಡರ್ ಮತ್ತು ಗಾಸ್ಪರ್ ಚನೋಕಾ ಮೊದಲಾದವರು ರಾಯನ ಆಸ್ಥಾನಕ್ಕೆ ಭೇಟಿ ಕೊಟ್ಟರೆ ರಾಯನ ರಾಯಭಾರಿಯಾಗಿ ರಾಧಲಿಂಗಮ್ ಚೆಟ್ಟಿ ಪೋರ್ಚುಗೀಸರ ಆಸ್ಥಾನಕ್ಕೆ ಭೇಟಿ ನೀಡಿ ಯಶಸ್ವಿಯಾದರು.

ಹೀಗೆ ಕೃಷ್ಣದೇವರಾಯ ಹಾಗೂ ಅಲ್ಬುಕರ್ಕ್‌ರವರ ರಾಜನೀತಿ, ವ್ಯವಹಾರ ಚತುರತೆ, ಸಮಯಪ್ರಜ್ಞೆ ಮತ್ತು ದೂರದೃಷ್ಟಿಯ ಪ್ರಯತ್ನಗಳಿಂದಾಗಿ ವಿಜಯನಗರ ಹಾಗೂ ಪೋರ್ಚುಗೀಸರ ನಡುವೆ ಉತ್ತಮ ರಾಜತಾಂತ್ರಿಕ ಮತ್ತು ವಾಣಿಜ್ಯ

ಸಂಬಂಧಗಳು ಏರ್ಪಟ್ಟವು. ಪೋರ್ಚುಗಲ್ ದೇಶದಿಂದ ಪೇಯಸ್ ಮತ್ತು ಬಾರ್ಬೋಸಾ ಮುಂತಾದ ವರ್ತಕ ರಾಯಭಾರಿಗಳು ರಾಯನ ಆಸ್ಥಾನಕ್ಕೆ ಭೇಟಿ ನೀಡುವುದರ ಮೂಲಕ ಈಗಾಗಲೇ ಅಸ್ತಿತ್ವದಲ್ಲಿದ್ದ ಸಂಬಂಧಗಳನ್ನು ಮತ್ತಷ್ಟು ದೃಢಪಡಿಸಿದರು. ರಾಯನ ಆಸ್ಥಾನದಲ್ಲಿದ್ದ ಪೋರ್ಚುಗೀಸ್ ಸೈನ್ಯಾಧಿಕಾರಿಗಳಾದ ಆಂಟೋನಿಯೊ ಡಿಸೋಜ ಮತ್ತು ಜೋಹೋ ಟಿಕ್ಸೀರಿಯಾ ಮೊದಲಾದವರು ರಾಯನ ಸೈನಿಕ ದಿಗ್ವಿಜಯಗಳಿಗೆ ಅಪೂರ್ವ ಕೊಡುಗೆ ನೀಡಿದ್ದರು. ಕ್ರಿಸ್ಟೋವ್ ಡಿ ಫಿಗೀರೆಡೊ, ಜೊಹೊದೆಲ್ಲಾ ಪೊನ್ತೆ ಮೊದಲಾದ ಪೋರ್ಚುಗೀಸ್ ಅಧಿಕಾರಿಗಳು, ಇಂಜಿನೀಯರ್‌ಗಳು ಸಹ ವಿಜಯನಗರದ ಆಸ್ಥಾನದಲ್ಲಿದ್ದುಕೊಂಡು ನೀರಾವರಿ ಮುಂತಾದ ಅನೇಕ ಜನೋಪಯೋಗಿ ಸೇವಾಕಾರ್ಯಕ್ರಮಗಳ ಅನುಷ್ಠಾನಕ್ಕೆ ನೆರವಾಗಿದ್ದರು. ಸೈನಿಕರು, ವರ್ತಕರು, ಕಲಾವಿದರು ಮುಂತಾದವರು ವಿಜಯನಗರದ ಅಭಿವೃದ್ಧಿಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಂಡರು. ಅದೇ ರೀತಿ ಕೃಷ್ಣದೇವರಾಯನು ಸಹ ಪೋರ್ಚುಗೀಸರಿಗೆ ಹಲವು ರೀತಿಯಲ್ಲಿ ಸ್ಪಂದಿಸಿ ಅವರ ವ್ಯಾಪಾರ ವಾಣಿಜ್ಯೋದ್ಯಮಗಳ ಅಭಿವೃದ್ಧಿಗೆ ಸಹಕರಿಸಿದನಲ್ಲದೆ, ಕ್ರೈಸ್ತ ಧರ್ಮದ ಪ್ರಚಾರ, ಚರ್ಚುಗಳ ನಿರ್ಮಾಣ, ಕ್ರೈಸ್ತ ಸೇವಾ ಸಂಘಸಂಸ್ಥೆಗಳ ಸ್ಥಾಪನೆ, ಮೊದಲಾದ ಕಾರ್ಯಗಳಿಗೆ ಎಲ್ಲಾ ರೀತಿಯಲ್ಲೂ ಸಹಾಯ ನೀಡಿದನು. ಒಟ್ಟಾರೆ ಕೃಷ್ಣದೇವರಾಯನ ಆಳ್ವಿಕೆಯು ವಿಜಯನಗರ ಸಾಮ್ರಾಜ್ಯ ಹಾಗೂ ಪೋರ್ಚುಗಲ್ ದೇಶಗಳ ನಡುವಣ ರಾಜತಾಂತ್ರಿಕ ಮತ್ತು ವಾಣಿಜ್ಯ ಸಂಬಂಧಗಳ ಬೆಳವಣಿಗೆಗಳಿಗೆ ಎಲ್ಲಾ ರೀತಿಯಲ್ಲೂ ಪೂರಕವಾಗಿತ್ತೆಂದು ಅಭಿಪ್ರಾಯಪಡಬಹುದು. ಈ ನಿಟ್ಟಿನಲ್ಲಿ ಕೃಷ್ಣದೇವರಾಯ ಮತ್ತು ಅಲ್ಬುಕರ್ಕ್‌ರವರು ವಹಿಸಿದ ಪಾತ್ರ ಅತ್ಯಂತ ಮಹತ್ವವಾದುದೆಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಆಧಾರ ಗ್ರಂಥಗಳು

1. ಎಡ್ವರ್ಡ್‌ಗ್ರೇ (ಸಂ): *ದಿ ಟ್ರ್ಯಾವಲ್ಸ್ ಆಫ್ ಪೀತ್ರೋದೆಲ್ಲಾವಲ್ಲೆ ಇನ್ ಇಂಡಿಯಾ,* 1 & 2, ನ್ಯೂಡೆಲ್ಲಿ, 1991.
2. ಅಫ್ಜಲ್ ಅಹಮ್ಮದ್: *ಇಂಡೋ ಪೋರ್ಚುಗೀಸ್ ಟ್ರೇಡ್ ಇನ್ ಸವೇಂಟೀನ್ತ್ ಸೆಂಚುರಿ,* ನ್ಯೂಡೆಲ್ಲಿ, 1991.
3. ಚಿಟ್ನೀಸ್ ಕೆ.ಎನ್: ಕೆಳದಿ ಪಾಲಿಟಿ, ಧಾರವಾಡ, 1977.
4. ಅಪೋನ್ಸೊ ಜಾನ್: *ಇಂಡೋ ಪೋರ್ಚುಗೀಸ್ ಹಿಸ್ಟರಿ ಸೋರ್ಸಸ್ ಅಂಡ್ ಪ್ರಾಬ್ಲಮ್ಸ್,* ಬಾಂಬೆ, 1981.
5. ಗುರುರಾಜಭಟ್ಟ: *ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್,* ಉಡುಪಿ, 1963.

6. ಕೃಷ್ಣಸ್ವಾಮಿ ಐಯ್ಯಂಗಾರ್: *ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ*, ಮದ್ರಾಸ್, 1919.

7. ಮಹಾಲಿಂಗಮ್ ಟಿ.ವಿ: *ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ*, ಮದ್ರಾಸ್, 1940.

೧೬. ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರುವ ಶ್ರೀ ವೀರನಾರಾಯಣ ದೇಗುಲ

ಶಕುಂತಲಾ ಸಿಂಧೂರ

ಗದಗದ ಶ್ರೀ ವೀರನಾರಾಯಣ ದೇವಸ್ಥಾನವು ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರದ ಶಿಲ್ಪಗಳ ಸುಂದರ ಸಂಗಮವಾಗಿದೆ. ಗೋಪುರವು ವಿಜಯನಗರ ಶಿಲ್ಪ ಗರುಡಗಂಬ, ರಂಗಮಂಟಪಗಳು, ಹೊಯ್ಸಳ ಶಿಲ್ಪ, ಗರ್ಭಗುಡಿ ಮತ್ತು ಅದರ ಮೇಲಿನ ಗೋಪುರಗಳು ಚಾಲುಕ್ಯ ಶಿಲ್ಪಗಳನ್ನು ತೋರಿಸುತ್ತವೆ. ದೇವಸ್ಥಾನದ ಭವ್ಯ ಮಹಾದ್ವಾರ ಪೂರ್ವಾಭಿಮುಖವಾಗಿದೆ.

ಗರುಡಗಂಬದ ಹಿಂದಿನ ಓಕಳಿ ಬಾವಿಯ ಹತ್ತಿರ ಶ್ರೀ ವೈಷ್ಣವರ ತ್ರಿಪುಂಡ್ರಗಳಿವೆ. ಇಲ್ಲಿಯೇ 'ಕುಮಾರವ್ಯಾಸ ಕಂಬ' ದೇವರಿಗೆ ಸಮ್ಮುಖವಾಗಿ ನಮ್ಮ ಎಡಗಡೆಗೆ ಇರುವ 2ನೇ ಕಂಬ ಇದೆ. ಕವಿ ಕುಮಾರವ್ಯಾಸನು ಇಲ್ಲಿಯೇ ಕುಳಿತು 'ಕರ್ಣಾಟಕ ಭಾರತ ಕಥಾಮಂಜರಿ' ಕೃತಿಯನ್ನು ಬರೆದನೆಂಬ ಪ್ರತೀತಿ ಇದೆ. ಇಲ್ಲಿ ಶ್ರೀ ವೀರನಾರಾಯಣ ಸ್ವಾಮಿಯ ಅಪೂರ್ವ ವಿಗ್ರಹವಿದೆ. ಇದು ನೀಲಮೇಘಶ್ಯಾಮ ವರ್ಣದ ಸಾಲಿಗ್ರಾಮ ಶಿಲೆಯಲ್ಲಿದೆ. ಕಿರೀಟ, ಕರ್ಣಕುಂಡಲ, ಶಂಖ, ಚಕ್ರ, ಗದಾ, ಪದ್ಮ ಅಭಯಹಸ್ತಗಳಿಂದ ಭೂಷಿತನಾದ ಸ್ವಾಮಿಯು ಶಿಲೆಯಲ್ಲಿಯೇ ವೀರಗಚ್ಚೆ ಹಾಕಿ ನಿಂತಿದ್ದಾನೆ. ವಿಶಾಲ ವಕ್ಷಸ್ಥಲದಲ್ಲಿ ಲಕ್ಷ್ಮಿ, ಹಿಂದಿನ ಪೀಠ ಪ್ರಭಾವಳಿಯಲ್ಲಿ ದಶಾವತಾರ, ಎಡಬಲಗಳಲ್ಲಿ ಲಕ್ಷ್ಮೀ ಗರುಡರು ನಿಂತಿದ್ದಾರೆ.

ಸ್ವಾಮಿಯ ದರ್ಶನ ಮಾಡಿಕೊಂಡು ದಕ್ಷಿಣ ದ್ವಾರದಿಂದ ಹೊರಗೆ ಬಂದರೆ ವಿಶಾಲವಾದ ಕಟ್ಟೆ ಇದೆ. ಇದರ ಬುಡದಲ್ಲಿ ಒಂದು ಗುಹೆ ಇದೆ ಎಂದು ಹೇಳುತ್ತಾರೆ. 1975ರಲ್ಲಿ ಇದನ್ನು ಅಗೆಯುವ ಪ್ರಯತ್ನ ನಡೆಯಿತು. ಇಲ್ಲಿಯೇ ಚಾಲುಕ್ಯ ಮಾದರಿಯ ಲಕ್ಷ್ಮೀನೃಸಿಂಹ ದೇವಸ್ಥಾನವಿದೆ. ಇದು ವೀರನಾರಾಯಣ ಮೂರ್ತಿಗಿಂತಲೂ ಮೊದಲೇ ಸ್ಥಾಪಿತವಾಗಿರಬಹುದೆಂದು ತಿಳಿಯಲಾಗುತ್ತದೆ. ಶ್ರೀ ವೀರನಾರಾಯಣನ ಅರ್ಚಕರೇ ನೃಸಿಂಹ ದೇವರನ್ನು ಪೂಜಿಸುತ್ತಾರೆ. ದಿನಾಲೂ ವೀರನಾರಾಯಣ ದೇವರಿಗಿಂತ ಮೊದಲು ನೃಸಿಂಹದೇವರಿಗೇ ಅಭಿಷೇಕ, ಪೂಜೆ ನೈವೇದ್ಯಗಳು ನಡೆಯುವದನ್ನು ನೋಡಿದರೆ ಈ ಮಾತು ಸತ್ಯವೆಂದು ತೋರುತ್ತದೆ.

ಈ ಲಕ್ಷ್ಮೀನೃಸಿಂಹ ದೇವಸ್ಥಾನದ ಎಡಗಡೆಗೆ ಇರುವ ಬಾವಿಗೆ ನೃಸಿಂಹ ತೀರ್ಥವೆಂದೇ ಕರೆಯಲಾಗಿದೆ. ಕೃತುಪುರ ಮಹಾತ್ಮೆಯಲ್ಲೂ ಈ ನೃಸಿಂಹ ದೇವರ ಮಹಿಮೆ ವರ್ಣಿತವಾಗಿದೆ. ಅದರಲ್ಲಿ ಶ್ರೀ ನೃಸಿಂಹ ಅಷ್ಟೋತ್ತರ ಸ್ತೋತ್ರವೆಂಬ ಸ್ತೋತ್ರವು 108 ಶ್ಲೋಕಗಳಲ್ಲಿದೆ.

ವಿಧರ್ಮೀಯರ ಹಾವಳಿಗಳಿಂದಾಗಿ ಈ ದೇವಸ್ಥಾನವು ಹಾಳಾಗಿ ಈ ಸಾವಿರ ವರುಷಗಳಲ್ಲಿ 3–4 ಸಲ ಜೀರ್ಣೋದ್ಧಾರವಾಗಿರಬಹುದೆಂದು ಅನ್ನಿಸುತ್ತದೆ. ವಿಧರ್ಮೀಯರ ಹಾವಳಿ ಆಗ ಸಾಮಾನ್ಯವಾಗಿತ್ತು. ಆ ಕಾಲದಲ್ಲಿ ಈ ಹಾವಳಿಯಿಂದ ಶ್ರೀ ವೀರನಾರಾಯಣನಿರುವ ಗರ್ಭಗುಡಿಯನ್ನು ರಕ್ಷಿಸಲು ಅದರ ಪ್ರವೇಶದ್ವಾರಕ್ಕೆ ಗೋಡೆ ಕಟ್ಟಿ, ಬೇರೆ ಒಂದು ಸಣ್ಣ ನಾರಾಯಣ ದೇವರ ಮೂರ್ತಿಯನ್ನು ಗುಡಿಯ ಬೇರೆ ಜಾಗದಲ್ಲಿಟ್ಟು ಆಭರಣಾದಿಗಳನ್ನು ತೊಡಿಸಿದಾಗ ಆ ದಾಳಿಕಾರರು ಅವುಗಳನ್ನು ದೋಚಿಕೊಂಡು ಹೋಗಿರಬಹುದು ಎಂದು ಅನ್ನಿಸುತ್ತದೆ.

ಹೀಗೆ ಪ್ರತಿಷ್ಠಾಪಿಸಿದ ಬೇರೊಂದು ಚಿಕ್ಕ ನಾರಾಯಣ ದೇವರ ಮೂರ್ತಿಗೆ 'ಹಾವಳಿ ನಾರಾಯಣ' ಎಂದು ಹೆಸರಿಟ್ಟರು. ಗಝನಿ ಮಹಮ್ಮದನು ಭಾರತದ ಮೇಲೆ ದಾಳಿ ಮಾಡಿ ಹಿಂದೂ ದೇವಾಲಯಗಳನ್ನು ಧ್ವಂಸ ಮಾಡಿ, ಅಲ್ಲಿಯ ಬೆಳ್ಳಿ–ಬಂಗಾರ ಆಭರಣಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಗದಗದಲ್ಲಿಯೂ ವೀರನಾರಾಯಣ ಮೂರ್ತಿಯನ್ನು ರಕ್ಷಿಸಲು ಗರ್ಭಗುಡಿಯ ಸುತ್ತಲೂ ಗೋಡೆ ಕಟ್ಟಿ, ಆ ಗೋಡೆಯ ಮುಖದ್ವಾರದಲ್ಲಿಯೇ ಮತ್ತೊಂದು ವೀರನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜೆ ಮಾಡಲಾಗುತ್ತಿತ್ತು. ಇದು ಈಗಲೂ ವೀರನಾರಾಯಣ ದೇವಸ್ಥಾನದಲ್ಲಿದೆ. 'ಹಾವಳಿ ನಾರಾಯಣ' ಎಂದು ಶ್ರಾವಣ ಮಾಸದಲ್ಲಿ ಇದು ಈಗಲೂ ಪೂಜೆಗೊಳ್ಳುತ್ತಲಿದೆ.

ಕ್ರಿ. ಶ. 1500ರ ಸುಮಾರಿಗೆ ಅಂದರೆ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಸಮಗ್ರ ದೇವಸ್ಥಾನವು ಜೀರ್ಣೋದ್ಧಾರಗೊಂಡಿತು. ನಂತರ 1850 ಹಾಗೂ 1962ನೇ ಇಸ್ವಿಗಳಲ್ಲಿ ಗುಡಿ ಹಾಗೂ ಗೋಪುರಗಳನ್ನು ಮತ್ತೆ ಜೀರ್ಣೋದ್ಧಾರ ಮಾಡಲಾಯಿತು.

ಈ ಊರಲ್ಲಿ ಇದ್ದ 22 ದೇವಸ್ಥಾನಗಳ ವ್ಯವಸ್ಥೆ ನೋಡಿಕೊಳ್ಳಲು 1850ರಲ್ಲಿ ಬ್ರಿಟಿಷ್ ಸರ್ಕಾರದವರು ಪ್ರಪ್ರಥಮವಾಗಿ ಪಂಚಕಮಿಟಿ ನೇಮಿಸಿದರು. ಜುಮ್ಮಾ ಮಸೀದೆಯ ಆಡಳಿತೆಯನ್ನು ಸಹ ಈ ಪಂಚಕಮಿಟಿಗೆ ವಹಿಸಿಕೊಡಲಾಗಿತ್ತು.

ವಿಜಯನಗರದ ಕಾಲಕ್ಕೆ ಅಂದರೆ 1539ರಲ್ಲಿ ಗದಗ ಬೆಟಗೇರಿಯು ಪಂಪಾ ಹಸ್ತಿನಾವತಿ ಪ್ರಾಂತಕ್ಕೆ ಸೇರಿತ್ತು. ಆಗ ಸಮ್ಮಣ್ಣಾಚಾರ್ಯನೆಂಬ ಶಾನುಭೋಗ ಇದ್ದನು. ವಿಜಯನಗರದ ಅರಸರು ಶ್ರೀ ವೀರನಾರಾಯಣನಿಗೆ 64 ಹಳ್ಳಿಗಳನ್ನು ಇನಾಮಾಗಿ ಕೊಟ್ಟಿದ್ದರು.

ಶ್ರೀಕೃಷ್ಣದೇವರಾಯ ಹಾಗೂ ಅಚ್ಯುತರಾಯರು ಕೂಡ ವೀರನಾರಾಯಣ ದೇವಸ್ಥಾನಕ್ಕೆ ಅನೇಕ ದತ್ತಿಗಳನ್ನು ಕೊಟ್ಟ ಶಿಲಾಶಾಸನಗಳಿವೆ. 26-8-1539ರ ಅಚ್ಯುತರಾಯನ ಕಾಲದ ಶಾಸನ ಇನ್ನೂ ಗುಡಿಯ ಆವರಣದಲ್ಲಿ ಇದೆ. ಇದರಲ್ಲಿಯ ಅಕ್ಷರಗಳನ್ನು ಸ್ಪಷ್ಟವಾಗಿ ಓದಬಹುದು.

ಶ್ರೀ ವೀರನಾರಾಯಣ ದೇವಾಲಯಕ್ಕೆ ಆಯತಾಕಾರದ ಪ್ರಾಕಾರವಿದೆ. ಇದು ಮೊದಲಿನಿಂದಲೂ ಇದ್ದ ಪ್ರಾಕಾರವಲ್ಲ. ಶಾಸನಗಳು ಹಾಗೂ ಇತಿಹಾಸವನ್ನು ಅವಲೋಕಿಸಿದರೆ ಈ ದೇವಾಲಯವು 3-4 ಸಲ ಜೀರ್ಣೋದ್ಧಾರಗೊಂಡಿದೆ ಎಂದು ಕಾಣುತ್ತದೆ. ಜೀರ್ಣೋದ್ಧಾರ ಮಾಡುವಾಗಲೆಲ್ಲ ಹಳೆಯ ಕಲ್ಲುಗಳನ್ನು ಗುಡಿಯ ಪ್ರಾಕಾರಕ್ಕೆ ಹಾಕಿ ಕಟ್ಟಿದಂತಿದೆ.

12ನೆಯ ಶತಮಾನದಲ್ಲಿ ಒಂದು ಸಲ, 14-15ನೆಯ ಶತಮಾನದಲ್ಲಿ ಇನ್ನೊಂದು ಸಲ ಅಂದರೆ ವಿಜಯನಗರ ಕಾಲದಲ್ಲಿ, 19ನೆಯ ಶತಮಾನದಲ್ಲಿ (1850ರಲ್ಲಿ) ಹಾಗೂ 1962ರಲ್ಲಿ ನಾಲ್ಕನೆಯ ಬಾರಿ ಕೇವಲ ಗೋಪುರ ಮಾತ್ರವಷ್ಟೆ ಈ ಶ್ರೀ ವೀರನಾರಾಯಣ ದೇವಸ್ಥಾನವು ಜೀರ್ಣೋದ್ಧಾರಗೊಂಡಿದೆ. ಹೀಗಾಗಿ ಈ ಮಂದಿರವು ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ಆಧುನಿಕ ಶೈಲಿಗಳ ಸಂಗಮವಾಗಿದೆ. ಈ ದೇವಸ್ಥಾನದ ವಾಸ್ತು ವೈಶಿಷ್ಟ್ಯಮಯವಾಗಿದೆ.

ದೇವಾಲಯವು ಸುಮಾರು 300X200 ಅಡಿ ವಿಸ್ತೀರ್ಣಹೊಂದಿದೆ. ದೇವಾಲಯಕ್ಕೆ ಸುತ್ತಲೂ ಆಯತಾಕಾರದ ಪ್ರಾಕಾರವಿದೆ. ಪೂರ್ವಕ್ಕೆ ಮಹಾದ್ವಾರ ವಿದೆ. ಈ ಗೋಪುರದ ಮಹಾದ್ವಾರದ ಹೊರಬದಿಯ ಗೋಡೆಯ ಮೇಲೆ ಈ ಚಿತ್ರಗಳಿವೆ. ವಿಷ್ಣು ಚಕ್ರ, ದ್ವಿನಾಮ ಶಂಖ, ದ್ವಾರಪಾಲ, ವೇಣುಗೋಪಾಲಕೃಷ್ಣ, ಮತ್ಸ್ಯ ವಿಷ್ಣು, ಬ್ರಹ್ಮ, ಭೂವರಾಹ (ಬಾಗಿಲು ಚೌಕಟ್ಟಿನ ಮೇಲೆ), ಉಗ್ರನೃಸಿಂಹ, ಲಕ್ಷ್ಮೀನೃಸಿಂಹ, ವಾಮನ-ಬಲಿಚಕ್ರವರ್ತಿ, ತ್ರಿವಿಕ್ರಮ, ರಾಮ ಸೀತೆ, ಲಕ್ಷ್ಮಣ, ವರಾಹ, ಚಕ್ರ, ಸೂರ್ಯ, ಬ್ರಹ್ಮ, ವಿಷ್ಣು, ನೃಸಿಂಹ, ಋಷಿ. ಮಹಾದ್ವಾರದ ಒಳಬದಿಯ ಗೋಡೆಯಲ್ಲಿ ಗಜೇಂದ್ರಮೋಕ್ಷ, ಹನುಮಂತನ ಸಮುದ್ರಲಂಘನ, ವಿಷ್ಣು, ಕಾಳಿಂಗ ಮರ್ದನ, ಹನುಮಂತನಿಗೆ ರಾಮನು ಮುದ್ರಿಕೆಗಳನ್ನು ಕೊಡುತ್ತಿರುವುದು, ಅಶೋಕವನದಲ್ಲಿದ್ದ ಸೀತೆಗೆ ಹನುಮಂತ ಮುದ್ರೆಯುಂಗುರವನ್ನು ಕೊಡುತ್ತಿರುವುದು, ರಾಕ್ಷಸರೊಡನೆ ಹೊಡೆದಾಡುತ್ತಿರುವ ಹನುಮಂತ, ಪೂತನಿಸಂಹಾರ, ಅಂಬೆಗಾಲು ಕೃಷ್ಣ, ಧೇನುಕಾಸುರಮರ್ದನ, ಕೃಷ್ಣನಿಂದ ಮದಗಜಸಂಹಾರ, ಖರಾಸುರ ಮರ್ದನ, ಚಾಣೂರ ಮರ್ದನ, ಕಂಸನನ್ನು ಕೊಲ್ಲುತ್ತಿರುವುದು, ಗೋವರ್ಧನಧಾರಿ ಕೃಷ್ಣ, ವೃಕಾಸುರ ಮರ್ದನ, ಕೃಷ್ಣನು ಕುದುರೆರೂಪ ತಾಳಿ ಕೇಶಿ ರಾಕ್ಷಸನನ್ನು ಕೊಲ್ಲುತ್ತಿರು ವುದು- ಈ ಎಲ್ಲಚಿತ್ರಗಳು ಶುದ್ಧ ವೈಷ್ಣವ ಹಾಗೂ ಶ್ರೀವೈಷ್ಣವ ಸಂಪ್ರದಾಯಕ್ಕೆ

ಸಂಬಂಧಿಸಿವೆ. ಇವೆಲ್ಲವುಗಳು ಉಬ್ಬುಚಿತ್ರಗಳಾಗಿರುತ್ತದೆ. ದಕ್ಷಿಣ ಬದಿಯ ಪ್ರಾಕಾರದ ಗೋಡೆಯಲ್ಲಿ ಮತ್ತೊಂದು ಪ್ರವೇಶದ್ವಾರವಿದೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಹಾಗೂ ಸಭಾಗೃಹಗಳಿವೆ. ಗರ್ಭಗೃಹದ ಮೇಲೆ ಅಡ್ಡಪಟ್ಟಿಗಳಿಂದ ಕೂಡಿದ ಶಿಖರವಿದ್ದು ಅದು ಕಲಶಗಳಿಂದ ಕೂಡಿದೆ.

ಪೂರ್ವದ ಬದಿಯಲ್ಲಿ ಅಂತರಾಳದ ಮೇಲೆ ಶಿಖರದಿಂದ ಮುಂದೆ ಚಾಚಿದ 'ಶುಕನಾಸಿ' ಎಂಬ ಭಾಗವಿದೆ. ಇದನ್ನು 'ಕದಂಬ ನಾಗರಶೈಲಿ' ಎನ್ನಲಾಗಿದೆ. ಗರ್ಭಗೃಹದ ಬಾಗಿಲು ಚೌಕಟ್ಟಿನ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ಅಂತರಾಳದ ಬಾಗಿಲ ಚೌಕಟ್ಟಿನ ಎಡಬಲಗಳಲ್ಲಿ ದೇವರ ದರ್ಶನಕ್ಕಾಗಿ ಜಾಲಾಂಧ್ರ ಇದೆ ಹಾಗೂ ಜಯ, ವಿಜಯ ದ್ವಾರಪಾಲಕರ ಚಿತ್ರಗಳಿವೆ. ಸಭಾಮಂಟಪವಿದೆ. ಬಾಗಿಲು ಚೌಕಟ್ಟಿನ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರವಿದೆ.

ಈ ಶಿಲ್ಪಕಲೆಯನ್ನು ನಿರೀಕ್ಷಿಸಿದರೆ ಈ ಗುಡಿಯು ಕ್ರಿ. ಶ. 11–12ನೆ ಶತಮಾನಕ್ಕೆ ಸಂಬಂಧಿಸಿದ್ದೆಂದು ಹೇಳಬಹುದಾಗಿದೆ ಎಂದು ಖ್ಯಾತ ಇತಿಹಾಸ ಸಂಶೋಧಕ ಡಾ. ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.

ವಿಜಯನಗರ ಕಾಲದಲ್ಲಿ ಈ ದೇವಾಲಯದ ಜೀರ್ಣೋದ್ಧಾರವಾದ ನಂತರ ಸಭಾಮಂಟಪದೊಳಗೆ ಎಡಬದಿಗೆ ಕಟ್ಟಿದ ಕೋಣೆ ಇದೆ. ಸಭಾಮಂಟಪದ ಮುಂಭಾಗದಲ್ಲಿ ಇನ್ನೂ ಹೆಚ್ಚು ಅಗಲವಾದ ವಿಶಾಲವಾದ ಮಂಟಪವನ್ನು ಕಟ್ಟಲಾಗಿದೆ. ಗರ್ಭಗುಡಿಯಲ್ಲಿ ಚೆಲುವಾದ ಶ್ರೀ ವೀರನಾರಾಯಣನ ಪ್ರತಿಮೆ ಇದೆ. ಇದು ಐದೂವರೆ ಅಡಿ ಎತ್ತರವಿದ್ದು ಪ್ರಭಾವಳಿಸಹಿತ ಎಂಟು ಅಡಿ ಎತ್ತರವಿರುತ್ತದೆ. ಪ್ರಭಾವಳಿಯಲ್ಲಿ ದಶಾವತಾರಗಳ ಕೆತ್ತನೆಯ ಚಿತ್ರಗಳಿರುತ್ತವೆ.

ಶ್ರೀ ವೀರನಾರಾಯಣನು ಯೋಗಮುದ್ರೆಯಲ್ಲಿ ನಿಂತಿರುತ್ತಾನೆ. ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ದುಂಡಾಕಾರದ ವಸ್ತುವಿದೆ. ಪಾದಗಳ ನಡುವೆ ಸಾಲಿಗ್ರಾಮವಿದೆ. ಬಲಗಡೆಗೆ ಗರುಡ ಮತ್ತು ಎಡಗಡೆಗೆ ಮಹಾಲಕ್ಷ್ಮೀ ಮೂರ್ತಿಗಳಿವೆ. ಗರ್ಭಗುಡಿಯ ಮೇಲಿರುವ ಕಳಶವು ನಕ್ಷತ್ರದೋಪಾದಿಯಲ್ಲಿದೆ. ಇದರ ಎತ್ತರ ಸುಮಾರು 20 ಅಡಿಗಳು. ದೇವಾಲಯದ ಮುಖಮಂಟಪದಲ್ಲಿ 20 ಕಂಬಗಳಿವೆ. ಈ ಕಂಬಗಳಲ್ಲಿ ಮಧ್ಯದ ನಾಲ್ಕು ಕಂಬಗಳಲ್ಲಿ ನಾಲ್ಕೂ ಬದಿಗಳ ಕೆಳಭಾಗ, ಮಧ್ಯಭಾಗ ಹಾಗೂ ಮೇಲ್ಭಾಗಗಳಲ್ಲಿ ವಿವಿಧ ಮೂರ್ತಿಶಿಲ್ಪದ ಉಬ್ಬುಚಿತ್ರಗಳಿರುತ್ತದೆ. ಅವು:

1. ಕೆಳಗಿನಿಂದ ಮೇಲಕ್ಕೆ (ಮುಂಬದಿಯ ಚಿತ್ರಗಳು)– ಮಾರುತಿ, ಸರ್ಪ ಹಿಡಿದ ಗರುಡ, ವಿಷ್ಣು, ಪುರುಷ, ಕೊಡೆ, ಕಮಂಡಲು ಹಿಡಿದ ಸಾಧು, ಆನೆ, ಆಮೆ, ಕುಳಿತ ಸಿಂಹ.

2. ಹಿಂಬದಿಯ ಚಿತ್ರಗಳು: ರಾಜಪುರುಷ, ವಿಷ್ಣು, ಸ್ತ್ರೀ, ವೇಣುಗೋಪಾಲ ಕೃಷ್ಣ, ಕಾಳಿಂಗಮರ್ದನ, ಪುರುಷ, ಶಂಖ, ಸಿಂಹ, ಇದೇ ರೀತಿ ಉಳಿದ ಕಂಬಗಳ ಚಿತ್ರಗಳೂ ಹೀಗಿರುತ್ತವೆ.

3. ಇತರ ಮೂರ್ತಿಶಿಲ್ಪಗಳು ಈ ಕೆಳಗಿನಂತಿರುತ್ತವೆ. ಕೆಳಗೆ ಕುಳಿತ ಪುರುಷ, ಗಂಡಭೇರುಂಡ, ಚೌರಿ ಹಿಡಿದ ಸ್ತ್ರೀ, ಬಿಲ್ಲು, ಕತ್ತಿಹಿಡಿದ ಪುರುಷ, ಚಕ್ರ, ಬಾಣಬಿಡುತ್ತಿರುವ ಸ್ತ್ರೀ, ಜೋಗಿಯ ಚಿತ್ರ, ಧ್ಯಾನಸ್ಥ ಸಾಧು, ಕಲಾಕೃತಿಯ ಸ್ತಂಭ, ರಾಜಪುರುಷ, ನೃತ್ಯ ಮಾಡುತ್ತಿರುವ ಪುರುಷ, ಕುಳಿತ ಸ್ತ್ರೀ, ವಿರಮಿಸುತ್ತಿರುವ ಸಿಂಹ, ಹಂಸಪಕ್ಷಿ, ಚಕ್ರ, ಸ್ತ್ರೀ, ಸೂರ್ಯ ವರಾಹ, ನೃಸಿಂಹ, ಬಿಲ್ಲುಬಾಣ ಹಿಡಿದಿರುವ ಸ್ತ್ರೀ, ಶಂಖ, ಕರುವಿಗೆ ಕೆಚ್ಚಲೂಡಿಸುತ್ತಿರುವ ಆಕಳು, ವಿರಾಮದಲ್ಲಿರುವ ಪುರುಷ, ಉದ್ದನೆ ಶಿರಸ್ತ್ರಾಣ ಹಾಕಿಕೊಂಡ ಪುರುಷ, ಗಂಭೀರ ಚಿಂತೆಯಲ್ಲಿರುವ ಪುರುಷ, ಯೋಗಾಸನದಲ್ಲಿರುವ ಪುರುಷ. ಗಡಿಯ ಸುತ್ತಲಿನ ಪ್ರಾಕಾರದಲ್ಲಿ ಅಲ್ಲಲ್ಲಿ ಅನೇಕ ಶಿಲಾಶಾಸನಗಳು ಕಂಡುಬರುತ್ತವೆ. ಬಹುಶಃ ವಿಜಯನಗರದ ಅರಸರು ಈ ಗುಡಿಯ ಜೀರ್ಣೋದ್ಧಾರ ಮಾಡಿದಾಗ ಪ್ರಾಕಾರ ಕಟ್ಟಿಸಿದ ವೇಳೆಯಲ್ಲಿ ಇವುಗಳನ್ನು ಕಲ್ಲಿನ ಗೋಡೆಯಲ್ಲಿ ಹಾಕಿ ಕಟ್ಟಿರಬಹುದು.

ವೀರನಾರಾಯಣ ದೇವಸ್ಥಾನದಲ್ಲಿಯೇ ಕುಳಿತು ಕವಿ ಕುಮಾರವ್ಯಾಸನು 14–15ನೆಯ ಶತಮಾನದ ಅವಧಿಯಲ್ಲಿ 'ಕರ್ನಾಟಕ ಭಾರತ ಕಥಾಮಂಜರಿ' ಕೃತಿಯನ್ನು ರಚಿಸಿ ಗದಗನ್ನೂ ವೀರನಾರಾಯಣನನ್ನೂ ಭಾರತದ ಸಾಹಿತ್ಯ ನಕ್ಷೆಯಲ್ಲಿ ಅಜರಾಮರಗೊಳಿಸಿದ್ದಾನೆ.

ವಿಜಯನಗರದ ಅರಸು ಅಚ್ಯುತರಾಯನು (1509–1542) ಬರೆಯಿಸಿದ ಒಂದು ಶಾಸನವು ದೇವಸ್ಥಾನದ ಪ್ರಾಕಾರದಲ್ಲಿಯೇ ಇದ್ದು ಇದರಲ್ಲಿ ಕುಮಾರವ್ಯಾಸ ಕವಿಯ ಹೆಸರು ಉಲ್ಲೇಖಿಸಲ್ಪಟ್ಟಿದೆ. ಶಾಸನದಲ್ಲಿಯು ಅಕ್ಷರಗಳು ಸ್ಪಷ್ಟ ನಡುಗನ್ನಡ ಶೈಲಿಯಲ್ಲಿವೆ.

ಕರ್ನಾಟಕದಲ್ಲಿಯೇ ಸುಪ್ರಸಿದ್ಧವಾದ ವೀರನಾರಾಯಣ ಮಂದಿರವು ಕುಮಾರವ್ಯಾಸನ ಕರ್ಮಭೂಮಿಯಾಗಿದೆ. ಸ್ಥಳೀಯರ ನಂಬಿಕೆಯಂತೆ ಈ ದೇವಾಲಯವನ್ನು ಹೊಯ್ಸಳ ವಿಷ್ಣುವರ್ಧನನು ಕಟ್ಟಿಸಿದನೆಂದು ಹೇಳಲಾಗಿದೆ. ಎಂ. ಎ. ಅಣ್ಣಿಗೇರಿಯವರು 2ನೇ ಬಲ್ಲಾಳನು ನಿರ್ಮಿಸಿದನೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ವಿಜಯನಗರ ಕಾಲದಲ್ಲಿ ಈ ದೇವಾಲಯವನ್ನು ವಿಸ್ತರಿಸಿರುವುದು ಖಚಿತವೆಂದು ಹಾಗೂ ಗರ್ಭಗೃಹದಲ್ಲಿರುವ ಮೂಲವಿಗ್ರಹವು ವಿಜಯನಗರ ಶೈಲಿಯಲ್ಲಿದೆ ಎಂದು ಡಾ. ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ದೇಗುಲವು ವಿಜಯನಗರದ ಕಾಲದ ಭವ್ಯ ರಾಯಗೋಪುರವನ್ನು ಹೊಂದಿರುತ್ತದೆ.

ಅಲ್ಲದೆ ರಂಗಮಂಟಪದಲ್ಲಿ ವಿಜಯನಗರ ಶೈಲಿಯ ಕಂಬಗಳಿವೆ. ರಂಗಮಂಟಪ ಕಂಬಗಳ ಮೇಲೆ ದಶಾವತಾರದ ಹಲವಾರು ಉಬ್ಬುಶಿಲ್ಪಗಳಿವೆ. ಇಲ್ಲಿಯೇ ಒಂದು ಕಂಬದ ಕೆಳಗೆ ಕುಳಿತು ಮಹಾಕವಿ ಕುಮಾರ ವ್ಯಾಸ 'ಕರ್ನಾಟಕ ಭಾರತ ಕಥಾಮಂಜರಿ' ಬರೆದನೆಂಬ ಪ್ರತೀತಿ ಇರುತ್ತದೆ.

ಹೀಗೆ ವಿಜಯನಗರದ ಅರಸರು ದೇವಾಲಯಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಮಹತ್ತರ ಪಾತ್ರ ನಿರ್ವಹಿಸಿ ಸ್ಮಾರಕ ಸಂರಕ್ಷಣೆಯಲ್ಲಿ ಮುತುವರ್ಜಿ ವಹಿಸಿರುವುದಕ್ಕೆ ಇನ್ನೂ ಹಲವಾರು ಮಂದಿರಗಳು ಸಾಕ್ಷಿಗಳಾಗಿರುತ್ತವೆ.

೧೭. ಹಂಪಿ ಪರಿಸರದ ಸ್ಥಳಸಂಬಂಧಿ ಐತಿಹ್ಯಗಳು

ನಾಯಕರ ಹುಲುಗಪ್ಪ

ಇಂದು ಹಂಪಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿಗೆ ಸೇರಿದ ಸ್ಥಳ. ಹಿಂದೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯು ಇಂದು ಪ್ರಖ್ಯಾತ ಪ್ರವಾಸಿಕೇಂದ್ರವಾಗಿ ರೂಪುಗೊಂಡಿದೆ. 'ಇತಿಹಾಸಪೂರ್ವ ಹಂಪಿಯಿಂದ ತೊಡಗಿ ಯುನೆಸ್ಕೋದ ವಿಶ್ವಪರಂಪರೆ ಹಂಪಿಯವರೆಗೆ ಹಂಪಿಯ ಭೂತ, ವರ್ತಮಾನ, ಭವಿಷ್ಯಗಳು ಇಲ್ಲಿ ಅಧ್ಯಯನಕ್ಕೆ ಒಳಗಾಗಿವೆ ಮತ್ತು ಸಂವಾದಕ್ಕೆ ಈಡಾಗಿವೆ. ಪುರಾತತ್ವ, ಶಾಸನಶಾಸ್ತ್ರ, ಚರಿತ್ರೆ, ಜಾನಪದ, ಅಭಿವೃದ್ಧಿ ಮತ್ತು ಅನ್ವೇಷಣೆಗಳಿಗೆ ಒಳಗಾಗಿರುವ ಹಂಪಿಯು ಇನ್ನೂ ಅಧ್ಯಯನಕಾರರ ಪಾಲಿಗೆ ತನ್ನನ್ನು ಸಂಪೂರ್ಣವಾಗಿ ಬಿಚ್ಚಿಕೊಳ್ಳದ ರಹಸ್ಯ. ಆಕರ ಸಾಮಗ್ರಿಗಳು ಹೊಸತು ದೊರೆತಾಗಲಂತೂ ಹಂಪಿಯು ಆಕಾರ ಬದಲಾಗುತ್ತಾ ಹೋಗುತ್ತದೆ, ಎಂದು ಹೇಳಿರುವುದು ಹಂಪಿ ಇನ್ನೂ ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ತನ್ನನ್ನು ತೆರೆದುಕೊಂಡಿದೆ ಎನ್ನುವದು ಸ್ಪಷ್ಟವಾಗುತ್ತದೆ.[1] ಇಲ್ಲಿನ ಪ್ರಸಿದ್ಧ ಸ್ಥಳಗಳನ್ನಾಧರಿಸಿ ಹುಟ್ಟಿಕೊಂಡ ಐತಿಹ್ಯಗಳನ್ನು ಸ್ಥಳಪ್ರಧಾನ ಐತಿಹ್ಯಗಳೆಂದು ಕರೆಯಲಾಗುತ್ತದೆ. ಇವು ಭಾರತದ ಪ್ರತಿಯೊಂದು ಪುಣ್ಯಕ್ಷೇತ್ರಗಳು ಅಲ್ಲಿಯ ಪ್ರದೇಶದ ಸ್ಥಳಮಹಾತ್ಮೆಯನ್ನು ಕುರಿತು ಹೇಳುತ್ತವೆ. ಇದಕ್ಕೆ ಹಂಪಿ ಪರಿಸರವು ಹೊರತಾಗಿಲ್ಲ. ಒಂದು ಸ್ಥಳಕ್ಕೆ ಒಂದೇ ಐತಿಹ್ಯ ಇರುವುದಿಲ್ಲ. ಕೆಲವು ಸಲ ಹಲವಾರು ಐತಿಹ್ಯಗಳಿರುವುದು ಕಾಣಸಿಗುತ್ತದೆ. ಯಾವುದೇ ಸ್ಥಳಕ್ಕೆ ಒಂದು ನಿರ್ದಿಷ್ಟ ಹೆಸರು ರೂಪುಗೊಳ್ಳಲು ಹಲವಾರು ಅಂಶಗಳು ಕಾರಣವಾಗಿವೆ. ಕೆಲವು ಸ್ಥಳಗಳು ಪೌರಾಣಿಕ ವ್ಯಕ್ತಿಗಳ ವಾಸಸ್ಥಾನವಾಗಿದ್ದವು ಎನ್ನುವ ಕಾರಣಕ್ಕಾಗಿ ಅವರ ಹೆಸರುಗಳಿಂದ ಪ್ರಸಿದ್ಧಿಪಡೆದಿವೆ. ಕೆಲವು ದಾನಧರ್ಮಗಳನ್ನು ಮಾಡಿದವರ ಹೆಸರನ್ನು ಆ ಸ್ಥಳಕ್ಕೆ ನಾಮಕರಣ ಮಾಡಲಾಗಿದೆ. ಇನ್ನು ಕೆಲವು ಕಡೆಗಳಲ್ಲಿ ತಪಸ್ಸನ್ನಾಚರಿಸಿದ ಸಿದ್ಧಪುರುಷರ ಹೆಸರುಗಳಿವೆ. ಹಾಗೆಯೇ ನಿಸರ್ಗದತ್ತವಾಗಿಯೇ ಕೆಲವೊಂದು ಸ್ಥಳಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಇಲ್ಲಿರುವ ಕೆಲವೊಂದು ಐತಿಹ್ಯಗಳು ಸ್ಥಳಮಹಾತ್ಮೆಯನ್ನು ಹೇಗೆ ನಿರೂಪಿಸುತ್ತವೆ ಎನ್ನುವ ಹಿನ್ನಲೆಯಲ್ಲಿ ಹಂಪಿ ಪರಿಸರದಲ್ಲಿ ಪ್ರಚಲಿತವಿರುವ ಸ್ಥಳಪ್ರಧಾನ ಐತಿಹ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ವಾಲಿಭಂಡಾರ

ಹಂಪಿ ಸುತ್ತಮುತ್ತಲಿನ ಪ್ರದೇಶವನ್ನು ರಾಮಾಯಣದಲ್ಲಿ ಬರುವ ಕಿಷ್ಕಿಂಧೆ ಪ್ರದೇಶವೆಂದು ಕರೆಯಲಾಗುತ್ತದೆ. ರಾಮಾಯಣದಲ್ಲಿ ಬರುವ ಪಾತ್ರಗಳಾದ ವಾಲಿ ಸುಗ್ರೀವರಿಗೆ ಸಂಬಂಧಿಸಿದ ಸ್ಥಳಸಂಬಂಧ ಐತಿಹ್ಯಗಳು ಈ ಭಾಗದಲ್ಲಿವೆ. ಹಂಪಿಯ ಪಂಪಾಸರೋವರಕ್ಕೆ ಹೋಗುವ ಮಾರ್ಗದಲ್ಲಿ ಎಡಭಾಗಕ್ಕೆ ದುರ್ಗಾ ದೇವಿಯ ಬೆಟ್ಟದ ತುದಿಯೊಂದು ಕಂಡುಬರುತ್ತದೆ. ಇದನ್ನು ವಾಲಿಭಂಡಾರ ಎಂದು ಕರೆಯುವರು. ಇದರ ಕುರಿತಾದ ಐತಿಹ್ಯ ಹೀಗಿದೆ: ಈ ವಾಲಿ ಭಂಡಾರಕ್ಕೆ ಪ್ರವೇಶ ದ್ವಾರಗಳಿಲ್ಲ. ವಾಲಿಯು ತನ್ನ ಸಕಲ ಸಂಪತ್ತನ್ನು ಕೂಡಿ ಇಲ್ಲಿಯೇ ಬಚ್ಚಿಟ್ಟಿದ್ದಾನೆ ಎಂದು ನಂಬಿಕೆ ಇದೆ. ಹೀಗೆ ಕೂಡಿ ಬಚ್ಚಿಟ್ಟ ಗುಹೆಯ ಬಾಗಿಲಿಗೆ ವಾಲಿ ದೊಡ್ಡ ಬಂಡೆಯನ್ನು ಇರಿಸಿದ್ದಾನಂತೆ. ವಾಲಿಯಷ್ಟೇ ಬಲಶಾಲಿಯಾದ ಇನ್ನಾರೋ ಒಬ್ಬ ಆ ಕಲ್ಲಿಗೆ ಒದ್ದಾಗ ಮಾತ್ರ ಆ ಬಂಡೆ ಪಕ್ಕಕ್ಕೆ ಸರಿದುಕೊಂಡರೆ ಮಾತ್ರ ಸಂಪತ್ತು ಕಾಣುತ್ತದೆ ಎಂದು ಐತಿಹ್ಯ. ಈ ಐತಿಹ್ಯವು ಹಿಂದೆ ವಾಲಿಯ ಸಂಪತ್ತನ್ನು ಸಂಗ್ರಹಿಸುವ ಗುಹೆಯಾಗಿತ್ತು ಎನ್ನುವುದು ಜನಪದರ ನಂಬಿಕೆಯಾಗಿದೆ. ಗುಪ್ತನಿಧಿಯ ಐತಿಹ್ಯಗಳನ್ನು ಕುರಿತು ಬಸವರಾಜ ಪೋಲಿಸ್ ಪಾಟೀಲ ಅವರು "ಗುಪ್ತನಿಧಿ ಐತಿಹ್ಯಗಳು ಎಲ್ಲಡೆ ವ್ಯಾಪಿಸಿಕೊಂಡು ಬಂದಿವೆ. ಇವು ಪ್ರಾಚೀನ ಹಣಕಾಸು ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ. ಹಿಂದೆ ಕಳ್ಳಕಾಕರ ಭಯ ಹೆಚ್ಚು. ಯಾವಾಗ ಮನೆ ಹೊಕ್ಕು ಹಣ ದೋಚುವರೋ ಎಂದು ಹೆದರಿದ ಜನ ಅದನ್ನು ಹೊಲ, ಹಗೆ, ಬಳಚ, ದೇವರ ಜಗುಲಿಯ ಕೆಳಗೆ–ಹೀಗೆ ಮುಚ್ಚಿಟ್ಟವನಿಗೆ ಮಾತ್ರ ಗೊತ್ತಾಗುವ ಸ್ಥಳದಲ್ಲಿ ಹುಗಿದಿಡುತ್ತಿದ್ದರು. ಅಲ್ಲದೆ ಕೆಲವು ಸಂಕೇತಗಳನ್ನು ಬಳಸಿಕೊಂಡು ಧನ ಬಚ್ಚಿಟ್ಟು ಕಾಪಾಡಿಕೊಳ್ಳುವ ರೂಢಿ ಜಾರಿಯಲ್ಲಿತ್ತು. ಗುಡಿಯ ಗೋಪುರ, ಮನೆಯ ಕುಂಬಿ, ಗಿಡದ ನೆರಳಿನ ತುದಿಯ ಭಾಗ ಹಣ ಹುಗಿದಿಡುವ ಸಮಯಕ್ಕೆ ಯಾವ ಸ್ಥಳದಲ್ಲಿರುವುದೋ ಅಲ್ಲಿಟ್ಟು ತಮಗೆ ಬೇಕಾದಾಗ ಅದೇ ಸಮಯಕ್ಕೆ ಅಲ್ಲಿ ಅಗೆದು ಪಡೆಯುತ್ತಿದ್ದರು. ಈ ಸಂಕೇತಗಳು ಮುಚ್ಚಿಟ್ಟವನಿಗೆ ಮಾತ್ರ ಗೊತ್ತಾಗುತ್ತಿರುತ್ತಿತ್ತು. ಮುಂದೆ ಯಾವುದೋ ಕಾರಣದಿಂದ ಆತ ಮರಣ ಹೊಂದಿದಾಗ ಆ ನಿಧಿ ಗುಪ್ತವಾಗಿ ಉಳಿದುಬಿಡುತ್ತಿತ್ತು. ಅಲ್ಲದೇ ಅರಸರ ಆಳ್ವಿಕೆಯ ಪರಿಣಾಮದಿಂದ ಜನ ಕ್ಷಣದಲ್ಲಿಯೇ ಮರಣವನ್ನಪ್ಪುತ್ತಿದ್ದರು. ಹೀಗಾಗಿ ಧನ ಬಚ್ಚಿಟ್ಟ ವಿಷಯ ಮನೆಯವರಿಗೆ ಹೇಳುವ ಅವಕಾಶ ದೊರೆಯದೇ ಹೋಗುತ್ತಿತ್ತು. ಮುಂದೆ ಈ ಸಂಕೇತಗಳ ಮರ್ಮ ತಿಳಿದ ವ್ಯಕ್ತಿ ಗುಪ್ತನಿಧಿ ವಶಪಡಿಸಿಕೊಳ್ಳುತ್ತಾನೆ"[2] ಎಂದಿದ್ದಾರೆ. ಇಂತಹ ನಂಬಿಕೆಯಿಂದಾಗಿ ಇಂದು ಅನೇಕ ಜನರು ಕೆಲವು ಸಂಕೇತ ಗಳನ್ನು ಗಮನಿಸಿ ಇಲ್ಲಿ ನಿಧಿ ಇದೆ ಎಂದು ಭಾವಿಸಿ ಅದನ್ನು ಪಡೆಯಲು

ವಾಮಮಾರ್ಗಗಳನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ ನಮ್ಮ ಸಂಸ್ಕೃತಿಯ ಅನನ್ಯತೆಯನ್ನು ಕಾಪಾಡುವ ಪ್ರಾಚೀನ ಕಾಲದ ಸ್ಮಾರಕಗಳು ಇಂಥವರಿಗೆ ಬಲಿಯಾಗುತ್ತಿವೆ. ನರಬಲಿಯಂಥ ಅನಿಷ್ಟ ಪದ್ಧತಿಗಳಿಗೆ ಐತಿಹ್ಯಗಳು ಪ್ರೇರಣೆಯನ್ನು ಒದಗಿಸುತ್ತವೆ. ಕೆಲವು ಐತಿಹ್ಯಗಳು ಚರಿತ್ರೆಯ ರಚನೆಗೆ ಒಳಸುಳಿವುಗಳನ್ನು ನೀಡುವುದರ ಜೊತೆ ಜೊತೆಗೆ ಜನಸಾಮಾನ್ಯರ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತವೆ.

ಸುಗ್ರೀವ ಗುಹೆ

ಮೇಲಿನಂತೆ ಹಂಪಿಯ ಪರಿಸರದಲ್ಲಿ ಹಲವಾರು ಗುಹೆಗಳಿದ್ದು, ಅದರಲ್ಲಿ ಸುಗ್ರೀವ ಗುಹೆಗೆ ವಿಶೇಷ ಸ್ಥಾನವಿದೆ. ರಾಮ–ಲಕ್ಷ್ಮಣರ ಗುಡಿಯಿಂದ ವಿಜಯ ವಿಠಲ ದೇವಾಲಯದ ಕಡೆಗೆ ಪ್ರಯಾಣ ಬೆಳೆಸಿದರೆ ಮಾರ್ಗಮಧ್ಯದಲ್ಲಿ ಸುಗ್ರೀವ ಗುಹೆಯು ಕಂಡುಬರುತ್ತದೆ. ಈ ಗುಹೆಯ ಒಳಗೆ ರಾಮ–ಲಕ್ಷ್ಮಣರ ಸೀತೆಯರ ಉಬ್ಬುಚಿತ್ರಗಳನ್ನು ಕೆತ್ತಲಾಗಿದೆ. ಸುಗ್ರೀವನು ಈ ಗುಹೆಯಲ್ಲಿ ವಾಸವಾಗಿದ್ದನೆಂದು ಈ ಕಾರಣದಿಂದ ಇದಕ್ಕೆ ಸುಗ್ರೀವಗುಹೆ ಎಂದು ಕರೆಯುತ್ತಾರೆ. ಹಾಗೆಯೇ ವಾಲಿಯು ಕೆಲವು ಕಾಲ ಈ ಗುಹೆಯಲ್ಲಿದ್ದನೆಂದು ಅದರಿಂದ ವಾಲಿಸುಗ್ರೀವರ ಗುಹೆ ಎಂದು ಸಹ ಹೇಳುತ್ತಾರೆ.[3] ಈ ಮೇಲಿನ ಐತಿಹ್ಯವು ಈ ಸ್ಥಳದಲ್ಲಿ ವಾಲಿಸುಗ್ರೀವರು ವಾಸವಾಗಿದ್ದರಿಂದ ಈ ಪ್ರದೇಶಕ್ಕೆ ಅವರ ಹೆಸರಿನಿಂದ ಕರೆಯಲಾಗುತ್ತದೆ. ಹಾಗೆಯೇ ತುಂಗಭದ್ರ ನದಿಯ ದಂಡೆಯ ಮೇಲೆ ಪಂಪಾಂಬಿಕೆ ತಪಸ್ಸು ಮಾಡಿದ್ದರಿಂದಾಗಿ ಈ ನದಿಗೆ ಹಂಪಿಹೊಳೆ, ಪಂಪಾಸರೋವರ ಎಂದು ಹೆಸರುಗಳು ಬಂದಿವೆ. ಇದಕ್ಕೆ ಪೌರಾಣಿಕ ಹಿನ್ನೆಲೆಯ ಕಾರಣವೆಂದು ಹೇಳಬಹುದಾಗಿದೆ. ಪಂಪಾಸರೋವರ ಕುರಿತು ಐತಿಹ್ಯವನ್ನು ನಿದರ್ಶನವಾಗಿ ನೋಡಬಹುದಾಗಿದೆ. ವಿಜಯ ವಿಠಲನ ಗುಡಿಯ ಪಕ್ಕದಲ್ಲಿ ಹರಿಯುತ್ತಿರುವ ಹಂಪಿಹೊಳೆಯ ಎಡದಂಡೆಯ ಮೇಲಿರುವ ಘಟ್ಟಕೋಟೆ ಮತ್ತು ಅಂಜನಾದ್ರಿ ಪರ್ವತಗಳ ಮಧ್ಯೆ ಈ ಪಂಪಾಸರೋವರ ಇದೆ. ಇಲ್ಲಿ ಪಂಪಾಂಬಿಕೆಯು ಶಿವನಿಗೋಸ್ಕರ ತಪಸ್ಸು ಮಾಡಿದಳಂತೆ. ಆ ಪಂಪಾಂಬಿಕೆ ತಪಸ್ಸು ಮಾಡಿದುದರಿಂದಾಗಿ ಈ ಸರೋವರಕ್ಕೆ ಪಂಪಾ ಸರೋವರವೆಂದು ಕರೆಯುವರು. ಇಂಥ ಅಂಶಗಳ ಪರಿಣಾಮದಿಂದಾಗಿ ಕೆಲವು ಅಸಾಮಾನ್ಯವ್ಯಕ್ತಿಗಳು ತಪಸ್ಸು ಮಾಡಿದ ಸ್ಥಳಗಳಿಗೂ ಅವರ ಹೆಸರಿನಿಂದ ಕರೆಯುವುದು ಕಾಣಸಿಗುತ್ತದೆ.

ನಮ್ಮ ಪರಂಪರೆಯನ್ನು ಅವಲೋಕಿಸಿದಾಗ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳು ಜನಮಾನಸದಲ್ಲಿ ಅಚ್ಚಳಿಯದೆ ಉಳಿದುಕೊಂಡು ಬಂದಿವೆ. ಹೀಗಾಗಿ 'ಸೀತೆ ಸ್ನಾನ ಮಾಡದ ಕೊಳಗಳಿಲ್ಲ, ಪಾಂಡವರು ವಾಸಮಾಡದ ಗುಹೆಗಳಿಲ್ಲ' ಎನ್ನುವ ಮಾತು ಹುಟ್ಟಿಕೊಂಡಿವೆ. ಅನೇಕ ಕಡೆಗಳಲ್ಲಿ ಕಂಡುಬರುವ

ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಹೆಸರುಗಳಿದ್ದರೆ ಇಲ್ಲಿಗೆ ಪಾಂಡವರು ಬಂದಿದ್ದರು ಅಥವಾ ಇಲ್ಲಿ ವಾಸವಾಗಿದ್ದರು ಇಲ್ಲವೆ ತಮ್ಮ ಶಸ್ತ್ರಾಸ್ತ್ರಗಳನ್ನು ಇಲ್ಲಿ ಬಚ್ಚಿಟ್ಟಿದ್ದರು ಎನ್ನುವಂಥ ಐತಿಹ್ಯಗಳು ಹುಟ್ಟಿಕೊಂಡಿವೆ. ಉದಾಹರಣೆಗೆ ಮುಂದಿನ ಐತಿಹ್ಯಗಳನ್ನು ನೋಡಬಹುದು. ಬಲ್ಕುಂದಿ ಗ್ರಾಮವು ಸಿರುಗುಪ್ಪ ತಾಲೂಕಿನಲ್ಲಿದೆ. ಐತಿಹಾಸಿಕ ಪುರಾವೆಯಂತೆ ಬಲ್ಕುಂದಿ 'ಕುಂತಳಪುರ' ಎನಿಸಿದ್ದ ಇತಿಹಾಸಪ್ರಸಿದ್ಧ ಸ್ಥಳ. ಇಲ್ಲಿ ಮಹಾಕಾಳಮ್ಮ ದೇವಸ್ಥಾನವಿದೆ. ದೇವಾಲಯದ ಮುಂದೆ ಬನ್ನಿ ವೃಕ್ಷವಿದೆ. ಇಲ್ಲಿಯೇ "ಪಾಂಡವರು ತಮ್ಮ ಅಜ್ಞಾತವಾಸದ ಕಾಲದಲ್ಲಿ ಶಸ್ತ್ರಾಸ್ತ್ರಗಳನ್ನಿರಿಸಿದ್ದಾರೆಂದು ಐತಿಹ್ಯ" ಹೇಳುತ್ತದೆ.[4] ಬನ್ನಿ ವೃಕ್ಷದ ಯಾವುದಾದರೊಂದು ದಿಕ್ಕಿನ ಟೊಂಗೆ ಬಾಗಿದ್ದರೆ, ಆ ದಿಕ್ಕಿನ ಪ್ರದೇಶಕ್ಕೆ ಅಥವಾ ಕಠಿಣ ದಿನಗಳು ಕಾದಿವೆ ಎಂಬ ಭಾವನೆ ಇಂದಿಗೂ ಇದೆ. ಮುಂದುವರೆದು ಅನಂತಶಯನ ಗುಡಿಯಿಂದ ಸುಮಾರು ಐದು ಕಿ. ಮೀ ಉತ್ತರಕ್ಕೆ ಧರ್ಮದಗುಡ್ಡವಿದೆ. ಇದರ ಕುರಿತು ಐತಿಹ್ಯ ಹೀಗಿದೆ. ಪಾಂಡವರು ವನವಾಸದ ಕಾಲದಲ್ಲಿ ಈ ಪ್ರದೇಶಕ್ಕೆ ಬಂದು ಸ್ವಲ್ಪ ಕಾಲ ಇಲ್ಲಿಯೇ ನೆಲೆಸಿದ್ದರು. ಈ ಸಮಯದಲ್ಲಿ ಹಂಪಿ ಹೊಳೆಯು ತುಂಬಿ ಹರಿಯುತ್ತಿತ್ತು. ಪಾಂಡವರಿಗೆ ಹೊಳೆ ದಾಟಿ ಹೋಗಲು ತುಂಬಾ ಕಷ್ಟವಾಯಿತು. ಆಗ ಧರ್ಮರಾಯನು ತಮ್ಮಂದಿರನ್ನು ಹಿಂದಿನಿಂದ ಸಾಲಾಗಿ ಬರುವಂತೆ ಹೇಳಿ, ಧರ್ಮದ ಗುಡ್ಡದ ಬುಡದಲ್ಲಿರುವ ಒಂದು ಗವಿಯ ಮೂಲಕ ಸುರಂಗ ಮಾರ್ಗ ಮಾಡಿಕೊಂಡು ನದಿಯ ಇನ್ನೊಂದು ದಡದಲ್ಲಿನ ಗುಡ್ಡದ ಬುಡದಲ್ಲಿನ ಗುಹೆಯ ಮೂಲಕ ಹೊರಬಂದ. ಹೀಗಾಗಿ ಧರ್ಮರಾಯ ಬಂದು ನೆಲೆಸಿದ್ದ ಈ ಗುಡ್ಡಕ್ಕೆ ಧರ್ಮದಗುಡ್ಡ ಎಂದು ಹೆಸರಾಯಿತು. ಈಗಲೂ ಧರ್ಮರಾಯನ ಗವಿಗೆ ಯುಗಾದಿ ಹಬ್ಬದಂದು ಪೂಜೆ ನಡೆಯುತ್ತದೆ. ಹಾಗೆಯೇ ಸೀತೆಯನ್ನು ಕಳೆದುಕೊಂಡ ರಾಮನು ಹುಡುಕಿಕೊಂಡು ಕಡ್ಡಿರಾಂಪುರಕ್ಕೆ ಬಂದಾಗ ಚಿಂತೆಯಿಂದ ಸೊರಗಿ ಕಡ್ಡಿಯಂತಾಗಿದ್ದರಿಂದ ಈ ಊರಿಗೆ ಕಡ್ಡಿರಾಮಪುರ, ಕಟ್ಟಿರಾಂಪುರ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ. ಮತ್ತೊಂದು ಐತಿಹ್ಯದ ಪ್ರಕಾರ ವಿಜಯನಗರ ಕಾಲದಲ್ಲಿ ಇಲ್ಲಿ ಖಡ್ಗಗಳನ್ನು ತಯಾರಿಸುತ್ತಿದ್ದರಂತೆ. ಖಡ್ಗರಾಮಪುರ ಎಂಬುದರಿಂದ ಕಡ್ಡಿರಾಮಪುರ ಎಂಬ ಹೆಸರು ಬಂದಿದೆ ಎಂದು ಕರೆಯುತ್ತಾರೆ.

ಕಮಲಾಪುರ

ಹಿಂದೆ ಮಾಧವಭಟ್ಟರೆಂಬ ಬ್ರಾಹ್ಮಣರು ದಾರಿದ್ರ್ಯ ನಿರ್ವಹಣೆಗಾಗಿ ತಪಸ್ಸು ಮಾಡಲು ಸ್ಥಳವನ್ನು ಹುಡುಕಿಕೊಂಡು ಬಂದಾಗ ಪಂಪಾ ಸರೋವರಕ್ಕೆ ಪಶ್ಚಿಮ ಭಾಗದಲ್ಲಿ ಕಮಲಾದೇವಿಯೆಂಬ ದುರ್ಗಾದೇವಸ್ಥಾನವನ್ನು ಕಂಡು ತಪಸ್ಸು ಮಾಡಿ

ಸಿದ್ಧಿಯನ್ನು ಪಡೆದರು. ಅದಕ್ಕಾಗಿ ಆ ಸ್ಥಳವನ್ನು ಕಮಲಾಪುರವೆಂದು ಕರೆಯುತ್ತಾರೆ.[5] ಮತ್ತೊಂದು ಐತಿಹ್ಯದ ಪ್ರಕಾರ ಈಗಿನ ಕಮಲಾಪುರ ಕೆರೆಯಲ್ಲಿ ಈ ಹಿಂದೆ ಕಮಲದಹೂಗಳು ತುಂಬ ಇರುತ್ತಿದ್ದವು. ಆ ಹೂವಿನಿಂದ ಈ ಗ್ರಾಮಕ್ಕೆ ಕಮಲಾಪುರ ಎಂದು ಹೆಸರು ಬಂತು ಎಂದು ಜನಸಾಮಾನ್ಯರು ಹೇಳುತ್ತಾರೆ.

ಮಾಸ್ಲಯ್ಯನ ಗುಡ್ಡ

ಮಾಸ್ಲಯ್ಯನ ಗುಡ್ಡವು ನವಶಿಲಾಯುಗದ ನೆಲೆಯಾಗಿದ್ದರಿಂದ ಅಲ್ಲಿ ಮಾಸ್ಲಯ್ಯ ಎಂಬ ವ್ಯಕ್ತಿಯು ಹೆಚ್ಚಾಗಿ ಓಡಾಡುತ್ತಿದ್ದರಿಂದ ಆ ಗುಡ್ಡಕ್ಕೆ ಮಾಸ್ಲಯ್ಯನ ಗುಡ್ಡವೆಂದು ಕರೆಯುತ್ತಾರೆ. ಇಂದಿನ ಹೇಮಕೂಟ ಹಾಗೂ ರತ್ನಕೂಟದ ಗುಡ್ಡದ ಬಳಿಯಲ್ಲಿ ಸುತ್ತಾಡಿಕೊಂಡಿದ್ದನಂತೆ.[6]

ಅಂಜನಾದ್ರಿ

ಗಂಗಾವತಿ ತಾಲೂಕಿನ ಹನುಮನಹಳ್ಳಿ ಗ್ರಾಮದಿಂದ ಒಂದು ಕಿ. ಮೀ ಅಂತರದಲ್ಲಿ ತುಂಗಭದ್ರ ನದಿಯ ಕಾಲುವೆ ಎಡಬದಿಯ ಗುಡ್ಡದ ಮೇಲೆ ಈ ಗುಡಿ ಕಟ್ಟಲಾಗಿದೆ. ಇದರ ಕುರಿತು ಐತಿಹ್ಯ ಹೀಗಿದೆ. ಹನುಮಂತನ ತಾಯಿ ಅಂಜನಾದೇವಿಯು ಈ ಪರ್ವತದಲ್ಲಿ ವಾಸವಾಗಿದ್ದಳು. ಇದರಿಂದ ಈ ಪರ್ವತಕ್ಕೆ ಅಂಜನಾದಿ, ಅಂಜನಾದ್ರಿ ಪರ್ವತ ಎಂದು ಹೆಸರು ಬಂದಿತೆಂದು ಐತಿಹ್ಯವಿದೆ.[7]

ಮಾತಂಗಪರ್ವತ

ಹಂಪಿಯ ವಿರೂಪಾಕ್ಷಿ ದೇವಾಲಯದ ಎದುರಿಗಿರುವ ಎಮ್ಮೆ ಬಸಪ್ಪನ ಬಲಭಾಗಕ್ಕೆ ಕಂಡುಬರುವ ಎತ್ತರವಾದ ಬೆಟ್ಟವನ್ನು ಮಾತಂಗಪರ್ವತ, ಮಾತಂಗಿಪರ್ವತ ಎಂಬ ಎರಡು ಹೆಸರುಗಳಿಂದ ಗುರುತಿಸಲಾಗುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್‌ಸಮುದಾಯಕ್ಕೆ ಸೇರಿದ ಜನರು ಈ ಪರ್ವತದಲ್ಲಿ ಮಾತಂಗ ಎಂಬ ಋಷಿಯ ವಾಸವಾಗಿದ್ದನು, ಆದ್ದರಿಂದ ಈ ಬೆಟ್ಟಕ್ಕೆ ಮಾತಂಗ ಬೆಟ್ಟವೆಂದು, ಮಾತಂಗಪರ್ವತವೆಂತಲೂ ಕರೆಯುವುದು ರೂಢಿಯಲ್ಲಿದೆ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ತಳಸಮುದಾಯಕ್ಕೆ ಸೇರಿದ ಜನರು ಈ ಬೆಟ್ಟದಲ್ಲಿ ಮಾತಂಗಿ ಇದ್ದಳು, ಆದುದರಿಂದ ಮಾತಂಗಿ ಪರ್ವತವೇ ಹೊರತು ಮಾತಂಗ ಪರ್ವತ ಅಲ್ಲವೆಂದು ಅಭಿಪ್ರಾಯಪಡುತ್ತಾರೆ. ಸಮಾಜದಲ್ಲಿ ಜನರು ತಮ್ಮ ಅನನ್ಯತೆಯನ್ನು ಹೇಳಲು ದೈವದೊಂದಿಗೆ ಸಮೀಕರಿಸಿಕೊಳ್ಳುವುದನ್ನು ಈ ಐತಿಹ್ಯಗಳು ಒಳಗೊಂಡಿವೆ. ಅಲ್ಲದೆ 'ಮಾತಂಗಿ ವಿಗ್ರಹ ಪೂರ್ವದಲ್ಲಿತ್ತು. ಅದನ್ನು ಬೇರೆ ಕಡೆಗೆ ಸ್ಥಳಾಂತರಿಸ ಲಾಯಿತು' ಎಂಬ ವಿಷಯ ತಿಳಿಸುತ್ತಾ ಮಾತಂಗಿಯ ಮಾದಿಗರ ಆದಿದೇವತೆಯು

ಹೌದು. ಹೀಗಾಗಿ ಇಂದು ಸಹ ಮಾತಂಗಿ ಪರ್ವತ ಮಾದಿಗರಿಗೆ ಪವಿತ್ರ ಸ್ಥಳವೆಂದು ಪ್ರವಾಸಿ ಮಾರ್ಗದರ್ಶಕರು ಅಭಿಪ್ರಾಯಪಡುತ್ತಾರೆ.

ಕೋಟಿಲಿಂಗ

ಹಂಪಿಯ ಕೋದಂಡರಾಮ ದೇವಾಲಯದ ಎದುರಿನಲ್ಲಿ ಕಂಡುಬರುವ ಚಕ್ರತೀರ್ಥದ ತೀರದಲ್ಲಿ ವಿಶಾಲವಾದ ಬಂಡೆಯೊಂದರ ಮೇಲೆ ಕೆತ್ತಲ್ಪಟ್ಟ ಸಣ್ಣ ಸಣ್ಣ ನೂರಾರು ಲಿಂಗಗಳನ್ನು ಕೋಟಿ ಲಿಂಗವೆಂದು ಕರೆಯುತ್ತಾರೆ. ಈ ಬಗೆಯ ಲಿಂಗಗಳನ್ನು ಬಹು ದಿನಗಳ ಹಿಂದೆ ಕೋತಿಗಳು ಪೂಜಿಸುತ್ತಿದ್ದವಂತೆ ನದಿಯಿಂದ ಬಾಯಿಯಲ್ಲಿ ನೀರು ತಂದು ಲಿಂಗದ ಮೇಲೆ ಹಾಕಿ ಸುತ್ತಲಿನ ವಿವಿಧ ಹೂ ಪತ್ರೆಗಳನ್ನು ತಂದು ಚೆಲ್ಲಿ ಪೂಜಿಸುತ್ತಿದ್ದವಂತೆ, ಆದ್ದರಿಂದ ಇದಕ್ಕೆ ಕೋತಿಲಿಂಗ ಎಂಬ ಹೆಸರು ಬಂತು ಎಂಬುದಾಗಿ ಹೇಳುತ್ತಾರೆ. ಇದು ಕೋಟಿಲಿಂಗವೆಂದು ಇತ್ತೀಚೆಗೆ ರೂಢಿಯಾಗಿದೆ. ಈ ಸ್ಥಳಕ್ಕೆ ಸಂಬಂಧಿಸಿದಂತೆ ಕೋದಂಡ ರಾಮಸ್ವಾಮಿ ದೇವಾಲಯದ ಎದುರಿಗೆ ಇರುವ ಕೋಟಿಲಿಂಗದ ಹತ್ತಿರ ಇರುವ ವಿಶಾಲವಾದ ಬಂಡೆಯ ಮೇಲೆ 'ಶ್ರೀ ಕೋಟಿಶಂಕರ ಅಷ್ಟೋತ್ತರ ಶತಲಿಂಗಾಯ ನಮಃ', 'ಕೋಟಿಶಂಕ್ಕರ', 'ಕೋಟಿ ಲಿಂಗ' ಎಂದು ಬರೆದಿದೆ.[8] ಇನ್ನೊಂದು ಐತಿಹ್ಯದ ಪ್ರಕಾರ, 'ದಕ್ಷಪತಿ ಎಂಬ ರಾಜನಿದ್ದ. ಅವನಿಗೆ ಅರವತ್ತು ಮಂದಿ ಹೆಣ್ಣು ಮಕ್ಕಳಿದ್ದರು, ಆದರೆ ಒಂದು ಗಂಡು ಮಗುವಿಲ್ಲವೆಂದು ರಾಜನಿಗೆ ತುಂಬಾ ದುಃಖವಾಯಿತು. ಹೀಗಿರುವಾಗ ಒಮ್ಮೆ ಇವನ ರಾಜಧಾನಿಯು ಕ್ಷಾಮಕ್ಕೆ ತುತ್ತಾಯಿತು. ಇಬ್ಬರು ಅಣ್ಣತಮ್ಮಂದಿರು ತಮ್ಮ ತಂದೆ ತಾಯಿಗಳನ್ನು ಕಳೆದುಕೊಂಡರು. ಅವರಲ್ಲಿ ಕಿರಿಯವನು ಸಹ ತೀರಿಕೊಂಡ. ಆಗ ಹಿರಿಯ ಅಣ್ಣ ಗೊತ್ತು ಗುರಿಯಿಲ್ಲದೆ ತಮ್ಮನ ಹೆಣವನ್ನು ಹೆಗಲಮೇಲಿರಿಸಿಕೊಂಡು ಅಲೆದಾಡುತ್ತಿದ್ದನು. ಒಮ್ಮೆ ಶಿವ-ಪಾರ್ವತಿಯರು ಆಕಾಶ ಮಾರ್ಗವಾಗಿ ಹೋಗುತ್ತಿರುವಾಗ ಪಾರ್ವತಿಯು ಈ ದೃಶ್ಯವನ್ನು ನೋಡುತ್ತಾಳೆ. ಅವಳಿಗೆ ಅಣ್ಣನ ಮೇಲೆ ಕರುಣೆ ಬರುತ್ತದೆ. ಸತ್ತ ತಮ್ಮನನ್ನು ಬದುಕಿಸಿ ಕೊಡುವಂತೆ ಶಿವನಲ್ಲಿ ಪ್ರಾರ್ಥಿಸುತ್ತಾಳೆ. ಶಿವ ಆಕೆಯ ಮಾತಿಗೆ ಒಪ್ಪಿ ಸಮ್ಮತಿಸುತ್ತಾನೆ. ಅದರಂತೆ ತಮ್ಮನಿಗೆ ಜೀವದಾನ ಮಾಡುತ್ತಾನೆ. ಸತ್ತು ಬದುಕಿದ ತಮ್ಮನನ್ನು ದಕ್ಷಪತಿಗೆ ನೀಡುತ್ತಾನೆ. ದಕ್ಷಪತಿಯು ಅವನಿಗೆ ದಕ್ಷಮುನಿಯೆಂದು ಹೆಸರಿಡುತ್ತಾನೆ. ಅನಂತರ ಮತ್ತೊಂದು ಕಡೆ ಜಾಂಬುಮುನಿ ದಕ್ಷಮುನಿಯನ್ನು ದೇವತೆಗಳ ಕಾವಲಿಗಾಗಿ ಕಾಣಿಕೆಯಾಗಿ ಕೊಡುವಂತೆ ಕೇಳುತ್ತಾನೆ. ಆಗ ಶಿವನು ಆ ತಮ್ಮನು ದಕ್ಷಪತಿಯೊಡನೆ ದೇವತೆಗಳ ಸೇವೆ ಮಾಡಲಿ ಎಂದು ಹೇಳುತ್ತಾನೆ. ಹೀಗೆ ದಕ್ಷಮುನಿ ದಕ್ಷಪತಿಯೊಡಗೂಡಿ ಮಾಡಿದ ದೇವತೆಗಳ ಸೇವೆಯ ಕುರುಹಾಗಿ ಕೋಟಿಲಿಂಗ ಎಂಬ ಕಲ್ಪನೆ ಮೂಡಿದೆ"[9] ಎಂದು ಅಭಿಪ್ರಾಯಿಸುತ್ತಾರೆ.

ಹಂಪಿಯನ್ನು ಪಂಪಾಕ್ಷೇತ್ರ, ಪಂಪಾತೀರ್ಥ, ಪಂಪಾಪುರ, ಪಂಪಾಪಟ್ಟಣ ಎಂದು ಶಾಸನಗಳಲ್ಲಿ, ಪುರಾಣಗಳಲ್ಲಿ ಕರೆದಿದ್ದಾರೆ. ಐತಿಹಾಸಿಕವಾಗಿ ಮತ್ತು ಪೌರಾಣಿಕವಾಗಿ ಪ್ರಸಿದ್ಧವಾಗಿರುವ ಹಂಪಿಯು ಹಲವಾರು ಕಾರಣಗಳಿಂದ ತನ್ನ ಕಬಂಧ ಬಾಹುವನ್ನು ಚಾಚಿಕೊಂಡಿದೆ. ಇಲ್ಲಿ ಪ್ರತಿಯೊಂದು ಕಲ್ಲಿಗೂ ಮಠಮಂದಿರಗಳಿಗೂ ಮಂಟಪಗಳೂ ಕೋಟೆಗಳೂ ಮಸೀದಿಗಳೂ ಮುಂತಾದವುಗಳಿದ್ದೂ ಅವುಗಳ ಸುತ್ತಲೂ ಹಲವು ಐತಿಹ್ಯಗಳಿವೆ. ಇವು ಅಂದಿನ ಚರಿತ್ರೆಯನ್ನು ಭಿನ್ನಮಾದರಿಯಲ್ಲಿ ಅರ್ಥಮಾಡಿಕೊಳ್ಳಲು ಹಲವು ಸುಳಿವುಗಳನ್ನು ತೋರಿಸುತ್ತವೆ.

ಅಡಿ ಟಿಪ್ಪಣಿಗಳು

1. ಸಿ. ಮಹದೇವ, ಎನ್. ಚೆನ್ನಸ್ವಾಮಿ ಸೋಸಲೆ, *ಹಂಪಿ ಅಂದು-ಇಂದು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮುನ್ನುಡಿಯಿಂದ.
2. ಬಸವರಾಜ ಪೋಲೀಸ್ ಪಾಟೀಲ, *ಜಾನಪದ ಚಿಂತನ*, ಅಮರ ಪ್ರಕಾಶನ, ಕಲಬುರ್ಗಿ
3. ಪುರುಷೋತ್ತಮ ಬಿಳಮಲೆ, ಚೆಲುವರಾಜು, *ಹಂಪಿ ಜಾನಪದ*, ಪುಟ. 72
4. ಎಂ. ರಾಘವೇಂದ್ರ, *ಸಿರುಗುಪ್ಪ ತಾಲೂಕು ದರ್ಶನ*, ಪುಟ. 13
5. ಎಂ. ಎಂ. ಕಲಬುರ್ಗಿ, *ಕರ್ನಾಟಕದ ಕೈಫಿಯತ್ತುಗಳು*, ಪುಟ. 136
6. ಪುರುಷೋತ್ತಮ ಬಿಳಿಮಲೆ, ಚೆಲುವರಾಜು, ಪೂರ್ವೋಕ್ತ, ಪು.76
7. ಅದೇ, ಪು. 74
8. *ಹಂಪಿ ಶಾಸನಗಳು*, ಶಾಸನ ಸಂಖ್ಯೆ 159, 166, 174, 191, 164, ಕನ್ನಡ ವಿಶ್ವವಿದ್ಯಾಲಯ, ಹಂಪಿ
9. ಪುರುಷೋತ್ತಮ ಬಿಳಿಮಲೆ, ಚೆಲುವರಾಜು, ಪೂರ್ವೋಕ್ತ, ಪು. 67

೧೮. ಹಂಪಿ ವಿರೂಪಾಕ್ಷ ವೀರಭದ್ರ ಪರಸ್ಪರ ಅಭಿನ್ನ

ಎನ್. ಎಸ್. ವೀರೇಶ

ಹಂಪಿಯ ಪ್ರಧಾನ ದೈವಗಳಲ್ಲಿ ವಿರೂಪಾಕ್ಷ ಮತ್ತು ವೀರಭದ್ರರು ಪ್ರಮುಖರು. ಹಂಪಿಯಲ್ಲಿ ಮೊದಲು ವಿರೂಪಾಕ್ಷ ಕಾಣಿಸಿಕೊಂಡರೆ ನಂತರ ವೀರಭದ್ರ ಕಾಣಿಸಿ ಕೊಳ್ಳುತ್ತಾನೆ. ವಿರೂಪಾಕ್ಷ ಹಂಪಿಯ ದೇವನಾಗಿದ್ದಂತೆ, ಅದರ ಒಡೆಯ ಅಥವಾ ರಾಜನಾಗಿಯೂ ಕಾಣಿಸಿಕೊಳ್ಳುತ್ತಾನೆ. ವೀರಭದ್ರ ವೀರಯೋಧನಂತೆ ಅಥವಾ ಶೌರ್ಯದ ಪ್ರತೀಕ ಎಂಬಂತೆ ಹಂಪಿಯಲ್ಲಿ ರೂಪುಗೊಂಡಿರುವುದನ್ನು ಶಾಸನ ಮತ್ತು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಆದರೆ ಈ ಎರಡೂ ದೇವಗಳು ಭಿನ್ನ ಭಿನ್ನ ಅಲ್ಲ, ಒಂದೇ ಎಂಬ ಅಂಶವನ್ನು ಇಲ್ಲಿ ದೊರೆಯುವ ಆಕರಗಳಿಂದ ಅರಿಯಬಹುದು.

ವಿರೂಪಾಕ್ಷ ಲಿಂಗರೂಪಿಯಾದಂತೆ ವೀರಭದ್ರನೂ ಆರಂಭದಲ್ಲಿ ಹಂಪಿಯಲ್ಲಿ ಲಿಂಗರೂಪಿಯಾಗಿದ್ದನೆಂದು ಇಲ್ಲಿನ ಒಂದೆರಡು ಶಾಸನಗಳು ದಾಖಲಿಸಿವೆ. ಹಾಗೆಯೇ ವೀರಭದ್ರ ಶಿವನ ಮಗ ಹಣೆಗಣ್ಣಿನಲ್ಲಿ ಜನಿಸಿದವನೆಂದು ಹಂಪಿ ಪರಿಸರದ ಕನ್ನಡ ಸಾಹಿತ್ಯ ಕೃತಿಗಳು ವರ್ಣಿಸಿದರೂ ಅವುಗಳೇ ವಿರೂಪಾಕ್ಷ ವೀರಭದ್ರ ಭಿನ್ನ ಭಿನ್ನ ಅಲ್ಲ ಎಂಬಂತೆ ಚಿತ್ರಿಸಿರುವುದು ಕಂಡುಬರುತ್ತದೆ. ವೀರಭದ್ರ ಮೂಲತಃ ಲಿಂಗರೂಪಿಯಾಗಿದ್ದನೆಂದು ವಿರೂಪಾಕ್ಷ ದೇವಾಲಯದ ವಾಯವ್ಯಕ್ಕೆ ನದಿಯ ದಂಡೆಯಲ್ಲಿನ ಹಳೆಯ ಸ್ನಾನಘಟ್ಟದ ಬಳಿ ಬಂಡೆಯ ಮೇಲ್ಭಾಗ ದಲ್ಲಿ ಲಿಂಗ ಹಾಗೂ ನಂದಿಶಿಲ್ಪಗಳ ಕೆಳಗೆ ಇರುವ ಶಾಸನಗಳು. . . 'ವೀರಬತ್ರಡ ಲಿಂಗಂ, ಶ್ರೀ ವೀರಭದ್ರುಡ ಲಿಂಗಂ' ಎಂದು ಉಲ್ಲೇಖಿಸಿವೆ. ಇದರಿಂದ ವೀರಭದ್ರ ಲಿಂಗರೂಪಿ ಎಂದು ತಿಳಿದುಬರುತ್ತದೆ.

ವಿರೂಪಾಕ್ಷ ವೀರಭದ್ರ ಇಬ್ಬರೂ ಒಂದೇ ಎಂಬ ಅಭಿಪ್ರಾಯವನ್ನು ಡಾ. ಎಂ ಎಂ. ಕಲಬುರ್ಗಿಯವರು ಅಭಿವ್ಯಕ್ತಿಸಿದ್ದಾರೆ. ಅವರು ಹೇಳುವಂತೆ "ಹಂಪಿಯಲ್ಲಿ ಬೇರೆ ಬೇರೆ ಭಂಗಿಯ ಸು.50 ರಷ್ಟು ವೀರಭದ್ರನ ವಿಗ್ರಹಗಳಿವೆ. ಬೇರೆ ಯಾವುದೇ ಗ್ರಾಮದಲ್ಲಿಯೂ ಇರದೆ, ಈ ಒಂದು ಸ್ಥಳದಲ್ಲಿ ಮಾತ್ರ ಇಷ್ಟು ವಿಗ್ರಹಗಳಿರುವುದರಿಂದ ಹಂಪೆ ವೀರಭದ್ರನ ಉಪಾಸನೆಯ ಕೇಂದ್ರಭೂಮಿಯಾಗಿದ್ದು, ಅವನೇ ಈ ಪ್ರದೇಶದ ಅಧಿದೈವನೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ರೌದ್ರಭಾವದ ವೀರಭದ್ರನ ಇನ್ನೊಂದು ರೂಪವೇ ಇಲ್ಲಿಯ ರೌದ್ರಭಾವದ ವಿರೂಪಾಕ್ಷನಾಗಿರಬಹುದೆ?" ಎಂಬ ಸಂದೇಹ ಹುಟ್ಟುತ್ತದೆ.

ಶಿವಮೊಗ್ಗ ತಾಲ್ಲೂಕಿನ ಒಂದು ಊರಿಗೆ ವಿರಪೇನ ಕೊಪ್ಪ ಮತ್ತು ವಿರುಪನ ಕೊಪ್ಪ ಎಂಬ ಎರಡು ಹೆಸರು ಬಳಕೆಯಲ್ಲಿವೆ. ಇದರಿಂದ ವೀರಪ್ಪ (=ವೀರಭದ್ರ), ವಿರೂಪ (=ವಿರೂಪಾಕ್ಷ)ಗಳು ಸಾಮ್ಯಭ್ರಾಂತಿ ಹುಟ್ಟಿಸುವ ಹೆಸರುಗಳೆಂದು ಖಚಿತವಾಗಿ, ಇಂಥ ಪ್ರಕ್ರಿಯೆ ಹಂಪೆಯಲ್ಲಿಯ ವೀರಭದ್ರ (=ವೀರಪ್ಪ) ಸಂಪ್ರದಾಯ ವನ್ನು ಕ್ರಮೇಣ ವಿರೂಪಾಕ್ಷ (=ವಿರೂಪ) ಸಂಪ್ರದಾಯವನ್ನಾಗಿ ಪರಿವರ್ತಿಸಿರಬಹು ದೆನಿಸುತ್ತದೆ. ಬಹುಶಃ ಹಂಪೆಯ ಅಧಿದೈವವಾದ ವಿರೂಪಾಕ್ಷ ಲಿಂಗದ ಹೆಸರು ಮೂಲತಃ, ವೀರಪಚ್ಚ, ಎಂದಿದ್ದು (ಅಚ್ಚ–ಅಪ್ಪ, ಇಂದಿನ ಪೂಣಚ್ಚ ಹೆಸರನ್ನು ನೆನಪಿಸಿಕೊಳ್ಳಿ) ಅದನ್ನೇ ವಿರೂಪಾಕ್ಷ ಎಂದು ಸಂಸ್ಕೃತೀಕರಿಸಿಕೊಂಡಂತೆ ತೋರು ತ್ತದೆ. ಮುಂದೆ ಪಂಡಿತರಾದವರು, ಕಾಮದಹನರೀತಿಯ ವಿರೂಪಾಕ್ಷ ವೀರಭದ್ರ ದಲ್ಲಿರುವ ರುದ್ರಭಾವವನ್ನು ಗುರುತಿಸಿ, ಇಬ್ಬರಿಗೂ ತಂದೆ–ಮಕ್ಕಳೆಂಬ ಕಥೆಪುರಾಣ ಕಥೆಕಟ್ಟಿರಬಹುದು. ಒಟ್ಟಾರೆ ಹಂಪೆಯಲ್ಲಿರುವ ಲಿಂಗರೂಪದ ವೀರಭದ್ರನೇ ಮುಂದೆ ವಿರೂಪಾಕ್ಷನೆಂಬ ಹೆಸರು ಪಡೆದನೆಂದು ಹೇಳಬಹುದಾಗಿದೆ[2] ಎಂದು ಹೇಳಿರುವಲ್ಲಿ ಔಚಿತ್ಯವಿದೆ. ಏಕೆಂದರೆ ವೀರಭದ್ರ ವಿರೂಪಾಕ್ಷರು ಭಿನ್ನ–ಭಿನ್ನ ಅಲ್ಲವೆಂಬುದನ್ನು ಹರಿಹರ ತನ್ನ ಗಿರಿಜಾಕಲ್ಯಾಣ ಕಾವ್ಯದಲ್ಲಿ "ದುರಿತ ಪಂಚಾನನ ಶರಭ ಮೂರ್ತಿ ದಕ್ಷಮಖನಿರ್ಧೂಮಧಾಮಂ"[3] ಎಂದೂ, ಪಂಪಾ ಶತಕದಲ್ಲಿ "ದಕ್ಷನಧ್ವರಮಂ ಪುಟ್ಟವನೀತನೀತನೆ"[4] ಎಂದು ಹೇಳಿದ್ದಾನೆ. ಅಲ್ಲದೆ ಇದೇ ಕವಿ ತನ್ನ ರಗಳೆಗಳಲ್ಲಿ 'ದೇವ ದಕ್ಷನ ಯಾಗ ವಿನಾಶನ'[5], 'ದೇವರುದ್ರಗಣ ಸಮುದ್ರ ವೀರಭದ್ರ ಹಂಪೆಯರಸ'[6] ಎಂದು ದಾಖಲಿಸಿದ್ದಾನೆ.

ಕವಿ ರಾಘವಾಂಕ ತನ್ನ 'ವೀರೇಶ ಚರಿತೆ' ಕಾವ್ಯದಲ್ಲಿ

. . . . .ನಕ್ಷಿತ್ರಯನುಕ್ಷಧ್ವಜ

ರಕ್ಷಾದಕ್ಷಕ್ಷೇಮ ಕ್ಷ್ವೇಡಾ ಘೋಣಾ

ಧ್ಯಕ್ಷಾಭಕ್ಷಂ ಕ್ಷುದ್ರಷೂರಂ ಷಮನತಪಕ್ಷಂ ಮೋಕ್ಷಪ್ರದನು'[6] ಎಂದು ವರ್ಣಿಸಿದ್ದಾನೆ.

ಹರಿಹರ ವಿರೂಪಾಕ್ಷನನ್ನು ಶರಭಮೂರ್ತಿ ದಕ್ಷಯಾಗಧ್ವಂಸಿ, ದಕ್ಷಯಾಗ ನಾಶಕನೆಂದು ಹೇಳಿದರೆ ವೀರಭದ್ರನನ್ನು ಹಂಪಿಯರಸನೆಂದು ಕರೆದಿದ್ದಾನೆ. ರಾಘವಾಂಕ ವೀರಭದ್ರನನ್ನು ಮೂರು ಕಣ್ಣುಗಳುಳ್ಳವನೂ, ವೃಷಭಧ್ವಜನೂ, ಶರಣರನ್ನು ಕಾಪಾಡತಕ್ಕವನೂ, ಕಾಳಕೂಟ ವಿಷಕುಡಿದವನೆಂದು ಹೇಳಿದ್ದಾನೆ.

ನಮಗೆ ಪುರಾಣಗಳಿಂದ ತಿಳಿದುಬರುವಂತೆ ದಕ್ಷನಯಾಗವನ್ನು ಧ್ವಂಸಮಾಡಿ ದವನು, ಶರಭರೂಪ ತಾಳಿದವನು ವೀರಭದ್ರ ಹಾಗೂ ಕಾಳಕೂಟ ವಿಷವನ್ನು ಕುಡಿದವನು ಶಿವ (ವಿರೂಪಾಕ್ಷ). ಆದರೆ ವಿರೂಪಾಕ್ಷ ದಕ್ಷಯಾಗ ನಾಶಕ.

ಶರಭಮೂರ್ತಿ ಎಂದು ಚಿತ್ರಿತವಾಗಿರುವುದು ವೀರಭದ್ರ ವಿರೂಪಾಕ್ಷರು ಪರಸ್ಪರ ಭಿನ್ನ ಭಿನ್ನ ಅಲ್ಲ, ಅಭಿನ್ನ ಅಂದರೆ ಅವರಿಬ್ಬರೂ ಒಂದೇ ಎಂಬ ಅಂಶ ತಿಳಿದು ಬರುತ್ತದೆ. ಆರಂಭದಲ್ಲಿ ವೀರಭದ್ರ ಲಿಂಗರೂಪಿಯಾಗಿದ್ದು, ನಂತರ ವ್ಯಕ್ತಿರೂಪ ಪಡೆದಿರುವನೆಂಬುದಕ್ಕೆ ಹಂಪಿಯ ಮತಂಗ ಪರ್ವತದ ವೀರಭದ್ರ ದೇವಾಲಯದಲ್ಲಿ ಮತಂಗೇಶ್ವರ ಲಿಂಗವಿದೆ. ಇದು ಮೂಲತಃ ವೀರಭದ್ರಲಿಂಗವಾಗಿರುವಂತೆ ತೋರುತ್ತದೆ. ಅದು ಮತಂಗ ಪರ್ವತದ ಮೇಲಿರುವುದರಿಂದ ಮೂಲತಃ ವೀರಭದ್ರಲಿಂಗವನ್ನು ಮತಂಗೇಶ್ವರನೆಂದು ಕರೆದಿರುವ ಸಾಧ್ಯತೆ ಇದೆ. ಇದಲ್ಲದೆ ಮತಂಗ ಪರ್ವತದ ವೀರಭದ್ರ ಮತ್ತು ಉದ್ದಾನ ವೀರಭದ್ರ ಮೂರ್ತಿ ಶಿಲ್ಪದ ಎದುರು ನಂದಿ ಶಿಲ್ಪಗಳಿರುವುದೇ ಸಾಕ್ಷಿ.

ಮತಂಗ ಪರ್ವತದ ವೀರಭದ್ರನಿಗೆ ಮತಂಗ ಪರ್ವತದ ಶಾಸನಗಳು 'ಮಾದಂಣನು ಮತಂಗ ಪರ್ವತಕೆ ಬಂದು ವಿರೂಪಾಕ್ಷ ದೇವರ ಕಂಡು ಕೃತಾರ್ಥನಾದನು.[7] 'ದಾಯಂಣನೂ ಮತಂಗ ಪರ್ವತವಂ ವಿರೂಪಾಕ್ಷ ದರ್ಷರಾಗಿ ಕ್ರುತ್ರಾರ್ಥ್ಥನಾದ'[8] ಎಂದು ದಾಖಲಿಸಿವೆ. ಈ ಶಾಸನಗಳು ಬಹುಶಃ ವೀರಭದ್ರ ಶಿಲ್ಪಕ್ಕೆ ವಿರೂಪಾಕ್ಷನೆಂದು ಕರೆದಿರುವ ಸಾಧ್ಯತೆ ಇದೆ. ಹಂಪಿಯ ವಿರೂಪಾಕ್ಷ ದೇವಾಲಯ ಬಳಿಯ ನದಿದಂಡೆಯ ಸ್ನಾನ ಘಟ್ಟದ ನಂದಿ ಮತ್ತು ಲಿಂಗಶಿಲ್ಪಗಳ ಕೆಳಗೆ ಇರುವ ಶಾಸನವು 'ಶ್ರೀ. . . ವೀರಭದ್ರದ ಲಿಂಗಂ ಶ್ರೀ ವಿರೂಪಾಕ್ಷದೇವ. . . '[9] ಎಂದು ಉಲ್ಲೇಖಿಸಿದೆ.

ಹೀಗಾಗಿ, ವಿರೂಪಾಕ್ಷ ವೀರಭದ್ರರು ಇಬ್ಬರೂ ಒಂದೇ ಎಂಬ ಭಾವ ಮೂಡುತ್ತದೆ. ಹಂಪಿಯ ಮೂರು ವಿರೂಪಾಕ್ಷ ದೇವಾಲಯಗಳ ವಿರೂಪಾಕ್ಷ ಲಿಂಗಗಳ ಎದುರು, ಮತಂಗಪರ್ವತ ಮತ್ತು ಉದ್ದಾನ ವೀರಭದ್ರ ದೇವಾಲಯ ಹಾಗೂ ಇತರೆಡೆ ವೀರಭದ್ರ ಶಿಲ್ಪಗಳ ಎದುರು ನಂದಿ ಶಿಲ್ಪಗಳಿರುವುದನ್ನು ಗಮನಿಸಿದರೆ, ವಿರೂಪಾಕ್ಷ ವೀರಭದ್ರರು ಒಂದೇ ಎಂಬ ತೀರ್ಮಾನಕ್ಕೆ ಬರಬಹುದು. ಇದರಲ್ಲಿ ಅನುಮಾನವಿಲ್ಲ. ವೀರಭದ್ರನ ಕಿರೀಟದಲ್ಲಿ ಶಿವಲಿಂಗ ಇರುವುದು ಮೂಲತಃ ವೀರಭದ್ರ ಲಿಂಗರೂಪಿಯಾಗಿದ್ದನೆಂದು ಧ್ವನಿತವಾಗುತ್ತದೆ.

ಅಡಿ ಟಿಪ್ಪಣಿಗಳು

1. ಎಂ. ಎಂ. ಕಲಬುರ್ಗಿ, *ಮಾರ್ಗ–3*, ಪು.220
2. ಎಂ. ಜಿ. ನಂಜುಂಡಾರಾಧ್ಯ (ಗದ್ಯಾನುವಾದ) *ಹರಿಹರ ಕವಿಯ ಗಿರಿಜಾಕಲ್ಯಾಣ ಮಹಾಪ್ರಬಂಧಂ*, ಪು. 331
3. ಬಿ. ಸಿ. ಆವಳಿ (ಸಂ). *ಹರಿಹರದೇವನ ರಕ್ಷಾಶತಕ ಮತ್ತು ಪಂಪಾಶತಕ*, ಪು.42

4. ಎಂ. ಎಂ. ಕಲಬುರ್ಗಿ, *ಹರಿಹರನ ರಗಳೆಗಳು*, ಪು.489
5. ಅದೇ. ಪು.498
6. ಬಿ. ಶಿವಮೂರ್ತಿ ಶಾಸ್ತ್ರಿ (ಸಂ) *ವೀರೇಶ ಚರಿತೆ* ಪು–2
7. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ) *ಕನ್ನಡ ವಿ. ವಿ. ಶಾಸನ ಸಂಪುಟ–3 ಹಂಪಿಶಾಸನಗಳು*, ಶಾ. ಸಂ. 109, ಪು.94
8. ಅದೇ, ಶಾ. ಸಂ. 117, ಪು.99
9. ಅದೇ ಶಾ. ಸಂ. 17, ಪು.9

೧೯. ಬುಸಾತಿನೆ –ಸಲಾತೀನ ಕೃತಿಯಲ್ಲಿ ಹಂಪಿನಾಶದ ಚಿತ್ರಣ

ಡಾ. ವಾಸುದೇವ ಬಡಿಗೇರ

ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಅವಧಿಯಲ್ಲಿ ಕರ್ನಾಟಕವನ್ನು ವಿವಿಧ ಅರಸುಮನೆತನಗಳು ಆಳ್ವಿಕೆ ಮಾಡಿದರು. ಈ ಅರಸುಮನೆತನಗಳ ಕಾಲದಲ್ಲಿ ಬರೆದ ಶಾಸನಗಳು, ನಿರ್ಮಿಸಿದ ಕೋಟೆ ಕೊತ್ತಲಗಳು, ಅರಮನೆಗಳು, ದೇವಾಲಯ – ಮೂರ್ತಿಶಿಲ್ಪಗಳು, ಕೆರೆ – ಕಟ್ಟೆ ಮೊದಲಾದವುಗಳನ್ನು ಇತಿಹಾಸರಚನೆಯಲ್ಲಿ ಪುರಾತತ್ವ ಆಕರಗಳನ್ನಾಗಿ ಹಾಗೂ ಆಸ್ಥಾನದ ಕವಿಪಂಡಿತರು ರಚಿಸಿದ ಕೃತಿಗಳು, ಹೊರಡಿಸಿದ ರಾಜಾಜ್ಞೆಗಳು, ವಂಶಾವಳಿಗಳು, ದಿನಚರಿ ಮತ್ತು ಪ್ರವಾಸಿ ವರದಿಗಳು ಇತರೆ ಸಾಹಿತ್ಯಿಕ ಆಕರಗಳನ್ನಾಗಿ ಬಳಸಿಕೊಳ್ಳಲಾಗುತ್ತದೆ. ಇವುಗಳೊಂದಿಗೆ ಸ್ಥಳೀಯ ಐತಿಹ್ಯಗಳೂ ಮುಖ್ಯವೆನಿಸುತ್ತವೆ. ಈ ಎಲ್ಲ ಆಕರಗಳನ್ನು ಬಳಸಿದರೂ ಇತಿಹಾಸ ರಚನೆ ಏಕಬಗೆಯಾಗಿರುವುದಿಲ್ಲ. ಇತಿಹಾಸಕಾರನ ಪ್ರದೇಶ, ಭಾಷೆ, ಧರ್ಮ, ಸಂದರ್ಭ, ಮನಃಸ್ಥಿತಿ ಮುಂತಾದವು ನಿರೂಪನ ಶೈಲಿಯನ್ನು ವಿಭಿನ್ನಗೊಳಿಸುತ್ತವೆ.

ದಕ್ಷಿಣ ಭಾರತದಲ್ಲಿ ಮೂರು ಶತಮಾನಗಳ ಕಾಲ ಆಳ್ವಿಕೆ ಮಾಡಿದ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಅನೇಕ ಬಗೆಯಲ್ಲಿ ಆಕರಗಳು ಲಭ್ಯವಿದ್ದರೂ ಆರಂಭ ಮತ್ತು ಅಂತ್ಯವನ್ನು ಕುರಿತು ಅನೇಕ ಭಿನ್ನಾಭಿಪ್ರಾಯಗಳಿವೆ. ಕ್ರಿ.ಶ. 1565ರ ನಂತರ ವಿಜನಗರ ಸಾಮ್ರಾಜ್ಯದ ಕೇಂದ್ರವಾದ ಹಂಪಿ ನಾಶವಾಯಿತು. ಇದಕ್ಕೆ ಯುದ್ಧದಲ್ಲಿ ಜಯಗಳಿಸಿದ ಮುಸ್ಲಿಂರ ದಾಳಿಗಳು, ಶೈವ–ವೈಷ್ಣವರ ಕಲಹ ಮತ್ತು ಸ್ಥಳೀಯರ ದುಷ್ಕೃತ್ಯಗಳು ಹಂಪಿನಾಶಕ್ಕೆ ಕಾರಣಗಳನ್ನು ಗುರುತಿಸಲಾಗಿದೆ. ಆಗಿನ ಸಂದರ್ಭಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಮೂರೂ ಅಂಶಗಳನ್ನು ಅಲ್ಲಗಳೆಯುವಂತಿಲ್ಲ. ಇವುಗಳಲ್ಲಿ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ಸುಲ್ತಾನರ ವಿಜಯವು ಬಹಳ ಮುಖ್ಯವಾದುದು.

ಮುಸ್ಲಿಂ ಸೈನ್ಯಗಳು ಸಿರಿಸಂಪತ್ತಿನಿಂದ ಕಂಗೊಳಿಸುತ್ತಿದ್ದ ರಾಜಧಾನಿ ಹಂಪಿಗೆ ಬಂದು ಸಾಮ್ರಾಜ್ಯವನ್ನು ವಿಕಾರಗೊಳಿಸಿದರೆಂಬ ಮಾತನ್ನು ಅನೇಕ ಮುಸ್ಲಿಂ ಕವಿಗಳು ಬರೆದಿದ್ದಾರೆ. ಇದನ್ನು ವಿಮರ್ಶಾತ್ಮಕವಾಗಿ ಅವಲೋಕಿಸಿದರೆ, ಎಷ್ಟರ ಮಟ್ಟಿಗೆ ಸತ್ಯ ಅಡಗಿದೆ ಎಂಬ ಪ್ರಶ್ನೆ ಉಂಟಾಗುತ್ತದೆ. ಆಳುವ ದೊರೆಗಳ ಆಶ್ರಯ ವನ್ನು ಅವಲಂಬಿಸಿದ ಇವರು ರಾಜ್ಯದ ವೈಭವೀಕರಣ ಮತ್ತು ಅರಸನ ಹೊಗಳಿಕೆಯ ಮಾತುಗಳೇ ಅವರ ಬರವಣಿಗೆಯಲ್ಲಿ ಸೇರ್ಪಡೆಗೊಂಡಿರುತ್ತವೆ. ಆದರೂ

ವಿಜಯನಗರ ಸಂದರ್ಭದಲ್ಲಿ ರಾಜಧಾನಿ ಹಂಪಿ ವಿನಾಶಕ್ಕೆ ಮುಸ್ಲಿಂ ಸೈನಿಕರ ಕಾರ್ಯಚಟುವಟಿಕೆಗಳು ಮುಖ್ಯವಾಗುತ್ತವೆ. ಕರ್ನಾಟಕ ಚರಿತ್ರೆಯಲ್ಲಿ ಚಾಲುಕ್ಯ-ಪಲ್ಲವರ ಆದಿಯಾಗಿ ಅನೇಕ ಇಂಥ ಘಟನೆಗಳನ್ನು ಗಮನಿಸಬಹುದು. ಆದರೆ ಅವು ವಿಜಯನಗರದಷ್ಟು ಭೀಕರವಾಗಿರಲಿಲ್ಲ. ಮಹಮ್ಮದ ಇಬ್ರಾಹಿಂ ಜುಬೇರಿ ರಚಿಸಿದ ವಿಜಾಪುರ ಆದಿಲಶಾಹಿಗಳ ಚರಿತ್ರೆ ಕುರಿತು *ಬುಸಾತಿನೆ-ಸಲಾತೀನ* ಎಂಬ ಕೃತಿಯಲ್ಲಿ ಸುಲ್ತಾನರ ಗೆಲುವು ಮತ್ತು ಹಂಪಿ ನಾಶದ ಚಿತ್ರಣವನ್ನು ನೀಡಲಾಗಿದೆ.

ವಿಜಾಪುರದ ಮಹಮ್ಮದ ಇಬ್ರಾಹಿಂ ಜುಬೇರಿ ಎಂಬುವನು ಕ್ರಿ.ಶ. 1824-30ರ ಮಧ್ಯ ರಚಿಸಿದ ಮೂಲ ಪರ್ಶಿಯನ್ ಕೃತಿ. ನಂತರ ಇದನ್ನು ದಖನಿ, ಹಿಂದಿ, ದೇವನಾಗರಿ, ಉರ್ದುವಿಗೆ ಅನುವಾದಮಾಡಲಾಗಿದೆ. 1999ರಲ್ಲಿ ಕೃಷ್ಣಾಕೊಲ್ಹಾರ ಕುಲಕರ್ಣಿಯವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಮುಖ್ಯವಾಗಿ ಈ ಗ್ರಂಥದಲ್ಲಿ ವಿಜಾಪುರ ಸುಲ್ತಾನರನ್ನು ಗಮನದಲ್ಲಿಟ್ಟುಕೊಂಡು ಅವರ ಜೀವನವೃತ್ತಾಂತವನ್ನು ಬರೆಯಲಾಗಿದೆ. ಇದು ಆದಿಲ್‌ಶಾಹಿಗಳ ಉತ್ತರ ಕಾಲದಲ್ಲಿ ಅಂದರೆ ಸುಮಾರು 140 ವರ್ಷಗಳ ತರುವಾಯ ರಚಿತವಾಗಿದೆ. ಗ್ರಂಥಕಾರನು ಇದನ್ನು ಬರೆಯುವಾಗ ಅನೇಕ ಸಮಕಾಲೀನ ಗ್ರಂಥಗಳನ್ನು ಬಳಸಿಕೊಂಡಿದ್ದಾನೆ. ಅವುಗಳಲ್ಲಿ ಮಹಮ್ಮದ ಕಾಸಿಮ ಫಿರಿಸ್ತಾ (1606-10)- **ನವರಸನಾಮಾ ಫರಿಶ್ತಾ-ಗುಲ್ಶನೆ ಇಬ್ರಾಹಿಮೀ**, ಮೀರ ರಫೀ ಉದ್ದೀನ ಶಿರಾಜೀ (1608-09) - **ತಜಕರದುಲಮುಲುಕ**, ಮುಲ್ಲಾ ಜಹೂರ ವಲದ ಮುಲ್ಲಾ ಜಹುರೀ(1676 ಮೊದಲು)- **ಮಹಮದ ನಾಮಾ**, ಸಯ್ಯದ ನೂರುಲ್ಲಾಹ ವಲದ ಕಾಜೀ ಸಯ್ಯದ ಆಲೀ ಮಹಮ್ಮದ ನೂರುಲ್ಲಾ (1676 ಮೊದಲು) - **ಅಲೀ ಆದಿಲಶಾಹೀ**, ಮಲಿಕುಷಾಆರಾ ದಕ್ಷಿಣೀ ಮಿಯಾ ನಸರತೀ(1676 ಮೊದಲು) - **ಆಲೀನಾಮಾ** , ಮಿಯಾ ನಸರತೀ - **ಗುಲ್ಶನೆ ಇಷ್ಕ**, ಶೇಖ ಅಬದುಲ ಹಸನ ವಲದ ಕಾಜೀ ಅಬದುಲ ಅಜೀಜ(1700 ಮೊದಲು) - **ತಬಯೆಕ ಆದಿಲಶಾಹೀ** ಶೇಖ ಮಹಮ್ಮದ ಬಹರೀ(ಸು.1700) - **ಜಹ್ವೆರರೂಹ** ಮತ್ತು **ಜಹವೇರೆ ಕುನಿಯಾ** ಕೃತಿಗಳು. ಇವುಗಳನ್ನು ಬಳಸಿಕೊಂಡಿದ್ದರಿಂದ *ಬುಸಾತಿನೆ-ಸಲಾತೀನ* ಗ್ರಂಥಕ್ಕೆ ಐತಿಹಾಸಿಕ ಮಹತ್ವ ದೊರೆಯುತ್ತದೆ. ಪ್ರಸ್ತುತ ಗ್ರಂಥದಲ್ಲಿ ಆದಿಲಶಾಹಿಗಳಿಗೆ ಹೆಚ್ಚು ಮಹತ್ವ ದೊರೆತಿದ್ದರೂ ಸಮಕಾಲೀನ ಅರಸುಮನೆತನಗಳ ಚರಿತ್ರೆಯೂ ಇದರಲ್ಲಿ ಅಡಗಿದೆ. ಈ ಗ್ರಂಥದ ಆಯ್ದಭಾಗಗಳ ಮಾಹಿತಿಗಳನ್ನು ಪಡೆದು ವಿಜಯನಗರ ನಾಶದ ಬಗೆಗೆ ಚರ್ಚಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದ ಪತನ ಮತ್ತು ಹಂಪಿ ನಾಶವನ್ನು ಕುರಿತಂತೆ ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ ಮತ್ತು ಪಿ. ರತ್ನಾವತಿ ಅವರ

ಸಂವಾದವನ್ನು ಪ್ರಜಾವಾಣಿ ದಿನಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ (ಅಕ್ಟೋಬರ್, 2008) ಪ್ರಕಟಿಸಲಾಗಿದೆ. ಈ ಮೂರು ಸಂವಾದಗಳು ಹಂಪಿನಾಶದ ಬಗ್ಗೆ ವಿಭಿನ್ನ ರೀತಿಯಲ್ಲಿ ಅರ್ಥೈಸುವ ಸಾಧ್ಯತೆಯನ್ನು ವ್ಯಕ್ತಪಡಿಸುತ್ತವೆ. ರಕ್ಕಸಗಿ-ತಂಗಡಗಿ ಯುದ್ಧದ ಪರಿಣಾಮಗಳನ್ನು ಚರ್ಚಿಸುವಾಗಲೂ ವಿದ್ವಾಂಸರ ವಿಭಿನ್ನ ಹೇಳಿಕೆಗಳನ್ನು ಗಮನಿಸಬಹುದಾಗಿದೆ.

ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ವಿಜಯನಗರ ಸೈನ್ಯ ಸೋತು ಇಡೀ ಸಾಮ್ರಾಜ್ಯದ ವ್ಯವಸ್ಥೆಯೇ ಕಣ್ಮರೆಯಾಯಿತು. ಅಳಿಯ ರಾಮರಾಯನ ಮರಣ ಹಂಪಿಯ ವೈಭವವನ್ನೇ ನಾಶವಾಗುವಂತೆ ಮಾಡಿತು. ಈ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ, ಯುದ್ಧದಲ್ಲಿ ಸೋತ ಸೈನಿಕರು ಪ್ರಾಣಭೀತಿಯಿಂದ ತಪ್ಪಿಸಿಕೊಂಡು ಓಡತೊಡಗಿದರು. ಆಗ ಮುಸಲ್ಮಾನರ ಸೈನಿಕರು ಎಲ್ಲೆಂದರಲ್ಲಿ ಸಾಮೂಹಿಕವಾಗಿ ಕೊಲೆಗೈದರು. ಸೈನಿಕರು ಹಲ್ಲೆಯಾದಲ್ಲೆಲ್ಲ ಹಿಂದುಗಳ ಪ್ರೇತಗಳ ರಾಶಿಯನ್ನು ಒಟ್ಟಲಾಗಿತ್ತು. ಕತ್ತರಿಸಿಬಿದ್ದ ಹಿಂದುಗಳ ರಕ್ತ ಎಷ್ಟೋ ಕೋಸುಗಳವರೆಗೆ ಹರಿದು ಭೂಮಿಯೆಲ್ಲಾ ತಾಮ್ರವರ್ಣದ್ದಾಗಿತ್ತು.

ಈ ವರ್ಣನೆಯಲ್ಲಿ ಯುದ್ಧದ ಗೆಲುವಿನ ಪ್ರಶಂಸೆಯ ಮಾತುಗಳನ್ನು ಸಹಜವಾಗಿಯೇ ಗಮನಿಸಬಹುದು. ಇಂಥ ಭಯಂಕರ ಯುದ್ಧಗಳು ತಲತಲಾಂತರದಿಂದ ನಡೆಯುತ್ತ ಬಂದಿವೆ. ಎಷ್ಟೋ ಸೈನಿಕರು ಸಾಮ್ರಾಜ್ಯಕ್ಕಾಗಿ ತಮ್ಮ ಪ್ರಾಣವನ್ನು ತೆತ್ತಿದ್ದಾರೆ. ಆದರೆ ವಿಜಯನಗರ ಸಂದರ್ಭದಲ್ಲಿ ಬೇರೆಯೇ ಚಿತ್ರಣವನ್ನು ನಿರೂಪಿಸಲಾಗಿದೆ. ಇಲ್ಲಿ ಹಿಂದು ಎಂಬ ಪದಬಳಕೆ ಮುಸ್ಲಿಂರ ವೈಭವದ ಸಂಕೇತವಾಗಿದೆ. ಹಾಗಾದರೆ ಮುಸ್ಲಿಂ ಸೈನಿಕರಾರು ಸಾಯಲಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಯುದ್ಧದ ಘಟನೆಗಳು ಆ ಪರಿಸರದ ಜನರ ಬಾಯಿಯಲ್ಲಿ ತಲತಲಾಂತರದಿಂದ ಉಳಿದುಬಂದಿವೆ. ಯುದ್ಧದಲ್ಲಿ ಸತ್ತ ನೂರಾರು ಸೈನಿಕರನ್ನು ತಂದು ಸುಟ್ಟದ್ದರಿಂದ ಬೂದಿಹಾಳ ಎಂಬ ಗ್ರಾಮನಾಮವಾಯಿತೆಂದು ಜನರು ಹೇಳುತ್ತಾರೆ.

ಈ ಅವಧಿಯಲ್ಲಿ ಸುಲ್ತಾನರು ಒಂದು ಡಂಗುರ ಸಾರಿದರು. ಆನೆಗಳು, ತೋಪುಗಳು, ಧ್ವಜದಂತಿರುವ ಸೈನ್ಯದ ಡಾಲುಗಳು, ಚಾಫಡಗಳು, ವಾದ್ಯಗಳು, ಬಾದಶಾಹಿ ಥಾಟಿನ ಪದಾರ್ಥಗಳನ್ನು ಯಾರೂ ತೆಗೆದುಕೊಂಡು ಹೋಗಬಾರದು. ಉಳಿದದ್ದರಲ್ಲಿ ಏನನ್ನು ಇಡಬೇಡಿರಿ. ಯಾರ ಕೈಗೆ ಏನೆಲ್ಲ ಹಣ, ಮುತ್ತುರತ್ನಗಳು, ಆಭರಣಗಳು, ವಸ್ತ್ರಗಳು, ಬೆಲೆಬಾಳುವ ಬಟ್ಟೆಗಳು ದೊರೆಯುತ್ತವೆಯೋ ಅವೆಲ್ಲವುಗಳನ್ನು ಒಯ್ಯಲು ಅನುಮತಿ ನೀಡಲಾಗಿದೆ. ಹಾಗೆಯೇ ಅಪಹರಿಸಿದ ವಸ್ತುಗಳನ್ನು ಅವರಿಂದ ಇನ್ನೊಬ್ಬರು ಅಪಹರಿಸದಂತೆ ಆಜ್ಞೆಮಾಡಲಾಗಿದೆ. ಈ ಆಜ್ಞೆಯಿಂದ ಕಾರ್ಯಪ್ರವೃತ್ತರಾದ ಬಾದಶಹರ ಸೈನಿಕರು ಬಂಗಾರ, ಬೆಳ್ಳಿ, ಆಭರಣಗಳು,

ಮುತ್ತುರತ್ನಗಳು, ತಲವಾರಗಳು, ಲೋಹದ ಟೊಪ್ಪಿಗೆಗಳು ಮುಂತಾದವುಗಳನ್ನು ಸಂಗ್ರಹಿಸಿ ಆಯುಷ್ಯಪರ್ಯಂತ ದುಡಿಯುವ ಗರಜು ಇಲ್ಲವೆಂಬಂತೆ ಶ್ರೀಮಂತ ರಾದರು.

ಇಪ್ಪತ್ತು ದಿನಗಳ ಕಾಲ ನಡೆದ ಯುದ್ಧದಲ್ಲಿ ಕಂಗೆಟ್ಟಿದ್ದ ವಿಜಯನಗರ ಸೈನ್ಯ ರಣಭೂಮಿಯಿಂದ ಓಡಲು ಪ್ರಾರಂಭಿಸಿತು. ಸುಲ್ತಾನರ ಸೈನ್ಯ ಆನೆಗುಂದಿಯ, ಆನೆಗುಂದಿಯಿಂದ ಹತ್ತು ಕೋಸು ದೂರವಿರುವ ವಿಜಯನಗರದವರೆಗು ಅಟ್ಟಿಸಿಕೊಂಡು ಬಂತು. ದಾರಿಯುದ್ದಕ್ಕೂ ಹೆಣಗಳ ರಾಶಿ ಬಿದ್ದಿತ್ತು. ಆಗ ಲೆಕ್ಕ ಬರೆಯುವ ಗುಮಾಸ್ತನಿಗೆ ಸತ್ತವರ ಮತ್ತು ಗಾಯಗೊಂಡವರ ಗಣತಿ ಮಾಡಲು ಹೇಳಲಾಯಿತು. ಅವನು 12 ದಿನಗಳ ಕಾಲ ಗಣತಿಮಾಡಿ ಸತ್ತವರ ಸಂಖ್ಯೆ 1 ಲಕ್ಷ ವೆಂದು ವರದಿ ತಯಾರಿಸಿದನು.

ರಾಮರಾಯನ ಸಹೋದರ ತಿಮ್ಮರಾಜನು ಪೆನುಗೊಂಡೆಯ ಕೋಟೆಯಲ್ಲಿ ಆಶ್ರಯ ಪಡೆದನು. ರಾಮರಾಯನ ಮಗ ಪೆದ್ದ ತಿರುಮಲ ತನ್ನ ಆಪ್ತಮಂಡಳಿ ಯನ್ನು ಕರೆದುಕೊಂಡು ಹೋಗಿ ಆನೆಗುಂದಿಯಿಂದ ಮೂರು ಕೋಸು ದೂರದಲ್ಲಿ ಒಂದು ಬೆಟ್ಟದ ಮೇಲಿನ ವಿಶಾಲವಾದ ಗುಹೆಯನ್ನು ಸೇರಿ ಕಾಲಹರಣ ಮಾಡಿದನೆಂದು ಉಲ್ಲೇಖಿಸಲಾಗಿದೆ.

ಈ ಯುದ್ಧದಲ್ಲಿ ಪ್ರಾಣ ಉಳಿಸಿಕೊಂಡಿದ್ದ ತಿರುಮಲ 150 ಆನೆಗಳ ಮೇಲೆ ಮುಖ್ಯವಾದ ವಸ್ತುಗಳನ್ನು ಹೇರಿಕೊಂಡು ಅರಮನೆಯ ಸ್ತ್ರೀಯರು ಮತ್ತು ಬಂಧುಗಳನ್ನು ಕರೆದುಕೊಂಡು ಚಂದ್ರಗಿರಿಗೆ ತೆರಳಿದನು. ಈ ಕೃತಿಯ ಪ್ರಕಾರ ರಾಮರಾಯನ ಮಗ ಪೆದ್ದ ತಿರುಮಲ ಅರಮನೆಯ ಆಪ್ತಮಂಡಳಿಯೊಂದಿಗೆ ಆನೆಗುಂದಿಯ ಗವಿಯನ್ನು ಸೇರಿದ. ಆನೆಗುಂದಿಯಿಂದ ಮೂರು ಕೋಸು ದೂರದಲ್ಲಿ ಎಂಬ ಉಲ್ಲೇಖ ದುರ್ಗಾ ಬೆಟ್ಟವನ್ನು ಸೂಚಿಸುತ್ತದೆ. ಈ ದುರ್ಗಾ ಬೆಟ್ಟದಲ್ಲಿ ವಿಶಾಲವಾದ ಜಾಗ ಮತ್ತು ವಸತಿ ನೆಲೆಯನ್ನು ಗುರುತಿಸಬಹುದಾಗಿದೆ. ಅರಮನೆಯ ಪರಿಚಾರಕ ವರ್ಗ ಹಂಪಿಯಿಂದ ತೆರವುಗೊಂಡಿದ್ದರಿಂದ ರಾಜಧಾನಿಯ ಬಾಗಿಲು ತೆರೆದಂತಾಯಿತು. ಮುಸ್ಲಿಂ ಸೈನಿಕರಲ್ಲದೆ, ಹಾರೆ, ಗುದ್ದಲಿಸಹಿತ ಕಳ್ಳಕಾಕರು ರಾಜಧಾನಿಯನ್ನು ಪ್ರವೇಶಿಸಿದರು. ಇದಕ್ಕೆ ಮುಖ್ಯಕಾರಣ ಸುಲ್ತಾನರು ಸಾರಿದ ಡಂಗುರ. ಇದು ಹಂಪಿ ನಾಶಕ್ಕೆ ಪ್ರಮುಖ ಕಾರಣವಾಗುತ್ತದೆ. ಯಾರ ಕೈಗೆ ಏನೆಲ್ಲ ಹಣ, ಮುತ್ತುರತ್ನಗಳು, ಆಭರಣಗಳು, ವಸ್ತ್ರಗಳು, ಬೆಲೆಬಾಳುವ ಬಟ್ಟೆಗಳು ದೊರೆಯುತ್ತವೆಯೋ ಅವೆಲ್ಲವುಗಳನ್ನು ಒಯ್ಯಲು ಅನುಮತಿ ನೀಡಲಾಗಿದೆ. ಈ ಅನುಮತಿಯಿಂದ ಕಾರ್ಯಪ್ರವೃತ್ತರಾದ ದರೋಡೆಕೋರರು ರಾಜಧಾನಿಯನ್ನು ಲೂಟಿ ಮಾಡಿ ವಿಕಾರಗೊಳಿಸಿದರು. ಪೋರ್ಚುಗೀಸ್ ವರದಿಗಳು

ಹಂಪಿ ವಿನಾಶದ ಹೊಣೆಯನ್ನು ಮುಸ್ಲಿಂರ ಮೇಲೆ ಹೊರಿಸಿದಂತೆ ಕಾಣುತ್ತದೆ. ಇದನ್ನು ಮುಸ್ಲಿಂ ಲೇಖಕರೂ ಒಪ್ಪುವಂತೆ ಬರೆದಿದ್ದಾರೆ.

ವಿಜಯ ನಗರದ ಸುಲಿಗೆ

ಆದಿಲಶಾಹಿ (ವಿಜಾಪುರ), ನಿಜಾಮಶಾಹಿ (ಅಹಮ್ಮದ ನಗರದ ಅಹಮ್ಮದ ನಿಜಾಮಶಾಹಿ), ಕುತುಬಶಾಹಿ (ಗೋಲ್ಕೊಂಡ) ವಿಜಯನಗರಕ್ಕೆ ಬಂದರು. ಸಾವಿರಾರು ವರ್ಷಗಳವರೆಗೂ ಪಕೀರರ ಸೈನ್ಯ ವಿಜಯನಗರಕ್ಕೆ ಕಾಲಿಟ್ಟಿರಲಿಲ್ಲ. ಸುಲ್ತಾನರ ಸೈನ್ಯ ದೊಡ್ಡ ದೊಡ್ಡ ಗಟ್ಟಿಯಾದ ಥರವನ್ನು ತುಂಬಿದ ಕಟ್ಟಡಗಳನ್ನು ವಿಶಾಲವಾದ ಅರಮನೆಗಳನ್ನು ನೆಲಸಮ ಮಾಡಿದರು. ಅಧರ್ಮಿ ರಾಮರಾಯನು ಮಸೀದಿಗಳನ್ನು ಕೆಡವಿ ನಾಶ ಮಾಡಿದುದರ ನೂರುಪಟ್ಟು ಅಧಿಕ ಕಾರ್ಯ ಇದಾಗಿತ್ತು.

ವಿಜಯನಗರ ಪಟ್ಟಣದಲ್ಲಿ ಅಮೀರ ಜನರು, ಸಾಹುಕಾರರು, ರೈತರು, ಎಲ್ಲ ಜಾತಿಯ ಜನರು ಮತ್ತು ಪಕೀರರು ಬಹಳ ಸಂತೋಷದಿಂದ ಜೀವನ ನಡೆಸುತ್ತಿದ್ದರು. ಅವರೆಲ್ಲರೂ ಮುಸಲ್ಮಾನ ಸೈನ್ಯ ಲೂಟಿ ಮಾಡುವ ಸುದ್ದಿ ತಿಳಿದು ತಮ್ಮ ತಮ್ಮ ಮನೆಗಳಲ್ಲಿ ಬಾವಿಗಳಲ್ಲಿ ಹೌದುಗಳಲ್ಲಿ ಸಂಪತ್ತನ್ನು ಬಚ್ಚಿಟ್ಟರು. ದೊಡ್ಡ ದೊಡ್ಡ ಶ್ರೀಮಂತರು ತಮ್ಮ ಹೆಂಡತಿ ಮಕ್ಕಳು ಕುಟುಂಬ ಸಮುದಾಯ ಗಳೊಂದಿಗೆ ಉದರ ನಿರ್ವಹಣಾರ್ಥ ಬೇಕಾಗುವ ವಸ್ತುಗಳನ್ನು ತೆಗೆದುಕೊಂಡು ನಗರದ ಸುತ್ತಮುತ್ತಲಿರುವ ದೊಡ್ಡ ದೊಡ್ಡ ಗವಿಗಳಲ್ಲಿ ಆಶ್ರಯಪಡೆದರು. ಇನ್ನೂ ಕೆಲವರು ಭಯಭೀತರಾಗಿ ಬೇರೆ ಬೇರೆ ಗ್ರಾಮಗಳನ್ನು ಸೇರಿದರು. ಮುಸಲ್ಮಾನ ಸೈನಿಕರು ಕಣ್ಣಿಗೆ ಕಂಡದ್ದನ್ನು ಸುಲಿಗೆ ಮಾಡಿದರು. ಸಾಕಷ್ಟು ದ್ರವ್ಯವನ್ನು ಜನರು ಭೂಮಿಯಲ್ಲಿಟ್ಟರು. ವಿಷಯ ತಿಳಿದು ಮನೆಗಳನ್ನು ಅಂಗಡಿಗಳನ್ನು ಇತರೆ ಕಟ್ಟಡಗಳನ್ನು ಅಗೆದು ತೆಗೆದು ಸಂಪತ್ತನ್ನು ಹೊರತೆಗೆದರು.

ವಿಜಯನಗರ ಪಟ್ಟಣದಲ್ಲಿದ್ದಂಥ ಅರಮನೆ, ಅಂಗಡಿಗಳನ್ನು ನಾಶಮಾಡಿದ ರೆಂದು ಉಲ್ಲೇಖಿಸಲಾಗಿದೆ. ಇಲ್ಲಿಯ ದೇವಾಲಯಗಳನ್ನು ನಾಶಮಾಡಿದುದರ ಉಲ್ಲೇಖವಿಲ್ಲ. ದೇವಾಲಯಗಳ ನಾಶದ ಕುರಿತಂತೆ ವಿದ್ವಾಂಸರಿಂದ ಅನೇಕ ಚರ್ಚೆಗಳು ನಡೆದಿವೆ. ಶೈವರಿಂದಲೇ ವೈಷ್ಣವ ದೇವಾಲಯಗಳು ನಾಶವಾದವೆಂಬ ಹೇಳಿಕೆಯೂ ಇದೆ. ಇದರಿಂದ ಶೈವ ದೇವಾಲಯಗಳು ಉಳಿದು ವೈಷ್ಣವ ದೇವಾಲಯಗಳು ನಾಶವಾಗಿರುವುದಕ್ಕೆ ಕಾರಣಗಳನ್ನು ನೀಡಲಾಗಿದೆ. ಇಲ್ಲಿ ಕೆಲವು ವೈಷ್ಣವ ದೇವಾಲಯಗಳಿಗೆ ಇಂದಿಗೂ ಪೂಜೆ ಪುನಸ್ಕಾರಗಳು ನಡೆದು ಬಂದಿವೆ (ಕೋದಂಡರಾಮ, ಮಾಲ್ಯವಂತ ರಘುನಾಥ). ಅದರಂತೆ ಶೈವ ದೇವಾಲಯ

ಗಳಿಗೂ ಪೂಜೆ ನಡೆದು ಬಂದಿದೆ. (ವಿರೂಪಾಕ್ಷ, ಬಡವಿಲಿಂಗ, ವೀರಭದ್ರ). ಇನ್ನೂ ಶೈವ, ವೈಷ್ಣವ ದೇವಾಲಯಗಳೂ ನಾಶವಾಗಿವೆ. ಉದಾ. ನೆಲಮಟ್ಟದ ವಿರೂಪಾಕ್ಷ, ಚಂದ್ರಶೇಖರ ಮತ್ತು ಹಜಾರರಾಮ, ವಿಠಲ, ತಿರುವೆಂಗಳನಾಥ ಮೊದಲಾದವು. ಈ ದೇವಾಲಯಗಳ ನಾಶಕ್ಕೆ ಮುಖ್ಯಕಾರಣ ನಿರ್ವಹಣೆ ಇಲ್ಲದ್ದು ಮತ್ತು ನಿಧಿ ಆಸೆಗಾಗಿ ಗರ್ಭಗೃಹದಲ್ಲಿರುವ ಮೂರ್ತಿಗಳನ್ನು ಅಗೆದು ತೆಗೆದಿರುವುದು. ಹಂಪಿಯ ಸುತ್ತಮುತ್ತಲಿರುವ ದೇವಾಲಯಗಳಲ್ಲಿ ಇದನ್ನು ಇಂದಿಗೂ ಗಮನಿಸಬಹುದು. ವಿರೂಪಾಕ್ಷ ಸ್ಥಳೀಯರ ದೇವತೆಯಾಗಿದ್ದರಿಂದ ವಿಜಯನಗರ ಸಾಮ್ರಾಜ್ಯ ಹಾಳಾದರೂ ಈ ದೇವಾಲಯವನ್ನು ವ್ಯವಸ್ಥಿತವಾಗಿ ಕಾಪಾಡಿಕೊಂಡು ಬರಲಾಯಿತು. ಶ್ರೀವೈಷ್ಣವರಿಗೆ ರಾಜಾಶ್ರಯ ದೊರೆತು, ಅವರಿಗಿದ್ದ ಅಪಾರ ಸವಲತ್ತುಗಳು, ದಾನದತ್ತಿಗಳು, ಉಡುಗೊರೆಗಳು ಇನ್ನಿಲ್ಲದಂತಾದವು. ಇದನ್ನು ಮನಗಂಡ ಶ್ರೀವೈಷ್ಣವರು ಹಂಪಿಯಿಂದ ಬೇರೆಡೆಗೆ ಹೋದರು. ಇದರಿಂದ ವಾಸ್ತುಶಿಲ್ಪದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದ ಅನೇಕ ದೇವಾಲಯಗಳು ಹಾಳಾಗಲು ಕಾರಣವಾಯಿತು.

ಅಧರ್ಮೀಯನಾದ ರಾಮರಾಯನು ಮಸೀದಿಗಳನ್ನು ನಾಶಮಾಡಿದನೆಂದು ಹೇಳಲಾಗಿದೆ. ಮತ್ತೆ ವಿಜಯನಗರ ಪಟ್ಟಣದಲ್ಲಿ ಅಮೀರ ಜನರು, ಸಾಹುಕಾರರು, ರೈತರು, ಎಲ್ಲ ಜಾತಿಯ ಜನರು ಮತ್ತು ಪಕೀರರು ಬಹಳ ಸಂತೋಷದಿಂದ ಜೀವನ ನಡೆಸುತ್ತಿದ್ದರೆಂದು ಉಲ್ಲೇಖಿಸಲಾಗಿದೆ. ವಿಜಯನಗರದ ಅರಸರು ಯಾವತ್ತೂ ಮಸೀದಿಗಳನ್ನು ನಾಶಮಾಡುವುದಕ್ಕೆ ಕೈಹಾಕಲಿಲ್ಲ. ಬದಲಾಗಿ ಸಾಮ್ರಾಜ್ಯದಲ್ಲಿ ಅನೇಕ ಮಸೀದಿಗಳನ್ನು ನಿರ್ಮಿಸಿ ಧಾರ್ಮಿಕ ಸಮಾನತೆಯನ್ನು ಮೆರೆದಿದ್ದಾರೆ. ರಾಮರಾಯನ ಕೈಕೆಳಗಿದ್ದ ಇಬ್ಬರು ಮುಸ್ಲಿಂ ಸೇನಾಧಿಪತಿಗಳು ತಮ್ಮ ಸೈನ್ಯದೊಂದಿಗೆ ಸ್ವಧರ್ಮೀಯರನ್ನು ಸೇರಿಕೊಂಡು ಯುದ್ಧದ ಪರಿಸ್ಥಿತಿಯನ್ನೇ ಬದಲಾಯಿಸಿದರು. ಇವರು ಒಡೆಯನಿಗೆ ಮಾಡಿದ ದ್ರೋಹ ವಿಜಯನಗರ ಸೋಲಿಗೆ ಮುಖ್ಯಕಾರಣವೆಂದು ಗುರುತಿಸಲಾಗಿದೆ.

ರಾಮರಾಯನ ವಿದೇಶಾಂಗ ನೀತಿ ಸಾಮ್ರಾಜ್ಯದ ನಾಶಕ್ಕೆ ಕಾರಣವಾಯಿತೆಂದು ಎಲ್ಲರೂ ನಿಂದಿಸುತ್ತಾರೆ. ಆದರೆ ಅವನು ಸಾಮ್ರಾಜ್ಯಕ್ಕಾಗಿ ಪ್ರಾಣತೆತ್ತ ಬಗ್ಗೆ ಹೇಳುವುದಿಲ್ಲ. ವಿಜಯನಗರ ಸಾಮ್ರಾಜ್ಯದ ಹಿತಕ್ಕಾಗಿ ಕೌಟಿಲ್ಯನು ಪ್ರಸ್ತಾಪಿಸಿದ ಇಂಥ ರಾಜನೀತಿಯನ್ನು ಅನುಸರಿಸುವುದು ಅನಿವಾರ್ಯವಾಗಿತ್ತು. ಸುಲ್ತಾನರಿಗೆ ವಿಜಯನಗರದ ಪ್ರಾದೇಶಿಕ ವಿಸ್ತಾರ ಮತ್ತು ಅದರ ಏಳಿಗೆ, ಧಾರ್ಮಿಕ ವೈರತ್ವ ಮನೆಮಾಡಿತ್ತು. ಆದ್ದರಿಂದ ಸುಲ್ತಾನರು ಒಟ್ಟಾಗಿ ಹೋರಾಡಲು ಸಿದ್ಧರಾದರು.

ಬೆಟ್ಟಗುಡ್ಡಗಳು

ಈ ಪರಿಸರದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಆಳವಾದ ಗವಿಗಳಿವೆ. ಗುಹೆಗಳಲ್ಲಿ 8-10 ಕೋಸುಗಳವರೆಗೆ ನಡೆದು ಹೋಗಬಹುದು. ಕೆಲವಡೆ ತುಂಬಾ ಕಠಿಣ, ಕೆಲವೆಡೆ ವಿಶಾಲವಾದ ಹಾದಿಗಳು, ಇನ್ನೂ ಕೆಲವೆಡೆ ಗಾಢ ಅಂಧಕಾರ. ಅಲ್ಲಿ ದಿವಿಟಗೆಗಳಿಲ್ಲದೆ ಒಂದು ಹೆಜ್ಜೆಯನ್ನು ಇಡಲು ಸಾಧ್ಯವಿಲ್ಲ. ಕೆಲವು ಗುಹೆಗಳಲ್ಲಿ ಆಕಾಶದಿಂದ ನೇರವಾಗಿ ಪ್ರಕಾಶ ಬೀಳುತ್ತದೆ. ಗವಿಗಳನ್ನು ಸೇರಿದ ಇಲ್ಲಿಯ ಜನರು ರಾತ್ರಿ ಹೊತ್ತು ಹೊರಬಂದು ಸಂಸಾರಕ್ಕೆ ಬೇಕಾಗುವ ವಸ್ತುಗಳನ್ನು ತಮಗೆ ಗೊತ್ತಿದ್ದ ಸ್ಥಳಗಳಿಂದ ಪಡೆಯುತ್ತಿದ್ದರು. ಇದನ್ನು ಗಮನಿಸಿದ ಮುಸಲ್ಮಾನ್ ಜನರು ಅವರನ್ನು ಹಿಡಿಯಲು ಅವಿತು ಕುಳಿತುಕೊಳ್ಳಲು ಆರಂಭಿಸಿದರು. ಅವರಿಂದ ಏನನ್ನಾದರೂ ಕಿತ್ತುಕೊಳ್ಳದೇ ಬಿಡುತ್ತಿರಲಿಲ್ಲ.

ಈ ಸಂದರ್ಭದಲ್ಲಿ ಭಾಗವಹಿಸಿದ್ದ ರಫಿ ಉದ್ದೀನ ಶಿರಾಜಿ ಹೇಳುವಂತೆ, ಒಂದು ದಿನ ಗವಿಯಿಂದ ಹೊರಬಂದಿದ್ದ ಇಬ್ಬರನ್ನು ಹಿಡಿದೆನು. ಗುಹೆಯಲ್ಲಿ ನಮ್ಮ ಹೆಂಡಿರು ಮಕ್ಕಳು ಮತ್ತು ಸಂಪತ್ತು ಇದೆ. ನಮ್ಮನ್ನು ಕೊಲ್ಲದಿದ್ದರೆ, ನಮ್ಮೊಂದಿಗೆ ಬನ್ನಿ, ಸಾಕಷ್ಟು ಸಂಪತ್ತನ್ನು ಕೊಡುತ್ತೇವೆಂದು ಹೇಳುತ್ತಾರೆ. ನಾನು ಕೆಲವು ಜನರನ್ನು ಕರೆದುಕೊಂಡು ಅವರೊಂದಿಗೆ ಹೋದೆ. ಮುಂದೆ ಹೋದಂತೆ ಬಹಳ ಸಂದಿಗಳು ಕಾಣಹತ್ತಿದವು. ಮತ್ತೆ ಮರಳಿ ಬರುವ ಬಗ್ಗೆ ಆಲೋಚನೆ ಮಾಡಿ ಕೆಲವು ಇದ್ದಿಲು ತುಂಡುಗಳಿಂದ ಗುರುತುಗಳನ್ನು ಮಾಡುತ್ತ ಸಾಗಿದೆವು.

ಸುಮಾರು ಒಂದು ಒಂದು ಕಾಲು ಕೋಸುಗಳವರೆಗೆ ಭಯಂಕರ ಗವಿಯಲ್ಲಿ ಹೋಗಿದ್ದೆವು. ಒಂದು ಸ್ಥಳವನ್ನು ತಲುಪಿದ ಮೇಲೆ ಮುಂದಿನ ದಾರಿ ನಾಲ್ಕು ಗಜಗಳವರೆಗೆ ಬಹಳ ಚಿಕ್ಕದಾಗಿತ್ತು. ಇದರಲ್ಲಿ ಕುಳಿತುಕೊಂಡೇ ಹೋಗಬೇಕಾಗಿತ್ತು. ಆ ಇಬ್ಬರು ಕೈದಿಗಳಿಗೆ ಕೈ ಕಟ್ಟಿ ಮುಖವಾಡ ಹಾಕಿ ಮೊದಲು ಹೋಗುವಂತೆ ಹೇಳಿದೆವು. ಅವರು ಹೋದ ನಂತರ ಆ ಗುಹೆಯಲ್ಲಿ ಜನರ ಗದ್ದಲ ಕೂಗಾಟ ಆರಂಭವಾಯಿತು. ಒಳಗಡೆ ತುಂಬಾ ಜನರಿದ್ದಾರೆಂದು ತಿಳಿದು, ಸ್ವಲ್ಪ ದ್ರವ್ಯಕ್ಕೋಸ್ಕರ ನಮ್ಮ ಜೀವವನ್ನೆ ತೆರಬೇಕಾಗುತ್ತದೆಂದು ಕಲ್ಲಿನ ಮೇಲೆ ಮಾಡಿದ ಗುರುತುಗಳಿಂದ ಜೀವಂತವಾಗಿ ಮರಳಿಬಂದೆವು.

ಒಂದು ದಿನ ಆದಿಲ್‌ಶಾನ ಸೈನಿಕರು ಸ್ಥಳೀಯ ಜನರು ಮತ್ತು ಪರಕೀಯ ರೊಂದಿಗೆ ಸೇರಿ ಸಂಗ್ರಹಿಸಿದ್ದ ಬಂಗಾರ, ರತ್ನ, ಆಭರಣಗಳನ್ನು ತುಂಬಿದ್ದ ತಾಮ್ರದ ಕೊಡವೊಂದನ್ನು ಆ ನಗರದ ಕುಸಿದು ಬಿದ್ದ ಮನೆಯಲ್ಲಿ ಕುಳಿತು ಹಂಚಿಕೊಳ್ಳುತ್ತಿದ್ದರು. ನಿಜಾಮಶಾಹಿ ತನ್ನ ಸೈನಿಕರೊಂದಿಗೆ ನಗರವನ್ನು ಅಡ್ಡಾಡಿ ನೋಡಬೇಕೆಂದು ಹೊರಟನು. ಈ ದೃಶ್ಯವನ್ನು ಕಂಡ ನಿಜಾಮಶಾಹಿಯ ಸೈನಿಕರು

ಅದರಲ್ಲಿ ತಮಗೂ ಪಾಲುಕೊಡಬೇಕೆಂದು ಗದ್ದಲ ಸುರುಮಾಡಿದರು. ಆದಿಲ್‌ಶಾಹಿ ಮತ್ತು ನಿಜಾಮಶಾಹಿಯ ಸೈನಿಕರ ಮಧ್ಯ ಆರಂಭವಾದ ಈ ಕಲಹ ಬಿಚ್ಚುಗತ್ತಿ ಯುದ್ಧಕ್ಕೆ ದಾರಿಮಾಡಿತು. ಇಬ್ಬರ ಕಡೆಯಲ್ಲೂ ಅನೇಕ ಜನರು ಸತ್ತರು.

ಇವರಲ್ಲಿ ಆಶಿಕ ಆಬದಾಲ ಎಂಬ ಪಕೀರನು ತರೆಯಾದ ದಣಿ. ಇವನು ಕೀರ್ತಿವಂತ ಸಾಧುಪುರುಷನಾಗಿದ್ದ. 30–40 ವಿದ್ಯಾವಂತ ಶಿಷ್ಯರನ್ನು ಹೊಂದಿದ್ದ. ಈ ಹೊಡೆದಾಟದಲ್ಲಿ ಹಿಂದಿನಿಂದ ಅವನಿಗೆ ಇರಿಯಲಾಯಿತು. ಗಂಟಲಿನವರೆಗೆ ಇರಿತಕ್ಕೆ ಒಳಗಾದ ಅವನಿಗೆ ಹೊಲಿಗೆಹಾಕಿ ಮಲಾಮು ಹಚ್ಚಿ ಉಪಚರಿಸಿ ಬದುಕಿಸಲಾಯಿತು.

ಇದನ್ನು ಗಮನಿಸಿದ ನಿಜಾಮಶಾಹಿ, ನಿತ್ಯ ನಡೆಯುತ್ತಿದ್ದ ಇಂಥ ಗದ್ದಲಗಳನ್ನು ತಪ್ಪಿಸಲು ಪ್ರತಿಯೊಂದು ಮನೆ, ಕಟ್ಟಡ, ಅಂಗಡಿಗಳಿಗೆ ಬೆಂಕಿ ಹಚ್ಚಲು ಹೇಳಿದನು. ಅದರಂತೆ ಬೆಂಕಿ ಹಚ್ಚಿದಾಗ ಕಟ್ಟಡ, ಮನೆ, ಉರಿದು ನೆಲಸಮವಾದವು. ಆರು ತಿಂಗಳ ಕಾಲ ಮುಸಲ್ಮಾನ ಸೈನಿಕರು ವಿಜಯನಗರದಲ್ಲಿದ್ದರು. ಸಾವಿರ ಕೋಸುಗಳ ಪರ್ಯಂತ ಆಸುಪಾಸಿನ ಗ್ರಾಮ, ಹಳ್ಳಿ, ಇತ್ಯಾದಿಗಳೆಲ್ಲವೂ ನಾಶವಾದವು.

ಆದಿಲ್‌ಶಾಹಿ ವಿಜಯನಗರವನ್ನು ನಾಶಮಾಡಿದ ಮೇಲೆ ಈ ಪ್ರದೇಶದಲ್ಲಿ ಕಟ್ಟಡಗಳನ್ನು ಕಟ್ಟಿಸಿ ಆಡಳಿತ ಇಲಾಖೆಯನ್ನು ಸ್ಥಾಪಿಸಿದನು. ಅದಕ್ಕೆ ಒಬ್ಬ ಗುಮಾಸ್ತನನ್ನು ನೇಮಕಮಾಡಿ ಜನವಸತಿ ಬೆಳೆಯಲು ಅನುಕೂಲ ಮಾಡಿಕೊಟ್ಟನು. ಮೂರು ವರ್ಷಗಳ ನಂತರ ಆನೆಗುಂದಿಯ ಬೆಟ್ಟದಲ್ಲಿ ಅವಿತುಕೊಂಡಿದ್ದ ರಾಮರಾಯನ ಮಗ ಗವಿಯಿಂದ ಹೊರಬಂದು ಕೋಟೆಯನ್ನು ವಶಪಡಿಸಿಕೊಂಡು ಆ ಇಲಾಖೆಯ ಒಡೆಯನಾದನು. ಅಲ್ಲದೆ ಆದಿಲ್‌ಶಾಹಿಯ ಗುಮಾಸ್ತನನ್ನು ಅಲ್ಲಿಂದ ಹೊರಹಾಕಿದನು. ರಫಿ ಉದ್ದೀನ ಶಿರಾಜಿ ಹೇಳುವಂತೆ ಹಿಜರಿಸನ್ 1017 (ಕ್ರಿ.ಶ. 1608–09) ರ ವರೆಗೂ ರಾಮರಾಯನ ಮಗ ಹೆಂಡತಿ ಮಕ್ಕಳೊಡನೆ ಆ ಕೋಟೆಯಲ್ಲಿಯೇ ವಾಸಿಸುತ್ತಿದ್ದನು. ಆ ಕೋಟೆಯ ಇಲಾಖೆ ಮತ್ತು ಆ ಇಲಾಖೆಯ ಸುಫರ್ದಿಯಲ್ಲಿ ಬರುವ ಗ್ರಾಮಗಳ ವಸೂಲಿಯನ್ನು ಮಾಡಿ ಜೀವಿಸುತ್ತಿದ್ದನು.

ಈ ಗ್ರಂಥದಲ್ಲಿ 8–10 ಕೋಸುಗಳ ವರೆಗೆ ದೊಡ್ಡ ದಡ್ಡ ಗವಿಗಳಿದ್ದವೆಂದು ಅವುಗಳ ವಿವರಣೆಯನ್ನು ರಫಿ ಉದ್ದೀನ ಸಿರಾಜ ಸ್ಪಷ್ಟವಾಗಿ ನೀಡಿದ್ದಾನೆ. ಆನೆಗುಂದಿಯಿಂದ ವಿಜಯನಗರ ಸಾಮ್ರಾಜ್ಯ 10 ಕೋಸು ದೂರವೆಂದು ಉಲ್ಲೇಖಿಸಲಾಗಿದೆ. ಅಂದರೆ ಈ ಗವಿಗಳ ಅಳತೆ ನಮಗೆ ಸ್ಪಷ್ಟವಾಗುತ್ತದೆ. ಹಂಪಿ ಪರಿಸರದಲ್ಲಿ ಗ್ರಾನಾಯಿಟ್ ಬಂಡೆಗಳನ್ನು ಹೊತ್ತ ಬೆಟ್ಟಗಳಲ್ಲಿ ಹೆಚ್ಚು ಆಳವಾಗಿರದ ವಿಶಾಲವಾದ ಅನೇಕ ಗವಿಗಳನ್ನು ಗಮನಿಸಬಹುದು. ಆದರೆ 8–10 ಕೋಸುಗಳವರೆಗೆ ಉದ್ದವಾದ ಗವಿಗಳು ಇರುವುದು ವಿರಳ. ಇದು ಕೂಡಾ ಉತ್ಪ್ರೇಕ್ಷೆಯಿಂದ ಕೂಡಿದೆ.

ಆಶಿಕ ಆಬದಾಲ ಎಂಬ ಪಕೀರನು ವಿಜಯನಗರಕ್ಕೆ ಬಂದಿರುವುದು ಮತ್ತು ಇಲ್ಲಿ ಸಿಕ್ಕಿದ ಆಭರಣಗಳನ್ನು ಹಂಚಿಕೊಳ್ಳಲು ಸೈನಿಕರ ಮಧ್ಯ ನಡೆದ ಗಲಾಟೆ, ಇದರಲ್ಲಿ ಸ್ಥಳೀಯರೂ ಭಾಗವಹಿಸುವಿಕೆಯನ್ನು ಹೇಳಲಾಗಿದೆ. ಈ ಆಶಿಕ ಅಬದಾಲನು ತರೆಯಾದ ದಣಿಯಾಗಿದ್ದನು. ತರೆಯಾ ಎಂಬುವುದು ವಿಜಾಪುರ ದಿಂದ ಐದು ಕಿ.ಮೀ. ದೂರದಲ್ಲಿರುವ ಇಂದಿನ ತೋರವಿ. ವಿಜಾಪುರದಲ್ಲಿ ಈ ಗ್ರಾಮದ ಕಡೆಗೆ ಹೋಗುವ ರಸ್ತೆಯಲ್ಲಿ ತೋರವಿನಾಕಾ ಇದೆ.

ತಿರುಮಲನು ಯುದ್ಧದಿಂದ ತಪ್ಪಿಸಿಕೊಂಡು ಚಂದ್ರಗಿರಿ ನಂತರ ಪೆನು ಗೊಂಡೆಯನ್ನು ಸೇರಿದ್ದನು. ಈಗ ರಾಜ್ಯ ರಕ್ಷಣೆಯ ಜವಾಬ್ದಾರಿ ಅವನ ಮೇಲಿತ್ತು. ಆದರೆ ಹಿಂದಿನ ವೈಭವವನ್ನು ಗಳಿಸಿಕೊಡಲು ಅವನಿಂದ ಸಾಧ್ಯವಾಗಲಿಲ್ಲ. ಅವನ ಮಗ ಒಂದನೆಯ ಶ್ರೀರಂಗನು ಪೆನುಗೊಂಡೆಯಿಂದ ತೆಲುಗುಪ್ರಾಂತವನ್ನು ಆಳುತಿದ್ದ. ಎರಡನೇಯ ಶ್ರೀರಂಗನು ಉತ್ತರಾಧಿಕಾರಿಯಾಗಿ ನೇಮಕವಾಗಿದ್ದ. ಮೂರನೆ ಮಗ ರಾಮನು ಕನ್ನಡ ಪ್ರದೇಶಗಳನ್ನು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ. ತಮಿಳು ಪ್ರದೇಶಗಳನ್ನು ಚಂದ್ರಗಿರಿಯಿಂದ ವೆಂಕಟಾದ್ರಿ ನೋಡಿಕೊಳ್ಳುತ್ತಿದ್ದ. ಈ ಅವಸ್ಥೆಯಲ್ಲಿ ರಾಮರಾಯನ ಮಗ ಪೆದ್ದ ತಿರುಮಲನು ತಾನೇ ರಾಜಪ್ರತಿನಿಧಿಯಾಗಬೇಕೆಂದು ಅಲಿ ಆದಿಲ್ ಶಾಹಿಗೆ ಪತ್ರ ಬರೆದ. ಮುರ್ತುಜಾ ನಿಜಾಮಶಾಹಿಯು ತಿರುಮಲನ ಆದೇಶವನ್ನು ಮನ್ನಿಸಿದ. ವಿಜಾಪುರ ಸೈನ್ಯ ಆನೆಗುಂದಿಯುನ್ನು ವಶಪಡಿಸಿಕೊಂಡು ಪೇನಿಗೊಂಡೆಯ ಕಡೆಗೆ ನಡೆಯಿತು. ಇಲ್ಲಿ ಸವರಂ ಚಿನ್ನಪ್ಪನಾಯಕನು ಅಲಿಯನ್ನು ಎದುರಿಸಿದ. ಇದರಿಂದ ಆದಿಲ್‌ಶಾಹಿ ಮರಳಿ ಬರಬೇಕಾಯಿತು.

ಪ್ರಸ್ತುತ ಗ್ರಂಥದಲ್ಲಿ 'ಯುದ್ಧದ ಪರಿಣಾಮದಿಂದ ರಾಮರಾಯನ ಮಗ ಪೆದ್ದ ತಿರುಮಲನು ಆನೆಗುಂದಿಯ ಗವಿಯನ್ನು ಸೇರಿದ್ದ.' ಇಲ್ಲಿಯ ಮೇಲುಸ್ತುವಾರಿ ಯನ್ನು ಆದಿಲ್‌ಶಾಹಿಯ ಗುಮಾಸ್ತನು ನೋಡಿಕೊಳ್ಳುತ್ತಿದ್ದ. ಮೂರು ವರ್ಷದ ನಂತರ ಹೊರಬಂದ ಪೆದ್ದ ತಿರುಮಲನ ಸ್ಥಿತಿ ಗುಮಾಸ್ತನು ನೋಡಿ ಕೊಳ್ಳುತ್ತಿದ್ದ ವ್ಯವಹಾರಕ್ಕಷ್ಟೇ ಸೀಮಿತವಾಗುತ್ತದೆ.

ಬುಸಾತಿನೆ-ಸಲಾತೀನ ಗ್ರಂಥ ವಿಜಯನಗರದ ಬಗ್ಗೆ ಗೊಂದಲದ ಮಾಹಿತಿ ಗಳನ್ನೂ ಒಳಗೊಂಡಿದ್ದರೂ, ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕೆಲವು ಮಹತ್ವದ ಅಂಶಗಳು ಸ್ಪಷ್ಟವಾಗುತ್ತವೆ. ಆದ್ದರಿಂದ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯ ದಲ್ಲಿ ನಡೆದ ಮಾಹಿತಿಗಳನ್ನು ತಿಳಿಸುವ ಮಹತ್ವದ ಆಕರ ಗ್ರಂಥವೆಂದು ಪರಿಗಣಿಸ ಬೇಕಾಗುತ್ತದೆ.

ಗ್ರಂಥಋಣ

1. ಕೋಡದ ಎಸ್.ಬಿ. 1960, *ವಿಜಯನಗರದ ನಿರ್ಣಾಯಕ ಯುದ್ಧ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ಕೃಷ್ಣ ಕೊಲ್ಹಾರ ಕುಲಕರ್ಣಿ (ಅನು), 1999, ಮಹಮ್ಮದ ಇಬ್ರಾಹಿಂ ಜುಬೇರಿ, *ಬುಸಾತಿನೆ-ಸಲಾತೀನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ನಾಗೇಗೌಡ ಎಚ್.ಎಲ್, 1966, *ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ವಾಸುದೇವ ಬಡಿಗೇರ, 2006, *ತಾಳಿಕೋಟೆ ಯುದ್ಧದ ಸ್ಥಳ ಸಮೀಕ್ಷೆ*, *ವಿಜಯನಗರ ಅಧ್ಯಯನ*, ಸಂಪುಟ-11, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
5. ಶಿವಣ್ಣ ಕೆ.ಎಸ್.(ಸಂ), 1997, *ಕರ್ನಾಟಕ ಚರಿತ್ರೆ*, ಚರಿತ್ರೆ ಮಾಲೆ-2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
6. ಸಿವೆಲ್ ರಾಬರ್ಟ್, 1992, *ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ*, ಅನು. ಸದಾನಂದ ಕನವಳ್ಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ಸೋಮಶೇಖರ ಎಸ್.ವೈ., 2010, *ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ*, ಸಂಚಿಕೆ ಪ್ರಕಾಶನ, ಚಿತ್ರದುರ್ಗ

೨೦. ಹಂಪಿಯ ಅಪರೂಪದ ಪಂಚಮುಖಲಿಂಗ

ಡಾ. ಸಿ. ಎಸ್. ವಾಸುದೇವನ್

ವಿಜಯನಗರಪಟ್ಟಣದ ವ್ಯಾಪ್ತಿ ಪ್ರದೇಶದಲ್ಲಿ ಶೈವ ಧರ್ಮವು ಪ್ರಬಲವಾಗಿತ್ತು. ಇಲ್ಲಿ ಅನೇಕ ಶೈವ ದೇವಾಲಯಗಳು ಕಂಡುಬಂದಿವೆ. ಇದರೊಂದಿಗೆ ಶೈವ ಶಿಲ್ಪಗಳು ದೊರಕಿದ್ದು ಶಿವಪಾರಮ್ಯವನ್ನು ಎತ್ತಿಹಿಡಿಯುತ್ತದೆ. ಈ ಪರಿಸರದಲ್ಲಿ ಕಂಡುಬಂದಿರುವ ಅನೇಕ ಶಿವಲಿಂಗಗಳು ವೈವಿಧ್ಯಮಯವಾಗಿದೆ. ಅವುಗಳಲ್ಲಿ ಗಮನ ಸೆಳೆಯುವಂತಹ ಕೆಲವು ವೈವಿಧ್ಯಮಯ ಪಂಚಲಿಂಗಗಳನ್ನು ಈಗಾಗಲೇ ಗಮನಿಸಲಾಗಿದೆ. ಹಂಪಿಯಲ್ಲಿ ಇತ್ತೀಚೆಗೆ ದೊರಕಿರುವ ಪಂಚಲಿಂಗವು ಇಲ್ಲಿನ ಶೈವಧರ್ಮದ ಪ್ರಾಬಲ್ಯ ಮತ್ತು ಪ್ರಾಚೀನತೆಯನ್ನು ತೋರಿಸಿವೆ. ವೈವಿಧ್ಯಮಯ ಪಂಚಲಿಂಗಗಳು ದೊರಕಿರುವುದರಿಂದ ಬಹುಶಃ ಇಲ್ಲಿ ಪಂಚಲಿಂಗಗಳನ್ನು ಆರಾಧಿಸುವ ಶೈವ ಉಪಪಂಥವಿತ್ತೆಂದು ಊಹಿಸಲಾಗಿತ್ತು[1]. ಪ್ರಸ್ತುತ ಈ ಮೇಲಿನ ನಮ್ಮ ನಿಲುವಿಗೆ ಮತ್ತಷ್ಟು ಪೂರಕವಾಗಿ ಆಧಾರಗಳು ದೊರಕಿರುವ ಹಿನ್ನೆಲೆಯಲ್ಲಿ ಶೈವಧರ್ಮದ ಕುರಿತಾದ ನಿಲುವುಗಳನ್ನು ಮರುಪರಿಶೀಲಿಸುವ ಅಗತ್ಯವಿದೆ. ಹಂಪಿಯಲ್ಲಿ ಪ್ರಪ್ರಥಮ ಬಾರಿಗೆ ಪಂಚಮುಖ ಲಿಂಗವು ದೊರಕಿದ್ದು ಪಂಚಲಿಂಗ ಮತ್ತು ಪಂಚಮುಖಲಿಂಗಗಳ ನಡುವೆ ಸಂಬಂಧಗಳಿವೆಯೇ ಮುಂತಾದ ವಿಚಾರಗಳನ್ನು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗುವುದು.

ಹಂಪಿ ಪರಿಸರದಲ್ಲಿ ವಿವಿಧ ಗಾತ್ರ ಮತ್ತು ರೂಪದ ಲಿಂಗಗಳು ದೊರಕಿವೆ[2]. ಉದಾಹರಣೆಗೆ ಬಡವಿಲಿಂಗ, ಕೋಟಿಲಿಂಗ, ಯೋಗಾಂಗಲಿಂಗ,[3] ಮುಂತಾದವು ಗಳು. ಕೆಲವು ಲಿಂಗಗಳನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿರುವುದನ್ನು ಕಾಣ ಬಹುದು. ಆದರೆ ಪಂಚಲಿಂಗಗಳನ್ನು ಯಾವ ದೇವಾಲಯದಲ್ಲಿಯೂ ಪ್ರತಿಷ್ಠಾಪಿಸಿಲ್ಲ ಮತ್ತು ಪಂಚಲಿಂಗವಿರುವ ದೇವಾಲಯವು ಹಂಪಿ ಪರಿಸರದಲ್ಲಿ ದೊರಕಿಲ್ಲ[4]. ಆದರೆ ಪಂಚಲಿಂಗಗಳ ಬಿಡಿಶಿಲ್ಪಗಳು ಹೇರಳವಾಗಿ ದೊರಕಿವೆ. ಹಂಪಿಯ ಶಾಸನಗಳು ಪಂಚಲಿಂಗಗಳ ಕುರಿತು ಉಲ್ಲೇಖಿಸುವುದಿಲ್ಲ ಎಂಬು ದಾಗಿಯೂ ಮತ್ತು ಪಂಚಲಿಂಗಗಳು ಇಷ್ಟು ಪ್ರಮಾಣದಲ್ಲಿ ಹಂಪಿ ಪರಿಸರದಲ್ಲಿ ದೊರಕುವುದ ರಿಂದ ವಿಜಯನಗರ ಕಾಲದಲ್ಲಿ ಪಂಚಲಿಂಗಗಳನ್ನು ಪೂಜಿಸುವ ಶೈವ ಧರ್ಮದ ಒಂದು ಶಾಖೆಯು ಇಲ್ಲಿತ್ತೆಂದು ಊಹಿಸಲಾಗಿತ್ತು. 'ಈ ಶಾಖೆಯ ಅಥವಾ ಶೈವ ಧಾರ್ಮಿಕ ಉಪಪಂಥದವರು ಪಂಚಲಿಂಗಗಳನ್ನು ಪೂಜಿಸುತ್ತಿದ್ದರು. ಮತ್ತು

ಅವುಗಳಿಗಾಗಿ ದೇವಾಲಯವನ್ನು ನಿರ್ಮಿಸಿರಬಹುದು. ಕ್ರಮೇಣ ಆ ಪಂಥದವರು ನೇಪಥ್ಯಕ್ಕೆ ಸೇರಿದಂತೆ ಮೇಲ್ನೋಟಕ್ಕೆ ಕಾಣಬಹುದು. ಮುಂದಿನ ದಿನಗಳಲ್ಲಿ ಹೆಚ್ಚಿನ ಶೋಧಗಳು ನಡೆದಾಗ ಪಂಚಲಿಂಗಗಳ ಕುರಿತು ಹೊಸ ಮಾಹಿತಿ ಮತ್ತು ಆಧಾರಗಳು ದೊರಕಬಹುದು' ಎಂದು ಗಣಿಸಲಾಗಿತ್ತು[5]. ಇತ್ತೀಚಿನ ಕೆಲವು ಶೋಧ ಗಳಿಂದ ಪಂಚಲಿಂಗದ ಪ್ರಾಚೀನತೆಯತ್ತ ಬೆಳಕು ಚೆಲ್ಲುವ ಕೆಲವು ಪುರಾವೆಗಳು ದೊರೆತಿವೆ.

ಹಂಪಿ ಪರಿಸರದಲ್ಲಿ ಇಲ್ಲಿಯವರೆಗೆ ಐದು ಭಿನ್ನ ಶೈಲಿಯ ಪಂಚಲಿಂಗಗಳು ದೊರಕಿವೆ. ಕಮಲಾಪುರದ ಊರಮ್ಮನ ಗುಡಿಯ ಪಕ್ಕದಲ್ಲಿರುವ ಅಶೋಕ್‌ಸಿಂಗ್ ಮನೆಯ ಪಕ್ಕದಲ್ಲಿರುವ ಬೇವಿನ ಮರದ ಕೆಳಗೆ ಒಂದು ಪಂಚಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ. ಈ ಪಂಚಲಿಂಗವು ಕಣಶಿಲೆಯಿಂದ ಮಾಡ ಲಾಗಿದ್ದು ಚತುರಸ್ರಾಕಾರದ ಪಾಣಿಪೀಠದ ಮೇಲೆ ಐದು ಲಂಬಾಕಾರದ ಲಿಂಗಗಳನ್ನು ಕಂಡರಿಸಲಾಗಿದೆ. ಇದಕ್ಕೆ ಪ್ರಣಾಳವಿದೆ. ಐದು ಲಿಂಗಾಕಾರಗಳು ಒಂದಕ್ಕೊಂದು ಅಂಟಿಕೊಂಡಂತೆ ಇದ್ದು ಮಧ್ಯದ ಲಿಂಗಾಕೃತಿಯು ಉಳಿದ ನಾಲ್ಕು ಲಿಂಗಾಕೃತಿ ಗಳಿಗಿಂತ ಎತ್ತರವಾಗಿದೆ. ಲಿಂಗವನ್ನು ಸಿಮೆಂಟ್ ನೆಲದಲ್ಲಿ ಹುದಗಿಸಲಾಗಿದೆ. ಪ್ರಸ್ತುತ ಪಂಚಲಿಂಗದಲ್ಲಿರುವ ಲಿಂಗಗಳನ್ನು ತೋರಿರುವ ಶೈಲಿಯು ವಿಷ್ಣು ಧರ್ಮೋತ್ತರದಲ್ಲಿ ವರ್ಣಿಸಿರುವ ಶಿವನ ಐದು ಮುಖಗಳನ್ನು ನೆನಪಿಸುತ್ತವೆ. ಶಿವನಿಗೆ ಐದು ಮುಖಗಳಿವೆ (ಶಂಭೋರ್ – ವದನ – ಪಂಚಕಮ್). ಅವುಗಳು ಕ್ರಮವಾಗಿ ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ. ಇವುಗಳು ನಾಲ್ಕು ದಿಕ್ಕುಗಳನ್ನು ನೋಡುತ್ತಿರುತ್ತವೆ ಮತ್ತು ಮೊದಲ ಮುಖವು ಎತ್ತರವಾಗಿರುತ್ತದೆ. ಮನುಷ್ಯ ರೂಪದ ಶಿವನನ್ನು ಲಿಂಗದಲ್ಲಿ ಅಥವಾ ಶಿವನ ಮುಖವನ್ನು ಮಾತ್ರ ತೋರಬೇಕಾದಲ್ಲಿ ಈಶಾನನ ಮೂರ್ತಿಯನ್ನು, ಪ್ರಚಲಿತ ರೂಢಿಯಂತೆ ತೋರುವುದಿಲ್ಲ. ಆದರೆ ನಾಲ್ಕು ಮುಖಗಳನ್ನು ತೋರದೆಯೇ ಒಂದು, ಎರಡು, ಅಥವಾ ಮೂರು ಮುಖಗಳನ್ನು ಮಾತ್ರ ತೋರಿ ಅಂತಹವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದರೆ ಅದಕ್ಕೆ ಅನುಗುಣವಾಗಿರುವಂತೆ ಅಷ್ಟೇ ಸಂಖ್ಯೆಯ ಗರ್ಭಗೃಹದ ಬಾಗಿಲುಗಳನ್ನು ತೋರಬೇಕು ಎಂದು ರೂಪಮಂಡನವು ಉಲ್ಲೇಖಿ ಸುತ್ತದೆ. ಚರ್ಚಿಸಲಾಗುತ್ತಿರುವ ಈ ಪಂಚಲಿಂಗವು ವಿಷ್ಣುಧರ್ಮೋತ್ತರಕ್ಕೆ ಅನುಗುಣ ವಾಗಿ ರೂಪಿಸಿದ ಪಂಚಲಿಂಗವೆನ್ನಬಹುದು. ಪಂಚಲಿಂಗಗಳು ಪಂಚತತ್ವ ಮತ್ತು ಪಂಚಭೂತಗಳಾದ ಅಗ್ನಿ, ವಾಯು, ಜಲ, ಭೂಮಿ, ಮತ್ತು ಆಕಾಶವನ್ನು ಪ್ರತಿನಿಧಿಸು ತ್ತವೆ. ಪ್ರಥಮ ಲಿಂಗಸ್ವರೂಪವು ಭಗವಂತನ (ಶಿವ) ಸರ್ವಾಂತರ್ಯಾಮಿ ಗುಣ ಮತ್ತು ಆಕಾಶವನ್ನು ಸೂಚಿಸುತ್ತದೆ.

ಕಮಲಾಪುರದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿರುವ ಪಂಚಲಿಂಗವು ಮೇಲೆ ವಿವರಿಸಿದ ಪಂಚಲಿಂಗಕ್ಕಿಂತ ಭಿನ್ನವಾಗಿದೆ. ಇದು ವೃತ್ತಾಕಾರದ ಪಾಣಿಪೀಠವನ್ನು ಹೊಂದಿದ್ದು ಜಲಹರಿ ಅಥವಾ ಪ್ರಣಾಳವನ್ನು ಹೊಂದಿದ್ದು ಸಾಮಾನ್ಯವಾಗಿ ಕಂಡುಬರುವ ಲಿಂಗದ ವಿಷ್ಣುಭಾಗದಂತೆ (ಯೋನಿಭಾಗ) ಇದೆ. ರುದ್ರ ಭಾಗದ ಅಂದರೆ ವಿಷ್ಣುಭಾಗದ ಮೇಲ್ಮೈಯಲ್ಲಿ ಐದು ಕಿರು ಲಿಂಗಗಳನ್ನು ಬಿಡಿಬಿಡಿಯಾಗಿ ಕೆತ್ತಲಾಗಿದೆ. ಇವುಗಳು ಒಂದಕ್ಕೊಂದು ಅಂಟಿಕೊಂಡಿಲ್ಲ. ಎಲ್ಲಾ ಲಿಂಗಗಳು ಒಂದೇ ಅಳತೆ ಮತ್ತು ಆಕಾರದಲ್ಲಿವೆ. ಲಿಂಗದ ವಿಷ್ಣುಭಾಗದಲ್ಲಿ ಆಂಜನೇಯನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಲಿಂಗದ ಬ್ರಹ್ಮಭಾಗ ಅಥವಾ ಅಧಿಷ್ಠಾನ ಭಾಗವು ಇಲ್ಲ. ಈ ಪಂಚಲಿಂಗವನ್ನು ಪ್ರಸ್ತುತ ಒಂದು ಪೀಠದ ಮೇಲೆ ಇರಿಸಲಾಗಿದೆ. ಇದನ್ನು ಕಣಶಿಲೆಯಲ್ಲಿ ಮಾಡಲಾಗಿದೆ.

ಇದೇ ವಸ್ತುಸಂಗ್ರಹಾಲಯದಲ್ಲಿ ನಾಲ್ಕು ಪಂಚಲಿಂಗಗಳಿವೆ. ಇವುಗಳು ಮೇಲೆ ವಿವರಿಸಿರುವ ಎರಡು ಶೈಲಿಯ ಪಂಚಲಿಂಗಗಳಿಗಿಂತ ಭಿನ್ನಶೈಲಿಯಲ್ಲಿದೆ. ಈ ಪಂಚಲಿಂಗಗಳು ಪಿರಮಿಡ್ ಆಕಾರದಲ್ಲಿದ್ದು ಕೆಳಭಾಗವು ಅಗಲವಾಗಿ ಚೌಕಾಕಾರ ವಾಗಿರುತ್ತದೆ. ಕೆಳಗಿನಿಂದ ಮೇಲೆ ಬಂದಂತೆ ಚೌಕಾಕಾರವು ಕಿರಿದಾಗಿ ಅದರ ಮೇಲಿನ ಸಮತಟ್ಟಾದ ಭಾಗದಲ್ಲಿ ಐದು ಲಿಂಗಗಳನ್ನು ಒಂದಕ್ಕೊಂದು ಅಂಟಿ ಕೊಂಡಂತೆ ಕೆತ್ತಲಾಗಿದೆ. ಮಧ್ಯದ ಭಾಗದಲ್ಲಿರುವ ಲಿಂಗಾಕೃತಿಯು ಉಳಿದ ನಾಲ್ಕು ಲಿಂಗಗಳ ಮೇಲ್ಭಾಗದಲ್ಲಿ ಹಾಗೂ ಎತ್ತರದಲ್ಲಿರುವಂತೆ ರೂಪಿಸಲಾಗಿದೆ. ಇದಕ್ಕೆ ಪಾಣಿಪೀಠ ಮತ್ತು ಪ್ರಣಾಳ ಭಾಗಗಳಿಲ್ಲ. ಆದರೆ ಕೆಳಗಿನಿಂದ ಮೇಲೆ ಲಿಂಗದವರೆಗೆ ಇರುವ ಕಲ್ಲಿನ ಚೌಕಾಕಾರ ಭಾಗದಲ್ಲಿ ಮೆಟ್ಟಿಲಿನಂತೆ ತೋರಿಸಲಾಗಿದೆ. ಅದರ ನಡುವೆ ಪಟ್ಟಿಯಂತಹ ಅಲಂಕರಣೆಯು ಕಂಡುಬರುತ್ತದೆ. ಇದೇ ಶೈಲಿಯ ಪಂಚಲಿಂಗವು ಕಮಲಾಪುರದ ಕಮಲ್‌ಮಹಲ್ ಹತ್ತಿರದ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಪ್ರದರ್ಶಿಸ ಲಾಗಿದೆ. ಇವುಗಳೆಲ್ಲವೂ ಕಣಶಿಲೆಯಿಂದ ಮಾಡಲಾಗಿದೆ. ಈ ಪಂಚಲಿಂಗಗಳು ವಿಷ್ಣುಧರ್ಮೋತ್ತರದ ವರ್ಣನೆಯಂತೆ ಇವೆ.

ಹೇಮಕೂಟ ಬೆಟ್ಟದ ಮೇಲಿರುವ ಮೂಲ ವಿರೂಪಾಕ್ಷ ದೇವಾಲಯದ ಎದುರಿನಲ್ಲಿ ಹುಟ್ಟುಬಂಡೆಯ ಮೇಲೆ ಒಂದೇ ಸಾಲಿನಲ್ಲಿರುವಂತೆ ಐದು ಲಿಂಗಗಳನ್ನು (ಪಂಚಲಿಂಗಗಳು) ಆಯತಾಕಾರದ ಪಾಣಿಪೀಠದಲ್ಲಿರುವಂತೆ ಕೆತ್ತಲಾಗಿದೆ. ಇದು ಇನ್ನೊಂದು ಬಗೆಯ ಪಂಚಲಿಂಗ. ಕಮಲಾಪುರದ ಪೋಲಿಸ್ ಠಾಣೆಯ ಮುಂದಿ ರುವ ಆಂಜನೇಯನ ಗುಡಿಯ ಕಲಶ ಭಾಗಕ್ಕೆ ಪಂಚಲಿಂಗವನ್ನು ಇರಿಸಲಾಗಿದೆ. ಇದು ಕಿರುಗಾತ್ರದಲ್ಲಿದ್ದು, ಪಿರಮಿಡ್ಡು ಆಕಾರದಲ್ಲಿದೆ. ನಾಲ್ಕು ಲಿಂಗಗಳು ಕೆಳಭಾಗ

ದಲ್ಲಿದ್ದರೆ, ಐದನೆಯ ಲಿಂಗವು ಅದರ ಮೇಲ್ಭಾಗದಲ್ಲಿದೆ. ಈ ಲಿಂಗವನ್ನು ಎಲ್ಲಿಂದಲೋ ತಂದು ಇಲ್ಲಿ ಇರಿಸಿರುವುದು ಸ್ಪಷ್ಟವಾಗಿ ತೋರುತ್ತದೆ.[6]

ಹಂಪಿ ಪರಿಸರದಲ್ಲಿ ವಿವಿಧ ಮಾದರಿಯ ಲಿಂಗಗಳು ದೊರಕಿದ್ದರೂ, ಮುಖಲಿಂಗ ಅಥವಾ ಪಂಚಮುಖ ಲಿಂಗವು ದೊರಕಿರಲಿಲ್ಲ. ಈ ಮೇಲೆ ವಿವರಿಸಿದಂತೆ ಪಂಚಲಿಂಗಗಳು ಇವೆಯಾದರೂ ಪಂಚಮುಖ ಲಿಂಗದ ಬಗೆಗೆ ಯಾವುದೇ ಮಾಹಿತಿಯಿರಲಿಲ್ಲ. ಇತ್ತೀಚೆಗೆ ಪಂಚಮುಖ ಲಿಂಗವು ನನ್ನ ಗಮನಕ್ಕೆ ಬಂದಿತು. ಹಂಪಿಯಲ್ಲಿರುವ ಹಲವಾರು ದೇವಾಲಯಗಳಲ್ಲಿ ಪ್ರಧಾನವಾಗಿರುವ ವಿರೂಪಾಕ್ಷ ದೇವಾಲಯದ ಗರ್ಭಗೃಹ ಮತ್ತು ನವರಂಗಗಳ ಮಧ್ಯದಲ್ಲಿರುವ ಅಂತರಾಳದ ಬಲಭಾಗದ ಮೂಲೆಯಲ್ಲಿ ಈ ಪಂಚಮುಖ ಲಿಂಗವಿದೆ. ಇದರ ಪಕ್ಕದಲ್ಲಿಯೇ ಇನ್ನೊಂದು ಸಾಧಾರಣ ಲಿಂಗವಿದೆ. ಪಂಚಮುಖ ಲಿಂಗವನ್ನು ಗುಂಡು ಬ್ರಹ್ಮಯ್ಯ ಎಂದು ಸ್ಥಳೀಯರು ಕರೆಯುತ್ತಾರೆ. ಪಂಚಮುಖ ಲಿಂಗವು ಮೊದಲಿಗೆ ಎಲ್ಲಿತ್ತು ಮತ್ತು ಅದನ್ನು ಪ್ರಸ್ತುತ ಸ್ಥಳದಲ್ಲಿ ಇರಿಸಿರುವುದರ ಕುರಿತು ನಿಖರವಾದ ಮಾಹಿತಿಯು ಇಲ್ಲ. ಈ ಲಿಂಗದ ಪಕ್ಕದಲ್ಲಿರುವ ಸಾದಾ ಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಇದು ಕಾಲಕ್ರಮದಲ್ಲಿ ಭಿನ್ನಗೊಂಡಿದ್ದರಿಂದ ಅದನ್ನು ತೆಗೆದು ಅದರ ಸ್ಥಳದಲ್ಲಿ ಹೊಸ ಲಿಂಗವನ್ನು ಪ್ರತಿಷ್ಠಾಪಿಸಲಾಯಿತು. ಭಿನ್ನಗೊಂಡ ಲಿಂಗವು ಪೂಜೆಗೆ ಯೋಗ್ಯವಲ್ಲ, ಅದನ್ನು ವಿಸರ್ಜಿಸದೆ ಅಂತರಾಳದ ಬಲಮೂಲೆಯಲ್ಲಿ ಇರಿಸಲಾಗಿದೆ ಎಂದು ದೇವಾಲಯದ ಅರ್ಚಕರು ಮಾಹಿತಿಯನ್ನು ನೀಡಿರುವರು. ವಿರೂಪಾಕ್ಷನೆಂದು ಪ್ರಸ್ತುತ ಪೂಜೆಗೊಳ್ಳುತ್ತಿರುವ ಲಿಂಗವನ್ನು ಕೆಲವು ವರ್ಷಗಳ ಕೆಳಗೆ (90ರ ದಶಕದಲ್ಲಿ) ಪ್ರತಿಷ್ಠಾಪಿಸಲಾಯಿತು.

ಗುಂಡು ಬ್ರಹ್ಮಯ್ಯನೆಂದು ಕರೆಯಲಾಗುವ ಶಿಲ್ಪವು ಮೂಲತಃ ಒಂದು ಪಂಚಮುಖ ಲಿಂಗ. ಈಗಾಗಲೇ ಮೇಲೆ ಗಮನಿಸಿದಂತೆ ಶಿವನಿಗೆ ಐದು ಮುಖಗಳಿದ್ದು, ಊರ್ಧ್ವ ಭಾಗದಲ್ಲಿರಬೇಕಾದ ಈಶಾನನ ಮುಖವನ್ನು ತೋರುವುದಿಲ್ಲ. ಶಿವನಿಗೆ ಐದು ಮುಖಗಳಿದ್ದರೂ, ನಾಲ್ಕು ಮುಖಗಳನ್ನು ಮಾತ್ರ ತೋರಲಾಗುವುದು. ಶಿವನ ನಾಲ್ಕು ಮುಖಗಳು ಮಧ್ಯದ ಲಿಂಗದ ಮೂಲ ಕೇಂದ್ರ ಸ್ತಂಭದ ಸುತ್ತಲೂ ಕಂಡರಿಸಲಾಗುತ್ತದೆ. ಕಪ್ಪು ಶಿಲೆಯಿಂದ ರಚಿಸಿರುವ ಈ ಪಂಚಮುಖ ಲಿಂಗದಲ್ಲಿ ನಾಲ್ಕು ಮುಖಗಳಿವೆ. ಅಂತರಾಳದ ಅತ್ಯಂತ ಮೂಲೆಯಲ್ಲಿ ಸಿಮೆಂಟ್ ನೆಲದಲ್ಲಿ ಹುದುಗಿಸಿರುವುದರಿಂದ ಮತ್ತು ಅಲ್ಲಿ ಬೆಳಕಿನ ಕೊರತೆಯಿಂದ ಲಿಂಗದಲ್ಲಿನ ನಾಲ್ಕು ಮುಖಗಳನ್ನು ಸ್ಪಷ್ಟವಾಗಿ ನೋಡುವುದು ಕಷ್ಟಸಾಧ್ಯ. ಆದರೆ ದಕ್ಷಿಣ ಮತ್ತು ಪೂರ್ವಾಭಿಮುಖವಾಗಿರುವ ಎರಡು ಮುಖಗಳನ್ನು ಮಾತ್ರ ನೋಡಬಹುದಾಗಿದೆ. ಶಿವನ ಮುಖವು ಸ್ಪಷ್ಟವಾಗಿದ್ದು, ಅದರಲ್ಲಿ ಅಗಲವಾದ ಮೂಗು,

ಎರಡು ಕಣ್ಣುಗಳು, ಹಣೆಯಲ್ಲಿ ಮೂರನೆಯ ಕಣ್ಣು ಮತ್ತು ಎದ್ದುಕಾಣುವ ಬಿಡಿಯಾಗಿರುವ ತುಸು ದಪ್ಪ ತುಟಿಗಳು ಕಂಡುಬರುತ್ತವೆ. ಪ್ರತಿಯೊಂದು ಮುಖಕ್ಕೂ, ಎರಡು ಮುಖಗಳ ನಡುವೆ, ಉದ್ದನೆಯ ಕಿವಿಯ ಭಾಗವಿದೆ. ಶಿವನ ದಕ್ಷಿಣಾಭಿಮುಖವಾಗಿರುವ ಮುಖದ ಎಲ್ಲಾ ಲಕ್ಷಣಗಳನ್ನು ಪೂರ್ವಾಭಿಮುಖವಾಗಿರುವ ಮುಖವು ಹೊಂದಿದೆ. ಈ ಎರಡು ಮುಖಗಳು ಶಿವನ ಯಾವ ರೂಪವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಗುರುತಿಸಲು ಸಾಧ್ಯವಿಲ್ಲ. ಆದರೆ ದಕ್ಷಿಣ ಮತ್ತು ಪೂರ್ವಾಭಿವಾಗಿರುವ ಮುಖಗಳು ಕ್ರಮವಾಗಿ ಅಘೋರ ಮತ್ತು ತತ್ಪುರುಷ ಎಂದು ತಾತ್ಪೂರ್ತಿಕವಾಗಿ ಹೇಳಬಹುದು.

ಹಣೆಯಲ್ಲಿರುವ ಮೂರನೆಯ ಕಣ್ಣಿನ ಮೇಲಿನ ಭಾಗದಲ್ಲಿ ತಲೆಯಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯನ್ನು ಹೋಲುವ ಕಿರೀಟದ ಅಲಂಕರಣೆಯಿದೆ. ಕಿರೀಟವು ಕರಂಡ ಮುಕುಟದಂತೆ ಇರುವುದು ಗಮನಾರ್ಹ. ಶಿವನ ಮುಖಭಾವವು ಮಂದಸ್ಮಿತವಾಗಿರದೆ ಗಂಭೀರವಾಗಿದೆ. ಮುಖದಲ್ಲಿನ ಅಗಲವಾದ ಮೂಗು, ಬೀರಿರುವ ದಪ್ಪ ತುಟಿಗಳು, ಅಗಲವಾಗಿ ತೆರೆದಿರುವ ಕಣ್ಣುಗಳು ಮತ್ತು ಹುಬ್ಬಿನ ಭಾಗವು ಸ್ಪಷ್ಟವಾಗಿದೆ. ಶಿವನ ಮುಖಭಾಗಗಳಲ್ಲಿ ಹಾಗೂ ಮಧ್ಯದಲ್ಲಿರುವ ಲಿಂಗದ ಭಾಗಗಳಲ್ಲಿ ಕಲ್ಲಿನ ಚಕ್ಕೆಗಳು ಎದ್ದಿದ್ದು, ಈ ಮುಖಲಿಂಗವು ಸಾಕಷ್ಟು ತ್ರುಟಿತಗೊಂಡಿದೆ. ಈ ಪಂಚಮುಖ ಲಿಂಗವು ಅಧಿಕ ಪ್ರಮಾಣದಲ್ಲಿ ಭಿನ್ನವಾಗಿರುವುದರಿಂದ ಪೂಜೆಗೆ ಯೋಗ್ಯವಲ್ಲವೆಂದು ಪರಿಗಣಿಸಿ ಇದನ್ನು ಈಗಿರುವ ಜಾಗದಲ್ಲಿ ಇರಿಸಲಾಗಿದೆ. ಈ ಲಿಂಗವೇ ಮೊದಲಿಗೆ ಪೂಜೆಗೆ ಒಳಪಟ್ಟಿತ್ತು ಎನ್ನುವುದು ಸಾಮಾನ್ಯವಾಗಿ ಗೋಚರಿಸುತ್ತದೆ. ಹಂಪಿಯ ಮುಖಲಿಂಗವು ಆಂಧ್ರಪ್ರದೇಶದ ಗುಡಿಮಲ್ಲಂನಲ್ಲಿರುವ ಮುಖಲಿಂಗವನ್ನು ಹೋಲುತ್ತದೆ. ಕ್ರಿ.ಶ. 1–2ನೇ ಶತಮಾನಕ್ಕೆ ಸೇರಿದ ಗುಡಿಮಲ್ಲಂನ ಲಿಂಗದಲ್ಲಿ ಶಿವನು ನಿಂತಿರುವಂತೆ ಕೆತ್ತಲಾಗಿದೆ. ಅವನ ಮುಖದಲ್ಲಿ ಅಗಲ ತುಟಿ, ಸ್ಪಷ್ಟವಾದ ಮೂಗು ಮತ್ತು ಓರೆಯಾಗಿರುವ ಹುಬ್ಬಿನ ಕೆಳಗೆ ಓರೆಯಾಗಿರುವ ಕಣ್ಣುಗಳು ಇವೆ. ಕಿವಿಗಳಲ್ಲಿ ಕುಂಡಲಗಳು ಸ್ಪಷ್ಟವಾಗಿದೆ. ತಲೆಗೆ ಕಿರೀಟದ ಬದಲು ಮುಂಡಾಸು, ಕೊರಳಲ್ಲಿ ಕಂಠಾಭರಣ ಮತ್ತು ಬಾಹುವಳಯ ಧರಿಸಿರುವಂತೆ ಕಂಡರಿಸಲಾಗಿದೆ. ಎಡಗೈಯಲ್ಲಿ ಉದ್ದನೆಯ ದಂಡವಿದೆ. ಮಂದಸ್ಮಿತ ನಗೆಯಿಂದ ಕೂಡಿರುವ ಶಿವನ ಸುಂದರ ಮುಖವು ಅತ್ಯಂತ ಆಕರ್ಷಕವಾಗಿದೆ. ಈ ಶಿವನ ಮುಖಭಾವವು ಹಂಪಿಯ ಶಿವನ ಮುಖಭಾವಕ್ಕೆ ಹೋಲಿಸಿದರೆ, ಹಂಪಿಯ ಶಿವನು ಗಂಭೀರವದನನಾಗಿದ್ದಾನೆ. ಆದರೆ ಎರಡೂ ಲಿಂಗಗಳಲ್ಲಿರುವ ಕಣ್ಣು, ಮೂಗು, ತುಟಿ ಮತ್ತು ಗಲ್ಲದ ಭಾಗಗಳಲ್ಲಿ ಹೆಚ್ಚಿನ ಸಾಮ್ಯತೆಯಿರುವುದನ್ನು ಗುರುತಿಸಬಹುದು.

ಲಿಂಗದಲ್ಲಿ ನಾಲ್ಕು ಮುಖಗಳಿರುವುದರಿಂದ ಇದನ್ನು ಚತುರ್ಮುಖ ಲಿಂಗ ಎಂದು ಕರೆಯಲಾಗುತ್ತದೆ. ಆದರೆ ವಾಸ್ತವದಲ್ಲಿ ಇದು ಪಂಚಮುಖ ಲಿಂಗ. ಶಿವನ ಐದು ಮುಖಗಳಿಗೆ ವಿವಿಧ ಹೆಸರುಗಳಿವೆ. ಇವನ್ನು ಪಂಚಬ್ರಹ್ಮನೆಂದು ಸಹ ಕರೆಯುತ್ತಾರೆ. ಹಂಪಿಯ ಮುಖಲಿಂಗವನ್ನು ಗುಂಡು ಬ್ರಹ್ಮನೆಂದು ಕರೆಯುವುದು ಗಮನಾರ್ಹ. ಆದ್ದರಿಂದ ಇದನ್ನು ಚತುರ್ಮುಖ ಲಿಂಗವೆನ್ನದೆ ಪಂಚಮುಖ ಲಿಂಗವೆಂದೇ ಕರೆಯುವುದು ಸಮಂಜಸ. ಶಿವಲಿಂಗಗಳ ಪ್ರಾಚೀನತೆ ಯನ್ನು ಅವಲೋಕಿಸುವುದು ಇಲ್ಲಿ ಪ್ರಸ್ತುತವಾಗುತ್ತದೆ.

ಶಿವಲಿಂಗಗಳ ಪ್ರಾಚೀನತೆಯನ್ನು ಸಿಂಧೂ ಕಣಿವೆ ಸಂಸ್ಕೃತಿ ಅಥವಾ ಹರಪ್ಪಾ ಸಂಸ್ಕೃತಿಯ ಕಾಲಘಟ್ಟವಾದ ಕ್ರಿಪೂ. 2500ರಷ್ಟು ಪೂರ್ವಕ್ಕೆ ಒಯ್ಯಬಹುದಾಗಿದೆ. ಸರ್ವೇಕ್ಷಣೆ ಮತ್ತು ಉತ್ಖನನಗಳಲ್ಲಿ ಅನೇಕ ವೈವಿಧ್ಯಮಯ ಲಿಂಗಗಳು ದೊರಕಿದ್ದು ಅವುಗಳು ಲಿಂಗ ಮತ್ತು ಶೈವಧರ್ಮದ ಪ್ರಾಚೀನತೆಯನ್ನು ತೋರುತ್ತವೆ.[7] ಮುಖಲಿಂಗ – ಲಿಂಗಗಳು ಕ್ರಿಸ್ತಶಕೆಯ ಪ್ರಾರಂಭದ ವರ್ಷಗಳಿಗೆ ಸೇರುತ್ತವೆಯೆಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಶೈವ ಧರ್ಮದ ವಿಕಸನಕ್ಕೆ ಅನುಗುಣವಾಗಿ ಚತುರ್ಮುಖ, ಪಂಚಮುಖ, ಸಹಸ್ರ ಲಿಂಗಗಳು ಮತ್ತು ಇತರೆ ವೈವಿಧ್ಯಮಯ ಲಿಂಗಗಳು ಕಾಲಕ್ರಮದಲ್ಲಿ ಬೆಳೆದುಬಂದಿದೆ. ಚತುರ್ಮುಖ ಮತ್ತು ಪಂಚಮುಖ ಲಿಂಗಗಳು ಕ್ರಿ.ಶ. 7 ಮತ್ತು 8ನೇ ಶತಮಾನದಲ್ಲಿ ಅಂದರೆ ಗುಪ್ತರ ತರುವಾಯದ ಕಾಲಘಟ್ಟದಲ್ಲಿ ಪ್ರಚಲಿತಗೊಂಡವು. ಗುಪ್ತರ ಉತ್ತರ ಕಾಲಕ್ಕೆ ಸೇರುವ ಉತ್ತರ ಭಾರತದ ನಚನ–ಕುತಾರದಲ್ಲಿರುವ ಶಿವ ದೇವಾಲಯದ ಪಂಚಮುಖ ಲಿಂಗವು ಉತ್ತಮ ಉದಾಹರಣೆಯದ್ದಾಗಿದೆ. ವಾರಣಾಸಿಯ ಬನಾರಸ್ ಹಿಂದೂ ವಿಶ್ವ ವಿದ್ಯಾಲಯದ ಭಾರತ ಕಲಾ ಭವನ ವಸ್ತುಸಂಗ್ರಹಾಲಯದಲ್ಲಿರುವ ಕೆಂಪು ಮರಳುಗಲ್ಲಿನ ಪಂಚಮುಖ ಲಿಂಗವು ಗುಪ್ತರ ಕಾಲಕ್ಕೆ ಸೇರಿದುದಾಗಿದೆ. ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯಲ್ಲಿ ಮುಖಲಿಂಗಂ ಎಂಬ ಊರಿದೆ. ಅಲ್ಲಿನ ದೇವಾಲಯದಲ್ಲಿರುವ ಮುಖಲಿಂಗದಿಂದ ಆ ಊರಿಗೆ ಮುಖಲಿಂಗಂ ಎಂದು ಹೆಸರು ಬಂದಿರುವುದು ಕುತೂಹಲಕಾರಿ ಅಂಶ.[8]

ಪಂಚಲಿಂಗಗಳನ್ನು ಕುರಿತಂತೆ ವಿಷ್ಣುಧರ್ಮೋತ್ತರವು ವಿವರಿಸುತ್ತದೆ. ಇದರಂತೆ ಶಿವನಿಗೆ ಪಂಚಮುಖಗಳಿರುತ್ತವೆ (ಶಂಭೋರ್ – ವದನ – ಪಂಚಕಮ್). ಅವುಗಳು ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತ. ಇವು ನಾಲ್ಕು ದಿಕ್ಕುಗಳನ್ನು ನೋಡುತ್ತವೆ ಮತ್ತು ಸಂಪ್ರದಾಯದಂತೆ ಪ್ರಥಮ ಮುಖವು ಎತ್ತರವಾಗಿದ್ದು ಅದನ್ನು ಶಿಲ್ಪದಲ್ಲಿ ಕಂಡರಿಸುವುದಿಲ್ಲ. ನಾಲ್ಕು ಮುಖಗಳಿದ್ದರೂ ಇದನ್ನು ಪಂಚಲಿಂಗವೆಂದೇ ಕರೆಯಲಾಗುತ್ತದೆ. ಶಿವನ ಪಾರಮ್ಯ

ಅಥವಾ ಪರಮೋಚ್ಚ ರೂಪದಲ್ಲಿಯೇ ಪ್ರಥಮವಾಗಿ ಈಶಾನ ರೂಪವಾಗಿದ್ದು, ನಂತರ ಅನುಕ್ರಮವಾಗಿ ಅಘೋರ, ವಾಮದೇವ ಮತ್ತು ಸದ್ಯೋಜಾತರು ಬರುತ್ತಾರೆ. ಹಾಗೂ ಇವುಗಳು ವಿಶ್ವದ ಪ್ರತಿರೂಪಗಳೆಂದು, ಸರ್ವಾಂತರ್ಯಾಮಿ ಮತ್ತು ಅಂತರ್ಗಾಮಿಯಾಗಿ ಪಂಚಭೂತಗಳನ್ನು ಪ್ರತಿನಿಧಿಸುತ್ತವೆ ಎಂದು ಪರಿಗಣಿಸಲಾಗಿದೆ.[9] ಪಂಚಮುಖ ಲಿಂಗಗಳು ಸಾಮಾನ್ಯವಾಗಿ ನಾಲ್ಕು ಮುಖಗಳಿಂದ ಕೂಡಿದ್ದು ಈ ನಾಲ್ಕು ಮುಖಗಳು ಮಧ್ಯದ ಲಿಂಗದ ಮೂಲ ಕೇಂದ್ರ ಸ್ತಂಭದ ಸುತ್ತಲೂ ಕಂಡರಿಸಲಾಗುತ್ತದೆ.[10]

ಮಧ್ಯಕಾಲೀನ ಶಾಸನಗಳು "ನಮಸ್ತುಂಗ ಶಿರಸ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಶಂಭವೇ" ಎಂಬ ಸಾಲುಗಳಿಂದ ಆರಂಭಗೊಳ್ಳುತ್ತವೆ. ಇದರ ಅರ್ಥವು ಮೂರು ಲೋಕಗಳಿಗೆ ಆಧಾರಸ್ತಂಭವಾಗಿರುವವನು ಶಿವ ಎಂಬುದಾಗಿದೆ. ಗುಡಿಮಲ್ಲಂ, ಮಥುರಾ, ಭೀಟಾ ಮುಂತಾದ ಪ್ರದೇಶಗಳಲ್ಲಿ ದೊರಕಿರುವ ಆಧಾರಗಳಂತೆ ಲಿಂಗ ಪೂಜೆ ಆರಂಭಗೊಂಡು ಸ್ಥಿರಗೊಂಡ ಬಳಿಕ ಲಿಂಗದಲ್ಲಿ ಶಿವನ ಮುಖವನ್ನು ತೋರುವ ಸಂಪ್ರದಾಯ ಆರಂಭಗೊಂಡಿತು. ಆ ಮುಖಕ್ಕೆ ಸ್ತಂಭವು ಆಧಾರವಾಗಿದ್ದರಿಂದ ಅದನ್ನು 'ಮೂಲಾಧಾರ' ಎಂದು ಕರೆದಿರಬಹುದು. ಆ ಶಬ್ದವನ್ನು ಶಾಸನಗಳಲ್ಲಿ ಸಹ ಬಳಸಲಾಯಿತು. ಕಾಲಕ್ರಮದಲ್ಲಿ ಶಿವನ ಮುಖವನ್ನು ತೋರುವ ಸಂಪ್ರದಾಯ ನಿಂತನಂತರವೂ ಶಾಸನಗಳಲ್ಲಿ ಬಳಸುವ ಕ್ರಮವು ಮಾತ್ರ ನಿರಂತರವಾಗಿ ಮುಂದುವರಿಯಿತು ಎನ್ನಬಹುದು.

ಲಿಂಗದ ಸ್ವರೂಪವು ರೂಪಗೊಂಡ ಬಗೆಗೆ ವಿವಿಧ ವ್ಯಾಖ್ಯಾನಗಳಿವೆ. ಅವುಗಳಲ್ಲಿ ಲಿಂಗವು ಮಂತ್ರಗಳಿಂದ ಕೂಡಿದೆ ಎನ್ನುವುದು ಒಂದು. ಐದು ಮುಖಗಳು ಐದು ಮಂತ್ರಗಳನ್ನು ಪ್ರತಿಪಾದಿಸುತ್ತವೆ ಎಂದು ಪರಿಭಾವಿಸಲಾಗಿದೆ. ತೈತ್ತರೀಯ ಉಪನಿಷತ್, ಅರಣ್ಯಕವು (43–47) ಇದನ್ನು ಉಲ್ಲೇಖಿಸುತ್ತದೆ. ಮಂತ್ರಗಳು ಲಯಬದ್ಧವಾಗಿರುವ ಸೂತ್ರಗಳಾಗಿದ್ದು, ಅತಿಮಾನುಷ ಶಕ್ತಿಯ ಇರುವಿಕೆಯನ್ನು ತೋರುತ್ತದೆ. ಲಯಬದ್ಧ ಉಚ್ಚಾರಣೆಯು ಅದರ (ದೇವರ) ದೇಹವಾಗಿದ್ದು, ಶಿವನು ಅಂದರೆ ಪರಮಾತ್ಮನು ಅದರ ಆತ್ಮವಾಗುತ್ತಾನೆ. ಮಂತ್ರವು (ವಿದ್ಯೆ) ದೇಹವಾಗುತ್ತದೆ.[11] ಇದು ಶಿವಲಿಂಗರೂಪಿಯಾಗಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಲಿಂಗವು ಮಂತ್ರಗಳಿಂದ ಕೂಡಿದ್ದು, ಶಿವನ ದೇಹವನ್ನು ಪ್ರತಿನಿಧಿಸುತ್ತದೆ. ಈ ನಾಲ್ಕು ಮಂತ್ರಗಳು ವಿಶ್ವದ ನಾಲ್ಕು ಪ್ರದೇಶಗಳನ್ನು ಪ್ರತಿನಿಧಿಸುತ್ತವೆ ಹಾಗೂ ಐದನೆಯ ಮುಖ ಅಥವಾ ಮಂತ್ರ ಈಶಾನವು ಇವೆಲ್ಲದರ ಕೈಗೆ ನಿಲುಕದಷ್ಟು ದೂರದಲ್ಲಿ ಜ್ಯೋತಿಯಾಗಿ ಬೆಳಗುತ್ತಿರುತ್ತದೆ. ಈ ಜ್ಯೋತಿಯಿಂದ (ದಿವ್ಯಲಿಂಗ)

ಲಯಬದ್ಧ ಕಂಪನಗಳು ಹೊರಟು ಮಂತ್ರಗಳಾಗಿ ಮಾರ್ಪಡುತ್ತದೆ ಎಂದು ನಂಬಲಾಗಿದೆ. ದಿವ್ಯಲಿಂಗವು ತತ್ಪುರುಷನಾಗಿದ್ದು ಕೇಂದ್ರದ ಮೂಲಸ್ತಂಭವಾಗಿ ಜ್ಯೋತಿಯನ್ನು ನೀಡುತ್ತದೆ. ವಾಮದೇವ ಲಿಂಗವು ಸ್ತಂಭದ ಕೆಳಭಾಗವನ್ನು ಪ್ರತಿನಿಧಿಸುತ್ತದೆ. ಇದನ್ನು ಅಲ್ಲಿ ಪ್ರತಿಷ್ಠಾಪಿಸಿ ಪೂಜಿಸಲಾಗುತ್ತದೆ. ಮೂಲಸ್ತಂಭವೇ ಎಲ್ಲಕ್ಕೂ ಆಧಾರವಾಗಿದ್ದು ಅದರಲ್ಲಿಯೇ ಅಂತ್ಯಗೊಳ್ಳುತ್ತದೆ. ಅರ್ಥಾತ್ ಆದಿ ಮತ್ತು ಅಂತ್ಯವು ಮೂಲಸ್ತಂಭದಲ್ಲಿಯೇ ಇದೆ. ಆದ್ದರಿಂದ ಇದನ್ನು ಲಿಂಗ ಎನ್ನಲಾಗುತ್ತದೆ.[12] ಮಂತ್ರಗಳ ಮೂಲಕ ಈ ಶಕ್ತಿಯನ್ನು ಜಾಗೃತಗೊಳಿಸಬಹುದು ಮತ್ತು ವಿಶ್ವದ ಶಿವನನ್ನು ಈ ಮೂಲಕ ಅರಿಯಬಹುದು; ಶಿವನ ಶರೀರದಲ್ಲಿ ವಿಶ್ವ, ಅವನ ದೇಹವು ಶಕ್ತಿ (ಶಾಕ್ತಿಕ-ಶರೀರ) ಮತ್ತು ವಿಶ್ವದ ಎಲ್ಲಾ ವಸ್ತುಗಳನ್ನು ಅದು ಒಳಗೊಂಡಿರುತ್ತದೆ.

ಇಂತಹ 'ದೇಹ'ವನ್ನು ಹೊಂದಿದ ಶಿವನ ಸ್ವರೂಪದ ಲಿಂಗವು ಎಲ್ಲಾ ದಿಕ್ಕುಗಳನ್ನು ನೋಡಬೇಕಿರುವುದರಿಂದ ಅದಕ್ಕೆ ನಾಲ್ಕು ಮುಖಗಳನ್ನು ನೀಡಲಾಗಿದೆ. ಇವು ನಾಲ್ಕು ಪ್ರಮುಖ ದಿಕ್ಕುಗಳನ್ನು ಸೂಚಿಸುತ್ತವೆ. ಊರ್ಧ್ವಮುಖವಾಗಿಯೂ ಅದು ಪ್ರತಿನಿಧಿಸುತ್ತದೆ. ಪ್ರತಿಯೊಂದು ಮುಖವು ಶಿವನ ಒಂದು ರೂಪವನ್ನು ಮತ್ತು ಆಕಾರವನ್ನು ಪ್ರತಿನಿಧಿಸುತ್ತದೆ. ಶಿವನ ವಿವಿಧ ರೂಪಗಳನ್ನು ಗುರುತಿಸಲು ಅವನಿಗೆ ಕೆಲವು ಪ್ರತೀಕಗಳು ಅಥವಾ ಆಯುಧ/ಚಿಹ್ನೆಗಳನ್ನು ನೀಡಿರುವ ಕುರಿತು ಕೆಲವು ಗ್ರಂಥಗಳು ಉಲ್ಲೇಖಿಸುತ್ತವೆ. ತತ್ಪುರುಷನು ಮಾತುಲುಂಗ ಅಥವಾ ಬೀಜ ಪೂರಕವನ್ನು ಒಂದು ಕೈಯಲ್ಲಿ ಹಾಗು ಮತ್ತೊಂದರಲ್ಲಿ ಅಕ್ಷಮಾಲೆಯನ್ನು ಹಿಡಿದಿರುತ್ತಾನೆ.[13] ಬೀಜಪೂರಕದಲ್ಲಿರುವ ಅಣುವು ವಿಶ್ವದ ಅಂಕುರಾರ್ಪಣದ ಬೀಜಗಳನ್ನು ಸೂಚಿಸುತ್ತವೆ. ಅಕ್ಷಮಾಲೆಯು ವಿಶ್ವವನ್ನು ಜೋಡಿಸುವ ಸಮನ್ವಯಿಸುವ ಪ್ರತೀಕವಾಗಿದೆ. ಅವನ ಜಟಾಮುಕುಟದಲ್ಲಿ ಅರ್ಧಚಂದ್ರನಿರುತ್ತಾನೆ ಹಾಗೂ ಇದು ಅಮಾ ಕಾಲ (1/16ನೇ ಭಾಗ) ಮತ್ತು ಶಿವನ ಐಶ್ವರ್ಯವನ್ನು ಸೂಚಿಸುತ್ತವೆ. ಅಘೋರನು ಭಯಾನಕವಾಗಿದ್ದು ಭೀತಿಯನ್ನು ಹುಟ್ಟಿಸುವ ಕಾಲ ನಾಗಿದ್ದಾನೆ. ಸರ್ಪ ತಲೆಬುರುಡೆಯನ್ನು ಹೊಂದಿದವನಾಗಿರುತ್ತಾನೆ. ವಾಮದೇವನು ಸುಂದರಾಂಗನಾಗಿದ್ದು, ಸ್ತ್ರೀಯರನ್ನು ಆಕರ್ಷಿಸುವವನಾಗಿರುತ್ತಾನೆ.

ವಿಷ್ಣುಧರ್ಮೋತ್ತರವು ಶಿವನ ಐದು ಮುಖಗಳಿಗೆ ಪರ್ಯಾಯವಾದ ಐದು ಹೆಸರುಗಳನ್ನು ಉಲ್ಲೇಖಿಸುತ್ತವೆ. ಶಿವನ ದೇಹವು ರೂಪಗೊಂಡ ಮಂತ್ರವು ಈಶಾನ, ತತ್ಪುರುಷ, ಅಘೋರ, ವಾಮದೇವ ಮತ್ತು ಸದ್ಯೋಜಾತರನ್ನು ಸೂಚಿಸುತ್ತದೆ. ಅವುಗಳ ಪರ್ಯಾಯವಾದ ಎರಡನೆಯ ಹೆಸರುಗಳು ಸದಾಶಿವ, ಮಹಾದೇವ, ಭೈರವ, ಉಮಾ ಮತ್ತು ನಂದಿ ಇದರಂತೆ ಮಧ್ಯಭಾಗದಲ್ಲಿರುವ ಮುಖವು ತತ್ಪುರುಷ-ಮಹಾದೇವ; ಅಘೋರವು ಭೈರವನನ್ನು, ವಾಮದೇವ

ಅಥವಾ ಉಮಾ ಇನ್ನೊಂದು ಬದಿಯಲ್ಲಿರುತ್ತದೆ. ಉಮಾ ಮುಖವು ಸುಂದರ ವದನದಿಂದ ಕೂಡಿದ್ದು ಪಾರ್ವತಿದೇವಿಯ ಅಥವಾ ಶಿವನ ಶಕ್ತಿ ಹಾಗೂ ಪ್ರಕೃತಿಯನ್ನು ಸೂಚಿಸುತ್ತದೆ. ಈ ಹೆಸರುಗಳು ಶಿವನ ಪಾರಮ್ಯವನ್ನು ತೋರುವುದರೊಂದಿಗೆ ಅವನೇ ಸರ್ವಶಕ್ತ ಮತ್ತು ಮಹೇಶ ಎಂದು ಪ್ರತಿಪಾದಿಸುತ್ತವೆ. ಇಂತಹ ತಾತ್ವಿಕ ಹಿನ್ನೆಲೆಯಿಂದ ರೂಪಗೊಂಡ ಶಿವನ ಮಹೇಶ ಮೂರ್ತಿಯ ಸುಂದರ ಶಿಲ್ಪವನ್ನು ಮುಂಬೈ ಸಮೀಪದ ಎಲಿಫೆಂಟಾ ಗುಹೆಗಳಲ್ಲಿ ಕಾಣಬಹುದು. ಕ್ರಿ.ಶ. 7–8ನೇ ಶತಮಾನಗಳಿಗೆ ಸೇರಬಹುದಾದ ಈ ಶಿಲ್ಪದಲ್ಲಿ ಶಿವನ ಮೂರು ಮುಖಗಳನ್ನು ಅತ್ಯಂತ ಸುಂದರ ಮತ್ತು ಕಲಾತ್ಮಕವಾಗಿ ರೂಪಿಸಲಾಗಿದೆ. ತತ್ಪುರುಷ, ಅಘೋರ ಮತ್ತು ವಾಮದೇವರ ಉಬ್ಬು ಶಿಲ್ಪಗಳಲ್ಲಿ ಶಿವನ ಗುಣ ಲಕ್ಷಣಗಳನ್ನು ಆಯಾ ಶಿಲ್ಪಗಳಲ್ಲಿ ಮೂಡಿಸಲಾಗಿದೆ. ಈ ಉಬ್ಬುಶಿಲ್ಪವು ಲಿಂಗ ಮತ್ತು ಮೂರ್ತಿ ಶಿಲ್ಪಗಳ ಪ್ರತೀಕವಾಗಿದೆ ಎಂದು ಸ್ಟೆಲ್ಲಾ ಕ್ರೆಮರಿಚ್‌ರವರು ಅಭಿಪ್ರಾಯಪಡುತ್ತಾರೆ[14]. ತಮಿಳು ನಾಡಿನ ವೆಲ್ಲೂರು ಜಿಲ್ಲೆಯ ವಾಲಾಜ ತಾಲೂಕಿನ ತಿರುಮಲೈಚೇರಿಯಲ್ಲಿ ರಾಷ್ಟ್ರಕೂಟರ ಅರಸ ಮೂರನೇ ಕೃಷ್ಣ ನಿರ್ಮಿಸಿದ ಕಾಲಪ್ರಿಯ ದೇವಾಲಯದಲ್ಲಿ ಕುಳಿತ ಭಂಗಿಯಲ್ಲಿರುವ ಮಹೇಶಮೂರ್ತಿ ಶಿಲ್ಪವಿದೆ.[15] ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಮತ್ತು ರಾಜಸ್ತಾನದ ಚಿತ್ತೋಡಗಢದಲ್ಲಿಯೂ ಮಹೇಶ ಮೂರ್ತಿಗಳು ದೊರಕಿವೆ.

ಪ್ರಚಲಿತ ನಂಬಿಕೆಗಳಂತೆ ವಿರೂಪಾಕ್ಷ ಲಿಂಗವನ್ನು ಸ್ವಯಂಭೂ ಲಿಂಗವೆಂದು ಕರೆಯುತ್ತಾರೆ. ಭಾರತದಲ್ಲಿರುವ 64 ಸ್ವಯಂಭೂ ಲಿಂಗಗಳಲ್ಲಿ ಹೇಮಕೂಟದ ವಿರೂಪಾಕ್ಷ ಲಿಂಗವು ಒಂದು ಎಂಬುದಾಗಿ ಪರಿಗಣಿಸಲಾಗಿದೆ. ಆಗಮಗಳಂತೆ ಸ್ವಯಂಭೂ ಲಿಂಗವು ಭಿನ್ನಗೊಂಡರೂ ಅದು ಪೂಜೆಗೆ ಅರ್ಹವೆಂದು ಪರಿಭಾವಿಸಲಾಗುತ್ತದೆ. ಭಿನ್ನಗೊಂಡ ಲಿಂಗವನ್ನು ಬದಲಾಯಿಸುವುದರಿಂದ ವಿನಾಯಿತಿಯನ್ನು ನೀಡಲಾಗಿದೆ. ವಿರೂಪಾಕ್ಷ ದೇವಾಲಯದ ಗರ್ಭಗೃಹದಲ್ಲಿ ಪೂಜೆಗೊಳ್ಳುವ ಲಿಂಗವು ಕಾಲಕ್ರಮದಲ್ಲಿ ಭಿನ್ನವಾದ ಸಂದರ್ಭಗಳಲ್ಲಿ ಅದನ್ನು ಬದಲಿಸಿ ಹೊಸ ಲಿಂಗವನ್ನು ಪ್ರತಿಷ್ಠಾಪಿಸುವ ಕ್ರಮ ಇಂದಿಗೂ ಪ್ರಚಲಿತದಲ್ಲಿದೆ. ಅದರಂತೆ, ವಿರೂಪಾಕ್ಷ ದೇವಾಲಯದ ಗರ್ಭಗೃಹದಲ್ಲಿ ಪಂಚಮುಖ ಲಿಂಗವು ಪೂಜೆಗೊಳ್ಳುತ್ತಿದ್ದು, ಅದು ಭಿನ್ನಗೊಂಡ ನಂತರ ಅದನ್ನು ಬದಲಿಸಿ ಹೊಸ ಲಿಂಗವನ್ನು ಪ್ರತಿಷ್ಠಾಪಿಸಿ, ಭಿನ್ನಗೊಂಡ ಲಿಂಗವನ್ನು ಇಲ್ಲಿನ ಅಂತರಾಳದ ಮೂಲೆಯಲ್ಲಿಯೇ ಇರಿಸಿದ್ದಾರೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಭಿನ್ನಗೊಂಡ ಲಿಂಗವನ್ನು ಬದಲಿಸಿ ಭಿನ್ನಗೊಂಡ ಲಿಂಗವನ್ನು ಅಂತರಾಳದ ಮೂಲೆಯಲ್ಲಿ ಇರಿಸಲಾಯಿತು. ಈ ಕಾರಣದಿಂದ ಅಂತರಾಳ ಭಾಗದಲ್ಲಿ ಇರಿಸಿರುವ ಲಿಂಗಗಳು ಗರ್ಭಗೃಹದಲ್ಲಿ ಪೂಜೆಗೆ ಒಳಪಡುತ್ತಿದ್ದವೆಂದು ಸುಲಭವಾಗಿ ಊಹಿಸಬಹುದು. ಆದುದರಿಂದ ಮೇಲೆ

ಪ್ರಸ್ತಾಪಿಸಲಾದ ಪಂಚಮುಖಲಿಂಗವು ಪ್ರಾರಂಭದಲ್ಲಿ, ಅಂದರೆ ದೇವಾಲಯ ನಿರ್ಮಿಸಿದಾಗ ಪೂಜೆಗೆ ಒಳಪಡುತ್ತಿತ್ತೆಂದು ಗಣಿಸಬಹುದು. ಕ್ರಿಶ. 7–8ನೇ ಶತಮಾನದಲ್ಲಿ ಈ ಪಂಚಮುಖಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸುವ ಕ್ರಮವಿತ್ತೆಂಬುದು ಇಲ್ಲಿ ಹೇಳಬಹುದು.

ಹಂಪಿ ಪರಿಸರದ ಕವಿ ಹರಿಹರನು ತನ್ನ ಕಾವ್ಯದಲ್ಲಿ ಹಂಪಿಯನ್ನು ಪಂಚ ಕ್ರೋಶವೆಂದು ಕರೆದಿದ್ದು, ಇಲ್ಲಿನ ಅಧಿದೇವತೆಯು ವಿರೂಪಾಕ್ಷನೆಂದು ಉಲ್ಲೇಖಿಸುತ್ತಾನೆ.[16] ಪಂಪಾ ಕ್ಷೇತ್ರದ ಪರಿಧಿಯೊಳಗೆ ಶಿವನ ಐದು ಮುಖಗಳಿಗೆ ಸಂಬಂಧಿಸಿದಂತೆ ದೇವಾಲಯಗಳಿರುವುದನ್ನು ಸಹ ಉಲ್ಲೇಖಿಸುತ್ತಾನೆ. ಇದಕ್ಕೆ ಪೂರಕವಾಗಿ ಪಂಪಾಮಹಾತ್ಮೆಯು ಹಂಪಿಯ ಪರಿಸರ ಹಾಗು ಕ್ಷೇತ್ರಮಹಿಮೆಯ ವರ್ಣನೆಯನ್ನು ಸವಿವರವಾಗಿ ನೀಡುತ್ತದೆ. ಅದರಂತೆ ಬ್ರಹ್ಮನ ಮಗಳಾದ ಪಂಪಾದೇವಿಯು ಶಿವನನ್ನು ಮದುವೆಯಾಗಲು ಹೇಮಕೂಟದ ಉತ್ತರಕ್ಕಿರುವ ಅರ್ಧಕೋಶ ದೂರದಲ್ಲಿ ವಿಪ್ರಕೂಟ ಪರ್ವತದ ಹತ್ತಿರವಿರುವ ಸರೋವರದ ದಂಡೆಯಲ್ಲಿ (ಪಂಪಾ ಸರೋವರ) ಕಠೋರ ತಪಸ್ಸಿನ ಮೂಲಕ ಶಿವನನ್ನು ಮೆಚ್ಚಿಸಿ, ವಿವಾಹವಾಗುತ್ತಾಳೆ.[17] ಅದರಿಂದಾಗಿ ಶಿವನು ಪಂಪಾಪತಿ ಎನಿಸಿಕೊಳ್ಳುತ್ತಾನೆ. ಈ ಸ್ಥಳವನ್ನು ಪಂಪಾಕ್ಷೇತ್ರವೆಂದು ಕರೆದು ಅವಳು ತಪಸ್ಸು ಮಾಡಿದ ಸರೋವರವನ್ನು ಪಂಪಾ ಸರೋವರವೆಂದು ಪ್ರಸಿದ್ಧಿಯಾಗಲೆಂದು ಆಶೀರ್ವದಿಸುತ್ತಾನೆ. ನಂತರ ಇದು 'ಪಂಪಾ ಕ್ಷೇತ್ರ', 'ಪಂಪಾ ಸರೋವರ', 'ಪಂಪಾಪುರ' ಎಂಬಿತ್ಯಾದಿ ಹೆಸರುಗಳಿಂದ ಪ್ರಖ್ಯಾತಿ ಯಾಯಿತು. ಈ ಪವಿತ್ರ ಕ್ಷೇತ್ರದಲ್ಲಿ ಮೂರು ಕೋಟಿ ತೀರ್ಥಗಳಿದ್ದು, ಕಾಶಿ ಗಂಗೆಗೆ ಸಮಾನವೆನಿಸಿದ ತುಂಗಭದ್ರಾ ಎಂಬ ಪುಣ್ಯ ನದಿ ಹರಿಯುತ್ತಿದ್ದು, ಋಷಿಗಳ ಪೂರ್ವಾಶ್ರಮಗಳು ವಿರಾಜಿಸುತ್ತಿವೆ. ಪಂಪಾಪತಿಯನ್ನೊಳಗೊಂಡು ಉತ್ತರಕ್ಕೆ–ಮಾಣಿಭದ್ರೇಶ್ವರ (ಗಂಗಾವತಿ ತಾ॥), ದಕ್ಷಿಣಕ್ಕೆ ಜಂಬುನಾಥೇಶ್ವರ (ಹೊಸಪೇಟೆ ತಾ॥), ಪೂರ್ವಕ್ಕೆ–ಕಿನ್ನರೇಶ್ವರ (ಹೊಸಪೇಟೆ ತಾ॥) ಮತ್ತು ಪಶ್ಚಿಮಕ್ಕೆ – ಸೋಮೇಶ್ವರ (ಕೊಪ್ಪಳ ತಾ॥) ಎಂಬ ಪಂಚಲಿಂಗಗಳು ಭಕ್ತರಿಗೆ ಮುಕ್ತಿಗೊಳಿಸುವಂತ ಸದಾಶಿವನ ಪಂಚಮುಖವಾಗಿ ಆವಿರ್ಭವಿಸಿ ಚಂದ್ರಾರ್ಕಾಗ್ನಿಕೋಟಿ ಪ್ರಕಾಶಗಳಿಂದ ಕಂಗೊಳಿಸುತ್ತವೆ ಎಂದು ಉಲ್ಲೇಖಿಸುವುದು ಗಮನಾರ್ಹ.

ಹಂಪಿ ಪರಿಸರದಲ್ಲಿ ಪ್ರಚಲಿತ ನಂಬಿಕೆಯಂತೆ ವಿರೂಪಾಕ್ಷ ಲಿಂಗವು ಒಂದಲ್ಲ; ಅವುಗಳು ಐದು. ಮೇಲೆ ಉಲ್ಲೇಖಿಸುರುವ ನಾಲ್ಕು ಲಿಂಗಗಳು ವಿರೂಪಾಕ್ಷನನ್ನು ಸುತ್ತುವರಿದಿದೆ. ಅವುಗಳು ಕಿನ್ನರೇಶ್ವರ[18], ಮಾಣಿಭದ್ರೇಶ್ವರ[19], ಜಂಬುನಾಥೇಶ್ವರ[20], ಮತ್ತು ಸೋಮೇಶ್ವರ[21]. ಈ ನಾಲ್ಕು ಲಿಂಗಗಳ ನಡುವೆ ಇರುವವನೇ ವಿರೂಪಾಕ್ಷ. ಸೂಚ್ಯವಾಗಿ ಶಿವನ ನಾಲ್ಕು ಮುಖಗಳಲ್ಲಿ ಮೇಲೆ ಉಲ್ಲೇಖಿಸಿದ ಪ್ರತಿ ಮುಖಕ್ಕೆ ಒಂದು ಸ್ವತಂತ್ರ ದೇವಾಲಯವನ್ನು ನಿರ್ಮಿಸಲಾಗಿದೆ. ವಿಷ್ಣುಧರ್ಮೋತ್ತರದಂತೆ

ಶಿವನ ಐದು ಮುಖಗಳಾದ ಈಶಾನ (ಆಕಾಶ – ಊರ್ಧ್ವ), ತತ್ಪುರುಷ (ಪೂರ್ವ – ವಾಯು), ಅಘೋರ (ದಕ್ಷಿಣ – ಅಗ್ನಿ), ವಾಮದೇವ (ಉತ್ತರ – ಜಲ) ಮತ್ತು ಸದ್ಯೋಜಾತರು (ಪಶ್ಚಿಮ – ಪೃಥ್ವಿ) ಪಂಚಭೂತಗಳನ್ನು ಪ್ರತಿನಿಧಿಸಿಸುತ್ತವೆ. ಇದಕ್ಕನುಗುಣವಾಗಿ ಹಂಪಿ ಪರಿಸರದ ಐದು ದೇವಾಲಯಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಶಿವನ ಐದು ಮುಖಗಳು ಮತ್ತು ಅವು ಪ್ರತಿನಿಧಿಸುವ ದಿಕ್ಕು – ತತ್ವಗಳು

ಕ್ರಮ ಸಂ.	ಹಂಪಿ ಪರಿಸರದಲ್ಲಿರುವ ಶಿವ ದೇವಾಲಯ	ಊರು ತಾಲೂಕು	ಶಿವನ ಮುಖದ ಹೆಸರು	ಪ್ರತಿನಿಧಿಸುವ ತತ್ವ	ಪ್ರತಿನಿಧಿಸುವ ದಿಕ್ಕು
1	ವಿರೂಪಾಕ್ಷ	ಹಂಪಿ ಹೊಸಪೇಟೆ	ಈಶಾನ	ಆಕಾಶ	ಊರ್ಧ್ವ
2	ಮಾಣಿಭದ್ರೇಶ್ವರ (ವಾಣಿಭದ್ರೇಶ್ವರ)	ಮಲ್ಲಾಪುರ ಬೆಟ್ಟ (ಗಂಗಾವತಿ ಹತ್ತಿರ) ಗಂಗಾವತಿ	ವಾಮದೇವ	ಜಲ	ಉತ್ತರ
3	ಜಂಬುನಾಥೇಶ್ವರ	ಹೊಸಪೇಟೆ ಹೊಸಪೇಟೆ	ಅಘೋರ	ಅಗ್ನಿ	ದಕ್ಷಿಣ
4	ಕಿನ್ನರೇಶ್ವರ	ಬುಕ್ಕಸಾಗರ ಹೊಸಪೇಟೆ	ತತ್ಪುರುಷ	ವಾಯು	ಪೂರ್ವ
5	ಸೋಮೇಶ್ವರ	ಶಿವಪುರ (ಹುಲಿಗಿ) ಕೊಪ್ಪಳ	ಸದ್ಯೋಜಾತ	ಪೃಥ್ವಿ	ಪಶ್ಚಿಮ

ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದಲ್ಲಿ ಶಿಷ್ಟಾಚಾರದ ಮಾರ್ಗಸೂಚಿ ಸಂಜ್ಞೆಗಳನ್ನು ಕುರಿತು ವಿವರಿಸುವಾಗ ಚಂದ್ರಶೇಖರ ಡಾವಣಗೇರಿಯವರು ಇಲ್ಲಿನ ಕೆಲವು ಪ್ರಚಲಿತ ನಂಬಿಕೆ ಮತ್ತು ಆಚರಣೆಗಳತ್ತ ಗಮನ ಸೆಳೆಯುತ್ತಾರೆ.[22] ದೇವಾಲಯದ ಶಿಖರ ದರ್ಶನವು ಬಹಳ ಮುಖ್ಯವಾದುದು ಎಂಬುದನ್ನು ಸೂಚಿಸಿ, ಶ್ರೀ ವಿರೂಪಾಕ್ಷ ದೇವಾಲಯಕ್ಕೆ ಐದು ಕಳಸ, ಐದು ಶಿಖರಗಳಿದ್ದು ಈ ಕಳಸ–ಶಿಖರ ದರ್ಶನ ಪಡೆಯುವಲ್ಲಿ ಪಾಲಿಸಲಾಗುವ ಕ್ರಮ ಮತ್ತು ಮಾರ್ಗ

ವನ್ನು ಸೂಚಿಸಿದ್ದಾರೆ. ದೇವಾಲಯದ ರಾಯಗೋಪುರದಿಂದ ಒಳಗೆ ಹೋದಾಗ ಗೋಪುರದ ಪಕ್ಕದಲ್ಲಿ ಸೂರ್ಯ ಗುಡಿಯ ಹತ್ತಿರ 'ಪಂಚಶಿಖರ' ಎಂದು ಹಾಸುಗಲ್ಲಿನ ಮೇಲೆ ಬರೆದಿರುವ ಸ್ಥಳದಿಂದ ದೇವಾಲಯದ ಗೋಪುರ ನೋಡಿದರೆ ಪಂಚಕಳಸ ಮತ್ತು ಪಂಚಶಿಖರದ ದರ್ಶನದ ದರ್ಶನ ಪಡೆಯಬಹುದು ಹಾಗೂ ಆ ಸ್ಥಳ ಮತ್ತು ವೀಕ್ಷಣೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಪಂಚಕಳಸ ಮತ್ತು ಪಂಚಶಿಖರ ದರ್ಶನವಾಗುವುದಿಲ್ಲ ಎಂಬುದು ಕುತೂಹಲಕಾರಿ ಅಂಶವಾಗಿದೆ. ಇಲ್ಲಿನ ಅಧಿದೇವತೆ ವಿರೂಪಾಕ್ಷನು ಪಂಚಮುಖಗಳಿಂದ ದರ್ಶನ ನೀಡುತ್ತಿದ್ದಾನೆಂಬುದು ಇಲ್ಲಿನ ಸ್ಥಳೀಯರ ಭಾವನೆ. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಸ್ಥಳದಿಂದ ಸೋಮನಾಥೇಶ್ವರ, ಮಾತಂಗೇಶ್ವರ, ವಾಣಿಭದ್ರೇಶ್ವರ, ಜಂಬುನಾಥೇಶ್ವರ ಮತ್ತು ಕಿನ್ನರೇಶ್ವರ ಎಂಬ ಐದು ಕ್ಷೇತ್ರಗಳ ದರ್ಶನ ಭಾಗ್ಯವು ಈ ಪಂಚ ಕಳಸ ಶಿಖರ ದರ್ಶನದಿಂದ ದೊರಕುತ್ತದೆ ಎಂಬ ಪ್ರತೀತಿ ಪ್ರಚಲಿತದಲ್ಲಿದೆ ಎಂದು ಗಮನ ಸೆಳೆಯುತ್ತಾರೆ. ಶಿವರಾತ್ರಿಯ ಸಂದರ್ಭದಲ್ಲಿ ಪಂಚಕ್ಷೇತ್ರಗಳ ದರ್ಶನ ಪಡೆದು ಶ್ರೀವಿರೂಪಾಕ್ಷನ ದರ್ಶನ ಪಡೆದರೆ ಅಧಿಕ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಜನರು ನಂಬಿ ಅದರಂತೆ ನಡೆದುಕೊಂಡು ಬರುತ್ತಲಿದ್ದಾರೆ.[23]

ಇದೇ ದೇವಾಲಯದ ಮುಖಮಂಟಪದಲ್ಲಿ ಜರುಗುವ ಡೋಲೋತ್ಸವ ಕಾರ್ಯಕ್ರಮದಲ್ಲಿ ಬೆಳ್ಳಿಯ ಪಂಚಾರತಿಯನ್ನು ಬೆಳಗಿಸುವ ಪದ್ಧತಿಯಿದೆ. ಇದು ಶಿವನ ಪಂಚಮುಖಗಳಾದ ಈಶಾನ, ಸದ್ಯೋಜಾತ, ವಾಮದೇವ, ಅಘೋರ ಮತ್ತು ತತ್ಪುರುಷರುಗಳಿಗೆ ಗೌರವಸೂಚಿಸುವಂತೆ, ಶ್ರೀ ವಿರೂಪಾಕ್ಷನಿಗೆ ಪಂಚಾರತಿ ಮಾಡುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದೇವಾಲಯದಲ್ಲಿ 'ಪಂಚಶಿಖರ' ಎಂಬ ಲಿಪಿಲೇಖನ ಇರುವ ಸ್ಥಳದಿಂದ ಮುಂದೆ ಸಾಗಿದರೆ ಅಲ್ಲಿ 'ಏಕಶಿಖರಂ' '2ಶಿಖರಂ' ಎಂದಿದ್ದು ಆ ಸ್ಥಳಗಳಿಂದ ಗೋಪುರದ ಒಂದು ಕಳಸ, ಎರಡು ಕಳಸಗಳನ್ನು ಕಾಣಬಹುದು ಎಂದು ಲೇಖಕರು ನಮ್ಮ ಗಮನ ಸೆಳೆದಿರುವರು.[24]

ಹಂಪಿಯ ವಿರೂಪಾಕ್ಷನ ಪೂಜೆ ಮತ್ತು ಇಲ್ಲಿನ ದೇವಾಲಯಗಳ ಪ್ರಾಚೀನತೆಯತ್ತ ಗಮನ ಹರಿಸುವುದು ಅಷ್ಟೇ ಅವಶ್ಯ. ವಿರೂಪಾಕ್ಷ ಎನ್ನುವುದು ಶಿವನ ಅನೇಕ ಹೆಸರುಗಳಲ್ಲಿ ಒಂದು. ಅವನು ವಿರೂಪವಾದ ಅಕ್ಷಿಯನ್ನು (ಕಣ್ಣು) ಹೊಂದಿದವನಾದ್ದರಿಂದ ಅವನಿಗೆ ಈ ಹೆಸರು. ಎಲ್ಲರಿಗೂ ಎರಡು ಕಣ್ಣುಗಳಿದ್ದರೆ ಶಿವನಿಗೆ ಹಣೆಯಲ್ಲಿ ಇರುವ ಮೂರನೆಯ ಕಣ್ಣಿನಿಂದ ವಿರೂಪಾಕ್ಷನೆಂದು ಕರೆಯಲಾಗುತ್ತದೆ. ಹಲವಾರು ವಿದ್ವಾಂಸರುಗಳು ವಿರೂಪಾಕ್ಷನ ಹೆಸರಿನ ವ್ಯುತ್ಪತ್ತಿಯ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ, ಗುಡಿಮಲ್ಲಂನ

ಮುಖಲಿಂಗದ ಶಿವನಿಗೆ ಓರೆ ಕಣ್ಣುಗಳಿರುವುದರಿಂದ ಅವನಿಗೆ (ವಿರೂಪ + ಅಕ್ಷಿ = ವಿರೂಪಾಕ್ಷಿ) ವಿರೂಪಾಕ್ಷನೆಂದು ಕರೆಯಲಾಗುತ್ತದೆ ಎಂಬ ಅಭಿಪ್ರಾಯವನ್ನು ಗೋಪಿನಾಥರಾವ್ ಅವರು ವ್ಯಕ್ತಪಡಿಸಿದ್ದಾರೆ. ಇಲ್ಲಿಯವರೆಗೆ ದೊರಕಿರುವ ಮುಖಲಿಂಗಗಳಲ್ಲಿ ಶಿವನಿಗೆ ಓರೆಯಾದ ಕಣ್ಣುಗಳಿರುವುದನ್ನು ಕಾಣಬಹುದು. ಮೇಲೆ ಉಲ್ಲೇಖಿಸಿದಂತೆ ಹಣೆಯಲ್ಲಿನ ಮತ್ತು ಓರೆ ಕಣ್ಣುಗಳಿಂದ ಅವನಿಗೆ ಈ ಹೆಸರಿನಿಂದ ಕರೆಯುವುದು ಸಮಂಜಸ. ಕರ್ನಾಟಕದಲ್ಲಿ ಅನೇಕ ಪಂಚಮುಖ ಲಿಂಗಗಳು ಇವೆ. ಮಹಾಕೂಟದ ಕೊಳದ ನಡುವಿನ ಮಂಟಪದಲ್ಲಿರುವ ಪಂಚಮುಖಲಿಂಗವು ರಾಷ್ಟ್ರಕೂಟರ ಕಾಲದ್ದಾಗಿದೆ. ಹುಬ್ಬಳ್ಳಿಯ ಉಣಕಲ್, ಹಾವೇರಿಯ ಗಳಗನಾಥ ದೇವಾಲಯದಲ್ಲಿ ಮತ್ತು ಮುಂತಾದೆಡೆಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಪಂಚಮುಖ ಲಿಂಗಗಳಿವೆ. ಅವುಗಳ ಕ್ರಮಬದ್ಧ ಅಧ್ಯಯನ ವಾಗಿಲ್ಲ. ವೇದಗಳ ಕಾಲದಲ್ಲಿ ರುದ್ರನಿಗೆ ಪ್ರಮುಖ ಸ್ಥಾನವಿರಲಿಲ್ಲವಾದರೂ ಅವನಿಗೆ ದಂಡಿಸುವ ಮತ್ತು ರಕ್ಷಿಸುವ ಶಕ್ತಿಗಳಿತ್ತೆಂದು ತಿಳಿದುಬರುತ್ತದೆ. ಯಜುರ್ವೇದದ ಶತರುದ್ರೀಯ ಮತ್ತು ಇತರೆ ಗ್ರಾಂಥಿಕ ಆಧಾರಗಳಿಂದ ಶಿವನಿಗೆ ಅನೇಕ ಹೆಸರುಗಳು ಇತ್ತೆಂದು ತಿಳಿಯಬಹುದು. ವೇದಗಳಲ್ಲಿ ಉಲ್ಲೇಖಿತವಾಗಿರು ವಂತೆ ಶಿವನ್ನು ಅಗ್ನಿಯಾಗಿಯೂ ಮತ್ತು ರುದ್ರನಾಗಿ ಹೆಸರಿಸಲಾಗಿದೆ. ಋಗ್ವೇದ ಸಂಹಿತೆಯಲ್ಲಿ ವಿವಿಧ ರೂಪಗಳ ಗೋವುಗಳನ್ನು ವಿರೂಪವೆಂದು ಕರೆದು ಅವುಗಳ ಪಾಲಕನಾದ ಶಿವನಿಗೆ ಇರುವ ಎರಡು ಹೆಸರುಗಳಾದ ಅಗ್ನಿ ಮತ್ತು ರುದ್ರರನ್ನು ಸಮೀಕರಿಸಿ ವಿರೂಪಾಕ್ಷನೆಂದು ಹೆಸರಿಸಲಾಗಿದೆ.[25] ತಂತ್ರಾರಾಧನೆಯಲ್ಲಿ ಶಿವನು ಭೈರವ ಸ್ವರೂಪ ನಾಗಿದ್ದಾನೆ. ಭೈರವನ ಹಲವು ರೂಪಗಳಲ್ಲಿ 'ವಿರೂಪಾಕ್ಷ' ರೂಪವು ಒಂದಾಗಿದೆ. ಭೈರವನ ಆರಾಧನೆಯನ್ನು ಶಿವಪುರಾಣ, ಲಿಂಗಪುರಾಣ ಮತ್ತು ವಾಮನ ಪುರಾಣಗಳಲ್ಲಿ ಕಾಣಬಹುದು.[26]

ವಿರೂಪಾಕ್ಷನ ಆರಾಧನೆಯನ್ನು ಕುರಿತು ವಿದ್ವಾಂಸರು ಹಲವಾರು ಅಭಿಪ್ರಾಯ ಗಳನ್ನು ಮಂಡಿಸಿರುವರು. ಸ್ಥಳೀಯ ಐತಿಹ್ಯಗಳು, ಸ್ಥಳಪುರಾಣಗಳು ಮತ್ತು ಜನಪದರ ನಂಬಿಕೆಗಳನ್ನು ಆಧರಿಸಿ ಕರ್ನಾಟಕದಲ್ಲಿ ವಿರೂಪಾಕ್ಷನ ಆರಾಧನೆಯು ಪ್ರಾರಂಭಗೊಂಡಿದ್ದು ಹಂಪಿಯಲ್ಲಿ ಎಂದು ವಾದಿಸುವರು. ಹಂಪಿಯ ಅಧಿದೇವತೆ ಪಂಪಾದೇವಿಯು ಪಂಪಾಪತಿಯನ್ನು ವರಿಸಿದ್ದರಿಂದ ಅವರ ಆರಾಧನೆಯು ಜನಪ್ರಿಯವಾಯಿತು. ಪಂಪಾಪತಿಯನ್ನು ವಿರೂಪಾಕ್ಷನೆಂದು ಕರೆಯಲಾಗುತ್ತಿದೆ ಯಾದರೂ, ಅದು ಯಾವಾಗಿನಿಂದ ಆ ಹೆಸರು ಜನರೂಢಿಯಾಯಿತೆಂಬು ಸ್ಪಷ್ಟವಿಲ್ಲ.[27]

ಹಂಪಿಯಲ್ಲಿ ಅಧಿಕ ಸಂಖ್ಯೆಯಲ್ಲಿ ವೀರಭದ್ರನ ವಿಗ್ರಹಗಳು ಕಂಡುಬರುವ ಹಿನ್ನಲೆಯಲ್ಲಿ ಇದು ಹಂಪಿಯು ವಿರೂಪಾಕ್ಷನ ಉಪಾಸನೆಯ ಪ್ರಮುಖ

ಕೇಂದ್ರವೆಂದು ತರ್ಕಿಸುತ್ತಾ, ರೌದ್ರಭಾವದ ವೀರಭದ್ರನು – ವೀರಪಚ್ಚನಾಗಿ ಇಲ್ಲಿ ವಿರೂಪಾಕ್ಷನಾಗಿರಬಹುದೆಂದು ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ.[28] ಹಂಪಿಯಲ್ಲಿ ಕಂಡು ಬರುವ ವೀರಭದ್ರ ಶಿಲ್ಪಗಳು ಶಿವನನ್ನು ಮೂರ್ತಿರೂಪದಲ್ಲಿ ತೋರಲಾಗಿದೆ. ಕರ್ನಾಟಕದಲ್ಲಿ ಅನೇಕ ವೀರಭದ್ರ ದೇವಾಲಯಗಳಿವೆ. ಹಂಪಿಯಲ್ಲಿ ಉದ್ದಾನ ವೀರಭದ್ರ ದೇವಾಲಯವಿದೆ. ವೀರಭದ್ರನನ್ನು ವಿರೂಪಾಕ್ಷನೆಂದು ಕರೆದಿರುವ ಉದಾಹರಣೆಗಳಿಲ್ಲ. ಎಲ್ಲೆಡೆ ವಿರೂಪಾಕ್ಷನಾಗಿ ಪೂಜೆಗೊಳ್ಳುತ್ತಿರುವುದು ಲಿಂಗವೇ ಎಂಬುದು ಗಮನಿಸಬೇಕಾದ ವಿಷಯ. ಆದ್ದರಿಂದ ಕಲಬುರ್ಗಿಯವರ ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ.

ಸಾಹಿತ್ಯಿಕ ಮತ್ತು ಶಾಸನಗಳನ್ನು ಪರಿಗಣಿಸಿ ವಿರೂಪಾಕ್ಷ ದೇವಾಲಯಗಳ ನಿರ್ಮಾಣ, ಆರಾಧನೆ ಮತ್ತು ಏಳು ಬೀಳುಗಳನ್ನು ವಿವರಿಸುತ್ತಾ ವಿರೂಪಾಕ್ಷ ಎಂಬ ಪದದ ಅರ್ಥ ವಿವರಣೆ, ಆಲಯಗಳ ನಿರ್ಮಾತೃಗಳು ಯಾವ ವರ್ಗಕ್ಕೆ ಸೇರಿದವರು, ವಿರೂಪಾಕ್ಷ ದೇವಾಲಯಗಳ ಪ್ರಸರಣ ಮುಂತಾದ ವಿಷಯಗಳ ವಿವರಗಳನ್ನು ನೀಡುತ್ತಾರೆ. ವಿರೂಪಾಕ್ಷನು ಮಹಾಬಳನಾಗಿ ಮೊದಲು ಪೂಜೆ ಗೊಳ್ಳುತ್ತಿದ್ದನೆಂದು ನಂತರ ವಿರೂಪಾಕ್ಷ ಆರಾಧನೆ ಜನಪ್ರಿಯವಾಯಿತೆಂದು ಅಭಿಪ್ರಾಯಪಡುತ್ತಾರೆ. "ಇಂತಹ ಸ್ಥಳಗಳಲ್ಲಿ ಉಗ್ರರೂಪನ ಹೆಸರಿನ ಅಂದರೆ ತ್ರಿನೇತ್ರನ ಹೆಸರಿನಲ್ಲಿ ಶಿವಲಿಂಗ ಸ್ಥಾಪನೆಯಾಗುತ್ತದೆ. ಭಾಗಶಃ ಶಿವನ ಈ ರೂಪವನ್ನು ಪೂಜಿಸುವ ಒಂದು ವರ್ಗದ ಜನ ಆ ಕಾಲದಲ್ಲಿದ್ದು ಅಂತಹ ಹೆಸರಿನ ಲಿಂಗಗಳನ್ನು ಅಲ್ಲಿ ಸ್ಥಾಪಿಸಿರಬಹುದು. ಬಸವಣ್ಣನ ಕಾಲಕ್ಕಾಗಲೇ ಈ ಹೆಸರಿನ ಲಿಂಗಗಳು ಸ್ಥಾಪಿತವಾಗಿ ಪ್ರಭಾವಬೀರಿದವು" ಎಂದು ಕ್ರಿ.ಶ. 12ನೆಯ ಶತಮಾನದಲ್ಲಿದ್ದ ಬಸವಣ್ಣನವರು ಕೂಡ ತಮ್ಮ ವಚನದಲ್ಲಿ ಶಿವನು ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನದಲ್ಲಿ, ತ್ರೇತಾಯುಗದಲ್ಲಿ ವಾರಣಾಸಿ ಎಂಬ ಮೂಲಸ್ಥಾನದಲ್ಲಿ, ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನದಲ್ಲಿ, ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ ಉಲ್ಲೇಖಿಸುವುದರಿಂದ ವಿರೂಪಾಕ್ಷನ ಆರಾಧನೆಯು ಇಲ್ಲಿ ಪ್ರಚಲಿತ ವಾಗಿತ್ತೆಂದು ದೇವರಕೊಂಡಾರೆಡ್ಡಿಯವರು ತಮ್ಮ ವಾದವನ್ನು ಮುಂದಿಡುತ್ತಾರೆ.[29]

ಹಂಪಿ ಪರಿಸರದಲ್ಲಿ ಪಂಪಾದೇವಿ, ಪಂಪಾಪತಿ ಅಥವಾ ವಿರೂಪಾಕ್ಷ ಮಹಾ ಕಾಳದೇವ ಅಥವಾ ಭೈರವ ಮೈಲಾರದೇವ ಪೂಜೆಗಳಗಾಗುತ್ತಿದ್ದರಿಂದ ಕಲಬುರ್ಗಿ ಯವರ ವೀರಭದ್ರ–ವೀರಪಚ್ಚ–ವಿರೂಪಾಕ್ಷನಾದ ಮತ್ತು ದೇವರಕೊಂಡಾರೆಡ್ಡಿಯವರ ಮಹಾಬಳನು ವಿರೂಪಾಕ್ಷನಾದನೆಂಬ ವಾದಗಳು ಅಪ್ರಸ್ತುತವೆಂದು ವಾಸುದೇವ ಬಡಿಗೇರ ಅಭಿಪ್ರಾಯಪಡುತ್ತಾರೆ.

ಅವರು ಶಾಸನಗಳನ್ನು ಆಧರಿಸಿ ವಿರೂಪಾಕ್ಷ ಆರಾಧನೆ ಕುರಿತು ಚರ್ಚಿಸಿದ್ದಾರೆ. ಅವರು ಬಾದಾಮಿ ಚಾಲುಕ್ಯರ ಅರಸ ವಿನಯಾದಿತ್ಯನ ಕ್ರಿ.ಶ. 686ರ ತಾಮ್ರಪಟದಲ್ಲಿ ಪಂಪಾತಟವೆಂಬ ಉಲ್ಲೇಖ,[30] ಕಲ್ಯಾಣ ಚಾಲುಕ್ಯ ಅರಸ 5ನೆಯ ವಿಕ್ರಮಾದಿತ್ಯನ ಕ್ರಿ.ಶ. 1014ರ ಶಾಸನದಲ್ಲಿ[31] ಪಂಪಾತೀರ್ಥದ ಮಹಾಕಾಲ ದೇವರಿಗೆ ದಾನ ನೀಡಿದ ವಿಷಯವಿದ್ದರೂ ಅವುಗಳಲ್ಲಿ ವಿರೂಪಾಕ್ಷನ ಉಲ್ಲೇಖಲ್ಲವೆಂದು ತಿಳಿಸುತ್ತಾ ಕುಷ್ಟಗಿ ತಾಲೂಕಿನ ಪುರ ಗ್ರಾಮದ ಕ್ರಿ.ಶ. 1018ರ ಶಾಸನದಲ್ಲಿ ಚಾಲುಕ್ಯರ ಜಗದೇಕಮಲ್ಲನ ದಂಡನಾಯಕ ಅಗ್ರಹಾರ ಬೆಳನಗೆಯೂರಿನ ಮುಖ್ಯಸ್ಥನಾದ ಕೊಣ್ಣಯ್ಯವಾರಿ ಅಯನಯ್ಯನಿಗೆ ಪಂಪಾತೀರ್ಥದ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಐದು ಮತ್ತರು ಗದ್ದೆ ದಾನ ನೀಡಿದ ಉಲ್ಲೇಖವಿರುವುದರಿಂದ[32] ಇದು ಪಂಪಾತೀರ್ಥದ ವಿರೂಪಾಕ್ಷನನ್ನು ಕುರಿತು ಉಲ್ಲೇಖಿಸುವ ಮೊಟ್ಟ ಮೊದಲ ಶಾಸನವೆಂದು ತಿಳಿಸುತ್ತಾರೆ. ಈ ಶಾಸನದ ಕಾಲಕ್ಕಿಂತ ಮೊದಲು ಹಂಪಿಯಲ್ಲಿ ವಿರೂಪಾಕ್ಷ ಹೆಸರಿನ ದೇವರ ಆರಾಧನೆ ಪ್ರಚಲಿತವಾಗಿತ್ತೋ ಇಲ್ಲವೋ ತಿಳಿಯುವುದಿಲ್ಲವೆನ್ನುತ್ತಾ ಅವರು ಮುಂದುವರಿದು ಇಲ್ಲಿ ವಿರೂಪಾಕ್ಷನ ಆರಾಧನೆ ಇರಲಿಲ್ಲವೆಂದು ಅಲ್ಲ, ಅಲ್ಲಿ ಭೈರವ ಆರಾಧನೆ, ಮಹಾಕಾಲನ ಆರಾಧನೆ ನಿರಂತರವಾಗಿ ನಡೆದು ಬಂದಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[33]

ದೇವಾಲಯಗಳ ವಾಸ್ತು ಶೈಲಿಯನ್ನು ವಿವರಣೆಯನ್ನು ನೀಡಿ ಹಂಪಿ ಪರಿಸಿದಲ್ಲಿರುವ ಪಂಪಾಪತಿ (ವಿರೂಪಾಕ್ಷ) ದೇವಾಲಯಗಳು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾದವು ಎನ್ನುತ್ತಾರೆ. ಹಂಪಿ ಪರಿಸರದ ಹನುಮನಹಳ್ಳಿ, ಕನಕಗಿರಿ ಮತ್ತು ಗಿರಿಗೆರೆಗಳಲ್ಲಿ, ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಅಂಜನಾದ್ರಿ ಮತ್ತು ಹನುಮಹಳ್ಳಿಗಳಲ್ಲಿ ಪಂಪಾಪತಿ ದೇವಾಲಯವಿದೆಯೆಂದು ವಿಜಯನಗರ ಕಾಲಾವಧಿಯಲ್ಲಿ ನಿರ್ಮಾಣಗೊಂಡ ಪಂಪಾಪತಿ ದೇವಾಲಯಗಳು, ಹಂಪಿಯಲ್ಲಿರುವ ಮೂರು ವಿರೂಪಾಕ್ಷ ದೇವಾಲಯಗಳನ್ನು ಒಳಗೊಂಡಂತೆ, ಕುರೆಕುಪ್ಪೆ, ಕಂಪ್ಲಿ, ಕನಕಗಿರಿ, ಹಳೆ ಅಯೋಧ್ಯೆ, ಚಿಕ್ಕಜಂತಗಲ್ಲು, ಹಿರೇಜಂತಕಲ್ಲು ಮತ್ತು ಹಚ್ಚೊಳ್ಳಿ ಗ್ರಾಮಗಳಲ್ಲಿವೆ ಎಂದು ಮಾಹಿತಿ ನೀಡುತ್ತಾರೆ. ಅವರು "ಹೀಗೆ ಶಾಸನ ಸ್ಥಳಪುರಾಣ, ಸಾಹಿತ್ಯ ಮತ್ತು ದೇವಾಲಯ ವಾಸ್ತು ಶೈಲಿಯ ಸೂಕ್ಷ್ಮ ಅಧ್ಯಯನದ ಮೂಲಕ ಹಂಪಿಯ ವಿರೂಪಾಕ್ಷನ ಚರಿತ್ರೆಯನ್ನು ಇನ್ನೂ ಪ್ರಾಚೀನ ಕಾಲಕ್ಕೆ ಕೊಂಡೊಯ್ಯಬಹುದು" ಎಂದು ವಿವರಿಸಿದ್ದಾರೆ. ಈ ಅಭಿಪ್ರಾಯವನ್ನು ಶಾರದಾ ಪಾಟೀಲ ಅವರು ತಮ್ಮ ನಿಬಂಧದಲ್ಲಿ ಅನುಮೋದಿಸುತ್ತಾರೆ.[34]

ಮೇಲೆ ಚರ್ಚಿಸಿರುವ ವಿದ್ವಾಂಸರುಗಳ ವಾದಗಳಿಂದ ಹಂಪಿಯು ಶಿವನ ಪ್ರಮುಖ ನೆಲೆಯಾಗಿತ್ತೆಂದು ತಿಳಿಯಬರುತ್ತದೆ. ಹಂಪಿಯಲ್ಲಿ ಸುಮಾರು ಕ್ರಿ.ಶ.

ಏಳನೆಯ ಶತಮಾನದಿಂದ ವಿರೂಪಾಕ್ಷನ ಆರಾಧನೆಯು ಪ್ರಾರಂಭವಾಗಿರುವ ಸಾಧ್ಯತೆಗಳು ಇದ್ದು, ಕ್ರಿ.ಶ. 11ನೆಯ ಶತಮಾನದಿಂದ ವಿರೂಪಾಕ್ಷನ ಆರಾಧನೆಯು ಗಟ್ಟಿಯಾಗಿ ಬೇರೂರಿತೆಂದು ತರ್ಕಿಸಬಹುದು. ಕ್ರಮೇಣ ಹಂಪಿಯ ವಿರೂಪಾಕ್ಷನ ಆರಾಧನೆ ಹೆಚ್ಚು ಜನಪ್ರಿಯವಾದಂತೆ ಹಂಪಿ ಪರಿಸರದಲ್ಲಿ ಅನೇಕ ವಿರೂಪಾಕ್ಷ ದೇವಾಲಯಗಳು ನಿರ್ಮಾಣಗೊಂಡವು. ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ಇಟಗಿಯಲ್ಲಿ ಕ್ರಿ.ಶ. 11ನೇ ಶತಮಾನದಲ್ಲಿ ನಿರ್ಮಿಸಿರುವ ವಿರೂಪಾಕ್ಷ ದೇವಾಲಯ ಹಾಗೂ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬೆಣ್ಣಿಹಳ್ಳಿಯ ವಿರೂಪಾಕ್ಷ ದೇವಾಲಯ ಮತ್ತು ಅದಕ್ಕೆ ಸಂಬಂಧಿಸಿದ ಶಾಸನಗಳನ್ನು ಆಧರಿಸಿ ಶಾರದರವರು "ಈ ದೇವಾಲಯ 12 ನೆಯ ಶತಮಾನದ ಆರಂಭಿಕ ದಶಕ ಗಳಲ್ಲಿಯೇ ನಿರ್ಮಿಸಿರಬೇಕೆಂದು ತೋರುತ್ತದೆ. ಈ ಎರಡೂ ದೇವಾಲಯಗಳು ಹಂಪಿ ವಿರೂಪಾಕ್ಷನಿಗಿಂತ ಶಾಸನೋಕ್ತ ಪ್ರಾಚೀನ ದೇವಾಲಯಗಳಾಗಿದ್ದರೂ ಇವೇ ಹಂಪಿಗಿಂತ ಮೂಲ ದೇವಾಲಯಗಳೆಂದು ಹೇಳುವಂತಿಲ್ಲ. ಆದರೆ ಹಂಪಿಯ ವಿರೂಪಾಕ್ಷನ ಆರಾಧನೆ ಪ್ರಸರಣದ ಪರಿಣಾಮವಾಗಿ ಹುಟ್ಟಿದ ದೇವಾಲಯಗಳೆಂದು ಸ್ಪಷ್ಟವಾಗಿ ಹೇಳಬಹುದು. ಈ ಎರಡೂ ದೇವಾಲಯಗಳು ವಿರೂಪಾಕ್ಷ ಎಂಬ ಹೆಸರು ಪಡೆಯುವಲ್ಲಿ ಹಂಪಿಯಲ್ಲಿದ್ದ ಮೂಲ ವಿರೂಪಾಕ್ಷನೇ ಕಾರಣ ಎಂದು ಹೇಳಬಹುದು. ಈ ದೇವಾಲಯಗಳಲ್ಲಿ ಬೆಣ್ಣಿಹಳ್ಳಿಯ ವಿರೂಪಾಕ್ಷ ದೇವಾಲಯಕ್ಕೆ ಪಂಪಾಪತಿ ದೇವಾಲಯವೆಂದು ಕರೆಯಲಾಗುತ್ತಿರುವುದು ಗಮನಾರ್ಹ ಸಂಗತಿ. ಇದು ಹಂಪಿಯ ವಿರೂಪಾಕ್ಷನ ಮತ್ತೊಂದು ಹೆಸರಾಗಿದೆ. ಅದರ ಪ್ರಭಾವ ಮತ್ತು ಅನುಕರಣೆಗಳು ಇಲ್ಲಿ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಒಟ್ಟಿನಲ್ಲಿ ಶಾಸನಗಳ ನೇರ ಉಲ್ಲೇಖವಿರದಿದ್ದರೂ ಕ್ರಿ.ಶ. 7ನೆಯ ಶತಮಾನದಿಂದ ಹಂಪಿಯಲ್ಲಿ ವಿರೂಪಾಕ್ಷನ ಆರಾಧನೆ ಪ್ರಚಲಿತವಾಗಿತ್ತೆಂದು ಮತ್ತು ಆತನನ್ನು ಭೈರವ, ಮಹಾಕಾಲ ಎಂದು ಮುಂತಾಗಿ ಕರೆಯಲಾಗುತ್ತಿತ್ತೆಂದು ಮತ್ತು ಇಲ್ಲಿ ಮೂಲ ವಿರೂಪಾಕ್ಷನ ಪ್ರಭಾವದಿಂದ ಹಂಪಿ ಪರಿಸರದ ಅನೇಕ ಸ್ಥಳಗಳಲ್ಲಿ ವಿರೂಪಾಕ್ಷ / ಪಂಪಾಪತಿ ದೇವಾಲಯಗಳು ಅಸ್ತಿತ್ವಕ್ಕೆ ಬಂದವೆಂದು ಸ್ಪಷ್ಟವಾಗಿ ಹೇಳಬಹುದು" ಎಂದು ಅಭಿಪ್ರಾಯಪಡುತ್ತಾರೆ.[35] ಹಂಪಿಯಲ್ಲಿ ಮೂಲ ವಿರೂಪಾಕ್ಷ ದೇವಾಲಯವನ್ನು ಒಳಗೊಂಡಂತೆ ಮೂರು ವಿರೂಪಾಕ್ಷ ದೇವಾಲಯಗಳಿವೆ. ಅವು: 1. ವಿರೂಪಾಕ್ಷ (ಹಂಪಿಯ ಮುಖ್ಯ ದೇವಾಲಯ), 2. ಮೂಲ ವಿರೂಪಾಕ್ಷ, ಮತ್ತು 3. ಪ್ರಸನ್ನ ವಿರೂಪಾಕ್ಷ ದೇವಾಲಯ. ಈ ದೇವಾಲಯಗಳ ಸಂಕ್ಷಿಪ್ತ ವಾಸ್ತುವಿವರಗಳು ಇಂತಿವೆ:

ವಿರೂಪಾಕ್ಷ ದೇವಾಲಯ

ವಿರೂಪಾಕ್ಷ ದೇವಾಲಯವು ಇಂದು ದೊಡ್ಡ ಸಮುಚ್ಚಯವಾಗಿ ಬೆಳೆದಿದೆ. ದೇವಾಲಯ ಸಂಕೀರ್ಣದಲ್ಲಿ ಅನೇಕ ಉಪಗುಡಿಗಳು ಮತ್ತು ವಾಸ್ತುರಚನೆಗಳಿವೆ. ಪ್ರಸ್ತುತ ಪ್ರಧಾನ ದೇವಾಲಯದಲ್ಲಿ ಗರ್ಭಗೃಹ ಅದರ ಮುಂಭಾಗದಲ್ಲಿ ಒಂದರ ನಂತರ ಒಂದರಂತೆ ಒಟ್ಟು ಮೂರು ಅಂತರಾಳಗಳು ನವರಂಗ ಮತ್ತು ಮುಖ ಮಂಟಪ ಅಥವಾ ರಂಗಮಂಟಪಗಳಿವೆ. ಗರ್ಭಗೃಹವು ಚಚ್ಚೌಕಾಕಾರವಾಗಿದ್ದು ಮಧ್ಯದಲ್ಲಿ ವಿರೂಪಾಕ್ಷ ಉದ್ಭವಲಿಂಗವನ್ನು ಕಾಣಬಹುದು. ವಿರೂಪಾಕ್ಷ ಲಿಂಗವು ಪೀಠರಹಿತವಾಗಿದೆ. ಈ ಗರ್ಭಗೃಹವು ವಿಜಯನಗರಪೂರ್ವ ಕಾಲದಲ್ಲಿ ನಿರ್ಮಿಸಿರಬಹುದೆನ್ನುವುದಕ್ಕೆ ಪ್ರಾಚೀನ ವಾಸ್ತುಶೈಲಿಯ ಅಂಶಗಳು ಕಾಣಸಿಗುತ್ತವೆ. ದೇವಾಲಯವು ವಿವಿಧ ಅರಸುಮನೆತನಗಳ ಪೋಷಣೆಯಿಂದಾಗಿ ಸತತವಾಗಿ ಜೀರ್ಣೋದ್ಧಾರಗೊಂಡಿದ್ದು ಅನೇಕ ವಾಸ್ತು ನಿರ್ಮಿತಿಗಳನ್ನು ಸೇರಿಸಿದ್ದಾರೆ. ಇದರಿಂದಾಗಿ ಮೂಲ ದೇವಾಲಯದ ವಾಸ್ತುಶೈಲಿ ಮತ್ತು ಕಾಲಮಾನವನ್ನು ನಿರ್ಧರಿಸಲು ಕಷ್ಟಸಾಧ್ಯ. ಆದರೆ ಶಾಸನ, ಸಾಹಿತ್ಯಿಕ ಇತರೆ ಆಧಾರಗಳಿಂದ ಮೂಲ ದೇವಾಲಯವು ಕ್ರಿ.ಶ. 7–8ನೇ ಶತಮಾನದಲ್ಲಿ ನಿರ್ಮಿಸಿರಬಹುದೆಂದು ಊಹಿಸಬಹುದು. ಈ ದೇವಾಲಯ ಸಂಕೀರ್ಣದಲ್ಲಿರುವ ವಿವಿಧ ವಾಸ್ತು ನಿರ್ಮಿತಿಗಳನ್ನು ಮೂರು ಕಾಲಘಟ್ಟಗಳಲ್ಲಿ ನಿರ್ಮಿಸಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[36]

ಪ್ರಸನ್ನ ವಿರೂಪಾಕ್ಷ ದೇವಾಲಯ

ಪ್ರಸನ್ನ ವಿರೂಪಾಕ್ಷ ದೇವಾಲಯವು ಗರ್ಭಗೃಹ, ಅದಕ್ಕೆ ಸುತ್ತಲೂ ಮುಚ್ಚಿದ ಪ್ರದಕ್ಷಿಣಾಪಥ (ಸಾಂಧಾರ), ಅಂತರಾಳ, ಸಭಾಮಂಟಪ, ಮಹಾಮುಖಮಂಟಪ ಗಳನ್ನು ಹೊಂದಿದೆ. ಈ ಪ್ರಧಾನ ದೇವಾಲಯಕ್ಕೆ ಸುತ್ತಲೂ ಕಲ್ಯಾಣ ಮಂಟಪ, ಪರಿವಾರ ದೇವತೆಗಳ ಗುಡಿಗಳು, ಇತರ ಅಕ್ಷ ಮಂಟಪಗಳು ಹಾಗೂ ಬೃಹತ್ತಾದ ಮಹಾದ್ವಾರ ಮಂಟಪಗಳಿವೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗವಿದೆ. ಕ್ರಿ.ಶ. 1513ರ ಕೃಷ್ಣದೇವರಾಯನ ಕಾಲದ ಶಾಸನವು ಪ್ರಸನ್ನ ವಿರೂಪಾಕ್ಷನಿಗೆ ಕನ್ನಕೀಯ ತಟೆ, ಬಂಕಾಪುರ, ನಾಗಲಾಪುರ, ಗೌರಾಜಿಯ ಕೆರೆ, ಮೂರು ತೋಟ ಮತ್ತು ಭೂಮಿಗಳನ್ನು ದಾನ ನೀಡಿದ ಉಲ್ಲೇಖವಿದೆ.[37]

ಮೂಲ ವಿರೂಪಾಕ್ಷ ದೇವಾಲಯ

ಹೇಮಕೂಟದ ಬೆಟ್ಟದ ಮೇಲೆ ಕಣಶಿಲೆಯ ಮೂಲ ವಿರೂಪಾಕ್ಷ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾ ಮಂಟಪಗಳಿಂದ

ಕೂಡಿದೆ. ಗರ್ಭಗೃಹದ ಮಧ್ಯದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಶಿವಲಿಂಗವನ್ನು (ವಿರೂಪಾಕ್ಷ) ಪ್ರತಿಷ್ಠಾಪಿಸಲಾಗಿದೆ. ಈ ಲಿಂಗವು ಕಪ್ಪುಶಿಲೆಯಿಂದ ರಚಿಸಲಾಗಿದೆ. ಲಿಂಗವು ನಂತರ ಕಾಲದ್ದೆಂದು ಅದರ ಶೈಲಿಯನ್ನು ಗಮನಿಸಿ ಹೇಳಬಹುದು. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಪಂಚತಲಗಳಿವೆ. ಶಿಖರ ಮತ್ತು ಸ್ತೂಪಿ ಭಾಗಗಳು ಪ್ರಸ್ತುತ ಇಲ್ಲ. ದೇವಾಲಯಕ್ಕೆ ಸುಖನಾಸವಿದೆ. ಅಂತರಾಳದ ಮಧ್ಯಭಾಗದಲ್ಲಿ ಪೀಠದ ಮೇಲೆ ಸುಮಾರು ಎರಡು ಅಡಿ ಎತ್ತರದ ನಂದಿಯನ್ನು ಕಾಣಬಹುದು. ಈ ದೇವಾಲಯವು ತೆರೆದ ಸಭಾಮಂಟಪವನ್ನು ಹೊಂದಿದ್ದು ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ದೇವಾಲಯ ಪ್ರವೇಶಿಸಲು ಸೋಪಾನಗಳನ್ನು ನಿರ್ಮಿಸಲಾಗಿದೆ. ಈ ಮಂಟಪವು ನಂತರ ಕಾಲದ ಸೇರ್ಪಡೆಯಾಗಿದೆ. ಜಾರ್ಜ್ ಮಿಷೆಲ್‌ರವರು ಮೂಲ ವಿರೂಪಾಕ್ಷ ದೇವಾಲಯವನ್ನು ಪ್ರಸನ್ನ ವಿರೂಪಾಕ್ಷ ದೇವಾಲಯವೆಂದು ಕರೆದಿರುತ್ತಾರೆ.[38] ಆದರೆ ಕ್ರಿ.ಶ. 10–11ನೇ ಶತಮಾನದಲ್ಲಿ ನಿರ್ಮಿಸಿರಬಹುದಾದ ಈ ದೇವಾಲಯವನ್ನು ಇಂದಿಗೂ ಮೂಲ ವಿರೂಪಾಕ್ಷ ಎಂದು ಕರೆಯುತ್ತಿರುವುದು ಮತ್ತು ಪ್ರಾಚೀನ ವಾಸ್ತು ಶೈಲಿಯನ್ನು ಹೊಂದಿರುವುದು ಗಮನಾರ್ಹ.[39] ವಿರೂಪಾಕ್ಷ ದೇವಾಲಯಗಳಲ್ಲಿರುವ ಲಿಂಗ, ಶಿಲ್ಪಗಳು ಮತ್ತು ಮೂಲ ವಿರೂಪಾಕ್ಷ ದೇವಾಲಯವನ್ನು ಕುರಿತು ಪ್ರಚಲಿತದಲ್ಲಿರುವ ಐತಿಹ್ಯಗಳು ವಾಸ್ತವವಲ್ಲವೆಂದು ಶಾರದ ಅವರು ಅಭಿಪ್ರಾಯಪಡುತ್ತಾರೆ.[40]

ಕಲಬುರ್ಗಿ, ದೇವರಕೊಂಡಾರೆಡ್ಡಿ, ವಾಸುದೇವ ಬಡಿಗೇರ ಮತ್ತು ಶಾರದ ಪಾಟೀಲರು ವಿರೂಪಾಕ್ಷನ ಆರಾಧನೆಯು ಹಂಪಿಯಲ್ಲಿ ಇತ್ತೆಂದು ಒಮ್ಮತವಾಗಿ ಅಭಿಪ್ರಾಯಿಸುತ್ತಾರೆ. ಕಲಬುರ್ಗಿಯವರನ್ನು ಹೊರತುಪಡಿಸಿ ದೇವರಕೊಂಡಾರೆಡ್ಡಿ ಮತ್ತು ವಾಸುದೇವ ಬಡಿಗೇರ ಅವರು ಲಿಂಗ ಮತ್ತು ವಾಸ್ತುಶೈಲಿಯನ್ನು ಪರಿಗಣಿಸುತ್ತಾರೆ. ಪ್ರಸ್ತುತ ಬೆಳಕಿಗೆ ಬಂದಿರುವ ಪಂಚಮುಖಲಿಂಗ, ಅದರ ಪ್ರಾಚೀನತೆ, ಲಿಂಗದಲ್ಲಿ ತೋರಲಾಗಿರುವ ಮೂರನೆಯ ಕಣ್ಣು ಹಾಗು ಓರೆ ಕಣ್ಣುಗಳಿಂದಾಗಿ ಇದುವೆ ನಿಜವಾದ ಅರ್ಥದಲ್ಲಿ ವಿರೂಪಾಕ್ಷನೆಂದು ಹೇಳಬಹುದು. ಪ್ರಾಯಶಃ ಇಂತಹ ಮುಖಲಿಂಗ ಓರೆ ಕಣ್ಣಿನ ಶಿವನನ್ನು ವಿರೂಪಾಕ್ಷನೆಂದು (ವಿರೂಪ + ಅಕ್ಷಿ) ಹೆಸರಿಸಿ ಅನೇಕ ಅರ್ಥ ವಿವರಣೆಗಳನ್ನು ನೀಡಿದರೆನ್ನಬಹುದು. ಶಿಲ್ಪಿಯು ಸ್ತಂಭದ ಸುತ್ತಲೂ ಶಿವನ ವಿವಿಧ ತತ್ವಗಳಿಗೆ ಅನುಗುಣವಾಗಿ ಮುಖಭಾವವನ್ನು ತೋರಬೇಕಾದಾಗ ಸ್ಥಳದ ಕೊರತೆಯಿಂದ ಶಿವನ ಕಣ್ಣುಗಳನ್ನು ಸ್ವಲ್ಪ ಓರೆಯಾಗಿಸಿರುವುದರಿಂದ ಮತ್ತು ಶಿವನಿಗೆ ಇರುವ ಮೂರನೆಯ ಕಣ್ಣಿನಿಂದಾಗಿಯೂ ಶಿವನಿಗೆ ವಿರೂಪಾಕ್ಷನೆಂಬ ಹೆಸರು ಬಂದಿರುವ ಸಾಧ್ಯತೆಗಳಿವೆ. ಪ್ರಸ್ತುತ ವಿರೂಪಾಕ್ಷ ದೇವಾಲಯದಲ್ಲಿ ದೊರತಿರುವ ಪಂಚಮುಖಲಿಂಗವು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಇದಕ್ಕೆ ಪೂರಕವಾಗಿ ಹೇಮಕೂಟ ಬೆಟ್ಟದಲ್ಲಿ ಮೂಲ ವಿರೂಪಾಕ್ಷ

ದೇವಾಲಯವಿದೆ. ಇದು ವಿಜಯನಗರ ಪೂರ್ವ ಕಾಲದ ನಿರ್ಮಾಣ. ಇದರೊಂದಿಗೆ ಹಂಪಿ ಪರಿಸರದಲ್ಲಿರುವ ಶಿವನ ಉಳಿದ ನಾಲ್ಕು ತತ್ವಗಳನ್ನು ಪ್ರತಿನಿಧಿಸುವ ದೇವಾಲಯಗಳು ನಾಲ್ಕು ದಿಕ್ಕುಗಳಲ್ಲಿ ಇರುವುದು ಹಾಗೂ ಇವುಗಳೆಲ್ಲವೂ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವುದು ಗಮನಾರ್ಹ. ಎಲ್ಲಾ ಐದು ದೇವಾಲಯಗಳಲ್ಲಿ ವಾಸ್ತು ಶೈಲಿಯ ಏಕತಾನತೆಯನ್ನು ಕಾಣಬಹುದು. ಈ ಅಂಶಗಳನ್ನು ಪರಿಗಣಿಸಿ ಪ್ರಸ್ತುತ ಗುಂಡು ಬ್ರಹ್ಮನೆಂದು ಕರೆಯಲಾಗುವ ಪಂಚಮುಖಲಿಂಗವೆ ವಿರೂಪಾಕ್ಷ ಲಿಂಗವೆಂದು ನಿರ್ಧರಿಸಬಹುದು. ಶಿವನನ್ನು ಪಂಚಮುಖಲಿಂಗವಾಗಿ ಆರಾಧಿಸುವ ಕ್ರಮವು ಕ್ರಿಸ್ತ ಶಕೆಯ ಆರಂಭ ಕಾಲದಿಂದಲೂ ಸಾಗುತ್ತಾ ಬಂದಿದೆ ಎನ್ನುವುದನ್ನು ಈಗಾಗಲೇ ಗಮನಿಸಲಾಗಿದೆ. ಪಂಚಮುಖಲಿಂಗ ಆರಾಧನೆಯ ಕ್ರಮವು ಹಿನ್ನಡೆಗೊಂಡು, ಲಿಂಗದ ಆರಾಧನೆಯು ಕ್ರಿ.ಶ. 10–11ನೇ ಶತಮಾನದಿಂದ ಹೆಚ್ಚು ಜನಪ್ರಿಯವಾಯಿತು. ಇದರಿಂದಾಗಿಯೇ ನಮಗೆ 11–12ನೆಯ ಶತಮಾನದ ನಂತರ ಮುಖಲಿಂಗಗಳು ದೊರಕಿಲ್ಲ. ಅದರಲ್ಲಿಯೂ ಪಂಚಮುಖಲಿಂಗಗಳು ದೊರಕಿಲ್ಲ ಹಾಗು ನನ್ನ ಗಮನಕ್ಕೆ ಬಂದಿರುವುದಿಲ್ಲ.

ಈ ಪೂರ್ವದಲ್ಲಿದ್ದ ನಂಬಿಕೆ ಮತ್ತು ಆಚರಣೆಯು ವಿಜಯನಗರ ಕಾಲ ದಲ್ಲಿಯೂ ಮುಂದುವರಿಯಿತು. ವಿರೂಪಾಕ್ಷನನ್ನು ಪಂಚಮುಖಲಿಂಗದವನಾಗಿ ತೋರದಿದ್ದರೂ ವಿವಿಧ ನಮೂನೆಯ ಪಂಚಲಿಂಗಗಳಾಗಿ ಹಂಪಿ ಪರಿಸರದಲ್ಲಿ ತೋರಲಾಗಿದೆ. ಇಲ್ಲಿನ ಜನಪದರ ನಂಬಿಕೆ, ಸ್ಥಳಪುರಾಣ, ಐತಿಹ್ಯ ಮತ್ತು ವಿರೂಪಾಕ್ಷ ದೇವಾಲಯಗಳಲ್ಲಿರುವ ಶಿಷ್ಟಾಚಾರದ ಮಾರ್ಗಸೂಚಿಗಳು, ಪೂಜಾ ವಿಧಾನ, ಶಾಸನಗಳು, ವಿರೂಪಾಕ್ಷ ದೇವಾಲಯಗಳಿಂದ ಬೆಳಕಿಗೆ ಬಂದಿರುವ ಪಂಚಮುಖಲಿಂಗವೇ ವಿರೂಪಾಕ್ಷನಾಗಿ ಪೂಜೆಗೊಳ್ಳುತ್ತಿದ್ದ ಮೂಲ ಲಿಂಗವೆಂದು ನಿರ್ಧರಿಸಬಹುದು.

ಅಡಿಟಿಪ್ಪಣಿಗಳು

1. ವಾಸುದೇವನ್ ಸಿ. ಎಸ್, 'ಹಂಪಿ ಪರಿಸರದ ಪಂಚಲಿಂಗಗಳು', *ವಿಜಯನಗರ ಅಧ್ಯಯನ*, ಸಂ. 12, ಪು. 231–243; ಪಂಚಲಿಂಗಾಸ್ ಫ್ರಂ ಹಂಪಿ ಎನ್‌ವಿರಾನ್ಸ್, *ಕಲಾ* (ಜರ್ನಲ್ ಆಫ್ ಇಂಡಿಯನ್ ಆರ್ಟ್ ಹಿಸ್ಟರಿ ಕಾಂಗ್ರೆಸ್), ಸಂ. xiv, ಪು. 63–68, ಶ್ರೀವಾಸ್ತವ್ ಎ. ಎಲ್, ಟೂ ಅನ್‌ಪಬ್ಲಿಷ್ಡ್ ಮುಖಲಿಂಗಾಸ್ ಅಟ್ ಕನೌಜ್, *ಕಲಾ* (ಜರ್ನಲ್ ಆಫ್ ಇಂಡಿಯನ್ ಆರ್ಟ್ ಹಿಸ್ಟರಿ ಕಾಂಗ್ರೆಸ್), ಸಂ. xiii, ಪು. 89–93.

2. ಹರಿಹರ ಕವಿಯು ತನ್ನ ಪಂಪಾಕ್ಷೇತ್ರದಲ್ಲಿ 'ಗುಂಪುಗುಂಪಾಗಿ ಕಂಡು ಬರುವ ಶಿವಲಿಂಗಗಳಲ್ಲಿ ಲೋಕಕ್ಕೆ ಪಾವನವಾದ ಕೋಟಿ ಶಂಕರಲಿಂಗ ಏಕಾಂತರಾಮೇಶ್ವರ ಲಿಂಗ ಇನ್ನೂ ಎಣಿಸಲು ಸಾಧ್ಯವಾಗದಷ್ಟು ಆತನಿಗೆ ತಿಳಿಯದ ಅನೇಕ ಲಿಂಗಗಳು ಪುರದ ಸುತ್ತಲೂ ಇರುವ ಕಾರಣ ಪಂಪಾಪುರಾಣ (ಹಂಪಿ) ಲಿಂಗಮಯವಾದ ನಿಸ್ಸೀಮೆಯಾಗಿತ್ತು' ಎಂದು ವರ್ಣಿಸುತ್ತಾನೆ. ನೋಡಿ ರವೀಂದ್ರನಾಥ, ಕೆ, 'ಹಂಪಿಯ ಶಾಸನೋಕ್ತ ಲಿಂಗಗಳು', *ವಿಜಯನಗರ ಅಧ್ಯಯನ,* ಸಂ. 9, ಪು. 164–170. ಲೇಖಕರು ಹಂಪಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಶಿವಲಿಂಗಗಳನ್ನು ಕುರಿತು ಚರ್ಚಿಸಿದ್ದಾರೆ. ಅವುಗಳು ಇಂತಿವೆ. ಸರ್ವಾಂಗಲಿಂಗ, ಯೋಗಾಂಗಲಿಂಗ, ನಾಗಭೂಷಣ ಲಿಂಗ, ಶಿವಲಿಂಗ, ಮಹಾಲಿಂಗ, ಕೋಟಿ ಶಂಕರಲಿಂಗ, ಅಷ್ಟೋತ್ತರಲಿಂಗ (ನೂರೆಂಟು ಲಿಂಗಗಳು) ಮತ್ತು ಕಾಳಹಸ್ತಿಲಿಂಗ.

3. ಈ ಲಿಂಗವನ್ನು ಉಬ್ಬುಶಿಲ್ಪದಲ್ಲಿ ಮೂಡಿಸಲಾಗಿದೆ. ಇದು ಉದ್ದಾನ ವೀರಭದ್ರಸ್ವಾಮಿ ದೇವಾಲಯ ಪ್ರಾಕಾರದಲ್ಲಿರುವ ದೀಪಸ್ತಂಭದಲ್ಲಿ ವೀರಭದ್ರಮೂರ್ತಿಗೆ ಅಭಿಮುಖವಾಗಿ ಲಿಂಗಕ್ಕೆ ಲಿಂಗವೇ ಪೀಠವಾಗಿರುವ ಉಬ್ಬುಶಿಲ್ಪವನ್ನು ಯೋಗಲಿಂಗ ಅಥವಾ ಯೋಗಾಂಗಲಿಂಗವೆಂದು ಸಿ. ಟಿ. ಯಂ, ಕೊಟ್ರಯ್ಯನವರು ಗುರುತಿಸಿದ್ದಾರೆ. ನೋಡಿ 'ಲಿಂಗ ಸೂಪರ್ ಇಂಪೋಸ್ಡ್ ಬೈ ಅನದರ್ ಲಿಂಗ ಅಟ್ ಹಂಪಿ,' *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ 1988–91*, ಪು. 135–140; ಕೊಟ್ರಯ್ಯ, ಸಿ. ಟಿ. ಯಂ, 'ಹಂಪಿಯಲ್ಲೊಂದು ಸಿದ್ಧರಾಮೇಶ್ವರ ಪ್ರಣೀತ ಲಿಂಗಕ್ಕೆ ಲಿಂಗವೇ ಪೀಠವಾಗಿರ್ಪ ಯೋಗಲಿಂಗ ಶಿಲ್ಪ', *ವಿಜಯನಗರ ಅಧ್ಯಯನ*, ಸಂ, 1 ಪು. 20–25.

4. ಈ ಕ್ಷೇತ್ರದ ಕುರಿತು ಇರುವ ಪುರಾಣಗಳಲ್ಲಿ ಕೆಲವು ಪರೋಕ್ಷ ಉಲ್ಲೇಖಗಳು ಪಂಪಾಕ್ಷೇತ್ರದ ಹಿನ್ನೆಲೆಯನ್ನು ಹರಿಹರನ 'ಗಿರಿಜಾಕಲ್ಯಾಣ' ಕುಮಾರ ಲಕ್ಕಣ ದಂಡೇಶನ 'ಶಿವತತ್ವ ಚಿಂತಾಮಣಿ,' ರಾಘವಾಂಕ, ಕುಮಾರ ಪದ್ಮರಸ ಮುಂತಾದವರ ಕೃತಿಗಳು ಮತ್ತು ಸ್ಥಳಪುರಾಣಗಳಲ್ಲಿ ಕಾಣಬಹುದು. ಅದರಂತೆ ಶ್ರೀವಿರೂಪಾಕ್ಷನು ಮಾಣಿಭದ್ರೇಶ್ವರ, ಜಂಬುನಾಥೇಶ್ವರ, ಕಿನ್ನರೇಶ್ವರ, ಸೋಮೇಶ್ವರ ಮತ್ತು ಮಾತಂಗೇಶ್ವರ ಎಂಬ ಪಂಚಮುಖ ಗಳಿಂದ ವಿರಾಜಿಸುತ್ತಾನೆ. ಶಿವನ ವಾಹನನಾದ ನಂದಿಯು ಈ ಕ್ಷೇತ್ರದಲ್ಲಿ ಸವ್ಯ ವೃಷಭ, ಮಹಾಕಾಯ ವೃಷಭ, ಮಹಾಶಯ ವೃಷಭ, ಮಹಾಶೃಂಗ ವೃಷಭ ಎಂಬ ನಾಲ್ಕು ರೂಪಗಳಿಂದ ನೆಲೆ ನಿಂತಿರುವನೆಂಬುದು ಪೌರಾಣಿಕ ಹಿನ್ನೆಲೆಯಾಗಿದೆ. ನೋಡಿ ಚಂದ್ರಶೇಖರ ವಿ. ದಾವಣಗೇರಿ; 'ಹಂಪಿ ಶ್ರೀ ವಿರುಪಾಕ್ಷ ದೇವಾಲಯ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ', *ವಿಜಯನಗರ ಅಧ್ಯಯನ*, ಸಂ 9 ಪು. 180–195.


5. ವಾಸುದೇವನ್ ಸಿ. ಎಸ್, 'ಹಂಪಿ ಪರಿಸರದ ಪಂಚಲಿಂಗಗಳು', *ವಿಜಯನಗರ ಅಧ್ಯಯನ*, ಸಂ. 12, ಪು. 231–243.
6. ಮೇಲೆ ಪ್ರಕಟಿಸಿರುವ ಲೇಖನದಲ್ಲಿ ಈ ಎರಡು ಪಂಚಲಿಂಗಗಳನ್ನು ಕುರಿತು ಉಲ್ಲೇಖಿಸಿಲ್ಲ. ಇವುಗಳು ಮೇಲಿನ ಲೇಖನ ಪ್ರಕಟವಾದ ನಂತರ ನನ್ನ ಗಮನಕ್ಕೆ ಬಂದವುಗಳಾಗಿವೆ.
7. ಸುಂದರ, ಅ. 'ಇಂಡಸ್–ಸರಸ್ವತಿ ಸಿವಿಲೈಜೇಶನ್: ಎರ್ಲಿ ಶೈವ ಕಲ್ಟ್', *ಶ್ರೀ ಪುಷ್ಪಾಂಜಲಿ* (ಸಂ.) ರಮೇಶ ಕೆ. ವಿ. (ಪ್ರ ಸಂ.) ಮತ್ತು ಸುಬ್ರಮೋಣಿಯ ಅಯ್ಯರ್ ಎಸ್, ಶರ್ಮ ಎಂ. ಜೆ, ಸ್ವಾಮಿನಾಥನ್ ಎಸ್ ಮತ್ತು ವಾಸುದೇವನ್ ಸಿ. ಎಸ್. (ಸಂ.), ಸಂ. 1, ಪು. 13–22
8. ವಾಸುದೇವನ್, *ಸಿ.ಎಸ್, ಟೆಂಪಲ್ಸ್ ಆಫ್ ಆಂಧ್ರಪ್ರದೇಶ್*, ಪು. 132–150
9. *ವಿಷ್ಣುಧರ್ಮೋತ್ತರ*, III, xlviii, 1–3
10. ಇಲ್ಲಿ ತೋರುವ ಒಂದು ಎರಡು ಮೂರು ಲಿಂಗ ಮುಖಗಳಿಗೆ ಅನುಗುಣವಾಗಿ, ಲಿಂಗವನ್ನು ಪ್ರತಿಷ್ಠಾಪಿಸಿರುವ ದೇವಾಲಯದ ಗರ್ಭಗೃಹದಲ್ಲಿ ಅಷ್ಟೇ ಸಂಖ್ಯೆಯ ಬಾಗಿಲುಗಳಿರಬೇಕೆಂಬ ನಿಯಮವಿದೆ. ರೂಪಮಂಡನವು (4–94) ಇದನ್ನು ಪುಷ್ಟೀಕರಿಸುತ್ತದೆ. ಅದರ ಪ್ರಕಾರ ಚತುರ್ಮುಖ ಲಿಂಗ, ಏಕಮುಖಲಿಂಗ ಅಥವಾ ಲಿಂಗವನ್ನು ಒಂದೇ ಬಾಗಿಲಿರುವ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಬಹುದು. ನೋಡಿ: ಗೋಪಿನಾಥ ರಾವ್ ಟಿ.ಎ, *ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ*, ಪು. 97; ಶರ್ಮಾ, ಐ.ಕೆ, *ದಿ ಡೆವಲಪ್‌ಮೆಂಟ್ ಆಫ್ ಎರ್ಲಿ ಶೈವ ಆರ್ಟ್ ಅಂಡ್ ಆರ್ಕಿಟೆಕ್ಚರ್*, ಪು. 39 ಮತ್ತು ಮುಂದುವರಿದು. ಈ ಪುಸ್ತಕದಲ್ಲಿ ಗುಡಿಮಲ್ಲಂನಲ್ಲಿ ನಡೆಸಲಾದ ಉತ್ಖನನದಲ್ಲಿ ದೊರೆತ ಮುಖಲಿಂಗದ ಕುರಿತ ವಿವರಗಳಿವೆ.
11. ಈಶಾನಶಿವಗುರುದೇವ ಪದ್ಧತಿ III, V, 1,
12. ಸುಪ್ರಬೇಧಾಗಮ, ಪೂರ್ವೋಕ್ತ, ಪು. 366
13. ಈಶಾನಶಿವಗುರುದೇವ ಪದ್ಧತಿ iii, xii, 35; ರೂಪಮಂಡನ iv, 12–13, ವಿವಿಧ ಗುಂಪುಗಳಲ್ಲಿನ ಧ್ಯಾನಶ್ಲೋಕಗಳಲ್ಲಿ ಶಿವವನ್ನು ಸ್ತುತಿಸುವಾಗ ಧಾರಣ ಮಾಡಿರುವ ಚಿಹ್ನೆಗಳಲ್ಲಿ ಭಿನ್ನತೆಯನ್ನು ಸೂಚಿಸಿದೆ. ಅಂದರೆ ಅವನು ಕೈಯಲ್ಲಿ ಹಿಡಿದಿರುವ ವಸ್ತುಗಳು ಬೇರೆ ಬೇರೆಯದಾಗಿರುವಂತೆ ವರ್ಣಿಸುತ್ತವೆ. ಅವುಗಳಲ್ಲಿ ಏಕತಾನತೆಯಿಲ್ಲ.
14. ಸ್ಟೆಲ್ಲಾ ಕ್ರೆಮರಿಚ್, 'ದಿ ಇಮೇಜ್ ಆಫ್ ಮಹಾದೇವ ಇನ್ ದಿ ಕೇವ್ ಟೆಂಪಲ್ ಆನ್ ಎಲಿಫೆಂಟಾ ಐಲ್ಯಾಂಡ್', *ಏನ್ಷಿಯಂಟ್ ಇಂಡಿಯಾ*, ಸಂ 2, ಪು 4–8.

15. ತಿರುಮೂರ್ತಿ, ಜಿ, 'ನ್ಯೂ ಲೈಟ್ ಆನ್ ಸ್ಕಲ್ಪ್ಚರ್ ಅಟ್ ತಿರುಮಲೈಚೇರಿ', *ಶ್ರೀ ಪುಷ್ಪಾಂಜಲಿ* (ಸಂ.) ರಮೇಶ ಕೆ. ವಿ, ಮತ್ತು ಇತರರು. ಸಂ. 1, ಪು. 53–55.
16. ಮಂಜುನಾಥಯ್ಯ ಟಿ. ಎಂ, ಕಿನ್ನರೇಶ್ವರ ಟೆಂಪಲ್, ಬುಕ್ಕಸಾಗರ, *ಶ್ರೀ ಪುಷ್ಪಾಂಜಲಿ* (ಸಂ.) ರಮೇಶ ಕೆ. ವಿ, ಮತ್ತು ಇತರರು. ಸಂ. 1, ಪು. 79–82.
17. ಶಾರದಾ ಪಾಟಿಲ್, *ಹಂಪಿ ಪರಿಸರದ ವಿರೂಪಾಕ್ಷ: ಸಾಂಸ್ಕೃತಿಕ ಅಧ್ಯಯನ*, ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008 (ಅಪ್ರಕಟಿತ), ಪು. 17–18; ಶ್ರೀಧರ ಪಿಸ್ಸೆ, ವಿಜಯನಗರದ ಅಧಿದೈವ ಪಂಪಾದೇವಿ ಕುರಿತು ಕೆಲವು ಚಿಂತನೆಗಳು, *ವಿಜಯನಗರ ಅಧ್ಯಯನ*, ಸಂ. 14, ಪು. 327–339.
18. ಮಂಜುನಾಥಯ್ಯ ಟಿ. ಎಂ, ಪೂರ್ವೋಕ್ತ, ಸಂ. 1, ಪು. 79–82
19. ನೋಡಿ: ಸುರೇಶ್ ಕೆ. ಎಂ. ಮತ್ತು ಇತರರು, *ಕರ್ನಾಟಕ ದೇವಾಲಯ ಕೋಶ – ಕೊಪ್ಪಳ ಜಿಲ್ಲೆ*. ಈ ಪುಸ್ತಕದಲ್ಲಿ ಈ ದೇವಾಲಯ ಕುರಿತ ಉಲ್ಲೇಖವಿಲ್ಲ.
20. ಬಾಲಸುಬ್ರಮಣ್ಯ, ಜಂಭುಕೇಶ್ವರ ಟೆಂಪಲ್, ಹೊಸಪೇಟ್, *ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್*, 1987–88, ಪು. 168–178.
21. ಸುರೇಶ್ ಕೆ. ಎಂ. ಮತ್ತು ಇತರರು, ಪೂರ್ವೋಕ್ತ. ಈ ಪುಸ್ತಕದಲ್ಲಿ ಈ ದೇವಾಲಯ ಕುರಿತ ಉಲ್ಲೇಖವಿಲ್ಲ.
22. ಚಂದ್ರಶೇಖರ ಡಾವಣಗೇರಿ, 'ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿನ ಶಿಷ್ಟಾಚಾರದ ಮಾರ್ಗ ಸೂಚಿಗಳು', *ವಿಜಯನಗರ ಅಧ್ಯಯನ*, ಸಂ. 10, ಪು. 117–126.
23. ಅದೇ, ಪು. 122–123.
24. ಅದೇ.
25. ಶಾರದಾ ಪಾಟಿಲ್, ಪೂರ್ವೋಕ್ತ, ಪು. 33–34.
26. ದಾಸ್, ಎಚ್.ಸಿ, *ತಾಂತ್ರಿಸಿಸಮ್*, ಪು. 28.
27. ಶಾರದಾ ಪಾಟಿಲ್, ಪೂರ್ವೋಕ್ತ, ಪು. 34.
28. ಕಲಬುರ್ಗಿ ಎಂ.ಎಂ, "ವಿರೂಪಾಕ್ಷ", *ಮಾರ್ಗ*, ಸಂ. 3.
29. ದೇವರಕೊಂಡಾರೆಡ್ಡಿ, "ತುಂಗಭದ್ರ ಪ್ರದೇಶದ ವಿರೂಪಾಕ್ಷ ದೇವಾಲಯಗಳು", *ಇತಿಹಾಸ ದರ್ಶನ*, ಸಂ. 13, ಪು. 98–102.
30. *ಇಂಡಿಯನ್ ಆ್ಯಂಟಿಕ್ವೆರಿ*, ಸಂ. 6, ಪು. 85.

31. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್*, ಸಂ. 9, ನಂ. 791, ಗೋನಾಳ, ಹೊಸಪೇಟೆ ತಾ.
32. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–ಕೊಪ್ಪಳ ಜಿಲ್ಲೆ*, ಸಂ. 3, ನಂ. 18, ಪುರ, ಕುಷ್ಟಗಿ ತಾ
33. ವಾಸುದೇವ ಬಡಿಗೇರ, ಹಂಪಿ ಪರಿಸರದ ಪಂಪಾಪತಿ (ವಿರೂಪಾಕ್ಷ) ದೇವಾಲಯಗಳು, *ವಿಜಯನಗರ ಅಧ್ಯಯನ*, ಸಂ. 12, ಪು. 522–530.
34. ಶಾರದಾ ಪಾಟಿಲ್, ಪೂರ್ವೋಕ್ತ, ಪು. 34–39.
35. ಅದೇ, ಪೂರ್ವೋಕ್ತ, ಪು. 36.
36. ರಾಜಶೇಖರ ಎಸ್., "ವಿರೂಪಾಕ್ಷ ದೇವಾಲಯದ ಸಮೂಹ ಕಾಲಾನುಕ್ರಮದ ಅಧ್ಯಯನ", *ಇತಿಹಾಸ ದರ್ಶನ*, ಸಂ. 4, ಪು. 72–74; ಚನ್ನಬಸಪ್ಪ ಎಸ್. ಪಾಟೀಲ, ಶ್ರೀ ವಿರೂಪಾಕ್ಷ *ವಿಜಯನಗರ ಅಧ್ಯಯನ*, ಸಂ. 4, ಪು. 1–4; ಬಾಲಸುಬ್ರಮಣ್ಯ, *ವಿರೂಪಾಕ್ಷ ಟೆಂಪಲ್ ಅಟ್ ಹಂಪಿ – ಎ ಸ್ಟಡಿ*, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2004 (ಅಪ್ರಕಟಿತ).
37. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 3*: ಹಂಪಿ ಶಾಸನಗಳು, ಸಂ. 250.
38. ಜಾರ್ಜ್ ಮಿಷೆಲ್, ಆರ್ಕಿಟೆಕ್ಚರಲ್ ಡಾಕ್ಯುಮೆಂಟೇಷನ್ ಅಟ್ ವಿಜಯನಗರ ಇನ್ 1987 ಅಂಡ್ 1988: ಹೇಮಕೂಟ ಹಿಲ್ ಅಂಡ್ ದಿ ವಿರೂಪಾಕ್ಷ ಟೆಂಪಲ್ ಕಾಂಪ್ಲೆಕ್ಸ್ ಅಟ್ ಹಂಪಿ, *ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್*, 1987–88, ಪು. 35–43.
39. ಶಾರದಾ ಪಾಟಿಲ್, ಪೂರ್ವೋಕ್ತ, ಪು. 56–64.
40. ಅದೇ, ಪು. 96–97.



ಹೇಮಕೂಟದ ಪಂಚಲಿಂಗ ದೇವಾಲಯ



ಹೇಮಕೂಟದ ಪಂಚಲಿಂಗ




ಪಂಪಸರೋವರದ ಪಂಚಲಿಂಗ



ಪಂಪಸರೋವರದ
ಪಂಚಲಿಂಗ



ಭಿನ್ನಗೊಂಡಿರುವ
ವಿರೂಪಾಕ್ಷ
ದೇವಾಲಯದಲ್ಲಿರುವ
ಪಂಚಲಿಂಗ



ಭಿನ್ನಗೊಂಡಿರುವ
ವಿರೂಪಾಕ್ಷ
ದೇವಾಲಯದಲ್ಲಿರುವ
ಪಂಚಲಿಂಗ

ಹಂಪಿ ಪರಿಸರದ ಪಂಚಮುಖಲಿಂಗಗಳು








ಗುಡಿಮಲ್ಲಂನ ಏಕಮುಖ ಲಿಂಗ




ಹಂಪಿ ಪರಿಸರದ ಪಂಚಲಿಂಗ

ಹಂಪಿ ಪರಿಸರದ ಪಂಚಮುಖಲಿಂಗಗಳು







೨೧. ಹಂಪಿಯ ಶಾಸನಗಳಲ್ಲಿ ಆಳ್ವಾರರು

ಡಾ. ಸಿ. ಎಸ್. ವಾಸುದೇವನ್ ಮತ್ತು ಶ್ರೀಮತಿ ಪದ್ಮಜಾ ದೇಸಾಯಿ

ವಿಜಯನಗರದ ಧಾರ್ಮಿಕ ಇತಿಹಾಸದಲ್ಲಿ ಕಾಣಿಸುವಂತಹ ಸ್ಥಿತ್ಯಂತರಗಳು ಆಶ್ಚರ್ಯಗೊಳಿಸುವ ಸಂಗತಿಗಳಾಗಿವೆ. ವಿಜಯನಗರದ ಅರಸರು ಧಾರ್ಮಿಕ ಸಮನ್ವಯತೆಯನ್ನು ಸಾಧಿಸಿದವರು. ಹಿಂದೂ ಧರ್ಮದ, ಅದರಲ್ಲೂ ವೈದಿಕ ಧರ್ಮದ ಹಿತರಕ್ಷಣೆ ಮತ್ತು ಉದ್ಧಾರಕ್ಕಾಗಿ, ಪರಿಶ್ರಮಿಸಿದ್ದಾರೆ. ಸಂಗಮ ವಂಶದ ದೊರೆಗಳ ಅಧಿದೈವ ವಿರೂಪಾಕ್ಷ, ನಂತರದ ವಂಶಗಳಾದ ಸಾಳುವ, ತುಳುವ ಮತ್ತು ಅರವೀಡು ರಾಜರುಗಳ ಆಡಳಿತಾವಧಿಯಲ್ಲಿ ವೈಷ್ಣವ ಪಂಥವು ಪ್ರಾಮುಖ್ಯತೆಯನ್ನು ಪಡೆದಿದ್ದು ಗಮನಾರ್ಹವಾದ ಸಂಗತಿಯಾಗಿದೆ. ನಂತರದ ಕಾಲದಲ್ಲಿ ವಿರೂಪಾಕ್ಷನ ಅಂಕಿತದೊಡನೆ 'ಶ್ರೀವೆಂಕಟೇಶ' ಅಂಕಿತವನ್ನು ಹಾಕಿಸುವುದರೊಡನೆ ಅಂದಿನ ಅರಸರು ಸಾಮ್ರಾಜ್ಯವನ್ನು ಸಂರಕ್ಷಿಸಿದರು.

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀರಾಮಾನುಜಾಚಾರ್ಯರ[1] ಪ್ರಭಾವದಿಂದಾಗಿ ಶ್ರೀವೈಷ್ಣವ ಧರ್ಮವು ಜನಪ್ರಿಯತೆಯನ್ನು ಹೊಂದಿತು. ನಂತರ ಆ ಧರ್ಮದಲ್ಲಿರುವ ತತ್ವಗಳು ತ್ವರಿತಗತಿಯಲ್ಲಿ ಪ್ರಚಾರವನ್ನು ಹೊಂದಿದವು.

'ಆಳ್ವಾರ' ಎಂಬ ಪದದ ಅರ್ಥವು 'ಆಳುವವರು' ವಿಷ್ಣುವಿನಲ್ಲಿ ಭಕ್ತಿಯನ್ನು ಉಳ್ಳವರು, ದೇವರ ಧ್ಯಾನದಲ್ಲಿ ತಲ್ಲೀನರಾದವರು, ಆಧ್ಯಾತ್ಮ ರೂಪಿಯಾದ ಭಗವಂತನಲ್ಲಿ ಐಕ್ಯರಾದವರು ಎಂದು ಅರ್ಥ. ಆಳ್ವಾರರು ಪ್ರಬಲವಾದ ದೈವತ್ವವನ್ನು ಹೊಂದಿದವರು, ಪರಮಾತ್ಮನಲ್ಲಿ ಭಕ್ತಿ-ಪ್ರೇಮಗಳನ್ನು ಹೊಂದಿರುವರು ಎಂದು ಗುರುತಿಸಲಾಗುವುದು.

ಶ್ರೀವೈಷ್ಣವ ಆಳ್ವಾರರ ಪರಂಪರೆಯಲ್ಲಿ ಹನ್ನೆರಡು ಜನ ಆಳ್ವಾರರನ್ನು ಕಾಣಬಹುದು. ಅವರುಗಳ ಹೆಸರುಗಳು ಮತ್ತು ಜನ್ಮನಕ್ಷತ್ರಗಳು.

1. ಪೊಯಗೈ ಆಳ್ವಾರ್ – ಶ್ರವಣ
2. ಪೇಯಾಳ್ವಾರ್ – ಶತಭಿಷ
3. ಬೂದತ್ತಾಳ್ವಾರ್ – ಧನಿಷ್ಠಾ
4. ತಿರುಮಳಿಶೈ ಆಳ್ವಾರ್ – ಮಖ
5. ನಮ್ಮಾಳ್ವಾರ್ (ಶಠಕೋಪ) – ವಿಶಾಖ

6. ಮಧುರಕವಿಯಾಳ್ವಾರ್ – ಚಿತ್ತ
7. ಪೆರಿಯಾಳ್ವಾರ್ – ಸ್ವಾತಿ
8. ಕುಲಶೇಖರಾಳ್ವಾರ್ – ಪುನರ್ವಸು
9. ಆಂಡಾಳ್ (ಗೋಧೈ) – ಪೂರ್ವ ಫಾಲ್ಗುಣಿ
10. ತೊಂಡರಡಿಪ್ಪೊಡಿಯಾಳ್ವಾರ್ – ಜ್ಯೇಷ್ಠ
11. ತಿರುಪ್ಪಣಾಳ್ವಾರ್ – ರೋಹಿಣಿ
12. ತಿರುಮಂಗೈ ಆಳ್ವಾರ್ – ರೋಹಿಣಿ
13. ರಾಮಾನುಜ – ಆರಿದ್ರಾ

ಈ ಹನ್ನೆರಡು ಜನ ಆಳ್ವಾರರು ವಿವಿಧ ವೃತ್ತಿಯಲ್ಲಿರುವವರು ಮತ್ತು ವಿವಿಧ ಮತ–ಪಂಥಗಳಿಗೆ ಸೇರಿದವರಾಗಿದ್ದರು. ಹನ್ನೆರಡು ಜನ ಆಳ್ವಾರರಲ್ಲಿ ಒಬ್ಬಳು ಮಾತ್ರ ಮಹಿಳೆ (ಆಂಡಾಳ್), ಉಳಿದ ಹನ್ನೊಂದು ಜನರು ಪುರುಷರಾಗಿದ್ದರು. ಹದಿಮೂರನೆಯ ಆಳ್ವಾರರಾದ ತಿರುಕಚ್ಚಿನಂಬಿಯಾಳ್ವಾರರ ಕುರಿತು ಹಂಪಿಯ ಶಾಸನವು ಮಾಹಿತಿಯನ್ನು ನೀಡುತ್ತದೆ.[2]

ಆಳ್ವಾರರ ಮೂಲ ನೆಲೆ ದಕ್ಷಿಣಭಾರತದ ತಮಿಳು ರಾಜ್ಯಗಳಲ್ಲಿ ಅಂದರೆ ಪಲ್ಲವ, ಚೇರ, ಚೋಳ ಮತ್ತು ಪಾಂಡ್ಯ ರಾಜ್ಯಗಳಲ್ಲಿ ಇವರು ನೆಲೆಸಿದ್ದರು. ಇವರು ತಮ್ಮ ಉಪದೇಶಗಳ ಮೂಲಕ ಜನರಲ್ಲಿ ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆಯ ನೆಲೆಯನ್ನು ತೋರಿಸಿಕೊಟ್ಟರು.[3]

ಆಳ್ವಾರರು ತಮ್ಮ ತತ್ವಗಳು ಮತ್ತು ಉಪದೇಶಗಳನ್ನು ಪ್ರಬಂಧ ರೂಪಗಳಲ್ಲಿ ರಚಿಸಿದರು. ಇವುಗಳನ್ನು "ದಿವ್ಯ ಪ್ರಬಂಧಗಳು" (ನಾಲಾಯಿರ ದಿವ್ಯಪ್ರಬಂಧ) ಎಂದು ಕರೆಯಲಾಗುತ್ತದೆ. ಇವುಗಳನ್ನು ವೈಷ್ಣವರು ವೇದಗಳು ಎಂದು ಪರಿಗಣಿಸಿದರು. ಈ ಪ್ರಬಂಧಗಳಲ್ಲಿ ವಿಷ್ಣು ಮತ್ತು ಅವನ ಅವತಾರಗಳು ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅಗತ್ಯವಿರುವ ಒಂದು ಸಂಪ್ರದಾಯಕ್ಕೆ ಆಳ್ವಾರರು ರಚಿಸಿದ ಈ ದಿವ್ಯ ಪ್ರಬಂಧಗಳು ಚೌಕಟ್ಟನ್ನು ಹಾಕಿಕೊಟ್ಟವು.

ತಮಿಳುನಾಡಿನಲ್ಲಿ ಶ್ರೀವೈಷ್ಣವ ಆಳ್ವಾರರ ಆರಾಧನೆ ಪ್ರಚಲಿತಗೊಂಡಿತು. ಪ್ರಮುಖವಾದ ಶ್ರೀವೈಷ್ಣವ ದೇವಾಲಯಗಳು ನಿರ್ಮಾಣವಾದವು. ಶ್ರೀರಂಗಂ ಮತ್ತು ಕಾಂಚಿಪುರಂನಲ್ಲಿ ಶ್ರೀವೈಷ್ಣವ ಪಂಥದ ಪ್ರಭಾವವು ನೆಲೆಯೂರಿತ್ತು. ಇಂಥ ಧಾರ್ಮಿಕ ಸ್ಥಳಗಳಲ್ಲಿ ಧರ್ಮದ ರಕ್ಷಣೆಗಾಗಿ ರಾಜರು, ರಾಣಿಯರು, ಅಧಿಕಾರಿಗಳು, ಸಾಮಂತರು, ಶ್ರೀಮಂತರು, ಆಸ್ತಿಕರು ಮೊದಲಾದವರು ನಾನಾ ವಿಧದಲ್ಲಿ ದಾನ–ದತ್ತಿಗಳನ್ನು ನೀಡುವುದರೊಡನೆ ಇತರ ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಈ

ಕುರಿತು ಶಾಸನಗಳು ಉಲ್ಲೇಖಿಸುತ್ತವೆ. ಆಳ್ವಾರರನ್ನು ಪೂಜಿಸುವ ಅವರಿಗಾಗಿ ದೇವಾಲಯ ನಿರ್ಮಾಣ ಮಾಡುವುದು ಆಳ್ವಾರರಿಗೆ ಸಂಬಂಧಿಸಿದಂತೆ ಶಾಸನ ಗಳನ್ನು ಹಾಕಿಸುವ ಸಂಪ್ರದಾಯ ಪ್ರಾರಂಭಗೊಂಡಿದ್ದು ರಾಮಾನುಜಾಚಾರ್ಯರ ಸಿದ್ಧಾಂತದ ಪ್ರಭಾವದ ಫಲವಾಗಿದೆ.

ಈ ಆಳ್ವಾರರು ಎಲ್ಲಾ ಧಾರ್ಮಿಕ ಸಂಪ್ರದಾಯಗಳ ಕೇಂದ್ರವಾಗಿದ್ದ ತಿರುಪತಿಯ ಗೋವಿಂದರಾಜ ದೇವಾಲಯದಲ್ಲಿ ಆಳ್ವಾರರ ಮೂರ್ತಿಗಳನ್ನು ಸ್ಥಾಪಿಸಲಾಗಿತ್ತು. ಇದಾದ ನಂತರ ವಿಜಯನಗರದ ದೇವಾಲಯಗಳಲ್ಲಿ ಕೂಡ ಆಳ್ವಾರರ ಮೂರ್ತಿ ಪ್ರತಿಷ್ಠಾಪನೆ ಮತ್ತು ಆಳ್ವಾರುಗಳಿಗೆ ದೇವಾಲಯ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಶ್ರೀವೈಷ್ಣವ ಆಚಾರ್ಯರುಗಳನ್ನು ದೈವೀಕರಿಸಿ ಆರಾಧಿಸುವ ಸಂಪ್ರದಾಯ ಬೆಳೆದುಬಂದಿತು. ವಿಜಯನಗರದಲ್ಲಿ ಶ್ರೀವೈಷ್ಣವ ಪಂಥದ ಪ್ರಮುಖ ಕೇಂದ್ರವಾಗಿರುವ ವಿಠಲಾಪುರದಲ್ಲಿ ಹದಿನೈದು-ಹದಿನಾರನೆಯ ಶತಮಾನದಲ್ಲಿ ಅನೇಕ ದೇವಾಲಯಗಳು, ಮಂಟಪಗಳು, ಕೊಳಗಳು, ಮಹಾದ್ವಾರಗಳು ಮತ್ತು ಮುಖ್ಯಬೀದಿಗಳು ನಿರ್ಮಾಣಗೊಂಡವು. ವಿಠಲ ದೇವಾಲಯದ ಸಂಕೀರ್ಣದಲ್ಲಿ ಹದಿಮೂರು ಜನ ಆಳ್ವಾರರ ಮೂರ್ತಿಗಳ ಸ್ಥಾಪನೆಯ ಕಾರ್ಯವನ್ನು ಕೃಷ್ಣದೇವರಾಯನ ರಾಜಗುರುಗಳಾದ ವ್ಯಾಸರಾಜರು ಅಥವಾ ವ್ಯಾಸತೀರ್ಥರು ಕ್ರಿ. ಶ. 1534ರಲ್ಲಿ ನೆರವೇರಿಸಿದರು[4] ಶಾಸನಗಳ ಆಧಾರದಿಂದ ಗುರುತಿಸಬಹುದಾದ ಕೆಲವು ಆಳ್ವಾರರ ಮೂರ್ತಿಯನ್ನು ಅರವೀಟಿ ವೆಂಗಳರಾಜನು ಸ್ಥಾಪಿಸಿದ್ದನ್ನು ದಾಖಲಿಸುತ್ತದೆ.[5]

ಅಚ್ಯುತದೇವರಾಯನು ಕ್ರಿ. ಶ. 1534ರಲ್ಲಿ ವಿಠಲದೇವರ ದೇವರ ಆವರಣದಲ್ಲಿ ಉತ್ತರ ದಿಕ್ಕಿನಲ್ಲಿ ಕಟ್ಟಿದ್ದ ನಾಲ್ಕು ಅಂಕಣದಲ್ಲಿ ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ಶೆಟ್ಟಣದ ರುಶಿಗೋತ್ರದ ತಿಪ್ಪಶೆಟ್ಟಿಯ ಮಗ ಗಂಧದ ತಿಪ್ಪಿಸೆಟ್ಟಿಯು 12 ಆಳ್ವಾರರು ಮತ್ತು ತಿರುಕಚ್ಚಿನಂಬಿಯಾಳ್ವಾರರ ಒಂದು ವಿಗ್ರಹ ಸೇರಿದಂತೆ 13 ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆ. ಈ ದೇವರುಗಳ ನಿತ್ಯ ನೈವೇದ್ಯ ಮತ್ತು ಹೂವಿನದಂಡೆ ಸರಬರಾಜಿನ ವೆಚ್ಚಕ್ಕಾಗಿ 100 ವರಹ ಗದ್ಯಾಣಗಳನ್ನು ಮುದುವಟ್ಟಾಗಿ ನೀಡಿರುತ್ತಾನೆ.

ವಿಠಲಾಪುರದಲ್ಲಿ ಮೊದಲ ಮೂರು ಜನ ಆಳ್ವಾರರಾದ ಪೊಯಗೈ ಆಳ್ವಾರ್, ಪೇಯಾಳ್ವಾರ್ ಮತ್ತು ಬೂದತ್ತ ಆಳ್ವಾರ್‌ರರಿಗೆ ಅಲ್ಲದೆ ನಮ್ಮಾಳ್ವಾರ್, ತಿರುಮಳಿಶೈಯಾಳ್ವಾರ್ ಮತ್ತು ರಾಮಾನುಜರಿಗಾಗಿ ದೇವಾಲಯಗಳನ್ನು ನಿರ್ಮಿಸ ಲಾಯಿತು. ಪ್ರತ್ಯೇಕ ನೆಲೆಗಳನ್ನೊಳಗೊಂಡ ಮೊದಲ ಆಳ್ವಾರರ ದೇವಾಲಯದ ಬಗೆಗೆ ಕ್ರಿ. ಶ. 1443 ಮತ್ತು 1459ರ ಶಾಸನಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸ

ಲಾಗಿದೆ. ಇದನ್ನು ಗಮನಿಸಿದಾಗ ಶ್ರೀ ವೈಷ್ಣವ ಪಂಥವು ವಿಜಯನಗರ ಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆದ ಧರ್ಮವಾಗಿತ್ತು ಎಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಹದಿಮೂರನೆಯ ಆಳ್ವಾರರು ಇರುವ ಕುರಿತು ಮಾಹಿತಿ ಶಾಸನದಲ್ಲಿ ದೊರೆಯುತ್ತದೆ.

ವಿಠಲ ದೇವಾಲಯದ ಎದುರಿನಲ್ಲಿರುವ ರಥಬೀದಿಯ ಕಡೆಯಲ್ಲಿ ದಕ್ಷಿಣಾಭಿ ಮುಖವಾಗಿರುವ ರಾಮಾನುಜಾಚಾರ್ಯರ ದೇವಾಲಯದ ಬಗೆಗೆ ಸದಾಶಿವ ರಾಯನ ಕಾಲದ ಒಂದು ಶಾಸನ ಅರುಹುತ್ತದೆ.[7] ಕ್ರಿ. ಶ. 1556 ರಲ್ಲಿ ಅಳಿಯ ರಾಮರಾಯನು ವಿಠಲ ದೇವಾಲಯದ ಬಳಿಯ ನಮ್ಮಾಳ್ವಾರರ ದೇವಾಲಯಕ್ಕೆ ದಾನವನ್ನು ನೀಡಿದ್ದನ್ನು ಅಲ್ಲಿರುವ ಶಾಸನ ದಾಖಲಿಸುತ್ತದೆ.[8] ವಿಠಲ ದೇವಾಲಯದ ಗರುಡಮಂಟಪದ ಸಮೀಪವಿರುವ ಜೀರ್ಣಸ್ಥಿತಿಯಲ್ಲಿರುವ ದೇವಾಲಯವನ್ನು ತಿರುಮಂಗೈ ಆಳ್ವಾರರದೆನ್ನಲಾಗುತ್ತದೆ. ವಿಠಲ ದೇವಾಲಯದ ವಾಯವ್ಯ ದಿಕ್ಕಿನಲ್ಲಿ ಕೋನೇಟಿ ರಾಜನ ಮಗ ಓಬಳರಾಜ ಕ್ರಿ. ಶ. 1565ರಲ್ಲಿ ಕಟ್ಟಿಸಿದ ತಿರುಮಂಗೈ ಯಾಳ್ವಾರರ ದೇವಾಲಯವೆನ್ನುವುದು ಅಲ್ಲಿರುವ ಶಾಸನಾಧಾರದಿಂದ ಗುರುತಿಸ ಲಾಗಿದೆ.[9]

ವಿಜಯನಗರದ ಶಾಸನಗಳಲ್ಲಿ ವೈಷ್ಣವ/ಶ್ರೀವೈಷ್ಣವ ದೇವಾಲಯಗಳು ಹಾಗೂ ಪೇಟೆಗಳನ್ನು ಕಟ್ಟಿಸುವಂತಹ ಸಂದರ್ಭಗಳಲ್ಲಿ ದಾನಿಗಳು ವಿಫುಲವಾದಂತಹ ದಾನದತ್ತಿಗಳನ್ನು ನೀಡುತ್ತಿದ್ದರು. ಕ್ರಿ. ಶ. 1534ರ ಶಾಸನವು ತಿಳಿಸುವಂತೆ ಅಚ್ಯುತ ದೇವರಾಯನು ಅರಸನಾಗಿದ್ದಾಗ ಆತನ ಮಂಡಳೇಶ್ವರ ಕಾಶ್ಯಪ ಗೋತ್ರದ ರುಕು ಶಾಖೆಯ ಸಕಲ ರಾಜ ಒಡೆಯನ ಮಗ ಹಿರಿಯ ತಿರುಮಲ ಒಡೆಯನು ತುಂಗಭದ್ರಾ ನದಿ ತೀರದಲ್ಲಿ ಶ್ರೀತಿರುವೆಂಗಳನಾಥದೇವರ ಪ್ರತಿಷ್ಠೆಯನ್ನು ಮಾಡಿಸು ತ್ತಾನೆ. ಈ ಸಂದರ್ಭದಲ್ಲಿ ಅಚ್ಯುತರಾಯನು ದೇವರಿಗೆ ಆಭರಣಗಳನ್ನು ಹೊರಮನೆ ನಾಡಿಗೆ ಸೇರಿದ ಅಚ್ಯುತಪುರವೆಂದು ಪ್ರತಿನಾಮ ಹೊಂದಿದ ಚೋರಮನೂರು ಗ್ರಾಮವನ್ನು ನೀಡುತ್ತಾನೆ. ಸದಾಶಿವರಾಯನ ಆಡಳಿತಾವಧಿಯಲ್ಲಿ ಆಳ್ವಾರರ ದೇವಾಲಯಗಳಿಗೆ ಪುಣ್ಯದಿನಗಳಲ್ಲಿ ಪೂಜೆ ಮಾಡಲು ಕೊಪ್ಪಳ ಸೀಮೆಯಲ್ಲಿ ಅಬ್ಬಿಗೆರೆ, ಯಲಿಕಂಟಿ ಸೀಮೆಯಲ್ಲಿ ಕಚ್ಚಿಣದೋಣಿ ಎಂಬ ಎರಡು ಗ್ರಾಮಗಳನ್ನು ಅಬ್ಬಿಗೆರೆಯ ತಿರುಮಲಬೆಟ್ಟ ಮೊದಲಾದ ಮಹಾಜನರಿಂದ ಕ್ರಮವಾಗಿಕೊಂಡು ಇದಕ್ಕೆ ಕ್ರಮವಾಗಿ ಪರಕಾಲಪುರ ಮತ್ತು ರಾಮಾನುಜಪುರವೆಂದು ಪ್ರತಿನಾಮ ನೀಡಿದನು.[10] ಇದೇ ಶಾಸನವು ಮುಂದುವರೆದು ಆತ್ರೇಯ ಗೋತ್ರದ ಸೋಮ ವಂಶದ ಮಹಾಮಂಡಳಲೇಶ್ವರ ರಾಮರಾಜ ಕೋನೇಟಯ್ಯನ ಮಗನಾದ ಅವುಬಳ ಮಹಾರಾಜನು ಶ್ರೀವಿಠಲೇಶ್ವರ ದೇವಾಲಯದ ಪ್ರಾಕಾರದ ಒಳಗೆ ವಾಯವ್ಯದಲ್ಲಿ

ತಿರುಮಂಗೈಯಾಳ್ವಾರರಿಗೆ ಗರ್ಭಗೃಹ, ಸುಕನಾಸಿ, ಅಂತರಾಳ ರಂಗಮಂಟಪ ಮುಂತಾದವುಗಳನ್ನು ಕಟ್ಟಿಸಿ ಅವುಗಳಿಗೆ ಗ್ರಾಮಗಳನ್ನು ದತ್ತಿ ನೀಡಿದ ವಿಚಾರವನ್ನು ಅರುಹುತ್ತದೆ. ವಿಠಲಾಪುರದಲ್ಲಿ ಮುದಲ್ ಆಳ್ವಾರ್ ಮತ್ತು ತಿರುಮಂಗೈ ಆಳ್ವಾರರಂತಹ ದೇವಾಲಯಗಳಿದ್ದು, ಶ್ರೀವೈಷ್ಣವ ಪಂಥದ ಚಟುವಟಿಕೆಗಳ ತಾಣವಾಗಿದ್ದವು ಎಂಬುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ತುಳುವಂಶದ ಅರಸರುಗಳಲ್ಲಿ ಪ್ರಮುಖನಾದ ಅರಸು ಶ್ರೀಕೃಷ್ಣದೇವರಾಯನು ತನ್ನ ಆಡಳಿತಾವಧಿಯಲ್ಲಿ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿದ ಎಂಬುದು ಅವನು ನಿರ್ಮಿಸಿದ ದೇವಾಲಯಗಳು ಮತ್ತು ಅವುಗಳಿಗೆ ನೀಡಿದ ದಾನ-ದತ್ತಿಗಳಿಂದ ತಿಳಿದುಬರುತ್ತವೆ. ಕೃಷ್ಣದೇವರಾಯನ ಕಾಲದಲ್ಲಿ ಶ್ರೀವೈಷ್ಣವ ಧರ್ಮವನ್ನು ಪೋಷಿಸಿದ ಕೀರ್ತಿ ಅವನಿಗೆ ಸಲ್ಲುತ್ತದೆ.

ಕೃಷ್ಣದೇವರಾಯನ ತರುವಾಯ ವಿಜಯನಗರದಲ್ಲಿ ಶ್ರೀವೈಷ್ಣವ ಧರ್ಮವನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಮತ್ತೊಬ್ಬ ಅರಸು ಎಂದರೆ ಅಚ್ಯುತರಾಯ ಸ್ವಯಂ ಶ್ರೀವೈಷ್ಣವ ಪಂಥೀಯರವನಾಗಿದ್ದನು. ಆದರೂ ಇತರ ಪಂಥಗಳಿಗೆ ಆದ್ಯತೆ ನೀಡಿದ್ದನು.

ನಂತರದಲ್ಲಿ ಅರವೀಡು ವಂಶದವರು ಶ್ರೀವೈಷ್ಣವ ಪಂಥಕ್ಕೆ ಆದ್ಯತೆ ನೀಡುವುದರೊಡನೆ ಆಳ್ವಾರರು ಪರಂಪರೆಯನ್ನು ಬೆಳೆಸಿದನೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅರವೀಡು ವಂಶದ ಅರಸರು, ಸಾಮಂತರು ಶ್ರೀವೈಷ್ಣವ ದೇವಾಲಯಗಳಿಗೆ ದಾನವನ್ನು ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಶ್ರೀವೈಷ್ಣವ ಧರ್ಮವು ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿರುವ ತತ್ವಗಳು ಮತ್ತು ಉಪದೇಶಗಳನ್ನು ಎಲ್ಲಾ ಕಡೆಗೆ ಪ್ರಚಾರಕ್ಕೆ ತರುವ ಮಹತ್ಕಾರ್ಯವನ್ನು ನೆರವೇರಿಸಿದವರು ಶ್ರೀರಾಮಾನುಜಾಚಾರ್ಯರು. ಇವರ ಪ್ರಭಾವದಿಂದಾಗಿ ಶ್ರೀವೈಷ್ಣವ ಧರ್ಮದಲ್ಲಿ ಹನ್ನೆರಡು ಜನ ಆಳ್ವಾರರನ್ನು ಗುರುತಿಸಿ ಅವರಿಗೆ ದೇವಾಲಯ ನಿರ್ಮಾಣ, ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದು, ಅವುಗಳಿಗೆ ಪೂಜೆಗಳು ಪ್ರಾರಂಭವಾದವು. ಶಾಸನಗಳು ಪ್ರಸ್ತಾಪಿಸುವಂತೆ ಆಳ್ವಾರರ ಹುಟ್ಟುಹಬ್ಬ (ಜನ್ಮನಕ್ಷತ್ರ) (ತಿರುನಕ್ಷತ್ರ) ಗಳನ್ನು ಆಚರಿಸುವ ವಿಷಯವನ್ನು ಶಾಸನಗಳು ಉಲ್ಲೇಖಿಸಿವೆ.[11] ಈ ಪೂಜಾ ವಿಧಾನವು ಆಳ್ವಾರರಿಗಾಗಿ ನಡೆಯುವ ವಿಶೇಷವಾದ ಪೂಜಾವಿಧಾನವಾಗಿದೆ.[12]

ವಿಜಯನಗರದ ಅರಸರು ಶ್ರೀಮಂತರು ಉದಾರ ದಾನ-ದತ್ತಿಗಳನ್ನು ನೀಡಿ ಸಾಮ್ರಾಜ್ಯದಲ್ಲಿ ಧಾರ್ಮಿಕತೆಯನ್ನು ಪ್ರತಿಬಿಂಬಿಸುತ್ತಿರುವ ಇಂದಿಗೂ ಭಗ್ನಾವಶೇಷವಾಗಿರುವ ಸ್ಮಾರಕಗಳು ಸಾಕ್ಷಿಯಾಗಿವೆ. ಅಂದಿನ ಅರಸರು ಹಾಕಿಸಿರುವ ಶಾಸನಗಳು

ಧಾರ್ಮಿಕ ಸ್ಥಿತಿಯನ್ನು ಅರಿಯಲು ಸಹಕಾರಿಯಾಗಿವೆ. ಶ್ರೀವೈಷ್ಣವ ಧರ್ಮದ ಆಳ್ವಾರರು ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಮುಖವಾದ ಶ್ರೀವೈಷ್ಣವ ಆರಾಧನಾ ಕ್ಷೇತ್ರಗಳು ಮತ್ತು ಆಳ್ವಾರರ ದೇವಾಲಯಗಳು ವಿಪುಲವಾಗಿ ನಿರ್ಮಾಣವಾಗಲು ಕಾರಣರಾದರು. ವಿಜಯನಗರದ ಅರಸರು ಧಾರ್ಮಿಕ ಚಟುವಟಿಕೆಗಳನ್ನು ನಡೆಯಿಸುವ ಸೂತ್ರಧಾರರಾಗಿದ್ದರು. ವಿರೂಪಾಕ್ಷನ ಕೃಪಾಕಟಾಕ್ಷವನ್ನೇ ನಂಬಿಕೊಂಡು ಬಂದುದು ಸ್ಪಷ್ಟ. ಆದರೆ ಇಮ್ಮಡಿ ವೆಂಕಟನ ಕಾಲದಿಂದ ವಿಜಯನಗರದ ಧಾರ್ಮಿಕ ನೀತಿಯಲ್ಲಿ ಬದಲಾವಣೆ ಕಂಡುಬರಲಾರಂಭಿಸಿದವು. ವಿಜಯನಗರದ ಅರಸರ ಶಾಸನಗಳಲ್ಲಿ ಆರಂಭದ ಸ್ತುತಿಗಳಲ್ಲಿ 'ಶ್ರೀವೆಂಕಟೇಶ' ಅಥವಾ 'ಶ್ರೀರಾಮ' ಅಥವಾ 'ವಿಷ್ಣು'ವಿನ ಹೆಸರುಗಳು ಕಂಡುಬರುವುದು. ಹೀಗೆ ವಿಜಯನಗರದವರು ದಕ್ಷಿಣ ದಿಕ್ಕಿಗೆ ಮೊದಲಿಗೆ ವಿದ್ಯಾನಗರದಿಂದ ಪೆನುಗೊಂಡೆಯತ್ತಲೂ ನಂತರ ವಿರೂಪಾಕ್ಷನ ಸನ್ನಿಧಿಯಿಂದ ವೆಂಕಟೇಶ್ವರನ ಸನ್ನಿಧಿಗೆ-ಶೈವದಿಂದ ಶ್ರೀವೈಷ್ಣವ ಪಂಥದತ್ತ ವಾಲಿಕೊಂಡರು.

ವಿಜಯನಗರದ ಅರಸರು ಶ್ರೀವೈಷ್ಣವ ಪಂಥವನ್ನು ಅನುಸರಿಸಿದರು, ಪ್ರೋತ್ಸಾಹಿಸಿದರು. ರಾಮಾನುಜ ಪಂಥವು ವಿಜಯನಗರದಲ್ಲಿ, ತನ್ನ ಪ್ರಭಾವವನ್ನು ಬೀರಿದ್ದಿತು. ರಾಮಾನುಜರ ತತ್ವ-ಸಿದ್ಧಾಂತಗಳಿಗನುಸಾರವಾಗಿಯೇ ಶ್ರೀವೈಷ್ಣವ ದೇವಾಲಯಗಳು ಹಾಗೂ ರಾಮಾನುಜಕೂಟಗಳು ಇಲ್ಲಿ ಅಸ್ತಿತ್ವಕ್ಕೆ ಬಂದವು. ಸಾಳುವ ಮತ್ತು ತುಳು ಅರಸರ ಅವಧಿಯಲ್ಲಿ ವಿಜಯನಗರದಲ್ಲಿ ಶ್ರೀವೈಷ್ಣವ ಪಂಥದ ಚಟುವಟಿಕೆಗಳು ಅಧಿಕಗೊಂಡವು. ಒಟ್ಟಿನಲ್ಲಿ 16ನೇ ಶತಮಾನದಲ್ಲಿ ಆರಂಭದ ಕಾಲಾವಧಿಯಿಂದ ಶ್ರೀವೈಷ್ಣವ ಪಂಥವು ವಿಜಯನಗರದಲ್ಲಿ ರಾಜಾಶ್ರಯ ಪಡೆದುಕೊಳ್ಳುವುದರೊಡನೆ ಪ್ರಬಲಗೊಂಡುದು ವಾಸ್ತವ.

ವಿಜಯನಗರದಲ್ಲಿ ಶ್ರೀವೈಷ್ಣವ ಭಕ್ತರಿಗಾಗಿ ತಂಗಲು ನಿರ್ಮಿಸಿರುವ ಅನ್ನಸತ್ರಗಳೇ ಈ ರಾಮಾನುಜಕೂಟಗಳು. ಇಲ್ಲಿ ಆಹಾರವನ್ನು ಸಿದ್ಧಪಡಿಸುವವರನ್ನು 'ಸ್ವಯಂಪಾಕಿಗಳು' ಎಂದರೆ ವಿಶೇಷ ಅಥವಾ ಶುದ್ಧವಾದ ಅಡುಗೆ ಮಾಡುವವರೆಂದು ಶಾಸನಗಳಲ್ಲಿ ಗುರುತಿಸಲಾಗಿದೆ. ದೇವಾಲಯಗಳ ಛತ್ರಗಳಲ್ಲಿ ಅಥವಾ ರಾಮಾನುಜಕೂಟದಲ್ಲಿ ಅಡುಗೆಯ ಸಾಮಗ್ರಿಗಳ ಬಗ್ಗೆ ಶಾಸನಗಳು ವಿವರಗಳನ್ನು ಒದಗಿಸುತ್ತವೆ.[13] ವಿಜಯನಗರವು ಶ್ರೀವೈಷ್ಣವ ಪಂಥದ ಚಟುವಟಿಕೆಗಳು ತಾಣವಾಗಿದ್ದರೂ ಇಲ್ಲಿ ಶ್ರೀವೈಷ್ಣವ ಮಠವಿದ್ದ ಬಗೆಗೆ ಯಾವುದೇ ಸಾಕ್ಷ್ಯವಿಲ್ಲೆಂಬುದು ಗಮನಾರ್ಹ. ಇದಕ್ಕೆ ಕಾರಣವಾದರೂ ಮಾಧ್ವ ಪಂಥದ ಗುರುಗಳಂತೆಯೇ ಶ್ರೀವೈಷ್ಣವ ಪಂಥದ ಆಚಾರ್ಯರು ಸಹ ವಿಜಯನಗರದಲ್ಲಿ ನೆಲೆಸಿರಲಿಲ್ಲ. ಶ್ರೀವೈಷ್ಣವ ಪಂಥದ ದೇವಾಲಯಗಳಿಗೆ ಹೊಂದಿಕೊಂಡಂತೆ ಇದ್ದ ರಾಮಾನುಜ ಕೂಟಗಳಲ್ಲೊ

ಅಥವಾ ಬೇರೆಡೆಯಲ್ಲೊ ವಾಸ್ತವ್ಯ ಮಾಡುತ್ತಿದ್ದರೆಂದು ವ್ಯಕ್ತಪಡುತ್ತದೆ. ಪ್ರಸಿದ್ಧ ಶ್ರೀವೈಷ್ಣವ ಆಚಾರ್ಯರು ವಿಜಯನಗರದಲ್ಲಿ ಶಾಶ್ವತ ನೆಲೆಯನ್ನು ಹೊಂದಿರ ಲಿಲ್ಲವೆಂಬುದು ರಾಮಾನುಜಕೂಟಗಳ ಅಸ್ತಿತ್ವವೇ ದೃಢಪಡಿಸುತ್ತದೆನ್ನಲಾಗುತ್ತದೆ. ಆದ್ದರಿಂದ ರಾಮಾನುಜಕೂಟಗಳು ಹೊರಗಡೆಯ ಧಾರ್ಮಿಕ ಕೇಂದ್ರಗಳಿಂದ ವಿಜಯನಗರಕ್ಕೆ ಆಗಮಿಸುತ್ತಿದ್ದ ಯಾತ್ರಾರ್ಥಿ ಅಥವಾ ಸಂಚಾರಿ ಶ್ರೀವೈಷ್ಣವರಿಗೆ ನೈವೇದ್ಯವನ್ನು ಒದಗಿಸುವಂತಹ ಭೋಜನಾಲಯಗಳಾಗಿದ್ದುದು ಸ್ಪಷ್ಟ. ನಮ್ಮಾಳ್ವಾರ ದೇವಾಲಯದ ಹೊರಭಿತ್ತಿಯಲ್ಲಿ ಕೆಲವು ಶ್ರೀವೈಷ್ಣವ ಆಚಾರ್ಯರ ಶಿಲ್ಪಗಳನ್ನು ಬಿಡಿಸಲಾಗಿದೆ.

ರಾಮಾನುಜಕೂಟಗಳಂತಹ ಭೋಜನಾಲಯಗಳು ವಿಜಯನಗರದ ದೇವಾಲಯಗಳಲ್ಲೂ ಇದ್ದವು. ಅವು ಸಹ ಬ್ರಾಹ್ಮಣರಿಗೆ ಅನ್ನ-ಪಾನಾದಿಗಳನ್ನು ಒದಗಿಸುತ್ತಿದ್ದವು. ವಿಠಲ ದೇವಾಲಯದಲ್ಲಿರುವಂತೆ ಬಾಲಕೃಷ್ಣನ ದೇವಾಲಯ ದಲ್ಲಿಯೂ, ಮಂಟಪವಿದ್ದು ಇದು ಪಾಕಶಾಲೆಯಾಗಿತ್ತೆಂಬ ಅಭಿಪ್ರಾಯವಿದೆ. ಆದರೆ ದಕ್ಷಿಣಭಾರತದಲ್ಲಿ ಶ್ರೀವೈಷ್ಣವ ದೇವಾಲಯಗಳಲ್ಲಿಯ ಭೋಜನಾಲಯ ಗಳನ್ನು ರಾಮಾನುಜಕೂಟವೆಂದು ಕರೆಯಲಾಗಿದೆ.

ವಿಜಯನಗರದಲ್ಲಿ ನಾಲ್ಕು ವಂಶಗಳ ಆಡಳಿತದಲ್ಲಿ ಅಂದಿನ ಅರಸರು ಧರ್ಮವನ್ನು ಆಧಾರವಾಗಿಟ್ಟುಕೊಂಡು ಸಾಮ್ರಾಜ್ಯವನ್ನು ಪಾಲಿಸಿದರು. ಸರ್ವಧರ್ಮಸಮನ್ವಯತೆಗೆ ಹೆಸರಾದಂತಹ ಈ ಸಾಮ್ರಾಜ್ಯದ ಅರಸರು ಮಧ್ಯಕಾಲೀನ ಭಾರತದಲ್ಲಿ ಹಿಂದೂ ಧರ್ಮವನ್ನು ಸಂರಕ್ಷಿಸಿದ ಕೀರ್ತಿ ಈ ಸಾಮ್ರಾಜ್ಯದ ಅರಸರಿಗೆ ಸಲ್ಲುತ್ತದೆ. ನಂತರದ ಕಾಲದಲ್ಲಿ ವಿಜಯನಗರದ ಧಾರ್ಮಿಕ ಸ್ಥಿತಿಯಲ್ಲಿ ಉಂಟಾದ ಕಲಹಗಳು ಮುಂದೆ ಅವುಗಳು ಕ್ರಿ. ಶ. 1565ರ ತಾಳಿಕೋಟೆ ಕದನ ಅಥವಾ ರಕ್ಕಸಗಿ-ತಂಗಡಿಗಿ ನಿರ್ಣಾಯಕ ಕಾಳಗಕ್ಕೆ ಕಾರಣವಾಯಿತು. ಧಾರ್ಮಿಕ ನೆಲೆಗಟ್ಟಿನಲ್ಲಿ ಭದ್ರವಾಗಿ ನಿಂತಿದ್ದ ಸಾಮ್ರಾಜ್ಯದ ಅವನತಿಯ ಹಾದಿಯನ್ನು ಹಿಡಿಯಿತು.

ಒಟ್ಟಾರೆಯಾಗಿ ಸಾಮ್ರಾಜ್ಯದಲ್ಲಿ ನೆಲೆಸಿರುವ ಧಾರ್ಮಿಕತೆ ಶಾಂತಿಯುತವಾಗಿ ರುವ ಆಡಳಿತ ವಿವಿಧ ಧರ್ಮಕ್ಕೆ ನೀಡಿದ ಪಾಲನೆ-ಪೋಷಣೆಯ ಕಾರ್ಯವು ಸ್ಥಿರಗೊಂಡಿತು. ಆದರೆ ಶ್ರೀವೈಷ್ಣವ ಪಂಥದ ಅನುಯಾಯಿಗಳು ಧಾರ್ಮಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರು ಕೂಡಾ ಈ ಧಾರ್ಮಿಕ ಸ್ಥಿತ್ಯಂತರಗಳು ಹಲವು ಬದಲಾವಣೆಯನ್ನುಂಟುಮಾಡಿದವು.

ಪ್ರಸ್ತುತ ಲೇಖನವು ಹಂಪಿಯ ಶಾಸನಗಳಲ್ಲಿ ಆಳ್ವಾರರು ಅಂದರೆ ಆಳ್ವಾರ, ಪದದ ಅರ್ಥ, ಮೂಲ, ಶ್ರೀವೈಷ್ಣವ ಧರ್ಮ ಮತ್ತು ಆಳ್ವಾರರು, ಧಾರ್ಮಿಕ

ಕ್ಷೇತ್ರದಲ್ಲಿ ಈ ಆಳ್ವಾರರ ಪ್ರಾಮುಖ್ಯತೆ ಅವರಿಗೆ ನಿರ್ಮಿಸಿದ ದೇವಾಲಯಗಳು ಮತ್ತು ಪೂಜಾವಿಧಾನಗಳು ಆಳ್ವಾರರಿಗೆ ಸಲ್ಲುವ ತಿರುನಕ್ಷತ್ರದ ಪೂಜೆಗಳು ಅಂದರೆ ಶ್ರೀವೈಷ್ಣವ ಭಕ್ತರಾದ ಆಳ್ವಾರರ ಸಂಪೂರ್ಣವಾದ ಮಾಹಿತಿಯನ್ನು ಶಾಸನಗಳು ದಾಖಲಿಸುತ್ತವೆ.

ಅಡಿಟಿಪ್ಪಣಿಗಳು

1. ಬಿ. ಆರ್. ಗೋಪಾಲ್, 1983, 'ಶ್ರೀರಾಮಾನುಜ ಇನ್ ಕರ್ನಾಟಕ', ಡೆಲ್ಲಿ, ಬಾ.ರಾ. ಗೋಪಾಲ, 1984 'ಕರ್ನಾಟಕದಲ್ಲಿ ರಾಮಾನುಜಚಾರ್ಯರು', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಬಾ. ರಾ. ಗೋಪಾಲ, 1995, 'ಹಂಪೆಯಲ್ಲಿ ಶ್ರೀವೈಷ್ಣವ ಆಳ್ವಾರರು', *ಇತಿಹಾಸ ದರ್ಶನ,* ಸಂ.10, ಪು.129–130
3. ಹೆಚ್. ಜೆ. ರಾಮಯ್ಯಂಗಾರ್, 1992, *ಶ್ರೀ ವೈಷ್ಣವ ಆಚಾರ್ಯ ಪರಂಪರೆ,* ಬೆಂಗಳೂರು
4. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3,* ಹಂಪಿ ಶಾಸನಗಳು (ಇನ್ನು ಮುಂದೆ ಕವಿಶಾ) 2000, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂ. 257
5. ಜೋಷಿ, ಎಸ್. ಕೆ. 2006, 'ಹಂಪಿಯ ಹರಿದಾಸರು ಹಾಗೂ ಶ್ರೀವೈಷ್ಣವ ಆಚಾರ್ಯರು, ಒಂದು ಚಿಂತನೆ', *ವಿಜಯನಗರ ಅಧ್ಯಯನ,* ಸಂ.12, ಪು.423–431
6. ಗೋಪಾಲ ಬಾ.ರಾ. 1984, ಪೂರ್ವೋಕ್ತ.
7. *ಕ. ವಿ. ಶಾ.* ಸಂ. 3, ಸಂ.201
8. ಅದೇ, ಸಂ. 205
9. ಅದೇ, ಸಂ. 206
10. ಅದೇ, ಸಂ. 209
11. ವಾಸುದೇವನ್ ಸಿ.ಎಸ್., *ಟೆಂಪಲ್ಸ್ ಆಫ್ ಆಂಧ್ರ ಪ್ರದೇಶ,* ಪು. 217
12. ವಾಸುದೇವನ್ ಸಿ.ಎಸ್, ಹಂಪೆಯ ವಿಠಲ ದೇವಾಲಯದ ಹಬ್ಬ ಮತ್ತು ಉತ್ಸವಗಳು, *ಶಾಸನಾಧ್ಯಾಯನ,* ಸಂ.3, ಪು.72–82
13. ಲಕ್ಷ್ಮಣ ತೆಲಗಾವಿ, 'ವಿಜಯನಗರದ ಕಾಲದ ರಾಮಾನುಜ ಕೂಟಗಳು', ಪು. 76–80

೨೨. ವಿಠಲ ದೇವಾಲಯ ಸಂಕೀರ್ಣದಲ್ಲಿ ಪಾಕಶಾಲೆ

ಡಾ॥ ಜಗದೀಶ

ಹಂಪಿಯಲ್ಲಿ ಅನೇಕ ದೇವಾಲಯ ಸಂಕೀರ್ಣಗಳಿವೆ. ಹಂಪಿಯಲ್ಲಿ ವಿರೂಪಾಕ್ಷ, ವಿಠಲ, ಅಚ್ಯುತ, ಕೃಷ್ಣ ದೇವಾಲಯ ಸಂಕೀರ್ಣಗಳಿವೆ. ಈ ಸಂಕೀರ್ಣಗಳಲ್ಲಿ ಮುಖ್ಯ ದೇವಾಲಯ, ಅಮ್ಮನವರ ದೇವಾಲಯ, ಪರಿವಾರ ದೇವತೆಗಳ ದೇವಾಲಯ, ವಸಂತ ಮಂಟಪ, ಆವರಣ ಗೋಡೆ, ಮಹಾದ್ವಾರ ಮತ್ತು ಗೋಪುರ ಹಾಗೂ ಅಂಗಡಿಸಾಲು ಮತ್ತು ರಥ ಬೀದಿ ಇರುತ್ತವೆ. ವಿಠಲ ದೇವಾಲಯ ಸಂಕೀರ್ಣದಲ್ಲಿ ಸಂಗೀತ ಸ್ವರ ಹೊರಡಿಸುವ ಸಂಯುಕ್ತ ಸ್ಥಂಬಗಳಿವೆ. ಕಲ್ಲಿನ ರಥ (ಗರುಡ ವಾಹನ) ಉಯ್ಯಾಲೆ ಮಂಟಪ, ರಂಗ ಮಂಟಪ, ವಸಂತ ಮಂಟಪ, ಆವರಣ ಗೋಡೆ, ಮಹಾದ್ವಾರ ಮತ್ತು ದ್ವಾರ ಗೋಪುರ, ಕಲ್ಲಿನ ಕಂಬ, ಎರಡು ಅಂಗಡಿಸಾಲು ಮತ್ತು ರಥ ಬೀದಿ ಇತ್ಯಾದಿ ಇದೆ.

ದೇವಾಲಯ ಸಂಕೀರ್ಣ ಬೆಳದಂತೆ ದೇವಾಲಯಗಳಲ್ಲಿನ ಸೇವೆ ಹೆಚ್ಚುತ್ತದೆ. ವಿಠಲ ದೇವಾಲಯದಲ್ಲಿ ನಿತ್ಯೋತ್ಸವ, ನಿತ್ಯ ನೈವೇದ್ಯ, ಅಮೃತ ಪಡಿ, ನಂದಾದೀಪ, ಗಂಧ, ಗಂಧ ಪರಿಮಳ, ಹೂವಿನ ಮಾಲೆ/ದಂಡೆ, ಕಜ್ಜಾಯ, ಫಲ ನೈವೇದ್ಯ ಸೇವಗಳಿದ್ದವು. ಉದಯಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಅವಸರದ ಪೂಜೆ ನಡೆಯುತ್ತಿತ್ತು. ದಿವೊಂದರಲ್ಲಿ 25 ಬಗೆಯ ಆರತಿಗಳನ್ನು ಮಾಡಲಾಗುತ್ತಿತ್ತು. ಅವುಗಳಲ್ಲಿ ನೀರಾಂಜನ ಹಲಗೆ 9, ಹಿರಿಯ ಆರತಿ 8, ಪುರುಷಾಮೃಗದ ಆರತಿ 3, ನಾಗಾರತಿ 1, ಧೂಪಾರತಿ 1, ಖಡಿ ಬತ್ತಿ 2, ಪ್ರತುಮೆ ಆರತಿ 1 ಇತ್ತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ[1] . ನಿತ್ಯ ಪ್ರಸಾದದಲ್ಲಿ ದೋಸೆ, ಧದ್ಯೋಂನ್ನ, ಸಂಬಾರ, ಮೇಲೋಗರ, ಮತ್ತು ಮೊಸರು ಇತ್ತು. ಫಲ ನ್ಯವೇದ್ಯದಲ್ಲಿ ಎಳನೀರು, ತೆಂಗಿನ ಕಾಯಿ, ಬಾಳೆ ಹಣ್ಣು, ಕಡಲೆ ಬೇಳೆ, ಹೆಸರು ಬೇಳೆ ಮತ್ತು ಕಬ್ಬು ಇದ್ದವು. ಕಜ್ಜಾಯದಲ್ಲಿ 5 ಬಗೆಯ ಕಜ್ಜಾಯ ತಯಾರಿಸಲಾಗುತ್ತಿತ್ತು.

ವಿಠಲ ದೇವಾಲಯದಲ್ಲಿ ನಿತ್ಯೋತ್ಸವ ಅಲ್ಲದೆ ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಹಾಗೂ ವೈಶಾಖ ಮತ್ತು ಫಾಲ್ಗುಣ ಮಾಸಗಳಲ್ಲಿ ರಥೋತ್ಸವ ನಡೆಯುತ್ತಿತ್ತು. ಮಕರ ಸಂಕ್ರಮಣ ಪುಣ್ಯಾ ಕಾಲದಲ್ಲಿ 12 ದಿನಗಳ ಉತ್ಸವಗಳನ್ನು ಹಮ್ಮಿಕೊಳ್ಳಲು ಮತ್ತು ಇವುಗಳನ್ನು ನಡೆಸಲು ಮುದುವಟ್ಟು ಇಟ್ಟಿರುವುದನ್ನು 19 ಮೇ, 1561 ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ[2]. ಇವಲ್ಲದೇ ಇನ್ನೂ ಕೆಲವು

ಉತ್ಸವಗಳು ನಡೆಯುತ್ತಿದ್ದವು. 12 ಜುಲೈ, 1554 ರ ಶಾಸನದಲ್ಲಿ 142 ದಿನಗಳ ಉತ್ಸವದ [3] ಮತ್ತು 22 ಫೆಬ್ರವರಿ, 1559 ರ ಶಾಸನದಲ್ಲಿ [4] ವಿವಿಧ ಉತ್ಸವಗಳ ವಿವರವಿದೆ. ಇಲ್ಲಿ ರಾಮಾನುಜ ಕೂಟದ ಸಭೆಯೂ ಸೇರುತ್ತಿತ್ತು. ಅಯಿರಾಮರಾಜನ ಮಕ್ಕಳಾದ ಸ್ಥಾನಿಕ ಹಿರಿವಲಭಯ ಮತ್ತು ಚಿಕ್ಕವಲಭಯ ಇವರಿಗೆ ದೇವರ ಪೂಜೆ, ನೈವೇದ್ಯ, ಮಾಲೆಗಾರರಿಗೆ ದಾರ ನೀಡಲು, ಕಾವಲುಗಾರರ ವ್ಯವಸ್ಥೆಯನ್ನು ನೋಡಿಕೊಳ್ಳಲು ಒಪ್ಪಿಸಿ, ನೇಮಿಸಿರುವುದನ್ನು ಇನ್ನೊಂದು ಶಾಸಸ ಉಲ್ಲೇಖಿಸುತ್ತದೆ[5]. ದೇವರ ಸೇವೆಗಾಗಿ ಸ್ಥಾನಿಕರು, ನಟುವರು, ಸೇನಬೋವರು, ಸ್ವಯಂಪಾಕಿಗಳು ಮತ್ತು ಭಂಡಾರದವರು ಇದ್ದರು[6]. ವಿಠಲ ದೇವರು ಉಯ್ಯಾಲೆ ಉತ್ಸವಕ್ಕೆ ಚಿತ್ತೈಸಿದಾಗ ಬೇಕಾಗುವ ಪಡಿತರ ಉಲ್ಲೇಖಿಸುವ ಶಾಸನದಲ್ಲಿ 8 ಪಡಿ ಅಕ್ಕಿಯ ವಿವರವಿದೆ. ಅಲ್ಲದೆ 8 ಪಡಿ ಸಾಮರ್ಥ್ಯದ 40 ಹರಿವಾಣಗಳ ಉಲ್ಲೇಖವೂ ಇದೆ [7].

ವಿಠಲ ದೇವಾಯದಲ್ಲಿ ನಡೆಯುತ್ತಿದ್ದ ವಿಶೇಷ ಸೇವೆಗಳ ವಿವರ ಹೀಗಿದೆ:

ಸೇವೆ	ದಿನಗಳು
ಪಕ್ಷೋತ್ಸವ, ಪ್ರಥಮ ಏಕಾದಶಿ, ದ್ವಾದಶಿ	72
ಪಂಚಪರ್ವ ದಿನ	60
ಮಕರಸಂಕ್ರಮಣ ಪುಣ್ಯ ಕಾಲ	12
ಮಾಸೋತ್ಸವ	12
ವಿಜಯ ದಶಮಿ	10
ತಿರುವಧ್ಯಾನ ತಿರುನಾಳ	10
ತಿರುನಾಳ ಧ್ವಜಾರೋಹಣ	03
ಶ್ರೀ ಪುಷ್ಯಯಾಗ	03
ನರಸಿಂಹ ಜಯಂತಿ, ಕೃಷ್ಣ ಜಯಂತಿ, ವಾಮನ ಜಯಂತಿ	03
ರಾಮನವಮಿ, ಉಗಾದಿ, ದೀಪಾವಳಿ	03
ಕೊಡೆ ತಿರುನಾಳ, ಉಯ್ಯಾಲೆ ತಿರುನಾಳ,	
ತೆಪ್ಪ ತಿರುನಾಳ, ತೋಪು ತಿರುನಾಳ	04
ಒಟ್ಟು	192

ಮೇಲಿನ ಕೋಷ್ಟಕವನ್ನು ಗಮನಿಸಿದರೆ ಸರಿಸುಮಾರು 6 1/2 ತಿಂಗಳು ವಿಶೇಷ ಉತ್ಸವಗಳು ಇದ್ದವು. ಈ ಉತ್ಸವಗಳು ನಡೆಯಲು ಭೂಮಿ, ಸುಂಕ ಇತ್ಯಾದಿ ದಾನ ಬಿಡಲಾಗಿತ್ತು. ನಿತ್ಯೋತ್ಸವ ಮತ್ತು ವಿಶೇಷ ಉತ್ಸವಗಳಲ್ಲಿ ಭಾಗವಹಿಸುವ ಭಕ್ತರಿಗೆ ಪ್ರಸಾದ ನೀಡ ಬೇಕಾಗುತ್ತಿತ್ತು. ಪ್ರಸಾದ ತಯಾರಿಕೆಗೆ ಪಾಕಶಾಲೆಯ ಅಗತ್ಯವಿದೆ. ದಿನವೊಂದಕ್ಕೆ 8 ಪಡಿ ಸಾಮರ್ಥ್ಯದ ಹರಿವಾಣ ತುಂಬಾ ಅಕ್ಕಿಯನ್ನು ಬಳಸುತ್ತಿದ್ದರೆಂದರೆ, ಒಂದು ಪಡಿಯಲ್ಲಿ 4 ಸೇರು ಇರುತ್ತದೆ. ಒಟ್ಟು 32 ಸೇರು ಅಕ್ಕಿ ಬಳಸಲಾಗುತ್ತಿತ್ತು. 1 ಸೇರು ಅಕ್ಕಿಯ ಅನ್ನವು 12 ಜನಕ್ಕೆ ಸಾಕಾಗಬಹುದೆಂಬುದನ್ನು ಗಮನಿಸಿದರೆ, ಒಟ್ಟು 384 ಜನರಿಗೆ ಇದು ಪೂರೈಸುತ್ತಿತ್ತು. ಸರಿ ಸುಮಾರು 400 ಜನ ಜಮಾಯಿಸುತ್ತಿದ್ದರು ಎಂದು ಪರಿಗಣಿಸಲು ಅವಕಾಶವಿದೆ.


ದೇವಾಲಯ ಸಂಕೀರ್ಣಗಳಲ್ಲಿ ಪಾಕಶಾಲೆಗಳಿರುತ್ತಿದ್ದು. ಹಂಪಿಯ ವಿರೂಪಾಕ್ಷ, ವಿಠಲ, ಬೇಲೂರಿನ ಚನ್ನಕೇಶವ, ಶ್ರೀರಂಗಪಟ್ಟಣದ ರಂಗನಾಥ ದೇವಾಲಯ ಸಂಕೀರ್ಣಗಳಲ್ಲಿ ಪಾಕಶಾಲೆಯು ಆಗ್ನೇಯ ದಿಕ್ಕಿನಲ್ಲಿ ಇರುವುದನ್ನು ಇಂದಿಗೂ ಕಾಣಬಹುದು. ವಿಠಲ ದೇವಾಲಯ ಸಂಕೀರ್ಣದಲ್ಲಿ ಪಾಕಶಾಲೆಯು ಅಗ್ನೇಯ ಮೂಲೆಯಲ್ಲಿ ಆವರಣ ಗೋಡೆಗೆ ಹೊಂದಿಕೊಂಡಂತೆ ಇದೆ. ಇದು 20 ಅಂಕಣಗಳಿಂದ ಕೂಡಿದೆ (5 ಉದ್ದ ಮತ್ತು 4 ಅಡ್ಡ ಸಾಲು ಕಂಭಗಳು). ಪೂರ್ವ ದಿಕ್ಕಿನ ಆವರಣ ಗೋಡೆಗೆ ಹೊಂದಿಕೊಂಡಂತೆ ಇರುವ 5 ಅಂಕಣಗಳ ಮಧ್ಯದ ಮೂರು ಅಂಕಣಗಳಲ್ಲಿ ಅಡುಗೆ ಒಲೆಗಳು ಇತ್ತೆಂದು ತೋರುತ್ತದೆ. ಈ ಮೂರು ಅಂಕಣಗಳ ಮಾಳಗೆ ಮೇಲ್ಗಡೆ, ಮೊದಲ ಅಂತಸ್ಥಿನಲ್ಲಿ ಇನ್ನೂ ಮೂರು ಅಂಕಣಗಳಿಗೆ. ಈ ಭಾಗದಲ್ಲಿ ಮಾಳಿಗೆಯ ಕಲ್ಲುಗಳನ್ನ ತೆಗೆಯಲಾಗಿದೆ. ಏಕೆಂದರೆ ಅಡುಗೆ ಮಾಡುವಾಗ ಉತ್ಪತ್ತಿಯಾಗುವ ಬಿಸಿ ಹೊಗೆಯು ಮೇಲೇರಿ ಮೊದಲ ಅಂತಸ್ಥಿನಿಂದ ಹೊರಗೆ ಹೋಗಲು ಈ ಭಾಗ ಸಹಾಯಕವಾಗಿತ್ತು. ತೆರೆದ ಭಾಗದಿಂದ ಪ್ರಾಣಿಗಳು ಒಳಬಾರದಂತೆ ತಡೆಯಲು ಅಡ್ಡ ಕಟ್ಟಿಗೆಯ ಪಕಾಶಿಗಳು ಇದ್ದವು. ಆವರಣ ಗೋಡೆಯಲ್ಲಿನ ತೂತುಗಳು ಇಂದಿಗೂ ಕುರುಹುಗಳಾಗಿ ಉಳಿದಿವೆ. ಒಳಗಡೆ ಮಧ್ಯದ ಅಂಕಣದ ಪೂರ್ತಿ ಉತ್ತರಕ್ಕೆ ಇಳಿಜಾರಾಗಿರುವ ಒಂದು ಅಖಂಡ ಶಿಲೆ ಇದೆ. ಪ್ರಾಯಶಃ ಅಕ್ಕಿಯನ್ನು ಬೇಯಿಸಿದ ನಂತರ ಗಂಜಿ ನೀರು ಬಸಿದು ಹೋಗಲು ಮತ್ತು ಅನ್ನವನ್ನು ಆರಿ ಹಾಕಲು ಈ ಕಲ್ಲುನ್ನು ಬಳಸಲಾಗುತ್ತಿದೆಂದು ತೋರುತ್ತದೆ. ಅಡುಗೆಗೆ ನೀರಿನ ಸಂಗ್ರಹ/ಲಭ್ಯತೆ ಮುಖ್ಯ. ವಿರೂಪಾಕ್ಷ ದೇವಾಲಯ ಸಂಕೀರ್ಣದಲ್ಲಿ ಪಾಕಶಾಲೆಗೆ ನೀರಿನ ಕಾಲುವೆಯೇ ಹರಿದು ಬರುತ್ತಿತ್ತೆಂಬುದು ಗಮನಾರ್ಹ ಅಂಶ. ಪಾಕಶಾಲೆಯು ದೇವಾಲಯ

ಸಂಕೀರ್ಣಗಳಲ್ಲಿ ಒಂದು ಅವಶ್ಯಕ ಅಂಗ ಮತ್ತು ಅವು ಆಗ್ನೇಯ ಭಾಗದಲ್ಲಿ ಇದ್ದವೆಂದು ತಿಳಿಯಬಹುದು.

ಆಧಾರ

ಕನ್ನಡ ವಿಶ್ವವಿದ್ಯಾಲ, ಶಾಸನ ಸಂಪುಟ 3, ಹಂಪಿ ಶಾಸನಗಳು.

1. ನಂ 181,182
2. ನಂ 183
3. ನಂ 186
4. ನಂ 191
5. ನಂ 296
6. ನಂ 196
7. ನಂ 186



ವಿಠಲ ದೇವಾಲಯದ ನಕ್ಷೆ

ವಿಠಲ ದೇವಾಲಯ ಸಂಕೀರ್ಣದ ಪಾಕಶಾಲೆ







೨೩. ನರಹರಿತೀರ್ಥರ ಬೃಂದಾವನದ ಸುತ್ತ

ರಾಜ ಯೋಗೀಂದ್ರ ಕುಮಾರ್

ಒಂದೂವರೆ ಶತಮಾನಗಳಿಂದ ವಿದ್ವಾಂಸರು ಮದಾಚಾರ್ಯರ ಶಿಷ್ಯರಾದ ನರಹರಿತೀರ್ಥರ ಬೃಂದಾವನವನ್ನು ಹಂಪಿಯ ಚಕ್ರತೀರ್ಥದ ಬಳಿ ಇದೆ ಎಂದು ಮರುಮಾತನಾಡದೆ ದಾಖಲಿಸುತ್ತಾ ಬಂದಿದ್ದಾರೆ. ಆದರೆ ಇದಕ್ಕೆ ಪ್ರಮಾಣವನ್ನು ಕೊಡುವಲ್ಲಿ ಅವರುಗಳು ವಿಫಲರಾಗಿದ್ದಾರೆ. ಇದರ ಬಗೆಗಿನ ಮೊದಲ ಪ್ರಕಟಣೆ ಮುಂತಾದ ವಿಷಯಗಳು ಇಂದಿಗೂ ಪ್ರಶ್ನಾರ್ಹವಾಗಿಯೇ ಮುಂದುವರೆದಿದೆ. ಅನಂತರದ ಮಾಧ್ವಯತಿಗಳಾದ ಪದ್ಮನಾಭತೀರ್ಥರು, ರಾಘವೇಂದ್ರತೀರ್ಥರು, ವಾದಿರಾಜರು, ವ್ಯಾಸರಾಜರೇ ಮುಂತಾದ ಯತಿಗಳ ಬೃಂದಾವನಗಳನ್ನು ಅವರ ನಂತರದ ವಿದ್ವಾಂಸರುಗಳು ಯಾವುದಾದರೊಂದು ದಾಖಲಿಸುತ್ತಾ ಬಂದಿದ್ದಾರೆ. ಕೆಲವು ವಿದ್ವಾಂಸರು ನರಹರಿತೀರ್ಥರ ಬೃಂದಾವನವು ಚಕ್ರತೀರ್ಥದ ಬಳಿ ನಡುಗಡ್ಡೆಯಲ್ಲಿದೆ ಎಂದು ದಾಖಲಿಸುತ್ತಾರೆ. ಈ ನಡುಗಡ್ಡೆಗೂ ಚಕ್ರತೀರ್ಥಕ್ಕೂ ಬಹಳ ಕಿ. ಮೀ. ಗಳ ಅಂತರವಿದೆ.

ಈಗ ನರಹರಿತೀರ್ಥರ ಬೃಂದಾವನವೆಂದು ಕರೆಯುವ ಬೃಂದಾವನ ನರಹರಿತೀರ್ಥರ ಬೃಂದಾವನವಲ್ಲ ಎಂದು ಹೇಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಇದು ನರಹರಿತೀರ್ಥರ ಬೃಂದಾವನವಿರಲಿ, ಯಾವುದೇ ಮಾಧ್ವಯತಿಯ ಬೃಂದಾವನವಾಗಿರುವುದಕ್ಕೂ ಸಾಧ್ಯವಿಲ್ಲ. ಇದರ ಬಗ್ಗೆ ಹೆಚ್ಚಿನದನ್ನು ಮುಂದೆ ವಿವರಿಸುತ್ತೇನೆ. ನರಹರಿತೀರ್ಥರ ನಂತರದ ಕಾಲದಲ್ಲಿ ಬಂದಂಥ ಯತಿಗಳಾಗಲಿ, ವಿದ್ವಾಂಸರಾಗಲಿ, ದಾಸರ ದಾಸಸಾಹಿತ್ಯವಾಗಲಿ ನರಹರಿತೀರ್ಥರ ಬೃಂದಾವನವಿರಲಿ, ನವ ಬೃಂದಾವನದ ಸಮೀಪದಲ್ಲಿನ ನಡುಗಡ್ಡೆಯಲ್ಲಿ ಅಥವಾ ಬೇರೆ ಸ್ಥಳದಲ್ಲಿವನ್ನು ದಾಖಲು ಮಾಡದಿರುವುದು ಸಂಶಯಕ್ಕೆಡೆಮಾಡಿಕೊಟ್ಟಿದೆ. ಹಲವಾರು ಮಠದ ಹಲವಾರು ಯತಿಗಳ ಬೃಂದಾವನಗಳು ಇದುವರೆಗೂ ದೊರೆತಿಲ್ಲ. ನರಹರಿತೀರ್ಥರನ್ನು ಕುರಿತು ಹಲವಾರು ಶ್ಲೋಕ, ಸ್ತೋತ್ರ, ದಾಸರ ಪದಗಳು ರಚಿತವಾಗಿದೆ. ಆದರೆ ಅವರ ನಿರ್ಯಾಣದ ವಿವರವಾಗಲಿ ಬೃಂದಾವನದ ಸ್ಥಳವಾಗಲೀ ಯಾವುದೇ ಶ್ಲೋಕ, ಸ್ತೋತ್ರ, ದಾಸರ ಪದಗಳಲ್ಲಿ ಕಂಡುಬರುವುದಿಲ್ಲ. ಆದರೆ ಆಚಾರ್ಯರ ಮೂರನೆಯ ಶಿಷ್ಯರಾದ ಮಾಧವತೀರ್ಥರಿಗೆ ಸಂಸ್ಥಾನವನ್ನು ವಹಿಸಿದರೆಂದು ಮಾತ್ರ ಉಲ್ಲೇಖವಾಗಿದೆ. ನವ ಬೃಂದಾವನಕ್ಕೂ ಹಾಗೂ ಇನ್ನಿತರ

ಯತಿ ಶ್ರೇಷ್ಠರ ಬೃಂದಾವನ ಸ್ಥಳಕ್ಕೆ ಭೇಟಿನೀಡಿದ ನಂತರದ ಯತಿಗಳು ಹಾಗೂ ದಾಸರು ಅಲ್ಲಿನ ಯತಿಗಳ ಸಾಧನೆಗಳನ್ನು ಕುರಿತು ಸ್ತೋತ್ರ ಮಾಡಿರುತ್ತಾರೆ.

ಉದಾಹರಣೆಗೆ

ಶೇಷಚಂದ್ರಿಕಾಚಾರ್ಯರ ಶಿಷ್ಯರಾದ ಶ್ರೀ ಜಗನ್ನಾಥತೀರ್ಥರು 1755 ರಿಂದ 1770 ನವಬೃಂದಾವನಕ್ಕೆ ಬಂದು ಅಲ್ಲಿ ಒಂಬತ್ತು ಯತಿಗಳಿಗೂ ಪೂಜಿಸಿ ಹಸ್ತೋದಕವನ್ನಿತ್ತು ಅವರನ್ನು ಹೀಗೆ ಕೊಂಡಾಡಿದ್ದಾರೆ.

ಪದ್ಮನಾಭಂ ಜಯಮುನಿಂ ಕವೀಂದ್ರಂ ವಾಕ್ಪತಿಂ ತಥಾ ಗೋವಿಂದಂ
ಭಿಕ್ಷುಕಂ ಚೈವ ವ್ಯಾಸರಾಜಂ ತಥೈವ ಚ ಶ್ರೀನಿವಾಸಂ ರಾಮತೀರ್ಥಂ
ಸುಧೀಂದ್ರಂ ಭಾಸ್ಕರದ್ಯುತಿಂ ನವಬೃಂದಾವನೇ ಧ್ಯಾಯೇನ್ನವ ಭಕ್ತಿ
ಪ್ರಬೋದಕಾನ್॥[1]

ಹೀಗೆ ಒಂಬತ್ತು ಯತಿಗಳ ಹೆಸರು ಮತ್ತು ಸ್ಥಳವನ್ನು ಸೂಚಿಸುತ್ತದೆ. ಶ್ರೀ ಜಗನ್ನಾಥದಾಸರು ನವಬೃಂದಾವನಕ್ಕೆ ಹೋಗಿ ಅಲ್ಲಿದ್ದ ಯತಿಗಳ ಬೃಂದಾವನಕ್ಕೆ ಹಸ್ತೋದಕವನ್ನು ಮಾಡಿ ಯತಿಗಳನ್ನು ಕೊಂಡಾಡಿದ್ದಾರೆ.

ವೃಂದಾವನಗಳಿಗೆ ಅನಮಿಪೆ ನಿತ್ಯ
ಆನಂದತೀರ್ಥರ ಮತೋದ್ಧಾರಕರೆನಿಪ ನವ[2]

ಎಂಬ ಪದಸಾಹಿತ್ಯದಲ್ಲಿ ಯತಿಗಳ ಹೆಸರನ್ನು ತಿಳಿಸುತ್ತಾರೆ. ಮತ್ತೊಂದು ಒಂದು ಉತ್ತಮ ಉದಾಹರಣೆಯಂದರೆ ಶ್ರೀರಾಘವೇಂದ್ರತೀರ್ಥರದು

ಮಂತ್ರಾಲಯ ನಿವಾಸ ಉತ್ತಮ ಹಂಸ
ಸಂತಾಪ ಪರಿಸರಿಸಿ ಕೊಡು ಎನಗೆ ಲೇಸ[3]

ಇದು ವಿಜಯದಾಸರು ರಚಿಸಿದ ಪದವಾಗಿದೆ. ಅಂದರೆ ಇಲ್ಲಿ ರಾಘವೇಂದ್ರ ಸ್ವಾಮಿಗಳ ಬೃಂದಾವನ ಮಂತ್ರಾಲಯದಲ್ಲಿ ಇದೆ ಎಂದು ಸ್ಪಷ್ಟವಾಗುತ್ತದೆ.

ನರಹರಿತೀರ್ಥರ ಬಗೆಗೂ ಹಲವು ಹಾಡು ಸ್ತೋತ್ರಗಳನ್ನು ಮಾಡಿದ್ದಾರೆ. ಅದರಲ್ಲಿ ಪುರಂದರದಾಸರು ಮಾಡಿದ ಪದದಲ್ಲಿ

ನರಹರಿತೀರ್ಥರ ಮಹಿಮೆ ಕೇಳಿರೋ
ನರದೇಹವನ್ನು ಸಾರ್ಥಕ ಮಾಡಿರೋ[4]

ಎಂಬ ಪದಸಾಹಿತ್ಯದಲ್ಲಿ ನರಹರಿತೀರ್ಥರ ಹನ್ನೆರಡು ವರ್ಷ ರಾಜ್ಯಭಾರ ಮಾಡಿದ್ದು ಕಳಿಂಗ ದೇಶದಿಂದ ಮೂಲರಾಮದೇವರನ್ನು ತಂದದ್ದು ಆಚಾರ್ಯರು, ಪದ್ಮನಾಭ ತೀರ್ಥರು, ಎಷ್ಟು ದಿನ ಪೂಜೆ ಮಾಡಿದರು ಎಂಬೆಲ್ಲಾ ಮಾಹಿತಿಯನ್ನು ದಾಸರು ಕೊಡುತ್ತಾರೆ. ಆದರೆ ಅವರ ನಿರ್ವಾಣದ ವಿಚಾರವಾಗಲಿ, ಬೃಂದಾವನದ

ವಿಚಾರವಾಗಲಿ ಸ್ವಲ್ಪವೂ ಹೇಳುವುದಿಲ್ಲ. ವ್ಯಾಸರಾಜರು ಕೂಡ ಹಲವು ವರುಷಗಳು ಹಂಪಿಯಲ್ಲಿ ಇದ್ದರು. ಅವರಿಂದಲೂ ಮಾಹಿತಿ ದೊರಕುವುದಿಲ್ಲ. ಯಾವುದೇ ದಾಸರು ಯತಿಯ ವೃಂದಾವನದ ಸ್ಥಳಕ್ಕೆ ಹೋದಾಗ ಅಲ್ಲಿಯ ವಾತಾವರಣ ಹರಿಯುವ ನದಿ ಎಲ್ಲವನ್ನು ಮನದಲ್ಲಿ ಆನಂದಿಸಿ ಒಂದು ಪದ್ಯವನ್ನು ರಚಿಸುತ್ತಾರೆ. ಆದರೆ ನರಹರಿತೀರ್ಥರ ಬಗ್ಗೆ ಅದ್ಯಾವುದೂ ಆಗಲಿಲ್ಲ.

ಬೃಂದಾವನ ಮಾಹಿತಿ ಸಿಗುವುದು ಸ್ವಲ್ಪಮಟ್ಟಿಗೆ ದಾಸಸಾಹಿತ್ಯದಿಂದ ಮಾತ್ರ ಸಾಧ್ಯ, ದಾಸರು ಪದಗಳನ್ನು ರಚಿಸದೆ ಇದ್ದರೆ ಹಲವು ವಿಚಾರಗಳು ಬೆಳಕಿಗೇ ಬರುತ್ತಿರಲಿಲ್ಲ.

ನವವೃಂದಾವನಕ್ಕೆ ಹಲವಾರು ದಾಸರು ಹೋಗಿ ಅಲ್ಲಿಯ ವಾತಾವರಣ ಪರಿಸರವನ್ನು ನೋಡಿ ಪದಗಳನ್ನು ರಚಿಸಿದ್ದಾರೆ. ಆದರೆ ಸ್ವಲ್ಪದೂರದಲ್ಲೇ ಇರುವ ನರಹರಿತೀರ್ಥರ ಬೃಂದಾವನಕ್ಕೆ ಯಾವ ದಾಸರಾಯರು, ಯತಿಗಳು ಭೇಟಿ ನೀಡದಿರುವುದಕ್ಕೆ ಕಾರಣ ತಿಳಿಯುವದಿಲ್ಲ.

ವಾದಿರಾಜರು ಸಹ ಹಂಪಿಗೆ ಭೇಟಿನೀಡಿದ್ದಾರೆ. ವಿಠ್ಠಲನ ದೇವಾಲಯಕ್ಕೆ ಭೇಟಿ ನೀಡಿ ವಿಠ್ಠಲನನ್ನು ವರ್ಣಿಸುತ್ತಾರೆ.[5] ಹಾಗೆಯೇ ವಿರೂಪಾಕ್ಷನನ್ನು ಸಹ

ಪಂಪಾಧ್ಯಕ್ಷೋ ವಿರೂಪಾಕ್ಷಃ ಸಂಪದೇಸ್ಯಾತ್ ಸತಾಂ ಸದಾ

ಯೋ ಹೇಮಗಿರಿಸೀಮಾಯಾಂ ರಾಜತೆ ರಾಜಶೇಖರಃ

ಎಂಬುದಾಗಿ ವರ್ಣಿಸುತ್ತಾರೆ. ಹೇಮಕೂಟ ಪರ್ವತದ ಪ್ರದೇಶವು ಸಾಸಿವೇ ಕಾಳು ಗಣಪತಿಯ ವಿಗ್ರಹದ ಹತ್ತಿರದಲ್ಲಿ ಇದೆ. ಅಲ್ಲಿ ಹೇಮಕೂಟ ಪರ್ವತದಲ್ಲಿ ರಾಜಶೇಖರ ಚಕ್ರವರ್ತಿಯಾಗಿರುವ ಪಂಪಾಪತಿಯಾದ ಈಶ್ವರನು ನಮಗೆ ಸಂಪತ್ತನ್ನು ಕೊಡಲಿ ಎಂದು ಪ್ರಾರ್ಥಿಸುತ್ತಾರೆ.[6]

ಹೀಗೆ ವಾದಿರಾಜರು ಬಾಲಪಂಪಾ ಎಲ್ಲವನ್ನು ವರ್ಣಿಸುತ್ತಾರೆ ಅಲ್ಲಿಂದ ಮುಂದೆ ಆನೆಗೊಂದಿಗೆ ತೆರಳಿ ಅಲ್ಲಿಯ ಬೃಂದಾವನಗಳನ್ನು ನೋಡಿ ಸ್ತೋತ್ರ ಮಾಡಿದ್ದಾರೆ.[7] ಆದರೆ ವಿಠಲನ ದೇವಾಲಯದ ಪಕ್ಕದಲ್ಲೇ ಇರುವ ನರಹರಿತೀರ್ಥರ ಬೃಂದಾವನಕ್ಕೆ ಭೇಟಿನೀಡಿದ ಮಾಹಿತಿ ಸಿಗುವುದಿಲ್ಲ. ವಾದಿರಾಜರು ತೀರ್ಥ ಪ್ರಬಂಧದಲ್ಲಿ ನರಹರಿತೀರ್ಥರ ಬಗ್ಗೆ ಯಾವ ಮಾಹಿತಿ ನೀಡುವುದಿಲ್ಲ. ನರಹರಿ ತೀರ್ಥರ ವೃಂದಾವನವಿದ್ದರೆ ಖಂಡಿತವಾಗಿಯೂ ಸ್ತೋತ್ರ ಮಾಡುತ್ತಿದ್ದರು.

ಬೃಂದಾವನ ಪದ್ಧತಿ

ಯತಿಗಳು ಕಾಲವಾದನಂತರ ಅವರ ಕಾಯವನ್ನು ಗಂಗಾನದಿಯಂತಹ ಮಹಾನದಿಯ ಮಡುವಿನಲ್ಲಿ ಬಿಡಬೇಕು. ಮಹಾನದಿಗಳು ದೊರೆಯದೇ ಇದ್ದರೆ ಯತಿಯ ದೇಹವನ್ನು ಭೂಸ್ಥಾಪನೆ ಮಾಡಬೇಕು.[8] ಭೂಮಿಯಲ್ಲಿ ಸ್ಥಾಪನೆ ಮಾಡಬೇಕಾದರೆ ಒಂದು ದಂಡದಷ್ಟು ಅಂದರೆ ಆರರಿಂದ ಎಂಟು ಅಡಿಯಲ್ಲಿ ಹಳ್ಳವನ್ನು ತೋಡಿ ಅದರಲ್ಲಿ ಯತಿಯ ದೇಹವನ್ನು ಕೂರಿಸಬೇಕು. ಅನಂತರ ಮಣ್ಣಿನಿಂದ ಮುಚ್ಚಬೇಕು.[9] ನಂತರ ಮಣ್ಣಿನ ಮೇಲೆ ಒಂದು ಕಲ್ಲಿನಿಂದ ಮಾಡಿದ ಬೃಂದಾವನವನ್ನು ಪ್ರತಿಷ್ಠೆ ಮಾಡಬೇಕು. ಆದರೆ ನಡುಗಡ್ಡೆಯಲ್ಲಿರುವ ನರಹರಿ ತೀರ್ಥರ ಬೃಂದಾವನವು ಪ್ರಾಯಃ ಬಂಡೆಯ ಮೇಲೆ ಇರುವುದರಿಂದ ಅಲ್ಲಿ ಯತಿಯ ದೇಹವನ್ನು ಭೂಸ್ಥಾಪನೆ ಮಾಡಲು ಅವಕಾಶವಿಲ್ಲ. ಕೆಲವು ವರುಷದ ಹಿಂದೆ ತಿಳಿಗೇಡಿಗಳು ಬೃಂದಾವನವನ್ನು ಹಾಳು ಮಾಡಿದಾಗ ಅದರಲ್ಲಿ ಯಾವ ಅಸ್ಥಿಯು ದೊರಕಲಿಲ್ಲ. ಅಂದಮೇಲೆ ಇದು ಯತಿಗಳ ಬೃಂದಾವನವಲ್ಲ ಎಂಬುದು ಖಚಿತವಾಗುತ್ತದೆ.

ಬೃಂದಾವನದ ಲಕ್ಷಣಗಳು

ಮಾಧ್ವಯತಿಯ ಬೃಂದಾವನದ ಲಕ್ಷಣಗಳು: ಬೃಂದಾವನದ ಲಕ್ಷಣ ಹಾಗೂ ಶೈಲಿಯು ಆಯಾ ಪ್ರದೇಶದಲ್ಲಿ ದೊರಕುವ ಕಲ್ಲು ಹಾಗೂ ಶಿಲ್ಪಿಯ ಮೇಲೆ ಅವಲಂಬಿತವಾಗಿರುತ್ತದೆ. ಹಂಪಿ ಹಾಗೂ ಆನೆಗೊಂದಿಯಲ್ಲಿ ದೊರಕುವ ಬೃಂದಾವನವು ಒರಟುಕಲ್ಲುಗಳಿಂದ ನಿರ್ಮಾಣಗೊಂಡಿವೆ. ಅದರಲ್ಲಿ ಮಾಧ್ವ ಯತಿಯ ಬೃಂದಾವನವು ಕೆಲವು ಲಕ್ಷಣಗಳಿಂದ ಕೂಡಿದೆ. ಮುಖ್ಯವಾಗಿ ನವ ಬೃಂದಾವನದಲ್ಲಿ ಕೆಲವು ಬೃಂದಾವನಗಳಿವೆ. ಮೂರು ತೆನೆಗಳು ಹಾಗೂ ನಾಲ್ಕು ತೆನೆಗಳಿಂದ ಕೂಡಿದೆ. ಸುಮಾರು 3, 4 ರಿಂದ 6 ಅಡಿಯ ತನಕ ಬೃಂದಾವನದ ಎತ್ತರವಿದೆ. ತೆನೆಗಳ ಮೇಲೆ ಯಾವುದೇ ತರಹದ ಚಿಹ್ನೆಗಳು ಕಂಡುಬರುವುದಿಲ್ಲ. ಕೆಲವು ಬೃಂದಾವನದ ಮಧ್ಯಭಾಗದಲ್ಲಿ ಕೃಷ್ಣ, ರಾಮ, ಹನುಮಂತ ನಿಂತಿರುವ ಗರುಡನ ಚಿತ್ರವಿರುತ್ತದೆ. ಅದರಲ್ಲಿ ವಿಶೇಷವಾಗಿ ವ್ಯಾಸರಾಜರ ಬೃಂದಾವನವು ಶಿಲ್ಪಕಲಾಕೃತಿಯಿಂದ ಆಕರ್ಷಣೀಯವಾಗಿದೆ. ಹಲವು ದೇವತೆಗಳ, ಕೆಲವೊಂದು ವ್ಯಕ್ತಿಯ ಉಬ್ಬು ಶಿಲ್ಪವಿದೆ, ಆನೆಗಳ ಸಾಲುಗಳಿವೆ, ಅನೇಕ ಚಿತ್ರಗಳಿಂದ ಕೂಡಿದೆ.

ಮಂತ್ರಾಲಯದಲ್ಲಿ ಇರುವ ರಾಘವೇಂದ್ರರ ಬೃಂದಾವನವು ಕಪ್ಪುಶಿಲೆಯಿಂದ ಕೂಡಿದ್ದು ನುಣುಪಾದ ಶಿಲೆಯಿಂದ ನಿರ್ಮಿಸಿದ್ದಾರೆ. ಪ್ರತಿಯೊಂದು ಭಾಗದಲ್ಲಿಯು ಆರು ತೆನೆಗಳಿಂದ ಕೂಡಿದೆ. ಬೃಂದಾವನ ಮಧ್ಯಭಾಗವು ಹೂವಿನ ಕಲಾಕೃತಿಯಿಂದ

ಕೂಡಿದೆ. ಇದೇ ಹಂಪಿಯಲ್ಲಿ ಇರುವ ರಘುನಂದನ ತೀರ್ಥರ ವೃಂದಾವನವು ಏಕಶಿಲೆಯಿಂದ ಕೂಡಿದ್ದು ಕೆಲವು ದೇವತೆಗಳ ಉಬ್ಬು ಚಿತ್ರವಿದೆ.

ಶ್ರೀ ವೈಷ್ಣವ ಯತಿಗಳ ಬೃಂದಾವನದ ಲಕ್ಷಣಗಳು

ನಂಜನಗೂಡಿನ ಸಮೀಪದ ಕಳಲೆಯಲ್ಲಿ ಇರುವ ಬೃಂದಾವನವು ಪ್ರತಿ ದಿಕ್ಕಿನಲ್ಲೂ ಮೂರು ತೆನೆಗಳಿಂದ ಕೂಡಿದ್ದು ಕೆಲವು ಮಾಧ್ವ ಯತಿಯ ಬೃಂದಾವನದಂತೆ ಸ್ವಲ್ಪ ಹೋಲುತ್ತದೆ. ಮಧ್ಯದ ತೆನೆಯ ಮೇಲೆ V ಆಕಾರದ ತಿರುನಾಮವಿದ್ದು ಅಕ್ಕಪಕ್ಕದ ತೆನೆಗಳ ಮೇಲೆ ಶಂಖ ಚಕ್ರವಿದೆ.[10] ಇದು ಸುಮಾರು 5 ರಿಂದ 6 ಅಡಿ ಎತ್ತರವಿದೆ. ಮೈಸೂರಿನಲ್ಲಿರುವ ಶ್ರೀ ವೈಷ್ಣವ ಪರಂಪರೆಯ ಪರಕಾಲ ಮಠದ ಬೃಂದಾವನವು ಎರಡು ರೀತಿಯಿಂದ ಕೂಡಿದೆ. ಒಂದು ಯತಿಯ ಮೂರ್ತಿಯ ರೂಪದಲ್ಲಿ ಇದೆ. ಇನ್ನೊಂದು ಬೃಂದಾವನ ಶೈಲಿಯಲ್ಲಿ ಇದೆ. ಈ ಬೃಂದಾವನದ ಹಲವು ತೆನೆಯ ಬದಲು ಬಹಳ ಅಗಲವಾಗಿ ಒಂದೆ ತೆನೆಯಿಂದ ಕೂಡಿದೆ. ಈ ತೆನೆಯ ಅಕ್ಕಪಕ್ಕದಲ್ಲಿ ಶಂಖಚಕ್ರವಿದ್ದು ಮಧ್ಯದಲ್ಲಿ U ಆಕಾರದ ನಾಮವಿದೆ. ಬೃಂದಾವನದ ಮಧ್ಯಭಾಗದಲ್ಲಿ ದಂಡ ಹಿಡಿದು ಕೂತಿರುವ ಯತಿಯ ಉಬ್ಬು ಶಿಲ್ಪವಿದೆ. ಈ ಬೃಂದಾವನವು ಕಪ್ಪು ಶಿಲೆಯಿಂದ ಕೂಡಿದೆ.[11]

ಹಿರಿಯೂರಿನಲ್ಲಿರುವ ಬೃಂದಾವನವು ಮೂರು ತೆನೆಯಿಂದ ಕೂಡಿದ್ದು, ಮಧ್ಯದ ತೆನೆಯ ಮೇಲೆ V ಆಕಾರದ ನಾಮವಿದೆ ಎಡಭಾಗದಲ್ಲಿ ಚಕ್ರವಿದೆ. ಬೃಂದಾವನದ ಮಧ್ಯಭಾಗದಲ್ಲಿ ಗಜಲಕ್ಷ್ಮಿಯ ಒಂದು ಶಿಲ್ಪವಿದೆ.[12]

ಎರಡೂ ಮಠದ ಬೃಂದಾವನಗಳಲ್ಲಿ ಇರುವ ಸಾಮ್ಯಗಳು ಮತ್ತು ವ್ಯತ್ಯಾಸಗಳು

ಮಾಧ್ವ ಪರಂಪರೆಯ ಬೃಂದಾವನ	ಶ್ರೀ ವೈಷ್ಣವ ಪರಂಪರೆಯ ಬೃಂದಾವನ
ಶಂಖ ಚಕ್ರಗಳು ಕೆಲವೊಂದಕ್ಕೆ ಇರುತ್ತದೆ	ಎಲ್ಲಾ ಬೃಂದಾವನಗಳಲ್ಲಿ ಶಂಖ ಚಕ್ರಗಳು ಇರುತ್ತದೆ
ಗಜಲಕ್ಷ್ಮಿ ಉಬ್ಬು ಶಿಲ್ಪ ಇರುವುದೇ ಇಲ್ಲ	ಗಜಲಕ್ಷ್ಮಿಯ ಉಬ್ಬುಶಿಲ್ಪ ಕೆಲವೊಂದು ಬೃಂದಾವನಕ್ಕೆ ಇರುತ್ತದೆ
ರಾಮ, ಕೃಷ್ಣ, ವಿಠ್ಠಲ, ನರಸಿಂಹ ಮುಂತಾದ ಮೂರ್ತಿಗಳ ಉಬ್ಬುಶಿಲ್ಪಗಳು ಕೆಲವೊಂದಕ್ಕೆ ಇರಬಹುದು	ರಾಮ, ಕೃಷ್ಣ, ವಿಠ್ಠಲ, ನರಸಿಂಹ ಮುಂತಾದ ಮೂರ್ತಿಗಳ ಉಬ್ಬು ಶಿಲ್ಪ ಕೆಲವೊಂದಕ್ಕೆ ಇಲ್ಲದಿರಬಹುದು

ತೆನೆಗಳಲ್ಲಿ ಹೆಚ್ಚು ಕಡಿಮೆ ಯಾಗಬಹುದು	ತೆನೆಗಳಲ್ಲಿ ಹೆಚ್ಚು ಕಡಿಮೆ ಯಾಗಬಹುದು
ಎತ್ತರದಲ್ಲಿ ಹೆಚ್ಚು ಕಡಿಮೆ ಯಾಗಬಹುದು	ಎತ್ತರದಲ್ಲಿ ಹೆಚ್ಚು ಕಡಿಮೆಯಾಗಬಹುದು
ಅಂಗಾರ, ಅಕ್ಷತೆಯ ಚಿನ್ಹೆ ತೆನೆಯ ಮೇಲೆ ಇರುವುದಿಲ್ಲ.	ತೆನೆಯ ಮೇಲೆ ನಾಮದ ಚಿನ್ಹೆ ಇದ್ದೇ ಇರುತ್ತದೆ
ನಿಂತಿರುವ ಗರುಡನಿಗೆ ಹೆಚ್ಚು ಪ್ರಾಧಾನ್ಯ ಪ್ರತಿಮೆಯ ರೂಪದ ಬೃಂದಾವನ ಇರುವುದಿಲ್ಲ	ವೀರಮಂಡಿಯಲ್ಲಿ ಕೂತಿರುವ ಗರುಡನಿಗೆ ಹೆಚ್ಚು ಪ್ರಾಧಾನ್ಯ ಪ್ರತಿಮೆಯ ರೂಪದ ಬೃಂದಾವನ ಹಾಗೂ ಸಾಮಾನ್ಯ ಬೃಂದಾವನದ ರೂಪದಲ್ಲಿ ಇರುತ್ತದೆ.

ಹಂಪೆಯ ಚಕ್ರತೀರ್ಥದಲ್ಲಿರುವ ನರಹರಿ ತೀರ್ಥರ ಬೃಂದಾವನದ ಲಕ್ಷಣಗಳು

ಇದು ಯಾವ ಮಾಧ್ವಯತಿಯ ವೃಂದಾವನ ಆಗಿರುವುದಕ್ಕೂ ಸಾಧ್ಯವಿಲ್ಲ. ಇದಕ್ಕೆ ಬಲವಾದ ಕಾರಣವಿದೆ. ಕೆಲವು ಬೃಂದಾವನಗಳಂತೆ ಇದರಲ್ಲಿಯು ಪ್ರತಿದಿಕ್ಕಿನಲ್ಲೂ ತೆನೆಗಳಿವೆ. ಮುಂಭಾಗದ ತೆನೆಯ ಮೇಲೆ ಶ್ರೀ ವೈಷ್ಣವ ಬೃಂದಾವನಕ್ಕೆ ಹೋಲುವ ಚಿತ್ರವಿದೆ ಗಮನಿಸಿ. ಅಂದರೆ ಮಧ್ಯದ ತೆನೆಯ ಮೇಲೆ U ಆಕಾರದ ನಾಮವಿದ್ದು[13] ಅದರ ಮಧ್ಯ ಒಂದು W ಗೆರೆಯಿದೆ.

ಶ್ರೀ ವೈಷ್ಣವ ಸಂಪ್ರದಾಯದ ಶ್ರೀ ನಾಮದಲ್ಲಿ 20 ತರಹದ ನಾಮವಿದೆ. ಇದು ತಿಂತ್ರಿಣಿ ಪತ್ರದ ಆಕಾರವಾಗಿದೆ. ಇಂಥ ನಾಮದ ಉದಾಹರಣೆಗಳನ್ನು ಹಲವು ಸ್ಥಳಗಳಲ್ಲಿ ಇರುವ ಬೃಂದಾವನವನ್ನು ಹಿಂದೆ ಹೇಳಿಯಾಗಿದೆ.

ಅಕ್ಕಪಕ್ಕದಲ್ಲಿ ಶಂಖ ಚಕ್ರವಿದೆ. ಈ ನಾಮದ ಕೆಳಗೆ ಒಬ್ಬ ಯತಿಯು ಕೂತಿರುವ ಉಬ್ಬು ಚಿತ್ರವಿದೆ.[14] ಬೃಂದಾವನದ ಹಿಂಭಾಗದ ತೆನೆಯ ಮೇಲೆ ಒಂದು ಹೂವಿನ ಚಿತ್ರ ಹಾಗೂ ಒಂದು ಮೀನಿನ ಚಿತ್ರವಿದೆ. ಬೃಂದಾವನದ ಮಧ್ಯ ಭಾಗ ದಲ್ಲಿ ರಾಮನ ಚಿತ್ರವಿದೆ. ಇನ್ನು ಮೂರು ಸ್ಥಳಗಳಲ್ಲಿ ಹನುಮಂತ, ವಿಠಲ ಕೂತಿ ರುವ ಗರುಡ ಮೂರ್ತಿಗಳ ಉಬ್ಬುಶಿಲ್ಪಗಳಿವೆ. ಆದ್ದರಿಂದಲೇ ಈ ಎಲ್ಲಾ ಕಾರಣ ಗಳಿಂದ ಮಾಧ್ವಯತಿಯ ಬೃಂದಾವನದ ಎನ್ನುವುದಕ್ಕಿಂತ ಶ್ರೀವೈಷ್ಣವ ಬೃಂದಾವನ ಎಂದೇ ಹೇಳುವ ಸಾಧ್ಯತೆಗಳಿವೆ. ಶ್ರೀ ವೈಷ್ಣವರಲ್ಲಿ ವೀರಮಂಡಿಯಲ್ಲಿ ಕುಳಿತಿರುವ ಗರುಡನ ಚಿತ್ರಕ್ಕೆ ಹೆಚ್ಚು ಪ್ರಾಧಾನ್ಯ. ನರಹರಿತೀರ್ಥರ ಬೃಂದಾವನದಲ್ಲಿ ಕುಳಿತಿರುವ ಗರುಡನ ಚಿತ್ರವಿದೆ.

ಇಲ್ಲಿ ಮತ್ತೊಂದು ಬಲವಾದ ಸಂಶಯವೇನೆಂದರೆ ನವಬೃಂದಾನದಲ್ಲಿಯೇ ಸಾಕಷ್ಟು ಸ್ಥಳಾವಕಾಶ ಇರಬೇಕಾದರೆ ನರಹರಿತೀರ್ಥರ ಬೃಂದಾವನವನ್ನು ಇಷ್ಟು ದೂರದಲ್ಲಿ ಏಕೆ ನಿರ್ಮಿಸಬೇಕು? ಈ ಬೃಂದಾವನ ಮಣ್ಣಿನ ಮೇಲೆ ನಿರ್ಮಿತ ವಾಗಿರದೆ ಕಲ್ಲುಬಂಡೆಯ ಮೇಲೆ ನಿರ್ಮಿತವಾಗಿದೆ. ಯತಿಯ ಶರೀರವಿಲ್ಲದೆ ಕಲ್ಲಿನ ಮೇಲೆ ಮೃತ್ತಿಕಾ ಬೃಂದಾವನ ನಿರ್ಮಿಸಿರುವ ಸಾಧ್ಯತೆಗಳೂ ಇಲ್ಲ. ಹಾಗಿದ್ದಲ್ಲಿ ಸಾಹಿತ್ಯಗಳಲ್ಲಿ ಉಲ್ಲೇಖವಾಗಿರಬೇಕಾಗಿತ್ತು. ನರಹರಿತೀರ್ಥರ ಕಾಲ ಹರವು 1248 ರಿಂದ 1303 ಎಂದು ಗುರುತಿಸಬಹುದು.[15] ಈ ಕಾಲ ಹರವು ನರಹರಿತೀರ್ಥರಿಗೆ ಸಂಬಂಧಪಟ್ಟ ಶಾಸನಗಳಿಂದ ತೆಗೆದುಕೊಂಡಿದೆ. ಈ ಶಾಸನಗಳು ಶ್ರೀ ಕೂರ್ಮ ಮತ್ತು ಸಿಂಹಾಚಲಂನಲ್ಲೇ ಹೆಚ್ಚು ದೊರಕುವುದರಿಂದ ಅವರ ಜೀವನವೆಲ್ಲಾ ಅಲ್ಲೇ ಕಳೆದಿರಬೇಕು. ಸಾಂಪ್ರದಾಯಿಕ ದಾಖಲೆಗಳ ಪ್ರಕಾರ ನರಹರಿತೀರ್ಥರು, ಮಾಧವತೀರ್ಥರಿಗೆ ಸಂಸ್ಥಾನ ವಹಿಸಿದರೆಂದು ಹೇಳುತ್ತದೆ. ಆದರೆ ಕೊನೆಯ ಸಮಯವನ್ನು ಹೇಳುವಲ್ಲಿ ವಿಫಲವಾಗಿದೆ. ಕ್ರಿ. ಶ. 25.11.1373 ಶುಕ್ರವಾರದ ಒಂದು ಶಾಸನದ ಪ್ರಕಾರ ನರಹರಿತೀರ್ಥರು ಒಂದು ಮಠವನ್ನು ಸ್ಥಾಪಿಸಿದ್ದರೆಂದು ಸ್ಪಷ್ಟಪಡಿಸುತ್ತದೆ ಆಂಧ್ರಪ್ರದೇಶದ ಸಿಂಹಾಚಲಂ ದೇವಾಲಯದಲ್ಲಿ 25.11.1373ರ ಶುಕ್ರವಾರ ಶಾಸನದ ಸಾರಾಂಶ ಹೀಗಿದೆ:

ನರಹರಿತೀರ್ಥರ ಮಠದ ಯತಿಗಳಾದ ಶ್ರೀ ಜಗನ್ನಾಥ ಶ್ರೀಪಾದಂಗಳು ಸಿಂಹಾಚಲದ ಶ್ರೀ ನರಸಿಂಹದೇವರ ಭಂಡಾರಕ್ಕೆ 12 ಚಿನ್ನದ ನಾಣ್ಯಗಳನ್ನು, 3 ಕುಡಿಕೆ ಮೊಸರು ಮತ್ತು 2 ಅಪೂಪಗಳನ್ನು ಪ್ರತಿದಿನವು ಸಮರ್ಪಿಸುವ ಸಲುವಾಗಿ ದಾನ ಕೊಟ್ಟ ವಿವರವಿದೆ. ಶಾಸನವು ನರಹರಿತೀರ್ಥರ ಮಠದ ಶ್ರೀ ಜಗನ್ನಾಥ ತೀರ್ಥರು ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ ಶ್ರೀ ನರಹರಿತೀರ್ಥರು ತಮ್ಮ ಹೆಸರಿನ ಮಠವೊಂದನ್ನು ಸ್ಥಾಪಿಸಿದ್ದರೆಂದು ಸ್ಪಷ್ಟಪಡಿಸುತ್ತದೆ.[16]

ಇಷ್ಟೆಲ್ಲಾ ಕಾರಣಗಳಿಂದ ನರಹರಿತೀರ್ಥರ ಶಿಷ್ಯರು ಬೃಂದಾವನವನ್ನು ಆಂಧ್ರಪ್ರದೇಶದ ವಿಶಾಖಪಟ್ಟಣಂ ಜಿಲ್ಲೆಯ ಸಿಂಹಾಚಲಂ ಅಥವಾ ಶ್ರೀ ಕೂರ್ಮದಲ್ಲಿ ಪ್ರದೇಶಗಳಲ್ಲೆ ನಿರ್ಮಿಸಿರುವ ಸಾಧ್ಯಗಳು ಹೆಚ್ಚಾಗಿದೆ.

ಆದ್ದರಿಂದ ಈಗ ನರಹರಿತೀರ್ಥರ ಬೃಂದಾವನವೆಂದು ಹೇಳುತ್ತಿರುವ ನರಹರಿ ತೀರ್ಥರ ಬೃಂದಾವನವಾಗಿರಲಾರದೆಂದು ಸ್ಪಷ್ಟವಾಗಿ ಹೇಳಬಹುದು. ಮಠಗಳು ಇನ್ನು ಮುಂದಾದರು ನರಹರಿತೀರ್ಥರ ಬೃಂದಾವನವನ್ನು ಶೋಧನೆ ಮಾಡಲಿ, ಈಗಿರುವ ವೃಂದಾವನದ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆಯಾಗಲಿ.

ಮಧ್ವಚಾರ್ಯರ ಮುಖ್ಯ ಸೂತ್ರವಾದ ಪ್ರತ್ಯಕ್ಷ, ಆಗಮ, ಅನುಮಾನ ಈ ಸೂತ್ರವನ್ನು ನರಹರಿತೀರ್ಥರ ಬೃಂದಾವನದ ಮೇಲೆ ಪ್ರಯೋಗ ಮಾಡಿದರೆ ನರಹರಿತೀರ್ಥರ ಬೃಂದಾವನದ ಸಂಶೋಧನೆ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

ಅಡಿಟಿಪ್ಪಣಿಗಳು


1. *ಜಯಮುನಿಗಳು*, ಎಂ. ಆರ್. ಅನಂತಪದ್ಮರಾವ್, ಪು. 42
2. ಅದೇ, ಪು. 44
3. *ಜನಪ್ರಿಯ ಭಜನ ಸಂಪುಟ*, ಪ್ರಧಾನ ಸಂಪಾದಕರು: ಅರಳು ಮಲ್ಲಿಗೆ ಪಾರ್ಥಸಾರಥಿ, ಗುರುಸಾರ್ವಭೌಮ ವಿದ್ಯಾಪೀಠ, ಮಂತ್ರಾಲಯ, ಪು. 279
4. ಅದೇ, ಪು. 229
5. *ತೀರ್ಥಪ್ರಬಂಧ*, ಅನುವಾದ; ಭೀಮಭಟ್ಟರು, ಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ಪು. 223
6. ಅದೇ, ಪು. 225
7. ಅದೇ, ಪು. 227
8. *ಗರುಡಪುರಾಣ*, ಕಾಪು ಹಯಗ್ರೀವಾಚಾರ್ಯ, ಪು. 89
9. *ಧರ್ಮಾಶಾಸ್ತ್ರಕರದೀಪಿಕಾ*, ವಿದ್ವಾನ್ ಕೆ. ಕೃಷ್ಣಜೋಯಿಸ್, ಪ್ರಕಾಶನ ಶಾರದಾ ಟ್ರಸ್ಟ್ ಶೃಂಗೇರಿ, ಪು. 219
10. ಕಳಲೆ ಬೃಂದಾವನ ಚಿತ್ರ
11. ಪರಕಾಲ ಮಠದ ಬೃಂದಾವನ
12. ಹಿರಿಯೂರು ಶ್ರೀ ವೈಷ್ಣವ ಬೃಂದಾವನದ ಚಿತ್ರ
13. *ಶ್ರೀ ವೈಷ್ಣವ ಚರಿತ್ರೆ*, ಜಿ. ವರದರಾಜು, ತಿರುಮಲೆ, ಪು. 489
14. ನರಹರಿತೀರ್ಥ ವೃಂದಾವನದ ಚಿತ್ರ
15. *ಮಾಧ್ವ ಮಠಗಳ ಶಾಸನಗಳು*, 2 ಡಾ. ಕೆ. ಜಿ. ಗೋಪಾಲಕೃಷ್ಣರಾವ್ ಮತ್ತು ಡಾ. ಎಮ್. ಜಿ. ಮಂಜುನಾಥ, ಶ್ರೀ ರಾಘವೇಂದ್ರಸ್ವಾಮಿ ಮಠ, ಮಂತ್ರಾಲಯ, ಪು. 18
16. ಅದೇ, ಪು. 31



ಬೃಂದಾವನದ ಮೇಲಿರುವ ಶ್ರೀರಾಮ



ಬೃಂದಾವನದ ಮೇಲಿರುವ ಊರ್ಧ್ವ ತ್ರಿಪುಂಡ್ರ



ಶ್ರೀ ವೈಷ್ಣವ ಸ್ವಾಮೀಜಿ ಅವರ ಬೃಂದಾವನ



ಹಿರಿಯೂರಿನಲ್ಲಿನ ಶ್ರೀ ವೈಷ್ಣವ ಸ್ವಾಮೀಜಿ ಅವರ ಬೃಂದಾವನ



ಬೃಂದಾವನದ ಮೇಲಿರುವ ಗರುಡ



ಬೃಂದಾವನದ ಮೇಲಿರುವ ಆಂಜನೇಯ



ಪರಕಾಲ ಮಠದ ಸ್ವಾಮೀಜಿ



ಪರಕಾಲ ಮಠದ ಸ್ವಾಮೀಜಿ ಅವರ ಬೃಂದಾವನ

೨೪. ಪಂಪಾತೀರ್ಥದ ಹಂಪಾದೇವಿ

ಡಾ. ವಾಸುದೇವ ಬಡಿಗೇರ

ಹಂಪಿ ಮತ್ತು ಆನೆಗುಂದಿ ಪರಿಸರದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟ-ಗವಿಗಳಿಂದ, ಫಲವತ್ತಾದ ಭೂಮಿ ಮತ್ತು ನೀರಿನ ಸರಬರಾಜುಗಳಿಂದಾಗಿ ಪ್ರಾಗಿತಿಹಾಸ ಕಾಲದಿಂದಲೇ ಮಾನವನಿಗೆ ವಸತಿ ನೆಲೆಯಾಗಿತ್ತು. ಈ ಪರಿಸರದ ಹೊಸಪೇಟೆ- ಸಂಡೂರು ಬೆಟ್ಟಗಳಲ್ಲಿ ಲಭ್ಯವಿರುವ ಕಬ್ಬಿಣದ ಅದಿರಿನಿಂದ ನಿತ್ಯದ ಉಪಯೋಗಕ್ಕೆ ಬೇಕಾಗುವ ಉಪಕರಣಗಳನ್ನು ತಯಾರಿಸಲು ಅನುಕೂಲವಾಯಿತು. ಇದರಿಂದಾಗಿ ನವಶಿಲಾ ಮತ್ತು ಕಬ್ಬಿಣ ಬೃಹತ್‌ಶಿಲಾ ಸಂಸ್ಕೃತಿಗಳ ಕಾಲದಲ್ಲಿ ಮಾನವನ ಬದುಕು ಅನೇಕ ಬದಲಾವಣೆಗಳಿಂದ ಅಭಿವೃದ್ಧಿಯತ್ತ ಸಾಗಿತು. ಒಂದೆಡೆ ಪಂಪಾತೀರ್ಥವೆಂದು ಇನ್ನೊಂದೆಡೆ ಕಿಷ್ಕಿಂಧವೆಂದು ಈ ಕ್ಷೇತ್ರ ಹೆಸರು ಪಡೆಯಿತು. ಈ ಹಿನ್ನೆಲೆಯಲ್ಲಿ ಮೂರ್ತರೂಪ ತಳೆದ ದೇವಿ-ದೇವರ ಕಲ್ಪನೆ ಮುಂದಿನ ಹಂತದಲ್ಲಿ ಧಾರ್ಮಿಕ ಪ್ರಗತಿಗೆ ಕಾರಣವಾಯಿತಿ. ಸುಮಾರು ಎರಡು ಸಾವಿರ ವರ್ಷಗಳ ಹಿಂದಿನಿಂದ ಹಂಪಿ, ಪುಣ್ಯಕ್ಷೇತ್ರವೆಂದು ಹೆಸರುವಾಸಿಯಾಯಿತು. ಈ ಕ್ಷೇತ್ರದ ಮುಖ್ಯ ದೇವತೆ ಹಂಪಾದೇವಿ. ಇವಳನ್ನು ಮದುವೆಯಾಗುವ ಮೂಲಕ ವಿರೂಪಾಕ್ಷ ಈ ಕ್ಷೇತ್ರದ ಅಧಿಪತಿಯಾದ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ವರೇಗೂ ವಿರೂಪಾಕ್ಷನ ಒಡೆತನದಲ್ಲಿ ಮಹಾಮಂಡಳೇಶ್ವರರು ಇಲ್ಲವೆ ಅಧಿಕಾರಿಗಳು ಇದನ್ನು ಪ್ರತಿಪಾಳಿಸುತ್ತ ಬಂದರು.

14ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಟರಿಗೆ ಈ ಕ್ಷೇತ್ರ ರಾಜಧಾನಿ ಯಾಯಿತು. ಇದರಿಂದ ಹಂಪಿ, ಇಡೀ ಭಾರತದಲ್ಲಿ ಹೆಸರು ಪಡೆಯಿತು. ವಿಜಯ ನಗರ ಕಾಲದಲ್ಲಿ ಮೊದಲಿದ್ದ ದೇವಾಲಯಗಳ ಜೀರ್ಣೋದ್ಧಾರ ಮಾಡಲಾಯಿತು. ಅಲ್ಲದೇ ಹೊಸದಾಗಿ ಅನೇಕ ದೇವಾಲಯಗಳನ್ನು ನಿರ್ಮಿಸುವ ಮೂಲಕ ಶೈವದೊಂದಿಗೆ ವೈಷ್ಣವ ಮತ್ತು ಜೈನ ಧರ್ಮಗಳು ಬೆಳವಣಿಗೆಯಾದವು. ರಾಜಕೀಯ ಚಟುವಟಿಕೆಗಳಿಂದಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ವಲಯಗಳು ವಿಸ್ತರಣೆ ಯಾಗುವ ಮೂಲಕ ಸಾಂಸ್ಕೃತಿಕ ಪ್ರಗತಿಯಾಯಿತು. ವಿರೂಪಾಕ್ಷನ ಕ್ಷೇತ್ರ ಇಂದಿನ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಆವರಿಸಿಕೊಂಡಿರುವುದರಿಂದ ಈ ಎರಡೂ ಪ್ರದೇಶಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ.

ಪಂಪಾಕ್ಷೇತ್ರ

ಸ್ಕಂದ ಪುರಾಣದ ಪಂಪಾ ಮಹಾತ್ಮೆಯ ಉಲ್ಲೇಖದಂತೆ ಕೃತಯುಗದಲ್ಲಿ ವಿರೂಪಾಕ್ಷನು ಪಂಪಾ ಕ್ಷೇತ್ರದಲ್ಲಿ ನೆಲೆಸಿದ್ದಾನೆ. ಜನಪದರು ಈ ಪಂಪಾ ಕ್ಷೇತ್ರವನ್ನು ಇಂದಿನ ಹಂಪಿ–ಆನೆಗುಂದಿ ಪ್ರದೇಶದಲ್ಲಿ ಗುರುತಿಸುವ ಮೂಲಕ ಪಂಪಾ ಮತ್ತು ವಿರೂಪಾಕ್ಷನಿಗೆ ಸಂಬಂಧಿಸಿದ ಅನೇಕ ಆಚರಣೆಗಳು ಪ್ರಾಚೀನ ಕಾಲದಿಂದ ನಡೆದು ಬಂದಿವೆ. ಸ್ಥಳೀಯ ಪುರಾಣ ಪಂಪಾಮಹಾತ್ಮೆಯಲ್ಲಿ ಮಾಲ್ಯವಂತಗಿರಿ, ಋಷ್ಯ ಮೂಖ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬುನಾಥಗಿರಿ, ಸೋಮಪರ್ವತ, ವಾಣಿಭದ್ರೇಶ್ವರ ಪರ್ವತ, ಪಂಪಾ ಸರೋವರಗಳು ವಾಲ್ಮೀಕಿ ರಾಮಾಯಣದಲ್ಲಿ ಬರುವ ಹೆಸರುಗಳಿಗೆ ಪೂರಕವಾಗಿವೆ. ವಾಲ್ಮೀಕಿ ರಾಮಾಯಣ ದಲ್ಲಿ ಉಲ್ಲೇಖವಾದ ಕಾರ್ತಿಕೇಯವನ ಕುಡತಿನಿ–ಸಂಡೂರು ಪ್ರದೇಶವಾಗಿತ್ತು.

ಇಲ್ಲಿಯ ತುಂಗಭದ್ರಾ ದಂಡೆಯ ಮೇಲೆ ಪಂಪಾವನ, ಮಾನಸ ಸರೋವರ, ಹತ್ತಿರದ ಬೆಟ್ಟದಲ್ಲಿ ಶಬರಿಗುಹೆ, ಅಂಜನಾದ್ರಿ, ಆನೆಗುಂದಿ ಹತ್ತಿರ ಬಲಮುರಿ ಸಾಲಿನ ಒಂದು ಭಾಗ ವಾಲಿಭಂಡಾರ ಹಾಗೂ ನದಿಯ ಇನ್ನೊಂದು ಭಾಗದಲ್ಲಿ ಸುಗ್ರೀವಗುಹೆ, ಸೀತೆಸೆರಗು, ಮತಂಗ ಪರ್ವತ, ಹೇಮಕೂಟ, ರತ್ನಕೂಟ ಮೊದಲಾದವುಗಳು ಕಂಡುಬರುತ್ತವೆ. ಹೀಗಾಗಿ ಪಂಪಾಕ್ಷೇತ್ರ ಅಥವಾ ಕಿಷ್ಕಿಂಧ ಕ್ಷೇತ್ರವು ಈಗಿನ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಯನ್ನು ಆವರಿಸಿಕೊಂಡಂತೆ ಗುರುತಿಸಬಹುದಾಗಿದೆ.

ಹಂಪಿಯಿಂದ ಹತ್ತು ಕಿ.ಮೀ. ದೂರದಲ್ಲಿರುವ ದೇವಿಘಾಟ್ ಎಂಬಲ್ಲಿಯ ಕ್ರಿ.ಶ. 1079ರ ಶಾಸನದಲ್ಲಿ ತುಂಗಭದ್ರ ತಟದ ಬಡಗ ಕಿಷ್ಕಿಂಧಾಮಿ ಪರ್ವತಂ ಎಂಬ ಉಲ್ಲೇಖವಿದೆ.[೧] ಬೆಳಗಾವಿ ಜಿಲ್ಲೆಯ ಸೌದತ್ತಿ ತಾಲೂಕಿನ ಶಿರಸಂಗಿ ಕಾಳಮ್ಮ ದೇವಾಲಯದಲ್ಲಿರುವ ಕ್ರಿ.ಶ. 1186ರ ಶಾಸನದಲ್ಲಿ ಪೂರ್ವ ಪಶ್ಚಿಮ ವಿಸ್ತಾರವಾದ ಭೂಮಿಗೆ ಹಿಮವತ್ಪರ್ವತ, ವಿದ್ಯ, ಕಿಷ್ಕಿಂಧ ಈ ಮೂರು ಪರ್ವತಗಳು ಉನ್ನತವಾದವು. ಇವುಗಳಲ್ಲಿ ಅತ್ಯಂತ ಶ್ರೇಷ್ಠವಾದುದು ಉತ್ತಮವಾದುದು ಎಂದರೆ ಕಿಷ್ಕಿಂಧಗಿರಿ. ಇದು ಜನನಿಬಿಡವಾದ ಪ್ರದೇಶವಾಗಿತ್ತು. ಅದರಲ್ಲಿ ವಾಲಿ, ಮರುತ್ಸ, ಅಂಗದ, ದಿನೇಶ, ಮತಂಗ, ಹಂಸ, ಕಪಿಲ, ಶಾರ್ಗ, ಅಗಸ್ತ್ಯ, ವಿಭಾಡಕನ ಪುತ್ರ ಋಷ್ಯಶೃಂಗ ಮೊದಲಾದ ಋಷಿಗಳಿಗೆ ಆಶ್ರಯ ಸ್ಥಾನವಾಗಿತ್ತು ಎಂದು ಕಿಷ್ಕಿಂಧೆ ಯನ್ನು ವರ್ಣಿಸಲಾಗಿದೆ.[೨]

ಈ ಉಲ್ಲೇಖದಿಂದ ಹಂಪಿ–ಆನೆಗುಂದಿ ಪರಿಸರವನ್ನು ಬಹು ಹಿಂದಿನಿಂದ ಕಿಷ್ಕಿಂಧ ಕ್ಷೇತ್ರವೆಂದು ಕರೆದಿರುವುದು ತಿಳಿಯುತ್ತದೆ. ಶ್ರೀಮತ್ ವಾಲ್ಮೀಕಿ ರಾಮಾಯಣದ ಕಿಷ್ಕಿಂಧ ಕಾಂಡದಲ್ಲಿ ಬರುವ ಸನ್ನಿವೇಶಗಳಿಗೆ ತಕ್ಕಂತೆ ಇಲ್ಲಿಯ

ಸ್ಥಳಗಳನ್ನು ಪರಿಚಯಿಸಿ, ಆದಿಮಾನವನು ಬಿಟ್ಟುಹೋದ ಅನೇಕ ಅವಶೇಷಗಳನ್ನು ಅಲ್ಲಿಯ ಪ್ರಮುಖ ಘಟನೆಗಳಿಗೆ ಮತ್ತು ವ್ಯಕ್ತಿಗಳಿಗೆ ಹೋಲಿಕೆ ಕೊಟ್ಟು ಜನಮನದಿಂದ ದೂರವಾಗದಂತೆ ಮೌಖಿಕ ಪರಂಪರೆ ರೂಪಗೊಂಡಿತು. ಇದು ಶಾಸನಗಳಲ್ಲೂ ಉಲ್ಲೇಖವಾಗಿ, ವಿಜಯನಗರ ಕಾಲದಲ್ಲಿ ನಿರ್ಮಾಣವಾದ ವಾಸ್ತು ಶಿಲ್ಪಕಲೆಯಲ್ಲಿ ಅನೇಕ ಸನ್ನಿವೇಶಗಳನ್ನು ಅಳವಡಿಸಲಾಯಿತು.

ರಾಮಾಯಣದ ಅಯೋಧ್ಯ, ಚಿತ್ರಕೂಟ, ಪಂಚವಟಿ, ಮಾರಿಚಾಶ್ರಮ, ಕಿಷ್ಕಿಂಧ, ಲಂಕಾ ಮೊದಲಾದ ಸ್ಥಳಗಳ ಭೌಗೋಳಿಕ ಪರಿಸರ, ಶ್ರೀರಾಮ-ಲಕ್ಷ್ಮಣ-ಸೀತಾ ಇವರ ವನವಾಸ ಮಾರ್ಗಗಳನ್ನು ಅಧ್ಯಯನದ ಆಧಾರದ ಮೇಲೆ ರಾಮದಾಸ್ (1927), ಸರ್ದಾರ ಕೈಬ್ (1928), ರಾಮದಾಸ್ ಹೀರಾಲಾಲ್ (1932), ಪರಮಶಿವ ಅಯ್ಯರ್ (1940), ಯು.ಪಿ. ಷಾಹ (1972), ಸಾಂಕಾಲಿಯಾ (1973) ಅವರೆಲ್ಲರೂ ನರ್ಮದಾ ನದಿಯಿಂದ ಉತ್ತರ ಭಾಗವನ್ನು ಗುರುತಿಸುತ್ತಾರೆ. ಕಿಷ್ಕಿಂಧ ಕಾಂಡದಲ್ಲಿ ಉಲ್ಲೇಖವಾದ ಪರಿಸರ ಮತ್ತು ಅದರಲ್ಲಿರುವ ಹೆಸರಿನ ಸ್ಥಳಗಳನ್ನು ಕುರಿತು ಭಿನ್ನಾಭಿಪ್ರಾಯಗಳಿವೆ. ಉತ್ತರ ಭಾರತದ ಬಹುತೇಕ ವಿದ್ವಾಂಸರು ಹಂಪಿಯನ್ನು ಹೇಳದೆ, ವಿಂದ್ಯಪರ್ವತದಲ್ಲಿರುವ ಸ್ಥಳಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖವಾದ ಕಿಷ್ಕಿಂಧಾ, ಪಂಪಾಸರೋವರ, ಋಷ್ಯಮೂಕ ಮತ್ತು ಮತಂಗಾಶ್ರಮ ಮೊದಲಾದವು ಹಂಪಿಯಲ್ಲಿರುವುದು ಗಮನಾರ್ಹ. ಪಂಪಾಸರೋವರದ ಹತ್ತಿರ ಸುಗ್ರೀವನ ನೆಲೆಯಾದ ಕಿಷ್ಕಿಂಧ ನಗರವಿತ್ತು. ಇದಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ಹಂಪಿ - ಆನೆಗುಂದಿ ಪರಿಸರದಲ್ಲಿ ಇರುವುದರಿಂದ ಪ್ರಾಚೀನ ಕಾಲದಿಂದ ಪಂಪಾಸರೋವರದ ಪ್ರದೇಶವು ಪಂಪಾಕ್ಷೇತ್ರವೆಂದು ಹೆಸರಾಗಿದೆ. ಈ ಪಂಪಾಕ್ಷೇತ್ರವು ಶಾಸನಗಳಲ್ಲಿ ಉಲ್ಲೇಖವಾಗಿ, ಸಾಹಿತ್ಯಗಳಲ್ಲಿ ವರ್ಣಿಸಲ್ಪಟ್ಟಿದೆ.

ಪಂಪಾತೀರ್ಥದ ಪಂಪಾಂಬಿಕೆ

ಪಂಪಾಸರೋವರದಲ್ಲಿ ನೆಲೆಸಿದ್ದು ಪಂಪಾದೇವಿ. ಹಂಪಿಗೆ ಪಾವಿತ್ರ್ಯತೆ ಬರಲು ಪೌರಾಣಿಕ ಹಿನ್ನೆಲೆ ಬಹು ಮುಖ್ಯವಾದುದು. ಇಲ್ಲಿಯ ಸ್ಥಳಪುರಾಣದಲ್ಲಿ ಬ್ರಹ್ಮನ ಮಗಳಾದ ಪಂಪಾದೇವಿ ಶಿವನನ್ನು ಮದುವೆಯಾಗಲು ಹೇಮಕೂಟದ ಉತ್ತರ ಕ್ಕಿರುವ ಅರ್ಧಕೋಶ ದೂರದಲ್ಲಿ ವಿಪ್ರಕೂಟವೆಂಬ ಪರ್ವತದ ಬಳಿಯ ಸರೋವರದ ದಡದಲ್ಲಿ ಉಗ್ರವಾದ ತಪಸ್ಸನ್ನು ಆಚರಿಸುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವ ಅವಳ ಇಚ್ಛೆಯಂತೆ ಮದುವೆಯಾಗಿ ಪಂಪಾಪತಿ ಎನಿಸಿಕೊಳ್ಳುತ್ತಾನೆ. ಈ ಸ್ಥಳವನ್ನು ಪಂಪಾಕ್ಷೇತ್ರವೆಂದು ಕರೆದು, ಅವಳು ತಪಸ್ಸುಮಾಡಿದ ಸ್ಥಳವನ್ನು ಪಂಪಾಸರೋವರವೆಂದು ಖ್ಯಾತಿಯಾಗಲೆಂದು ವರ ಕೊಡುತ್ತಾನೆ. ಇಲ್ಲಿ

ಮುಖ್ಯವಾದ ಸ್ಥಾನ ಪಂಪಾದೇವಿಗೆ ಸಲ್ಲುತ್ತದೆ. ಅವಳನ್ನು ವರಿಸಿದ ಗಂಡಿನ ಹೆಸರು ಪಂಪಾಪತಿಯಾಯಿತು. ನಂತರ ಇದು ಪಂಪಾಕ್ಷೇತ್ರ, ಪಂಪಾತೀರ್ಥವೆಂದು ಹೆಸರಾಯಿತು.[೩] ಈ ಕ್ಷೇತ್ರದಲ್ಲಿ ಮನ್ಮಥತೀರ್ಥ, ಬ್ರಹ್ಮತೀರ್ಥ, ಸೋಮ ಸೂರ್ಯತೀರ್ಥ, ಚಕ್ರತೀರ್ಥ ಮೊದಲಾದವುಗಳಿವೆ.

ಪಂಪಾದೇವಿಯ ಮೂಲ ನೆಲೆಯ ಬಗ್ಗೆಯೂ ಭಿನ್ನಾಭಿಪ್ರಾಯಗಳಿವೆ. ಚಿದಾನಂದಮೂರ್ತಿಯವರು ಬ್ರಹ್ಮನ ಮಾನಸಪುತ್ರಿಯಾದ ಪಂಪಾದೇವಿಯು ಮೊದಲು ತಪಸ್ಸುಮಾಡಿದ್ದು ಪಂಪಾಸರೋವರದ ದಡದಲ್ಲಾದ್ದರಿಂದ ಅದೇ ಕೆಲವರ ಪ್ರಕಾರ ಆದಿ ಪಂಪಾ ಕ್ಷೇತ್ರ. ಪಂಪಾದೇವಿಯು ವಿರೂಪಾಕ್ಷನ ಕೈಹಿಡಿದ ಮೇಲೆ ಈಗಿನ ವಿರೂಪಾಕ್ಷನ ಸಮೀಪ ನೆಲೆಸಿದಳು. ಆ ಕಾರಣ ಹಿರಿಯ ಪಂಪಾ ದೇವಿಯು ಸರೋವರ ದಡದ ಹಂಪಮ್ಮ. ಕಿರಿಯ ಹಂಪಾದೇವಿಯು ವಿರೂಪಾಕ್ಷ ದೇವಾಲಯದ ಆವರಣದ ಪಂಪಾಂಬಿಕೆ.[೪] ದೇವರಕೊಂಡಾರೆಡ್ಡಿ ಅವರು ಪ್ರಾಚೀನ ಪಂಪಾತೀರ್ಥವು ಈಗಿನ ಚಕ್ರತೀರ್ಥವೇ ಆಗಿತ್ತು. ಬಾಲಪಂಪಾ ದೇವಾಲಯವು ತಕ್ರತೀರ್ಥದ ಬಳಿ ಇತ್ತು. ಪಂಪಾಸರೋವರವು ವಿಜಯ ನಗರೋತ್ತರ ಕಾಲದಲ್ಲಿ ಪ್ರಸಿದ್ಧಿಗೆ ಬಂದದ್ದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೫]

ಈ ಇಬ್ಬರೂ ವಿದ್ವಾಂಸರ ಅಭಿಪ್ರಾಯಗಳು ವಿರುದ್ಧವಾಗಿರುವುದನ್ನು ಗಮನಿಸ ಬಹುದು. ಪಂಪಾತೀರ್ಥವು ಈಗಿನ ಚಕ್ರತೀರ್ಥವೇ ಆಗಿತ್ತೆನ್ನುವುದಕ್ಕೆ ಕೆಲವು ಕಾರಣಗಳನ್ನು ನೀಡಿದ್ದಾರೆ. ಆದರೆ ಪಂಪಾಸರೋವರವು ವಿಜಯನಗರೋತ್ತರ ಕಾಲದಲ್ಲಿ ಪ್ರಸಿದ್ಧಿಗೆ ಬಂದಿತೆಂದು ಹೇಳಿದ್ದಾರೆ. ಇದಕ್ಕೆ ಸ್ಪಷ್ಟವಾದ ಕಾರಣಗಳನ್ನು ನೀಡಿಲ್ಲ. ಈಗಿರುವ ಪಂಪಾವನದಲ್ಲಿ ಜನವಸತಿ ಇಲ್ಲ. ಸುತ್ತಮುತ್ತಲಿನ ಜನರು ಪಂಪಾತೀರ್ಥಕ್ಕೆ ಬಂದು ಪೂಜೆ ಸಲ್ಲಿಸುತ್ತಾರೆ. ವಿಜನಗರಪೂರ್ವ ಮತ್ತು ವಿಜಯ ನಗರೋತ್ತರ ಕಾಲದಲ್ಲಿ ವಿರೂಪಾಕ್ಷನ ಆರಾಧನೆ ನಡೆದು ಬಂದಿದೆ. ಹೀಗಿದ್ದೂ ಪಂಪಾತೀರ್ಥವನ್ನು ಹೊಸದಾಗಿ ಹುಟ್ಟುಹಾಕಲಾಗಿದೆ ಎಂಬ ಹೇಳಿಕೆ ಸಮಂಜಸ ವಾದುದಲ್ಲ.

ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಆನೆಗುಂದಿ ಹತ್ತಿರ ನೈಸರ್ಗಿಕ ವಾದ ಬೆಟ್ಟದ ಆಶ್ರಯದಲ್ಲಿರುವ ಪಂಪಾತೀರ್ಥ ಜನಪದರಲ್ಲಿ ಇಂದಿಗೂ ಪವಿತ್ರವಾದುದು. ಇಲ್ಲಿರುವುದು ಜಯಲಕ್ಷ್ಮೀ ಮತ್ತು ಈಶ್ವರ ದೇವಾಲಯಗಳು. ಜಯಲಕ್ಷೀ ಎನ್ನುವ ಹೆಸರು ಗೌಣವಾಗಿ, ಪಂಪಾತೀರ್ಥದ ಪಂಪಾದೇವಿಯೇ ಪ್ರಮುಖವಾಗಿ ಕಾಣಿಸುತ್ತಾಳೆ. ಆದ್ದರಿಂದ ಪಂಪಾದೇವಿ ಎಂಬ ಹೆಸರು ಜಯಲಕ್ಷ್ಮೀ ಯಾಗಿ ಇತ್ತೀಚೆಗೆ ಬದಲಾದಂತೆ ತೋರುತ್ತದೆ.

ಈ ದೇವಾಲಯಗಳ ಮುಂಭಾಗದಲ್ಲಿ ವಿಶಾಲವಾದ ಪಂಪಾತೀರ್ಥಕ್ಕೆ ಮೆಟ್ಟಲುಗಳಿಂದ ಕೂಡಿದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಅದರ ಉತ್ತರ ಭಾಗದಲ್ಲಿ ಮಾನಸತೀರ್ಥವೆಂದು ಕರೆಯುವ ಚಿಕ್ಕ ಕೊಳವಿದೆ. ತಪಸ್ಸಿಗೆ ಹೋಗುವಾಗ ಪಂಪಾದೇವಿ ಇದರಲ್ಲಿ ಸ್ನಾನ ಮಾಡಿ ಮನಸನ್ನು ಶುದ್ಧಗೊಳಿಸಿ ಕೊಳ್ಳುತ್ತಿದ್ದಳೆಂಬ ಪ್ರತೀತಿ ಇದೆ. ಪಂಪಾತೀರ್ಥದ ದಕ್ಷಿಣ ಭಾಗದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನಂತರ ದಕ್ಷಿಣಕ್ಕೆ ಹರಿದು ತುಂಗಭದ್ರೆಯನ್ನು ಸೇರುವ ಒಂದು ಹಳ್ಳವಿದೆ. ಸ್ಥಳೀಯರು ಇದನ್ನು ಪಂಪಾಸರೋವರವೆಂದು ಕರೆಯುತ್ತಾರೆ. ಅದರಂತೆ ತುಂಗಭದ್ರಾ ನದಿಯನ್ನು ಹಂಪಿ ಹೊಳೆ ಎಂದು ಕರೆಯುತ್ತಾರೆ. ಆದ್ದರಿಂದ ಪಂಪಾಸರೋವರ ತುಂಭದ್ರಾ ನದಿಯಾಗಿತ್ತೇ ಅಥವಾ ಈ ಹಳ್ಳವಾಗಿತ್ತೇ ಎಂಬ ಪ್ರಶ್ನೆಯುಂಟಾಗುತ್ತದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳು ಪಂಪಾತೀರ್ಥ ಮತ್ತು ನದಿಯನ್ನು ಉಲ್ಲೇಖಿಸುತ್ತವೆ.

ಬಾದಾಮಿ ಚಾಲುಕ್ಯ ಅರಸ ವಿನಯಾದಿತ್ಯನ ಕ್ರಿ.ಶ. 686ರ ತಾಮ್ರಪಟ ಶಾಸನದಲ್ಲಿ ಪಂಪಾತಟಮಧಿವಸಾತಿ ವಿಜಯಸ್ಕಂಧಾವರೆ ಎಂಬ ಉಲ್ಲೇಖವಿದೆ.[೬] ಇದರಿಂದ ಚಾಲುಕ್ಯರು ವಿಜಯದ ಬೀಡಾರವನ್ನು ಪಂಪಾನದಿಯ ದಂಡೆಯ ಮೇಲೆ ಬಿಡಲಾಗಿತ್ತೆಂದು ತಿಳಿಯುತ್ತದೆ. ಅದರ ನಂತರ ಕಲ್ಯಾಣ ಚಾಲುಕ್ಯ ಐದನೇ ವಿಕ್ರಮಾದಿತ್ಯನ ಕ್ರಿ.ಶ. 1014ರಲ್ಲಿ ಅವನ ಸಾಮಂತ ಇರಿವನೊಳಂಬ ಮತ್ತು ದಿವಬ್ಬರಸಿಯರು ಪಂಪಾತೀರ್ಥದ ಮಹಾಕಾಳ ದೇವರಿಗೆ ದಾನ ನೀಡಾದ್ದಾರೆ.[೭] ಕ್ರಿ.ಶ. 1018ರಲ್ಲಿ ಕಂಪಿಲಿಯಿಂದ ಆಳ್ವಿಕೆ ಮಾಡುತ್ತಿದ್ದ ನೊಳಂಬ ಪಲ್ಲವ ಉದಯಾದಿತ್ಯದೇವನು ಉತ್ತರಾಯಣ ಸಂಕ್ರಾಂತಿಯ ಪುಣ್ಯಕಾಲದಂದು ಪಂಪಾತೀರ್ಥಕ್ಕೆ ಬಂದು ಸೋಮಸಿಂಗ ಭಳಾರರ ಪಾದ ತೊಳೆದು ಬಾಗಳಿಯ ಕಲಿದೇವರಿಗೆ ದಾನ ಬಿಟ್ಟಿದ್ದಾನೆ.[೮]

ಕ್ರಿ.ಶ. 1046ರಲ್ಲಿ ನನ್ನಿನೊಳಂಬ ಪಲ್ಲವ ಪೇರ್ಮಾನಡಿದೇವನ ದಂಡನಾಯಕ ತಿಕ್ಕಣ್ಣ ಮತ್ತು ಲೆಂಕಸಾಸಿರ್ವರು ಮೊರಗೇರಿಯಲ್ಲಿಯ ಭೂಮಿಯನ್ನು ಬಲ್ಲವರಸರಿಂದ ಪಡೆದು ವಿರೂಪಾಕ್ಷದೇವರ ಸಮಕ್ಷಮದಲ್ಲಿ ನೊಳಂಬೇಶ್ವರ ದೇವರಿಗೆ ಮತ್ತು ವಿದ್ಯಾಭ್ಯಾಸಕ್ಕಾಗಿ ದಾನ ಕೊಟ್ಟಿದ್ದಾರೆ.[೯] ಕ್ರಿ.ಶ. 1163ರಲ್ಲಿ ಕಲಚುರಿ ಬಿಜ್ಜಳ ಅರಸನು ವಿರೂಪಾಕ್ಷನ ಸನ್ನಿದಾನದಲ್ಲಿ ಮಹಾದಾನಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ದಂಡನಾಯಕ ಅಮ್ಮಣ್ಣನು ಅರಸನ ಅನುಮತಿ ಪಡೆದು ಎಡೆಯಹಳ್ಳಿಯನ್ನು ಕುಕನೂರಿನ ಮಲ್ಲಿಕಾರ್ಜುನ ದೇವರಿಗೆ ಕೊಟ್ಟನು.[೧೦]

ಮೇಲಿನ ಎರಡು ಸಂದರ್ಭಗಳಲ್ಲಿ ಪಂಪಾತೀರ್ಥವನ್ನು ಮಾತ್ರ ಹೆಸರಿಸಲಾಗಿದೆ. ನಂತರದ ಎರಡು ಶಾಸನಗಳಲ್ಲಿ ಪಂಪಾತೀರ್ಥವನ್ನು ಉಲ್ಲೇಖಿಸದೇ

ವಿರೂಪಾಕ್ಷನ ಸಮಕ್ಷಮ ಮತ್ತು ಸನ್ನಿಧಾನವನ್ನು ಹೇಳಲಾಗಿದೆ. ಈ ಎರಡು ದಾನಗಳನ್ನು ಹೇಮಕೂಟದ ಕೆಳಗೆ ಈಗಿರು ವಿರೂಪಾಕ್ಷನ ಗುಡಿಯಲ್ಲಿ ಬಿಟ್ಟಂತೆ ತೋರುತ್ತದೆ.

ಕ್ರಿ.ಶ. 1199ರ ಶಾಸನವು ಒಟ್ಟು ಕ್ಷೇತ್ರವನ್ನು ವರ್ಣಿಸುತ್ತ ಗಂಗಾನದಿಯಿಂದ, ಹಲವು ತೀರ್ಥಗಳಿಂದ, ಉತ್ತಮ ದೇವಾಲಯಗಳ ಸಮೂಹದಿಂದ, ತಪಸ್ವಿಗಳಿಂದ ಪಂಪಾವರ ಕ್ಷೇತ್ರ ಕಂಗೊಳಿಸುತ್ತಿತ್ತೆಂದು ಹೇಳಿದೆ. ಚೌಡಯ್ಯ ಪಂಪಾದೇವಿಗೆ ಚಂಬೊನ್ನಿನ ಕಳಸವನ್ನು ಮಾಡಿಸಿ, ವಿರೂಪಾಕ್ಷ, ಪಂಪಾದೇವಿ ಮತ್ತು ಭೈರವಗೃಹ ಗಳಿಗೆ ಸುಣ್ಣ ಬಳಿಸಿ, ಅಡ್ಡಣಿಗೆ, ಆರತಿ, ಧೂಪಘಟ್ಟ, ಕಳಶ, ತಿಳಿವಟ್ಟಲು, ಸುಗಂಧ ಸಿಪುಗಳಲ್ಲದೇ ಅನೇಕ ವಸ್ತ್ರಭೂಷಣಗಳನ್ನು ಕೊಟ್ಟನು.[೧೧] ಈ ಶಾಸನದಲ್ಲಿ ವಿರೂಪಾಕ್ಷ ತೀರ್ಥ, ಹಂಪಾತೀರ್ಥಗಳ ಉಲ್ಲೇಖವಿದೆ. ಹಂಪಿಯ ಇಡೀ ಕ್ಷೇತ್ರವನ್ನು ಪಂಪಾತೀರ್ಥದ ಸಮೂಹವೆಂದು ಹೇಳಿದ್ದರಿಂದ ಇದನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಾಗುವುದಿಲ್ಲ.

ಹಂಪಿಯ ಬಂಡೆಗಳ ಮೇಲೆ ಮೈಲಾರ ತೀರ್ತ, ಸ್ರೀ ಸಾಲಗ್ರಾಮತೀರ್ತ, ಶ್ರೀ ರುಣವಿಮೋಚನತೀರ್ತ, ಶ್ರೀ ಪೂಜಾದನುತೀರ್ತ ಮೊದಲಾದವುಗಳೊಂದಿಗೆ ಶ್ರೀ ಚಕ್ರತೀರ್ತವೆಂದು ಬರೆಯಲಾಗಿದೆ.[೧೨] ವಿಜಯನಗರ ಕಾಲದಲ್ಲಿ ನಿರ್ಮಾಣ ವಾದ ಕೋದಂಡರಾಮ ದೇವಾಲಯ ಮತ್ತು ಯಂತ್ರೋದ್ಧಾರಕ ಆಂಜನೇಯನ ಸ್ಥಾಪನೆಯಿಂದ ಚಕ್ರತೀರ್ಥಕ್ಕೆ ಮಹತ್ವ ಬಂದಿದೆ.

ಪಂಪಾತೀರ್ಥವು ಪೌರಾಣಿಕ ಹಿನ್ನೆಲೆಯನ್ನು ಹೊಂದಿ, ಇಡೀ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗಿದೆ. ಈಗಿನ ಪಂಪಾತೀರ್ಥದಲ್ಲಿ ಪಂಪಾದೇವಿಯ ಗುಡಿ ಬಲಭಾಗ, ಈಶ್ವರನ ಗುಡಿ ಎಡಭಾಗದಲ್ಲಿದೆ. ಇದರಿಂದ ಪಂಪಾಂಬಿಕೆ ಮತ್ತು ವಿರೂಪಾಕ್ಷನ ನಿಶ್ಚಿತಾರ್ಥದ ಆಚರಣೆ ಅಲ್ಲಿಯೇ ನಡೆಯುತ್ತಿದ್ದು, ವಿಜಯನಗರ ಪತನದನಂತರ ನದಿ ದಾಟಿ ಹೋಗದೇ ಚಕ್ರತೀರ್ಥಕ್ಕೆ ಸೀಮಿತಗೊಳಿಸಿದಂತೆ ಕಾಣುತ್ತದೆ.

ವಿರೂಪಾಕ್ಷ

ಪುರಾತತ್ವದ ಹಿನ್ನೆಲೆಯಾಗಿ ಈ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪ್ರಾಗಿತಿಹಾಸ ಕಾಲದಿಂದಲೂ ಮಾನವ ವಾಸಮಾಡಿದ ಬಗ್ಗೆ ಅನೇಕ ಅವಶೇಷಗಳು ಕಂಡುಬಂದಿವೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಪರಿಸರದಲ್ಲಿ ನವಶಿಲಾ ಮತ್ತು ಕಬ್ಬಣ ಬೃಹತ್‌ಶಿಲಾ ಸಂಸ್ಕೃತಿಯ ಅವಶೇಷಗಳು ಹೇರಳವಾಗಿವೆ. ಈ ಕಾಲದಿಂದ ಮಾನವನ ನಿತ್ಯಜೀವನದಲ್ಲಿ ಅಭಿವೃದ್ಧಿಯಾಗುತ್ತ ಬಂತು. ಅವರು

ಒಂದೆಡೆ ನಿಂತು ಕೃಷಿ ಮತ್ತು ಪಶುಪಾಲನೆಯನ್ನು ತಮ್ಮ ಮೂಲ ವೃತ್ತಿಯಾಗಿಸಿಕೊಂಡಿದ್ದರು. ಈ ಕಾಲಘಟ್ಟದಲ್ಲಿ ಬೂದಿದಿಬ್ಬಗಳ ರಚನೆಯು ಒಂದು. ಇವು ಹಂಪಿಯನ್ನೊಳಗೊಂಡಂತೆ ಆಸುಪಾಸಿನಲ್ಲಿರುವ ಕಪಗಲ್ಲು, ಸಂಗನಕಲ್ಲು, ಹಳೆನೆಲ್ಲುಡಿ, ಇಂಗಳಗಿ, ಕುರೆಕುಪ್ಪ, ಕುಡತಿನಿ, ಕಾಕುಬಾಳು, ಗಾದಿಗನೂರ, ನಿಂಬಾಪುರ, ಹಿರೆಬೆನಕಲ್ಲು ಮುಂತಾದ ಕಡೆಗಳಲ್ಲಿವೆ. ಬೂದಿದಿಬ್ಬಗಳ ಅವಶೇಷಗಳನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಿದಾಗ, ಅದು ಸಂಪೂರ್ಣವಾಗಿ ದನಗಳ ಸಗಣಿಯಿಂದ ತಯಾರಾದುದೆಂದು ತಿಳಿದುಬಂದಿದೆ. ಈಗ ಉಳಿದು ಬಂದಿರುವ ಕುಡತಿನಿಯ ಬೂದಿದಿಬ್ಬವನ್ನು ಅವಲೋಕಿಸಿದರೆ, ಅವುಗಳ ಬೃಹತ್ ಪ್ರಮಾಣ ಸ್ಪಷ್ಟವಾಗುತ್ತದೆ. ಇದರಿಂದ ದನಗಳ ಸಾಕಾಣಿಕೆಯ ಪ್ರಮಾಣವನ್ನು ಗ್ರಹಿಸಬುದಾಗಿದೆ.

ನವಶಿಲಾ ಮತ್ತು ಬೃಹತ್‌ಶಿಲಾಯುಗದಲ್ಲಿ ದೈವತ್ವದ ಕಲ್ಪನೆ ಮೂಡಲು ಆರಂಭವಾಯಿತು. ಬೃತ್‌ಶಿಲಾಯುಗದ ಜನರು ದೊಡ್ಡ ದೊಡ್ಡ ಬಂಡೆಗಳಿಂದ ಸತ್ತವರಿಗಾಗಿ ಗೋರಿಗಳನ್ನು ನಿರ್ಮಿಸಿ, ಅವರಿಗಾಗಿ ಆಹಾರ ಮತ್ತು ಉಪಕರಣಗಳನ್ನು ಇಡುತ್ತಿದ್ದರು. ಇನ್ನೊಂದೆಡೆ ನೈಸರ್ಗಿಕ ವಿಪತ್ತುಗಳಿಂದ ರಕ್ಷಣೆ ಪಡೆಯಲು ಮಳೆ, ಸಿಡಿಲು, ಬೆಂಕಿ ಹಾಗೂ ತಮಗೆ ಆಶ್ರಯ ನೀಡುತ್ತಿದ್ದ ಬೆಟ್ಟ, ನದಿ ಸೂರ್ಯ, ಚಂದ್ರ ಮೊದಲಾದವುಗಳನ್ನು ಪೂಜಿಸತೊಡಗಿದರು.

ಮಾತೃಪ್ರಧಾನ ವ್ಯವಸ್ಥೆಯಲ್ಲಿ ಪ್ರಾಚೀನರು ತಾಯಿಯನ್ನು ಪೂಜ್ಯಭಾವನೆಯಿಂದ ಕಂಡರು. ನಿಸರ್ಗದಲ್ಲಿರುವ ಮರ, ಮಣ್ಣು, ನೀರು ಎಲ್ಲವನ್ನು ಮಾತೃಕಲ್ಪನೆಯಲ್ಲಿ ನೋಡಿದರು. ಈ ಹಂತದಲ್ಲಿ ಸುಟ್ಟ ಮಣ್ಣಿನಿಂದ ಮಾತೃ ದೇವತೆಯನ್ನು ನಿರ್ಮಿಸಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಪಂಪಾ ಸರೋವರವೆಂಬುವುದು ಮಾತೃರೂಪವಾಗಿತ್ತು. ಆದ್ದರಿಂದ ಹಂಪಿ ಶಕ್ತಿದೇವತೆ ಆರಾಧನೆಯ ಕ್ಷೇತ್ರವಾಗಿ ರೂಪತಳೆಯಿತು.

ಕ್ರಮೇಣ ಪಶುಪಾಲಕರಿಂದ ಪಶುಪತಿಯ ಸೃಷ್ಟಿಯಾಯಿತು. ಆಗಲೇ ಸ್ತ್ರೀ ದೇವತೆಯ ಆರಾಧನೆ ಮಾತೃಕಲ್ಪನೆಯಲ್ಲಿ ಬಹು ವಿಸ್ತಾರ ಪಡೆದುಕೊಂಡಿತ್ತು. ಇದರ ಇನ್ನೊಂದು ಮಗ್ಗುಲಲ್ಲಿ ಪುರುಷದೇವತೆಯ ಆರಾಧನೆ ಆರಂಭವಾಯಿತು. ಒಂದು ಕಾಲಘಟ್ಟದಲ್ಲಿ ಇವೆರಡನ್ನು ಒಂದುಗೂಡಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆದುಬಂದಂತೆ ತೋರುತ್ತದೆ. ಪಶುಪಾಲಕರೇ ಹೆಚ್ಚಾಗಿದ್ದ ಈ ಪರಿಸರದಲ್ಲಿ ಇಂಥ ಒಂದು ಆಚರಣೆ ನಡೆದಿರಬೇಕು. ಕ್ರಮೇಣ ಸ್ಥಳಪುರಾಣದ ಮೂಲಕ ಶಿವ – ಪಾರ್ವತಿಯರ ವಿವಾಹವನ್ನು ವರ್ಣಿಸಲಾಗಿದೆ. ಸಾಯಣರ ವೇದಗಳಿಗೆ ಬರೆದಿರುವ ಭಾಷ್ಯಗಳಲ್ಲಿ,

ಯಾಃ ಸರೂಪಾ ವಿರೂಪಾ ಏಕರೂಪಾ ಯಾ
ಸಾಮಾಗ್ರಿ ರಿಷ್ವ್ಯ ನಾಮಾನಿ ವೇದ ।
ಯಾ ಅಂಗಿರಸಸ್ತ ಪ ಸೇಹ
ಚಕ್ರುಸ್ತಾಭ್ಯಃ ಪರ್ಜನ್ಯ ಮಹಿ
ಶರ್ಮ ಯಚ್ಛ ॥

(ಋಗ್ವೇದ ಸಂಹಿತಾ, 10 ನೇ ಮಂಡಲ, ಸೂಕ್ತ 169)

ಈ ಸೂಕ್ತಕ್ಕೆ ಸಾಯಣರು ತಮ್ಮ ಭಾಷ್ಯದಲ್ಲಿ ಯಾ ಗಾವಃ ಸರೂಪಾಃ ಸಮಾನ ರೂಪಾ ಯಾಶ್ವ ವಿರೂಪಾ ವಿಭಿನ್ನರೂಪಾ ಯಾಶ್ಚೈಕರೂಪಾ ಏಕೇನೈವ ವರ್ಣೇನು ಪೇತಾ ಯಾಸಂ ಚ ಗವಾಂ ನಮಾ ನೀಡೇ ರಂತೇ ದಿತ ಇತ್ಯಾದೀ ನಿಷ್ವ್ಯಾ ಯಾಗೇನ ಹೇತುರ್ನಾಗ್ನಿ ವೇದ ಜನಾತಿ ಯಾಶ್ಚಗಾ ಅಂಗಿರಸ ಋಷಯಸ್ತಪಸಾ ಪಶುಪ್ರಾಪ್ತಿ ಸಾಧನೇನ ಚಿತ್ರಾಯಾಗಾದಿ ಲಕ್ಷಣೇ ನೇಹಾಸ್ಮಿಂಲ್ಲೋಕೇ ಚಿಕ್ರುಃ ಕೃತವಂತಃ ತಾಭ್ಯಂ ಸರ್ವಾಭ್ಯೋ ಗೋಭ್ಯೋ ಹೇ ಪರ್ಜನ್ಯ ಮಹಿ ಮಚ್ಛರ್ಮ ಸಖಂ ಯಚ್ಛ ಪ್ರದೇಹಿ ॥ ಎಂದು ಬರೆದಿದ್ದಾರೆ.

ಇದರರ್ಥವನ್ನು ಆಲ್ಲ ಚಿರಂಜೀವಿಯವರು ಹೇಳುವಂತೆ, ಕೆಲವು ಗೋವುಗಳು ಚಿಕ್ಕದಾಗಿಯೂ ಮತ್ತೆ ಕೆಲವು ದೊಡ್ಡದಾಗಿಯೂ ಒಂದೇ ಬಣ್ಣದಿಂದ ಕೂಡಿದ್ದಾಗಿಯೂ ಹಲವು ವಿವಿಧ ರೂಪಗಳಿಂದಲೂ ಒಂದೇ ಸಮನಾದ ಆಕಾರವುಳ್ಳದ್ದಾಗಿಯೂ ಇರುತ್ತವೆ. ಇವುಗಳ ಹೆಸರುಗಳನ್ನು ಅಗ್ನಿಯು ತನ್ನ ಕಣ್ಣುಗಳಿಂದ ಎಂದರೆ ಯಾಗ ಸಾಮರ್ಥ್ಯದಿಂದ ನೋಡಿ ತಿಳಿದವನಾಗಿದ್ದಾನೆ. ಅಂಗಿರಸನ ತಪಸ್ಸಿನ ಪ್ರಭಾವದಿಂದ ಸೃಷ್ಟಿಯಾಗಿರುವ ಈ ಗೋವುಗಳನ್ನು ಪರ್ಜನ್ಯನು ರಕ್ಷಿಸಲಿ. ಇಲ್ಲಿ ವಿವಿಧ ರೂಪಗಳನ್ನು ಹೊಂದಿರುವ ಗೋವುಗಳಿಗೆ ವಿರೂಪಾ ಎಂದು ಅರ್ಥೈಸಲಾಗಿದ್ದು ಇವುಗಳ ಸ್ವರೂಪವನ್ನು ಅರಿತಿರುವ ಅಗ್ನಿ ವಿರೂಪಾಕ್ಷ ಎನ್ನಿಸಿಕೊಳ್ಳುತ್ತಾನೆ.[೧೩] ಇದರಿಂದ ವಿರೂಪಾಕ್ಷ ಎನ್ನುವ ಹೆಸರು ಪಶುಪಾಲನೆ ಮತ್ತು ಅವುಗಳ ಸ್ವರೂಪಕ್ಕೆ ಸಂಬಂಧವನ್ನು ಕಲ್ಪಿಸುತ್ತದೆ.

ಪಶುಗಳು ಮತ್ತು ಪಶುಪಾಲಕರಿಗೆ ಮಾತ್ರವಲ್ಲದೇ ಇಲ್ಲಿಯ ಪ್ರದೇಶಕ್ಕೆ ವಿರೂಪಾಕ್ಷನನ್ನು ಒಡೆಯನನ್ನಾಗಿ ಮಾಡಲಾಗಿದೆ. ಈ ವ್ಯವಸ್ಥೆ ಬಹು ಕಾಲ ಮುಂದುವರೆದುಕೊಂಡು ಬಂದಿತ್ತು. 12ನೇ ಶತಮಾನದ ವೇಳೆಗೆ ಪ್ರಮುಖ ಧಾರ್ಮಿಕ ಕೇಂದ್ರವಾಗಿದ್ದ ಹಂಪಿ, ಅದರ ಅಧಿಪತಿ ಕವಿವರ್ಯರಿಂದಲೂ ಸ್ತುತಿಸಲ್ಪಟ್ಟಿದ್ದಾನೆ. ಹರಿಹರ ಮತ್ತು ರಾಘವಾಂಕರು ಕನ್ನಡದ ಪ್ರಸಿದ್ಧ ಕವಿಗಳು. ಹರಿಹರನ ಮಹಾಕಾವ್ಯ ಗಿರಿಜಾ ಕಲ್ಯಾಣ, ಶಿವ-ಪಾರ್ವತಿಯರ ಮದುವೆಯ ವಿಷಯವನ್ನೊಳಗೊಂಡಿದೆ. ಅದು ಪಂಪಾ ವಿರೂಪಾಕ್ಷನ ವಂದಿಸುವ ಮೂಲಕ

ಪ್ರಾರಂಭವಾಗಿ ಅದೇ ವಂದನೆಗಳೊಂದಿಗೆ ಮುಕ್ತಾಯವಾಗುತ್ತದೆ. ಈ ಕೃತಿಯ ಅನೇಕ ಪದ್ಯಗಳಲ್ಲಿ ವಿರೂಪಾಕ್ಷನನ್ನು ಹಂಪಿಯಾಳ್ದ ಇಲ್ಲವೆ ಹಂಪಿಯರಸನೆಂದು ಹೇಳಲಾಗಿದೆ.[೧೪] ರಾಘವಾಂಕನ ಹರಿಶ್ಚಂದ್ರ ಕಾವ್ಯದ ಆರಂಭದಲ್ಲಿ ಪಂಪಾ-ವಿರೂಪಾಕ್ಷರ ಸ್ತುತಿ ಇದೆ.[೧೫]

ಹರಿಹರ ಕವಿ ಪಂಪಾಪುರದ ಮೂಡಣ ಬಾಗಿಲಲ್ಲಿ ಕಿನ್ನರೇಶ್ವರ, ತೆಂಕಣ ಬಾಗಿಲಲ್ಲಿ ಜಂಬುಕೇಶ್ವರ, ಪಶ್ಚಿಮ ಬಾಗಿಲಲ್ಲಿ ಸೋಮೇಶ್ವರ, ಉತ್ತರ ಬಾಗಿಲಲ್ಲಿ ವಾಣಿಭದ್ರೇಶ್ವರ ನೆಲೆಸಿದ್ದಾರೆಂದು ಹೇಳಿದ್ದಾನೆ. ಇದು ಪಂಪಾ ವಿರೂಪಾಕ್ಷ ಸ್ಥಾನವರ್ಣನಂ ಮತ್ತು ಶ್ರೀ ಪಂಪಾ ಮಾಹಾತ್ಮೆಯಲ್ಲಿಯು ಉಲ್ಲೇಖವಾಗಿದೆ. ಚಿದಾನಂದಮೂರ್ತಿಯವರು ಇವುಗಳನ್ನು ಬುಕ್ಕಸಾಗರದ ಸಮಿಪದಲ್ಲಿರುವ ಕಿನ್ನರೇಶ್ವರ, ಜಂಬುನಾಥ ಬೆಟ್ಟದ ಮೇಲಿರುವ ಜಂಬುಕೇಶ್ವರ, ಕೊಪ್ಪಳ ತಾಲೂಕಿನ ಶಿವಪೂರದ ಸಮೀಪ ಬೆಟ್ಟದ ಮೇಲಿರುವ ಸೋಮನಾಥ, ಗಂಗಾವತಿ ತಾಲೂಕಿನ ಮಲ್ಲಾಪುರದ ಸಮೀಪ ಬೆಟ್ಟದ ಮೇಲಿನ ವಾಣಿಭದ್ರೇಶ್ವರ ದೇವಾಲಯಗಳಾಗಿವೆ ಎಂದು ಹೇಳಿದ್ದಾರೆ.[೧೬] ಈ ವಿಸ್ತೀರ್ಣವಾದ ಪ್ರದೇಶ ವಿರೂಪಾಕ್ಷನ ಒಡೆತನಕ್ಕೆ ಸೇರಿತ್ತು.

ಮುಖ್ಯವಾಗಿ ಇಲ್ಲಿ ಗಮನಿಸಬೇಕಾದಂಥ ವಿಷಯ ಸುತ್ತಮುತ್ತಲಿರುವ ದೇವತೆಗಳನ್ನು ವಿರೂಪಾಕ್ಷನ ವಿಸ್ತಾರವಾದ ಪ್ರದೇಶಕ್ಕೆ ಕಾವಲುಗಾರರಂತೆ ನೋಡಲಾಗಿದೆ. ಜನರಿಗೆ ಆ ದೇವರ ದರ್ಶನವೂ ವಿರೂಪಾಕ್ಷನಷ್ಟೇ ಪವಿತ್ರವಾಗಿತ್ತು. ಹಂಪಿ ಒಂದು ತೀರ್ಥಕ್ಷೇತ್ರವಾಗಿತ್ತೇ ಹೊರತು ಇಲ್ಲಿ ಯಾವುದೇ ಊರು ಅಥವಾ ಪಟ್ಟಣ ಇರಲಿಲ್ಲ. ಹಂಪಿಯ ಸುತ್ತಮುತ್ತಲ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರು ಮತ್ತು ಇತರ ಜನಾಂಗದವರು ಈ ಕ್ಷೇತ್ರದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಗಳಾಗಿದ್ದರು. ಇಂದಿಗೂ ವಿರೂಪಾಕ್ಷನ ಜಾತ್ರೆ ಮತ್ತು ಉತ್ಸವಗಳಲ್ಲಿ ಅವರ ಪಾಲುಗಾರಿಕೆಯನ್ನು ಗಮನಿಸಬಹುದಾಗಿದೆ. ವಿಜಯನಗರ ಪೂರ್ವದ ಶಾಸನಗಳಲ್ಲಿ ಹಂಪಿ, ಊರು-ಗ್ರಾಮ ಅಥವಾ ಪಟ್ಟಣವಾಗಿದ್ದುದರ ಬಗ್ಗೆ ಉಲ್ಲೇಖಗಳಿಲ್ಲ, ಬದಲಾಗಿ ಕುರುಗೋಡಿನ ಸಿಂಧರ ಕಾಲದ ಕ್ರಿ.ಶ. 1199ರ ಶಾಸನದಲ್ಲಿ ವಿರೂಪಾಕ್ಷ ತೀರ್ಥದ ರಕ್ಷಣಾರ್ಥವಾಗಿ ಸಾಮಂತ ಮಾದೆಯನಾಯಕನು ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದ. ಮೈದುನ ಚೌಡನೆಂಬುವನು ಹಂಪೆಯ ಕಟ್ಟೆಯ ಬಯಲೊಳಗೆ ಪಂಪಾತೀರ್ಥದ ಏಳುನೂರು ಬ್ರಾಹ್ಮಣರು (ಇವರು ಹಂಪಿಯ ಸುತ್ತಮುತ್ತಲ ಗ್ರಾಮಗಳಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣರಿರಬೇಕು) ಮತ್ತು ಸಾಮಂತ ಲಖ್ಖೇಯನಾಯಕ, ಮಾದೆಯನಾಯಕರ ಸಮ್ಮುಖದಲ್ಲಿ ವಿರೂಪಾಕ್ಷದೇವರ ಬಲದೆಸೆಯ ಸತ್ರಸಾಲೆಯಲ್ಲಿ ಆತಿಥ್ಯ ಮುಕ್ಯವಾಗಿ ಹತ್ತು ಜನ ಬ್ರಾಹ್ಮಣರ ಭೋಜನಕ್ಕೆ ಮತ್ತು ಹಂಪಾತೀರ್ಥದ ದೇವರುಗಳಿಗೆ ಅಡಿಕೆ, ಎಲೆಗಾಗಿಯೂ ದಾನ ನೀಡಿದ್ದಾನೆ.

ಇದರಿಂದ ತುಂಗಭದ್ರಾ ನದಿಯನ್ನು ಒಳಗು ಮಾಡಿಕೊಂಡು ಈಗಿನ ಪಂಪಾವನದಿಂದ ಹೇಮಕೂಟದವರೆಗೂ ದೇವಾಲಯಗಳ ಸಮೂಹದಿಂದ ಕೂಡಿದ ಈ ಕ್ಷೇತ್ರವನ್ನು ಗುರುತಿಸಬಹುದಾಗಿದೆ.

ವಿರೂಪಾಕ್ಷ ಮತ್ತು ಪಂಪಾಂಬಿಕೆಯ ದೇವಾಲಯಗಳು

ಹಂಪಿ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿರೂಪಾಕ್ಷ ಮತ್ತು ಪಂಪಾಂಬಿಕೆಯ ದೇವಾಲಯಗಳು ನಿರ್ಮಾಣವಾಗಿವೆ. ಹಂಪಿ ಕ್ಷೇತ್ರದಲ್ಲಿ ಜನ ಪದರು ಸಾಂಕೇತಿಕವಾಗಿ ವಿರೂಪಾಕ್ಷ ಮತ್ತು ಪಂಪಾಂಬಿಕೆಯ ದೇವಾಲಯಗಳನ್ನು ಕಟ್ಟಿದ್ದಾರೆ. ಹೇಮಕೂಟದಲ್ಲಿ ಮೂಲ ವಿರೂಪಾಕ್ಷ, ಅದರ ಕೆಳಭಾಗ ಈಗಿರುವ ವಿರೂಪಾಕ್ಷ, ಪಂಪಾಂಬಿಕೆ, ಭುವನೇಶ್ವರಿ ಹಾಗೂ ಇತರೆ ದೇವಾಲಯಗಳು, ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಪ್ರಸನ್ನ ವಿರೂಪಾಕ್ಷ (ಶಾಸನೋಕ್ತ),[೧೭] ಪಂಪಾವನದಲ್ಲಿ ಜಯಲಕ್ಷ್ಮೀ ಮತ್ತು ಈಶ್ವರ ದೇವಾಲಯ. ಇವು ಇಲ್ಲಿಯ ಪ್ರಮುಖ ದೇವಾಲಯಗಳು. ಈ ಎಲ್ಲ ದೇವಾಲಯಗಳ ಲಕ್ಷಣಗಳಲ್ಲಿ ವಿಜಯನಗರ ಕಾಲದ ವಾಸ್ತುಶೈಲಿ ಇದ್ದರೂ, ಮೊದಲಿನ ಗುಡಿಗಳನ್ನು ಜೀರ್ಣೋದ್ಧಾರ ಮತ್ತು ಪುನರ್ ನಿರ್ಮಾಣ ಕಾರ್ಯ ನಡೆದಿದೆ.

ಹೇಮಕೂಟದಲ್ಲಿ ಮೂಲ ವಿರೂಪಾಕ್ಷನ ಏಕೈಕ ದೇವಾಲಯವಿದೆ. ಇಲ್ಲಿ ಪಂಪಾಂಬಿಕಾಯ ದೇವಾಲಯವಿಲ್ಲ. ಇದು ವಿರೂಪಾಕ್ಷ ಪಂಪಾದೇವಿಯನ್ನು ವರಿಸುವ ಪೂರ್ವದ ಸ್ಥಾನವನ್ನು ಸೂಚಿಸುತ್ತದೆ. ಶಿವರಾತ್ರಿಯ ದಿನ ಈ ದೇವರಿಗೆ ಪೂಜೆ ಸಲ್ಲುತ್ತದೆ. ಇಲ್ಲಿ ತಪಸ್ಸು ಮಾಡಲು ಕುಳಿತಿದ್ದ ಶಿವನು, ಮತಂಗ ಪರ್ವತದ ಮೇಲೆ ನಿಂತಿದ್ದ ಮನ್ಮಥನನ್ನು ಸುಟ್ಟು ಹಾಕಿದನೆಂದೂ ಜನ ಹೇಳುತ್ತಾರೆ.[೧೮]

ವಿರೂಪಾಕ್ಷನು ಮದುವೆಯಾದದ್ದು ಪಂಪಾ ತೀರ್ಥದಲ್ಲಿ. ಇಲ್ಲಿ ಜಯಲಕ್ಷ್ಮಿ ಮತ್ತು ಈಶ್ವರ ದೇವಾಲಯಗಳಿವೆ. ಈ ಪರಿಸರದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಹಾಳಾದ ಶಿಲ್ಪಗಳಿವೆ. ಇದರಿಂದ ಕ್ರಮೇಣ ಜೀರ್ಣೋದ್ಧಾರ ಮಾಡಲಾಗಿದೆ ಎಂದು ತಿಳಿಯುತ್ತದೆ. ಈ ದೇವಾಲಯಗಳು ಹಂಪಿಯಲ್ಲಿ ನಿರ್ಮಾಣವಾದ ದೇವಾಲಯಗಳಿಗೆ ತದ್ವಿರುದ್ಧವಾಗಿ ನಿರ್ಮಿಸಲಾಗಿದೆ. ಅಂದರೆ ಜಯಲಕ್ಷ್ಮೀ ಗುಡಿ ಬಲಭಾಗ ಮತ್ತು ಈಶ್ವರನ ಗುಡಿ ಎಡಭಾಗದಲ್ಲಿದೆ. ಸ್ಥಳೀಯರ ಪ್ರಕಾರ ಇವು ಪಂಪಾದೇವಿ ಹಾಗೂ ಪಂಪಾಪತಿಯ ದೇವಾಲಯಗಳಾಗಿವೆ. ನಿಶ್ಚಿತಾರ್ಥ ಸಂದರ್ಭದಲ್ಲಿ ಮದುವೆಯ ಹೆಣ್ಣು ಬಲಭಾಗದಲ್ಲಿ ಮತ್ತು ಗಂಡು ಎಡಭಾಗದಲ್ಲಿ ಕುಳಿತುಕೊಳ್ಳುತ್ತಾರೆಂದೂ, ತಾವು ಗಮನಿಸಿದ ಸಂದರ್ಭವನ್ನು ಚಿದಾನಂದಮೂರ್ತಿ ಯವರು ತಿಳಿಸುತ್ತಾರೆ.

ಪಂಪಾತೀರ್ಥದಲ್ಲಿ ಈ ರೀತಿಯ ದೇವಾಲಯಗಳನ್ನು ನಿಶ್ಚಿತಾರ್ತ ಸಂಕೇತವಾಗಿ ನಿರ್ಮಿಸಿರುವ ವಿಷಯವನ್ನು ಆನೆಗುಂದಿಯ ತಾಮ್ರ ಶಾಸನ ಸ್ಪಷ್ಟಪಡಿಸುತ್ತದೆ. ಆನೆಗುಂದಿಯ ಉತ್ತರಕ್ಕಿರುವ ಕಡೆಬಾಗಿಲು ಬಳಿಯ ಹೊಲದಲ್ಲಿ ದೊರೆತ ಸುಮಾರು 13ನೇ ಶತಮಾನಕ್ಕೆ ಸೇರಿದ ಎಂಟು ಹಲಗೆಗಳನ್ನೊಳಗೊಂಡ ತಾಮ್ರ ಶಾಸನ.[೧೯] ಕುಂಬಾರರ ಮೂಲವನ್ನು ತಿಳಿಸುವ ಇದರಲ್ಲಿ ಗಿರಿಜೆಯ ವಿವಾಹ ಮತ್ತು ಅಮೃತ ಮಥನದ ಕಥೆಯನ್ನು ಸೇರಿಸಲಾಗಿದೆ.

ಕೃತಯುಗದಲ್ಲಿ ದೇವಮಾನವರಿಗೆ ವ್ಯತ್ಯಾಸವಿರಲಿಲ್ಲ. ಷಡ್ದರ್ಶನ ಸಮಯವಾಗಲಿ, ನೊಂಪಿ ಬ್ರತಗಳಾಗಲಿ, ಶಿಕ್ಷೆ ದೀಕ್ಷೆಗಳಾಗಲಿ ಇರಲಿಲ್ಲ. ಬಾಸಿಂಗ, ಹೂಜೆ, ಸೊಂನಲಗೆಯಾಗಲಿ ಇರಲಿಲ್ಲ. ಕಲ್ಲದೇವರಿಗೆ ಪ್ರಖ್ಯಾತಿ ಬರಬೇಕೆಂದು ಗಿರಿರಾಜನ ಮಗಳು ಪರ್ವತದ ಬಳಿಗೆ ತಪಸ್ಸು ಮಾಡಬೇಕೆಂದು ಬರುತ್ತಾಳೆ. ಇತ್ತ ಮಹಾದೇವನು ಬೇಟೆಯಾಡಬೇಕೆಂಬ ಆಸೆಯಿಂದ ಬೇಡನಾಗಿ ಕಾಮದೇವನ ಸಂಗಡ ಗಿರಿರಾಜನ ಮಗಳು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬರುತ್ತಾನೆ. ಆ ಸೊಗಸನ್ನು ನೋಡುತ್ತ ಬಂದಾಗ ಕೊಳದ ಬಳಿ ಒಂಟಿಕಾಲಲ್ಲಿ ನಿಂತು ಪಂಚಾಗ್ನಿ ಮಧ್ಯ ಮೌನವ್ರತದಿಂದಿದ್ದ ಕನ್ಯೆಯನ್ನು ಕಾಣುತ್ತಾನೆ. ಆಕೆ ಗಿರಿರಾಜನ ಮಗಳೆಂದು ತಿಳಿದು ಅವಳನ್ನು ಮದುವೆಯಾಗಬೇಕೆಂದು ಬಯಸಿ, ಗಿರಿರಾಜನ ಬಳಿಗೆ ರಾಯಭಾರವನ್ನು ಒಯ್ಯಬೇಕೆಂದು ತಿಳಿಸುತ್ತಾನೆ. ಆಗ ಕಾಮದೇವ ಬುದ್ಧಿವಂತರಾದ ಬ್ರಹ್ಮ, ಬೃಹಸ್ಪತಿ, ದೇವೇಂದ್ರ, ನಾರಾಯಣ, ನಾಲ್ವರನ್ನು ಕಳುಹಿಸುತ್ತಾನೆ.

ಗಿರಿರಾಜ ಮಹಾದೇವನಿಗೆ ಕೂಸನ್ನು ಕೊಡಲು ಒಪ್ಪುತ್ತಾನೆ. ಈ ಸುದ್ದಿ ತಿಳಿಯುತ್ತಲೇ ಎಲ್ಲ ದೇವತೆಗಳು ಶಿವನನ್ನು ಶೃಂಗಾರ ಮಾಡಿ ಪುರದಲ್ಲಿ ಮೆರವಣಿಗೆ ಮಾಡಿ, ವಿವಾಹ ಮಂಟಪಕ್ಕೆ ಕರೆತರುತ್ತಾರೆ. ಮದುವೆಗೆ ಬೇಕಾದ ಯಾವ ವಸ್ತುಗಳೂ ಇರಲಿಲ್ಲ. ಆಗ ಎಲ್ಲ ದೇವತೆಗಳು ತಮ್ಮ ಶಕ್ತಿಯಿಂದ ಒಂದೊಂದು ವಸ್ತುಗಳನ್ನು ಸೃಷ್ಟಿ ಮಾಡಿ ಮದುವೆಗೆ ವ್ಯವಸ್ಥೆ ಮಾಡುತ್ತಾರೆ. ಆಗ ಕನ್ನೆಯನ್ನು ಧಾರೆಯೆರೆಯುತ್ತಾರೆ. ದೇವರ ಬಲದೆಸೆಯಲ್ಲಿ ದೇವಿಯು ಕುಳಿತಿರಲು ಇವರ ಮುಂದೆ ವಿಶ್ವಾಮಿತ್ರ, ವಸಿಷ್ಟರು ಸ್ವಾಹಾ ಮಂತ್ರಗಳಿಂದ ಹೋಮವನ್ನು ಮಾಡಿ ಬಲದೆಸೆಯಲ್ಲಿದ್ದ ದೇವಿಯನ್ನು ಎಡದೆಸೆಗೆ ತಂದು ಮದುವೆಯನ್ನು ಮುಗಿಸುತ್ತಾರೆ.

ಈ ಶಾಸನದಲ್ಲಿ ದೇವಿಯು ದೇವರ ಬಲದೆಸೆಯಲ್ಲಿ ಕುಳಿತಿರಲು ಎಂಬ ವಿಷಯದಿಂದ ದೇವಾಲಯದ ನಿರ್ಮಾಣದ ಉದ್ದೇಶ ಮತ್ತು ಇದು ಪಂಪಾದೇವಿಯ ದೇವಾಲಯ ಎಂಬುವುದು ಸ್ಪಷ್ಟವಾಗುತ್ತದೆ.

ಮದುವೆಯಾದ ವಿರೂಪಾಕ್ಷ ಪತ್ನಿಸಮೇತನಾಗಿ ನೆಲೆಸಿರುವುದು ಹೇಮಕೂಟದ ಕೆಳಗಿರುವ ದೇವಾಲಯದಲ್ಲಿ. ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸುವ

ಮೂಲಕ ವಿಸ್ತರಿಸಲಾಯಿತು. ಕೃಷ್ಣದೇವರಾಯನು ಮುಂದಿನ ರಂಗಮಂಟಪ ಮತ್ತು ಗೋಪುರವನ್ನು ನಿರ್ಮಿಸಿ, ಅದರ ಮುಂದಿನ ಮಹಾಗೋಪುರವನ್ನು ಜೀರ್ಣೋದ್ಧಾರ ಮಾಡಿಸುತ್ತಾನೆ. ಇದರಿಂದ ಅನೇಕ ಪರಿವಾರ ದೇವತೆಗಳನ್ನೊಳಗೊಂಡು ಬೃಹದಾಕಾರವಾಗಿ ನಿರ್ಮಾಣವಾಯಿತು. ಈ ದೇವಾಲಯದಲ್ಲಿ ವಿರೂಪಾಕ್ಷನ ಎಡಭಾಗದಲ್ಲಿ ಪಂಪಾಂಬಿಕೆಯ ಗುಡಿ ಇದೆ. ಮದುವೆಯಾದ ಮೇಲೆ ರೂಢಿಗತವಾಗಿ ಎಡಭಾಗಕ್ಕೆ ಬಂದಿದ್ದಾಳೆ. ಪಂಪಾಂಬಿಕೆಯ ದೇವಾಲಯದ ಸಭಾಮಂಟಪಕ್ಕೆ ಹೊಂದಿಕೊಂಡು ಶಯನ ಗೃಹವಿದೆ. ಪ್ರತಿವರ್ಷ ಮದುವೆಯ ಸಂದರ್ಭದಲ್ಲಿ ಈ ಶಯನಗೃಹವನ್ನು ಶೃಂಗರಿಸಲಾಗುತ್ತದೆ.

ವಿರೂಪಾಕ್ಷ ಮತ್ತು ಪಂಪಾಂಬಿಕೆಯರು ಈ ಎಲ್ಲ ಆಚರಣೆಗಳಿಂದ ಜನಪದರ ದೈವಗಳಾದರು. ವಿಜಯನಗರ ಸಾಮ್ರಾಜ್ಯ ಪತನವಾದರೂ ವಿರೂಪಾಕ್ಷನ ಆಚರಣೆಗಳು ಮುಂದುವರೆದಿವೆ. ಇದರಿಂದ ವಿರೂಪಾಕ್ಷನು ಹಂಪಿಯ ಒಡೆಯನಾಗಿ ಸ್ಥಳೀಯರ ಆದಿದೈವವಾಗಿದ್ದಾನೆ.

ಅಡಿಟಿಪ್ಪಣಿಗಳು

1. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. 2,* ಕೊಪ್ಪಳ ಜಿಲ್ಲೆ, ಪು. 314–15
2. *ಕ.ಇ.,* ಸಂ.1, 25, ಶಿರಸಂಗಿ
3. ಸಿದ್ಧಲಿಂಗೇಶ್ವರ ಸ್ವಾಮಿ, 1983, *ಶ್ರೀ ಪಂಪಾ ಮಹಾತ್ಮೆ,* ಹೊಳಗುಂದಿ
4. ಚಿದಾನಂದಮೂರ್ತಿ ಎಂ., 1993, "ಪಂಪಾಪುರ" (ಹಂಪಿ)– ಕೆಲವು ಅಭಿಜ್ಞೆಗಳು, ಪ್ರಮೇಯಗಳು ಮತ್ತು ಪ್ರಶ್ನೆಗಳು, *ಹೊಸತು ಹೊಸತು,* ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ದೇವರಕೊಂಡಾರೆಡ್ಡಿ, 1998, ಪಂಪಾತೀರ್ಥ, *ವಿಜಯನಗರ ಅಧ್ಯಯನ,* ಸಂ. 3, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
6. *ಎ. ಇಂ.* ಸಂ. 3, ಪು. 85–88
7. *ಕನ್ನಡ ವಿ.ವಿ.ಶಾಸನ* ಸಂ. 1, ಬಳ್ಳಾರಿ ಜಿಲ್ಲೆ ಪು. 177
8. ಅದೇ, ಪು. 603
9. ಅದೇ, ಪು. 288–90
10. *ಶಾಸನ ಪರಿಚಯ,* ಸಂ. 49
11. *ಕನ್ನಡ ವಿ.ವಿ. ಶಾಸನ ಸಂ. 3,* ಹಂಪಿ, ಪು. 43–48
12. *ಕನ್ನಡ ವಿ.ವಿ. ಶಾಸನ ಸಂ. 3,* ಹಂಪಿ, ಪು. 87–89
13. ಆಳ್ಲ ಚಿರಂಜೀವಿ, 1996, ಸಾಯಣ ಭಾಷ್ಯಮತ್ತು ತಂತ್ರದಲ್ಲಿ "ವಿರೂಪಾಕ್ಷ", *ಹಂಪಿ ಪರಂಪರೆ,* ಹೊಸಪೇಟೆ

14. ನರಸಿಂಹಚಾರ್ಯ ಆರ್., 1972, *ಕರ್ನಾಟಕ ಕವಿ ಚರಿತೆ*, ಸಂ. 1, ಬೆಂಗಳೂರು
15. ಅದೇ
16. ಚಿದಾನಂದಮೂರ್ತಿ ಎಂ. ಪೂರ್ವೋಕ್ತ
17. *ಕನ್ನಡ ವಿ.ವಿ. ಶಾಸನ ಸಂ. 3*, ಹಂಪಿ, ಪು. 191–92
18. ಚಿದಾನಂದಮೂರ್ತಿ ಎಂ. ಪೂರ್ವೋಕ್ತ
19. *ಕನ್ನಡ ವಿ.ವಿ. ಶಾಸನ ಸಂ. 2*, ಕೊಪ್ಪಳ ಜಿಲ್ಲೆ, ಪು. 323–334




ಪಂಪಾದೇವಿ ದೇವಾಲಯ



ಪಂಪಾತೀರ್ಥ



ಹೇಮಕೂಟದ ದೇವಾಲಯ



ವಿರೂಪಾಕ್ಷ ದೇವಾಲಯ



ವಿರೂಪಾಕ್ಷ
ದೇವಾಲಯದ
ಮಂಟಪ

೨೫. ಸಂಡೂರು ತಾಲೂಕಿನ ವಿಜಯನಗರ ಅವಧಿಯ ಆಡಳಿತ ವಿಭಾಗಗಳು

ಡಾ. ಗಿರಿಜಾ

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರದ ಅರಸರ ಆಳ್ವಿಕೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಡಿ ದಕ್ಷಿಣ ಭಾರತವನ್ನೇ ವ್ಯಾಪಿಸಿದ್ದ ಅವರ ರಾಜ್ಯದಲ್ಲಿ ಆಡಳಿತವನ್ನು ಸರಳಗೊಳಿಸುವ ದೃಷ್ಟಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಅನೇಕ ಹಂತಗಳ ಆಡಳಿತ ವಿಭಾಗಗಳನ್ನು ಮಾಡಿಕೊಂಡಿದ್ದರು. ಅವುಗಳೆಂದರೆ: ದೇಶ/ರಾಜ್ಯ, ಚಾವಡಿ/ಮಾಗಣಿ/ವಳಿತ/ವೇಂಠೆ, ನಾಡು/ಸೀಮೆ, ಸ್ಥಳ, ಗ್ರಾಮ ಎಂಬುದಾಗಿ ಗುರುತಿಸಬಹುದಾಗಿದೆ. (*ಪ್ರಾ.ಕ.ಆ.ವಿ*, ಪು.203) ಸಂಡೂರು ತಾಲ್ಲೂಕಿನ ಶಾಸನಗಳಲ್ಲಿ ಕಂಡುಬರುವ ವಿಜಯನಗರ ಕಾಲದ ಆಡಳಿತ ವಿಭಾಗಗಳ ಕುರಿತು ಇಲ್ಲಿ ಚರ್ಚಿಸಲಾಗುತ್ತಿದೆ. ವಿಜಯನಗರ ಸಾಮ್ರಾಜ್ಯದ ಆಡಳಿತದ ವಿಭಾಗಗಳಲ್ಲಿ 'ಸೀಮೆ'ಯೂ ಒಂದು ಆಡಳಿತದ ಭಾಗವಾಗಿತ್ತು. 'ಸೀಮೆ' ಎಂದರೆ 'ಮೇರೆ' ಎಂದರ್ಥ (*ಪ್ರಾ.ಕ.ಆ.ಪ.ಭಾ.ಕೋ*, ಪು.4) .'ಸೀಮೆ' ಎಂಬುದು ಸಂಸ್ಕೃತದ 'ಸೀಮಾ' ಪದವೇ ಆಗಿದ್ದು ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗ ಎಂಬರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ. ಶ. 1400 ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ 'ಸೀಮೆ' ಎಂಬುದು 'ಎಲ್ಲೆ' (boundary) ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹ ಸಂಗತಿ. (*ಪ್ರಾ. ಕ. ಆ. ವಿ.* ಪು, 208)

ವಿಜಯನಗರ ಅವಧಿಯಲ್ಲಿ 'ಸೀಮೆ' ಎಂಬ ಪದವನ್ನು 'ಮೇರೆ' ಅಥವಾ 'ಗಡಿ'ಗೆ ಸೀಮಿತವಾಗಿರಿಸದೇ ಅದು ಹಲವಾರು ಸ್ಥಳಗಳನ್ನು ಹೊಂದಿದಂಥ ಪ್ರದೇಶವಾಗಿತ್ತು ಎಂದು ತಿಳಿದುಬರುವುದು. 'ಸೀಮೆ' ಎನ್ನುವುದು 'ನಾಡು' ಎಂಬ ಪದಕ್ಕೆ ಪರ್ಯಾಯಪದವೆಂತಲೂ, ನಾಡು ಎಂಬುದು ಕರ್ನಾಟಕದ ಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದ ಪ್ರದೇಶವೆಂತಲೂ 'ಸೀಮೆ' ಎಂಬುದು ತೆಲುಗು ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಿದ್ದ ಸಮಾನಸ್ತರದ ಪ್ರಾದೇಶಿಕ ವಿಭಾಗವೆಂತಲೂ ಎ.ವಿ. ವೆಂಕಟರತ್ನಂರವರು ಅಭಿಪ್ರಾಯಪಡುತ್ತಾರೆ. (ವೆಂಕಟರತ್ನಂ, ಎ. ವಿ. *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ*, ಪು.22)

ಸಂಡೂರು ತಾಲೂಕಿನ ಶಾಸನವನ್ನು ಗಮನಿಸಿದಾಗ ವಿಜಯನಗರ ಅವಧಿಯ ಒಟ್ಟು ನಾಲ್ಕು ಸೀಮೆಗಳು ಕಾಣಸಿಗುತ್ತವೆ:

1. ನಾರೀಯ ಸೀಮೆ
2. ಆವಿನಮಡುವಿನ ಸೀಮೆ
3. ಚೋರಮನೂರು ಸೀಮೆ
4. ಸೊಂಡೂರು ಸೀಮೆ

1. ನಾರೀಯ ಸೀಮೆ

"...ನಾರೀಯ ಸೀಮೆಗೆ ಸಲ್ಲುವ ಯಿಟ್ಟಿಗೆ ಗ್ರಾಮ ಅಲುಭಳದೇವರ ಕಣುವೆಯ ಹತ್ತಿರದ ಮುದ್ದಾಪುರ ಗ್ರಾಮ ಮತ್ತು ನಾವ್ವತ್ತು ನಾಲ್ಕು ವಿನಿಯೋಗಕ್ಕೆ ಸಲುವ ಜಾಯನೂರು ಗ್ರಾಮಗಳು ನಾರೀಯ ಸೀಮೆಯ" ಆಡಳಿತಕ್ಕೊಳಪಟ್ಟ ಗ್ರಾಮಗಳಾಗಿದ್ದ ವೆಂದು (*SII*, Vol. IV. 253, p. 43) ತಿಳಿದುಬರುವುದು.

ಈ ಸೀಮೆಯಲ್ಲಿ ಕಂಡುಬರುವ ಎಲ್ಲಾ ಗ್ರಾಮಗಳು ಇಂದು ಹೊಸಪೇಟೆ ತಾಲೂಕಿನ ಕಂಪ್ಲಿ ಹೋಬಳಿಗೆ ಸೇರಿದ ಗ್ರಾಮಗಳಾಗಿವೆ. ಈ ಸೀಮೆಯಲ್ಲಿಯ ಯಿಟ್ಟಿಗೆ ಗ್ರಾಮವು ಇಂದು ಹೊಸಪೇಟೆ ತಾಲೂಕಿನ ಕಂಪ್ಲಿ ಹೋಬಳಿಗೆ ಸೇರಿದ ಗ್ರಾಮವಾಗಿದೆ. ಅಲುಭಳದೇವರ ಕಣುವೆ ಎಂಬುದು ಬಹುಶಃ ಇಂದಿನ ಗುಡಿ ಓಭಳಾಪುರ ಗ್ರಾಮವಾಗಿರಬೇಕು. ಮುದ್ದಾಪುರವೆಂಬುದು ಇಂದಿನ ಮುದ್ದಾಪುರ ಗ್ರಾಮವೇ ಆಗಿದೆ. ಈ ಗ್ರಾಮವು ವಿಜಯನಗರ ಅವಧಿಯಲ್ಲಿಯ ಹೆಸರನ್ನೇ ಇಂದಿಗೂ ಉಳಿಸಿಕೊಂಡುಬಂದಿದೆ. ಜಾಯನೂರು ಎಂಬುದು ಇಂದಿ ಜಾಯಗ ನೂರು ಎಂದು ಅಲ್ಪಸ್ವಲ್ಪ ಬದಲಾವಣೆಗೊಂಡು ಕರೆಯಲ್ಪಡುತ್ತಿದೆ.

ನಾರೀಸೀಮೆಯು ಹೊಸಪೇಟೆ ಮತ್ತು ಸಂಡೂರು ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿದ್ದು, ಇಂದಿಗೂ ಅಲ್ಪಸ್ವಲ್ಪ ಬದಲಾವಣೆಗೊಂಡಿದ್ದರು, ಆ ಗ್ರಾಮಗಳು ಅದೇ ಹೆಸರಿನಿಂದ ಕರೆಯಲ್ಪಡುತ್ತಿವೆ. ಈ ಸೀಮೆಯನ್ನು ಸಂಡೂರು ತಾಲೂಕಿನ ಗಡಿಗೆ ಸಂಬಂಧಿಸಿದಂತೆ ಗಮನಿಸುವುದಾದರೆ ಇದು ಇಂದಿನ ನಾರಿಹಳ್ಳ ಯೋಜನೆಯ ಪ್ರದೇಶದವರೆಗೆ ವ್ಯಾಪಿಸಿದ್ದಂತೆ ಕಂಡುಬರುತ್ತದೆ. ಸಂಡೂರು ಸೀಮೆಗೂ ಮತ್ತು ನಾರೀಸೀಮೆಗೂ ಈ ನಾರಿಹಳ್ಳ ಎಂದು ಕರೆಯುವ ಪುಟ್ಟ ಡ್ಯಾಮ್ ಪ್ರದೇಶವು ವಿಜಯನಗರದ ಅವಧಿಯಲ್ಲಿ ಈ ಎರಡೂ ಸೀಮೆಗೂ ಗಡಿ ಭಾಗವಾಗಿದ್ದಂತೆ ತೋರುವುದು.

2. ಆವಿನಮಡುವು ಸೀಮೆ

ಕ್ರಿ. ಶ. 1547ರ ಶಾಸನವು ಆವಿನಮಡುವಿನ ಸೀಮೆಗೆ ಸಲುವ ಅಂತಾಪುರ ಗ್ರಾಮದ ಉಲ್ಲೇಖವನ್ನು ನೀಡುವುದು. ಈ ಶಾಸನವು ಕೇವಲ ಇಂದಿನ ಸಂಡೂರು ತಾಲೂಕಿಗೆ ಸೇರಿದ ಅಂತಾಪುರ ಗ್ರಾಮದ ದಾಖಲೆಯನಷ್ಟೇ ತಿಳಿಸುವುದು.

ಇದನ್ನು ಹೊರತು ಪಡಿಸಿದರೆ ಈ ಸೀಮೆಯ ವ್ಯಾಪ್ತಿಗೆ ಒಳಪಡಬಹುದಾದ ಇನ್ನಿತರ ಗ್ರಾಮಗಳ ದಾಖಲೆ ನಮಗೆ ದೊರೆಯುವುದಿಲ್ಲ.

ಈ ಸೀಮೆಗೆ ಸಂಬಂಧಿಸಿದಂತೆ ಗಮನಿಸುವುದಾದರೆ ಆವಿನಮಡುವಿನ ಸುತ್ತಮುತ್ತಲಿರುವ ಅಂತಾಪುರ, ವಿಠಲಾಪುರ, ಕೆರೆರಾಂಪುರದಿಂದ ಮುಂದುವರೆದು (ಆಂಧ್ರಪ್ರದೇಶದ ಮಾರ್ಗವಾಗಿ) ಮೆಟ್ರಿಕಿವರೆಗೂ ಮತ್ತು ಚಿಕ್ಕಂತಾಪುರ, ಕೊಡಾಲುದಿಂದ ಮುಂದುವರೆದು (ಬಳ್ಳಾರಿ ಮಾರ್ಗವಾಗಿ) ತಾಳೂರು, ತೋರಣ ಗಲ್ಲಿನವರೆಗೆ ಈ ಭಾಗದ ಗಡಿ ವಿಸ್ತರಿಸಿಕೊಂಡಿರಬೇಕು. ಒಟ್ಟಿನಲ್ಲಿ ಆವಿನಮಡುವಿನ ಗಡಿಯನ್ನು ಗಮನಿಸುವುದಾದರೆ ಬಳ್ಳಾರಿ ಮಾರ್ಗವಾಗಿ ತೋರಣಗಲ್ಲಿನವರೆಗೆ ಆಂಧ್ರಪ್ರದೇಶದ ಮಾರ್ಗವಾಗಿ ಮೆಟ್ರಿಕೆವರೆಗೆ ಈ ಸೀಮೆಯ ಗಡಿ ವ್ಯಾಪಿಸಿದ್ದಂತೆ ಕಾಣುವುದು.

3. ಚೋರಮನೂರು ಸೀಮೆ

ಸಂಡೂರು ತಾಲೂಕಿನ ಸೋವೇನಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಮುಂದಿನ ಧ್ವಜಸ್ತಂಭದ ಪೀಠದ ಪೂರ್ವದ ಮುಖದಲ್ಲಿನ ಶಾಸನದಲಿ ಚೋರಮನೂರು ಸೀಮೆಯ ಉಲ್ಲೇಖವಿರುವುದು (*ARSIE*, 1924-25. ಸಂ. 1925ರ 281). ಆದರೆ ಈ ಸೀಮೆಯು ಎಷ್ಟು ಗ್ರಾಮಗಳನ್ನೊಳಗೊಂಡಿತ್ತು ಎಂಬ ಕುರಿತಾದ ಮಾಹಿತಿ ನಮಗೆ ಲಭಿಸುವುದಿಲ್ಲ. ಈ ಸೀಮೆಯು (ಕೂಡ್ಲಿಗಿ ಮಾರ್ಗವಾಗಿ) ಸೋವೇನಹಳ್ಳಿ, ಬಂಡ್ರಿ, ಕಳಿಂಗೇರಿ, ಹುಲಿಕುಂಟೆ, ಅಗ್ರಹಾರ, ಗೆಣತಿಕಟ್ಟೆ ಹೀಗೆ ಈ ಭಾಗದ ಕೆಲವು ಗ್ರಾಮಗಳವರೆಗೆ ಈ ಸೀಮೆಯು ವ್ಯಾಪಿಸಿದ್ದಂತೆ ಕಾಣುವುದು.

4. ಸೊಂಡೂರು ಸೀಮೆ

"...... ಸೊಂಡೂರು ಸೀಮೆಗೆ ಸಲುವ ತಾಳೂರು ಗ್ರಾಮ" (*SII*, Vol. IV, ಶಾ. ಸಂ. 253, ಪು. 43) ಸೊಂಡೂರು ಸೀಮೆವೊಳಗಣ ತಾಳೂರು ಗ್ರಾಮದಲು ಊರಿಗೆ ಪಡುವಲುವೊಂದು ಚಿಕಬೆಂಚೆಯೆಂಬ ಕುಂಟೆ" (*SII*, Vol. IV, ಶಾ. ಸಂ. 250, ಪು. 42) ಈ ಎರಡೂ ಶಾಸನಗಳಲ್ಲಿ ಉಲ್ಲೇಖವಾಗಿರುವ ತಾಳೂರು ಗ್ರಾಮವು ಇಂದು ಸಂಡೂರು ತಾಲೂಕಿನ ಒಂದು ಗ್ರಾಮವಾಗಿದೆ ಮತ್ತು ಈ ಸೀಮೆಯಲ್ಲಿ ಕಂಡುಬರುವ ಈ ಗ್ರಾಮಕ್ಕೆ ಪಶ್ಚಿಮಕ್ಕೆ ಇರುವ ಚಿಕಬೆಂಚೆಯ ಕುಂಟೆಯು ಬಹುಶಃ ಇಂದು ಪಾಳುಬಿದ್ದಿರಬೇಕು. ಏಕೆಂದರೆ ಆ ಹೆಸರಿನ ಕುಂಟೆಯು ಆ ಗ್ರಾಮದ ಸುತ್ತಮುತ್ತ ಎಲ್ಲೂ ಕಾಣಸಿಗುವುದಿಲ್ಲ. "....... ಸೊಂಡೂರು ಸೀಮೆವೊಳಗಣ ಬೂದಿಗುಪ್ಪೆ ಈ ಗ್ರಾಮದ ಹೊಲ ಮೇರೆವೊಳಗಣ

ಧರಣಿಗೊಂಡನ ಹಟಿ, ಅಮರಾಪುರ ಮುಂತಾದ ಕೀಳುವಳಿಗಳು ಸಹಾ ಬೂದಿಗುಪ್ಪೆಯ ಗ್ರಾಮ 1 ಸೋಮಲಾಪುರ ಗ್ರಾಮ 11ಕ್ಕೆ ಪ್ರತಿಪಲ್ಲಟವಾಗಿ ಹೋದ ಮುದಲಾಪುರ, ತೊಗಲಗಲ್ಲು ಗ್ರಾಮ 2 . . ." (*SII*, Vol. IV, ಶಾ. ಸಂ. 254, ಪು. 44). ಈ ಸೀಮೆಯಲ್ಲಿ ಕಂಡುಬರುವ ಅಮರಾಪುರವು ಸಂಡೂರು ತಾಲೂಕಿನ ಅಪ್ಪಲಾಪುರ ಗ್ರಾಮವಾಗಿರಬೇಕು. ಸೋಮಲಾಪುರ ಗ್ರಾಮವು ಸಹ ಈ ತಾಲೂಕಿಗೆ ಸೇರಿದ್ದಾಗಿದೆ. ಮುದಲಾಪುರ ಗ್ರಾಮವು ಹೊಸಪೇಟೆ ತಾಲೂಕಿಗೆ ಸೇರಿದ ಗ್ರಾಮವಾಗಿದೆ. ಬೂದಿಗುಪ್ಪೆಯು ಗಂಗಾವತಿ ತಾಲೂಕಿಗೆ ಸೇರಿದ್ದಾಗಿದೆ. ಇನ್ನೂ ಈ ಸೀಮೆಯಲ್ಲಿ ಕಂಡುಬರುವ ಧರಣಿಗೊಂಡನ ಹಟಿ ಎಂಬ ಗ್ರಾಮನಾಮವು ಇಂದು ಕಂಡುಬರುವುದಿಲ್ಲ. ಬಹುಶಃ ಇಂದು ಈ ಗ್ರಾಮ ಪಾಳುಬಿದ್ದಿರಬೇಕು. ತೊಗಲುಗಲ್ಲು ಎಂಬ ಗ್ರಾಮವು ವಿಜಯನಗರ ಅವಧಿಯ ಅನೇಕ ಶಾಸನಗಳಲ್ಲಿ ಕಂಡುಬಂದರೂ ಪ್ರಸ್ತುತ ಈ ಗ್ರಾಮವು ಹೊಸಪೇಟೆ ತಾಲೂಕಿನಲ್ಲಿ ಕಾಣಸಿಗುವುದಿಲ್ಲ. ಬಹುಶಃ ಇಂದು ಈ ಗ್ರಾಮವು ಸಹ ಪಾಳುಬಿದ್ದಿರಬೇಕು ಅಥವಾ ಬೇರೆ ಹೆಸರಿನಿಂದ ಕರೆಯಿಸಿಕೊಳ್ಳುತ್ತಿರಬೇಕು.

ಈ ಸೀಮೆಗೆ ಸಂಬಂಧಿಸಿದಂತೆ ಗಮನಿಸುವುದಾದರೆ, ಈ ಸೀಮೆಯು ಇಂದಿನ ಹೊಸಪೇಟೆ, ಗಂಗಾವತಿ, ಸಂಡೂರು ತಾಲೂಕಿನ ಕೆಲವು ಗ್ರಾಮಗಳ ನ್ನೊಳಗೊಂಡಿದ್ದಂತೆ ತಿಳಿದುಬರುವುದು. ಹೊಸಪೇಟೆ ತಾಲೂಕಿನ ಕೆಲವು ಗ್ರಾಮಗಳ ನ್ನೊಳಗೊಂಡಂತೆ (ಗಂಗಾವತಿ ಮಾರ್ಗವಾಗಿ) ಗಂಗಾವತಿ ತಾಲೂಕಿನ ಬೂದಿಗುಪ್ಪೆ ಯವರೆಗೂ ಮತ್ತು ಸಂಡೂರು ತಾಲೂಕಿನ ಕೆಲವು ಗ್ರಾಮಗಳನ್ನೊಳಗೊಂಡಂತೆ ಸೋಮಲಾಪುರದ (ಕೂಡ್ಲಿಗೆ ಮಾರ್ಗವಾಗಿ) ವರೆಗೂ ಈ ಸೀಮೆಯ ಗಡಿ ವಿಸ್ತರಿಸಿತ್ತೆಂದು ತೋರುವುದು.

ದೊರವಡಿ ನಾಡು ಅಥವಾ ದೊರವಡಿ – 70

'ನಾಡು' ಎಂದರೆ ಪ್ರಾಚೀನ ಕಾಲದ ಒಂದು ಆಡಳಿತ ವಿಭಾಗ. ಇದು ಅನೇಕ ಹಳ್ಳಿಗಳನ್ನೊಳಗೊಂಡ ವಿಶಾಲವಾದ ಭೂಪ್ರದೇಶವಾಗಿದ್ದು, ಈ ಆಡಳಿತ ವಿಭಾಗದಲ್ಲಿ ಇಂತಿಷ್ಟೇ ಹಳ್ಳಿಗಳ ವ್ಯಾಪ್ತಿಯನ್ನು ಒಳಗೊಂಡಿರಬೇಕಾದ ನಿರ್ದಿಷ್ಟ ಪ್ರದೇಶ. (*ತರ್ದವಾಡಿ ನಾಡು*, ಡಾ. ಎಸ್. ಕೆ. ಕೊಪ್ಪಾ, ಪು. 31)

ದೊರವಡಿ–70 ಬಲ್ಲಕುಂದೆ ನಾಡಿನ ದೊಡ್ಡ ಉಪವಿಭಾಗಗಳಲ್ಲಿ ಒಂದು. ಇಂದಿನ ಸಂಡೂರು ತಾಲೂಕಿನ ಕುಗ್ರಾಮವಾದ ದರೋಜಿಯೇ ಪ್ರಾಚೀನ ದೊರವಡಿ–70ರ ಮುಖ್ಯ ಪಟ್ಟಣವಾಗಿತ್ತು (*ಪ್ರಾ. ಕ. ಆ. ವಿ.*, ಪು–119). ಈ ದೊರವಡಿ ನಾಡು ಇಂದಿನ ಸಂಡೂರು, ಬಳ್ಳಾರಿ ಮತ್ತು ಹೊಸಪೇಟೆ ತಾಲೂಕಿನ ಕೆಲವು ಹಳ್ಳಿಗಳ ವ್ಯಾಪ್ತಿಯನ್ನು ಪಡೆದಿತ್ತೆಂದು ಸ್ಥೂಲವಾಗಿ ಹೇಳಬಹುದು.

ವಿಜಯನಗರದ ಅವಧಿಯಲ್ಲಿ ಇದು ಆರು ಗ್ರಾಮಗಳ ಆಡಳಿತಕ್ಕೆ ಸೀಮಿತವಾಗಿತ್ತು. ಕುರೆಯಕುಪ್ಪೆಯು ಅದರಲ್ಲಿಯ ಒಂದು ಅಗ್ರಹಾರವಾಗಿತು. ಹೀಗೆ ಈ ವಿಭಾಗದಲ್ಲಿ ಹೊಸಪೇಟೆ ತಾಲೂಕಿನ ಹಂಪೆ, ಹೊಸವೂರು, ಸಂಡೂರು ತಾಲೂಕಿನ ದರೋಜಿ, ತಾಳೂರು, ಕುರೆಕುಪ್ಪ ಗ್ರಾಮಗಳು ಸೇರಿ ಐದು ಹಳ್ಳಿಗಳ ದೊರವಡಿ–70ಕ್ಕೆ ಸೇರಿದವುಗಳಾಗಿದ್ದುವೆಂದು ಗುರುತಿಸಬಹುದು. (*ಪ್ರಾ. ಕ. ಆ. ವಿ.*, ಪು.119)

ಒಟ್ಟಿನಲ್ಲಿ, ಸಂಡೂರು ತಾಲೂಕು ವಿಜಯನಗರ ಅವಧಿಯಲ್ಲಿ ನಾಲ್ಕು ಸೀಮೆಯ ಮತ್ತು ಒಂದು ನಾಡುಗಳ ಆಡಳಿತ ವಿಭಾಗಗಳನ್ನೊಳಗೊಂಡಿದ್ದ ಬಗ್ಗೆ ಶಾಸನಗಳು ದಾಖಲಿಸುತ್ತವೆ. ವಿಜಯನಗರ ಅವಧಿಗಿಂತಲೂ ಪೂರ್ವದಲ್ಲಿ ಅನೇಕ ಅರಸರ ಆಳ್ವಿಕೆಗೊಳಪಟ್ಟಿದ್ದ ಈ ಪ್ರದೇಶವು ಆಯಾ ಅವಧಿಯ ಅರಸರ ಆಡಳಿತಕ್ಕೆ ತಕ್ಕಂತೆ ಇಲ್ಲಿನ ಸೀಮಾಪ್ರದೇಶಗಳ ವ್ಯಾಪ್ತಿಯು ಇದ್ದು, ಮುಂದೆ ವಿಜಯನಗರ ಅವಧಿಯಲ್ಲಿ ಈ ತಾಲೂಕಿನ ಶಾಸನಗಳಲ್ಲಿ ದಾಖಲೆಗೊಂಡಂತೆ ಈ ಸೀಮಾ ಪ್ರದೇಶಗಳು ವಿಸ್ತರಿಸಿಕೊಂಡಿರಬೇಕು. ಆದರೆ ಈ ಶಾಸನಗಳಲ್ಲಿಯೂ ಈ ತಾಲೂಕಿನಲ್ಲಿ ಕಂಡುಬರುವ ಸೀಮಾ ಆಡಳಿತ ವಿಭಾಗಗಳ ಸ್ಪಷ್ಟ ಮಾಹಿತಿ ದೊರೆಯದಿದ್ದರೂ ಇರುವ ಕೆಲವೇ ಶಾಸನಗಳಲ್ಲಿ ಉಲ್ಲೇಖವಾದ ಗ್ರಾಮಗಳ ಆಧಾರದಿಂದ, ಈ ತಾಲೂಕಿನ ನಕ್ಷೆಯನ್ನು ಆಧರಿಸಿ, ಆ ಗ್ರಾಮದ ಸುತ್ತಮುತ್ತ ಇರುವ ಕೆಲವು ಪ್ರಮುಖ ಗ್ರಾಮಗಳನ್ನು ಈ ಸೀಮಾ ಆಡಳಿತ ವಿಭಾಗಗಳನ್ನೊಳ ಗೊಂಡಿರಬೇಕು ಎಂದು ಊಹಿಸುವುದರ / ಚರ್ಚಿಸುವುದರ ಮೂಲಕ ಸ್ಪಷ್ಟ ಪಡಿಸುವ ಪ್ರಯತ್ನಮಾಡಲಾಗಿದೆ.

ಆಧಾರ ಗ್ರಂಥಗಳು

1. *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು*, ಎಂ. ಎಂ. ಕಲಬುರ್ಗಿ, ಪು.203
2. *ಅದೇ*, ಪು.208
3. ವೆಂಕಟರತ್ನಂ, ಎ. ವಿ. *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ*, ಪು.22
4. *SII.* Vol. IV-253, PP.43
5. *ARSIE,* 1924-25, ಸಂ.1925, ರ 281
6. *ತರ್ದವಾಡಿ ನಾಡು*, ಡಾ. ಎಸ್. ಕೆ. ಕೊಪ್ಪಾ, ಪು.31
7. ಸಂಡೂರು ತಾಲೂಕಿನ ನಕ್ಷೆಯನ್ನು ಲೇಖನ ಸಿದ್ಧಪಡಿಸುವ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

೨೬. ಕನಕಗಿರಿ ಮತ್ತು ವಿಜಯನಗರ ಸಂಬಂಧ

ಡಾ. ಎಂ. ಕೆ. ದುರುಗಪ್ಪ

ಕೊಪ್ಪಳ ಜಿಲ್ಲೆಯ ಕನಕಗಿರಿ ಒಂದು ಐತಿಹಾಸಿಕ ಸ್ಥಳವಾಗಿದ್ದು ಹಿಂದೆ ಈ ಸ್ಥಳವನ್ನು 'ಸುವರ್ಣಗಿರಿ' ಎಂದು ಕರೆಯಲಾಗುತ್ತಿತ್ತು. ಅಶೋಕನ ಕಾಲದಲ್ಲಿ ಸುವರ್ಣಗಿರಿ ಆತನ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯವಾಗಿತ್ತು. ಕೊಪ್ಪಳ, ಗುಲ್ಬರ್ಗಾ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅಶೋಕನ ಶಿಲಾಶಾಸನಗಳು ದೊರೆತಿವೆ. ಪಂಚದ್ಯಾನಿ ಬುದ್ಧರಲ್ಲಿ ಒಬ್ಬನಾದ ಕನಕಮುನಿ ಎಂಬವನು ಈ ಪ್ರದೇಶಗಳಲ್ಲಿ ಸಂಚರಿಸಿರಬೇಕು, ಅದಕ್ಕಾಗಿ ಈ ಸ್ಥಳಕ್ಕೆ ಕನಕಗಿರಿ ಎಂದು ಕರೆದಿರಬೇಕು. ಏಕೆಂದರೆ ಈ ವ್ಯಕ್ತಿ ನಡೆದಾಡಿದ ಕೆಲವು ಪ್ರದೇಶಗಳು ಇವನ ಹೆಸರುಗಳಿಂದ ಕರೆಯಲ್ಪಟ್ಟಿವೆ. ಕನಕಗಿರಿ ಪುಷ್ಪಾ ಜಯಂತಿ ಗೋಪಿಕಾ ಎಂಬ ನದಿಗಳ (ಹಳ್ಳ) ತ್ರಿವೇಣಿಸಂಗಮ ತೀರದಲ್ಲಿ ಕನಕಮುನಿ ಸ್ವಲ್ಪ ದಿನಗಳ ಕಾಲ ನೆಲೆಸಿದ್ದನು ಎಂದು ನಂಬಲಾಗಿದೆ. ಲಕ್ಷ್ಮೀ ನರಸಿಂಹ ದೇವರು ಇಲ್ಲಿ ಕನಕರಾಯನಾಗಿ ಪ್ರಸಿದ್ಧನು; "ಎರಡನೇ ತಿರುಪತಿ" ಎಂದು ಈ ಕನಕಗಿರಿಯನ್ನು ಕರೆಯಲಾಗಿದೆ.

ಕನಕಗಿರಿಯಲ್ಲಿ ಗುಜ್ಜಲ ಬೆಡಗಿನ ಬೇಡ ಜನಾಂಗದ ನಾಯಕ ಅರಸರು ಕ್ರಿ. ಶ. 1436ರ ಹೊತ್ತಿಗೆ ಅಧಿಕಾರಕ್ಕೆ ಬಂದರೆಂದು ತಿಳಿದುಬರುವುದು. ವಿಜಯನಗರ ಅರಸರ ಸಹಾಯ, ಸಹಕಾರದಲ್ಲಿ ಬೆಳೆದ ನಾಯಕರು "ಕನಕಗಿರಿಯನ್ನು ಕಣ್ಣಿದ್ದವರು ನೋಡಬೇಕು, ಕಾಲಿದ್ದವರು ಹಂಪೆ ನೋಡಬೇಕು" ಎನ್ನುವಂತೆ ಮಾಡಿದರು. ಕನಕಗಿರಿಯ ಆರಂಭಿಕ ಅರಸನಾಗಿ ಪರಸಪ್ಪ ಉಡಚನಾಯಕನು ಕ್ರಿ. ಶ. 1436ರಲ್ಲಿ ಅಧಿಕಾರಕ್ಕೆ ಬಂದನು. ಅನಂತರ ಬಂದ ಎಂಟು ನಾಯಕ ಅರಸರು ಮತ್ತು ಹುಲಿಹೈದರದಿಂದ ಕೆಲವು ನಾಯಕರು ಅಧಿಕಾರ ನಡೆಸಿದರು. ಇಮ್ಮಡಿ ಉಡಚ ನಾಯಕನ ಕಾಲದವರೆಗೆ (1618–1689) ವಿಜಯನಗರ ಅರಸರ ಹೆಸರಿನಲ್ಲಿ ಶಿಲಾಶಾಸನಗಳನ್ನು ಹಾಕಿಸಿದ ನಾಯಕರು ನಂತರ ತಮ್ಮ ಹೆಸರುಗಳಲ್ಲಿ ಶಾಸನಗಳನ್ನು ಹಾಕಿಸಿದರು. ಕನಕಗಿರಿ ಮತ್ತು ವಿಜಯನಗರ ಸಂಬಂಧವನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಕೆಲವು ಐತಿಹ್ಯಗಳ ಹಿನ್ನೆಲೆಯಲ್ಲಿ ವಿಜಯನಗರ ಅರಸರಿಗೆ ಮತ್ತು ಕನಕಗಿರಿ ನಾಯಕರಿಗೆ ಹಾಗೂ ಕುಮ್ಮಟದುರ್ಗದ ನಾಯಕರಿಗೂ ಸಂಬಂಧಗಳಿರುವುದು ತಿಳಿದುಬರುತ್ತದೆ. ವಿಜಯನಗರದ ಆರಂಭಿಕ ರಾಜಧಾನಿ ಆನೆಗೊಂದಿಯಾಗಿದ್ದು

ಈ ಪ್ರದೇಶದಲ್ಲಿಯೇ ವಿಜಯನಗರ ಪೂರ್ವದ ರಾಜ್ಯವೊಂದು ಹೆಸರಾಗಿತ್ತು. ಅದುವೇ ಕುಮ್ಮಟದುರ್ಗ ರಾಜ್ಯವಾಗಿದೆ. ಕುಮ್ಮಟದುರ್ಗದ ದೊರೆಗಳಾದ ಕಂಪಲಿ ರಾಯ ಮತ್ತು ಗಂಡುಗಲಿ ಕುಮಾರರಾಮ ಉತ್ತರದ ಮುಸ್ಲೀಮ್ ದಾಳಿಗಳನ್ನು ತಡೆಯುವಲ್ಲಿ ಯಶಸ್ವಿಯಾದರು. ಕಂಪಲಿರಾಯ ತನ್ನ ತಂದೆ–ತಾಯಿಗಳ ನೆನಪಿಗಾಗಿ ಹಂಪೆಯ ಹೇಮಕೂಟದಲ್ಲಿ ತ್ರಿಕೂಟ ದೇವಾಲಯವನ್ನು ಕಟ್ಟಿಸಿ ಲಿಂಗಗಳನ್ನು ಸ್ಥಾಪಿಸಿದನೆಂದು ಶಿಲಾಶಾಸನಗಳಿಂದ ತಿಳಿಯುವುದು. ಬೇಡರು, ಬೇಡ ಅರಸರು ಬಹುತೇಕವಾಗಿ 'ನಾವು ಹಂಪೆ ಪ್ರದೇಶದವರು' ಎಂದು ಹೇಳಿಕೊಳ್ಳುತ್ತಾರೆ. ಹಂಪೆ ಹುಣ್ಣಿಮೆ, ಹಂಪೆ ರಥೋತ್ಸವ, ದಸರಾ ಹಬ್ಬ ಮುಂತಾದ ಸಾಂಸ್ಕೃತಿಕ ಚಟುವಟಿಕೆ ಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಾರೆ.

ಕುಮ್ಮಟದುರ್ಗದ ಕಂಪಿಲರಾಯನ ಹೆಂಡತಿ ಹರಿಯಾಲದೇವಿ ಕನಕಗಿರಿ ನಾಯಕರ ಮಗಳು. ಇವಳು ಗುಜ್ಜಲ ಹರಿಹರದೇವಿ ಎಂದು ಹೆಸರಾಗಿದ್ದಾಳೆ. ಮುಮ್ಮಡಿ ಸಿಂಘನಾಯಕನ ಹೆಂಡತಿ ಮಾದನಾಯಕಿ, ಕಂಪಿಲರಾಯನ ಮಗಳಾದ ಮಾರವ್ವ/ಸಿಂಗಮ್ಮ; ಮಾರವ್ವಳ ಗಂಡ ಭಾವ ಸಂಗಮ ಇತ್ಯಾದಿ ಅಂಶಗಳನ್ನು ಕುಮಾರರಾಮಸಾಂಗತ್ಯದಲ್ಲಿ ಕಾಣಬಹುದು. ಗುಡೆಕೋಟೆ, ಉಜ್ಜನಿ, ಜರ್ಮಲಿ, ಸಂಡೂರು, ವಡ್ಡು ದರೋಜಿ ಮುಂತಾದ ಪ್ರದೇಶಗಳಲ್ಲಿ ಅಧಿಕಾರಕ್ಕೆ ಬಂದ ಪಾಳೆಯಗಾರರ ಬಗ್ಗೆ ಅಂತಪುರ ಕೈಫಿಯತ್, ದರೋಜಿ ಕೈಫಿಯತ್ ಮಾಹಿತಿ ನೀಡುತ್ತವೆ. ಇವರು ಕುಮಾರರಾಮನ ವಂಶಸ್ಥರು. ಕುಮ್ಮಟದುರ್ಗ ನಶಿಸಿದ ನಂತರ ಈ ಪ್ರದೇಶದಲ್ಲಿದ್ದವರೇ ವಿಜಯನಗರ ಸ್ಥಾಪನೆಗೆ ಕಾರಣರಾದರು ಎಂದು ತಿಳಿಯುವುದು ಚರಿತ್ರೆಯ ಸ್ಥಿತ್ಯಂತರದ ಪೂರಕವಾದ ಅಂಶ ಎನ್ನಬಹುದು. ಕದಂಬರಾದಿಯಾಗಿ ಹೊಯ್ಸಳ ಅರಸರವರೆಗೂ ಈ ಅಂಶ ಉಲ್ಲೇಖಿಸಬಹುದು. ಕುಮ್ಮಟದುರ್ಗ ಅರಸರ ಮೂಲ ಹಾಗೂ ನಂತರದ ಚರಿತ್ರೆಯನ್ನು ಕೇವಲ ಶಿಲಾಶಾಸನಗಳನ್ನು ಮಾತ್ರ ಆಧರಿಸಿ ಚರ್ಚಿಸುವುದು ಸೂಕ್ತವಾದರೂ ಅನೇಕ ವಿಷಯಗಳು ಐತಿಹ್ಯಗಳ ಹಿನ್ನೆಲೆಯಲ್ಲಿಯೇ ರಚಿತವಾಗಿವೆ. ಕುಮ್ಮಟದ ಅರಸ ಕಂಪಿಲರಾಯನ ಮಗಳು ಮಾರವ್ವಳ ಗಂಡ ಭಾವ ಸಂಗಮನ ಮಕ್ಕಳಾದ ಹರಿಹರ ಬುಕ್ಕರಾಯ ವಿಜಯನಗರ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದರು; ಇವರಿಗೆ ಇವರ ಸಹೋದರರಾದ ಮಾರಣ್ಣ, ಮುದ್ದಣ್ಣ, ಕಂಪಣ್ಣ ಸಹಾಯ ಮಾಡಿದರು. ವಿಜಯನಗರ ಚರಿತ್ರೆ ಆನೆಗೊಂದಿಯಿಂದ ಆರಂಭವಾಗುವುದು. ಹರಿಹರ ವಿಜಯನಗರ ನಿವೇಶನದಲ್ಲಿ ಮೊಲವೊಂದು ಬೇಟೆನಾಯಿಯನ್ನು ಬೆನ್ನಟ್ಟಿಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು ಈ ಸ್ಥಳ ಗಂಡುಮೆಟ್ಟಿನ ಭೂಮಿ ಎಂದು ನಿರ್ಧರಿಸಿ ಅಲ್ಲಿಗೆ ರಾಜಧಾನಿಯನ್ನು ಬದಲಾಯಿಸಿದನು. ಸಂಗಮ ಒಬ್ಬ ಕುಲೀನ

ಮತ್ತು ಯೋಧ, ಆತನ ಮಕ್ಕಳು ವೀರಯೋಧರಾಗಿಯೇ ಹೊರಹೊಮ್ಮಿದರು. ಸಂಗಮನು ಸ್ಥಳೀಯ ನಾಯಕನಾಗಿದ್ದನು. ಈ ನಾಯಕನ ಮಕ್ಕಳೇ ವಿಜಯನಗರ ಸ್ಥಾಪಕರು. ಮಾರಪ್ಪ, ಮುದ್ದಣ್ಣ, ಬಕ್ಕಣ್ಣ, ಮಾದಪ್ಪ, ಪಾಲಯ್ಯ, ಓಬಯ್ಯ, ಕೆಂಪಣ್ಣ, ಹರಿಯಮ್ಮ ಮುಂತಾದ ಹೆಸರುಗಳು ಬೇಡರಲ್ಲಿ ಅದರಲ್ಲೂ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಾಗಿವೆ. ಕುಮ್ಮಟದ ಅರಸರು ಅಂದು ದೆಹಲಿ ಸುಲ್ತಾನರ ವಿರುದ್ಧ ನಡೆಸಿದ ಹೋರಾಟಗಳಲ್ಲಿ ಹಿಂದೂಧರ್ಮ ರಕ್ಷಣೆಯ ಕಾಳಜಿ ಎದ್ದು ಕಾಣುತ್ತದೆ. ದಕ್ಷಿಣ ಭಾರತದಲ್ಲಿ ಅಲ್ಲಾವುದ್ದೀನ್ ಖಿಲ್ಜಿ, ಮಹಮದ್ ಬಿನ್ ತುಗಲಕ್ ದಾಳಿಗಳಿಗೆ ಅನೇಕ ಅರಸರು ಅಂಜಿ ಶರಣಾಗಿ ಕಪ್ಪಕಾಣಿಕೆ ನೀಡಿದ ಉದಾಹರಣೆಗಳಿವೆ. ಹರಿಹರ ಬುಕ್ಕರಲ್ಲಿನ ಹಿಂದೂ ಧರ್ಮದ ಕಾಳಜಿಯ ಮೂಲವನ್ನು ಕಂಪಿಲರಾಯ ಕುಮಾರರಾಮ ಮತ್ತು ಭಾವ ಸಂಗಮನಲ್ಲಿ ಕಾಣಬಹುದು. ಕುಮಾರರಾಮನ ಸೇನಾಧಿಪತಿಗಳಲ್ಲಿ ಭಾವ ಸಂಗಮನು ಪ್ರಮುಖ. ಅಂದಾಗ ವಿಜಯನಗರದ ಸ್ಥಾಪಕರು ಬೇರಾರು ಅಲ್ಲ ಸ್ಥಳೀಯ ಭಾವಸಂಗಮನ ಮಕ್ಕಳೇ ಆಗಿರುವರು. ವಿಜಯನಗರ ಅರಸರು ತುಂಗಭದ್ರಾ ನದಿಯನ್ನು ದಾಟಿಹೋಗುವ ಯತ್ನ ಮಾಡಲು ಪ್ರಯತ್ನಿಸಿದರೂ ಅದು ಕಷ್ಟವಾಗಿತ್ತು. ಬಹುಮನಿಯರ ದಾಳಿಗಳಿಂದ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವುದರಲ್ಲಿ ಅನೇಕ ನಾಯಕರ ಸಹಾಯಪಡೆದರು. ದಕ್ಷಿಣದ ಕಡೆ ರಾಜ್ಯ ವಿಸ್ತರಿಸಿದರು. ವಿಜಯನಗರ ಕಾಲದ ಸ್ಥಳೀಯ ನಾಯಕರಲ್ಲಿ ಬೇಡರೇ ಅಧಿಕ ಸಂಖ್ಯೆಯಲ್ಲಿ ಕಂಡುಬರುವರು.

ಕುಮ್ಮಟದುರ್ಗದ ನಾಯಕರ ಸಂಬಂಧಿಗಳಾದ ಕನಕಗಿರಿ ನಾಯಕರು ಕಂಪಿಲರಾಯನ ಅನುಗ್ರಹ ಸಹಾಯ ಸಹಕಾರದಿಂದ ಹೇಮಗುಡ್ಡದಲ್ಲಿ ಬೇಹುಗಾರರಾಗಿ ಕೆಲಸ ಮಾಡುತ್ತಿದ್ದರು. ಇವರ ಮೂಲ ಸೇವೆಯ ಸ್ಥಳ ಇದಾಗಿದೆ. ಇಲ್ಲಿಂದ ಹಂಪಸದುರ್ಗ ಹಾಗೆ ಕನಕಗಿರಿ ಪ್ರದೇಶಕ್ಕೆ ಬಂದು ನೆಲೆಸಿ ವಿಜಯನಗರ ಅರಸರ ಪ್ರೋತ್ಸಾಹದಿಂದ ನಾಯಕರಾಗಿ ಪ್ರಸಿದ್ಧರಾದರು. ಕುಮಾರರಾಮನ ಸೇವೆಯಲ್ಲಿದ್ದ ಅನೇಕರು ಈ ಕನಕಗಿರಿ ನಾಯಕರ ಜೊತೆ ಸೇರಿದರು. ಹಂಪಸದುರ್ಗ ಅವರ ಸೇನಾನೆಲೆಯಾಯಿತು. ಕನಕಗಿರಿ ಸಂಸ್ಥಾನದ ಮೊದಲ ನಾಯಕನಾದ ಪರಸಪ್ಪ ಉಡಿಚನಾಯಕನು ಪರಾಕ್ರಮಿ, ದೈವಿಭಕ್ತ, ಗೋವುಗಳ ಒಡೆಯನೂ ಆಗಿ ಕನಕಗಿರಿ ಪ್ರದೇಶದಲ್ಲಿ ಪ್ರಸಿದ್ಧಿಗೆ ಬಂದನು. ಈ ನಾಯಕನ ಪ್ರಸಿದ್ಧಿ ವಿಜಯನಗರಕ್ಕೆ ಮುಟ್ಟಿತು. ಪ್ರೌಢದೇವರಾಯನು ಪರಸಪ್ಪಉಡಿಚನಾಯಕನನ್ನು ಆಸ್ಥಾನಕ್ಕೆ ಕರೆಸಿಕೊಂಡು ಬಲಾಬಲ ಪರೀಕ್ಷೆ ನಡೆಸಿದನು. ಮದಿಸಿದ ಆನೆಯನ್ನು ಪರಸಪ್ಪನಾಯಕನು ಅದರ ಬಾಲವಿಡಿದು ನಿಲ್ಲಿಸಿದನು. ಈ ಸನ್ನಿವೇಶವನ್ನು ಕಂಡ ವಿಜಯನಗರದ ದೊರೆ ಸಾಕಷ್ಟು ಬಳುವಳಿಯನ್ನು ಕೊಟ್ಟನು ಹಾಗೂ ಆಸ್ಥಾನದ ಬಲಪಾರ್ಶ್ವ ರಾಜಮರ್ಯಾದೆಯನ್ನು ನೀಡಿದನು. ಕನಕಗಿರಿ ಪ್ರದೇಶಕ್ಕೆ ವಿಜಯನಗರದ

ಸಾಮಂತನನ್ನಾಗಿ ಮಾಡಿದನು. ವಿಜಯನಗರದ ಉತ್ತರದ ಮುಸ್ಲೀಮ್ ದಾಳಿಗಳನ್ನು ತಡೆಯುವಲ್ಲಿ ಕನಕಗಿರಿ ನಾಯಕರು ಪ್ರಮುಖಪಾತ್ರ ವಹಿಸಿದರು. ಈ ಮೂಲಕ ವಿಜಯನಗರ ಅರಸರೊಡನೆ ಒಳ್ಳೆಯ ಸಂಬಂಧಗಳು ಕಂಡುಬಂದವು. ಕನಕಗಿರಿಯ ಆರಾಧ್ಯ ದೈವ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಪ್ರೌಢದೇವರಾಯನು ಕ್ರಿ. ಶ. 21-10-1436ರಲ್ಲಿ ಕನಕಗಿರಿ ಪೇಟೆಯನ್ನು ನೀಡಿದನು. ಈ ಬಗ್ಗೆ ಶಿಲಾಶಾಸನ ಮಾಹಿತಿ ನೀಡುತ್ತದೆ. ಕನಕಾಚಲಾದೇವಾಲಯ ಅಭಿವೃದ್ಧಿಯತ್ತ ಹೋಯಿತು. ವಿಜಯನಗರ ಅರಸರ ಅಧೀನರಾಗಿ ಕನಕಗಿರಿ ನಾಯಕರು ಬೆಳೆಯುತ್ತಾ ಬಂದರು. ಪ್ರೌಢದೇವರಾಯನ ನಂತರ ಬಂದ ನರಸಿಂಹದೇವರಾಯನು ಕನಕಗಿರಿ ನರಸಿಂಹ ದೇವರ ಅಮೃತಪಡಿಗೆ ಕನಕಗಿರಿಯ ವಾಯವ್ಯ ದಿಕ್ಕಿನ ಗೋಡಿನಹಾಳ ಗ್ರಾಮವನ್ನು ಮತ್ತು ಅದಕ್ಕೆ ಸೇರುವ ಗೋವರಹಾಳನ್ನು ಕ್ರಿ. ಶ. 11-07-1488ರಲ್ಲಿ ನೀಡಿದ ಬಗ್ಗೆ ಶಿಲಾಶಾಸನ ಮಾಹಿತಿ ನೀಡುತ್ತದೆ. ನವಾಬಉಡಿಚನಾಯಕನು (1510-1533) ಅಧಿಕಾರಕ್ಕೆ ಬಂದ ಕಾಲಕ್ಕೆ ವಿಜಯನಗರವನ್ನು ಕೃಷ್ಣದೇವರಾಯನು ಆಳುತ್ತಿದ್ದನು. ಇವನ ಕಾಲಕ್ಕೆ ಕನಕಗಿರಿ ಅಭಿವೃದ್ಧಿಯತ್ತಾ ಹೋಯಿತು. ಅನೇಕ ದೇವಾಲಯಗಳು, ಗೋಪುರಗಳು, ಕೋಟೆ ನಿರ್ಮಾಣಗೊಂಡವು. ಕೃಷ್ಣದೇವ ರಾಯನು ಕ್ರಿ. ಶ. 26-6-1512ರಲ್ಲಿ ಕನಕಗಿರಿನಾಥ ದೇವರ ಅಮೃತಪಡಿಗೆ ಕನಕಗಿರಿಪೇಟೆಯ ಸ್ಥಳದ ಸುಂಕ, ತಳವಾರಿಕೆಸುಂಕ, ಚನ್ನಪುರ, ತೋರಗಲ್ಲ, ಸೀಮೆಯ ಯಡಿಗಲ್ಲು ಕಳಸಗ್ರಾಮ ನವಲಿ ಸೀಮೆಯ ಬಾರಪುರ ಒಟ್ಟು ಮೂರು ಗ್ರಾಮಗಳನ್ನು ದಾನ ಮಾಡಿದನು. ಈ ರೀತಿಯ ದಾನಭೂಮಿಯಿಂದ ಕನಕಗಿರಿ ದೇವಾಲಯ ಹೊಸ ರೂಪ ಪಡೆಯಿತು. "ಕಣ್ಣಿದ್ದವರು ಕನಕಗಿರಿ ನೋಡು ಕಾಲಿದ್ದವರು ಹಂಪೆ ನೋಡು" ಎಂಬ ನಾಣ್ಣುಡಿ ಜನಪ್ರಿಯವಾಯಿತು. ಹಂಪೆಯ ವಿರುಪಾಕ್ಷ ದೇವಾಲಯದ ಉತ್ತರ ಗೋಪುರವನ್ನು ಕನಕಗಿರಿಯ ನವಾಬ ಉಡಿಚನಾಯಕ ಕಟ್ಟಿಸಿದನೆಂದು ಡಾ. ಶರಣಬಸಪ್ಪ ಕೋಲ್ಕಾರ ಅಭಿಪ್ರಾಯಪಡು ವರು. ವಿಜಯನಗರ ರಾಜಲಾಂಛನ ವರಹ ಉಬ್ಬು ಚಿತ್ರಗಳು ಕನಕಗಿರಿಯ ಕೋಟೆಯ ಕೆಲವು ಭಾಗಗಳಲ್ಲಿ ಕಾಣಸಿಗುತ್ತವೆ. ಕೃಷ್ಣದೇವರಾಯನ ನಂತರ ಬಂದ ಅಚ್ಯುತದೇವರಾಯನು ಕನಕಗಿರಿನಾಥ ದೇವರ ಅಮೃತಪಡಿಗೆ ನೈವೇದ್ಯ, ಪೂಜೆ ದೀಪಾರಾಧನೆ ಮುಂತಾದವುಗಳಿಗೆ ಕುಷ್ಟಗಿ ಸೀಮೆಯ ಇಂಗಳದಾಳ, ಗುಡ್ಡ ಗಂಗಾವತಿ ಸೀಮೆಯ ಅಚ್ಯುತಮಲ್ಲಾಪುರ, ಸಿದ್ದನಹಾಳ ರಾಮಾಪುರ ಈ ನಾಲ್ಕು ಗ್ರಾಮಗಳನ್ನು ದಾನವಾಗಿ ನೀಡಿದನು. ಹಾಗೆ ಅಳಿಯರಾಮರಾಯನ ಕಾಲದಲ್ಲಿ ತಿರುಮಲರಾಜನು ಕ್ರಿ. ಶ. 1550ರಲ್ಲಿ ನಾಪಿಂದರಾದ ತಂಮೋಜ, ಕಂಡೋಜರಿಗೆ ಕನಕಗಿರಿಯನ್ನು ಬಿಟ್ಟಿ ಪರಾಡ ಅನ್ನ ಮುಂತಾದ ತೆರಿಗೆಯನ್ನು ಬಿಟ್ಟಂತೆ ಶಿಲಾಶಾಸನ ತಿಳಿಸುತ್ತದೆ.

1565ರಲ್ಲಿ ನಡೆದ ತಾಳಿಕೋಟೆ ಕದನದಲ್ಲಿ ಕನಕಗಿರಿ ನಾಯಕರು ಭಾಗವಹಿಸಿದ್ದರು. ಈ ಹಿಂದಿನಿಂದಲೂ ಕನಕಗಿರಿ ನಾಯಕರು ವಿಜಯನಗರದ ರಕ್ಷಣೆಗಾಗಿ ಮುಸ್ಲೀಮ್ ದಾಳಿಗಳ ವಿರುದ್ಧ ಹೋರಾಟದಲ್ಲಿ ನಿರತರಾಗಿದ್ದರು. ರಾಯಚೂರು ದೋಅಬ್ ಪ್ರದೇಶಕ್ಕಾಗಿ, ಮುದಗಲ್ ಕೋಟೆಗಾಗಿ ನಡೆದ ದಾಳಿಗಳು ಅನೇಕ. ಈ ದಾಳಿಗಳಲ್ಲಿ ಕಷ್ಟಕ್ಕೆ ಒಳಗಾಗುತ್ತಿದ್ದವರು ಹೆಚ್ಚಾಗಿ ಕನಕಗಿರಿ ನಾಯಕರು; ಲಾಭ ನಷ್ಟ ಮಾಡಿಕೊಳ್ಳುತ್ತಿದ್ದವರು ವಿಜಯನಗರ ಅರಸರು ಇಲ್ಲವೆ ಮುಸ್ಲೀಮ್ ಸುಲ್ತಾನರು. 1565ರ ಕದನದಲ್ಲಿ ಸೋತ ವಿಜಯನಗರ ದಿಕ್ಕುಪಾಲಾಯಿತು. ರಾಜಧಾನಿ ಹಾಳು ಹಂಪೆಯಾಗುವ ಮುನ್ನವೇ ಕನಕಗಿರಿ ಹಾಳು ಕನಕಗಿರಿ ಆಯಿತು; ಇಂದಿಗೂ ಕನಕಗಿರಿಯಲ್ಲಿ ದೇವರಿಲ್ಲದ ಅನೇಕ ದೇವಾಲಯಗಳು ಇವೆ. ಕನಕಗಿರಿ, ವಿಜಯನಗರದಿಂದ ದಿಕ್ಕಾಪಾಲಾದ ಬೇಡರು ಹಂಪೆಗೆ, ಕನಕಗಿರಿಗೆ ಬಂದು ಹೋಗುವ ಸಂಪ್ರದಾಯವನ್ನು ಇಂದಿಗೂ ಪಾಲಿಸುವ ಕೆಲವು ಕುಟುಂಬಗಳನ್ನು ಕಾಣಬಹುದು. 701 ಬಾವಿಗಳು, 701 ದೇವಾಲಯಗಳು, 701 ಗೋಲಕಿಗಳು ಕನಕಗಿರಿಯಲ್ಲಿವೆ ಎಂಬ ಮಾತು ನಂಬದಂತೆ ಆಯಿತು. ಕನಕಗಿರಿಯ ನಾಯಕರು ಮುಸಲ್ಮಾನ್ ದೊರೆಗಳನ್ನು ಎದುರು ಹಾಕಿಕೊಳ್ಳದೆ ತಮ್ಮ ಪ್ರದೇಶದಲ್ಲಿ ಸ್ವತಂತ್ರವಾಗಿ ಆಡಳಿತವನ್ನು ಮುಂದುವರೆಸಿದರು; ತಮ್ಮ ಹೆಸರುಗಳಲ್ಲಿ ಶಿಲಾಶಾಸನ ಬರೆಸಿದರು. ವಿಜಯನಗರದ ಅಧೀನರಾಗಿದ್ದ ಅನೇಕ ಸ್ಥಳೀಯ ನಾಯಕರು ಸ್ವತಂತ್ರರಾಗಿ ಅಧಿಕಾರಕ್ಕೆ ಬಂದರು. ಕನಕಗಿರಿ ನಾಯಕರು ಸ್ವತಂತ್ರರಾದರೂ ವಿಜಯನಗರ ಸಂಸ್ಕೃತಿಯನ್ನು ಕೈಬಿಡಲಿಲ್ಲ. ಅನೇಕ ಸ್ಮಾರಕಗಳನ್ನು ಕಟ್ಟಿಸಿದರು. ಕ್ರಿ. ಶ. 1800ರ ಹೊತ್ತಿಗೆ ಹೈದ್ರಾಬಾದಿನ ನಿಜಾಮನ ಅಧೀನರಾದ ಕನಕಗಿರಿ ನಾಯಕರು ನಿಜಾಮನ ಆಡಳಿತವನ್ನು ಪೂರ್ಣವಾಗಿ ಒಪ್ಪಿಕೊಳ್ಳಲಿಲ್ಲದ ಪರಿಣಾಮವಾಗಿ ನಿಜಾಮನು ಕನಕಗಿರಿ ನಾಯಕರನ್ನು ಪಕ್ಕದ ಹುಲಿಹೈದರ ಗ್ರಾಮಕ್ಕೆ ವರ್ಗಾಯಿಸಿ ಜಹಗಿರು ಹಾಕಿಕೊಟ್ಟನು. ಕ್ರಮೇಣ ಕನಕಗಿರಿ ನಾಯಕರ ಸ್ಥಾನಮಾನಗಳು ಕ್ಷೀಣಿಸುತ್ತಾ ಹೋದವು.

ಕನಕಗಿರಿ ಮತ್ತು ವಿಜಯನಗರ ನೆನಪಿಸುವ ಅನೇಕ ಸ್ಮಾರಕಗಳು ಕನಕಗಿರಿಯಲ್ಲಿವೆ. ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯ (ಕನಕಾಚಲ ದೇವಾಲಯ) ವಿಜಯನಗರ ಶೈಲಿಯಲ್ಲಿರುವ ಪ್ರಮುಖ ದೇವಾಲಯವಾಗಿದೆ. ಈ ದೇವಾಲಯದ ಮಧ್ಯರಂಗ, ಗರ್ಭಗೃಹ, ಶಿಖರಗಳು ಕಂಬಗಳ ಕೆತ್ತನೆ, ಗಾರೆ ಶಿಲ್ಪ ಮುಂತಾದವುಗಳೆಲ್ಲಾ ವಿಜಯನಗರ ಶೈಲಿಯನ್ನೇ ಹೋಲುತ್ತವೆ. ಕನಕಗಿರಿಯ ಸ್ಮಾರಕಗಳನ್ನು ನೋಡುತ್ತಿದ್ದರೆ ವಿಜಯನಗರ (ಹಂಪೆಯ) ನೆನಪು ಕಣ್ಮುಂದೆಬರುತ್ತದೆ. ಇಲ್ಲಿನ ವೆಂಕಟಪತಿಬಾವಿ ಮಲಪನಗಡಿ ಕಪರಾಮಬಾವಿಯನ್ನು ನೆನಪಿಸುತ್ತದೆ. ಈ ಬಾವಿಯ ಕಂಬಗಳ ಕೆತ್ತನೆ ವಿಜಯವಿಠಲ ದೇವಾಲಯವನ್ನು ನೆನಪಿಸುತ್ತದೆ.

ಕಾರಣ ಈ ಬಾವಿಯಲ್ಲೂ ಭಿನ್ನ ರಾಗಗಳನ್ನು ಹೊರಡಿಸುವ ಕಂಬಗಳಿವೆ. ಬಾವಿಯ ಹತ್ತಿರದ ನರಸಿಂಹತೀರ್ಥ (ಪುಷ್ಕರಣೆ) ವಿಜಯನಗರ ಶೈಲಿಯಲ್ಲಿದೆ. ಕನಕಗಿರಿಯಿಂದ ಆನೆಗೊಂದಿಗೆ, ಆನೆಗೊಂದಿಯಿಂದ ಹಂಪೆಗೆ ಹೋಗುವ ನೆಲಮಾಳಿಗೆ ಕನಕಗಿರಿಯಲ್ಲಿದೆ ಎಂದು ಸ್ಥಳೀಯರು ಇಲ್ಲಿರುವ ಒಂದು ನೆಲಮಾಳಿಗೆಯನ್ನು ತೋರಿಸಿ ಹೇಳುತ್ತಾರೆ. ಕನಕಗಿರಿಯ ಕೋಟೆಯ ಮೂರು ಅಗಸಿಯಲ್ಲಿ ಆನೆಗೊಂದಿ ಅಗಸಿಯೂ ಒಂದು. ಅಚ್ಯುತರಾಯನ ಕಾಲದಲ್ಲಿ ಆತನಿಗೆ ಒಳ್ಳೆದಾಗಲಿ ಎಂದು ಅವನ ಹೆಸರಿನಲ್ಲಿ 13 ಆಳ್ವಾರ್‌ಗಳ ಪ್ರತಿಮೆಗಳನ್ನು ಗಂಧದ ತಿಪ್ಪಶೆಟ್ಟಿ ಸ್ಥಾಪಿಸಿದನೆಂದು ಶಿಲಾಶಾಸನಗಳಿಂದ ತಿಳಿಯುವುದು. ಹಾಗೆ ಕನಕಗಿರಿಯಲ್ಲೂ 13 ಆಳ್ವಾರ್ ವಿಗ್ರಹಗಳನ್ನು ಪ್ರತಿಷ್ಠಾಪಿಸಿರುವುದು ಕಂಡುಬರುತ್ತದೆ. ಹಂಪೆಯಲ್ಲಿನ ಕಲ್ಲಿನರಥವನ್ನು ಹೋಲುವ ಪುಟ್ಟಾಕೃತಿಯ ಶಿಲಾರಥಗಳೆರಡು ಕನಕಗಿರಿಯ ಕಲ್ಲುಮಸೀದೆ ಕಟ್ಟಡದಲ್ಲಿ ಕಾಣಬಹುದು. ಕುಮ್ಮಟದುರ್ಗ ಮುಕ್ಕುಂಪಿ, ಜಬ್ಬಲಗುಡ್ಡ ಪ್ರದೇಶದಿಂದ ಕೆಲವು ಜನರು ಕನಕಗಿರಿಯಲ್ಲಿರುವ ವೀರನಾಯಕ (ಹಿರೆನಾಯಕ) ವೀರಶಿಲ್ಪಗಳಿಗೆ ಪೂಜೆ ಮಾಡಿಕೊಂಡು ಹೋಗುವ ಸಂಪ್ರದಾಯವಿದೆ.

ಒಟ್ಟಾರೆ, ಕನಕಗಿರಿ ಮತ್ತು ವಿಜಯನಗರ ಹಾಗೂ ಕುಮ್ಮಟದುರ್ಗ ಮತ್ತು ವಿಜಯನಗರ ಮತ್ತು ಕುಮ್ಮಟದುರ್ಗ ಮತ್ತು ಕನಕಗಿರಿ ಅರಸರ ನಡುವೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಏರ್ಪಟ್ಟಿದ್ದವು ಎಂದು ತಿಳಿಯಬಹುದು.

ಆಧಾರ ಗ್ರಂಥಗಳು

1. ಶರಣಬಸಪ್ಪ ಕೋಲಾರ್, 1994, *ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿ ಶಿಲ್ಪಗಳು*, ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ಡಾ. ದೇವರಕೊಂಡಾರೆಡ್ಡಿ, ಸಂ. 1999, *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 2*, ಕೊಪ್ಪಳ ಜಿಲ್ಲೆ ಕನ್ನಡ ವಿಶ್ವವಿದ್ಯಾಲಯ, ಹಂಪಿ
3. ಡಾ. ಎಂ. ಕೆ. ದುರುಗಪ್ಪ, 2007, *ಕನಕಗಿರಿ ನಾಯಕರು*, ಕನಕಗಿರಿ
4. ಡಾ. ಸಿ. ಮಹಾದೇವ 2009, *ಕುಮ್ಮಟದುರ್ಗದ ನಾಯಕರು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. *ವಿಜಯನಗರ ಅಧ್ಯಯನ–2*, ಪುರಾತತ್ವ ಮತ್ತು ಪ್ರಾಚ್ಯವಸ್ತು ಇಲಾಖೆ, ಕಮಲಾಪುರ.

೨೭. ವಿಜಯನಗರ ಕಾಲದ ಸೈನಿಕ ವ್ಯವಸ್ಥೆಯನ್ನು ಸಾರುವ ಕಥಾನಕ ಶಿಲ್ಪಗಳು

ಡಾ. ಎಸ್. ವೈ. ಸೋಮಶೇಖರ್

ವಿಜಯನಗರವು ದಕ್ಷಿಣ ಭಾರತದ ಮಧ್ಯಯುಗೀನ ಚರಿತ್ರೆಯಲ್ಲಿ ಪರಿಣಾಮಕಾರಿ ಆಳ್ವಿಕೆ ನಡೆಸಿದ ಪ್ರಮುಖ ಸಾಮ್ರಾಜ್ಯವಾಗಿದೆ. ಕ್ರಿ. ಶ 1336 ರಲ್ಲಿ ಸ್ಥಾಪನೆಗೊಂಡ ಈ ಸಾಮ್ರಾಜ್ಯವು 1565ರವರೆಗೆ ಯಶಸ್ವಿಯಾಗಿ ಆಳ್ವಿಕೆ ನಡೆಸಿತು. ಪರ್ಶಿಯಾ ರಾಯಭಾರಿ ಅಬ್ದುಲ್ ರಜಾಕ್ ಹೇಳುವಂತೆ, ವಿಜಯನಗರವು ಬಹಳ ಜನವಸತಿಯುಳ್ಳ ಊರು. ರಾಜನ ಖ್ಯಾತಿ ಮತ್ತು ಅವನ ಪ್ರಭುತ್ವ ಮಹೋನ್ನತವಾಗಿವೆ. ರಾಜ್ಯವು ಶ್ರೀಲಂಕಾದ ಗಡಿಯಿಂದ ಗುಲ್ಬರ್ಗಾ ಕೊಟ್ಟಕೊನೆಯವರೆಗೆ ಮತ್ತು ಬಂಗಾಳದಿಂದ ಮಲಬಾರ್ ತೀರದವರೆಗೆ ಸಾವಿರ ಫರ್ಲಾಂಗುಗಳಷ್ಟು ವಿಸ್ತರಿಸಿದೆ. ಈ ದೇಶದಲ್ಲಿ ಮುನ್ನೂರು ಬಂದರುಗಳಿವೆ. ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ ಎಂದು ವರ್ಣಿಸಿದ್ದಾನೆ. ಇದು ವಿಜಯನಗರ ಸಾಮ್ರಾಜ್ಯದ ವಿಸ್ತಾರ ಮತ್ತು ನಗರದ ಅಚ್ಚುಕಟ್ಟುತನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದದ್ದು ಪ್ರಾಕೃತಿಕವಾಗಿ ರಕ್ಷಣೆ ನೀಡಿದ ತುಂಗಭದ್ರಾ ನದಿ ಹಾಗೂ ಬೆಟ್ಟಗಳಾದ ಮತಂಗ, ಮಾಲ್ಯವಂತ, ಹೇಮಕೂಟ, ಋಷ್ಯಮೂಕ ಹಾಗೂ ಸಂಡೂರು ಬೆಟ್ಟಶ್ರೇಣಿಗಳ ಮಧ್ಯದ ಹಂಪೆಯ ಬಯಲಿನಲ್ಲಿ. ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವಂಥದ್ದು ಸೈನ್ಯ. ಸೈನ್ಯವು ಯಾವುದೇ ರಾಜ್ಯದ ಅವಿಭಾಜ್ಯ ಅಂಗ. ರಾಜ್ಯದ ಸಪ್ತಾಂಗಗಳಲ್ಲಿ ಸೈನ್ಯವೂ ಸ್ಥಾನ ಪಡೆದಿರುವುದು ಅದರ ಅನಿವಾರ್ಯತೆಯಿಂದ ಎಂಬುದಂತೂ ಸತ್ಯ. ವಿಜಯನಗರವು ಅಪಾರ ಸೈನ್ಯವನ್ನು ಸಂಘಟಿಸಲು ಕಾರಣಗಳಿಗೇನೂ ಕೊರತೆಯಿರಲಿಲ್ಲ. ಬಹಮನಿ ಮನೆತನವು ನೀಡಿದ ಪ್ರಬಲ ಸ್ಪರ್ಧೆ, ಪೂರ್ವ ಪ್ರಾಂತ್ಯದ ಒರಿಸ್ಸಾ ಗಜಪತಿ ಮನೆತನದ ಆಕ್ರಮಣ ಹಾಗೂ ದಕ್ಷಿಣದ ಕೆಲವು ಅರಸುಮನೆತನಗಳು ನೀಡುತ್ತಿದ್ದ ಕಿರುಕುಳಗಳು ಕಾರಣವಾಗಿವೆ.

ಬಹಮನಿಯವರು ನೀಡುತ್ತಿದ್ದ ಪ್ರಬಲ ಸ್ಪರ್ಧೆ ಹಾಗೂ ವಿದೇಶಿಯರ ಆಗಮನಗಳು ವಿಜಯನಗರ ಅರಸರಿಗೆ ತಮ್ಮ ಸೈನ್ಯವನ್ನು ಅಭಿವೃದ್ಧಿಪಡಿಸುವ

ಹಾಗೂ ವಿನೂತನಗೊಳಿಸುವ ಅನಿವಾರ್ಯತೆಯನ್ನು ಉಂಟುಮಾಡಿತು. ಈ ಹಿನ್ನೆಲೆಯಲ್ಲಿ ಯುದ್ಧಕ್ಕೆ ಬೇಕಾದ ಕುದುರೆಗಳ ಆಮದು, ನುರಿತ ಮುಸ್ಲಿಂ ಸೈನಿಕರ ಸೇರ್ಪಡೆ ಮತ್ತು ಸೈನಿಕ ತರಬೇತಿ, ಸಿಡಿಮದ್ದನ್ನು ಒಳಗೊಂಡ ಬಂದೂಕು, ಫಿರಂಗಿಗಳ ಬಳಕೆ ಇವೆಲ್ಲವೂ ವಿಜಯನಗರ ತನ್ನ ಸೇನೆಯಲ್ಲಿ ಮಾರ್ಪಾಡು ಮಾಡಿಕೊಂಡ ಪ್ರಮುಖ ಅಂಶಗಳಾಗಿವೆ.

ಸೈನ್ಯವು ರಾಜ್ಯವ್ಯವಸ್ಥೆಯ ಸಪ್ತಾಂಗಗಳಲ್ಲಿ ಒಂದು. ರಾಜ್ಯದ ಪರಿಕಲ್ಪನೆಯಲ್ಲಿ ರಾಜನ ಅಗತ್ಯ ಎಷ್ಟು ಪ್ರಮುಖವೋ ಸೇನೆಯ ಅನಿವಾರ್ಯತೆಯೂ ಅಷ್ಟೇ ಮುಖ್ಯ. ರಾಜ್ಯ ಮತ್ತು ಸಮಾಜದ ಸಂರಕ್ಷಣೆಯಲ್ಲಿ ಸೈನ್ಯದ ಪಾತ್ರ ತುಂಬ ಹಿರಿದು. ಸೈನ್ಯವ್ಯವಸ್ಥೆಯು ನಿಯಮ, ಕಟ್ಟಳೆಗಳಿಂದ ಸಜ್ಜುಗೊಂಡ ಕ್ರಮಬದ್ಧ ಸ್ಥಿತಿ. ಸೈನ್ಯವು ರಾಜ್ಯವನ್ನು ಸಂಘಟಿಸುವ, ರಕ್ಷಿಸುವ, ವಿಸ್ತರಿಸುವ ಹೊಣೆಗಾರಿಕೆಯುಳ್ಳ ಸಂಸ್ಥೆ. ವಿಜಯನಗರ ಅರಸರು ಹಿಮದಿನ ಅರಸುಮನೆತನಗಳು ಅನುಸರಿಸಿಕೊಂಡು ಬಂದಿದ್ದ ಸೈನಿಕ ನೀತಿನಿಯಮಗಳನ್ನು ಹೆಚ್ಚು ಅಳವಡಿಸಿಕೊಂಡಿದ್ದುದೇನೋ ನಿಜ. ಆದರೆ ವಿದೇಶಿಯರ ಆಗಮನ, ಮುಸ್ಲಿಮರ ದಾಳಿ ಮತ್ತು ಯುದ್ಧತಂತ್ರಗಳು ಸೈನ್ಯದ ಮಹತ್ವದ ಬದಲಾವಣೆಗೆ ಕಾರಣವಾದವು. ಸೈನ್ಯದಲ್ಲಿ ಕಾಲ್ದಳದ ನಿರ್ವಹಣೆ ಮತ್ತು ತರಬೇತಿ, ಅಶ್ವದಳದ ಅನಿವಾರ್ಯತೆಗೆ ಆದ್ಯತೆ ನೀಡಲಾಯಿತು. ಹಾಗೆಯೇ ಮುಖ್ಯವಾಗಿ ಮಧ್ಯಯುಗದಲ್ಲಾದ ಹೊಸ ಮಾರ್ಪಾಡೆಂದರೆ ಸಿಡಿಮದ್ದಿನ ಪ್ರಯೋಗ. ಇದು ವಿಜಯನಗರ ಕಾಲದ ಸೈನ್ಯ ಮತ್ತು ಯುದ್ಧವ್ಯವಸ್ಥೆಯ ಗತಿಯನ್ನೇ ಬದಲಿಸಿತೆನ್ನಬಹುದು. ಸಿಡಿಮದ್ದು ಪಾರಂಪರಿಕವಾಗಿ ಅನುಸರಿಸಿ ಕೊಂಡು ಬಂದಿದ್ದ ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳುವಿಗೆ ಕಾಲಾಳು ಎಂಬ ಮುಖಾಮುಖಿ ಹೋರಾಟಕ್ಕೆ ಪ್ರತಿಯಾಗಿ ದೂರಗಾಮಿ ಅಥವಾ ಅಂತರ ಯುದ್ಧಗಳನ್ನು ಹುಟ್ಟುಹಾಕಿತು.

ವಿಜಯನಗರ ಕಾಲದಲ್ಲಿ ಸೈನ್ಯವನ್ನು ನಾಲ್ಕು ವಿಭಾಗಗಳಲ್ಲಿ ನೋಡುತ್ತೇವೆ. ಅವು ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳಗಳಾಗಿವೆ. ಇವುಗಳ ಜೊತೆಗೆ ಪೋಷಕಸೈನ್ಯವಾಗಿ ಒಂಟೆ, ಎತ್ತು, ಕತ್ತೆ ಮೊದಲಾದವನ್ನು ಕಾಣಬಹುದು.

ಸೈನಿಕ ಕಥಾನಕ ಶಿಲ್ಪಗಳು

ವಿಜಯನಗರ ಕಾಲದ ಈ ಬಗೆಯ ಸೈನಿಕ ವ್ಯವಸ್ಥೆಯ ಕಥೆಯನ್ನು ಹಂಪೆ ಮೊದಲಾದೆಡೆಗಳಲ್ಲಿರುವ ಸ್ಮಾರಕ, ದೇವಾಲಯ, ಕಟ್ಟಡಗಳು ಹಾಗೂ ಅವುಗಳ ಮೇಲಿನ ಉಬ್ಬುಶಿಲ್ಪ ಮತ್ತು ವರ್ಣಚಿತ್ರಗಳು ಸಾರುತ್ತಿವೆ. ಅವುಗಳಲ್ಲಿ ಹಂಪೆಯ ಹಜಾರ ರಾಮಚಂದ್ರ, ವಿರೂಪಾಕ್ಷ, ಬಾಲಕೃಷ್ಣ, ವಿಜಯವಿಠಲ ದೇವಾಲಯಗಳು,

ಮಹಾನವಮಿ ದಿಬ್ಬ, ಆನೆಲಾಯ, ಸಾರ್ವಜನಿಕ ಸ್ನಾನಕೊಳ, ಸೈನಿಕರ ವಸತಿ ಸಮುಚ್ಚಯ, ಕೋಟೆ ಕೊತ್ತಲ, ಬುರುಜು ಬತೇರಿಗಳು ಸಾರಿ ಹೇಳುತ್ತವೆ. ಹಾಗೆಯೇ ಇದೇ ಕಾಲದ ಮಾಸ್ತಿಕಲ್ಲು, ವೀರಗಲ್ಲುಗಳು ನಾಡಿನ ವಿವಿಧ ಮೂಲೆಗಳಲ್ಲಿ ಕಂಡುಬಂದಿದ್ದು, ಇವು ಅಂದಿನ ವೀರಪರಂಪರೆಯ ಸಂಕೇತಗಳಾಗಿವೆ. ಅಲ್ಲದೆ ಇಂದಿಗೂ ಉಳಿದು ಬಂದಿರುವ ಕತ್ತಿ ಗುರಾಣಿ, ಈಟಿ, ಭರ್ಜಿ, ಫಿರಂಗಿ ಬಂದೂಕುಗಳು ಸೈನಿಕ ಪರಂಪರೆಯ ಕಥಾನಕದ ಸಾಕ್ಷ್ಯಗಳಾಗಿವೆ.

ಕಾಲ್ದಳ

ಹಂಪೆಯ ಹಜಾರ ರಾಮಚಂದ್ರ ದೇವಾಲಯದ ಪ್ರಾಂಗಣ ಗೋಡೆ ಹಾಗೂ ಮಹಾನವಮಿ ದಿಬ್ಬದ ಅಧಿಷ್ಠಾನ ಮತ್ತು ಭಿತ್ತಿಗಳಲ್ಲಿ ವಿಜಯನಗರ ಕಾಲದ ಸೈನಿಕ ಕಥಾನಕವು ವಿಸ್ತಾರವಾಗಿ ಹರಡಿಕೊಂಡಿದೆ. ಅಂದಿನ ಸೈನ್ಯ, ಸೇನಾ ವಿಭಾಗಗಳು, ವಿವಿಧ ಬಗೆಯ ಸೈನಿಕ ಯೋಧರು, ಅವರ ಉಡುಪು, ನಡೆನುಡಿ, ಭಾವಭಂಗಿ, ಆಯುಧೋಪಕರಣ, ಹೋರಾಟದ ಬಗೆಗಳು ಅನನ್ಯವಾಗಿವೆ. ಹಾಗೆಯೇ ಕುದುರೆ, ಆನೆ, ಒಂಟೆಗಳು, ಅವುಗಳ ಪಥಸಂಚಲನ, ಅವುಗಳ ಮೇಲೆ ಸೈನಿಕರ ಸವಾರಿ ಮತ್ತು ಶಸ್ತ್ರಾಸ್ತ್ರಗಳ ಪ್ರಯೋಗಗಳನ್ನು ನೈಜವಾಗಿ ಉಬ್ಬು ಶಿಲ್ಪಗಳಲ್ಲಿ ಚಿತ್ರಿಸಲಾಗಿದೆ.

ಹಂಪೆಯ ಹಜಾರರಾಮಚಂದ್ರ ದೇವಾಲಯದ ಪ್ರಾಂಗಣ ಗೋಡೆಯಲ್ಲಿ ಸೈನ್ಯ ಪಡೆಗಳ ಕಥೆಯನ್ನೇ ಸಾಲುಸಾಲಾಗಿ ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಗಜದಳದ ಸಾಲನ್ನು, ಆನೆಗಳ ಮೇಲೆ ಕುದುರೆ ಸಾಲು, ಕುದುರೆ ಸಾಲಿನ ಮೇಲೆ ಕಾಲ್ದಳದ ವಿವಿಧ ವಿಭಾಗಗಳಾದ ಬಿಲ್ಗಾರರು, ಈಟಿಗಾರರು, ಕತ್ತಿವರಸೆಗಾರರು, ಬಂದೂಕು ಧಾರಿಗಳು ಮತ್ತು ಅವರ ಹೋರಾಟದ ವಿವಿಧ ಬಗೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿ ಶಿಲ್ಪಿ ತನ್ನ ಪಾರಮ್ಯವನ್ನು ಮೆರೆದಿದ್ದಾನೆ.

ಬಿಲ್ಗಾರರು ಬಿಲ್ಲು ಬಾಣಗಳನ್ನು ಹಿಡಿದು ಶತ್ರುಪಡೆಯ ವಿರುದ್ಧ ಪ್ರಯೋಗಿಸುತ್ತಿದ್ದರೆ, ಈಟಿಗಾರರು ವಿವಿಧ ರೀತಿಯ ಈಟಿ, ಭರ್ಜಿಗಳನ್ನು ಹಿಡಿದು ಹೋರಾಡುತ್ತಿರುವರು. ಹಾಗೆಯೇ ಕತ್ತಿವರಸೆಗಾರರು ತಮ್ಮ ಕತ್ತಿಯನ್ನು ಜಳಪಿಸು ತ್ತಿರುವ ಚಿತ್ರಣಸುತ್ತಿರುವ ಉಬ್ಬುಶಿಲ್ಪಗಳಲ್ಲಿವೆ. ಬಂದೂಕುಧಾರಿಗಳು ಬಂದೂಕು ಗಳನ್ನು ಹಿಡಿದು ಚಿತ್ರಣಗಳೂ ಇಲ್ಲಿವೆ. ಅಲ್ಲದೆ ಈ ಯೋಧರ ಉಡುಗೆ ತೊಡುಗೆ ಗಳಲ್ಲಿ ಸೊಂಟಕ್ಕೆ ವೀರಗಚ್ಚೆ, ತಲೆಯಲ್ಲಿ ಮುಡಿ, ಮುಂಡಾಸು, ಕೆಲ ಶಿಲ್ಪಗಳಲ್ಲಿ ಶಿರಸ್ತ್ರಾಣ, ಎದೆಗವಚಗಳು ಎದ್ದುಕಾಣುತ್ತವೆ. ಯೋಧರು ಹಿಡಿದ ಗುರಾಣಿಯು ಅಗಲವಾಗಿದ್ದು ವೀರನ ದೇಹರಕ್ಷಣೆಗೆ ಸಹಾಯಕವಾಗಿದ್ದುದನ್ನು ಶಿಲ್ಪಗಳಲ್ಲಿ ನೋಡಬಹುದು.

ಅಶ್ವದಳ

ಸೈನ್ಯವ್ಯವಸ್ಥೆಯಲ್ಲಿ ಕುದುರೆ ಅನಿವಾರ್ಯ ಅಂಗ. ಕಾಲ್ದಳದ ನಂತರದ ಸ್ಥಾನವನ್ನು ವಿಜಯನಗರ ಅರಸರು ಅಶ್ವದಳಕ್ಕೆ ನೀಡಿದ್ದರು. ಇದನ್ನು ಅನೇಕ ಪ್ರವಾಸಿ ವರದಿಗಳು, ಶಾಸನ ಮತ್ತಿತರ ದಾಖಲೆಗಳು ಸಮರ್ಥಿಸುತ್ತವೆ. ಶ್ರೀ ಕೃಷ್ಣದೇವರಾಯ ತನ್ನ ಆಮುಕ್ತಮಾಲ್ಯದ ಕೃತಿಯಲ್ಲಿ ಗಜಸೈನ್ಯ, ಅಶ್ವಸೈನ್ಯಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಿಕೊಳ್ಳಬೇಕು ಎಂದಿದ್ದಾನೆ. ಪ್ರೌಢದೇವರಾಯನು ಅಶ್ವದಳಕ್ಕೆ ವಿಶೇಷವಾದ ಪ್ರಾಧಾನ್ಯತೆಯನ್ನು ನೀಡಿದ್ದನು. ಅಶ್ವಸವಾರಿ ಹಾಗೂ ಬಿಲ್ವಿದ್ಯೆಯಲ್ಲಿ ಪರಿಣತರಾದ ಮುಸ್ಲಿಂ ಸೈನಿಕರನ್ನು ಸೇರ್ಪಡೆಮಾಡಿಕೊಳ್ಳುವ ಮೂಲಕ ಸೈನ್ಯದ ದಕ್ಷತೆಯನ್ನು ಹೆಚ್ಚಿಸಿದ್ದನು. ಹಾಗೆಯೇ ಶ್ರೀ ಕೃಷ್ಣದೇವರಾಯ ಕುದುರೆಗಳ ಆಮದಿಗಾಗಿ ಪೋರ್ಚಗೀಸರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿದ್ದನು. ಅಲ್ಲದೆ ಅಂದು ಕುದುರೆಯ ಪ್ರಾಮುಖ್ಯ ಎಷ್ಟಿತ್ತೆಂಬುದಕ್ಕೆ ಅವರು ಹೊಂದಿದ್ದ ಬಿರುದೇ ಸಾಕ್ಷಿಯಾಗಿದೆ. ಪ್ರೌಢದೇವರಾಯ ಮತ್ತು ಶ್ರೀ ಕೃಷ್ಣದೇವರಾಯರು ತಮ್ಮನ್ನು ಹೊನ್ನಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ ಎಂಬ ಬಿರುದನ್ನು ಹೊಂದುವ ಮೂಲಕ ಅಂದಿನ ಅಶ್ವದಳಕ್ಕೆ ವಿಶೇಷ ಆದ್ಯತೆ ನೀಡಿದ್ದರು.

ಅಶ್ವದಶಕ್ಕೆ ಪ್ರಾಮುಖ್ಯ ದೊರೆತದ್ದು ಅದರ ಶೀಘ್ರಚಲನೆ ಹಾಗೂ ಚಟುವಟಿಕೆಯುಳ್ಳ ಪ್ರಾಣಿಯಾಗಿರುವುದರಿಂದ. ಅಶ್ವದಳವನ್ನು ಮಹಾನವಮಿ ದಿಬ್ಬ ಹಾಗೂ ಹಜಾರ ರಾಮಚಂದ್ರ ದೇವಾಲಯದ ಗೋಡೆಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ಕಾಣಬಹುದು. ಕುದುರೆಯ ಪಥ ಸಂಚಲನ, ಕುದುರೆ ಸವಾರಿ, ಸವಾರನ ಹೋರಾಟ, ಯುದ್ಧದಲ್ಲಿ ಶತ್ರುಗಳ ವಿರುದ್ಧ ಹೋರಾಡುತ್ತಿರುವ ವಿವಿಧ ಭಂಗಿಗಳು ಮುಖ್ಯವಾಗಿವೆ. ಹಾಗೆಯೇ ಕುದುರೆಗಳ ಬಲಾಢ್ಯತೆ, ಕುದುರೆ ವ್ಯಾಪಾರವನ್ನೂ ಇಲ್ಲಿ ಚಿತ್ರಿಸಲಾಗಿದೆ. ಅರಬ್, ಪರ್ಶಿಯಾಗಳಿಂದ ಕುದುರೆಗಳನ್ನು ಸಮುದ್ರಯಾನದ ಮೂಲಕ ತಂದು ವಿಜಯನಗರದ ಅರಸರಿಗೆ ಮಾರಾಟ ಮಾಡುತ್ತಿದ್ದ ವಿವರಗಳೂ ಇಲ್ಲಿನ ಶಿಲ್ಪಗಳಲ್ಲಿವೆ. ಅವುಗಳಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬ ತನ್ನ ಕುದುರೆಯ ಬಲಾಢ್ಯತೆಯನ್ನು ಕೈಯೆತ್ತಿ ವರ್ಣಿಸುವ ಚಿತ್ರಣ ಮನಮೋಹಕ ವಾಗಿದೆ. ಹಾಗೆಯೇ ಕುದುರೆಗಳಿಗೆ ಯುದ್ಧಗಳಿಗೆ ಶತ್ರುಗಳಿಂದ ರಕ್ಷಣೆ ನೀಡುವ ಸಲುವಾಗಿ ಮುಖ ಹಾಗೂ ಮೈಮೇಲೆ ಕವಚಗಳನ್ನು ಹೊದಿಸುತ್ತಿದ್ದುದು ವೀರಗಲ್ಲುಗಳಿಂದ ಸ್ಪಷ್ಟವಾಗುತ್ತದೆ. ಸಾಹಿತ್ಯದಲ್ಲಿ ವ್ಯಕ್ತವಾಗುವ ಲೋಹವಕ್ಕರಿಕೆ ಕುದುರೆಗೆ ತೊಡಿಸುತ್ತಿದ್ದ ಕವಚವೇ ಆಗಿದೆ. ಕುದುರೆ ಸವಾರರು ತಮ್ಮ ಕೈಗಳಲ್ಲಿ ಬಿಲ್ಲು ಬಾಣ, ಕತ್ತಿ ಗುರಾಣಿ ಹಾಗೂ ಈಟಿ ಭರ್ಚಿಗಳನ್ನು ಹಿಡಿದು ಹೋರಾಡುತ್ತಿದ್ದ ಬಗೆಗಳನ್ನೂ ಶಿಲ್ಪಗಳಲ್ಲಿ ಚಿತ್ರಿಸಿರುವರು.

ಗಜದಳ

ಗಜದಳದಲ್ಲಿ ಆನೆಯ ಪಾತ್ರ ಮುಖ್ಯವಾಗಿದೆ. ಆನೆಯು ಪ್ರಾಣಿಗಳಲ್ಲಿ ಅತ್ಯಂತ ಪ್ರತಿಷ್ಠಿತ ಹಾಗೂ ಗಾಂಭೀರ್ಯವುಳ್ಳದ್ದು. ಇದು ಪ್ರಾಚೀನ ಕಾಲದಿಂದಲೂ ಸೈನ್ಯದಲ್ಲಿ ಪ್ರಧಾನಪಾತ್ರ ವಹಿಸಿದೆ. ಇದಕ್ಕೆ ಕಾರಣ ಅದರ ಬೃಹತ್ ಗಾತ್ರ, ಅಗಾಧ ಶಕ್ತಿ ಮತ್ತು ಮಂದತೆಗಳು. ವಿಜಯನಗರ ಸೈನ್ಯದಲ್ಲಿ ಅಸಂಖ್ಯ ಆನೆಗಳಿದ್ದವು. ಅಲ್ಲದೆ ಆನೆಗಳಿಗಾಗಿಯೇ ನಿರ್ಮಿಸಿದ ಆನೆಲಾಯ ಕಟ್ಟಡವು ಹಂಪೆಯಲ್ಲಿ ಇಂದಿಗೂ ಅಚ್ಚಳಿಯದೇ ನಿಂತಿದೆ. ಇದು ಅಂದಿನ ಅರಸರು ಆನೆಗೆ ನೀಡಿದ ಪ್ರಾಮುಖ್ಯವನ್ನು ಪ್ರತಿನಿಧಿಸುತ್ತದೆ. ಮಹಾನವಮಿ ದಿಬ್ಬ, ಹಜಾರ ರಾಮಚಂದ್ರ, ವಿರೂಪಾಕ್ಷ, ವಿಜಯ ವಿಠಲ, ಮೊದಲಾದ ದೇಗುಲಕಟ್ಟಡಗಳ ಅಧಿಷ್ಠಾನ, ಭಿತ್ತಿಗಳಲ್ಲಿ ಸಾಲುಸಾಲಾಗಿ ಆನೆಗಳನ್ನು ಕಡೆದಿರುವರು. ಆನೆಗಳನ್ನು ಮಾವುತರು ಪಳಗಿಸುತ್ತಿರುವ, ಯುದ್ಧ ಸಂದರ್ಭಗಳಲ್ಲಿ ಆನೆ ಮೇಲೆ ಕುಳಿತು ವೀರರು ಹೋರಾಡುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ. ಯುದ್ಧಗಳಲ್ಲಿ ಅರಸರು ಕುದುರೆಗಳಲ್ಲದೆ ಆನೆಗಳ ಮೇಲೂ ಕುಳಿತು ಸೈನಿಕರನ್ನು ಹುರಿದುಂಬಿಸುತ್ತಿದ್ದರು. ಇದಕ್ಕೆ ರಾಮರಾಯ ಪ್ರಮುಖ ಉದಾಹರಣೆ. ಆನೆಗಳಿಗೆ ಮೇಲ್ಹೊದಿಕೆಗಳನ್ನು ಹಾಕಿ ಶೃಂಗಾರ ಮಾಡಿ ಮೆರವಣಿಗೆ ಮಾಡುತ್ತಿರುವ ದೃಶ್ಯಗಳು ವರ್ಣನೀಯವಾಗಿವೆ.

ಫಿರಂಗಿದಳ

ಫಿರಂಗಿ ದಳವು ಸಿಡಿಮದ್ದಿನ ಉಪಕರಣಗಳಿಂದ ಕೂಡಿದ ಅಂದಿನ ಅತ್ಯಾಧುನಿಕ ಸೇನೆ. ಇದರಲ್ಲಿ ಬಂದೂಕು, ತೋಪು, ಫಿರಂಗಿ ಮತ್ತಿತರ ಶಸ್ತ್ರಾಸ್ತ್ರಗಳು ಸೇರಿವೆ. ವಿಜಯನಗರಪೂರ್ವ ಕಾಲದಲ್ಲಿ ಸಾಮಾನ್ಯವಾಗಿ ಸೈನಿಕರು ಬಳಸುತ್ತಿದ್ದ ಆಯುಧಗಳೆಂದರೆ ಬಿಲ್ಲು ಬಾಣ, ಕತ್ತಿ, ಗುರಾಣಿ ಹಾಗೂ ಈಟಿ-ಭರ್ಚಿಗಳೇ ಆಗಿದ್ದವು. ಆದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡ ವಿನೂತನ ಅಸ್ತ್ರವೆಂದರೆ ಸಿಡಿಮದ್ದು. ಸಿಡಿಮದ್ದಿನ ಬಳಕೆ ಸೈನಿಕ ವ್ಯವಸ್ಥೆ ಹಾಗೂ ಯುದ್ಧತಂತ್ರಗಳನ್ನೇ ಬುಡಮೇಲು ಮಾಡಿತು. ಹಿಂದೆ ಪಾರಂಪರಿಕವಾಗಿ ಆನೆಗೆ ಆನೆ, ಕುದುರೆಗೆ ಕುದುರೆ, ಕಾಲಾಳುವಿಗೆ ಕಾಲಾಳು ಎಂಬ ನಿಯಮ ಸಾಮಾನ್ಯವಾಗಿ ರೂಢಿಯಲ್ಲಿದ್ದಿತು. ಆದರೆ ಸಿಡಿಮದ್ದಿನ ಬಳಕೆಯು ಈ ಮೇಲಿನ ಯುದ್ಧನಿಯಮವನ್ನು ಬುಡಮೇಲು ಮಾಡಿತು. ಅಲ್ಲದೆ ಇದುವರೆಗೆ ಬಿಲ್ಲು ಬಾಣ, ಕತ್ತಿ ಗುರಾಣಿ ಹಾಗೂ ಈಟಿ ಭರ್ಚಿಗಳಿಂದ ಮುಖಾಮುಖಿಯಾಗಿ ನಡೆಯುತ್ತಿದ್ದ ಹೋರಾಟವು ಸಿಡಿಮದ್ದಿನ ಬಳಕೆಯಿಂದ ದೂರಗಾಮಿ ಅಥವಾ ಅಂತರಯುದ್ಧಗಳಾಗಿ ಮಾರ್ಪಾಟಾಯಿತು. ಇದು ಮುಂದುವರಿದು ಇಂದು ಅಣ್ವಸ್ತ್ರಗಳವರೆಗೆ ಬಂದು

ಇಡೀ ಮನುಷ್ಯ ಕುಲವಲ್ಲದೆ, ಜೀವಸಂಕುಲವನ್ನೇ ನಾಶ ಮಾಡುವ ಹಂತಕ್ಕೆ ತಲುಪಿದೆ. ವಿಜಯನಗರ ಕಾಲದ ಸಿಡಿಮದ್ದಿನ ಬಳಕೆಯನ್ನು ಪ್ರತಿನಿಧಿಸುವ ಬಂದೂಕು, ತೋಪು, ಫಿರಂಗಿಗಳು ಇಂದಿಗೂ ಸ್ಮಾರಕಗಳ ಮೇಲಿನ ಶಿಲ್ಪಗಳಲ್ಲಿ, ವೀರಗಲ್ಲುಗಳಲ್ಲಿವೆ. ಹಾಗೆಯೇ ಅಂದು ಬಳಸುತ್ತಿದ್ದ ತೋಪು, ಫಿರಂಗಿಗಳು ಇಂದಿಗೂ ಕೋಟೆಕೊತ್ತಲಗಳು, ವಸ್ತುಸಂಗ್ರಹಾಲಯಗಳಲ್ಲಿ ಉಳಿದು ಬಂದಿರುವುದನ್ನು ಕಾಣಬಹುದಾಗಿದೆ. ಮಹಾನವಮಿ ದಿಬ್ಬದ ಅಧಿಷ್ಠಾನದ ಮೇಲಿನ ಉಬ್ಬುಶಿಲ್ಪಗಳಲ್ಲಿ ಬಂದೂಕು ಹಿಡಿದ ಯೋಧರು ಪಥಸಂಚಲನ ನಡೆಸುವ ಚಿತ್ರಣ ಗಮನಾರ್ಹವಾಗಿದೆ. ಹಾಗೆಯೇ ಹಂಪಿ, ಕೊಪ್ಪಳ, ರಾಯಚೂರು ಪರಿಸರದಲ್ಲಿ ಕಂಡುಬಂದಿರುವ ಅನೇಕ ವೀರಗಲ್ಲುಗಳಲ್ಲಿ ಈ ಬಗೆಯ ಬಂದೂಕು ಹಿಡಿದ ವೀರರ ಚಿತ್ರಣಗಳಿವೆ. ತೋಪು, ಫಿರಂಗಿಗಳು ಕೊಪ್ಪಳ, ರಾಯಚೂರು, ಮುದಗಲ್ಲು ಹಾಗೂ ವಿವಿಧ ಪಾಳೆಯಗಾರರ ಆಳ್ವಿಕೆ ನಡೆಸಿದ ಕೋಟೆಗಳಲ್ಲಿ ಇಂದಿಗೂ ಉಳಿದುಬಂದಿವೆ. ಹಾಗೆಯೇ ಕ್ರಿ. ಶ. 1565ರಲ್ಲಿ ನಡೆದ ರಕ್ಕಸಗಿ ತಂಗಡಗಿ ಯುದ್ಧದಲ್ಲಿ ಶಾಹಿ ಸುಲ್ತಾನರು ಬಳಸಿದರೆನ್ನಲಾದ ಪಂಚಲೋಹದ ಬೃಹತ್ ಗಾತ್ರದ ಫಿರಂಗಿಯನ್ನು ಇಂದಿಗೂ ಬಿಜಾಪುರದ ಮಲ್ಲಿಕ್-ಇ-ಮೈದಾನ್‌ನಲ್ಲಿ ಕಾಣಬಹುದಾಗಿದೆ. ಇವೆಲ್ಲವುಗಳಿಂದ ವಿಜಯನಗರ ಕಾಲದಲ್ಲಿ ಫಿರಂಗಿದಳವು ನಿರ್ವಹಿಸಿದ ಪಾತ್ರ ಮತ್ತು ಮಹತ್ವಗಳು ಅರಿವಾಗುತ್ತವೆ.

ಒಟ್ಟಿನಲ್ಲಿ, ವಿಜಯನಗರ ಕಾಲದ ಸೈನಿಕ ಚಿತ್ರಣದ ಕಥಾನಕವನ್ನು ಅಂದಿನ ಶಿಲ್ಪ, ಉಬ್ಬುಶಿಲ್ಪ, ವೀರಗಲ್ಲು, ಮಾಸ್ತಿಕಲ್ಲು, ಕೋಟೆಕೊತ್ತಲ ಮತ್ತಿತರ ಆಕರಗಳಿಂದ ತಿಳಿಯಲು ಸಾಧ್ಯವೆಂಬುದು ಪ್ರಸ್ತುತ ಪ್ರಬಂಧದ ಉದ್ದೇಶ.

೨೮. ವಿಜಯನಗರ ಕಾಲದ ಕುರಿಕುಪ್ಪೆಯ ಪಂಪಾ ವಿರೂಪಾಕ್ಷ ದೇವಾಲಯ

ಶಾರದಾ ಪಾಟೀಲ್

ವಿಜಯನಗರ ಸಾಮ್ರಾಜ್ಯದ ಹಿನ್ನೆಲೆ

ಭಾರತ ಇತಿಹಾಸದ ಪುಟಗಳಲ್ಲಿ ಸುವರ್ಣಯುಗವಾಗಿ ಮಾರ್ಪಟ್ಟ ವಿಜಯನಗರ ಸಾಮ್ರಾಜ್ಯವು ತುಂಗಭದ್ರಾ ತೀರದ ಹಂಪಿ ಕ್ಷೇತ್ರದಲ್ಲಿ ಕ್ರಿ. ಶ. 1336ರಲ್ಲಿ ಹರಿಹರ – ಬುಕ್ಕರಿಂದ ಗುರು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಅಸ್ತಿತ್ವಕ್ಕೆ ಬಂದಿತು. ವೈಭವದ ಪ್ರತೀಕವಾಗಿ ರಾಜ್ಯಭಾರ ನಡೆಸಿದ ವಿಜಯನಗರ ಸಾಮ್ರಾಜ್ಯದಲ್ಲಿ ಕ್ರಮವಾಗಿ ಸಂಗಮ, ಸಾಳುವ, ತುಳುವ, ಅರವೀಡು ಸಂತತಿಗಳು ಆಳ್ವಿಕೆ ನಡೆಸಿದವು. ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ಶ್ರೇಷ್ಠನಾದ ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ಸಾಮ್ರಾಜ್ಯದ ಕೀರ್ತಿಯನ್ನು ಉತ್ತುಂಗಕ್ಕೇರಿಸಿದನು.

ವಿಜಯನಗರ ಸಾಮ್ರಾಜ್ಯದ ಹೃದಯಭಾಗವಾಗಿ, ರಾಜಧಾನಿಯಾಗಿ ಮೆರೆದ ಹಂಪಿಯಲ್ಲಿ ಈ ಸಾಮ್ರಾಟರು ಹಲವಾರು ಬಗೆಯ ದೇವಾಲಯಗಳನ್ನು ನಿರ್ಮಿಸುವ ಮೂಲಕ ನಾಡಿನ ಸಂಸ್ಕೃತಿಗೆ ವಿಶಿಷ್ಟ ಕೊಡುಗೆ ಸಲ್ಲಿಸಿದ್ದಾರೆ. ವಿಜಯನಗರ ಅರಸರ ಆಶ್ರಯ ಎಲ್ಲಾ ಧರ್ಮಗಳಿಗೂ ಏಕರೂಪವಾಗಿದ್ದು, ಧರ್ಮಸಹಿಷ್ಣುತೆ ಸಾಮ್ರಾಜ್ಯಾದ್ಯಂತ ಸ್ಥಾಪಿಸಲ್ಪಟ್ಟಿತ್ತು. ವಿಜಯನಗರ ಮತ್ತು ಬಹಮನಿ ರಾಜ್ಯಗಳ ನಡುವೆ ರಾಜಕೀಯವಾಗಿ ವೈಷಮ್ಯಗಳಿದ್ದರೂ, ಸಾಂಸ್ಕೃತಿಕವಾಗಿ ಹಿಂದೂ–ಮುಸ್ಲಿಂರ ಧಾರ್ಮಿಕ, ತಾತ್ವಿಕ, ಸಾಹಿತ್ಯ, ಸಂಗೀತ, ಚಿತ್ರಕಲೆ, ಗಾರೆಕಲೆ, ಲೋಹಕಲೆ ಮೊದಲಾದ ಕ್ಷೇತ್ರಗಳಲ್ಲಿ ಪರಸ್ಪರ ವಿಚಾರವಿನಿಮಯಗಳುಂಟಾದವು. ಹಾಗೇ ಕನ್ನಡ, ಸಂಸ್ಕೃತ ಭಾಷೆಗಳನ್ನೊಳಗೊಂಡಂತೆ ತೆಲುಗು, ತಮಿಳು, ಇತರ ಭಾಷೆ ಕವಿ–ವಿದ್ವಾಂಸರಿಗೆ ಆಶ್ರಯ ನೀಡಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾದರು. ಕನ್ನಡನಾಡಿನಲ್ಲಿ ವಿಶಿಷ್ಟ ವಾಸ್ತುಶೈಲಿಯಿಂದ ಅಪರೂಪದ ಭವ್ಯಸ್ಮಾರಕಗಳನ್ನು ನಿರ್ಮಿಸಿ, ದ್ರಾವಿಡ ವಾಸ್ತುಶೈಲಿಯ ಔನ್ನತ್ಯಕ್ಕೆ ಕಾರಣೀಭೂತರಾದರು.

ಪಂಪಾಕ್ಷೇತ್ರ –ವಿರೂಪಾಕ್ಷನ ಪ್ರಾಚೀನತೆ

ಪೌರಾಣಿಕ, ಐತಿಹಾಸಿಕ ಮಹತ್ವದ, ವಿಜಯನಗರದ ರಾಜಧಾನಿಯಾದ ಹಂಪಿ ಪಂಪಾಕ್ಷೇತ್ರವಾಗಿ ಪ್ರಸಿದ್ಧಿಗೊಂಡಿದೆ. ಹಂಪಿಯ ಮೂಲ ಆದಿದೇವತೆಯಾದ,

ಪಾರ್ವತಿಯ ಅವತಾರವಾದ ಪಂಪಾದೇವಿಯು ಹಂಪಿಯ ಪಂಪಾಸರಸ್ಸಿನ ದಡದಲ್ಲಿ ತಪಸ್ಸನ್ನಾಚರಿಸಿ, ಶಿವನ ಅವತಾರವಾದ ವಿರೂಪಾಕ್ಷನನ್ನು ವರಿಸಿದಳು.[1] ಆದ್ದರಿಂದ ವಿರೂಪಾಕ್ಷ ಪಂಪಾವಿರೂಪಾಕ್ಷ ಅಥವಾ ಪಂಪಾವತಿ ಎಂಬ ಅಭಿನಾಮದಿಂದ ಹಂಪಿಯಲ್ಲಿ ನೆಲೆಗೊಂಡಿದ್ದಾನೆ.

ವಿರೂಪಾಕ್ಷನ ಪ್ರಾಚೀನತೆಯನ್ನು ಗುರುತಿಸುವುದಾದರೆ, ವಿರೂಪಾಕ್ಷ ಎನ್ನುವುದು ಶಿವನ ಹೆಸರುಗಳಲ್ಲಿ ಒಂದಾಗಿದ್ದು, ಸಾಮಾನ್ಯವಾಗಿ ಮೂರು ಕಣ್ಣುಗಳನ್ನು ಹೊಂದಿರುವುದರಿಂದ ಶಿವನನ್ನು 'ವಿರೂಪಾಕ್ಷ' ಎಂದು ಕರೆಯಲಾಗಿದೆ. ಭಾರತದಲ್ಲಿ ಶಿವಾರಾಧನೆಯ ಬೇರುಗಳನ್ನು ಹರಪ್ಪಾ ಸಂಸ್ಕೃತಿಯ ಕಾಲದಿಂದಲೇ ಗುರುತಿಸಲಾಗುತ್ತಿದೆ. ಮಹೆಂಜೋದಾರೋವಿನಲ್ಲಿ ದೊರೆತಿರುವ ಗುಂಡಾಕೃತಿಯ ಶಿಲೆಗಳನ್ನು ಲಿಂಗಗಳೆಂದು, ಮುದ್ರೆಯೊಂದರ ಮೇಲೆ ಪ್ರಾಣಿಗಳ ನಡುವೆ ಕುಳಿತಿರುವ ವ್ಯಕ್ತಿಯನ್ನು ಯೋಗಸಮಾಧಿಯಲ್ಲಿರುವ ಪಶುಪತಿ ಶಿವನ ಆಕೃತಿಯೆಂದು ವಿದ್ವಾಂಸರು ಗುರುತಿಸಿದ್ದಾರೆ.

ಅಗ್ನಿ ರುದ್ರ ವಿರೂಪಾಕ್ಷ

ರುದ್ರ ಶಿವನಿಗೆ 'ವಿರೂಪಾಕ್ಷ' ಎಂಬ ಹೆಸರು ವೇದಕಾಲದಿಂದಲೇ ಇದ್ದುದು ತಿಳಿಯುತ್ತದೆ. ಋಗ್ವೇದ ಸಂಹಿತೆಯಲ್ಲಿ ವಿವಿಧ ರೂಪಗಳನ್ನು ಹೊಂದಿರುವ ಗೋವುಗಳನ್ನು 'ವಿರೂಪಾ' ಎಂದು ಅವುಗಳ ಸ್ವರೂಪವನ್ನು ಅರಿತಿರುವ 'ಅಗ್ನಿ'ಗೆ ವಿರೂಪಾಕ್ಷನೆಂದು ಕರೆಯಲಾಗಿದೆ. ಇಲ್ಲಿ ಅಗ್ನಿ ಬೇರೆಯಲ್ಲ, ರುದ್ರ ಬೇರೆಯಲ್ಲ, ಸ್ತುತಿವೇದ್ಯನಾದ ಅಗ್ನಿಯು ಭಯಂಕರ ರೂಪವುಳ್ಳವನಾಗಿ 'ರುದ್ರ' ನೆಂದು ಕರೆಸಿಕೊಳ್ಳುತ್ತಾನೆ. ಕೆಳಗಿನ ಶ್ಲೋಕವು ಇದನ್ನು ಸ್ಪಷ್ಟಪಡಿಸುತ್ತದೆ

ಮಯೋ ಭೋರ್ವಾತೋ ಅಭಿ ವಾತೋ ಸ್ರಾ
ಉರ್ಜಸ್ವತೀ ರೋಷಧೀರಾ ರಿಶಂತಾಂ ।
ಪೀವಸ್ವತೀರ್ಜೀವ ಧನ್ಯಾಃ
ಷಿಬಂತ್ವಂವಸಾಯ ಪದ್ವತೇ ರುದ್ರ ಮೃಳ ॥

ಅಂದರೆ ಗೋವುಗಳಿಗೆ ಆಹ್ಲಾದಕರವಾದ ವಾತಾವರಣದಲ್ಲಿ ಸಮೃದ್ಧಿಯಾಗಿರುವ ಹುಲ್ಲನ್ನು ಯಥೇಚ್ಛವಾಗಿ ನೀರನ್ನು ಕುಡಿಯಲಿ. ಎಲೈ ರುದ್ರನೇ ನಿಮಗೆ ಹಾಲಿನ ರೂಪದಲ್ಲಿ ಆಹಾರವನ್ನು ಒದಗಿಸುತ್ತಿರುವ ಈ ಗೋವುಗಳನ್ನು ಸುಖವಾಗಿಟ್ಟಿರು. ಈ ಕಾರಣದಿಂದಾಗಿ ರುದ್ರನು ಪಶುಪತಿ ಎಂದೆನಿಸಿಕೊಂಡು ಹಾಗೂ ವಿರೂಪಾ ಎಂದರೆ ಎಲ್ಲ ಪಶುಗಳಿಗೆ ಒಡೆಯ ವಿರೂಪಾಕ್ಷ ಎಂದು ಕರೆಸಿಕೊಳ್ಳುತ್ತಾನೆ.

ಭೈರವ – ವಿರೂಪಾಕ್ಷ

ಹಾಗೇ ಭೈರವನ ಹಲವು ರೂಪಗಳಲ್ಲಿ 'ವಿರೂಪಾಕ್ಷ' ರೂಪವು ಒಂದಾಗಿದ್ದು, ಭೈರವನ ಆರಾಧನೆಯನ್ನು ಶಿವಪುರಾಣ, ಲಿಂಗಪುರಾಣ, ಮತ್ತು ವಾಮನಪುರಾಣಗಳಲ್ಲಿ ಕಾಣಬಹುದು. ವಾಮನ ಪುರಾಣದ ಉಲ್ಲೇಖದಂತೆ ಒಮ್ಮೆ ಶಿವ ಮತ್ತು ಅಂಧಕಾಸುರನಿಗೂ ಘೋರವಾದ ಯುದ್ಧ ಸಂಭವಿಸಿ, ಅಂಧಕನು ಶಿವನ ಹಣೆಗೆ ಹೊಡೆಯಲಾಗಿ, ಶಿವನ ಹಣೆಯಿಂದ ರಕ್ತ ಸೋರಿ ನಾಲ್ಕು ದಿಕ್ಕುಗಳಲ್ಲಿ ಹರಿಯಿತು. ಅದರಿಂದ ಭೈರವರು ಸೃಷ್ಟಿಯಾದರು. ಆನಂತರ ಭೈರವರು ಎಂಟು ಗುಂಪುಗಳಾಗಿ ಪ್ರತ್ಯೇಕಗೊಂಡರು. ಇವರಲ್ಲಿ ಗುರು-ಭೈರವ ಎಂಬುದು ಒಂದು ಗುಂಪು. ಈ ಗುರು ಭೈರವರಲ್ಲಿ 'ವಿರೂಪಾಕ್ಷ ಭೈರವ' ಎಂಬ ಭೈರವನೂ ಇದ್ದಾನೆ. ಇವನು ಶ್ವೇತವರ್ಣದ ಮೈಯುಳ್ಳವನೆಂದು, ಜಪಮಾಲೆ, ಅಂಕುಶ, ವೀಣೆ ಮತ್ತು ಪುಸ್ತಕ ಧಾರನೆಂದು ಹೇಳಲಾಗಿದೆ.[3]

ವಿರೂಪಾಕ್ಷನ ಆರಾಧನೆಯ ಪ್ರಸರಣ

ಪಂಪಾಕ್ಷೇತ್ರವಾದ, ವಿರೂಪಾಕ್ಷನ ಮೂಲನೆಲೆಯಾದ, ಐತಿಹಾಸಿಕ ತಾಣವಾದ ಹಂಪಿಯ ಪ್ರಾಚೀನತೆ ಕ್ರಿ. ಶ. 7ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆಯಾದರೂ, ಪಂಪಾಪುರ ಆದಿದೈವ ವಿರೂಪಾಕ್ಷನ ಉಲ್ಲೇಖ ಸಿಗುವುದು 11ನೇ ಶತಮಾನದ ಶಾಸನದಲ್ಲಿ ಕಳಚೂರಿ ಅರಸ ಬಿಜ್ಜಳನ ಕ್ರಿ. ಶ. 1167ರ ಶಾಸನದಲ್ಲಿ ಹಂಪಿ ವಿರೂಪಾಕ್ಷ ಎಂಬ ಪ್ರಥಮ ಉಲ್ಲೇಖ ದೊರೆಯುತ್ತದೆ.[4] ಇದರನ್ವಯ ಕ್ರಿ. ಶ. 12ನೇ ಶತಮಾನದ ಹೊತ್ತಿಗೆ ಹಂಪಿಯು ಪ್ರಮುಖ ಧಾರ್ಮಿಕ ಕೇಂದ್ರವಾಗಿ ಬೆಳೆದಿತ್ತೆಂದು, ವಿರೂಪಾಕ್ಷನು ಹಂಪಿಯ ಅಧಿದೇವತೆಯಾಗಿದ್ದನೆಂದು ಗ್ರಹಿಸಬಹುದು. ಅಂತೆಯೇ 'ವಿರೂಪಾಕ್ಷ' ಪರಿಕಲ್ಪನೆ ವೈದಿಕ ಸಾಹಿತ್ಯದಷ್ಟು ಪ್ರಾಚೀನತೆಯನ್ನು ಪಡೆದುಕೊಂಡಿದ್ದರೂ, ಅದು ಒಂದು ನಿಶ್ಚಿತ ರೂಪವನ್ನು ಪಡೆದುಕೊಂಡು ದೇವಾಲಯ ನಿರ್ಮಾಣಕ್ಕೆ ಕಾರಣವಾದದ್ದು ಕ್ರಿ. ಶ. 2ನೇ ಶತಮಾನದಲ್ಲಿ. ಅಂದರೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಮೊಟ್ಟಮೊದಲಿಗೆ ಹಂಪಿಯಲ್ಲಿ ವಿರೂಪಾಕ್ಷ ದೇವಾಲಯ ರೂಪುಗೊಂಡದ್ದು, ವಾಸ್ತುಶಿಲ್ಪ ಆಧಾರಗಳಿಂದ ತಿಳಿಯಬಹುದಾಗಿದೆ. ತದನಂತರ ಹಂಪಿ ಒಂದು ಕ್ಷೇತ್ರವಾಗಿ ಬೆಳೆಯುತ್ತಾ ಬಂದದ್ದು ವಿರೂಪಾಕ್ಷ ಆರಾಧನೆಯ ಮಹತ್ವ ಹೆಚ್ಚುತ್ತಾ ನಡೆಯಿತು. ಈ ಅಂಶವನ್ನು ಸಮಕಾಲೀನ ಶಾಸನ, ಸಾಹಿತ್ಯ, ಐತಿಹ್ಯ ಮುಂತಾದವುಗಳಿಂದ ತಿಳಿಯಬಹುದು.

14ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ವಿರೂಪಾಕ್ಷನ ಮಹತ್ವ ಇನ್ನೂ ಅಧಿಕವಾಯಿತು. ಅವನು ವಿಜಯನಗರ ಪಟ್ಟಣದ

ರಕ್ಷಕ ಮತ್ತು ವಿಜಯನಗರ ಅರಸರ ಆರಾಧ್ಯದೈವವಾದ ವಿಜಯನಗರದ ಸಂಗಮ ದೊರೆಗಳಿಂದ ಅರವೀಡು ದೊರೆಗಳವರೆಗೆ ಎಲ್ಲರೂ ವಿರೂಪಾಕ್ಷನಿಗೆ ಅಪಾರ ದಾನ ದತ್ತಿಗಳನ್ನು ಮಾಡಿ, ವಿರೂಪಾಕ್ಷನ ಅನುಗ್ರಹ ಪಡೆಯಲು ಪ್ರಯತ್ನಿಸಿದ ಸಂಗತಿಗಳು ಶಾಸನಗಳಲ್ಲಿ ಕಂಡುಬರುತ್ತವೆ. ವಿಜಯನಗರದ ಸಾಮ್ರಾಟರು ವಿರೂಪಾಕ್ಷನೇ ನಿಜವಾದ ದೊರೆ ತಾವು ಆತನ ಪ್ರತಿನಿಧಿಗಳು ಎಂದು ಭಾವಿಸಿ ತಮ್ಮ ಶಾಸನಗಳ ಕೊನೆಯಲ್ಲಿ "ಶ್ರೀವಿರೂಪಾಕ್ಷ" ಎಂಬ ಅಂಕಿತವನ್ನು ಹಾಕುತ್ತಿದ್ದರು. ಈ ಕಾಲದಲ್ಲಿ ವಿರೂಪಾಕ್ಷನ ಪೂಜೆಗಳು ವಿಸ್ತೃತಗೊಂಡವು. ಜಾತ್ರೆ – ಉತ್ಸವಗಳು ವಿಜೃಂಭಣೆಗೊಂಡವು. ಅಷ್ಟೇ ಅಲ್ಲದೇ ಹಂಪಿ ಸುತ್ತಮುತ್ತಲ ಪ್ರದೇಶಗಳಲ್ಲಿ ಅರಸರು, ಅವರ ಸಾಮಂತರು, ಗಣ್ಯಮಾನ್ಯರು ಅನೇಕ ವಿರೂಪಾಕ್ಷ ದೇವಾಲಯ ಗಳನ್ನು ನಿರ್ಮಿಸಿದರು.

ಇಂತಹ ಮಹತ್ವದ ಹಂಪಿ ಪರಿಸರದ ಪ್ರಧಾನ ದೇವತೆಯಾದ ವಿರೂಪಾಕ್ಷನಿಗೆ 11ನೇ ಶತಮಾನದಿಂದ ಅನೇಕ ದಾನ-ದತ್ತಿಗಳನ್ನು ಬಿಡಲಾಗಿದೆ. ನೇರವಾಗಿ ವಿರೂಪಾಕ್ಷನಿಗೆ ದಾನದತ್ತಿಗಳನ್ನು ಬಿಟ್ಟಿರುವುದಲ್ಲದೇ ಹಂಪಿಯ ಸುತ್ತಮುತ್ತಲಿರುವ ಅನೇಕ ಗ್ರಾಮಗಳಲ್ಲಿಯ ವ್ಯಕ್ತಿಗಳಿಗೆ, ದೇವಾಲಯಗಳಿಗೆ ದಾನ ಬಿಡುವ ಸಂದರ್ಭ ದಲ್ಲಿ ಪಂಪಾತೀರ್ಥಕ್ಕೆ ಒಂದು, ವಿರೂಪಾಕ್ಷನ ಸನ್ನಿಧಿಯಲ್ಲಿ ಪ್ರಮಾಣೀಕರಿಸಲಾಗು ತ್ತಿತ್ತು. ಹಂಪಿಯ ವಿರೂಪಾಕ್ಷನಲ್ಲದೇ ಕ್ರಮೇಣ ಆತನ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸುವುದು ಮತ್ತು ದಾನ-ದತ್ತಿಗಳನ್ನು ಬಿಡುವ ಪದ್ಧತಿ ಕೂಡ ಆರಂಭ ವಾಯಿತು.

ಕುರಿಕುಪ್ಪೆಯ ಪಂಪಾವಿರೂಪಾಕ್ಷ ದೇವಾಲಯ

ವಿಜಯನಗರ ಕಾಲದಲ್ಲಿ ಮಾಂಡಲೀಕರಿಂದ ನಿರ್ಮಿಸಲ್ಪಟ್ಟ ಕುರಿಕುಪ್ಪೆಯ ಶ್ರೀ ಪಂಪಾವಿರೂಪಾಕ್ಷ ದೇವಾಲಯ ವೈಶಿಷ್ಟ್ಯಪೂರ್ಣವಾಗಿದೆ. ಕುರಿಕುಪ್ಪೆ ಗ್ರಾಮವು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿದ್ದು, ಹೊಸಪೇಟೆ ಬಳ್ಳಾರಿ ರಸ್ತೆಯಿಂದ ಎಡಕ್ಕೆ ಒಂದು ಕಿ. ಮೀ. ಅಂತರದಲ್ಲಿದೆ. ಈ ದೇವಾಲಯದ ಸಭಾಮಂಟಪದ ಕಂಬದ ಮೇಲಿರುವ ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದ ಕ್ರಿ ಶ. 1523ರ ಶಾಸನದ ಉಲ್ಲೇಖದಂತೆ[5] ಕುರಿಕುಪ್ಪೆ ಗ್ರಾಮವನ್ನು ಅನಂತಸೇತು ಎಂದು ಕರೆಯಲಾಗುತ್ತಿದ್ದು, ಅನೇಕ ದೀಕ್ಷಿತರು ವಾಸಿಸುತ್ತಿದ್ದು, ಧಾರ್ಮಿಕ ಕೇಂದ್ರ ವಾಗಿ ರೂಪಗೊಂಡಿತ್ತು. ಇಲ್ಲಿ ವಿರೂಪಾಕ್ಷ ದೇವರ ದೇವಾಲಯವನ್ನು ಕಟ್ಟಿಸಿ, ಆ ದೇವರ ನೈವೇದ್ಯ, ಪೂಜೆ, ಪುನಸ್ಕಾರ ನಿತ್ಯ ಸೇವೆಗಳಿಗೆ ದಾನ ನೀಡಿದ ಮಾಹಿತಿಯನ್ನು ತಿಳಿದುಕೊಳ್ಳಬಹುದು. ಇದೇ ದೇವಾಲಯದ ಇನ್ನೊಂದು ಶಾಸನ ಕೂಡ ಇದೇ ಮಾಹಿತಿಯನ್ನು ತಿಳಿಯಪಡಿಸುವುದು.

ದೇವಾಲಯ ವಾಸ್ತುಶಿಲ್ಪ ವಿವರಣೆ

ಶಾಸನೋಕ್ತವಾಗಿರುವ, ವಾಸ್ತುಶಿಲ್ಪ ದೃಷ್ಟಿಯಿಂದಲೂ ಮಹತ್ವದೆನಿಸಿರುವ ಈ ವಿರೂಪಾಕ್ಷ ದೇವಾಲಯವು ತೆರೆದ ಮುಖಮಂಟಪ, ಸಭಾಮಂಟಪ ಮತ್ತು ಸಮಾನವೇದಿಕೆಯ ಮೂರು ಗರ್ಭಗೃಹಗಳನ್ನು ಹೊಂದಿದೆ. ಮುಖಮಂಟಪವು ಉತ್ತರ-ದಕ್ಷಿಣಾಭಿಮುಖವಾಗಿ ಎರಡು ಸಾಲಿನಲ್ಲಿ ಆರು ಅಂಕಣಗಳನ್ನು ಹೊಂದಿದೆ. ಇಲ್ಲಿ ಮುಂಭಾಗದಲ್ಲಿ ನಾಲ್ಕು, ಮಧ್ಯದಲ್ಲಿ ನಾಲ್ಕು ಕಂಬಗಳಿದ್ದು, ಇವು ಬೃಹತ್ ಗಾತ್ರದಿಂದ ಗಮನಸೆಳೆಯುತ್ತವೆ. ಮುಂಭಾಗದ ಮಧ್ಯದ ಎರಡು, ಒಟ್ಟು ನಾಲ್ಕು ಕಂಬಗಳು ಪೀಠ, ಕಾಂಡ, ಕುಂಭ, ಕಳಶ, ಫಲಕಗಳನ್ನು ಹೊಂದಿವೆ. ಪೀಠವು ಮಂಚಬಂಧ ಶೈಲಿಯಲ್ಲಿದೆ. ಕಾಂಡದ ಕೆಳಭಾಗ ಮತ್ತು ಮಧ್ಯಭಾಗದಲ್ಲಿ ಅಸಮವಾದ ಚತುರ್ಮುಖದ ಭಾಗಗಳಿವೆ. ಇವುಗಳ ಮಧ್ಯದಲ್ಲಿ ಇವುಗಳ ಮಧ್ಯದಲ್ಲಿ 16, 18, 16 ಮುಖಗಳ ಅಡ್ಡಪಟ್ಟಿಕೆಗಳಿವೆ. 16 ಮುಖಗಳ ಪಟ್ಟಿಕೆಯನ್ನು ಸ್ವಲ್ಪ ಒಳಭಾಗದಲ್ಲಿ ಕೊರೆದಂತೆ ರೂಪಿಸಲಾಗಿದೆ. ಚೌಕಭಾಗದ ಮೇಲೆ ಯಾವುದೇ ಉಬ್ಬುಗಳಿಲ್ಲ, ಆದರೆ ಮಧ್ಯದ ಎರಡು ಕಂಬಗಳ ಕೆಳಗಿನ ಚೌಕಕಾಂಡಗಳಲ್ಲಿ ಶಾಸನಗಳನ್ನು ಕಂಡರಿಸಲಾಗಿದೆ. ಕಂಬಗಳ ಕುಂಭ ಭಾಗದಲ್ಲಿ ಕೆಳಗೆ ಪದ್ಮಭಾಗ, ಕಳಶ, ಫಲಕಗಳು ವಿಶಾಲವಾಗಿದೆ. ಕಂಬಗಳು ಮೇಲ್ಭಾಗದಲ್ಲಿ ಸರಳವಾದ ಬೋದಿಗೆ ಗಳಿವೆ, ಮುಖಮಂಟಪ ಬದಿಯ ಕಂಬಗಳು ಸಾಧಾರಣವಾಗಿವೆ. ಕೆಳಗೆ ಮತ್ತು ಮೇಲೆ ಅಸಮವಾದ ಚೌಕಭಾಗಗಳನ್ನು ಹೊಂದಿದ್ದು, ಮಧ್ಯದಲ್ಲಿ ಅಷ್ಟಮುಖದ ಲಂಬಪಟ್ಟಿಗಳಿವೆ. ಮೇಲೆ ಕಿರಿದಾದ ಕುಂಭ ಕಳಶಗಳಿವೆ. ಇವುಗಳ ಮೇಲೆ ಬೋದಿಗೆ ಸರಳವಾಗಿದ್ದು, ಮುಖಮಂಟಪದ ಛತ್ತು ಸಮತಟ್ಟಾಗಿದೆ.

ಮುಖಮಂಟಪದಷ್ಟೆ ವಿಸ್ತಾರದ ತೆರೆದ ಸಭಾಮಂಟಪವು ಮುಖಮಂಟಪಕ್ಕಿಂತ ಒಂದು ಅಡಿ ಎತ್ತರದಲ್ಲಿವೆ. ಸಭಾಮಂಟಪದ ಮುಂಭಾಗದಲ್ಲಿ ನಾಲ್ಕು ಮತ್ತು ಮಧ್ಯದಲ್ಲಿ ನಾಲ್ಕು-ಒಟ್ಟು ಹತ್ತು ಕಂಬಗಳಿವೆ. ಅವುಗಳಲ್ಲಿ ನಾಲ್ಕು ಸ್ವತಂತ್ರ ಕಂಬ ಗಳಂತೆ ವಾಸ್ತುಭಾಗಗಳನ್ನು ಹೊಂದಿವೆ. ಇದರ ಛತ್ತು ಕೂಡ ಸಮತಟ್ಟಾಗಿದೆ. ಸಭಾಮಂಟಪದ ಮಧ್ಯದಲ್ಲಿ ಮಧ್ಯದ ಗರ್ಭಗೃಹಕ್ಕೆ ಎದುರಾಗಿ ನಂದಿ ಇದೆ. ಇಲ್ಲಿ ಬದಿಯ ಎರಡು ಗೋಡೆಗಳಲ್ಲಿ ದೇವಕೋಷ್ಠಗಳಿದ್ದು, ಅವುಗಳಲ್ಲಿ ಸದ್ಯ ಗರುಡ (ಬಲಗಡೆ) ಭೈರವ (ಎಡಗಡೆ) ಶಿಲ್ಪಗಳಿವೆ. ಈ ದೇವಕೋಷ್ಠಗಳ ಮೇಲ್ಭಾಗ ದಲ್ಲಿ ನಾಗರಶೈಲಿಯ ಶಿಖರದ ಮಾದರಿಯಿದೆ.

ಮುಖಮಂಟಪವು ಸಭಾಮಂಟಪದಷ್ಟೆ ಅಗಲವಾಗಿ ಒಂದೊಂದು ಸಾಲಾಗಿ ಮೂರು ಗರ್ಭಗೃಹಗಳನ್ನು ಹೊಂದಿದೆ. ಮಧ್ಯದ ಗರ್ಭಗೃಹದಲ್ಲಿ ಪಂಪಾವಿರೂಪಾಕ್ಷ ಲಿಂಗವಿದ್ದು, ಈ ಗರ್ಭಗೃಹದ ಛತ್ತಿನಲ್ಲಿ ಅರಳು ಕಮಲದ ಪುಷ್ಪಾಕೃತಿ ಇದೆ.

ಮುಖ್ಯಗರ್ಭಗೃಹದ ಬಲಬದಿಯ ಗರ್ಭಗೃಹದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ಗಣೇಶ ಗರ್ಭಗೃಹದ ದ್ವಾರಬಂಧದಲ್ಲಿ ಎರಡು ಬದಿಗೆ ಶೈವದ್ವಾರಪಾಲಕರ ಶಿಲ್ಪಗಳಿಗೆ ದ್ವಾರಪಾಲಕರ ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ. ದ್ವಾರಬಂಧವು ನಾಲ್ಕು ಶಾಖೆಗಳಲ್ಲಿದೆ. ಸಿಂಹಶಾಖೆ, ಸ್ತಂಭಶಾಖೆ, ಲತಾಶಾಖೆ, ಮತ್ತು ಪುಷ್ಪಶಾಖೆಗಳಿದ್ದು, ಲಲಾಟಬಿಂಬದಲ್ಲಿ ಯಾವುದೇ ಶಿಲ್ಪಗಳಿಲ್ಲ. ಲಲಾಟಬಿಂಬದ ಎರಡೂ ಬದಿಗೆ ಕುಡ್ಮಲಗಳಿವೆ. ಉತ್ತಾರಾಂಗದಲ್ಲಿ ನಾಗರಶೈಲಿ ಶಿಖರದ ಮಾದರಿ ಗಳಿವೆ. ಎಡ ಬದಿಯ ಗರ್ಭಗೃಹದಲ್ಲಿ ಸದ್ಯ ವೀರಭದ್ರೇಶ್ವರ ವಿಗ್ರಹ ಪ್ರತಿಷ್ಠಾಪಿಸ ಲಾಗಿದೆ. ಭಿತ್ತಿನಲ್ಲಿ ಅರಳುಕಮಲಾಕೃತಿ ಇದೆ. ಇದರ ದ್ವಾರಬಂಧದ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ. ದ್ವಾರಬಂಧದಲ್ಲಿ ರತ್ನಶಾಖ, ಲತಾಶಾಖ, ಸ್ತಂಭಶಾಖ, ಪುಷ್ಪಶಾಖಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀಬಿಂಬವಿದ್ದು, ಇಕ್ಕೆಲಗಳಲ್ಲಿ ಕುಡ್ಮಲಗಳಿವೆ. ಉತ್ತರಾಂಗದಲ್ಲಿ ನಾಗರಶೈಲಿಯ ಶಿಖರ ಮಾದರಿಯಿದೆ.

ಸಭಾಮಂಟಪ ಮತ್ತು ಗರ್ಭಗೃಹಗಳು ಒಂದೇ ಅಳತೆಯಲ್ಲಿರುವುದರಿಂದ ಹೊರಭಿತ್ತಿಯು ಎರಡಕ್ಕೂ ಏಕಪ್ರಕಾರವಾಗಿದೆ. ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿರುವುದರಿಂದ ಸ್ಪಷ್ಟವಾಗುವುದಿಲ್ಲ. ಆದರೆ ಮಂಚಬಂಧಶೈಲಿಯು ಇರುವುದಾಗಿ ತಿಳಿಯುತ್ತದೆ. ಭಿತ್ತಿಯನ್ನು ಮಟ್ಟಸಗೊಳಿಸಿದ ಬೃಹತ್ ಕಲ್ಲುಗಳಿಂದ ಕಟ್ಟಲಾಗಿದೆ. ಕೆಳಗಿನ ಕಲ್ಲುಗಳು ಸುಮಾರು 75 ಅಡಿ ಉದ್ದವಾಗಿರುವುದರಿಂದ ಗಮನಾರ್ಹ ಭಿತ್ತಿ ಮೇಲ್ಭಾಗದಲ್ಲಿ ಸರಳವಾದ ಕಪೋತವಿದೆ. ಮಾಡಿನಲ್ಲಿ ನಾಲ್ಕು ಮೂಲೆಗೆ ನಂದಿಯ ಗಾರೆಶಿಲ್ಪಗಳಿವೆ. ಮುಖಮಂಟಪದ ಮಾಡಿನಲ್ಲೂ ಮುಖಭಾಗದಲ್ಲಿ ಗಾರೆಯ ಶಾಲಾಕೂಟಗಳಿವೆ. ಮಧ್ಯದಲ್ಲಿ ಗಣೇಶ, ಷಣ್ಮುಖಸಹಿತ ಶಿವ, ಬ್ರಹ್ಮ ಮತ್ತು ಗರುಡವಾಹನ ವಿಷ್ಣುಶಿಲ್ಪಗಳಿದ್ದು, ಈ ಗಾರೆಶಿಲ್ಪಗಳು ಭಗ್ನವಾಗಿದ್ದು, ದುರಸ್ತಿಗೊಳಿಸಲಾಗಿದೆ. ಗರ್ಭಗೃಹದ ಮೇಲೆ ಮಧ್ಯದ ಪ್ರಮಾಣದ ದ್ರಾವಿಡ ಮಾದರಿಯ ಏಕತಲ ಗೋಪುರ/ಶಿಖರವಿದೆ. ಇದರ ಸೂಪ್ತಿಯ ಕೆಳಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ದುರ್ಗೆಯರ ಶಿಲ್ಪಗಳಿವೆ. ಸೂಪ್ತಿಯ ಕೆಳಭಾಗದಲ್ಲಿ ನಾಲ್ಕೂ ದಿಕ್ಕಿಗೆ ಕಾಮಧೇನುವಿನ ಶಿಲ್ಪವಿರುವುದು ವಿಶೇಷ. ಗಾರೆ ಶಿಲ್ಪಗಳನ್ನು ಗಮನಿಸಲಾಗಿ, ಕೆಲವು ಶಿಲ್ಪಗಳ ವೇಷಭೂಷಣಗಳು ವಿಜಯನಗರೋತ್ತರ ಕಾಲದವೆನಿಸುತ್ತವೆ. ಹಾಗಾಗಿ ಇದರ ಗಾರೆಶಿಲ್ಪಗಳನ್ನು ವಿಜಯನಗರೋತ್ತರ ಅಂದರೆ ಪಾಳೆಯಗಾರರ ಕಾಲದಲ್ಲಿ ದುರಸ್ತಿಗೊಳಿಸಲಾಗಿದೆ ಎಂದು ಹೇಳಬಹುದು.

ಮೂರ್ತಿ ಶಿಲ್ಪ 7

ಕಾಲಭೈರವ

ಅಂತೆಯೇ ಸಭಾಮಂಟಪದ ಭಿತ್ತಿಯ ದೇವಕೋಷ್ಠಗಳಲ್ಲಿರುವ ಕಾಲಭೈರವ ಮತ್ತು ಗರುಡ ಶಿಲ್ಪಗಳು ಶಿಲ್ಪಕಲಾ ದೃಷ್ಟಿಯಿಂದ ವಿಶಿಷ್ಟವಾಗಿದೆ. ಕಾಲಭೈರವನ ಸ್ಥಾನದ ಶಿಲ್ಪವು ಸಮಭಂಗಿಯಲ್ಲಿದೆ. ಕಾಲಭೈರವನಿಗೆ ಚತುರ್ಬಾಹುಗಳಿದ್ದು, ಹಿಂದಿನ ಕೈಗಳಲ್ಲಿ ತ್ರಿಶೂಲ (ಬಲ), ಡಮರು (ಎಡ) ಹಾಗೆ ಮುಂದಿನ ಕೈಗಳಲ್ಲಿ ಖಡ್ಗ (ಬಲ), ಅಸುರನ ತಲೆ (ಎಡ) ಹಿಡಿಯನಿಂತಿದ್ದಾನೆ. ಶಿಲ್ಪದ ತಲೆಯ ಮೇಲೆ ಕಿರೀಟ ಮುಕುಟವಿದೆ. ಮಣಿಸರ ಹಾರ, ಯಜ್ಞೋಪವೀತ, ಭುಜಹಾರ, ತೋಳಬಂದಿ, ಮುಂಗೈಕಡಗ, ಮತ್ತು ಕಾಲ್ಗಡಗಳಿಂದ ಅಲಂಕರಿಸಲಾಗಿದೆ. ಹಿಂಭಾಗದಲ್ಲಿ ಶ್ವಾನದ ಶಿಲ್ಪವಿದೆ.

ಗರುಡ

ಕಾಲಭೈರವ ಶಿಲ್ಪದ ಎದುರಿನ ದೇವಕೋಷ್ಠದಲ್ಲಿ ಗರುಡ ಶಿಲ್ಪವಿದೆ. ವಿಷ್ಣುವಿನ ವಾಹನವಾದ ಈ ಗರುಡಶಿಲ್ಪವು ಬಲಗಾಲಿನ ಪಾದವೂರಿ, ಎಡಗಾಲಿನ ಮಂಡಿಯೂರಿ, ಹಾರುವ ಭಂಗಿಯಲ್ಲಿದೆ. ಕೈಗಳು ಅಂಜಲಿಮುದ್ರೆಯಲ್ಲಿದ್ದು, ತಲೆಯ ಮೇಲೆ ಕಿರೀಟವಿದೆ. ಎರಡೂಪಕ್ಕೆಗಳಲ್ಲಿ ರೆಕ್ಕೆಗಳಿದ್ದು, ಸ್ಥಳೀಯ ಶೈಲಿಯಲ್ಲಿ ಕೆತ್ತಲಾಗಿದೆ. ಕುರಿಕುಪ್ಪೆಯ ಈ ವಿರೂಪಾಕ್ಷ ದೇವಾಲಯದ ಧಾರ್ಮಿಕ ಪೂಜೆ, ಪುನಸ್ಕಾರಗಳು, ಜಾತ್ರೆ – ಉತ್ಸವಗಳು, ಅಲ್ಪಸ್ವಲ್ಪ ಸ್ಥಳೀಯ ಭಿನ್ನತೆಯೊಂದಿಗೆ ಹಂಪಿ ಪಂಪಾವಿರೂಪಾಕ್ಷೇಶ್ವರ ದೇವಾಲಯದ ಆಚರಣೆಗಳನ್ನು ಹೋಲುತ್ತವೆ. ಹಂಪಿ ವಿರೂಪಾಕ್ಷನ ಮಹಾರಥೋತ್ಸವ ನಡೆಯುವ ದಿನದಿಂದೇ ಇಲ್ಲಿಯೂ ವಿರೂಪಾಕ್ಷನ ರಥೋತ್ಸವ ಜರುಗುತ್ತದೆ.

ಉಪಸಂಹಾರ

ವಿಜಯನಗರ ಸಾಮ್ರಾಜ್ಯದ ಅಧಿದೈವ ಶ್ರೀ ವಿರೂಪಾಕ್ಷನ ಆರಾಧನೆ ನಾಡಿನಲ್ಲಿ ಪ್ರಾಚೀನ ಹಿನ್ನೆಲೆ ಹೊಂದಿದ್ದು, ಕಾಲಕಾಲಕ್ಕೆ ಆಳರಸರ, ಜನಸಮುದಾಯದ ಮೇಲೆ ಪ್ರಭಾವ ಬೀರುತ್ತಾ ಬಂದಿರುವುದನ್ನು ಸಮಕಾಲೀನ ಸಾಹಿತ್ಯ, ಶಾಸನಗಳು, ದೇವಾಲಯ ವಾಸ್ತುಶಿಲ್ಪ, ಧಾರ್ಮಿಕ ಆಚರಣೆ, ಜನಪದ ನಂಬಿಕೆಗಳಿಂದ ಗ್ರಹಿಸಬಹುದಾಗಿದೆ. ವಿರೂಪಾಕ್ಷ ಕೇವಲ ಹಂಪಿಗೆ ಸೀಮಿತವಾಗದೆ ಸುತ್ತಮುತ್ತಲಿನ ಪರಿಸರದಲ್ಲಿ ವ್ಯಾಪಿಸಿ ಆಳವಾದ ಪ್ರಭಾವ ಬೀರಿರುವುದು ಇದರಿಂದ ವೇದ್ಯವಾಗುತ್ತದೆ, ಅಂತೆಯೇ ಹಂಪಿಯನ್ನು ಹೊರತುಪಡಿಸಿ, ಸುಮಾರು ಹತ್ತಕ್ಕೂ ಅಧಿಕವಾದ ವಿರೂಪಾಕ್ಷ ದೇವಾಲಯಗಳನ್ನು ಈ ಪರಿಸರದಲ್ಲಿ ಕಾಣಬಹುದು. ಈ ನಿಟ್ಟಿನಲ್ಲಿ

ಕುರಿಕುಪ್ಪೆಯ ಶ್ರೀ ಪಂಪಾವಿರೂಪಾಕ್ಷ ದೇವಾಲಯವು ಒಂದಾಗಿದ್ದು, ವಿರೂಪಾಕ್ಷ ಆರಾಧನೆಯ ಪ್ರಸರಣಕ್ಕೆ ಮತ್ತೊಂದು ಕೊಡುಗೆಯಾಗಿ ವಿಶಿಷ್ಟವಾಗಿ ಗುರುತಿಸಲ್ಪಟ್ಟಿದೆ.

ಆಕರಗಳು

1. ಸಿದ್ಧಲಿಂಗೇಶ್ವರಸ್ವಾಮಿ, 1983, *ಶ್ರೀ ಪಂಪಾಮಹಾತ್ಮೆ*, ವೃಷಭಾಶ್ರಯ, ಹೊಳಗುಂದಿ, ಹಡಗಲಿ ತಾ
2. *ಋಗ್ವೇದ ಸಂಹಿತಾ ಮಂಡಲ 1*, ಸೂಕ್ತ 169
3. ಎಚ್. ಸಿ. ದಾಸ್, *ತ್ರಾಂತ್ರಿಸಿಸಮ್*, ಪು.28
4. *ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್*, IV – 250
5. ದೇವರ ಕೊಂಡಾರೆಡ್ಡಿ (ಸಂ.) *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1*, ಬಳ್ಳಾರಿ ಜಿಲ್ಲೆ
6. ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.
7. ರಾಮಚಂದ್ರರಾವ್ ಎಸ್. ಕೆ. 1975, *ಮೂರ್ತಿಶಿಲ್ಪ ನೆಲೆ–ಹಿನ್ನೆಲೆ*, ಬೆಂಗಳೂರು ವಿ.ವಿ. ಬೆಂಗಳೂರು.



ಕರೇಕುಪ್ಪೆ ವಿರೂಪಾಕ್ಷ ದೇವಾಲಯದ ಮಂಜೂರಿನ ಮೇಲ್ಭಾಗದ ಗಾರೆ ಶಿಲ್ಪ



ಕರೇಕುಪ್ಪೆ ವಿರೂಪಾಕ್ಷ ದೇವಾಲಯದ ಮುಖಮಂಟಪ



ಕರೇಕುಪ್ಪೆ ವಿರೂಪಾಕ್ಷ ದೇವಾಲಯದ ಗರ್ಭಗೃಹದ ಶಿವಲಿಂಗ

೨೯. ನಂಜನಗೂಡು ನಂಜುಂಡೇಶ್ವರ ದೇವಾಲಯ ಮತ್ತು ಮಠಾಗ್ರಹಾರಗಳಿಗೆ ವಿಜಯನಗರ ಅರಸರ ಕೊಡುಗೆಗಳು

ಡಾ. ಎ. ಎನ್. ಸುರೇಶ್

ವಿಜಯನಗರ ಸಾಮ್ರಾಜ್ಯವು ಹಿಂದೂ ಧರ್ಮರಕ್ಷಣೆಗಾಗಿ ಹಾಗೂ ಇಸ್ಲಾಂ ದಾಳಿಗಳಿಂದ ಆದ ಅನಾಹುತವನ್ನು ತಡೆಯುವುದಕ್ಕಾಗಿ ಸ್ಥಾಪಿತವಾಯಿತು. ಇಸ್ಲಾಂ ಧರ್ಮವು ಸೇರಿದಂತೆ ಎಲ್ಲ ಧರ್ಮಗಳ ನಡುವೆ ಅಸಾಧಾರಣವಾದ ಮತ್ತು ಆದರ್ಶವೆನಿಸುವಂತಹ ಧಾರ್ಮಿಕ ಸಹಿಷ್ಣುತೆಯನ್ನು ಧರ್ಮ ವೈಶಾಲ್ಯವನ್ನು ಮೆರೆದವರು ವಿಜಯನಗರದ ಅರಸರು. ಇದು ಅವರ ಆಡಳಿತದ ಪರಮಧ್ಯೇಯವೂ ಆಗಿದ್ದು, ವೈಯಕ್ತಿಕ ಧರ್ಮಾಚರಣೆಗಳು ವಿಭಿನ್ನವಾಗಿದ್ದರೂ ಸಾಮ್ರಾಜ್ಯದಲ್ಲಿ ನೆಲೆಸಿದ್ದ ಶೈವ, ವೈಷ್ಣವ, ಜೈನ, ವೀರಶೈವ, ಇಸ್ಲಾಂ ಧರ್ಮಗಳ ಧಾರ್ಮಿಕ ಸಹಿಷ್ಣುತೆಗೆ ಹಾಗೂ ಅವುಗಳ ಪರಂಪರೆ ಮತ್ತು ಪೂರ್ವ ಸಂಪ್ರದಾಯಗಳನ್ನು ಕಾಪಾಡಲು ಎಲ್ಲಾ ಧರ್ಮದ ದೇವಾಲಯಗಳನ್ನೂ, ಮಠಗಳು ಮತ್ತು ಅಗ್ರಹಾರ ಗಳನ್ನು ಪ್ರೋತ್ಸಾಹಿಸಿ ಬೆಳೆಸಿದರು. ಈ ರೀತಿ ಪ್ರೇರಣೆ, ಪ್ರೋತ್ಸಾಹ ಮತ್ತು ಕೊಡುಗೆಗಳನ್ನು ಪಡೆದು ಅತಿಶಯವಾಗಿ ಬೆಳೆದ ನಂಜನಗೂಡು ದೇವಾಲಯಗಳು, ಮಠಗಳು ಮತ್ತು ಅಗ್ರಹಾರಗಳು ಪ್ರಮುಖವಾಗಿದ್ದು ಈ ಕ್ಷೇತ್ರದಲ್ಲಿ ಬೆಳೆದ ಧಾರ್ಮಿಕ ಪ್ರಗತಿಯನ್ನು ಅವಲೋಕಿಸೋಣ.

ಮೈಸೂರಿನಿಂದ ಹದಿನಾರು ಮೈಲಿ ದೂರದಲ್ಲಿ ದಕ್ಷಿಣಕ್ಕಿರುವ ನಂಜನಗೂಡು ಪ್ರಾಚೀನ ಕಾಲದಿಂದಲೂ ತೀರ್ಥಕ್ಷೇತ್ರವಾಗಿದ್ದು ದಕ್ಷಿಣಕಾಶಿ ಎಂದು ಪ್ರಸಿದ್ಧ ವಾಗಿರುವ ಇದು ಶೈವ ಧರ್ಮೀಯರ ಕ್ಷೇತ್ರವಾಗಿದ್ದು, ಶ್ರೀಕಂಠೇಶ್ವರ ಅಥವಾ ನಂಜುಂಡೇಶ್ವರ ದೇವಾಲಯ ಇಲ್ಲಿಯ ಮುಖ್ಯ ಆಕರ್ಷಣೆಯಾಗಿದೆ. ಸ್ಥಳ ಪುರಾಣಗಳ ಪ್ರಕಾರ ನಂಜನಗೂಡಿಗೆ ಗರಳಪುರಿ ಕ್ಷೇತ್ರ, ದಕ್ಷಿಣ ಕಾಶಿ ಎಂಬ ಹೆಸರುಗಳೂ ಇವೆ. ಇದು ತ್ರಿವೇಣಿ ಸಂಗಮಸ್ಥಾನ ಎಂಬ ನಂಬಿಕೆ ಇದೆ. ಪರಶುರಾಮನು ತನ್ನ ಮಾತೃಹತ್ಯಾ ಪಾಪವನ್ನು ಇಲ್ಲಿ ಶಿವಾನುಗ್ರಹದಿಂದ ಕಳೆದುಕೊಂಡ. ಗೌತಮ ಋಷಿಗಳ ಆಶ್ರಮ ಇಲ್ಲಿತ್ತು ಎಂಬ ಐತಿಹ್ಯ. ಕಪಿಲ ಮತ್ತು ಗುಂಡ್ಲುಹೊಳೆಗಳ (ಕೌಂಡಿಣ್ಯ ನದಿ) ಸಂಗಮ ಈ ಕ್ಷೇತ್ರದ ಪ್ರಾಮುಖ್ಯತೆ ಯನ್ನು ಹೆಚ್ಚಿಸಿದೆ. ಪಕ್ಕದಲ್ಲಿರುವ ಪರಶುರಾಮ ಕ್ಷೇತ್ರದಲ್ಲಿ ಪರಶುರಾಮ ದೇವಾಲಯ ವಿದೆ. ಇವಲ್ಲದೆ ಈ ಊರಿನಲ್ಲಿ ಚಾಮುಂಡೇಶ್ವರಿ, ಗಣಪತಿ, ದತ್ತಾತ್ರೇಯ

ದೇವಾಲಯಗಳೂ ಇವೆ. ಈ ಕ್ಷೇತ್ರ ವಿಜಯನಗರದ ಅರಸರು, ಉಮ್ಮತ್ತೂರು, ಪಾಳೆಗಾರರು, ಕಳಲೆಯ ಅರಸರು ಮತ್ತು ಮೈಸೂರು ಒಡೆಯರ ವಿಶೇಷ ಪ್ರೋತ್ಸಾಹ ದಿಂದ ಇಲ್ಲಿನ ದೇವಾಲಯ ಮತ್ತು ಇಲ್ಲಿರುವ ಮಠಗಳು ಹಾಗೂ ಅಗ್ರಹಾರಗಳು ವೈಭವಯುತವಾಗಿ ಬೆಳೆದುವು. ವಿಜಯನಗರದ ಅರಸರು ಈ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಕೊಡುಗೆಗಳನ್ನು ನೀಡಿ ಬೆಳೆಸಿದರು. ಶ್ರೀಕಂಠೇಶ್ವರ ದೇವಾಲಯವು 11ನೇ ಶತಮಾನಕ್ಕೆ ಸೇರಿದ್ದು, ಇದು ಚೋಳರ ಕಾಲದ ದೇವಾಲಯವೆಂದು ತಿಳಿಯಬಹುದು.

ದ್ರಾವಿಡ ಶೈಲಿಯ ಈ ಕಟ್ಟಡ 385' ಉದ್ದ 160' ಅಡಿ ಅಗಲವಾಗಿದ್ದು, ಪೂರ್ವಾಭಿಮುಖವಾಗಿ 147 ಸ್ತಂಭಗಳಿಂದ ಆಚ್ಛಾದಿತವಾಗಿದ್ದು, ಬೃಹತ್ ಗೋಪುರ, ಮುಖಮಂಟಪ, ಅಧಿಷ್ಠಾನ, ಕೈಶಾಲೆಗಳು ಶಿಲ್ಪಾಂಧಿಕಣಗಳಿಂದ ಕೂಡಿದೆ.[೧] ಈ ದೇವಾಲಯಕ್ಕೆ ಸಂಬಂಧಿಸಿದ ಧಾರ್ಮಿಕ ಶಾಸನಗಳಿಂದ ವಿಜಯ ನಗರದ ಅರಸರ ಸೇವೆಯನ್ನು ಸಂಗ್ರಹ ಮಾಡಲಾಗಿದೆ.

ವಿಜಯನಗರದ ಅರಸು ಇಮ್ಮಡಿ ಹರಿಹರನ ಶ್ರೇಯಸ್ಸಿಗಾಗಿ ಲಕ್ಕಣ್ಣನೆಂಬುವನು ನಂಜುಂಡೇಶ್ವರ ದೇವರ ಪೂಜೆ, ನೈವೇದ್ಯಕ್ಕಾಗಿ ಹುಕನಾಡಿನ ಹುರಾ ಹಳ್ಳಿಯನ್ನು ಕ್ರಿ.ಶ. 1399ರಲ್ಲಿ ದಾನವಾಗಿ ನೀಡಿರುವುದನ್ನು ಶಾಸನ ತಿಳಿಸುತ್ತದೆ.[೨] ಕ್ರಿ.ಶ. 1517ರ ನಾರಾಯಣಸ್ವಾಮಿ ಗುಡಿಗೆ ಉತ್ತರಾಭಿಮುಖವಾಗಿರುವ ಈ ಶಾಸನ ಶ್ರೀ ನಂಜುಂಡೇಶ್ವರ ದೇವರ ಅಭಿಷೇಕ ನೈವೇದ್ಯಕ್ಕೆ ಎರಡು ದತ್ತು ಗ್ರಾಮಗಳನ್ನು ಶ್ರೀರಂಗಪಟ್ಟಣದ ಶ್ರೀಮನ್ಮಹಾಸೇನಾ ಸಮುದ್ರ ಪಾಳುವ ಗಜಸಿಂಹ ಚಿಕ್ಕೋಜಿ ಯವರ ಕುಮಾರ ವೀರಕಥೆಯರೂ ಧಾರೆಯೆರೆದು ಅದಕ್ಕೆ ಶಿಲಾಸ್ಥಾಪನೆಯನ್ನು ಮಾಡಿ ಸ್ವಾಮಿಗೆ ಅಭಿಷೇಕ ಗಂಧ, ಪುಷ್ಪ, ದೀಪ, ಧೂಪ, ನೈವೇದ್ಯ ಮಾಡಿಸಿದರು.[೩] ಕ್ರಿ.ಶ. 1529ರ ವಿಜಯನಗರ ಕೃಷ್ಣದೇವರಾಯ ಶಾಸನವು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದ ಬಲಭಾಗದೊಳಗೆ ಗೋಡೆಯಲ್ಲಿರುವ ಶಾಸನವು ಶ್ರೀ ನಂಜುಂಡ ದೇವರ ಅಮೃತಪಡಿಗೆ ಎಂದು ತಿಳಿಸಿ ವೊಲೆಹಳ್ಳಿಯ ಮತ್ತು ಬೋವನಹಳ್ಳಿ ಜೊತೆಗೆ ಎಲ್ಲಾ ಸ್ಥಳೀಯ ಸುಂಕಗಳು ದೇವರ ಪೂಜೆಗೆ ಬಿಟ್ಟ ಉಲ್ಲೇಖವಿದೆ.[೪] ಉಮ್ಮತ್ತೂರಿನ ನರಸಪ್ರಿಯನ ಮಗ ರಾಮಪ್ಪನು ವಿಜಯನಗರದ ಅರಸು ಕೃಷ್ಣದೇವರಾಯನ ಯಶಸ್ಸು ಮತ್ತು ಶ್ರೇಯಸ್ಸಿಗಾಗಿ ಶ್ರೀ ನಂಜುಂಡೇಶ್ವರ ದೇವರ ಅಮೃತಪಡಿಗೆ ಬಿಳಿಗೆರೆ ಗ್ರಾಮದ ಸುಂಕವನ್ನು ಶ್ರೀ ನಂಜುಂಡದೇವರ ಭಂಡಾರಕ್ಕೆ ದಾನಮಾಡಿರುವುದು ಬಿಳಿಗೆರೆ ಊರ ಬಾಗಿಲಿನ ಶಾಸನದಿಂದ ತಿಳಿಯುತ್ತದೆ. ಕೃಷ್ಣದೇವರಾಯ ಮಹಾರಾಜರು ತಗಡೂರು ಪ್ರದೇಶಕ್ಕೆ ಸೇರಿದ ಕೆಲವು ಸುಂಕವನ್ನು ನಂಜುಂಡದೇವರ ಅಂಗರಂಗ ಭೋಗ ಅಮೃತಪಡಿಗೆ ಮಹಾನೈವೇದ್ಯಕ್ಕಾಗಿ ನೀಡಿದನು.[೫]

ಕೃಷ್ಣದೇವರಾಯನ ಕಾಲದ ಇತರ ಅಧಿಕಾರವರ್ಗದವರೂ ರಾಜನ ಏಳಿಗೆ ಶ್ರೇಯಸ್ಸಿಗಾಗಿ ಶ್ರೀ ನಂಜುಂಡೇಶ್ವರ ದೇವರ ಪೂಜೆ, ನೈವೇದ್ಯಕ್ಕಾಗಿ ಗ್ರಾಮಗಳನ್ನು ದಾನ ಮಾಡಿರುವುದು ಶಾಸನಗಳಲ್ಲಿ ಕಂಡು ಬರುತ್ತದೆ. ಸೋಮಣ್ಣ ಪೊಡೆಯನು ವೊರಗಿ ಹಳ್ಳಿಯ 15 ಗದ್ಯಾಣದ ವೃತ್ತಿಯನ್ನು ಕ್ರಿ.ಶ. 1519ರಲ್ಲಿ ನಂಜುಂಡೇಶ್ವರ ದೇವರ ಭಂಡಾರಕ್ಕೆ ನೀಡಿದನು. ಅದೇ ರೀತಿ ಮಲ್ಲರಸರ ಕಾರ್ಯಕರ್ತರಾದ ಸಗಸಹಳ್ಳಿಯ ಗೋಪಣ್ಣವೊಡೆಯನು 1519ರಲ್ಲಿ ದಾನವನ್ನು ನೀಡಿದನು. ವಿಜಯ ನಗರದ ಅರಸು ಅಚ್ಯುತರಾಯನ (ಕ್ರಿ.ಶ.1530–1542) ಶ್ರೇಯಸ್ಸಿಗಾಗಿ ಅಪಯ್ಯ ನವರು ಅಚೂರು ಗ್ರಾಮವನ್ನು ನಂಜುಂಡದೇವರ ಪೂಜಾ ನೈವೇದ್ಯಕ್ಕೆ ಮತ್ತು ಅಮೃತ ಪಡಿ (ಅನ್ನದಾನ) ನೈವೇದ್ಯಕ್ಕೆ 1542ರಲ್ಲಿ ದಾನವಾಗಿ ನೀಡಿದರು.[೬] 1646ರಲ್ಲಿ ತೆಂಕಣನಾಡ ನಂಜರಾಜವೊಡೆಯನು ತನ್ನ ಪುತ್ರಾಭಿವೃದ್ಧಿಗೋಸ್ಕರ ಹರದಸ್ಥಳದ ಅಜಗೌಡನಳ್ಳಿಯನ್ನು ಆರೋಗಣೆಗೆ ಮತ್ತು ಸೋಮವಾರ ವಿಶೇಷ ಪೂಜೆ ಮತ್ತು ದೀಪಾರಾಧನೆಗಾಗಿ ದಾನವಾಗಿ ನೀಡಿದನು.[೭] ಅರವೀಡು ವಂಶದ ವೆಂಕಟಪತಿ ದೇವನಕಾಲದಲ್ಲಿ ಹದಿನಾಡಿನ ತಿರುಮಲನಾಯಕನು ಮೂಗೂರು ಸೀಮೆಯ ತಾಯೂರ ಸ್ಥಳದ 15 ಗ್ರಾಮಗಳನ್ನು ಉಂಬಳಿಯಾಗಿ (ಬ್ರಹ್ಮಾದಾಯ ವಾಗಿ) 1586ರಲ್ಲಿ ನಂಜನಗೂಡು ಕೋಟೆಯ ತೃಣೇಶ್ವರ ದೇವಾಲಯಕ್ಕೆ ನೀಡಿದನು.[೮] ವಿಜಯನಗರದ ಅರಸರಲ್ಲದೆ ಅವರ ಅಧೀನ ಅಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ಶ್ರೀ ನಂಜುಂಡೇಶ್ವರ ದೇವಾಲಯಕ್ಕೆ ಕೊಡುಗೆಗಳನ್ನು ನೀಡಿರುವುದು ಶಾಸನಗಳಲ್ಲಿ ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದಲ್ಲಿ ಹಲವಾರು ಪಾಳೇಯಪಟ್ಟುಗಳಿದ್ದು, ಅವು ತಮ್ಮ ಪಾಳೆಯಪಟ್ಟಿನ ಶ್ರೇಯಸ್ಸು ಮತ್ತು ಅಭಿವೃದ್ಧಿಗೆ ದಾನವನ್ನು ನೀಡುವುದಲ್ಲದೆ ಸಾಮ್ರಾಜ್ಯದ ಅರಸನ ಶ್ರೇಯಸ್ಸನ್ನು ಕೋರಿ ನೀಡಿರುವ ಶಾಸನಗಳು ಹೆಚ್ಚಾಗಿ ಕಂಡುಬರುತ್ತವೆ. ವಿಜಯನಗರದ ಅರಸರು ನೇರವಾಗಿ ಕೊಡುಗೆ ಸೇವೆಗಳನ್ನು ನೀಡಿರುವುದು ವಿರಳವಾದರೂ ಅರೆ ಸ್ವಾತಂತ್ರದಲ್ಲಿದ್ದ ಪಾಳೆಯಪಟ್ಟುಗಳು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಂಜನಗೂಡು ದೇವಾಲಯಕ್ಕೆ ಕೊಡುಗೆಯನ್ನು ನೀಡಿರುವುದು ಪ್ರಮುಖ ಮತ್ತು ಗಮನಾರ್ಹವಾಗಿದೆ.

ನಂಜನಗೂಡಿನಲ್ಲಿ ಶಂಕರ, ವೀರಶೈವ ಮತ್ತು ಮಾಧ್ವ ಸಂಪ್ರದಾಯರ ಮಠಗಳಿವೆ. ಈ ಮಠಗಳ ಅಭಿವೃದ್ಧಿಗೆ ವಿಜಯನಗರದ ಅರಸರು ಮತ್ತು ಅಧಿಕಾರ ವರ್ಗದವರು ಹಾಗೂ ಸ್ಥಳೀಯ ಮುಖಂಡರು ತಮ್ಮ ಸೇವೆಯನ್ನು ನೀಡಿದ್ದಾರೆ. ಇವುಗಳಲ್ಲಿ ರಾಘವೇಂದ್ರ ಸ್ವಾಮಿ ಮಠ ಪ್ರಾಚೀನವಾದದು. ಸುಮಾರು 15ನೆಯ ಶತಮಾನದಲ್ಲಿ ವಿಬುಧೇಂದ್ರ ತೀರ್ಥರಿಂದ ಸ್ಥಾಪಿತವಾದದ್ದು. ಸುಧೀಂದ್ರ ರಾಘವೇಂದ್ರ ಮೊದಲಾದ ಪ್ರಸಿದ್ಧ ಆಚಾರ್ಯರು ಮಠದ ಪರಂಪರೆಗೆ ಸೇರಿದವರು.

ಈ ಮಠದಲ್ಲಿ 15–18ನೆಯ ಶತಮಾನಗಳಿಗೆ ಸೇರಿದ ಅನೇಕ ತಾಮ್ರಪಟುಗಳೂ ಸನ್ನದುಗಳೂ ಇವೆ. ಇಲ್ಲಿ ಒಳ್ಳೆಯ ಹಸ್ತಪ್ರತಿಗಳ ಸಂಗ್ರಹವೂ ಇದೆ. ನಂಜನಗೂಡಿನಲ್ಲಿ ಪ್ರಾಚೀನ ಪರಂಪರೆಗೆ ಸೇರಿದ ಹಲವಾರು ಮಠಗಳು ಶಾಸನ ಗಳಲ್ಲಿ ಕಂಡು ಬರುತ್ತದೆ. ಅವುಗಳಲ್ಲಿ ಹಿರಿಯಮಠ, ವಿರಕ್ತಮಠ, ಗುರುಮಲ್ಲೇಶ್ವರ ಮಠ ಪ್ರಮುಖವಾದವು. ಈ ಎಲ್ಲಾ ಮಠಗಳಿಗೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅರಸರು ಮತ್ತು ಸ್ಥಳೀಯ ಮುಖಂಡರು ತಮ್ಮ ಸೇವೆ ಕೊಡುಗೆಗಳನ್ನು ನೀಡಿ ಪ್ರೋತ್ಸಾಹಿಸಿ ಬೆಳೆಸಿದ್ದಾರೆ.

ನಂಜನಗೂಡು ನಂಜುಂಡೇಶ್ವರ ದೇವರ ಸಮೀಪದಲ್ಲಿ ನೆಲೆಸಿರುವ ವೀರಭದ್ರದೇವರ ಕಲ್ಲುಮಂಟಪದಲ್ಲಿ ನಿವಾಸಿಮಠದ ಅಭಿವೃದ್ಧಿಗಾಗಿ ವಿಜಯನಗರದ ಅರಸ ದೇವರಾಯನ ಕಾಲದಲ್ಲಿ ಕ್ರಿ.ಶ.1476ರಲ್ಲಿ ರೇವಣ್ಣ ಒಡೆಯರ ಮಕ್ಕಳಾದ ನಂಜರಾಯ ಒಡೆಯ ಮಕ್ಕಳು ಮತ್ತು ಪ್ರಧಾನ ಆಲಪಶೆಟ್ಟಿಯರ ಮಕ್ಕಳು, ಗುಂಡ್ಲುಪೇಟೆ ತಾಲ್ಲೂಕಿನ ಸೋಮನಹಳ್ಳಿ ಪ್ರದೇಶದ ಭೂಮಿಯನ್ನು ದಾನವಾಗಿ ನೀಡಿದರು. 24 ವೃತ್ತಿಗಳ ಈ ಪ್ರದೇಶವನ್ನು ನಂಜನಗೂಡು ಮತ್ತು ತೆರಕಣಾಂಬಿಯ ಬ್ರಾಹ್ಮಣರ ಭೋಜನ ಮತ್ತು ಮನೆ ನಿರ್ಮಾಣಕ್ಕಾಗಿ ನೀಡಿದರು.[೯]

ಶ್ರೀ ಕೃಷ್ಣದೇವರಾಯನು ತನ್ನ ಆಕ್ರಮಣಗಳಲ್ಲೆಲ್ಲಾ ಪ್ರಸಿದ್ಧವಾದ ಒರಿಸ್ಸಾದ ಆಕ್ರಮಣ ಪ್ರಮುಖವಾದುದಾಗಿದ್ದು ಕ್ರಿ.ಶ.1513ರಿಂದ 1515ರವರೆಗೆ ಗಜಪತಿ ಪ್ರತಾಪರುದ್ರನ ಮೇಲೆ ದಾಳಿ ಮಾಡಿ ಉದಯಗಿರಿ, ಕೊಂಡವೀಡು, ಅನಂತಗಿರಿ, ತೆಲಂಗಾಣದಲ್ಲಿದ್ದ ಬಹುತೇಕ ದುರ್ಗಗಳನ್ನು ಆಕ್ರಮಿಸಿ ಗೆಲುವನ್ನು ಸಾಧಿಸಿದನು. ಈ ಗೆಲುವು ವಿಜಯನಗರ ಸಾಮ್ರಾಜ್ಯದಲ್ಲೆ ಪ್ರಮುಖವಾಗಿದ್ದು ವಿಶೇಷವಾಗಿ ಕೃಷ್ಣದೇವರಾಯನ ಆಳ್ವಿಕೆಯಲ್ಲೆ ಮಹತ್ವದ ಘಟನೆಯಾಗಿದೆ. ಈ ಗೆಲುವಿನ ನೆನಪಿಗಾಗಿ ರಾಯನು ಉದಯಗಿರಿಯಿಂದ ಬಾಲಕೃಷ್ಣನ ವಿಗ್ರಹವನ್ನು ತಂದು ಹಂಪಿಯಲ್ಲಿ ಕೃಷ್ಣದೇವಾಲಯವನ್ನು ಸ್ಥಾಪಿಸಿದನು. ಸಿಂಹಾದ್ರಿಯ ಪೊತನೂರಿನಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದನು.[೧೦] ಇದೇ ಗೆಲುವಿನ ನೆನಪಿಗಾಗಿ ನಂಜನಗೂಡಿನ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ವೀರಭದ್ರ ಯತಿಗಳಿಗೆ ಬೆಳದೂನೆ ದೇಶದ ಚಿಕ್ಕಕೂಲಿ ಗ್ರಾಮವನ್ನು ದಾನವಾಗಿ ನೀಡಿದನು.[೧೧] ಈ ತಾಮ್ರಶಾಸನದಲ್ಲಿ ಕೃಷ್ಣದೇವರಾಯನ ಶೌರ್ಯ ಪರಾಕ್ರಮವನ್ನು ವಿಸ್ತೃತವಾಗಿ ವರ್ಣಿಸಿದೆ. ತೆಲುಗು ಭಾಷೆಯಲ್ಲಿರುವ ಈ ಶಾಸನದಲ್ಲಿ ಕೃಷ್ಣದೇವರಾಯನನ್ನು ಇಕ್ವಾಕು ವಂಶದ ಆಯುನಹುಷ, ಯಯಾತಿಗೆ ಮತ್ತು ಪುರಾಣ ಹಾಗೂ ಮಹಾಭಾರತದ ವೀರಪುರಷರಿಗೆ ಹೋಲಿಸಲಾಗಿದೆ. ಈ ಶಾಸನದಲ್ಲಿ ಮಠದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ, ಮಠದ ಆಹಾರಕ್ಕೆ ರಾಮಚಂದ್ರ ದೇವನ ಪೂಜೆಗೆ ಇತ್ಯಾದಿ ಕಾರ್ಯಗಳಿಗಾಗಿ ಅನುಕೂಲವಾಗುವಂತೆ ದೇವಾದಾಯ ಬ್ರಹ್ಮಾದಾಯವನ್ನು ನೀಡಲಾಗಿದೆ.

ಇದೇ ಮಠದಲ್ಲಿರುವ ಮತ್ತೊಂದು ತಾಮ್ರ ಶಾಸನ ಸಂಸ್ಕೃತ ಭಾಷೆಯಲ್ಲಿದ್ದು ಅದರಲ್ಲಿ ವಿಜಯನಗರದ ಅರಸರುಗಳಾದ ಅಚ್ಚುತರಾಯ, ತಿರುಮಲ, ಸಲಕ ತಿರುಮಲ ಸದಾಶಿವ ಅಳಿಯ ರಾಮರಾಯರ ಹೆಸರುಗಳಿದ್ದು ಶ್ರೀ ರಾಘವೇಂದ್ರ ಮಠಕ್ಕೆ ತುಂಗಾಭದ್ರ ನದಿ ದಡಕ್ಕೆ ಸೇರಿದ್ದ ಕೊರಗುನಾಡು ಸೀಮೆ ಪ್ರದೇಶದ ಕೊಮ್ರಕೆರೆ ಹಳ್ಳಿಯನ್ನು ದಾನ ನೀಡಿರುವುದಾಗಿ ಉಲ್ಲೇಖವಿದೆ. ಹೆಮ್ಮ ಬಸವೇಂದ್ರ ಎಂಬ ಶೈವ ಆಚಾರ್ಯನಿಗೆ ದಾನ ನೀಡಿರುವ ಉಲ್ಲೇಖವೂ ಇದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ವಿಜಯನಗರದ ಅರಸರ ಯಾರ ಕಾಲದಲ್ಲಿ ದಾನ ನೀಡಲಾಯಿತೆಂದು ಸರಿಯಾಗಿ ತಿಳಿಸಿಲ್ಲ.[೧೨] ಅದೇ ಮಠದ ಮತ್ತೊಂದು ತಾಮ್ರ ಶಾಸನ ರಾಮರಾಯನ ಕಾಲಕ್ಕೆ ಸೇರಿದ್ದು ಅವನ ಮಗ ಶ್ರೀರಂಗರಾಯನ ಹೆಸರಿದೆ. ಇದು ಕ್ರಿ.ಶ.1513ರ ಕಾಲಕ್ಕೆ ಸೇರಿದ್ದು ರಾಮದೇವರ ಅಭಿಷೇಕಕ್ಕಾಗಿ ಆರು ಹಳ್ಳಿಗಳ ಸುಂಕವನ್ನು ದಾನವಾಗಿ ನೀಡಿರುವುದು ತಿಳಿದು ಬರುತ್ತದೆ. ಇದರಲ್ಲಿ ಮಠದ ಯತಿಗಳಾದ ಸುರೇಂದ್ರ ಯತೀಂದ್ರ, ರಘುನಂದನ ಚಿತಮಿತ್ರ ತೀರ್ಥರ ಹೆಸರು ಗಳಿವೆ.[೧೩]

ನಂಜನಗೂಡಿನ ಮತ್ತೊಂದು ಮಠ ಹಿರೇಮಠದ ಯತಿ ಪಟ್ಟದ ಗಂಗಾಧರ ದೇವರಿಗೆ ಕ್ರಿ.ಶ.1576ರಲ್ಲಿ ರಾಮರಾಯನ ದಳವಾಯಿ ವೆಂಕಟಪ್ಪನಾಯಕನು ವಿಜಯನಗರದ ಅರಸು ಶ್ರೀರಂಗರಾಯನ ಕಾಲದಲ್ಲಿ ತೆರಕಣಾಂಬಿ ಪ್ರದೇಶಕ್ಕೆ ಸೇರಿದ್ದ ಸೋಮಹಳ್ಳಿ ಭೂ ಪ್ರದೇಶವನ್ನು ಜಂಗಮ ಮತ್ತು ಬ್ರಾಹ್ಮಣರ ಛತ್ರ ನಿರ್ವಹಣೆಗಾಗಿ ದಾನವಾಗಿ ನೀಡಿರುವುದು ಕಂಡುಬರುತ್ತದೆ.[೧೪] ಶ್ರೀ ರಾಘವೇಂದ್ರ ಮಠದ ಮತ್ತೊಂದು ತಾಮ್ರಶಾಸನದಲ್ಲಿ ಅರವೀಡು ವಂಶದ ರಾಮರಾಜನು ಮಠದ ಯತಿ ರಘುನಂದನರಿಗೆ ವಿಜಯವಿಠಲ ದೇವಾಲಯದ ದಕ್ಷಿಣದಲ್ಲಿ ರಾಮಚಂದ್ರ ದೇವರನ್ನು ಪೂಜಿಸಲು ತುಂಗಾಭದ್ರ ನದಿ ತೀರದ ಮೂರು ಹಳ್ಳಿಗಳನ್ನು ಭೂದಾನವಾಗಿ ನೀಡಲಾಗಿರುವುದು ಕಂಡು ಬರುತ್ತದೆ. ವಿಜಯನಗರದ ಅರಸು ವೆಂಕಟಪತಿರಾಯನ ಕಾಲದಲ್ಲಿ ಮೈಸೂರು ಅರಸು ದೇವರಾಜ ಒಡೆಯರು ನಂಜನಗೂಡು ನಂಜುಂಡೇಶ್ವರ ದೇವಸ್ಥಾನದ ಉತ್ತರಕ್ಕೆ ಮಲ್ಲನಮೂಲೆಯ ಬಳಿ ಹೊಸದಾಗಿ ಸ್ಥಾಪಿಸಿದ ವಿರಕ್ತಮಠಕ್ಕೆ ಕ್ರಿ.ಶ.1665 ರಲ್ಲಿ ಎರಡು ಹಳ್ಳಿಗಳನ್ನು ದಾನವಾಗಿ ನೀಡಿರುವುದು ಕಂಡುಬರುತ್ತದೆ.[೧೫] ಇದಲ್ಲದೆ ಹಲವಾರು ಶಾಸನಗಳು ವಿಜಯನಗರದ ಅರಸು ಶ್ರೀ ರಂಗರಾಯನ ಕಾಲದಲ್ಲಿ ಶ್ರೀಮಠದ ಸುರೇಂದ್ರರಿಗೆ ಹಲವಾರು ದಾನವನ್ನು ನೀಡಿರುವ ವಿಷಯಗಳು ಕಂಡುಬರುತ್ತದೆ. ಇದಲ್ಲದೆ ಗುರುಮಲ್ಲೇಶ್ವರ ಮಠಕ್ಕೂ ವಿಜಯನಗರದ ಅರಸರು ಸ್ಥಳೀಯ ಮುಖಂಡರು ಕೊಡುಗೆಗಳನ್ನು ನೀಡಿರುವುದು ಕಂಡುಬರುತ್ತದೆ.

ನಂಜನಗೂಡಿನ ದೇವಾಲಯ ಮಠಗಳಲ್ಲದೆ ವಿಜಯನಗರದ ಅರಸರು, ಮಾಂಡಲಿಕರು, ಸ್ಥಳೀಯ ಮುಖಂಡರು ಅಗ್ರಹಾರಗಳ ಸ್ಥಾಪನೆಗೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ಮತ್ತು ಕೊಡುಗೆಗಳನ್ನು ನೀಡಿರುವುದು ಕಂಡುಬರುತ್ತದೆ. ಕ್ರಿ.ಶ. 1376ರಲ್ಲಿ ವಿಜಯನಗರದ ರಾಜಕುಮಾರ ವೀರ ಕೆಂಪಣ್ಣ ಒಡೆಯನ ಮಗ ನಂಜಣ್ಣ ಒಡೆಯರು ಪಾಶುಪತ ಪಂಥಕ್ಕೆ ಸೇರಿದ್ದ ಯತಿಯೊಬ್ಬರಿಗೆ ಅಗ್ರಹಾರವನ್ನು ಸ್ಥಾಪಿಸಲು ಭೂಮಿಯನ್ನು ನೀಡಿರುವುದು ಕಂಡುಬರುತ್ತದೆ.[೧೬] ವಿಜಯನಗರದ ಅರಸು ಮಹಾಮಂಡಲೇಶ್ವರ 3ನೇ ಹರಿಹರನು ತನ್ನ ತಂದೆ 1ನೇ ದೇವರಾಯನ ಶ್ರೇಯಸ್ಸು ಮತ್ತು ಕ್ಷೇಮಕ್ಕಾಗಿ ಕ್ರಿ.ಶ. 1422ರಲ್ಲಿ ನಂಜುಂಡೇಶ್ವರ ದೇವರ ಸೇವಾನಿರತ ವಿವಿಧ ಗೋತ್ರಕ್ಕೆ ಸೇರಿದ್ದ ಹನ್ನೊಂದು ಬ್ರಾಹ್ಮಣರಿಗೆ ತೆರಕಣಾಂಬಿ ರಾಜ್ಯದ ಕುಲಗಾಣ ಸ್ಥಳದಲ್ಲಿ ಬಾಗೆಸೋಮಹಳ್ಳಿ ಗ್ರಾಮವನ್ನು (12 ವೃತ್ತಿಗಳ ಭೂಮಿಯನ್ನು ಹೊಂದಿರುವ ಗ್ರಾಮ) ದೇವರಾಯಪುರ ಎಂಬ ನಾಮಕರಣ ಮಾಡಿ ಅಗ್ರಹಾರವಾಗಿ ಪರಿವರ್ತಿಸಿದನು.[೧೭] ನಂಜುಂಡೇಶ್ವರ ದೇವಾಲಯದ ನಾರಾಯಣಸ್ವಾಮಿ ಗುಡಿಗೆ ದಕ್ಷಿಣದ ಕಡೆ ನೆಟ್ಟಿರುವ ಕಲ್ಲಿನ ಶಾಸನದಲ್ಲಿ ಸಾಳ್ವ ವಂಶದ ಗಜಸಿಂಹನ ಕಾಲದ ಚಿಕ್ಕೋಜಿಯ ಮಗ ವೀರಕಾತಯನು ನಂಜುಂಡೇಶ್ವರ ದೇವರ ಪೂಜೆಗೆ ಅಭಿಷೇಕ ನೈವೇದ್ಯಕ್ಕೆ ಮತ್ತು ನಾಲ್ಕು ಅಗ್ರಹಾರಗಳ ನಿರ್ವಹಣೆಗೆ ಬೆಳಗೊಳ ಮತ್ತು ಚಂದಗಾಲ ವೃತ್ತಿ ಸೀಮೆಗೆ ಸೇರಿದ ಪುರ ಎಂಬ ಎರಡು ಹಳ್ಳಿಗಳ ಸುಂಕವನ್ನು ಕ್ರಿ.ಶ. 1517ರಲ್ಲಿ ದಾನವಾಗಿ ನೀಡಿರುವ ವಿವರ ದೊರೆಯುತ್ತದೆ.[೧೮] ಒಟ್ಟಾರೆ ವಿಜಯನಗರದ ಅರಸರು ಅಗ್ರಹಾರ ಗಳ ಪ್ರೋತ್ಸಾಹ ಪೋಷಣೆಗೂ ತಮ್ಮ ಕೊಡುಗೆಗಳನ್ನು ನೀಡಿರುವುದು ತಿಳಿದು ಬಂದಿರುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ನಂಜನಗೂಡಿನಲ್ಲಿರುವ ಶ್ರೀಕಂಠೇಶ್ವರ ದೇವಾಲಯ ಅರಸರು, ಸಾಮಂತರು ಮತ್ತು ಸ್ಥಳೀಯ ಮುಖಂಡರಿಂದ ಉದಾರ ಆಶ್ರಯ ಪಡೆದು ಬೆಳೆದಿರುವುದು ಕಂಡುಬರುತ್ತದೆ. ಇದಲ್ಲದೆ ನಂಜನಗೂಡಿನಲ್ಲಿದ್ದ ಪರಂಪರಾ ಧಾರ್ಮಿಕ ಮಠಗಳು ಮತ್ತು ಅಗ್ರಹಾರಗಳೂ ಪೋಷಿಸಲ್ಪಟ್ಟವು. ವಿಜಯನಗರ ಸಂಸ್ಕೃತಿಯ ಪರಂಪರೆಯಲ್ಲೇ ನಾಡಿನ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಉದಯಿಸಿದ ಮೈಸೂರು ಒಡೆಯರು ನಂಜುಂಡೇಶ್ವರ ದೇವಾಲಯವನ್ನು ಬೆಳೆಸಿದರು. ಮುಖ್ಯವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಸೇವೆಯಿಂದ ನಂಜನ ಗೂಡು ಕ್ಷೇತ್ರ ಸರ್ವತೋಮುಖವಾಗಿ ಅಭಿವೃದ್ಧಿಯನ್ನು ಕಂಡಿತು. ಆರಂಭ ದಿಂದಲೂ ನಂಜನಗೂಡು ಕ್ಷೇತ್ರ ಮತ್ತು ಶ್ರೀಕಂಠೇಶ್ವರ ಜನಪದದ ದೈವ ಇಲ್ಲಿ ನಡೆಯುವ ಜಾತ್ರೆಗಳಿಗೆ ಇಂದಿಗೂ ಜನಪದರೇ ಹೆಚ್ಚಾಗಿ ಭಾಗವಹಿಸುತ್ತಿರುವುದು ಗಮನಾರ್ಹವಾದುದಾಗಿದೆ. ಇಂತಹ ದೇವಾಲಯಕ್ಕೆ ಆಳರಸರು ನೀಡಿರುವ ಕೊಡುಗೆಗಳು ಅವರ ಜನಪ್ರಿಯತೆಯನ್ನು ಇಮ್ಮಡಿಗೊಳಿಸುವ ಅವಕಾಶವನ್ನು ಹೆಚ್ಚಿಸಿದವು.

ಆಧಾರ ಸೂಚಿ

1) *ಕನ್ನಡ ವಿಶ್ವಕೋಶ* ಸಂಪುಟ 10 (ಕರ್ನಾಟಕ) (ಮೈಸೂರು 2009) ಪುಟ 76–77

2) *ಎಪಿಗ್ರಾಫಿಯಾ ಕರ್ನಾಟಿಕ* – ಸಂಪುಟ 3, ನಂಜನಗೂಡು, ಶಾಸನ ಸಂಖ್ಯೆ 135

3) *ಮೈಸೂರು ಗ್ಯಾಸೆಟಿಯರ್* – ಸಂಪುಟ 5, ಸಿ.ಹಯವದನರಾವ್ ಪುಟ 230.

4) *ಇತಿಹಾಸ ದರ್ಶನ* – ಸಂಪುಟ 22 (ಬೆಂಗಳೂರು 2007) ಪುಟ 154

5) ಎಪಿಗ್ರಾಫಿಯಾ ಕರ್ನಾಟಕ – ಸಂಪುಟ 3, ನಂಜನಗೂಡು ಶಾಸನ ಸಂಖ್ಯೆ 246, 251.

6) ಅದೇ ... ಸಂಖ್ಯೆ 135, 149, 174

7) ಅದೇ.... ಸಂಖ್ಯೆ 374

8) ಅದೇ.... ಸಂಖ್ಯೆ 208

9) ಅದೇ.... ಸಂಖ್ಯೆ 77

10) *ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್* ಸಂಪುಟ 4, ಶಾಸನ ಸಂಖ್ಯೆ 266

11) *ಎಪಿಗ್ರಾಫಿಯಾ ಕರ್ನಾಟಿಕ* – ಸಂಪುಟ 3, ನಂಜನಗೂಡು ಶಾಸನ ಸಂಖ್ಯೆ 110

12) ಅದೇ...., ಸಂಖ್ಯೆ 115

13) ಅದೇ..., ಸಂಖ್ಯೆ 113

14) ಅದೇ...., ಗುಂಡ್ಲುಪೇಟೆ ಸಂಖ್ಯೆ 75


15) ಅದೇ...., ನಂಜನಗೂಡು 114, ಗುಂಡ್ಲುಪೇಟೆ – 25

16) ಅದೇ...., ನಂಜನಗೂಡು 308

17) ಅದೇ...., ಗುಂಡ್ಲುಪೇಟೆ 78

18) ಅದೇ.... , ನಂಜನಗೂಡು 17

ನಂಜನಗೂಡು ನಂಜುಂಡೇಶ್ವರ ದೇವಾಲಯ





ನಂಜನಗೂಡಿನ ಅಗ್ರಹಾರ

೩೦. ವಿರೂಪಾಕ್ಷ ದೇವಾಲಯದ ಗೋಪುರ – ವಿಸ್ಮಯಗಳ ಆಗರ

ಡಾ॥ ಮೈಸೂರು ನಾಗರಾಜ ಶರ್ಮಾ

ವಿಶ್ವದ ಇತಿಹಾಸದಲ್ಲಿ ಸಹಸ್ರಾರು ಸಾಮ್ರಾಜ್ಯಗಳು ಆಳ್ವಿಕೆ ನಡೆಸಿದರೂ, ಅವುಗಳ ಸಾಲಿನಲ್ಲಿ ಕೆಲವು ಮಾತ್ರ ಮಹಾಸಾಮ್ರಾಜ್ಯಗಳೆನಿಸಿಕೊಳ್ಳಲು ಅರ್ಹವೆನಿಸುತ್ತವೆ. ಅಗಾಧವಾದ ಭೂಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಲ್ಲಿ ಅಥವಾ ದೀರ್ಘಕಾಲದ ಅವಧಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಲ್ಲಿ ಮಾತ್ರ ಆ ಸಾಮ್ರಾಜ್ಯವನ್ನು 'ಮಹಾಸಾಮ್ರಾಜ್ಯ' ಎನ್ನುವುದು ಉಚಿತವಲ್ಲ. ಆದರೆ, ಒಂದು ಸಾಮ್ರಾಜ್ಯವು ತನ್ನ ಅವಧಿಯಲ್ಲಿ ತಾನು ಕಂಡುಕೊಂಡ ಹೊಸ-ಹೊಸ ಸಾಂಸ್ಕೃತಿಕ ಕೊಡುಗೆಗಳು ಅದರ ಜೀವಿತಾವಧಿಯಲ್ಲಿ ಮಾತ್ರವಲ್ಲದೆ, ನಂತರದ ರಾಜವಂಶಗಳಿಗೂ ಮಾದರಿಯಾಗಿ ಮುಂದುವರೆದರೆ – ಅಂತಹ ಸಾಮ್ರಾಜ್ಯಗಳನ್ನು ಮಾತ್ರ 'ಮಹಾ ಸಾಮ್ರಾಜ್ಯಗಳು' ಎಂದು ಗುರುತಿಸಬಹುದು. ಗ್ರೀಸ್, ರೋಂ ಮುಂತಾದ ಸಾಮ್ರಾಜ್ಯಗಳು ಈ ಸಾಲಿಗೆ ಸೇರಿದರೆ, ಭಾರತದ ಮಟ್ಟಿಗೆ – ಮೌರ್ಯ ಮತ್ತು ಗುಪ್ತ ಸಾಮ್ರಾಜ್ಯಗಳನ್ನು ಮಹಾಸಾಮ್ರಾಜ್ಯಗಳ ಪಟ್ಟಿಗೆ ಸೇರಿಸಬಹುದು! ಈ ಸಾಮ್ರಾಜ್ಯಗಳು ಹೊಸದಾಗಿ ಬಳಕೆಗೆ ತಂದ ವಾಸ್ತು-ಶಿಲ್ಪ, ಆಡಳಿತ, ಕಲೆ, ಸಂಸ್ಕೃತಿ ಮುಂತಾದ ಅಂಶಗಳು ಅನೇಕ ಶತಮಾನಗಳ ಕಾಲ ಮುಂದುವರೆದು ರಾಜಕೀಯವಾಗಿ ಮರೆಯಾದ ಸಾಮ್ರಾಜ್ಯವನ್ನು ಸಾಂಸ್ಕೃತಿಕವಾಗಿ ಜೀವಂತವಾಗಿ ಉಳಿಸಿರುವ ಅನೇಕ ಉದಾಹರಣೆಗಳು ಲಭ್ಯವಿವೆ.

ದಕ್ಷಿಣ ಭಾರತದ ಮಟ್ಟಿಗೆ ಹೇಳುವುದಾದರೆ, ಚಲುಕ್ಯ ಮತ್ತು ಚೋಳ ಸಾಮ್ರಾಜ್ಯಗಳನ್ನು ಮಹಾಸಾಮ್ರಾಜ್ಯಗಳೆಂದು ಗುರುತಿಸಿದರೂ ವಿಜಯನಗರವು ದಕ್ಷಿಣ ಭಾರತದ ಮಹಾಸಾಮ್ರಾಜ್ಯಗಳ ಸಾಲಿನಲ್ಲಿ ವಿಶೇಷವಾದ ಅರ್ಹತೆಯನ್ನು ಪಡೆದಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಚಲುಕ್ಯರ ಕಾಲದಲ್ಲಿ ಒಡಮೂಡಿದ ಗುಹಾ ದೇಗುಲಗಳ ರಚನೆಯು ನಂತರದ ಕಾಲದಲ್ಲಿ ಮುಂದುವರೆಯಲಿಲ್ಲ. ರಾಷ್ಟ್ರಕೂಟರ ಯುಗದ ಅದ್ಭುತವೆನಿಸಿದ ಏಕಶಿಲಾದೇಗುಲದ ಪ್ರಯೋಗ ನಂತರದ ರಾಜವಂಶಗಳಲ್ಲಿ ನಡೆಯಲೇ ಇಲ್ಲ. ಹೊಯ್ಸಳರ ಕಾಲದ ಬಳಪದಕಲ್ಲಿನ ಸೂಕ್ಷ್ಮ ಕೆತ್ತನೆಯ ವಿನ್ಯಾಸಪೂರ್ಣ ದೇಗುಲಗಳು ನಂತರದ ಕಾಲದಲ್ಲಿ ಮುಂದುವರೆಯಲೇ ಇಲ್ಲ ಎಂಬುದು ಇತಿಹಾಸದಲ್ಲಿ ಸುಸ್ಪಷ್ಟ. ಆದರೆ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹೊಸದಾಗಿ ಕೊಡಮಾಡಿದ ಅಪಾರ ಸಾಂಸ್ಕೃತಿಕ ಕೊಡುಗೆಗಳು – ನಂತರದ

ಕಾಲದಲ್ಲಿ ಮಾತ್ರವಲ್ಲದೇ, ಇಂದಿನ ಆಧುನಿಕ ಯುಗದಲ್ಲೂ ಮುಂದುವರೆದಿರುವುದು – ಈ ಸಾಮ್ರಾಜ್ಯವನ್ನು ಮಹಾಸಾಮ್ರಾಜ್ಯಗಳ ಸಾಲಿಗೆ ಕೊಂಡೊಯ್ಯುವುದಲ್ಲದೇ, ಸಾವಿಲ್ಲದ ಸ್ಥಾನಮಾನಕ್ಕೆ ಏರಿಸಿ ಸಾಮ್ರಾಜ್ಯವನ್ನು ಚಿರಂಜೀವಿಯಾಗಿಸಿದೆ ಎನ್ನಬಹುದು.

ಸಾವಿರಾರು ವರ್ಷಗಳ ಹಿಂದಿನ ವೇದಸಾಹಿತ್ಯವು ಅರ್ಥವಾಗದ ಕಗ್ಗಂಟಾಗಿದ್ದ ಕಾಲದಲ್ಲಿ, ಅರ್ಥವಾಗುವ ಭಾಷೆಗೆ ಅದನ್ನು ಭಾಷಾಂತರಿಸುವ ಯೋಜನೆಯೊಂದನ್ನು ಹಮ್ಮಿಕೊಂಡುದು, ಪರಂಪರೆಯ ರಕ್ಷಣೆಯಲ್ಲಿ ವಿಜಯನಗರದ ಅರಸರ ದೂರದೃಷ್ಟಿಗೆ ಕನ್ನಡಿಯಾಗಿ ಕಂಡುಬರುತ್ತದೆ.[1] ಅಂದು ಈ ಪ್ರಯತ್ನ ನಡೆಯದಿದ್ದರೆ – ಇಂದು ವೇದಸಾಹಿತ್ಯ ಶಾಶ್ವತವಾಗಿ ಸವಕಲು ನಾಣ್ಯವಾಗಿರುತ್ತಿತ್ತು. ಕಠಿಣತರ – ಪ್ರಾಚೀನ ಧಾರ್ಮಿಕ–ವೈದಿಕಾಚರಣೆಗಳನ್ನು ಸರಳಗೊಳಿಸಿ, ಕೆಲವು ವರ್ಗಗಳಿಗಷ್ಟೇ ಸೀಮಿತವಾಗಿದ್ದ ವೈದಿಕಾಚರಣೆಗಳನ್ನು ಭಕ್ತಿ ಸಾಹಿತ್ಯದ ಮೂಲಕ ಜನಸಾಮಾನ್ಯರ ಹೃದಯಕ್ಕೆ ಹತ್ತಿರವಾಗಿ ಕೊಂಡೊಯ್ದ ಹರಿದಾಸಪಂಥವು ಇವರ ಪ್ರೋತ್ಸಾಹದ ಕೊಡುಗೆಯೇ ಎನ್ನಬೇಕು. ಭಾರತೀಯ ಪಾರಂಪರಿಕ ಸಂಗೀತ ಕಲೆಯ ಸರಳ ಕಲಿಕಾವಿಧಾನಗಳು ರೂಪುಗೊಂಡಿದ್ದು ವಿಜಯನಗರ ಆಳ್ವಿಕೆಯ ಕಾಲದಲ್ಲಿ. ಇಂದು ವಿಶ್ವದಾದ್ಯಂತ ಗುರುತಿಸುವ ಮೈಸೂರು ಶೈಲಿಯ ಚಿತ್ರಕಲೆಗೆ ಮೂಲವಾದ ಸಾಮಗ್ರಿ ದೊರೆತುದು ಹಂಪೆಯ ವಿರೂಪಾಕ್ಷದೇಗುಲದ ಪರಿಸರದಿಂದಲೇ ಎಂಬುದು ಹೆಮ್ಮೆಯ ಸಂಗತಿ. ಒಟ್ಟಾರೆ, ವಿಜಯನಗರದ ಹಲವಾರು ಕೊಡುಗೆಗಳು ಅವರ ಕಾಲಕ್ಕಷ್ಟೇ ಸೀಮಿತವಾಗದೇ, ಇಂದಿಗೂ ಸಮಾಜದಲ್ಲಿ ಹಾಸುಹೊಕ್ಕಾಗಿ ಮುಂದುವರೆದಿರುವುದನ್ನು ಕಾಣಬಹುದು.

ಇನ್ನು ವಾಸ್ತುಶಿಲ್ಪದ ಮಟ್ಟಿಗೆ ವಿಜಯನಗರ ಅರಸರ ಕೊಡುಗೆ ಅಪ್ರತಿಮ ಎನ್ನಲು ಅನೇಕ ಕಾರಣಗಳಿವೆ. ಅನೇಕ ಹೊಸ–ಹೊಸ ಧಾರ್ಮಿಕ ಉತ್ಸವಗಳನ್ನು, ಆಚರಣೆಗಳನ್ನು ಬಳಕೆಗೆ ತಂದಾಗ ದೇಗುಲದಲ್ಲಿ ನೆರೆಯುತ್ತಿದ್ದ ಭಕ್ತಸಮೂಹ ಹೆಚ್ಚಾಗತೊಡಗಿತು. ಇದರ ಪರಿಣಾಮವಾಗಿ ಆವರೆಗೆ ಕಿರಿದಾಗಿದ್ದ (ಹೊಯ್ಸಳ) ದೇಗುಲಶೈಲಿಯು ಒಮ್ಮೆಗೇ ವಿಸ್ತಾರಗೊಂಡು ನೂರಾರು ಜನರ ಸಮಾವೇಶಕ್ಕೆ ಅವಕಾಶ ನೀಡಬಲ್ಲ ಬೃಹತ್ ವಾಸ್ತುರಚನೆಗಳಾಗಿ ಮೈದಳೆದವು. ಆವಶ್ಯಕತೆಗೆ ತಕ್ಕಂತೆ ನೂರಾರು ಹೊಸ ದೇಗುಲಗಳು ನಿರ್ಮಾಣವಾದರೆ, ಅಸ್ತಿತ್ವದಲ್ಲಿದ್ದ ಹಳೆಯ ದೇಗುಲಗಳು ಹೊಸಹೊಸ ಆವರಣಗಳನ್ನು ಪಡೆದು ವಿಸ್ತಾರಗೊಂಡವು. ಅರಮನೆಯ ಕೋಟೆಗಳಂತೆ ಬೃಹತ್ತಾದ ರಕ್ಷಣಾತ್ಮಕ ಪ್ರಾಕಾರವು ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರುವುದು ದೇಗುಲ–ಧರ್ಮರಕ್ಷಣೆಗಳಲ್ಲಿ ಅರಸರು ವಹಿಸಿದ ಪಾತ್ರವನ್ನೂ ಮತ್ತು ಆ ಕಾಲದಲ್ಲಿ ಧರ್ಮಕ್ಕಿದ್ದ ಸವಾಲುಗಳ ಪರಿಚಯವನ್ನೂ ನೀಡುತ್ತದೆ.

ಸಾಮ್ರಾಜ್ಯ ವಿಸ್ತರಣೆಯ ವೇಳೆ ದಕ್ಷಿಣದಲ್ಲಿ ಹೊಸದಾಗಿ ಪರಿಚಿತವಾದ ಪಾಂಡ್ಯ–ಚೋಳನಾಡುಗಳ ಕಲಾವಂತಿಕೆಯನ್ನು ಮೈಗೂಡಿಸಿಕೊಂಡ ವಿಜಯ ನಗರದ ಅರಸರು ಅವುಗಳಲ್ಲಿನ ಗುಣಾತ್ಮಕ ಅಂಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿರುವ ಉದಾಹರಣೆಗಳು ಅನೇಕ.[2] ಹಾರುಕುದುರೆ ಅಥವಾ ಯಾಳಿಗಳ ಬೃಹತ್ ಕಂಬಗಳು, ವಿಶಾಲ ಮಂಟಪಗಳು, ಎತ್ತರವಾದ ದೇಗುಲ ರಚನೆಗಳು ಮಾತ್ರವಲ್ಲದೆ, ದೇವಾಲಯಗಳಲ್ಲಿ ದೇವಿಯರಿಗಾಗಿ ಪ್ರತ್ಯೇಕ ಗುಡಿಗಳನ್ನು ಸಹ ಹೊಸದಾಗಿ ಅಳವಡಿಸಿರುವುದು ಈ ಸಾಲಿನಲ್ಲಿ ನಿಲ್ಲುತ್ತವೆ. ಇತರ ನಾಡುಗಳ ವಾಸ್ತುಗಳಲ್ಲಿನ ಉತ್ತಮಾಂಶಗಳನ್ನು ಸ್ವೀಕರಿಸಿ ಅವುಗಳನ್ನು ಅನೇಕ ರೀತಿಯ ಪ್ರಯೋಗಗಳಿಂದ ಪರಿಷ್ಕಾರಗೊಳಿಸಿದುದೇ ಅಲ್ಲದೆ, ತಮ್ಮ ಎಲ್ಲ ದೇಗುಲಗಳಲ್ಲೂ ನಿರಂತರವಾಗಿ ಅವುಗಳನ್ನು ಬಳಸಿಕೊಂಡು 'ವಿಜಯನಗರದ ವಾಸ್ತುಶೈಲಿ' ಎಂದು ಗುರುತಿಸುವ ಹಂತಕ್ಕೆ ಕೊಂಡೊಯ್ದಿರುವುದು ಅಚ್ಚರಿಯ ಸಂಗತಿ. ವಿಜಯನಗರ ಅರಸರ ವಾಸ್ತುಪ್ರಯೋಗಗಳ ಸಾಲಿನಲ್ಲಿ ಪ್ರಮುಖವಾಗಿ ನಿಲ್ಲುವುದು ದೇವಾಲಯಗಳ ಬೃಹತ್ ದ್ವಾರಗೋಪುರಗಳು. ಚೋಳನಾಡಿನಲ್ಲಿ ಪರಿಚಯವಾಗಿದ್ದ ಕಿರುಗೋಪುರ ಗಳನ್ನು ವಿಜಯನಗರದ ವಾಸ್ತುಶಿಲ್ಪಿಗಳು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು – ಅದನ್ನು ಮತ್ತಷ್ಟು ಪರಿಪಕ್ವಗೊಳಿಸಿದ್ದಾರೆ.

'ರಾಯಗೋಪುರಗಳು' ಎಂದೇ ಖ್ಯಾತವಾಗಿರುವ, ಮೈಲುಗಟ್ಟಲೆ ದೂರಕ್ಕೆ ಕಾಣುತ್ತಿದ್ದ ಈ ಗೋಪುರಗಳು ಜನಸಾಮಾನ್ಯರ ನಿತ್ಯಜೀವನದಲ್ಲಿ ಧಾರ್ಮಿಕತೆಯನ್ನು ಪ್ರತಿಧ್ವನಿಸತೊಡಗಿದವು. ಹರಪ್ಪಾ ಕಾಲದ ಪಶುಪತಿ ಮುದ್ರೆಯಲ್ಲಿ ಕಂಡುಬಂದ ಜೋಡಿ ಶೃಂಗಗಳು ಈ ಗೋಪುರಗಳಲ್ಲಿ ಮರುಕಳಿಸಿ ನಿಂತಿವೆ. ಸಮಸಂಖ್ಯೆಯ ತಲಗಳು (ಅಂತಸ್ತುಗಳು) ಮತ್ತು ಕಲಶಗಳು ನಂತರದ ಕಾಲಗಳಲ್ಲಿ ಈ ಶಿಖರ ಸೌಂದರ್ಯವನ್ನು ಇಮ್ಮಡಿಗೊಳಿಸಿರುವುದನ್ನು ಕಾಣಬಹುದು. ವಿಜಯನಗರ ಕಾಲದ ಕವಯಿತ್ರಿಯಾದ ಗಂಗಾದೇವಿಯ (1360, ಬುಕ್ಕರಾಯ–1) ಕಾವ್ಯವಾದ ಮಧುರಾವಿಜಯದಲ್ಲಿ 'ವಿಜಯನಗರದ ಬೃಹತ್ ಗೋಪುರಗಳು ಅರಸರ ಕೀರ್ತಿಶಿಖರದ ಪ್ರತಿರೂಪಗಳಾಗಿ ಕಂಗೊಳಿಸುತ್ತಿವೆ' ಎಂಬ ಉಪಮೆಯು ಕಾವ್ಯಾಸಕ್ತರನ್ನು ಶಿರಬಾಗಿಸುತ್ತದೆ.[3] ಒಟ್ಟಾರೆ, ವಿಜಯನಗರ ಕಾಲದ ಈ ವಾಸ್ತು ರಚನೆಗಳು ನಂತರದ ರಾಜವಂಶಗಳಲ್ಲಿ ಮಾತ್ರವಲ್ಲದೆ, ಇಂದಿಗೂ ನಿರ್ಮಾಣ ವಾಗುತ್ತಿದ್ದು, ಮುಂದಿನ ಹಲವು ಶತಮಾನಗಳ ಕಾಲ ವಿಜಯನಗರದ ಜೀವಂತ ಪ್ರತಿನಿಧಿಗಳಾಗಿ ಮುಂದುವರೆಯುವುದರಲ್ಲಿ ಅನುಮಾನವಿಲ್ಲ.

ತನ್ನ ಬೃಹತ್ ರಚನೆಯಿಂದಾಗಿ ಮಾತ್ರವಲ್ಲದೇ ಮತ್ತೊಂದು ವಿಸ್ಮಯವನ್ನು ತನ್ನ ಒಡಲಿನಲ್ಲಿ ಅಡಗಿಸಿಕೊಂಡಿರುವುದು ಅತಿ ಪ್ರಾಚೀನವಾದ ಹಂಪೆಯ ವಿರೂಪಾಕ್ಷ ದೇಗುಲದ ಗೋಪುರ ಹಾಗೂ ವಾಸ್ತುರಚನೆ. ವಿಜಯನಗರದ

ಪ್ರಾರಂಭಿಕ ಅರಸರಲ್ಲೊಬ್ಬನಾದ ಸಂಗಮವಂಶದ ಇಮ್ಮಡಿದೇವರಾಯನ ಕಾಲದಲ್ಲಿ ಈ ಬೃಹತ್ ಗೋಪುರವು ಮಂತ್ರಿಯಾದ ಪ್ರೋಲುಗಂಟಿ ತಿಮ್ಮ ಎಂಬುವನಿಂದ ರಚಿತವಾಗಿದ್ದಕ್ಕೆ ಐತಿಹಾಸಿಕ ದಾಖಲೆಗಳು ಲಭ್ಯವಿವೆ.[4] ನಂತರದ ಶಾಸನವು ಕ್ರಿ.ಶ. 1510ರ ವೇಳೆಯಲ್ಲಿ ಖ್ಯಾತ ಅರಸನಾದ ಶ್ರೀ ಕೃಷ್ಣದೇವರಾಯನಿಂದ ಈ ಗೋಪುರವು ದುರಸ್ತಿಗೊಂಡ ಬಗ್ಗೆ ಮಾಹಿತಿ ನೀಡುತ್ತದೆ.[5] ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟ ಈ ರಚನೆಯು ಬಹು ಉನ್ನತವಾಗಿದ್ದು, ರಾಜಧಾನಿಯಲ್ಲಿ ನಿರ್ಮಾಣವಾದ ವಿಜಯನಗರ ಕಾಲದ ಕಟ್ಟಡಗಳಲ್ಲೆಲ್ಲಾ ಅತಿ ಎತ್ತರದ್ದಾಗಿರುವ ಈ ರಾಯಗೋಪುರವು ತನ್ನ ಶಿಖರದಲ್ಲಿ ಒಂಬತ್ತು ತಲಗಳು ಹಾಗೂ ಒಂಟಿ ಕಲಶವನ್ನು ಹೊಂದಿದೆ. ಅನೇಕ ಗಾರೆಶಿಲ್ಪಗಳು ಈ ಗೋಪುರದ ಅಂದವನ್ನು ಇಮ್ಮಡಿಗೊಳಿಸಿವೆ.

ಇದೇ ವೇಳೆಯಲ್ಲಿ ಗರ್ಭಗುಡಿಯ ಹಿಂಬದಿಯಲ್ಲಿ ನಿರ್ಮಾಣವಾದ ವಾಸ್ತುಭಾಗಗಳಲ್ಲಿ ಒಂದು ಕತ್ತಲಕೋಣೆಯು ನಿರ್ಮಾಣಗೊಂಡಿದ್ದು ಇದನ್ನು ಒಂದು ವಿಸ್ಮಯಸೌಧವಾಗಿ ರೂಪಿಸಲಾಗಿದೆ. ಬಹುಪಾಲು ಕತ್ತಲಾಗಿರುವ ಈ ಕೋಣೆಯ ಪೂರ್ವದ ಗೋಡೆಯಲ್ಲಿ, ಭಾವಣಿಗೆ ಹೊಂದಿದಂತೆ ಒಂದು ಕಿರು ಗವಾಕ್ಷಿ (ತೆರೆದ ಕಿಟಕಿ) ರಚನೆಯಾಗಿದೆ. ಹೊರಗೆ ದೂರದಲ್ಲಿ ನಿಂತಿರುವ ಬೃಹತ್ ರಾಯಗೋಪುರದ ಬಿಂಬವು ಈ ಗವಾಕ್ಷಿಯ ಮೂಲಕ ತೂರಿಬಂದು, ಪಶ್ಚಿಮದ ಗೋಡೆಯ ಮೇಲೆ ಛಾಯಾಚಿತ್ರದಂತೆ ತಲೆಕೆಳಗಾಗಿ ಮೂಡಿನಿಂತು ನೋಡುಗರನ್ನು ವಿಸ್ಮಯಗೊಳಿಸುತ್ತದೆ. ಇತರ ದೇವಾಲಯಗಳಲ್ಲಿ ಕಂಡುಬರದ ಈ ವಿಶಿಷ್ಟರಚನೆಯು ನೋಡುಗರಲ್ಲಿ ಅಚ್ಚರಿಯನ್ನು ಮೂಡಿಸಿ ಅದಕ್ಕೆ ದೈವಿಕ ಅಂಶವನ್ನೂ ಬೆರೆಸುವುದು ಒಂದು ವಿಶೇಷ. ಸುಮಾರು 5–6 ಅಡಿಗಳಷ್ಟು ಎತ್ತರವಾಗಿ ಮೂಡಿನಿಲ್ಲುವ ಈ ಗೋಪುರಬಿಂಬವು ಅಪರಾಹ್ನದಲ್ಲಿ ಗೋಡೆಯ ಮೇಲೆ ಒಂದು ವರ್ಣರಂಜಿತ ಸುಂದರ ಗೋಪುರಬಿಂಬವಾಗಿ ಗೋಚರಕ್ಕೆ ಬಂದರೆ (ಚಿತ್ರ–1), ಪೂರ್ವಾಹ್ನದಲ್ಲಿ (ಮಧ್ಯಾಹ್ನ 12ಕ್ಕೆ ಮುನ್ನ) ಗೋಡೆಯ ಮೇಲೆ ಗೋಪುರಬಿಂಬವು ಕಪ್ಪು ಛಾಯೆಯಂತೆ ಗೋಚರಿಸುವುದು ಮತ್ತೊಂದು ವಿಶೇಷ (ಚಿತ್ರ 2). ಒಟ್ಟಾರೆ, ಇತರ ಪ್ರೇಕ್ಷಣೀಯ ಸ್ಥಳಗಳಲ್ಲಿ ಇಲ್ಲದ ಈ ಕತ್ತಲಕೋಣೆಯ ಆಟವು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ಒಂದು ಅಪರೂಪದ ವಿಸ್ಮಯವಾಗಿದೆ.

ವೈಜ್ಞಾನಿಕ ಹಿನ್ನೆಲೆ

ವಾಸ್ತವವಾಗಿ ಈ ಬಿಂಬರೂಪವು ಒಂದು ಸ್ವಾಭಾವಿಕ (ವೈಜ್ಞಾನಿಕ) ಪ್ರಕ್ರಿಯೆಯಾಗಿದ್ದು, ಸೂಕ್ತ ಅಳವಡಿಕೆಯಿದ್ದಲ್ಲಿ ಮಾತ್ರ ಗೋಚರಕ್ಕೆ ಬರುವ ಒಂದು

ಸಂಗತಿ. ಛಾಯಾಚಿತ್ರ ಕ್ಯಾಮರದಲ್ಲಿನ ತತ್ತ್ವದಂತೆ ಉಂಟಾಗುವ ಇಂತಹ ಬಿಂಬ ರೂಪಗಳು ನಿತ್ಯಜೀವನದಲ್ಲಿ ಹಲವರ ಗಮನಕ್ಕೆ ಬಂದಿರಲೂ ಸಾಧ್ಯ!. ಹಳ್ಳಿಗಾಡುಗಳ ತಗ್ಗುಛಾವಣಿಯ ಹಾಗೂ ಮಂದಬೆಳಕಿನ ಮನೆಗಳಲ್ಲಿ ಇಂತಹ ಬೆಳಕಿನಾಟವನ್ನು ಹಲವರು ಗಮನಿಸಿರುತ್ತೇವೆ. ಮಂದವಾದ ಬೆಳಕಿನ ಕೋಣೆಗಳಲ್ಲಿ ಹೆಂಚಿನ ಸಂದುಗಳ ಮೂಲಕ ತೂರಿಬರುವ ಬೆಳಕಿನ ಕಿರಣಗಳು ಎದುರಿನ ಬಿಳಿಯಗೋಡೆಯ ಮೇಲೆ ಬಿದ್ದು, ಹೊರಗಿನ ತೆಂಗಿನಮರದ ಬಿಂಬವನ್ನು ತಲೆಕೆಳಗಾಗಿ ಮೂಡಿಸಿ – ಅದು ಗಾಳಿಯಲ್ಲಿ ಓಲಾಡುವ ದೃಶ್ಯವು ಗೋಡೆಯ ಮೇಲೆ 'ಸಿನಿಮಾ' ಪ್ರದರ್ಶನದಂತೆ ಕಂಡು ಆನಂದಿಸಿದ ದಿನಗಳು ಅನೇಕರ ನೆನಪಿನಲ್ಲಿರಲೂ ಸಾಧ್ಯ.

'ವಿರೂಪಾಕ್ಷದೇಗುಲದ ಈ ಶಿಖರದರ್ಶನ ವ್ಯವಸ್ಥೆಯು ಕಾಕತಾಳೀಯವಾಗಿ ಮೂಡಿಬಂದಿದ್ದು, ವಿಸ್ಮಯವನ್ನು ಉಂಟುಮಾಡಿರಬಹುದು' ಎಂದು ಹಲವರಿಗೆ ಅನಿಸಿದರೂ, ಇಂತಹ ವ್ಯವಸ್ಥೆಯು ಉದ್ದಿಶ್ಯವಿಲ್ಲದೇ ಮೂಡಲು ಸಾಧ್ಯವಿಲ್ಲ. ಈ ಕೋಣೆಯು ಆಧುನಿಕ ಸಿನಿಮಾಗೃಹದಂತಿದ್ದು ಎಲ್ಲಿಯೂ ಕಿಟಕಿಯನ್ನು ಹೊಂದಿರದಂತೆ ರಚಿಸಲ್ಪಟ್ಟಿದೆ. ಚಿತ್ರಮಂದಿರದಂತೆ ಒಂದೇ ರಂಧ್ರದಿಂದ ಬಿಂಬವನ್ನು ಕಳುಹಿಸಿ ಮತ್ತೊಂದು ಬದಿಯಲ್ಲಿನ ಬಿಳಿ ಗೋಡೆಯಮೇಲೆ ಚಿತ್ರ ಮೂಡಿಸುವ ವ್ಯವಸ್ಥೆಯು ಕಾಕತಾಳೀಯವಾಗಲು ಸಾಧ್ಯವೇ ಇಲ್ಲ. ಅಲ್ಲದೆ, ಸಾಮಾನ್ಯವಾದ ಕೊಠಡಿಗಳಿಗಿಂತ ಭಿನ್ನವಾಗಿ, (ಕಿಟಕಿಗಳೇ ಇಲ್ಲದಂತೆ) ಕತ್ತಲಕೋಣೆಯೊಂದನ್ನು ರಚಿಸಿದ್ದು, ಈ ಕೋಣೆಯು ಬೇರೆ ಯಾವ ಉದ್ದಿಶ್ಯಕ್ಕೂ ಬಳಕೆಗೆ ಬಾರದ ಒಂದು ವ್ಯವಸ್ಥೆಯಾಗಿ ನಿಂತಿದೆ. ಇತರ ಸಾಮಾನ್ಯ ಕೊಠಡಿಗಳಂತೆ ಇದರ ಬಾಗಿಲನ್ನು ರಚಿಸಿದ್ದಲ್ಲಿ ಕೊಠಡಿಗೆ ಅಪಾರ ಬೆಳಕು ನುಗ್ಗಿ ನಿರೂಪಿತ ಬಿಂಬವನ್ನು ಅಳಿಸಿಹಾಕುವ ಸಾಧ್ಯತೆ ಇದ್ದಿತು. ಈ ವಾಸ್ತುರಚನೆಯಲ್ಲಿ ಬಿಂಬ ಮೂಡುವ ಗೋಡೆಯನ್ನು, ಗವಾಕ್ಷಿಯ ರಂಧ್ರವನ್ನು ಮತ್ತು ದ್ವಾರಗೋಪುರವನ್ನು ಸಹ ಒಂದೇ ಸರಳರೇಖೆಯಲ್ಲಿ ಬರುವಂತೆ ಅಳವಡಿಸಿರುವುದು ನಿಜಕ್ಕೂ ಕಾಕತಾಳೀಯ ಎನಿಸಲಾರದು. (ಚಿತ್ರ 3)

ಕ್ಯಾಮರಾ ಆಬ್‌ಸ್ಕ್ಯುರಾ

ವಿರೂಪಾಕ್ಷ ದೇಗುಲದ ಈ ಬೆಳಕಿನಾಟದ ವ್ಯವಸ್ಥೆಯು ಸರಳ ವೈಜ್ಞಾನಿಕ ನಿಯಮವಾಗಿದ್ದು, ಇದು ಕ್ರಿಸ್ತಪೂರ್ವ ಶತಮಾನಗಳಲ್ಲಿಯೇ ಮಾನವನ ಅರಿವಿಗೆ ಬಂದಿರುವ ದಾಖಲೆಗಳಿವೆ. ಚೀನಾ ದೇಶದ ಮೋ–ತಿ ಎಂಬ ದಾರ್ಶನಿಕನೊಬ್ಬ ಈ ಸಿದ್ಧಾಂತವನ್ನು ಪ್ರಥಮಬಾರಿಗೆ ಕಂಡುಕೊಂಡು ಕ್ರಿ.ಪೂ. 4ನೇ ಶತಮಾನದಲ್ಲಿ ಇದನ್ನು ದಾಖಲಿಸಿದ್ದಾನೆ. ಇದೇ ನಿಯಮವನ್ನು ಅಳವಡಿಸಿಕೊಂಡು ಇಂದಿನ

ಆಧುನಿಕ ಕ್ಯಾಮೆರಾ ಸಹ ಕಾರ್ಯನಿರ್ವಹಿಸುತ್ತಿದೆ. ಕ್ರಿ.ಶ. 1490ರಲ್ಲಿ ಇಟಲಿಯ ಪ್ರಖ್ಯಾತ ಕಲಾವಿದ-ವಿಜ್ಞಾನಿ ಲಿಯೋನಾರ್ಡೋ-ಡಾ-ವಿಂಚಿ ಈ ನಿಯಮದ ಬಗ್ಗೆ ಹಲವು ನಮೂದುಗಳನ್ನು ದಾಖಲಿಸಿದ್ದಾನೆ. ಅಂದಿನ ಕಾಲದಲ್ಲಿ ಚಿತ್ರಕಲಾವಿದರು ತಮ್ಮ ವರ್ಣಚಿತ್ರರಚನೆಯಲ್ಲಿ ಶ್ರಮವನ್ನು ಉಳಿತಾಯ ಮಾಡಲು ದೃಶ್ಯದ ಅಥವಾ ವ್ಯಕ್ತಿಗಳ ಸ್ಥೂಲ ಆಕೃತಿಯನ್ನು ರಚಿಸಿಕೊಳ್ಳಲು (to sketch) ಇಂತಹ ವ್ಯವಸ್ಥೆಯನ್ನು ತಯಾರಿಸಿಕೊಳ್ಳುತ್ತಿದ್ದರು. ಮರದಿಂದ ರಚಿಸಿದ ಹಾಗೂ ಚಕ್ರಗಳಮೇಲೆ ಒಂದೆಡೆಯಿಂದ ಮತ್ತೊಂದೆಡೆಗೆ ಗಾಡಿಯಂತೆ ಎಳೆದೊಯ್ಯುವ ಈ ಬೃಹತ್ ಕತ್ತಲಕೋಣೆಗೆ ಬಿಂಬಗ್ರಹಣ ಕೊಠಡಿ (Camera Obscura) ಎಂದು ಕರೆಯಲಾಗುತ್ತಿತ್ತು. ಆದರೆ, ಕ್ರಿ.ಶ. 1430-40ರ ಸುಮಾರಿನಲ್ಲಿ ಅಂದರೆ, ಡಾವಿಂಚಿಯ ದಾಖಲೆಗೆ 50 ವರುಷಗಳ ಮುನ್ನವೇ ವಿರೂಪಾಕ್ಷ ದೇಗುಲದಲ್ಲಿ ಈ ಬೆಳಕಿನಾಟದ ತಂತ್ರವನ್ನು ಪ್ರಾಯೋಗಿಕವಾಗಿ ಅಳವಡಿಸಿರುವುದು ವಿಜಯನಗರದ ವಾಸ್ತುಶಿಲ್ಪಿಗಳ ಅಪ್ರತಿಮ ಪ್ರತಿಭೆಗೆ ಸಾಕ್ಷಿಯಾಗಿ ನಿಂತಿದೆ.

ಛಾಯಾಚಿತ್ರದ ಮೂಲಕ ಈ ಸಂಗತಿ ದಾಖಲಿಸಿ ಅಧ್ಯಯಿಸಲು ಈವರೆಗೆ ಸಾಧ್ಯವಾಗಿಲ್ಲದ ಕಾರಣ ಹಂಪಿ ದೇಗುಲದ ಈ ವ್ಯವಸ್ಥೆಯು ಸಾಕಷ್ಟು ಪ್ರಚಾರವನ್ನು ಪಡೆಯದಾಗಿದೆ. ಅತಿ ಮಂದವಾದ ಬೆಳಕಿರುವ ಈ ಕೋಣೆಯಲ್ಲಿ ಮೂಡುವ ಬಿಂಬವನ್ನು ಮಾನವಕಣ್ಣುಗಳು ಮಾತ್ರ ಗುರುತಿಸಬಲ್ಲವಾಗಿದ್ದು, ಕತ್ತಲಲ್ಲಿ 'ಫ್ಲ್ಯಾಷ್'ನ ಬೆಳಕನ್ನು ಬಳಸಿದರೆ ಕಣ್ಣಿಗೆ ಕಾಣುವ ಬಿಂಬವೂ ಅಳಿಸಿಹೋಗಿ ಬಿಳಿಗೋಡೆಯು ಮಾತ್ರ ಛಾಯಾಚಿತ್ರದಲ್ಲಿ ಮೂಡಿಬರುತ್ತದೆ. ಆದರೆ, ಆಧುನಿಕ ತಂತ್ರಜ್ಞಾನವನ್ನು ಬಳಸಿ ಹಲವು ಪ್ರಯೋಗಗಳ ಮೂಲಕ ಈ ಅಪರೂಪದ ವಿಸ್ಮಯಬಿಂಬವನ್ನು ಇಲ್ಲಿ ಚಿತ್ರಿಸಲಾಗಿದೆ.


ಪೂರ್ವಾಹ್ನ ಮತ್ತು ಅಪರಾಹ್ನಗಳಲ್ಲಿ ಕಂಡುಬರುವ ಬೇರೆ ಬೇರೆ ಚಿತ್ರಣಗಳು ಸಹ ಒಂದು ವೈಜ್ಞಾನಿಕ ಪ್ರಕ್ರಿಯೆಯಾಗಿರುವ ಅಂಶ ಗಮನೀಯ. ಬೆಳಗಿನ ವೇಳೆ ಪೂರ್ವದ ಆಗಸದಲ್ಲಿ ಹೆಚ್ಚಿನ ಬೆಳಕಿರುವ ಕಾರಣ ಪಶ್ಚಿಮ ಪಾರ್ಶ್ವದ ಗೋಪುರ ದೃಶ್ಯವು ಬರೀ ನೆರಳಿನ ಭಾಗವಾದ ಕಾರಣ ಗೋಡೆಯ ಮೇಲೂ ಪ್ರಖರ ಹಿನ್ನೆಲೆಯಲ್ಲಿ (against white background) ಪ್ರತಿಬಿಂಬವು ಕರಿನೆರಳಿನಾಕಾರ ಕಾಣಬರುತ್ತದೆ. ಆದರೆ ಮಧ್ಯಾಹ್ನದ ವೇಳೆ ಗೋಪುರದ ಮೇಲೆ ಪಶ್ಚಿಮದಿಂದ ಬೀಳುವ ಬೆಳಕು ಗೋಪುರದ ವಿವರಗಳನ್ನು ವರ್ಣರಂಜಿತ ವಿನ್ಯಾಸದೊಂದಿಗೆ ಪ್ರಖರವಾಗಿ ಒದಗಿಸುತ್ತದೆ. (ಚಿತ್ರ 4) ಶುಭ್ರ ನೀಲಾಕಾಶವಿರುವ ದಿನಗಳ ಮಧ್ಯಾಹ್ನದ ವೇಳೆಯಲ್ಲಿ ಬಹು ಸುಂದರ ಪ್ರಭಾವದ ದೃಶ್ಯವು ಮೂಡುವ ಸಾಧ್ಯತೆಯಿದ್ದು, ಮೋಡದ ದಿನಗಳಲ್ಲಿ ಗೋಪುರ ಮತ್ತು ಹಿನ್ನೆಲೆಗಳು ಒಂದೇ


ಪ್ರಖರತೆಯಲ್ಲಿ ಕಾಣುವುದರಿಂದಾಗಿ ಮಂದಬಿಂಬವು ಮಸುಕಾಗಿ ಗೋಚರಿಸುವ ಸಾಧ್ಯತೆ ಇರುತ್ತದೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇಂತಹ ಬಿಂಬವೀಕ್ಷಣೆಯ ಪ್ರಯತ್ನಗಳು ಮಧ್ಯಯುಗದಲ್ಲಿ (ಕ್ರಿ.ಶ. 15ನೇ ಶತಮಾನದ ನಂತರ) ಅಲ್ಲಲ್ಲಿ ನಡೆದಿದ್ದರೂ, ಅದು ಕೇವಲ ಚಕ್ರದ ಗಾಡಿಗಳ ಮೇಲಿನ ತಾತ್ಕಾಲಿಕ ವ್ಯವಸ್ಥೆಯಾಗಿದ್ದಿತು. ಆದರೆ ಅದಕ್ಕೂ ಮುನ್ನವೇ, ಶಾಶ್ವತ ಕಟ್ಟಡವೊಂದರಲ್ಲಿ ಈ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿರುವ ಹಂಪೆಯಲ್ಲಿನ ಪ್ರಸ್ತುತ ಉದಾಹರಣೆ ಒಂದು ಅಪರೂಪದ ಪ್ರಯೋಗವೆನ್ನಬಹುದು. ಒಟ್ಟಾರೆ, ಕರ್ನಾಟಕದ ವಾಸ್ತುಶಿಲ್ಪಿಗಳು ಈ ಬಿಂಬ ವ್ಯವಸ್ಥೆಯನ್ನು ಇಂದಿಗೆ 500 ವರ್ಷಗಳ ಹಿಂದೆ ಹಾಗೂ ಆಧುನಿಕ ಕ್ಯಾಮರಾದ ಆವಿಷ್ಕಾರಕ್ಕಿಂತ (ಕ್ರಿ.ಶ. 1839) ಮುನ್ನೂರು ವರುಷಗಳ ಮುನ್ನವೇ ಪ್ರಯೋಗಿಸಿರುವುದು ವಿಜಯನಗರದ ನೂರೆಂಟು ವಾಸ್ತುವಿಶೇಷತೆಗಳಲ್ಲಿ ಮತ್ತೊಂದು ವಿಸ್ಮಯದ ಸೇರ್ಪಡೆಯಾಗಿದೆ ಎನ್ನಬಹುದು.


ಟಿಪ್ಪಣಿಗಳು

1. ಕ್ರಿ.ಶ.1360ರಲ್ಲಿ ಸಾಯಣಾಚಾರ್ಯ–ಮಾಧವಾಚಾರ್ಯರಿಗೆ ವಿಜಯನಗರದ ಅರಸ ಒಂದನೇ ಬುಕ್ಕರಾಯನಿಂದ ನಿಯೋಜಿಸಲ್ಪಟ್ಟ ವೇದಸಾಹಿತ್ಯ ಭಾಷ್ಯರಚನಾ ಯೋಜನೆ: *ಕರ್ನಾಟಕದ ಪರಂಪರೆ*, ಸಂ.2, ಪುಟ 20.
2. ಶಿವರಾಮಮೂರ್ತಿ ಸಿ., *ಕಳುಗುಮಲೈ ಅಂಡ್ ಅರ್ಲಿ ಪಾಂಡ್ಯನ್ ರಾಕ್–ಕಟ್ ಟೆಂಪಲ್ಸ್*, ಬಾಂಬೆ, 1961.
3. *ಕರ್ನಾಟಕದ ಪರಂಪರೆ*, ಸಂ.2, ಪುಟ 20.
4. *ಶಿವತತ್ತ್ವಚಿಂತಾಮಣಿ*, ಸಂಧಿ 38, ಪದ್ಯ 251, ಪುಟ 440.
5. *ಹಂಪಿ ಸಂಪುಟ*– ಕನ್ನಡ ವಿಶ್ವವಿದ್ಯಾಲಯ, ಪುಟ 350.







ಚಿತ್ರ – 2 : ಬೆಳಗಿನ ವೇಳೆಯ ಕಪ್ಪು ಬಿಂಬ



ಚಿತ್ರ – 3 : ಬಿಂಬಲಾಸ್ಯದ ವೈಜ್ಞಾನಿಕ ಪ್ರಕ್ರಿಯೆ



ಚಿತ್ರ – 4 : ಪೂರ್ವಾಹ್ವ ಮತ್ತು ಅಪರಾಹ್ನಗಳ ಸೂರ್ಯನ ಬೆಳಕು



ವಿಜಯನಗರದ ಹೆಸರು ಕನ್ನಡಿಗರಲ್ಲಿ ಸ್ಫೂರ್ತಿಯ ಸೆಲೆಯಾಗಿ ಹಲವಾರು ಸಾಧಕರ ಸಾಧನೆಗಳಿಗೆ ಕಾರಣೀಭೂತವಾಗಿದೆ. ವಿಜಯನಗರ ಒಂದು ಸಾಮ್ರಾಜ್ಯದ ರಾಜಧಾನಿಯಾಗಿ ಸಾಂಸ್ಕೃತಿಕ ಪರಂಪರೆಯ ನೆಲೆವೀಡಾಗಿ, ವಾಸ್ತುಶಿಲ್ಪ ವೈಭವದ ಪ್ರತೀಕವಾಗಿ, ರಕ್ಷಣೆಯ ಮಹತ್ವದ ಸ್ಥಳವಾಗಿ, ನಾಗರೀಕ ಸೌಲಭ್ಯಗಳ ಮಹಾನಗರಿಯಾಗಿ, ಶ್ರೇಷ್ಠ ರಾಜತಾಂತ್ರಿಕರ ಭೇಟಿಯ ಸ್ಥಳವಾಗಿ, ವೈಭವದ ದಸರಾ ಉತ್ಸವದ ರಂಗಮಂಚವಾಗಿ ಮೆರೆದು, ಇಂದು ಹಾಳುಹಂಪೆಯಾಗಿ, ಅಗೆದಷ್ಟೂ, ಬಗೆದಷ್ಟೂ ವಿದ್ವಾಂಸರಿಗೆ-ಅಧ್ಯಯನಿಗಳಿಗೆ ಹೊಸ ಹೊಸ ಅಧ್ಯಯನ ಸಾಮಗ್ರಿಯನ್ನು ಒದಗಿಸುತ್ತಿರುವ ಅಕ್ಷಯ ಪಾತ್ರೆಯೆಂದರೆ ಅತಿಶಯೋಕ್ತಿಯಾಗಲಾರದು. ಈ ಸಾಮ್ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಮಜಲುಗಳನ್ನು ಕುರಿತ ವಿಜಯನಗರ ಅಧ್ಯಯನ 15ನೆಯ ಸಂಪುಟವು ವಿಜಯನಗರ ಇತಿಹಾಸದ ವಿವಿಧ ವಿಷಯಗಳನ್ನು ಕುರಿತ ಸಂಶೋಧನಾ ಲೇಖನಗಳನ್ನು ಹೊಂದಿರುವ ಆಕರ ಗ್ರಂಥವಾಗಿದೆ.



ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ದಸರಾ ವಸ್ತುಪ್ರದರ್ಶನ ಆವರಣ, ಮೈಸೂರು-೧೦